UNIVERSAL
LIBRARY
OU_202165
UNIVERSAL
LIBRARY

**OSMANIA UNIVERSITY LIBRARY**

Call No. K181.444 V69R    Accession No. K4545

Author విడియమ్ రాఘవాచార్. ఎ. మ.

Title రవీన్ద్ర ప్రియనాథ్ 1953

This book should be returned on or before the date last marked below.

ಶ್ರೀಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

# ಚರಮಶ್ಲೋಕಾಧಿಕಾರಃ

## ಉತ್ತರಾರ್ಧ ವ್ಯಾಖ್ಯಾನವು

---

**ಶ್ರೀನಾರಾಯಣ ಯೋಗೀನ್ದ್ರ ವರದಾರ್ಯಕೃಪಾಶ್ರಯಮ್ ।**
**ರಂಗೇಶಪಾದವಿನತಂ ಶ್ರೀನಿವಾಸ ಮುನಿಂಭಜೇ**

---

**ಇಪ್ಪಡಿ ಪೂರ್ವಾರ್ಧತ್ತಾಲೇ ಓರಧಿಕಾರವಿಶೇಷತ್ತುಕ್ಕು ಪೂರ್ವಖಂಡತ್ತಿಲೇ ಅನುಸಂಧೇಯಮಾಯ್, ಸರ್ವಧರ್ಮಙ್ಗಳುಕ್ಕು ಮುಳ್ಳ ಪ್ರಭಾವತ್ತೈಯು**

ಹಿಂದೆ ಚರಮಶ್ಲೋಕ ಪೂರ್ವಾರ್ಧದ ರಹಸ್ಯಾರ್ಥಗಳನ್ನೆಲ್ಲಾ ನಿಪುಣತರವಾಗಿ ಉಪಪಾದಿಸಿ ಮುಂದೆ ಉತ್ತರಾರ್ಧದಲ್ಲಿ ಅಡಗಿರುವ ರಹಸ್ಯಾರ್ಥಗಳನ್ನೆಲ್ಲಾ ತಿಳಿಸುತ್ತಾರೆ. ಹೀಗೆ ತಿಳಿಸುವ ಸಂದರ್ಭದಲ್ಲಿ ಪೂರ್ವಾರ್ಧೋತ್ತರಾರ್ಧಗಳಿಗೆ ಇರುವ ಸಂಗತಿಯನ್ನು ಪ್ರದರ್ಶಿಸುತ್ತಾರೆ:— ಸಙ್ಗತಿ ಹೇಗೆ ಎಂದರೆ ದ್ವಯದಲ್ಲಿ ಪೂರ್ವಖಂಡವು ಉಪಾಯವನ್ನಾಗಿ, ಉತ್ತರಖಂಡವು ಉಪೇಯವನ್ನು ಹೇಗೆ ತಿಳಿಸುತ್ತದೋ ಹಾಗೆಯೇ ಚರಮಶ್ಲೋಕದ ಪೂರ್ವಾರ್ಧವು ಉಪಾಯವಿವರಣವು; ಉತ್ತರಾರ್ಧವು ಉಪೇಯವಿವರಣವು.

**ಇಪ್ಪಡಿ** - ಹಿಂದೆ ಉಪಪಾದಿಸಿದ ರೀತಿಯಲ್ಲಿ, **ಪೂರ್ವಾರ್ಧತ್ತಾಲೇ** - ಪೂರ್ವಾರ್ಧದಿಂದ, **ಓರಧಿಕಾರಿವಿಶೇತ್ತುಕ್ಕು** - ಪ್ರಪನ್ನನಾದ ಒಬ್ಬ ಅಧಿಕಾರಿಗೆ, **ದ್ವಯತ್ತಿಲ್ ಪೂರ್ವಖಂಡತ್ತಿಲೇ** - ದ್ವಯಮಂತ್ರದ ಪೂರ್ವಾರ್ಧದಲ್ಲಿ ಹೇಳಿರುವ ಹಾಗೆ, **ಅನುಸಂಧೇಯಮಾಯ್** - ಅನುಸಂಧಾನಮಾಡಲು ಯೋಗ್ಯವಾಗಿ ಎಂದರೆ ಉಪಾಯಭೂತವಾಗಿ ಅಧಿಕಾರಿಯು ಮಾಡುವ ಕೃತ್ಯವಾಗಿ, **ಸರ್ವಧರ್ಮಙ್ಗಳುಕ್ಕುಮುಳ್ಳ ಪ್ರಭಾವತ್ತೈ** - ಪ್ರಾಯಶ್ಚಿತ್ತರೂಪದಲ್ಲಿರುವ ಜೋತಿಷ್ಟೋಮಾದಿ ಧರ್ಮಗಳಿಗೆ ಇರುವ ಪಾಪನಿವಾರಕ ಪ್ರಭಾವವನ್ನೂ, **ಸ್ವರ್ಗಕಾಮೋಯಜೇತ** ಎಂಬಲ್ಲಿ ಸ್ವರ್ಗಾದಿ ನಶ್ವರಫಲಗಳನ್ನು ಕೊಡುವ ಪ್ರಭಾವವನ್ನೂ, **ಅವತ್ತುಕ್ಕಿಲ್ಲಾದ** - ಆ ಜೋತಿಷ್ಟೋಮಾದಿಗಳಿಗೆ ಇಲ್ಲದಿರುವ, **ಸ್ವಾಸಾಧಾರಣಪ್ರಭಾವ**

**ಮುದ್ಧೃತ್ತಾನ ಸಕೃತ್ಕರ್ತವ್ಯೋಪಾಯತ್ತೈಯುಮ್, ಅನತ್ತಿಕ್ಕಿಲ್ಲಾದ ಸ್ವಾಸಾಧಾರಣಪ್ರಭಾವತ್ತೈಯುಮ್, ಉದ್ಧೃತ್ತಾನ ಸಕೃತ್ಕರ್ತವ್ಯೋಪಾಯವಿಶೇಷತ್ತೈ ಅಧಿಕಾರಿನೈರಪೇಕ್ಷ್ಯಾದಿ ವಿವರಣ ಪೂರ್ವಕಮಾಗ ವಿಧಿತ್ತು, ಉತ್ತರಾರ್ಧತ್ತಾಲೆ ದ್ವಯತ್ತಿಲ್ ಉತ್ತರಖಂಡತ್ತಿಲೇ ಫಲತ್ತೈ ನಮಶ್ಶಬ್ದ ಸಂಕ್ಷಿಪ್ತಾನಿಷ್ಟನಿವೃತ್ತಿವಿವರಣ ಮುಖತ್ತಾಲೆ ಅರುಳಿಚ್ಚೈಯ್‌ಗಿರಾನ್. ಇಙ್ಗು ಪೂರ್ವಾರ್ಧತ್ತೈಯುಮ್** - ಪ್ರಪತ್ತಿಯಾದ ತನಗೇನೇ ಅಸಾಧಾರಣವಾದ ಪ್ರಭಾವವನ್ನೂ, ಅದು ಯಾವುದೆಂದರೆ ಸರ್ವಪಾಪ ನಿವಾರಕ ಮೂಲಕ ಮೋಕ್ಷಪ್ರಾಪ್ತಿಯನ್ನೂ ಕೊಡುವ ಮಹಾತ್ಮ್ಯೆಯನ್ನೂ, **ಉದ್ಧೃತ್ತಾನ** - ಹೊಂದಿರುವ, **ಸಕೃತ್ಕರ್ತವ್ಯೋಪಾಯವಿಶೇಷತ್ತೈ** - ಒಂದೇಸಲ ಅನುಷ್ಠಿಸತಕ್ಕ ಉಪಾಯವಾದ ಭರನ್ಯಾಸವನ್ನು **ಅಧಿಕಾರಿನೈರಪೇಕ್ಷ್ಯಾದಿ ವಿವರಣಪೂರ್ವಕಮಾನ**-ಅಧಿಕಾರಿಯು ಉಪಾಸನೆಗೆ ಅರ್ಹತೆಯುಂಟಾಗಲು ಬ್ರಾಹ್ಮಣ ಕ್ಷತ್ರಿಯವೈಶ್ಯರಲ್ಲಿ ಒಬ್ಬಾವ ವೇದಾಧಿಯಾಗಿರಬೇಕೆಂಬ ಅಪೇಕ್ಷೆಯೇ ಮೊದಲಾದವುಗಳಿಲ್ಲದಿರುವ ವಿವರಣಪೂರ್ವಕವಾಗಿ, ಇಲ್ಲಿ **ಆದಿ** ಪದದಿಂದ ಪ್ರಪತ್ತಿಯುವ್ಯಾಜ ಮಾತ್ರವೇ ಮುಂತಾದ ಅರ್ಥಗಳು ಸಙ್ಗ್ರಹಿಸಲ್ಪಟ್ಟವು, **ವಿಧಿತ್ತು**-ಶರಣಂವ್ರಜವೆಂದು ವಿಧಿಸಿ, **ಉತ್ತರಾರ್ಧತ್ತಾಲೆ-ಅಹಂತ್ವಾಸರ್ವಪಾಪೇಭ್ಯೋ** ಎಂದು ಹೇಳುವ ಉತ್ತರಾರ್ಧದಿಂದ, **ದ್ವಯತ್ತಿಲ್ ಉತ್ತರಖಂಡತ್ತಿಲ್** - ದ್ವಯಮಂತ್ರದ ಉತ್ತರಖಂಡದಲ್ಲಿ, **ಫಲತ್ತೈ** - ಶರಣಾಗತ್ಯನುಷ್ಠಾನದ ಫಲವಾದ, **ನಮಶ್ಶಬ್ದಸಂಕ್ಷಿಪ್ತ-ಶ್ರೀಮತೇನಾರಾಯಣಾಯ**-ಎಂಬಲ್ಲಿರುವ ನಮಶ್ಶಬ್ದದಲ್ಲಿ ಸಂಕ್ಷೇಪವಾಗಿರುವ ಅಥವಾ ಅಡಗಿರುವ, **ಅನಿಷ್ಟನಿವೃತ್ತಿವಿವರಣ ಮುಖತ್ತಾಲೆ** - ಅನಿಷ್ಟವು ಯಾವುದೆಂದರೆ ವಿರೋಧಿವರ್ಗಗಳಾದ ಪಾಪಗಳು, ಅವುಗಳು ಕಳೆದುಹೋಗಿ ಇಷ್ಟಪ್ರಾಪ್ತಿಯಾದ ಮೋಕ್ಷಾನಂದ ಉಂಟಾಗುವದರ ವಿವರಣೆ ಮೂಲಕವಾಗಿ, **ಅರುಳಿಚ್ಚೈಯ್‌ದಾನ್** - ಕೃಪಯಾ ಅಪ್ಪಣೆಕೊಡಿಸುತ್ತಾನೆ. ಲೀಲಾಸಾರಥಿಯಾದ ಗೀತಾಚಾರ್ಯನಾದ ಶ್ರೀಕೃಷ್ಣನು ಎಂಬ ಕರ್ತೃಪದವನ್ನು ಇಟ್ಟುಕೊಳ್ಳತಕ್ಕದ್ದು.

ಈ ಅವತಾರಿಕೆಯಿಂದ ದ್ವಯಮಂತ್ರಕ್ಕೂ ಚರಮಶ್ಲೋಕಕ್ಕೂ ಇರುವ ಹೋಲಿಕೆಯನ್ನೂ ಪ್ರದರ್ಶಿಸಿರುತ್ತಾರೆ-ದ್ವಯವು ಹೇಗೆ ಪೂರ್ವಖಂಡವು ಉಪಾಯಪರವೋ, ಹಾಗೆಯೇ ಚರಮಶ್ಲೋಕ ಪೂರ್ವಾರ್ಧವೂ ಉಪಾಯ ಪರವು. **ಶರಣಂ ಪ್ರಪದ್ಯೇ** ಎಂದು ಅಲ್ಲಿ ಅನುಷ್ಠಾನಪರವಾಗಿ ಉತ್ತಮಪುರುಷದಲ್ಲಿ ಹೇಳಲ್ಪಟ್ಟಿತು. ಚರಮಶ್ಲೋಕವೂ ಉಪಾಯಪರವಾಗಿ ಲೋಕಗುರುವಿನಿಂದ **ಶರಣಂವ್ರಜ** ಎಂದು ವಿಧಿಸಲ್ಪಟ್ಟಿತು.

ದ್ವಯದಲ್ಲಿ ಪೂರ್ವಖಂಡದಲ್ಲಿ ಹೇಳಿರುವದು ಯಾವುದುಎಂದರೆ **ಸಕೃತ್ಕ**

**ತ್ತಾಲೇ ಅಧಿಕಾರಕೃತ್ಯತ್ತೈ ಅರುಳಿಚ್ಚೈಯ್‌ದಾಣ್; ಉತ್ತರಾರ್ಧತ್ತಾಲೇ ಶರಣ್ಯನಾಯ್ ಸ್ವೀಕೃತಭರನಾನ ತನಕೃತ್ಯತ್ತೈ ಅರುಳಿಚೆಯ್‌ದು ಕೃತರ್ತ್ರವ್ಯೋಪಾಯವಿಶೇಷವು** (೧) ಇದೇ ಚರಮಶ್ಲೋಕದ ಪೂರ್ವಾರ್ಧದಲ್ಲಿ ಹೇಳು ದುವದು. ಇನ್ನು ಏನು ಈ ಪೂರ್ವಾರ್ಧದಲ್ಲಿ ಹೇಳಿದೆ ಎಂದರೆ ? **ಸರ್ವಧರ್ಮಾಣ**- ಸರ್ವಧರ್ಮಗಳಾದ ಪ್ರಾಯಶ್ಚಿತ್ತಗಳ ಪ್ರಭಾವವು. ಈ ಪ್ರಭಾವದಿಂದ ಸ್ವಲ್ಪ ಮಟ್ಟಿಗೆ ಪಾಪಪರಿಹಾರವಾಗಿ ಸ್ವರ್ಗಲೋಕಪ್ರಾಪ್ತಿಯು. ಇದು ಬೇಡವೆಂದು ಸಾತ್ವಿಕತ್ಯಾಗ ಹೇಳಿದರೆ ಭರನ್ಯಾಸವನ್ನು ಅನುಷ್ಠಿಸಿದರೆ, ಆ ಸರ್ವಧರ್ಮಗಳಿಗೆ ಇಲ್ಲದ ಪ್ರಭಾವವಾದ ಸಮಸ್ತ ಪಾಪ ನಿವೃತ್ತಿಯ ಮೂಲಕ ಉಂಟಾಗುವ ಮೋಕ್ಷಪ್ರಾಪ್ತಿಯು. ಜ್ಯೋತಿಷ್ಟೋಮಾದಿಗಳಿಗೆ ಮೋಕ್ಷಕೊಡುವ ಪ್ರಭಾವವಲ್ಲವು. ಆದುದರಿಂದಲೇ **ಸ್ವಾಸಾಧಾರಣಪ್ರಭಾವ** ವೆಂದು ಇಲ್ಲಿ ಹೇಳಲ್ಪಟ್ಟಿತು.

ದ್ವಯದ ಉತ್ತರಾರ್ಧದಲ್ಲಿ ಫಲವಾದ ಉಪೇಯವು ಎಂದರೆ ಪರಿಪೂರ್ಣ ಬ್ರಹ್ಮಾನುಭವ ಮತ್ತು ತತ್ಕೈಂಕರ್ಯಪ್ರಾಪ್ತಿಯು ಹೇಗೆ ಹೇಳಲ್ಪಟ್ಟಿತೋ, ಹಾಗೆಯೇ ಇಲ್ಲಿಯೂ ಸರ್ವಪಾಪಗಳ ಪರಿಹಾರ ಮೂಲಕ ಮೋಕ್ಷಪ್ರಾಪ್ತಿಯಾದ ಫಲವು ಹೇಳಲ್ಪಟ್ಟಿತು. ಆಗಲಿ, ಅಲ್ಲಿ ಹೇಳಿರುವದು ಸಾಯುಜ್ಯ ಕೈಂಕರ್ಯಗಳೂ, ಇಲ್ಲಿ ಹೇಳಿರುವದು ಪಾಪಪರಿಹಾರವು; ಹೀಗಿರುವಾಗ ಫಲವನ್ನು ಹೇಳಿರುವದರಲ್ಲಿ ಹೋಲಿಕೆ ಹೇಗೆ? ಎಂದರೆ **ಫಲತ್ತೈನಮುಶ್ಶಬ್ದ ಸಂಕ್ಷಿಪ್ತಾನಿಷ್ಟ ನಿವೃತ್ತಿ ವಿವರಣಮುಖತ್ತಾಲೆ** ಸಾದೃಶ್ಯವನ್ನು ತೋರುತ್ತಾರೆ. ಇಲ್ಲಿ ಪ್ರಪದನಾನುಷ್ಠಾನ ದಿಂದ ಹೇಳಿರುವಫಲವು ಸರ್ವಪಾಪಗಳ ಬಿಡುಗಡೆ. ಅದಾದರೇನೇ ಮೋಕ್ಷವು. ಇಂತಹ ಪಾಪಗಳ ಬಿಡುಗಡೆಯನ್ನು ದ್ವಯಮನ್ತ್ರದನಮಶ್ಶಬ್ದದಲ್ಲಿ ಸಂಕ್ಷಿಪ್ತ ವಾಗಿರುವ ಅನಿಷ್ಟನಿವೃತ್ತಿಯಲ್ಲಿ ಗ್ರಹಿಸಬಹುದೆಂದು ಹೇಳಿರುತ್ತಾರೆ. ಇದು ಗೀತೆ ಯಲ್ಲೇ ಹೇಳಲ್ಪಟ್ಟಿರುತ್ತದೆ—"**ತಮೇವ ಶರಣಂಗಚ್ಛ ಸರ್ವಭಾವೇನ ಭಾರತ! ತತ್ಪ್ರಸಾದಾತ್ ಪರಾಂಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿಶಾಶ್ವತಮ್** ಎಂಬುದು ಅನುಸಂಧೇಯವು.

ಹೀಗೆ ಪೂರ್ವಾರ್ಧ ಮತ್ತು ಉತ್ತರಾರ್ಧಗಳಿಗಿರುವ ಸಂಗತಿಯನ್ನು ತಿಳಿಸಿ ದರು. ಮುಂದಿನ ವಾಕ್ಯದಿಂದ ಇನ್ನೊಂದು ವಿಧವಾಗಿಯೂ ಸಂಗತಿಯನ್ನು ಹೇಳಬಹುದು ಎನ್ನುತ್ತಾರೆ—ಹೇಗೆಂದರೆ—**ಇಙ್ಗು** - ಈ ಸಂದರ್ಭದಲ್ಲಿ, ಪೂರ್ವಾ ರ್ಧದಿಂದ, **ಅಧಿಕಾರಿಕೃತ್ಯತ್ತೈ** - ಫಲಾರ್ಥಿಯಾಗಿ ಶರಣಾಗತನಾದ ಅನುಷ್ಠಾನ ವನ್ನು, ತನ್ಮೂಲಕ ಶರಣ್ಯನನ್ನು ವಶಮಾಡಿಕ್ಕೊಳ್ಳುವದು. **ಅರುಳಿಚ್ಚೈಯ್‌ದಾಣ್**- ಕೃಪೆಯಿಂ ಹೇಳಿದನು. ಉತ್ತರಾರ್ಧದಿಂದ, **ಶರಣ್ಯನಾಯ್** - ಸರ್ವರಕ್ಷಕನಾಗಿ, **ಸ್ವೀಕೃತಭರನಾನ** - ಆತನು ಅನುಷ್ಠಿಸಿದ ಆತ್ಮರಕ್ಷಾಭರ ಸಮರ್ಪಣವನ್ನು

**ಕೃತ್ಯನಾನೆ ವಿವನ್ನೈತ್ತೇತ್ತುಗಿರಾ್.**

## ಉತ್ತರಾರ್ಧೇ ಅಹಮಿತಿ ಪ್ರಥಮಪದಸ್ಯ ಪ್ರಯೋಜನಮಾಹ

**ಇವ್ವಿಡತ್ತಿಲ್ ಮೋಕ್ಷಯಿಷ್ಯಾಮಿ ಎನ್ಗಿರ ಉತ್ತಮನಾಲೇ ನಾನೆನ್ರು ತೋತ್ತಾ ನಿರ್ಕಮಿಕುತಿಯಾನ ಅಹಂ" ಎನ್ಗಿರಪದಮ್, ಅರ್ಥಸ್ವಭಾವತ್ತಾಲೇ ಸರ್ವಪಾಪ ವಿಮೋಚನತ್ತುಕ್ಕುರುಪ್ಪಾನ ಅಘಟಿತಘಟನಾ ಶಕ್ತ್ಯಾದಿಗಳೈ ವಿವಕ್ಷಿತ್ತು ಸಪ್ರಯೋಜನಮಾಗಿರದು.**

ಯೋಗ್ಯವಾದುದೆಂದು ಅದನ್ನು ಸ್ವೀಕರಿಸಿದ, **ತನ್ನ** - ಸರ್ವೇಶ್ವರನಾದ ತನ್ನ, **ಕೃತ್ಯತ್ತೈ** - ಆತನ ಪಾಪಗಳನ್ನು ಪರಿಹರಿಸಿ ತನ್ಮೂಲಕ ಮೋಕ್ಷಪ್ರಾಪ್ತಿಯನ್ನುಂಟು ಮಾಡುವ ತನ್ನ ಕೃತ್ಯವನ್ನು **ಅರುಳಿಚೆಯ್‌ದು** - ಕೃಪೆಯಾಮೇಳಿ, ಆದರಿಂದ **ಕೃತಕೃತ್ಯನಾನವಿವನ್ನೈ** - ಕೃತಕೃತ್ಯನಾದ ಈ ಅಧಿಕಾರಿಯನ್ನು ಕುರಿತು, **ತೇತ್ತುಗಿರಾನ್** - ವಿಶ್ವಾಸವನ್ನು ಆತನಲ್ಲಿ ಉಂಟುಮಾಡುವನು; ಯಾರೆಂದರೆ ಲೀಲಾಸಾರಥಿಯು.

### ಉತ್ತರಾರ್ಧದಲ್ಲಿರುವ ಅಹಂ-ಮೊದಲಿನ ಪದದ ಪ್ರಯೋಜನವನ್ನು ತಿಳಿಸುತ್ತಾರೆ.

**ಮೋಕ್ಷಯಿಷ್ಯಾಮಿ** - ಎಂಬಲ್ಲಿರುವ ಉತ್ತಮಪುರುಷದಿಂದಲೇ **ಅಹಂ** - ಶರಣ್ಯನಾದ ನಾನು ಎಂಬರ್ಥ ತೋರುವಾಗ **ಅಹಂ** - ಎಂಬ ಅಧಿಕ ಶಬ್ದವು ನಿರರ್ಥಕವಲ್ಲವೋ? ಅದರ ಪ್ರಯೋಜನವೇನು ಎಂದು ಆಕ್ಷೇಪಿಸಿದರೆ ಅದರ ಪ್ರಯೋಜನವನ್ನು ಉಪದೇಶಿಸುತ್ತಾರೆ. **ಉತ್ತಮನಾಲೇ** - ಮೋಕ್ಷಯಿಷ್ಯಾಮಿ ಎಂಬಲ್ಲಿರುವ ಉತ್ತಮಪುರುಷದಿಂದಲೇ, **ನಾನೆನ್ರುತೋತ್ತಾನಿರ್ಕ** - ಶರಣ್ಯನಾದ ನಾನು ಎಂಬರ್ಥವು ತೋರುತ್ತಿರುವಾಗ, **ಮಿಕುತಿಯಾನ ಅಹಂ** - ಹೆಚ್ಚಿಗೆಯಾದ **ಅಹಂ** - ಎಂಬ ಪದವು, **ಇವ್ವಿಡತ್ತಿಲ್** - ಈ ಸ್ಥಳದಲ್ಲಿ, ಸಂದರ್ಭದಲ್ಲಿ, **ಮೋಕ್ಷಯಿಷ್ಯಾಮಿ ಎನ್ಗಿರ** - **ಅರ್ಥಸ್ವಭಾವ** ದಿಂದ, ಎಂದರೆ, ಪ್ರಮಾಣಾನುಸಾರವಾಗಿ **ಸರ್ವಪಾಪವಿಮೋಚನತ್ತುಕ್ಕು** - ಸರ್ವಪಾಪಗಳಿಂದ ಬಿಡುಗಡೆಗೆ, **ಉರುಪ್ಪಾನ** - ಸಾಧನಭೂತವಾದ, **ಅಘಟಿತಘಟನಾಶಕ್ತ್ಯಾದಿಗಳೈ** - ಸರ್ವೇಶ್ವರನಲ್ಲಿರುವ ಅಸಾಧ್ಯವಾದುದನ್ನೂ ಸಾಧಿಸಿಕೊಡುವ ಮಹತ್ತಾದ ಸತ್ಯಸಙ್ಕಲ್ಪರೂಪಶಕ್ತಿಯು, ಇಲ್ಲಿ **ಆದಿ** - ಪದದಿಂದ ಸರಜ್ಞತ್ವವೇ ಮೊದಲಾದ ಗುಣಗಳು ಹೇಳಲ್ಪಟ್ಟವು, ಅವು ಕೃಪಾದಾರ್ಯ ಮುಂತಾದವು, **ವಿವಕ್ಷಿತ್ತು** - ಇವುಗಳನ್ನು ತಿಳಿಸುವದರಲ್ಲಿ, **ಸಪ್ರಯೋಜನಮಾಗಿರದು** - **ಅಹಂ** ಶಬ್ದವು ನಿರರ್ಥಕವಲ್ಲವು, ಪ್ರಯೋಜನವಾದುದೇ.

**ಅಪರಾಧಂ ಪಣ್ಣಿನವನ್ನೈ ವಿಲಙ್‌ಗಿಟ್ಟುವೈತ್ತ ಸಮಾಧಿಕದರಿದ್ರನಾನ ನಾನೊರು ವ್ಯಾಜತ್ತಾಲೇ ಉಲ್ಲಸಿತಕಾರುಣ್ಯನಾಯ್ ಅಪರಾಧತ್ತೈ ಪೊರುತ್ತುವಿಡವ್ಪೋದು ವಿಲಕ್ಕ ವಲ್ಲಾರಿಲ್ಲೈ.**

---

ಮೋಕ್ಷವನ್ನು ಕೊಡುವ ಶಕ್ತಿಯು ಬ್ರಹ್ಮರುದ್ರೇಂದ್ರಾದಿಗಳಲ್ಲಿ ಯಾರಿಗೂ ಇಲ್ಲವು. ತನ್ನೊಬ್ಬನಿಗೇನೇ ಅಂತಹ ಅಘಟಿತಘಟನಾಶಕ್ತಿಯು. ಅದೂ ಅಲ್ಲದೆ ಈಗ ಭರನ್ಯಾಸನಿಷ್ಠನ ಪ್ರವೃತ್ತಿಗಳಲ್ಲಿ ಎಲ್ಲಾ ಅಂಶಗಳೂ ಇವೆ ಎಂದು ತಿಳಿಯುವ ಶಕ್ತಿಯು ತನ್ನೊಬ್ಬನಿಗೇ ಉಂಟು. ಅದು ಇತರರಿಗೆ ಇಲ್ಲವು, ನಾನೊಬ್ಬನೇ ಎಂದು ತಿಳಿಸುವದಕ್ಕಾಗಿ ಎದೆಯನ್ನು ಮುಟ್ಟಿ **ಅಹಂ** - ಎಂದು ಹೇಳಿರುತ್ತಾರೆ. ಶ್ರೀರಾಮಗೋಷ್ಠಿಯಲ್ಲಿ ವಿಭೀಷಣನನ್ನು ಸರಿಯಾಗಿ ತಿಳಿದು ಆತನು ಯೋಗ್ಯನೆಂದು ರಕ್ಷಿಸುವ ಶಕ್ತಿಯು ಶ್ರೀರಾಮನಿಗೊಬ್ಬನಿಗೇ ಎಂಬುದು ವ್ಯಕ್ತವು. ಆತನಿಗೆ ಒಡನೆ ಅನುಗ್ರಹಿಸುವದಕ್ಕಾಗಿ ಇನ್ನೂ ಸಮುದ್ರತರುಣ ರಾವಣಹನನಾದಿಗಳಿಗೆ ಮುಂಚೆಯೇ ಲಂಕಾರಾಜ್ಯಾಭಿಷೇಕವನ್ನು ಲಕ್ಷ್ಮಣನ ಮೂಲಕ ಮಾಡಿಸಿ ತೃಪ್ತರಾಗಿರುತ್ತಾರೆ. ಅನಂತರ ರಾವಣನನ್ನು ಕೊಂದು ಸರಿಯಾದ ರಾಜ್ಯಾಭಿಷೇಕವನ್ನು ನಡೆಸಿ ; "**ಅಭಿಷಿಚ್ಯಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಮ್ । ಕೃತಕೃತ್ಯಸ್ತದಾರಾಮೋವಿಜ್ವರಃ ಪ್ರಮುಮೋದಹ**" ಎಂದು ತುಂಬಾ ಸಂತೋಷಪಟ್ಟರೆಂದು ಹೇಳಲ್ಪಟ್ಟಿರುತ್ತದೆ. ಇಂತಹ **ಅಘಟಿತಘಟನಾಶಕ್ತಿಯು** ಸ್ವಾಮಿಯಾದ ವಿಷ್ಣುವನೊಬ್ಬನಲ್ಲೇ ಉಂಟೇ ವಿನಾ ಇತರರಲ್ಲಿ ಇಲ್ಲವೆಂದು ಇಲ್ಲಿ ಹೇಳಲ್ಪಟ್ಟಿತು. ಇದಕ್ಕೆ ಶಕ್ತಿ ಎಂದು ಹೆಸರು. ಇದನ್ನು ಹೇಳಿದುದು ಜ್ಞಾನಬಲೈಶ್ವರ್ಯಾದಿಗಳಿಗೂ ಉಪಲಕ್ಷಣವು. ಆದುದರಿಂದಲೇ ಸರ್ವಪಾಪಗಳಿಂದ ಬಿಡಿಸಿ ರಕ್ಷಿಸುವ ಶಕ್ತಿಯು ಶ್ರೀಹರಿಗೆ ಮಾತ್ರವೇ ಎಂದು "**ನಹಿ ಪಾಲನ ಸಾಮರ್ಥ್ಯಂ ಋತೇ ಸರ್ವೇಶ್ವರಂ ಹರಿಮ್**" ಎಂದು ಹರಿವಂಶವಾಕ್ಯವಿರುತ್ತದೆ.

ಅಹಂ ಶಬ್ದವು ಸಪ್ರಯೋಜನವೆಂದು ಹೇಳಿದರು. ಅದನ್ನೇ **ಅಪರಾಧಂ ಪಣ್ಣಿನವನ್ನೈ** - ಎಂದಾರಂಭಿಸಿ ಉಪಪಾದಿಸುತ್ತಾರೆ— **ಅಪರಾಧಂ ಪಣ್ಣಿನವನ್ನೈ** - ಅಪರಾಧಮಾಡಿದವನನ್ನೂ, **ವಿಲಙ್ಗಿಟ್ಟುವೈತ್ತ** - ಬಂಧನವಾದ ಈ ಲೋಕದ ಸಂಸಾರದಲ್ಲಿಟ್ಟು, **ಸಮಾಧಿಕದರಿದ್ರನಾದ** - ತನಗೆ ಸಮರೂ ಅಧಿಕರೂ ಇಲ್ಲದ **ನಾನ್** .. **ಅಹಂ** ಎಂದು ಹೇಳಿಕೊಂಡ ನಾನು, **ಒರುವ್ಯಾಜತ್ತಾಲೇ** - ಸಕೃತ್ ಶರಣಾಗತಿಯನ್ನು ಅನುಷ್ಠಿಸಿದನೆಂಬ ವ್ಯಾಜದಿಂದ, **ಉಲ್ಲಸಿತಕಾರುಣ್ಯನಾಯ್** - ಹೆಚ್ಚಾಗಿ ವೃದ್ಧಿ ಹೊಂದಿದ ಕಾರುಣ್ಯಹೊಂದಿದವನಾಗಿ, **ಅಪರಾಧತ್ತೈ ಪೊರುತ್ತು ವಿಡಂಪೋದು** - ಅಪರಾಧಗಳನ್ನೆಲ್ಲಾ ಕ್ಷಮಿಸಿಬಿಡುವಾಗ, **ವಿಲಕ್ಕ ವಲ್ಲಾರಿಲ್ಲೈ** - ಬಂಧನದಲ್ಲಿಡಲು ಯಾರಿಗೂ ಶಕ್ತಿಯಿಲ್ಲವು. ತಾನು ಶರಣಾಗತ

ವತ್ಸಲನಾಗಿರುವದರಿಂದ, ಶರಣಾಗತನಾದವನು ಎಷ್ಟು ಮಹಾಪರಾಧಗಳನ್ನು ಮಾಡಿದ್ದರೂ ಅವುಗಳಿಂದ ಬಿಡಿಸಲು ತಾನು ಉದ್ಯುಕ್ತನಾಗಿರುವಾಗ ಅದನ್ನು ತಪ್ಪಿಸಲು ಯಾರಿಗೂ ಶಕ್ತಿಯಿಲ್ಲವು. ವಿಭೀಷಣನನ್ನು ರಕ್ಷಿಸಲು ತಾನು ಸಂಕಲ್ಪಿಸಿದಾಗ ಸುಗ್ರೀವ ಜಾಂಬವಾದಿಗಳ, ರಕ್ಷಿಸುವದು ಸರಿಯಲ್ಲವೆಂಬ ವಾದವು ನಿಷ್ಫಲವಾದವೆಂಬ ಭಾವವು. ಈ ಲೋಕದಲ್ಲಿ ಇರುವವರೆಲ್ಲಾ ಅಪರಾಧಿಗಳೇ. ಅಂತಹ ಅಪರಾಧಿಯು ಸಕೃತ್ ಶರಣಾಗತಿಯನ್ನನುಷ್ಠಿಸಿದರೆ, **"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತೋ ಮಮ."** ಅಂತವನಿಗೆ ಅಭಯವನ್ನೀಯುವದೇ ತನ್ನ ದೃಢವಾದ ವ್ರತವೆಂದು ಶ್ರೀರಾಮಚಂದ್ರಪ್ರಭುವು ಹೇಳಿಕೊಂಡಿರುತ್ತಾನೆ. ರಕ್ಷಿಸುವವನು ತಾನೇಯಾದುದರಿಂದ ಶರಣಾಗತಿಯು **ವ್ಯಾಜ** ಮಾತ್ರವು. ಆದುದರಿಂದ **ಒರು ವ್ಯಾಜತ್ತಾಲೇ** - ಎಂಬ ಪ್ರಯೋಗವು. ಈ ವ್ಯಾಜವನ್ನು ಆತನು ಉಪಕಾರವೆಂದು ಭಾವಿಸುವನು; ಏಕೆಂದರೆ ಅಂತಹ ಅನುಷ್ಠಾನವು ತನ್ನನ್ನು ಕೃಪಾಮಹೋದಧಿಯನ್ನಾಗಿ ತನ್ನ ಮಾಹಾತ್ಮ್ಯವನ್ನು ಪ್ರಚುರಗೊಳಿಸುವನಾದುದರಿಂದ. ಇದನ್ನೇ ಮನಸ್ಸಿನಲ್ಲಿಟ್ಟು ಮಹರ್ಷಿಯು ರಘುನಂದನನನ್ನು ಕೊಂಡಾಡುತ್ತಾರೆ — **"ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ । ನಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ"** ಒಂದು ಸಲ ಶರಣಾಗತನಾದರೆ ಅದರಿಂದ ಶ್ರೀರಾಮನು **ಉಲ್ಲಸಿತಕಾರುಣ್ಯನಾಗಿ** ಬಹುಸಂತೋಷಪಡುವನು. ಅನಂತರ ಆತನು ಎಷ್ಟು ಅಪರಾಧಗಳನ್ನು ಮಾಡಿದ್ದರೂ ಆತನು ಈಗ ತನ್ನವನಾದುದರಿಂದ ಅವುಗಳನ್ನು ಸ್ಮರಿಸುವದಿಲ್ಲವೆಂದು ಹೇಳಿರುತ್ತಾರೆ ಶರಣಾಗತನ ಭರಸಮರ್ಪಣದಿಂದ **"ಉಲ್ಲಸಿತ ಕೃಪಾ"** ಪ್ರಭಾವನಾಗುವನೆಂಬ ನಿದರ್ಶನವನ್ನೂ ಮಹರ್ಷಿಯು ಪ್ರದರ್ಶಿಸಿರುತ್ತಾರೆ. ವಿಭೀಷಣನನ್ನು ಕರೆದುಕೊಂಡು ಬಾ, ಎಂದು ಸುಗ್ರೀವನಿಗೆ ಆಜ್ಞಾಪಿಸಿ, ವಿಭೀಷಣನು ಬಂದು ಹತ್ತಿರ ನಿಲ್ಲಲು; ಶ್ರೀರಾಮನು ಆತನನ್ನು ಕೇಳುತ್ತಾನೆ.— **ವಚಸಾಸಾಂತ್ವಯಿತ್ವೈನಂ ಲೋಚನಾಭ್ಯಾಂ ಪಿಬನ್ನಿವ। ಆಖ್ಯಾಹಿ ಮಮತತ್ತ್ವೇನ ರಾಕ್ಷಸಾನಾಂ** ಬಲಾ **ಬಲಮ್"** ಎಂಬಲ್ಲಿ **"ಲೋಚನಾಭ್ಯಾಪಿಬನ್ನಿವ"** ಎಂದಿರುವದರಿಂದ **ಉಲ್ಲಸಿತಕಾರುಣ್ಯ**ನೆಂಬುದನ್ನು ಗ್ರಹಿಸಬಹುದು.

**ಸಮಾಧಿಕದರಿದ್ರನು**-ಎಂಬ ಪ್ರಯೋಗವು ಇಲ್ಲಿ ಏತಕ್ಕೆಂದರೆ? **ರಕ್ಷಿಸು** - ಎಂದು ದೈನ್ಯದಿಂದ **"ಯಾಚಂತಂ"** ಮನುಷ್ಯನು ಮಹಾಪರಾಧಿಯಾಗಿರಬಹುದು; ಅಂತವನನ್ನು ರಕ್ಷಿಸುವ ಶಕ್ತಿಯು ತನಗೊಬ್ಬನಿಗೇಯಾದುದರಿಂದ **"ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ। ದೋಷೋಯದ್ಯಪಿ ತಸ್ಯಸ್ಯಾತ್ ಸತಾಮೇತದಗರ್ಹಿತಂ"। ಆನಯೈನಂ ಹರಿಶ್ರೇಷ್ಠ ದತ್ತ**

**ವೇರೊರುವನಾಲೇ ಇವನೈ ಮುಕ್ತನಾಕ್ಕುವುನ್ ಒಣ್ಣಾದೆನ್ರು ಇಙ್ಗು ತಾತ್ಪರ್ಯಮ್.** ಇನ್ನರ್ಥಮ್ **"ಮೋಕ್ಷದೋ ಭಗವಾನ್ ವಿಷ್ಣುಃ" "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥ ಆನಯೈನಂ ಹರಿಶ್ರೇಷ್ಠ ದತ್ತ**

**ಮಸ್ಯಾಭಯಂ ಮಯಾ । ವಿಭೀಷಣೋವಾ ಸುಗ್ರೀವ ಯದಿವಾ ರಾವಣ ಸ್ಸಯಮ್."** ಮಹಾಪಾಪಿಯಾದ ರಾವಣನೂ ಶರಣಾಗತನಾದರೆ ರಕ್ಷಿಸುವ ನೆಂದು ಹೇಳಿಕೊಂಡಿರುತ್ತಾರೆ. ಸ್ವರೂಪರೂಪಗುಣ ವಿಭವೈಶ್ವರ್ಯಾದಿಗಳಲ್ಲೂ ಆತನಿಗೆ ಸಮರೂ ಅಧಿಕರೂ ಇಲ್ಲವು. **"ತಮೀಶ್ವರಾಣಾಂ ಪರಮಂ ಮಹೇಶ್ವ ರಮ್" "ನತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ"** ಇತ್ಯಾದಿ ಪ್ರಯೋಗಗಳನ್ನು ಶ್ವೇತಾಶ್ವತರದಲ್ಲಿ ಕಾಣಬಹುದು.

ಇಂತಹ ಸರ್ವೇಶ್ವರನು ಶರಣಾಗತವತ್ಸಲನಾದುದರಿಂದ ಪ್ರಪನ್ನರನ್ನು ರಕ್ಷಿಸ ಬೇಕೆಂದು ಸಂಕಲ್ಪಿಸಿರುವಾಗ ಅದಕ್ಕೆ ಪ್ರತಿಯಾಗಿ ನಡೆಯುವರ ಪ್ರಯತ್ನಗಳು ಎಂದಿಗಾದರೂ ಸಾಗುವುವೇ ? ಅಂಬರೀಷರಿಗೆ ಮಾಡಿದ ದೂರ್ವಾಸರ ಪ್ರಯತ್ನ ಗಳೂ, ದುರ್ಯೋಧನಾದಿಗಳು ಪಾಂಡವರಿಗೆ ಮಾಡಿದ ಸಕಲ ದುಷ್ಟಪ್ರಯತ್ನಗಳೂ, ಅಸುರರು ದೇವತೆಗಳ ವಿಷಯದಲ್ಲಿ ಮಾಡಿದ ಸರ್ವಪ್ರಯತ್ನಗಳೂ, ರಾಕ್ಷಸರು ಋಷಿ ಗಳ ಮೇಲೆ ಮಾಡಿದ ಪ್ರಯತ್ನಗಳೂ, ಪ್ರಹ್ಲಾದನ ಮೇಲೆ ಮಾಡಿದ ಹಿರಣ್ಯಕಶ ಪಿನ ಸರ್ವಪ್ರಯತ್ನಗಳೂ ವಿಫಲವಾದುದು, ಇದಕ್ಕೆ ನಿದರ್ಶನಗಳು. ಈ ಅಭಿಪ್ರಾಯ ವನ್ನೇ ಶ್ರೀದೇಶಿಕರು ಅಭೀತಿಸ್ತವದಲ್ಲಿ **"ಶಿರಕ್ಷಯತಿಯತ್ರಚ ಪ್ರತಿಭಯಂ ನ್ನಕಿಂಚಿತ್ಕ್ವಚಿತ್"** ಸರ್ವೇಶ್ವರನು ರಕ್ಷಿಸುತ್ತೇನೆಂದು ಸಂಕಲ್ಪಿಸಿದವನಿಗೆ ಪ್ರತಿ ಭಯವು ಏನೊಂದು ಎಲ್ಲಿಯೂ ಎಂದಿಗೂ ಇಲ್ಲವೆಂದು ಹೇಳಿರುತ್ತಾರೆ.

ಆದುದರಿಂದ **ಅಹಂ** - ಎಂಬುದರಿಂದ ತಾನು ಸರ್ವಶಕ್ತನಾದುದರಿಂದ ನಿನ ಗೇನೂ ಭಯಬೇಡ. ಅಭಯುವನ್ನು ಕೊಡಲು ಶಕ್ತಿಯುಳ್ಳವನು ನಾನು ಎಂಬ ತಾತ್ಪರ್ಯವು. ಇನ್ನೊಂದು ವಾಕ್ಯದಿಂದಲೂ **ಅಹಂ** ಎಂಬ ಶಬ್ದದ ತಾತ್ಪರ್ಯವನ್ನು ತಿಳಿಸುತ್ತಾರೆ. **ವೇರೊರವನಾಲೇ** - ತಾನಲ್ಲದೆ ಇನ್ನು ಯಾರೊಬ್ಬನಿಂದಲೂ, **ಇವನೈ** - ಈ ಪ್ರಪನ್ನನನ್ನು, **ಮುಕ್ತನಾಕ್ಕುಮ್** - ಮುಕ್ತನನ್ನಾಗಿ ಮಾಡಲು, **ವೊಣ್ಣಾದು** - ಸಾಧ್ಯವಿಲ್ಲವು, **ಎನ್ರು** - ಎಂದು, **ಇಙ್ಗು** - ಈ ಅಹಂ ಶಬ್ದ ಪ್ರಯೋಗದಲ್ಲಿ **ತಾತ್ಪರ್ಯವು.** ಶ್ರೀಮನ್ನಾರಾಯಣನಿಗೆ **ಮುಕುಂದ** ನೆಂಬ ಹೆಸರು ಆತನೊಬ್ಬನೇ ಮುಕ್ತಿದಾಯಕನಾದುದರಿಂದ ಸಲ್ಲುತ್ತದೆ. **ಮುಕ್ತಾನು ಭೂತಿ ಮಿಹದಾಸ್ಯತಿಮೇ ಮುಕುಂದಃ"** ಎಂಬ ಪ್ರಯೋಗವನ್ನು ದಯಾಶತಕ ದಲ್ಲಿ ಕಾಣಬಹುದು. **ಮುಕುಂದೋಽಮಿತ ವಿಕ್ರಮಃ**—ಅಮಿತ ವಿಕ್ರಮನಾಗಿ ಅಘಟಿತಘಟನಾಶಕ್ತಿಯುಳ್ಳವನಾದುದರಿಂದಲೇ ಮುಕುಂದನು ಎಂದು ಸಹಸ್ರ ನಾಮದಲ್ಲಿ ಕಾಣಬಹುದು.

**ಪಾಶಿತಾಃ ಪೂರ್ವಂ ಪರಮೇಣ ಸ್ವಲೀಲಯಾ" ಇತ್ಯಾದಿಗಳಿಲೇ ಪ್ರಸಿದ್ಧನ್.**

**ಇನ್ವರ್ಥಂ** – ಈ ಅಭಿಪ್ರಾಯವು, "**ಮೋಕ್ಷದೋ ಭಗವಾನ್ ವಿಷ್ಣುಃ** – ಮೋಕ್ಷವನ್ನು ಕೊಡುವವನು, **ಭಗವಾನ್ ವಿಷ್ಣುಃ** – ಹೇಯಪ್ರತ್ಯನೀಕನಾಗಿ ದಯೆಮೊದಲಾದ ಕಲ್ಯಾಣಗುಣಾಕರನಾದ ಶ್ರೀ ವಿಷ್ಣುವೇ. ಇಲ್ಲಿ **ವಿಷ್ಣುಃ** – ಸರ್ವ ವಾಕ್ಯಂ ಸಾವಧಾರಣವೆಂಬ ಪ್ರಮಾಣಾನುಸಾರ ವಿಷ್ಣುರೇವ ಎಂಬ ಭಾವವು. "**ಸರ್ವಸ್ಮಾಚ್ಚ ಪರೋವಿಷ್ಣುಃ ನಸಮೋಽನೇನಕಶ್ಚನ । ಮೋಕ್ಷದೋಽಪ್ಯೇಕ ಏವಾಸೌ ಭೃತ್ಯಕೃತ್ಯಸ್ಯ ಮೋಕ್ಷದಃ**" ವಿಷ್ಣುವಿನಿಗಿಂತ ಶ್ರೇಷ್ಠರೂ ಯಾರೂ ಇಲ್ಲವು. ಸಮರೂ ಇಲ್ಲವು. ಪ್ರಪನ್ನನಿಗೆ ಮೋಕ್ಷಕೊಡುವ ಶಕ್ತಿಯು ಆತನೊಬ್ಬನಿಗೇನೆ ಎಂದು ಹೇಳಲ್ಪಟ್ಟಿರುತ್ತದೆ. ಮತ್ತು **ಪಶವಃ** – ಜೀವಾತ್ಮರು ಪಶುಗಳು, **ಪರಮೇಣ** – ತನಗಿಂತ ಶ್ರೇಷ್ಠರಿಲ್ಲದ ಶ್ರೀಮಹಾವಿಷ್ಣುವಿನಿಂದ **ಸ್ವಲೀಲಯಾ** – ತನ್ನ ಲೀಲೆಯಿಂದ ಅವರವರುಗಳ ಕರ್ಮಾನುಸಾರ, **ಪಾಶಿತಾಃ** – ಹಗ್ಗದಿಂದ ಕಟ್ಟಲ್ಪಟ್ಟಿರುವವರು ; ಅದುಬ್ರಹ್ಮಗಂಟಾಮದರಿಂದ, **ತೇನೈವಮೋಚನೀಯಾಃ** – ಅವನಿಂದಲೇ ಗಂಟು ಬಿಚ್ಚಲ್ಪಡುವರಾಗಬೇಕು ; **ನಾನ್ಯೈರ್ಮೋಚಯಿತುಂಕ್ಷಮಾಃ** – ಬ್ರಹ್ಮರುದ್ರೇಂದ್ರಾದಿಗಳ್ಯಾರಿಂದಲೂ ಬಿಡಿಸಲು ಶಕ್ತರಲ್ಲವು. **ಇತ್ಯಾದಿಗಳಿಲೇ** – ಇವೇ ಮೊದಲಾದ ಪ್ರಮಾಣಗಳಲ್ಲಿ **ಪ್ರಸಿದ್ಧವು.** ಆದಿ ಶಬ್ದದಿಂದ "**ಬ್ರಹ್ಮಾಣಂ ಶಿತಿಕಂಠಞ್ಚ ಯಾಶ್ಚಾನ್ಯಾದೇವತಾಸ್ಸ್ಮೃತಾಃ । ಪ್ರತಿಬುದ್ಧಾನಸೇವಂತೇ ಯಸ್ಮಾತ್ಪರಿಮಿತಂ ಫಲಮ್**" ಚತುರ್ಮುಖ ಬ್ರಹ್ಮನನ್ನಾಗಲಿ ರುದ್ರನನ್ನಾಗಲಿ, ಇಂದ್ರಾದಿದೇವತೆಗಳನ್ನಾಗಲಿ ಪ್ರಾಜ್ಞರು ಸೇವಿಸುವದಿಲ್ಲವು. ಏಕೆಂದರೆ ಅವರಿಗೆ ಅಶಾಶ್ವತವಾದ ಪರಿಮಿತ ಫಲವನ್ನು ಮಾತ್ರ ಕೊಡುವ ಶಕ್ತಿಯುಂಟಾದುದರಿಂದ. ಅಪರಿಮಿತವಾದ ಶಾಶ್ವತಫಲವಾದ ಮೋಕ್ಷವನ್ನು ಕೊಡುವ ಶಕ್ತಿಯು ಶ್ರೀಮನ್ನಾರಾಯಣನಿಗೆ ಮಾತ್ರವೇ ಎಂಬ ಭಾವವು, ಎಂಬ ಇತರ ಪ್ರಮಾಣಗಳು ಸೂಚಿತವು.

ಆದುದರಿಂದ ನಾನೊಬ್ಬನೇ ಮುಕ್ತಿದಾಯಕನೆಂದು ಇತಿಹಾಸಪುರಾಣಗಳು ಸಾರುತ್ತವೆ. ಬ್ರಹ್ಮರುದ್ರೇಂದಾದಿಗಳು ಮುಕ್ತಿಯನ್ನು ಕೊಟ್ಟರೆಂದು ಎಲ್ಲಿಯೂ ಪ್ರಮಾಣವಿಲ್ಲವು.

ಹೀಗೆ ಮಹಾಪರಾಧಿಯಾದ ಪ್ರಪನ್ನನನ್ನೂ ಕೂಡ ಅನುಗ್ರಹಯೋಗ್ಯನನ್ನಾಗಿ ಮಾಡುವ ಸರ್ವೇಶ್ವರನ ಯಾವಗುಣಗಳು ಎಂಬುದನ್ನುಚರ್ಚಿಸುತ್ತಾರೆ. (೧) ಸಹಜಕಾರುಣ್ಯವೇ ? (೨) ಅಥವಾ ಭರನ್ಯಾಸ ಮಾಡಿದುದರಿಂದುಂಟಾದ ಪ್ರಸನ್ನತೆಯೇ ? ಅಥವಾ (೩) ನಿರಂಕುಶ ಸ್ವಾತಂತ್ರ್ಯವೇ ? ಬರೀ ಸಹಜ ಕಾರುಣ್ಯವೆಂದರೆ ಭರನ್ಯಾಸವು ಅನಾವಶ್ಯಕವೆಂದಾಗುವದಲ್ಲದೆ ಸರ್ವಮುಕ್ತಿ

**ಇನ್ನಹಂ ಎಜ್ಞರಪದತ್ತಿಲ್ ಸಹಜಕಾರುಣ್ಯಾದಿಗಳ್ ಪೇರಣಿಯಾಯ್ ಪ್ರಪತ್ತಿಮುಡಿಯೋಡೆವಂದ ಪ್ರಸಾದವಿಶೇಷಮ್ ಇಳನಣಿಯಾಯ್ ನಿರಂಕುಶಮಾನ ಸ್ವಾತಂತ್ರ್ಯಮ್ ಸರ್ವವಿರೋಧಿ ನಿರಾಕರಣಾರ್ಥಮಾಗ ಮುನ್ನೇ ನಿರ್ಕಿರದು.**

---

ಪ್ರಸಜ್ಞವಾಗುತ್ತದೆ. ಆದುದರಿಂದ ಭರನ್ಯಾಸವು, ವೈಷಮ್ಯ ನೈರ್ಘೃಣ್ಯಾದಿಗಳಿಂದ ತಪ್ಪಿಸಿಕೊಳ್ಳಲು, ಆತನಿಗೆ ಆವಶ್ಯಕವು. ಮತ್ತು ಅಸ್ವತಂತ್ರನಾದರೆ ಆತನ ಪ್ರಸಕ್ತಿಯೂ ನಿರರ್ಥಕವಾಗಬಹುದು ಆದುದರಿಂದ ಮೂರೂ ಆವಶ್ಯಕವೆಂದು ಹೇಳುತ್ತಾರೆ.-ಈ ಪ್ರಪನ್ನನ ಶತ್ರುಗಳಾದ ಮಹಾಪರಾಧಗಳನ್ನು ಎದುರಿಸಿ ಗೆಲ್ಲಲು, ಈ ಸಾರ್ವಭೌಮನಾದ ರಾಜನಿಗೆ **ಸಹಜಕಾರುಣ್ಯವೇ** ಮೂಲಬಲವೆಂದೂ ಮಧ್ಯದಲ್ಲಿ ನಿಂತಿರುವ ಸೇನಾಬಲವು ಪ್ರಪನ್ನನ ಭರನ್ಯಾಸದಿಂದುಂಟಾದ **ಪ್ರಸನ್ನತೆ**ಯೆಂದೂ, ಮುಂದೆ ಯುದ್ಧಕ್ಕೆ ಪ್ರತಿಭಟಿಸಿ ನಿಂತಿರುವದು **ನಿರಂಕುಶ** ಸ್ವಾತಂತ್ರ್ಯವು ಎಂದೂ ರೂಪಕಮಾಡಿ ಹೇಳುತ್ತಾರೆ—**ಇನ್ನಹಂ ಎಜ್ಞರಪದತ್ತಿಲ್** - ಈ"**ಅಹಂ**" ಎಂಬ ಪದದಲ್ಲಿ, **ಸಹಜಕಾರುಣ್ಯಾದಿಗಳ್** - ಶ್ರೀಮನ್ನಾರಾಯಣನ ಕಾರುಣ್ಯವೇ ಮೊದಲಾದವುಗಳು, **ಆದಿ** ಪದದಿಂದ ಸರ್ವಜ್ಞತೆ ಸತ್ಯಸಂಕಲ್ಪತ್ವಾದಿ "**ಸಮುಚಿತ ಗುಣಜಾತಂ**" ಎಂದು ಶ್ರೀಪರಾಶರಭಟ್ಟರವರು ಹೇಳಿದ ಇತರ ಕಲ್ಯಾಣಗುಣಗಳೆಂದಾಗಲಿ ಅಥವಾ ವ್ಯೂಹಾಧಿಕಾರದಲ್ಲಿ ಹೇಳಿದ ಸೌಶೀಲ್ಯ, ಸೌಲಭ್ಯ, ಜ್ಞಾನ, ಶಕ್ತಿ, ಪ್ರಾಪ್ತಿ ಮೊದಲಾದವುಗಳು ಹೇಳಲ್ಪಟ್ಟವು. **ಪೇರಣಿಯಾಯ್** - ಮುಖ್ಯಮೂಲಬಲವಾಗಿ **ಪ್ರಪತ್ತಿಮುಡಿಯಾಕವಂದ** - ಪ್ರಪದನಾನುಷ್ಠಾನ ಮೂಲಕ ಉಂಟಾದ, **ಪ್ರಸಾದವಿಶೇಷಮ್**-ಅನುಗ್ರಹ ವಿಶೇಷವು, **ಇಳನಣಿಯಾಯ್** - ಮಧ್ಯದಲ್ಲಿರುವ ಸಹಾಯಸೇನೆಯಾಗಿ, **ನಿರಂಕುಶ ಸ್ವಾತಂತ್ರ್ಯಮ್** - ತಡೆಯಿಲ್ಲದ ಸ್ವಾತಂತ್ರ್ಯವು, **ಅಂಕುಶ** ವೆಂದರೆ ಆನೆಯ ಸ್ವಾತಂತ್ರ್ಯವನ್ನು ನಿರಾಕರಿಸುವ ಮಾವಟಿಗನು ಉಪಯೋಗಿಸುವ ಭರ್ಜಿಯು; ಆದುದರಿಂದ **ನಿರಂಕುಶವೆಂದರೆ**- ತಡೆಯಿಲ್ಲದ ಎಂಬರ್ಥವು, ಇದು, **ಸರ್ವವಿರೋಧಿನಿರಾಕರಣಾರ್ಥಮಾಗ** - ಸಮಸ್ತ ವಿರೋಧಿವರ್ಗವನ್ನೂ ನಾಶಮಾಡುವದಕ್ಕಾಗಿ, **ಮುನ್ನೇನಿರ್ಕಿರದು** - ಮುಂದೆ ನಿಂತಿರುವದು. ಇದರಿಂದ ಈ ಮೂರೂ ಸೇರಿಯೇ ಪ್ರಪನ್ನನ ಅಪರಾಧ ನಿರಾಕರಣೆಗೆ ಹೇತುಗಳು ಎಂಬ ಭಾವವು. **ಸಹಜಕಾರುಣ್ಯವು** ಮೂಲಬಲವೆಂದು ಹೇಳಿದರು ; ಏಕೆಂದರೆ ಕರುಣೆಯಿಲ್ಲದೆ ಯಾವ ಅನುಗ್ರಹವೂ ಇಲ್ಲವು. ದಯಾಶತಕದಲ್ಲಿ, "**ವೃಷಗಿರಿ ಗೃಹಮೇಧಿ ಗುಣಾಬೋಧ ಬಲೈಶ್ವರ್ಯವೀರ್ಯಶಕ್ತಿಮುಖಾಃ। ದೋಷಾಭವೇಯು ರೇತೇ ಯದಿ ನಾಮ ದಯೇತ್ಯಯಾವಿನಾಭೂತಾಃ**" ಓದಯೆಯೇ ಸ್ವಾಮಿಯ ಷಡ್ಗುಣಗಳೂ

**ಅದೇ ಎಙ್ಙನೇಯೆನ್ನಿಲ್ ? ಸಹಜಕಾರುಣ್ಯ ಮಲ್ಪವ್ಯಾಜತ್ತಾಲ್ ಕೊಣ್ಡು ಅನಂತಾಪರಾಧಙ್ಗಳೈ ಅನಾದರಿಕ್ಕುಮ್ಪಡಿಯಾನ ಪ್ರಸಾದತ್ತೈ ಉಣ್ಡಾಕ್ಕಿರದು. ಇಪ್ಪ್ರಸಾದವಿಶೇಷಮ್ ಕಾರುಣ್ಯೋಪಶ್ಲಿಷ್ಟಮಾಯ್ ಕೊಣ್ಡು ನಿರಙ್ಕುಶಸ್ವಾತಂತ್ರ್ಯತ್ತೈ ಆಶ್ರಿತರುಡೈಯ ಸರ್ವವಿರೋಧಿ ನಿರಾಕರಣತ್ತುಕ್ಕು ಉಪಾಕ್ಕಿರತು.**

ಸೀನೊಬ್ಬಳಿಲ್ಲದೇ ಹೋಗಿದ್ದರೆ ದೋಷಯುಕ್ತವಾಗಿ ಆಗುತ್ತಿದ್ದವು ಎಂದು ಹೇಳಲ್ಪಟ್ಟಿರುತ್ತದೆ ಪ್ರಪನ್ನನ ರಕ್ಷಣೆಗೆ **ಕಾರುಣ್ಯವು** ಮೂಲಭೂತವಾದ ಗುಣವು; ಆದುದರಿಂದ ಪ್ರೇರಣೆ ಎಂದು ಹೇಳಲ್ಪಟ್ಟಿತು ಆ ರಕ್ಷಣೆಗೆ ಒಂದು ವ್ಯಾಜರೂಪವಾಗಿ ಉಪಾಯಾನುಷ್ಠಾನವು ಆವಶ್ಯಕವೆಂದು **"ಪ್ರಪನ್ನಾದನ್ಯೇಷಾಂ"** ಎಂಬಲ್ಲಿ ಹೇಳಲ್ಪಟ್ಟಿತು. **ವಿರೋಧಿನಿರಸನ** ದಲ್ಲಿ ಸ್ವಸ್ವಾತಂತ್ರ್ಯವು ಮುಖ್ಯವು. ಕಾರುಣ್ಯವಿಲ್ಲದೆಯೂ, ಪ್ರಸನ್ನತೆಯಿಲ್ಲದೆಯೂ ಬರೀಸ್ವಾತಂತ್ರ್ಯವಿದ್ದುದಾದರೆ ರಕ್ಷಣೆ ಇಲ್ಲದೆ ಶಿಕ್ಷೆಯಲ್ಲಿಯೇ ಪರಿಣಮಿಸಬಹುದು. ಆದುದರಿಂದ ಸ್ವಾತಂತ್ರ್ಯಕ್ಕೆ ಇವುಗಳ ಬೆಂಬಲವೂ ಇರಬೇಕಾಗಿರುತ್ತದೆ. ಸ್ವಾತಂತ್ರ್ಯವಿಲ್ಲದಿದ್ದರೂ ಅನುಗ್ರಹವಿಲ್ಲವಾಗಿ ಅದೂ ಮುಖ್ಯವು. ಈ ಮೂರೂ **ಅಹಂ** ಎಂಬಲ್ಲಿ **ಅಂತಹವನಾನು** ಎಂಬ ಭಾವವು ತೋರಿಬರುತ್ತದೆಂಬ ತಾತ್ಪರ್ಯವು.

ಈ ಮೂರು ಗುಣಗಳೂ ಹೇಗೆ ಉಪಯುಕ್ತವಾದುವು ಎಂಬುದು **"ಎಙ್ಙನೇಯೆನ್ನಿಲ್"** ಎಂದಾರಂಭಿಸಿ ಎರಡು ವಾಕ್ಯಗಳಿಂದ ಉಪಪಾದಿಸುತ್ತಾರೆ.— **ಸಹಜಕಾರುಣ್ಯವಮ್** - ಶ್ರೀಯಃಪತಿಯ ಸಹಜಕಾರುಣ್ಯವು, **ಅಲ್ಪವ್ಯಾಜತ್ತೈ ಕೊಂಡು** - ಅಲ್ಪವ್ಯಾಜವಾದ ಶರಣಾಗತಿಯ ಮೂಲಕ, **ಅನಂತಾಪರಾಧಗಳನ್ನು, ಅನಾದರಿಕ್ಕುಮ್ಪಡಿಯಾನ** - ಸ್ಮರಿಸದೇ ಇರುವಹಾಗೆ, **ಪ್ರಸಾದತ್ತೈ ಉಣ್ಡಾಕ್ಕಿರದು** - ಅನುಗ್ರಹವನ್ನುಂಟುಮಾಡುತ್ತದೆ. **ಇಪ್ಪ್ರಸಾದವಿಶೇಷಮ್** ಈ ಅನುಗ್ರಹವಿಶೇಷವು, **ಕಾರುಣ್ಯೋಪಶ್ಲಿಷ್ಟವಾಯ್** - ಕಾರುಣ್ಯದೊಂದಿಗೆ ಸೇರಿ, **ನಿರಙ್ಕುಶಸ್ವಾತಂತ್ರ್ಯ**ವನ್ನು, **ಆಶ್ರಿತರುಡೈಯ** - ಶರಣಾಗತರ, **ಸರ್ವವಿರೋಧಿನಿರಾಕರಣತ್ತುಕ್ಕು** - ಸಮಸ್ತಪಾಪಗಳ ವಿಮೋಚನೆಗೆ, **ಉರುಪ್ಪಾಕ್ಕಿರದು** - ಮುಖ್ಯಸಾಧನವಾಗಿಮಾಡುತ್ತದೆ. **ಕಾರುಣ್ಯವು** ಸಿದ್ಧೋಪಾಯನಲ್ಲಿ ಮುಖ್ಯವು. ಇದು ಆಚಾರ್ಯಪ್ರಾಪ್ತಿ, ಭರನ್ಯಾಸಾನುಷ್ಠಾನಗಳಿಗೆ ಹೇತುವಾಗಿ ಆತನ ಪ್ರಸನ್ನತೆಯನ್ನುಂಟುಮಾಡಿ ಇವೆರಡೂ ಸೇರಿ ಸ್ವಾಮಿಯ ನಿರಂಕುಶ ಸ್ವಾತಂತ್ರ್ಯಕ್ಕೆ ಹೇತುವಾಗಿ ಸರ್ವಪಾಪವಿಮೋಚನಮೂಲಕ ಮೋಕ್ಷಪ್ರಾಪ್ತಿಯುಂಟಾಗುತ್ತದೆಂಬ ಭಾವವು.

**ಅಹಂ ಶಬ್ದೇನಿರಪೇಕ್ಷ ಕರ್ತೃತ್ವನ್ ಅವಧಾರಣಮುಪಿಫಲಿತಮ್**

**ಇಪ್ಪಡಿ ಸರ್ವಪಾಪವಿಮೋಚನತ್ತುಕ್ಕು ಅಪೇಕ್ಷಿತಮಾನ ಸರ್ವಾಕಾರತ್ತಾಲುಮ್ ವಿಶಿಷ್ಟನಾನ ಈಶ್ವರನುಡೈಯ ನಿರಪೇಕ್ಷಕರ್ತೃತ್ವ ತತ್ಪರಮಾನ "ಅಹಂ" ಶಬ್ದತ್ತಿಲೇ ಅವಧಾರಣಂ ಫಲಿತಮ್.**

**ಅಥ "ತ್ವಾ" ಶಬ್ದಾರ್ಥಮಾಹ**

**ಅಹಂ ಶಬ್ದದಲ್ಲಿ ನಿರಪೇಕ್ಷ ಕರ್ತೃತ್ವವೂ ಆಕಾರಣದಿಂದ ಅವಧಾರಣಾರ್ಥವೂ ತೋರಿಬರುತ್ತವೆ.**

**ಇಪ್ಪಡಿ** – ಮೇಲೆ ಉಪಪಾದಿಸಿದ ರೀತಿಯಲ್ಲಿ, **ಸರ್ವಪಾಪವಿಮೋಚನತ್ತುಕ್ಕು** – ಸರ್ವಪಾಪಗಳಿಂದ ಬಿಡುಗಡೆಗೆ, ಅಪೇಕ್ಷಿತಮಾನ—ಬೇಕಾದ, **ಸರ್ವಕಾರತ್ತಾಲುಮ್ ವಿಶಿಷ್ಟನಾನ ಈಶ್ವರನುಡೈಯ** - ಸಮಸ್ತ ಕಲ್ಯಾಣಗುಣಗಳಿಂದಲೂ ಸೇರಿರುವ ಸರ್ವೇಶ್ವರನಾದ ಶ್ರೀಯಃಪತಿಯ, **ನಿರಪೇಕ್ಷಕರ್ತೃತ್ವತತ್ಪರಮಾನ** – ಇನ್ನು ಯಾವ ಕರ್ತಾವಿನ ಸಹಾಯಬೇಕಾಗದೇ ಇರುವ ತಾತ್ಪರ್ಯವನ್ನು ಸೂಚಿಸುವ, ತನಗೆ ಇನ್ನು ಯಾರ ಸಹಾಯವೂ ಈ ಸರ್ವಪಾಪಗಳನ್ನು ನಾಶ ಮಾಡುವಮೂಲಕ ಪ್ರಣತರಕ್ಷಣೆಯಲ್ಲಿ ಬೇಕಾಗಿಲ್ಲವೆಂಬರ್ಥವನ್ನು ಸೂಚಿಸುವ, **ಅಹಂಶಬ್ದತ್ತಿಲೇ** – ಈ **ಅಹಂ** ಎಂಬ ಶಬ್ದದಲ್ಲಿ, **ಅವಧಾರಣಂ** – **ಅಹಮೇವ** ಎಂಬದಾಗಿ ಅವಧಾರಣಾರ್ಥವು, **ಫಲಿತಮ್** – ಫಲಿಸುತ್ತದೆ ಎಂದರೆ ಸಿದ್ಧವು, ಸ್ಥಾಪಿತವು. ಈ ಪಾಪವಿಮೋಚನ ಕೆಲಸವನ್ನು ನಾನಲ್ಲದೆ ಇನ್ನು ಯಾರೂಮಾಡಲಾರರು ಎಂಬ ನಿರಪೇಕ್ಷಕರ್ತೃತ್ವಾರ್ಥವು ಸಿದ್ಧವಾದರೆ, ಆಗ ತಾತ್ಪರ್ಯಾನುಗುಣವಾಗಿ ಅವಧಾರಣಾರ್ಥವು ಫಲಿಸುತ್ತದೆ. ಇಲ್ಲಿ **ಅಹಂ** ಎಂದರೆ **ಅಹಮೇವ** ಎಂದು ಇಟ್ಟುಕೊಳ್ಳಬೇಕು. ಸರ್ವವಾಕ್ಯವೂ ಸಾವಧಾರಣವೆಂದು ತಾತ್ಪರ್ಯಾನುಗುಣವಾಗಿ ಇಟ್ಟುಕೊಳ್ಳಬೇಕು. **ಪಂಡಿತಾಸ್ಸಮದರ್ಶಿನಃ** ಎಂಬ ಗೀತಾವಾಕ್ಯದಲ್ಲಿ ತಾತ್ಪರ್ಯಾನುಗುಣವಾಗಿ **ಪಂಡಿತಾಏವಸಮದರ್ಶನಃ** ಎಂದು ಅರ್ಥಮಾಡಬೇಕಾಗುತ್ತದೆ. ಏಕೆಂದರೆ ಅಪಂಡಿತರಿಗೆ ಆತ್ಮಸಮತ್ವ ಜ್ಞಾನವಿಲ್ಲದುದರಿಂದ. ರಾಮಲಕ್ಷ್ಮಣರು ಒಟ್ಟಿಗಿರುವಾಗ ರಾಮನು ಮಾರೀಚನಮೇಲೆ ಬಾಣಪ್ರಯೋಗ ಮಾಡಿದನು ಎಂದು ವಾಕ್ಯವಿದ್ದರೆ, ಲಕ್ಷ್ಮಣನು ಬಾಣಪ್ರಯೋಗ ಮಾಡಲಿಲ್ಲ ಎಂಬರ್ಥದಲ್ಲಿ ತಾತ್ಪರ್ಯವಾದರೆ, **ರಾಮಏವ** ಎಂಬ ಅವಧಾರಣಾರ್ಥವು ತೋರಿಬರುತ್ತದೆ. ಹಾಗೆಯೇ ಇಲ್ಲಿಯೂ.

**ಮುಂದೆ "ತ್ವಾ" ಎಂಬ ಪದದ ಅರ್ಥವನ್ನು ತಿಳಿಸುತ್ತಾರೆ.**

**"ತ್ವಾ" ಎನ್ನುದು** – ತ್ವಾ ಎಂಬ ಪದವು, **"ನತ್ವೇವಾಹಂ"** ಮೊದಲಾದ –

**"ತ್ವಾ"ಎನ್ರುದು,"ಸತ್ವೇವಾಹಂ" ಮುದಲಾನ ಉಪದೇಶಪರಂಪರ್ಯಾಲೇ ಚಿದಚಿದೀಶ್ವರ ತತ್ವತ್ರಯ ವಿವೇಕಂ ಪಿರನ್ದು, ಐಶ್ವರ್ಯಾದಿ ಪುರುಷಾರ್ಥಙ್ಗಳುಡೈಯವಲ್ಪತ್ವಾ ಸ್ಥಿರತ್ವಾದಿ ದೋಷಙ್ಗಳೈತ್ತೆರಿನ್ದು, ಮತ್ಪ್ರಾಪ್ತಿರೂಪಮಾನ ಪರಮಪುರುಷಾರ್ಥತ್ತೈಪ್ಪೆರವೇಣುಮನ್ರುಭಿನಿವಿಷ್ಟನಾಯ್, ಇದುಕ್ಕು ಉಪದಿಷ್ಟಮಾನ ದುಷ್ಕರೋಪಾಯಾನ್ತರತ್ತಿಲ್ ತುವಕ್ಕತ್ತು, ಪ್ರಾಪ್ಯನಾಯ್ ಸರ್ವವಿರೋಧಿ ನಿರಾಕರಣಕ್ಷಮನಾನವನಪಕ್ಕಲಿಲೇ ಭರನ್ಯಾಸಂಪಣ್ಣಿ ಕೃತಕೃತ್ಯನಾಯ್ ಕೋಲಿನಫಲಲಾಭತ್ತೈಪ್ಪೆತ್ತು ಇನಿಯೊರು ಕರ್ತವ್ಯಾಂತರತ್ತಿಲ್ ಪ್ರಾಪ್ತಿಯಿಲ್ಲಾದ ಉನ್ನೈಎನ್ರಪಡಿ.**

---

ಗೀತೋಪದೇಶ ಪ್ರಾರಂಭಶ್ಲೋಕವೇ ಮೊದಲಾದ, **ಉಪದೇಶಪರಂಪರೆಯಾಲೇ** - ಉಪದೇಶ ಪರಂಪರೆಯಿಂದ, **ಚಿದಚಿದೀಶ್ವರ ತತ್ವತ್ರಯವಿವೇಕಂ ಪಿರನ್ದು** - ಚಿತ್ತು, ಅಚಿತ್ತು ಪ್ರಕೃತಿ, ಪುರುಷ ಈಶ್ವರ ಹೀಗೆ ಮೂರುತತ್ವಗಳೂ ಒಟ್ಟಿಗೆ ಇದ್ದರೂ ಬೇರೆಬೇರೆ ವಸ್ತುಗಳು, ಮತ್ತು ಅವುಗಳ ಸ್ವರೂಪ ಸ್ವಭಾವಾದಿಗಳಲ್ಲಿರುವ ವ್ಯತ್ಯಾಸಜ್ಞಾನವು ಹುಟ್ಟಿ, **ಐಶ್ವರ್ಯಾದಿ ಪುರುಷಾರ್ಥಙ್ಗಳಿನುಡೈಯ**- ಐಹಿಕ ಐಶ್ವರ್ಯ, ಆದಿಶಬ್ದದಿಂದ ಸ್ವರ್ಗವೇ ಮೊದಲಾದ ಇತರ ಲೋಕಗಳ ಐಶ್ವರ್ಯಗಳು ಹೇಳಲ್ಪಟ್ಟವು, ಇವುಗಳ **ಅಲ್ಪಾಸ್ಥಿರತ್ವಾದಿ ದೋಷಂಗಳೈ** - ಅಲ್ಪವಾಗಿ. ಅಶಾಶ್ವತವಾಗಿ, ಆದಿಪದದಿಂದ ದುಃಖಭಾಕ್ತ್ವ, ದುಃಖಮಿಶ್ರತ್ವಾದಿದಿಗಳು ಹೇಳಲ್ಪಟ್ಟವು, ಇವ್ವೆ ಮೊದಲಾದ ದೋಷಗಳುಳ್ಳವೆಂದು, **ತೆಳಿನ್ದು** - ತಿಳಿದು, **ಮತ್ಪ್ರಾಪ್ತಿರೂಪಮಾನ** - ನನ್ನ ಪ್ರಾಪ್ತಿಯೇ ಫಲವಾಗಿವುಳ್ಳ, **ಪರಮಪುರುಷಾರ್ಥತ್ತೈ**- ಸನ್ವಶ್ರೇಷ್ಠರೂಪ ಪುರುಷಾರ್ಥರೂಪವಾದ ದಿವ್ಯವೈಕುಂಠವನ್ನು, **ಪೆರವೇಣುಮೆನ್ರು** - ಹೊಂದಬೇಕೆಂಬ, **ಅಭಿನಿವಿಷ್ಟನಾಯ್** - ಸ್ಥಿರಸಙ್ಕಲ್ಪಯುಕ್ತನಾಗಿ, **ಅದಕ್ಕು** - ಆ ಶಾಶ್ವತಪುರುಷಾರ್ಥಕ್ಕೆ, **ಉಪದಿಷ್ಟಮಾನ** - ಗೀತೆ ಮತ್ತು ಉಪನಿಷತ್, ವ್ಯಾಸಸೂತ್ರ ಮೊದಲಾದವುಗಳಲ್ಲಿ ಉಪದೇಶಿಸಲ್ಪಟ್ಟಿರುವ, **ದುಷ್ಕರೋಪಾಯತ್ತಿಲ್** - ತುಂಬಾಕಷ್ಟವಾದ ಇನ್ನೊಂದು ಉಪಾಯದಲ್ಲಿ ಎಂದರೆ ಕರ್ಮಯೋಗ ಜ್ಞಾನಯೋಗ ಸಹಕೃತವಾದ ಭಕ್ತಿಯೋಗವೆಂದರೆ ಉಪಾಸನದಲ್ಲಿ, **ತುವಕ್ಕತ್ತು** - ಸಂಬಂಧವನ್ನು ತ್ಯಜಿಸಿ, **ಪ್ರಾಪ್ಯನಾಗಿ, ಸರ್ವವಿರೋಧಿನಿರಾಕರಣಕ್ಷಮನಾನ** - ಸಮಸ್ತ ಪುಣ್ಯಾಪಾಪಗಳನ್ನೂ ಹೋಗಲಾಡಿಸಲು ಯೋಗ್ಯತೆಯಿರುವ, **ಎನ್ನಪಕ್ಕಲಿಲೇ** - ನನ್ನಲ್ಲಿ, **ಭರನ್ಯಾಸಂಪಣ್ಣಿ** - ಭರನ್ಯಾಸವನ್ನು ಮಾಡಿ, **ಕೃತಕೃತ್ಯನಾಗಿ** - ಮೋಕ್ಷಪ್ರಾಪ್ತಿಗೆ ಮಾಡತಕ್ಕದ್ದನ್ನು ಅನುಷ್ಠಿಸಿ, **ಕೋಲಿನಫಲಲಾಭತ್ತೈಪ್ಪೆತ್ತು** - ಅಪೇಕ್ಷಿಸಿದ ಮೋಕ್ಷಸುಖವನ್ನು ಕುರಿತು, **ಇನಿಯೊರುಕರ್ತವ್ಯಾಂತರತ್ತಿಲ್** - ಇನ್ನು ಬೇರೆಯಾವವದನ್ನಾಗಲಿ ಮಾಡಬೇಕ್ಕಾ

ಗಿರುವದರಲ್ಲಿ, **ಪ್ರಾಪ್ತಿಯಿಲ್ಲಾದ** - ಸರ್ವಭರವನ್ನೂ ನನ್ನಲ್ಲಿಟ್ಟಿರುವದರಿಂದ ಯಾವುದರ ಆವಶ್ಯಕತೆಯೂ ಇಲ್ಲದ, **ಉನ್ನೈಎನ್ನಪಡಿ** - ಅಂತಹ ನಿನ್ನನ್ನು ಎಂಬ ಅರ್ಥವು. **ತ್ವಾ** ಎಂದರೆ ನಿನ್ನನ್ನು ಎಂತಹ **ನಿನ್ನನ್ನು** ಎಂದರೆ ಅಭಿಪ್ರಾಯವನ್ನು ತಿಳಿಸುತ್ತಾರೆ—ಸರ್ವಪಾಪನಿವಾರಣೆಗೆ ಯೋಗ್ಯನಾಗಿರುವ ನಿನ್ನನ್ನೂ, ಹೇಗಿದ್ದರೆ ಹಾಗೆ ಯೋಗ್ಯನು ಎಂದರೆ—

೧. ತತ್ತ್ವತ್ರಯಗಳಾದ ಚಿದಚಿದೀಶ್ವರರ ಸ್ವರೂಪ ಸ್ವಭಾವಜ್ಞಾನ ಉಳ್ಳವನಾಗಿರಬೇಕು. ತತ್ತ್ವತ್ರಯಾಧಿಕಾರದಲ್ಲಿ ಉಪಪಾದಿಸಿರುವ ಜ್ಞಾನವಿರಬೇಕು.

೨. ಆಜ್ಞಾನದಿಂದ ವೈರಾಗ್ಯಹುಟ್ಟಿ ಐಹಿಕೈಶ್ವರ್ಯ ಸ್ವರ್ಗಾದಿಪ್ರಾಪ್ತಿಗಳು ಅಲ್ಪಾಸ್ಥಿರ ಮೊದಲಾದ ದೋಷಯುಕ್ತವೆಂದು ಅರಿತಿರಬೇಕು.

೩. ದಿವ್ಯ ವೈಕುಂಠಪ್ರಾಪ್ತಿಯೇ ನಿರತಿಶಯ ಸುಖರೂಪವಾದುದಾದುದರಿಂದ ಅದನ್ನು ಹೊಂದಬೇಕೆಂದು ಸಙ್ಕಲ್ಪಿಸಿ ತ್ವರಾತಿಶಯನಾಗಿರಬೇಕು

೪. ಇದನ್ನು ಹೊಂದಲು **"ಪ್ರಪನ್ನಾದನ್ಯೇಷಾಂ"** ಎಂಬಲ್ಲಿ ಹೇಳಿರುವಹಾಗೆ ಎರಡೇ ಉಪಾಯಗಳಾಗಿ, ಅದರಲ್ಲಿ ಉಪಾಸನವು ಕರ್ಮಜ್ಞಾನ ಸಹಕೃತ ಏಕಾನ್ತ ಭಕ್ತಿಯುತವಾಗಿ ಬಹುದುಷ್ಕರ್ರವಾದುದಾಗಿ ತನಗೆ ಅದನ್ನವಲಂಬಿಸಲು ಶಕ್ತಿಯಿಲ್ಲದವನಾಗಿರುವದರಿಂದ ಅದನ್ನು ತ್ಯಜಿಸಿ, ಸಮಸ್ತ ಪಾಪಗಳನ್ನೂ ಹೋಗಲಾಡಿಸಲು ಶಕ್ತನಾಗಿ ಕಾರುಣ್ಯಾದಿ ಗುಣವಿಶೇಷನಾಗಿರುವ ನನ್ನನ್ನು ಬಿಟ್ಟರೆ ನಿನ್ನನ್ನು ರಕ್ಷಿಸುವವರು ಬೇರೆಯಾರು ಇಲ್ಲವೆಂಬ ಮಹಾವಿಶ್ವಾಸದಿಂದ ನನ್ನಲ್ಲಿ ಭರನ್ಯಾಸವನ್ನು ಅನುಷ್ಠಿಸಿದವನಾಗಿರಬೇಕು.

೫. ಈ ವಿಷಯದಲ್ಲಿ ತನಗೆ ಇನ್ನು ಏನೂ ಕರ್ತವ್ಯಾಂಶವಿಲ್ಲವೆಂದೂ ತಾನು ಕೃತಕೃತ್ಯನು, ನಿರ್ಭಯನು, ನಿರ್ಭರನು, ಎಂಬ ಮಹಾವಿಶ್ವಾಸವಿರಬೇಕು. ಇಂತಹ **"ತ್ವಾ"** - ನಿನ್ನನ್ನು ಎಂಬ ಭಾವವು.

**"ನತ್ವೇವಾಹಂ ಜಾತುನಾಸಂ"** ಎಂಬುದು ಗೀತೋಪದೇಶದ ಆರಂಭ ಶ್ಲೋಕವು. ಅಲ್ಲಿಂದ ಗೀತಾಚಾರ್ಯನ ಉಪದೇಶಪರಂಪರೆ ಎಂದು ಹೇಳಿದುದು ಮುಂದಿನ ೧೭ ಅಧ್ಯಾಯಗಳಿಂದ ಹೇಳಿದುದೆಲ್ಲಾ ಸಙ್ಗ್ರಹೀತವು. ಸುಲಭವಾದ ೧೮-೬೬ ನೆಯ ಶ್ಲೋಕದಲ್ಲಿ ಹೇಳಿರುವ ಲಘೂಪಾಯವಿರುವಾಗ **ಈ ಉಪದೇಶ ಪರಂಪರೆಯ** - ಆವಶ್ಯಕತೆ ಏನು ? ಎಂದರೆ ಕ್ಷತ್ರಿಯನಾದ ಅರ್ಜುನನಿಗೆ ಧರ್ಮ ಯುದ್ಧವು ಫಲಾಭಿಸಂಧಿಯಿಲ್ಲದೆ ಕರ್ತವ್ಯಾಂಶವು, ನಿತ್ಯನೈಮಿತ್ತಿಕಗಳಿಂದ ಕೂಡಿದ ಕರ್ಮಯೋಗಕ್ಕೆ ಸೇರಿ ಭಕ್ತಿಯೋಗಕ್ಕೆ ಅಂಗವಾದುದರಿಂದ ಅದನ್ನು ಹೇಳಬೇಕಾಗಿ ಬಂತು. ಅರ್ಜುನನು ಉಪಾಸನೆಗೆ ಶಕ್ತನೇನೋ ಹೌದು. ಆದರೂ ಆತನು

ಕೃಪಾಳುವಾದುದರಿಂದ ಅಶಕ್ತರಾಗಿ ಮಹಾಶ್ವಾಂಚಲ್ಯಯುಕ್ತರಿಗೆ ಯಾವುದು ಉಪಾಯವೆಂಬುದನ್ನು ಕೇಳಿ ತಿಳಿಯುತ್ತಾನೆ. ಯಾವಾಗ ಈ ಚರಮಶ್ಲೋಕದ ಮೂಲಕವಾಗಿ ಸುಲಭೋಪಾಯವನ್ನು ಉಪದೇಶಿಸಿದರೋ, ಒಡನೆಯೇ **"ನಷ್ಟೋ ಮೋಹ ಸ್ಮೃತಿರ್ಲಬ್ಧಾ"** ಎಂದು ಹೇಳಿ ತ್ಯಜಿಸಿದ್ದ ಗಾಂಡೀವವನ್ನು ತೆಗೆದು ಕೊಂಡು ಯುದ್ಧಸನ್ನದ್ಧನಾಗುತ್ತಾನೆ. **"ನತ್ವೇವಾಹಂ"** ಎಂಬ ಶ್ಲೋಕದ ಉಪಪಾದನೆಗೆ ದಾಸನು ಬರೆದಿರುವ ಗೀತಾ ನಯ ಪುಟಗಳನ್ನು ನೋಡಿ. ಈ ಶ್ಲೋಕದಲ್ಲಿ ಜೀವಾತ್ಮರೆಲ್ಲಾ ಬೇರೆಬೇರೆಯಾಗಿ ಅನೇಕರೆಂದೂ ಅವರುಗಳೆಲ್ಲಾ ನಿತ್ಯವಾಗಿರುವವರೆಂದು **"ನಿತ್ಯೋನಿತ್ಯಾನಾಂ ಚೇತನಶ್ಚೇತನಾನಾಂ ಏಕೋ ಬಹೂನಾಂ ವಿದದಾತಿಕಾಮಾನ್"** ಎಂಬ ಶ್ರುತಿಯ ಉಪಪಾದನೆಯು. ನಿತ್ಯರಾದ ಅನೇಕರಾದ ಚೇತನವರ್ಗಕ್ಕೆ, ನಿತ್ಯನಾದ ಒಬ್ಬನಾದ ಚೇತನನಾದ ಈಶ್ವರನು ಅವರುಗಳು ಪ್ರಾರ್ಥಿಸಿದ ಇಷ್ಟಾರ್ಥಗಳನ್ನು ಕೊಡುವನು. ಕೊಡುವನೇ ಬೇರೆ ಪಡೆಯುವರೇ ಬೇರೆಯಾದುದರಿಂದ, ಶ್ರೀಮಚ್ಛಂಕರಾಚಾರ್ಯರವರಿಗೆ ಏಕಾತ್ಮವಾದ ವನ್ನು ಸಾಧಿಸಲು ಅಸಾಧ್ಯವಾದ ಶ್ಲೋಕವು. ಅರ್ಜುನನು ಶರಣಾಗತನಾಗಿ ಸರಿ ಯಾದ ಜ್ಞಾನವನ್ನು ಉಪದೇಶಿಸಿ ಎಂದು ಬೇಡಿದ ಕಾಲದಲ್ಲಿ ಏಕಾತ್ಮವಾದವು ಸತ್ಯವಾಗಿದ್ದ ಪಕ್ಷದಲ್ಲಿ ಭೇದಜ್ಞಾನವನ್ನುಂಟುಮಾಡುವ ಈ ಉಪದೇಶವು ಸರಿಯೇ ಎಂಬ ಆಕ್ಷೇಪವು ನಿರುತ್ತರವಾಗುತ್ತದೆ. ಈ ಏಕಾತ್ಮವಾದ ಭ್ರಮವು ಮುಖ್ಯವಾಗಿ ತೊಲಗಬೇಕಾಗಿರುವದರಿಂದಲೇ **ತತ್ವತ್ರಯವಿವೇಕಂ ಪಿರನ್ದು** - ಎಂಬ ಪ್ರಯೋ ಗವು. ಜೀವನೂ ಪರಮಾತ್ಮನೂ ಒಂದೇ ಎಂಬ ಭ್ರಮೆಯು ಮುಖ್ಯವಾಗಿ ತೊಲ ಗಬೇಕು. ಪ್ರಕೃತಿಗಿಂತ ಎಂದರೆ ದೇಹಕ್ಕಿಂತ ಆತ್ಮಾಬೇರೆ ಎಂಬ ಜ್ಞಾನವೂ, ಜೀವಾತ್ಮರುಗಿಂತ ಪರಮಪುರುಷನು ಬೇರೆ ಎಂಬ ಜ್ಞಾನವೂ ಈ ಪ್ರಥಮೋಪದೇಶ ಶ್ಲೋಕದಲ್ಲಿ ಹೇಳಲ್ಪಟ್ಟಿರುವದರಿಂದ **ತತ್ವತ್ರಯವಿವೇಕಂ ಪಿರನ್ದು** - ಎಂಬ ಪ್ರಯೋಗವು. ಮೂರು ಭ್ರಮೆಗಳೂ ಮುಖ್ಯವಾಗಿ ತೊಲಗಬೇಕು:—(೧) ಪ್ರಕೃ ತ್ಯಾತ್ಮಭ್ರಾಂತಿ. (೨) ಸ್ವತಂತ್ರಾತ್ಮಭ್ರಾಂತಿ (೩) ಜೀವೇಶ್ವೈಕ್ಯಭ್ರಾಂತಿ. ಈ ಮೂರು ತೊಲಗಿ ವಿವೇಕಜ್ಞಾನ ಉಂಟಾಗಬೇಕು ಪ್ರಪನ್ನನಿಗೆ ಎಂದು ಹೇಳಲ್ಪ ಟ್ಟಿತು. **ಭೋಕ್ತಾಭೋಗ್ಯಂ ಪ್ರೇರಿತಾರಂ ಚಮತ್ವಾ** - ಎಂಬ ಶ್ರುತಿಯು ಈ ಮೂರು ತತ್ವವನ್ನೂ ವಿಭಾಗಿಸಿ ಹೇಳಿರುತ್ತದೆ. ಗೀತೆಯೂ ಈ ಮೂರನ್ನೂ ವಿವೇ ಕಿಸಿ ಹೇಳಿರುತ್ತದೆ.—**"ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿಮೇ ಪರಾಂ ಜೀವಭೂತಾಂ** (ಗೀ. ೭. ೫.) ಎಂಬುದರಿಂದ ಪ್ರಕೃತಿ ಮತ್ತು ಜೀವ ತತ್ವಗಳನ್ನು ಹೇಳಿ, **ಪ್ರಕೃತಿಂಪುರುಷಂಚೈವ ವಿದ್ಧ್ಯನಾದಿ ಉಭಾವಪಿ** - ಎಂದು ಪುನಃ ಸ್ಥಿರಪಡಿಸಿ, **ಮಯಿಸರ್ವಮಿದಂ ಪ್ರೋತಂ** - ಎಂದು ಈಶ್ವರನಾದ ತಾನು

## ಸರ್ವಪಾಪೇಭ್ಯಃ ಇತ್ಯಸ್ಯಾರ್ಥಮಾಹ

**ಇಪ್ಪಡಿ ಬಂಧಮೋಕ್ಷಶಕ್ತನಾನ ಮೋಕ್ಷಪ್ರದನ್ನೈಯುಮ್, ಅಶಕ್ತನಾಯನನ್ ಪಕ್ಕಲೀಲೇ ನ್ಯಸ್ತಭರನಾನ ಮುಮುಕ್ಷುವೈಯುಮ್ ಶೊಲ್ಲಿ, ಮೇಲ್ "ಸರ್ವಪಾಪೇಭ್ಯಃ" ಎನ್ರು ಬಂಧಕಙ್ಗಳೈ ಚೊಲ್ಲುಗಿರದು. ಪಾಪ**ಸ್ವನಿಯಾಮಕನೆಂದು ಸ್ಥಾಪಿಸಿದುತ್ತಾರೆ. ಈ ಜೀವಾತ್ಮರಿಗಿಂತ ತಾನು ಬೇರೆ ಎಂದು **ಉತ್ತಮಃ ಪುರುಷಸ್ತ್ವನ್ಯಃ** ಎಂಬಲ್ಲೂ ಹೇಳಿಕೊಂಡಿರುತ್ತಾರೆ.

**ಅಹಂತ್ವಾ** ಎಂದು ಒಟ್ಟಿಗೆ ಹೇಳಿರುವದು ಜೀವಾತ್ಮರಿಗೂ ತನಗೂ ಇರುವ ಭೇದಗಳನ್ನೂ ಸಂಬಂಧಗಳನ್ನೂ ತಿಳಿಸುವದಕ್ಕಾಗಿ ಎಂದು ತಿಳಿಯತಕ್ಕದ್ದು.

**ಪಿತಾಚರಕ್ಷಕಶ್ಶೇಷೀಭರ್ತಾಜ್ಞೇಯೋ ರಮಾಪತಿಃ**
**ಸ್ವಾಮ್ಯಾಧಾರೋ ಮಮಾತ್ಮಾಚ ಭೋಕ್ತಾಚಾದ್ಯ ಮನೂದಿತಃ**

(೧) ಪಿತಾ ಪುತ್ರ (೨) ರಕ್ಷ್ಯ ರಕ್ಷಕ (೩) ಶೇಷೀ ಶೇಷ (೪) ಭರ್ತಾ ಭಾರ್ಯಾ (೫) ಜ್ಞೇಯ ಜ್ಞಾತಾ (೬) ಸ್ವಾಮಿ ಸ್ವಂ (೭) (೭) ಆಧಾರಧೇಯ (೮) ಆತ್ಮಾಶರೀರ (೯) ಭೋಕ್ತಾ ಭೋಗ್ಯ ಹೀಗೆ ೯ ವಿಧ ಸಂಬಂಧಗಳನ್ನು ಸೂಚಿಸುತ್ತವೆ. **ಅಹಂತ್ವಾ** - ಇಬ್ಬರು ಚಕ್ರವರ್ತಿಗಳೇ ಆತನು ವಿಶ್ವಚಕ್ರವರ್ತಿ, ಜೀವನು ಅಪರಾಧ ಚಕ್ರವರ್ತಿಯು, ಆತನು ಧರ್ಮಕ್ಕೆ ನಿಧಿಯು. ಈತನು ಅಧರ್ಮಕ್ಕೆ ನಿಧಿಯು. ಆತನು ಕಲ್ಯಾಣಗುಣಾಕರನು, ಈತನು ಹೇಯಗುಣ ನಿಧಿಯು. ಆತನು ಅಕರ್ಮವಶ್ಯನು ಈತನು ಕರ್ಮವಶ್ಯನು. ಆತನು ವಿಭುವು ಈತನು ಅಣುವು. ಆತನು ಸರ್ವಶಕ್ತನು ಈತನು ನಿತಿರಾಂ ಅಶಕ್ತನು. ಇತ್ಯಾದಿ ಭಾವಗಳು **ಅಹಂತ್ವಾ** - ಎಂದು ಒಟ್ಟಿಗೆ ಹೇಳಿರುವದರಿಂದ ತೋರಿಬರುತ್ತವೆ.

**ಇಪ್ಪಡಿ** - ಮೇಲೆ ಉಪಪಾದಿಸಿದ ರೀತಿಯಲ್ಲಿ, **ಬಂಧಮೋಕ್ಷಶಕ್ತನಾನ** - ತನ್ನ ಕರ್ಮಗಳಿಂದ ಲೀಲಾವಿಭೂತಿಯಲ್ಲಿ ಬಂಧನದಲ್ಲಿಡುವವಕ್ಕೂ ಅಥವಾ ನಿತ್ಯ ವಿಭೂತಿಯಲ್ಲಿಡುವದಕ್ಕೂ ಶಕ್ತನಾಗಿ, **ಮೋಕ್ಷಪ್ರದನ್ನೈಯುಮ್** - ನಿರತಿಶಯ ಸುಖರೂಪ ಮೋಕ್ಷವನ್ನು ಕೊಡುವವನಾದ ಶ್ರಿಯಃ ಪತಿಯನ್ನು, **ಅಶಕ್ತನಾಯ್ ಅವನ್ ಪಕ್ಕಲೀಲೇ ನ್ಯಸ್ತಭರನಾನ** - ತನ್ನನ್ನು ರಕ್ಷಿಸಿಕೊಳ್ಳಲು ತನಗೆ ಶಕ್ತಿಯಿಲ್ಲದೆ, ಆ ಸರ್ವೇಶ್ವರನನ್ನು ಆಶ್ರಯಿಸಿ, ಆತನ ವಸ್ತುವಾದ ತನ್ನ ಆತ್ಮಾವನ್ನು ಸಮರ್ಪಿಸಿ ಸರ್ವಭರವನ್ನೂ ಆತನಲ್ಲಿ ಒಪ್ಪಿಸಿರುವ, **ಮುಮುಕ್ಷುವೈಯುಮ್** - ಮೋಕ್ಷಾರ್ಥಿಯನ್ನೂ, **ಶೊಲ್ಲಿ**- ಒಟ್ಟಿಗೆ ಹೇಳಿ, **ಮೇಲ್** - ಅನಂತರ **ಸರ್ವಪಾಪೇಭ್ಯಃ ಎನ್ರು** - ಎಂಬುದಾಗಿ, **ಬಂಧಕಙ್ಗಳೈ** - ಸಂಸಾರದಲ್ಲೆ ಬಂಧಿಸಿಡುವ ಪಾಶಗಳನ್ನು, **ಶೊಲ್ಲುಗಿರದು** - ಹೇಳುತ್ತದೆ. **ಪಾಪಮಾವದು ?** - ಪಾಪವೆಂಬುದು

**ಪೂವದು? ಶಾಸ್ತ್ರವೇದ್ಯಮಾನ ಅನರ್ಥಸಾಧನಮ್. ಅನರ್ಥಮಾವದು? ಪ್ರತಿಕೂಲಪ್ರಾಪ್ತಿಯುಮ್, ಅನುಕೂಲ ನಿವೃತ್ತಿಯುಮ್. ಇಙ್ಗ "ಪಾಪ ಶಬ್ದಮ್ ಮುಮುಕ್ಷುವೈಪ್ಪತ್ತ ಅನಿಷ್ಟಫಲಙ್ಗಳಾನ ಸಾಂಸಾರಿಕ ಪುಣ್ಯಙ್ಗಳೈಯುಮ್ ಶೊಲ್ಲುಗಿರದು.**

---

ಯಾವುದು? **ಶಾಸ್ತ್ರವೇದ್ಯಮಾನ ಅನರ್ಥಸಾಧನಮ್** - ಶಾಸ್ತ್ರಗಳಿಂದ ತಿಳಿಯಬಹುದಾದ ಅನರ್ಥವನ್ನು ಅಶಾಶ್ವತಫಲವನ್ನೂ ಸಾಧಿಸಿಕೊಡುವಂತಾದ್ದು. **ಅನರ್ಥಮಾವದು** - ಅನರ್ಥವು ಯಾವುದು? **ಪ್ರತಿಕೂಲಪ್ರಾಪ್ತಿಯುಮ್** - ಪ್ರತಿಕೂಲಉಂಟಾಗೋಣವು ಮತ್ತು **ಅನುಕೂಲನಿವೃತ್ತಿಯುಮ್** - ಅನುಕೂಲವಿಲ್ಲದೆ ಹೋಗೋಣವು. ಇಲ್ಲಿ **ಶಾಸ್ತ್ರವೇದ್ಯಮಾನ ಅನರ್ಥಸಾಧನಮ್** - ಎಂಬ ವಿಶೇಷಣವೇತಕ್ಕೆ? ಸುಳ್ಳು ಹೇಳಬಾರದು. ಪರದ್ರವ್ಯವನ್ನು ಅಪಹರಿಸಕೂಡದು ಎಂಬುದು ಸಾಮಾನ್ಯ ವಿಷಯವು ಎಲ್ಲರಿಗೂ ತಿಳಿದ ವಿಷಯವೇ. ಹೀಗಿರುವಾಗ **ಶಾಸ್ತ್ರವೇದ್ಯಮಾನ** - ಎಂಬುದು ಏತಕ್ಕೆ ಎಂದರೆ ದಿಬ್ಬಣದವರು ಯಾವ ರಸ್ತೆಯಲ್ಲಿ ಹೋದರೆಂದು ಕೇಳಿದರೆ ನಿಜವನ್ನು ಹೇಳಿದರೆ ಅನರ್ಥ ಹೇತುವಾಗಿ ಪರಿಣಮಿಸುವದರಿಂದ ಸುಳ್ಳನ್ನೇ ಹೇಳಬೇಕಾಗುತ್ತದೆ. ಒಬ್ಬನು ಹೋಗುತ್ತಿರುವಾಗ ದುಡ್ಡಿನ ಚೀಲವನ್ನು ಬೀಳಿಸಿ ಹೋದರೆ ತೆಗೆದುಕೊಳ್ಳುವದು ನ್ಯಾಯವಲ್ಲವು. ಇವುಗಳನ್ನೆಲ್ಲಾ ಶಾಸ್ತ್ರವು ತಿಳಿಸುವದರಿಂದ **ಶಾಸ್ತ್ರವೇದ್ಯಮಾನ** - ಎಂಬ ವಿಶೇಷಣವು. **ಪ್ರತಿಕೂಲಪ್ರಾಪ್ತಿಯುಮ್** ಎಂಬುದು ಹೇಗೆ ಪಾಪವಲ್ಲಿ ಸೇರಿತು? ಎಂದರೆ ಧನ, ಐಹಿಕ ಸುಖಾದಿಗಳೂ, ಸ್ವರ್ಗಾದಿಭೋಗಗಳೂ ಉಂಟಾಗುವದು ಪ್ರತಿಕೂಲವು, ಇವು ಸುಕೃತದಿಂದ ಲಭಿಸುವುವು; ಆದುದರಿಂದ ಪುಣ್ಯವು ಬಂಧಕವು. ಪುಣ್ಯವು ಚಿನ್ನದ ಬೇಡಿಯು, ಪಾಪವು ಕಬ್ಬಿಣದ ಬೇಡಿಯು. ಆದುದರಿಂದ ಮುಮುಕ್ಷುವು ಪುಣ್ಯಪಾಪಗಳೆರಡನ್ನೂ ಕಳೆದುಕೊಳ್ಳಬೇಕೆಂದು "**ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ**" ಮತ್ತು "**ತತ್ಸುಕೃತದುಷ್ಕೃತೇಧೂನುತೇ**" ಎಂಬಲ್ಲಿಯೂ ಶ್ರುತಿಯು ಹೇಳುತ್ತದೆ. ಇದನ್ನೇ ಮುಂದೆ ಉಪಪಾದಿಸುತ್ತಾರೆ. **ಅನುಕೂಲನಿವೃತ್ತಿಯುಮ್** - ಮೋಕ್ಷ ಶಾಸ್ತ್ರಜ್ಞಾನ, ಅನುಷ್ಠಾನ ವಿಧಾನ ಇವುಗಳನ್ನು ಉಪದೇಶಿಸುವರ ಸಾನ್ನಿಧ್ಯವು, ಅನುಕೂಲವು. ಅಂತಹ ಅನುಕೂಲವಿಲ್ಲದ ಶಬರ ಇತರ ಶೂದ್ರಾದಿಜನ್ಮದಲ್ಲಿ ಅನುಕೂಲ ನಿವೃತ್ತಿಯು. ಅಥವಾ ಜ್ಞಾನಸರಿಯಾಗಿಲ್ಲದಿರೋಣವು. ಕಣ್ಣು ಕಿವಿ ಮೊದಲಾದವುಗಳಲ್ಲಿ ನ್ಯೂನತೆ ಇವೆಲ್ಲಾ ಅನುಕೂಲನಿವೃತ್ತಿಗೆ ನಿದರ್ಶನಗಳು. ಆದುದರಿಂದ **ಇಙ್ಗ** - ಈ ಪಾಪಶಬ್ದವಿವೇಚನೆಯಲ್ಲಿ, **ಪಾಪಶಬ್ದಮ್** - ಪಾಪವೆಂಬಶಬ್ದವು, **ಮುಮುಕ್ಷುವೈಪ್ಪತ್ತ** - ಮೋಕ್ಷಾರ್ಥಿಯನ್ನು ಕುರಿತ, **ಅನಿಷ್ಟಫಲಙ್ಗಳಾನ** -

**ಇಙ್ಙ ಪಾಪಶಬ್ದಮ್ ಮುಮುಕ್ಷುವ್ನೈಪ್ಪತ್ತು ಅನಿಷ್ಟಫಲಙ್ಙಳಾನ ಸಾಂಸಾರಿಕ ಪುಣ್ಯಙ್ಙಳೈಯುಮ್ ಶೊಲ್ಲುಗಿರದು.**

**(೧) "ಏತೇವೈ ನಿರಯಾಸ್ತತ ಸ್ಥಾನಸ್ಯ ಪರಮಾತ್ಮನಃ" ಎಙ್ಗೈಯಾಲೇ, ಸ್ವರ್ಗಾದಿಗಳುಮ್ ಮುಮುಕ್ಷುವುಕ್ಕು ನರಕಮಾಗೈಯಾಲ್,**

---

ಇಷ್ಟವಿಲ್ಲದ ಫಲಗಳನ್ನು ಎಂದರೆ ಕೆಟ್ಟಫಲಗಳನ್ನು ಕೊಡುವ, **ಸಾಂಸಾರಿಕ ಪುಣ್ಯಙ್ಙಳೈಯುಮ್** - ಸಂಸಾರದಲ್ಲಿ ಮಾಡುವ ಪುಣ್ಯಕರ್ಮಗಳನ್ನೂ ಕೂಡ, **ಶೊಲ್ಲುಗಿರದು** - ಹೇಳುತ್ತದೆ. ಏಕೆಂದರೆ ಇವುಗಳೂ ಸಂಸಾರದಲ್ಲಿ ಬಂಧಿಸುತ್ತವೆ. ಮಕ್ಕಳಿಗಾಗಿಯೂ, ದೇಶಾನುಕೂಲಕ್ಕಾಗಿ ದುಡಿಯುವದೂ ದಾನ ಧರ್ಮಗಳನ್ನು ಮಾಡುವದೂ, ಇದರಿಂದ ತನಗೆ ಖ್ಯಾತಿ ಲಾಭವೂ ಪೂಜೆಗಳು ಉಂಟಾಗಲೆಂದು ಮಾಡುವದು ಬಂಧಕಗಳೇ. ಹಾಗಾದರೆ ಇಂತಹ ಪ್ರವೃತ್ತಿಗಳೆಲ್ಲಾ ನಿಷಿದ್ಧವೇ ? ತನ್ನ ದೇಹಯಾತ್ರೆಗಳಿಗಾಗಿ ದುಡಿಯಬೇಡವೇ ? ಎಂದರೆ ಅಗತ್ಯವಾಗಿ ಇವೆಲ್ಲಾ ಮಾಡತಕ್ಕದ್ದೇ ; ಆದರೆ ಅವುಗಳಲ್ಲಿ ಲಿಪ್ತನಾಗದೇ ಅವುಗಳನ್ನು ಆಚರಿಸಿ ಕೃಷ್ಣಾರ್ಪಣಮಸ್ತು ಎಂದು ಹೇಳತಕ್ಕದ್ದು. ಗೀತೆಯಲ್ಲಿ ಇದು "**ಮಯಿ ಸರ್ವಾಣಿ ಕರ್ಮಾಣಿ ಸನ್ಯಾಸ್ಯಾಧ್ಯಾತ್ಮಚೇತಸಾ । ನಿರ್ಮಮೋ ನಿರಹಂಕಾರ** ನಾಗಿ ಇರತಕ್ಕದ್ದೆಂದೂ, ಹಾಗಾದರೆ "**ನಕರ್ಮಲಿಪ್ಯತೇನರೇ**" ಕರ್ಮವು ಲೇಪಿಸುವದಿಲ್ಲವೆಂದು ಹೇಳಿರುತ್ತದೆ. **ಫಲಾಭಿಸಂಧಿಯಿಲ್ಲದೆ ಕರ್ಮಮಾಡಿದರೆ ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ**" ಎಂಬಲ್ಲಿ ಹೇಳಿರುವಹಾಗೆ ಕರ್ಮಮಾಡಿದರೆ "**ಧರ್ಮೇಣಪಾಪಮಪನುದತಿ**" ಎಂಬಲ್ಲಿ ಹೇಳಿರುವಹಾಗೆ ಪಾಪವು ಕಳೆಯುತ್ತದೆ. **ಪದ್ಮಪತ್ರದ ಮೇಲೆ ನೀರು ಬಿದ್ದರೆ** ಹೇಗೆ ಅಂಟುವದಿಲ್ಲವೋ ಹಾಗೆ ಅಂಟುವದಿಲ್ಲವು ಫಲವನ್ನು ಕೋರಿದರೆ ಅಶಾಶ್ವತಗಳಾದ ಲೋಕದ ಭೋಗಗಳು ಉಂಟಾದರೂ ಅವೆಲ್ಲಾ ಮೋಕ್ಷಾನಂದಕ್ಕೆ ಹೋಲಿಸಿದರೆ, ನರಕಸಮಾನಗಳೇ ಎಂದು ಹೇಳುತ್ತಾರೆ—"**ಏತೇವೈ** - ಇವುಗಳೆಲ್ಲಾ' ಇವು ಯಾವುವು ಎಂದರೆ ಹಿಂದೆ "**ಚತುರ್ಣಾಂ ಲೋಕಪಾಲಾನಾಂ ಶುಕ್ರಸ್ಯಾಥ ಬೃಹಸ್ಪತೇಃ । ಮರುತಾಂ ವಿಶ್ವದೇವಾನಾಂ ಸಾಧ್ಯಾಧಾ ಮಾಶ್ವಿನೇರಪಿ । ರುದ್ರಾದಿತ್ಯವಸೂನಾಂ ಚತಥಾನ್ಯೇಷಾಂ ದಿವೌಕಸಾಂ**" ಎಂದಿರುವದರಿಂದ ಈ ಎಲ್ಲಾ ದೇವತೆಗಳ ಲೋಕಗಗಳೂ, **ಸ್ಥಾನಸ್ಯ ಪರಮಾತ್ಮನಃ** - ಪರಮಾತ್ಮನ ಲೋಕವಾದ ದಿವ್ಯ ವೈಕುಂಠಕ್ಕೆ ಹೋಲಿಸಿದರೆ, **ಹೇತಾತ** - ಓ ಯುಧಿಷ್ಠಿರನೇ **ನಿರಯಾಃ** - ನರಕಕ್ಕೆ ಸಮಾನಗಳು ; **ಎಙ್ಗೈಯಾಲೇ** - ಎಂದು ಪ್ರಾಜ್ಞರಾದ ಭೀಷ್ಮರು ಹೇಳಿರುವದರಿಂದ **ಸ್ವರ್ಗಾದಿಗಳುಮ್** - ಇಂದ್ರಮೊದಲಾದ ದಿಕ್ಪಾಲಕರ ಲೋಕಗಳೂ,

---

(೧) ಭಾರತ ಶಾನ್ತಿ ೧೯೬-೬

**ಇಙ್ಙು ಸ್ವರ್ಗಹೇತುವ್ವೋಡು ನರಕಹೇತುವ್ವೋಡು ವಾಶಿಇಲ್ಲೈ. ಆಗೈಯಾಲಿರೇ ಮುಮುಕ್ಷುವುಕ್ಕು ಪಾಪಙ್ಗಳೈ ವಿಡಚ್ಚೊಲ್ಲುಗಿರಪ್ಪೋಲೇ (೨) ತ್ರೈವ**

**ಮುಮುಕ್ಷುವುಕ್ಕು** - ಮೋಕ್ಷಾರ್ಥಿಗೆ, **ನರಕಮಾಗೈಯಾಲೇ** - ನರಕ ಸಮಾನವಾದುದರಿಂದ, ಇಙ್ಙು - ಈ ಸಂದರ್ಭದಲ್ಲಿ, **ಸ್ವರ್ಗಹೇತುವ್ವೋಡು** - ಸ್ವರ್ಗಾದಿಗಳಿಗೆ ಕಾರಣಭೂತವಾದ ಪುಣ್ಯಕ್ಕೂ, **ನರಕಹೇತುವ್ವೋಡು** - ನರಕಕ್ಕೆ ಕಾರಣಭೂತವಾದ ಪಾಪಕ್ಕೂ, **ವಾಶಿಇಲ್ಲೈ** - ವ್ಯತ್ಯಾಸವೇನೂ ಇಲ್ಲವು. "**ನನಾಕಪೃಷ್ಟಂ ನಚಸಾರ್ವಭೌಮಂ ನಸಪಾರಮೇಷ್ಟ್ಯಮ್ ನರಸಾಧಿಪತ್ಯಮ್ | ನಯೋಗಸಿದ್ಧೀರಪುನರ್ಭವಂ ವಾಂಛನ್ತಿ ಯತ್ಪಾದರಜಃ ಪ್ರಪನ್ನಾಃ**" ಇಂದ್ರಲೋಕಾಧಿಪತ್ಯವನ್ನೂ, ಇಹಲೋಕಸಾರ್ವಭೌಮನನ್ನೂ, ಚತುರ್ಮುಖ ಬ್ರಹ್ಮನ ಸತ್ಯಲೋಕವನ್ನೂ, ಪಾತಾಳಲೋಕಾಧಿಪತ್ಯವನ್ನೂ ಕುಬೇರಲೋಕಾಧಿಪತ್ಯವನ್ನೂ ಕೈವಲ್ಯವನ್ನೂ ಭರನ್ಯಾಸನಿಷ್ಠರಾದ ಪ್ರಾಜ್ಞರು ಅಪೇಕ್ಷಿಸುವದಿಲ್ಲವು.

**ಆಗೈಯಾಲಿರೇ** - ಆದುದರಿಂದಲ್ಲವೇ, **ಮುಮುಕ್ಷುವುಕ್ಕು** - ಮೋಕ್ಷಾರ್ಥಿಗೆ **ಪಾಪಙ್ಗಳೈವಿಡಚ್ಚೊಲ್ಲುಗಿರಾಪ್ಪೋಲೇ** - ಪಾಪಗಳನ್ನು ಮಾಡಬಾರದೆಂದು ಹೇಳಿದಹಾಗೆ "**ತ್ರೈವರ್ಗಿಕಾಂಸ್ತ್ಯಜೇದ್ಧರ್ಮಾನ್** - ಧರ್ಮ ಅರ್ಥಕಾಮವುಗಳಾದ ಧರ್ಮಗಳನ್ನು ಬಿಡತಕ್ಕದ್ದೆಂದು, **ವಿಧಿಕ್ಕಿರದು** - ಶ್ರೀವಿಷ್ಣುಪುರಾಣದಲ್ಲಿ ವಿಧಿಸಿರುತ್ತದೆ.

ತಾವು ಉಪಪಾದಿಸಿದ ಅರ್ಥದಲ್ಲಿ ನಮ್ಮಾಳ್ವಾರ್ ದಿವ್ಯಸೂಕ್ತಿಯನ್ನು ಪ್ರಮಾಣವಾಗಿ ತೋರಿಸುತ್ತಾರೆ-ಈ ಪೂರಾಪಾಶುರವು ಯಾವುದೆಂದರೆ—

"**ಶಾರ್ನ್ದ ಇರುವಲ್ವಿನೈಕಳು ಶ್ಶರಿತ್ತು ಮಾಯ ಪ್ಪತ್ತರುತ್ತು**
**ತೀರ್ನ್ದು ತನ್ಪಾಲ್ ಮನಮ್ ವೈಕ್ಕತ್ತಿರುತ್ತು ವೀಡುತ್ತಿರುತ್ತುವಾರ್**
**ಆರ್ನ್ದ ಜ್ಞಾನ ಚ್ಚುಡರಾಗಿಯ ಕಲಙ್ಗಳ್ ಮೇಲಳವಿರುನ್ದು**
**ನೇರ್ನ್ದ ವುರುವಾಯುರುವಾಕು ಮಿನತ್ತಿನುಯಿರಾ ನೆಡುಮಾಲೇ**"

ಅರ್ಥವು. **ಶಾರ್ನ್ದವಿರುವಲ್ವಿನೈಗಳುಮ್** - ನನ್ನೊಂದಿಗೆ ಬಿಡದೇ ಸೇರಿಕೊಂಡಿರುವ, ಪುಣ್ಯಪಾಪವೆಂಬ ಎರಡು ವಿಧವಾದ ಬಲಿಷ್ಠಗಳಾದ ಪಾಪಗಳನ್ನೂ, **ಶರಿತ್ತು** - ಹೋಗಲಾಡಿಸಿ, **ಮಾಯಂಪತ್ತು ಅರುತ್ತು** - ಅಜ್ಞಾನಾಕಾರವಾದ ವಿಷಯ ಸಂಗವನ್ನು ಛೇದಿಸಿ, **ತೀರ್ನ್ದು** - ವಿರೋಧಿವರ್ಗವನ್ನು ತೀರಿಸಿಕೊಂಡು ಕೃತಕೃತ್ಯನಾಗಿ, **ತನ್ಪಾಲ್** - ತನ್ನಲ್ಲಿ, **ಮನಮ್ವೈಕ್ಕತ್ತಿರುತ್ತು** - ಮನಸ್ಸು ಬೇರೇ ಕಡೆ ಹೋಗದೆ ತನ್ನಲ್ಲೇ ಇಡುವಹಾಗೆ ಮಾಡಿ, **ವೀಡುತ್ತಿರುತ್ತುವಾರ್** - ಪರಮಪದವು ಅತಿಶಯವನ್ನು ಹೊಂದುವಹಾಗೆ ಮಾಡುವನು. ಯಾರೆಂದರೆ **ಆರ್ನ್ದಜ್ಞಾನಶುಡರಾಗಿಯೇ** - ಪರಿಪೂರ್ಣವಾದ ಜ್ಞಾನಪ್ರಕಾಶ

**ಗ್ರ್ಕಾಂಸ್ತ್ಯಜೇದ್ಧರ್ಮ್ಮ" ಎನ್ನುವಿಧಿಕ್ಕಿರದು (೧) "ಇರುವಲ್ ವಿನ್ನೈಗಳುನ್ ಶರಿತ್ತು" ಎಙ್ಗರಪಡಿಯೇ ಸುಕೃತದುಷ್ಕೃತಙ್ಗಳಿರಣ್ಡುನ್ ಮುಮುಕ್ಷುವುಕ್ಕು ನಿರಾಕರಣೀಯಙ್ಗಳಾಕ ಎರೆಶ್ರುತಿಸ್ಮೃತಿಗಳ್ ಶೊಲ್ಲುಗಿರದು. ಇಪ್ಪಡಿ ಪುಣ್ಯಪಾಪರೂಪಮಾನ ಬಂಧಕಾರಣತ್ತೈ "ಪಾಪ" ಶಬ್ದತ್ತಾಲೇ ಶೊಲ್ಲಿ, ಬಹುವಚನತ್ತಾಲೇ ಪುಣ್ಯಪಾಪಙ್ಗಳಿನುಡೈಯ ವಾನಂತ್ಯತ್ತೈ ವಿವಕ್ಷಿಕ್ಕಿರದು.**

ವನ್ನು ಹೊಂದಿ, ನಾವು ಮಾಡುವ ಪ್ರವೃತ್ತಿಗಳನ್ನೆಲ್ಲಾ ತಿಳಿಯುವಹಾಗೆ ಸರ್ವಜ್ಞನಾದ, **ಅಗಲುವನ್ ಕೀೞ್ ಮೇಲ್ ವಿರನ್ದು** - ಸುತ್ತಲೂ, ಕೆಳಗೆ ಮೇಲೆ ಹೀಗೆ ೧೦ ದಿಕ್ಕುಗಳಲ್ಲೂ ವ್ಯಾಪಿಸಿದ್ದು, **ಅಳವಿರನ್ದು** - ಅಪರಿಚ್ಛಿನ್ನಸ್ವರೂಪನಾಗಿ, **ನೇರನ್ದ** - ಅತಿಸೂಕ್ಷ್ಮವಾದ, **ಪುರುವಾಯ್ ಅರವಾಗುಂ** - ಪ್ರಕೃತಿಪುರುಷರಾಗಿರುವ, **ಇವತ್ತಿನ್ ಉಯಿರಾಮ್** - ಇವುಗಳಿಗೆ ಸತ್ತಾದಾಯಕನಾಗಿ ಅಂತರಾತ್ಮವಾಗಿರುವ, **ನೆಡುಮಾಲ್** - ನನ್ನಲ್ಲಿ ನಿರತಿಶಯ ವಾತ್ಸಲ್ಯವಿಟ್ಟಿರುವ ಮಹಾನುಭಾವನು. ಪಾಪಗಳಲ್ಲೇ ಪುಣ್ಯವೂ ಸೇರಿ ಪಾಪಗಳುಎರಡು ವಿಧವೆಂದು **ಶಾರ್ನ್ದ ವಿರುವಲ್ವಿನೈ** ಎಂದಿರುವ ಈ ನಮ್ಮಾಳ್ವಾರ್ ಪಾಶುರವನ್ನು ಉದಾಹರಿಸಿದರು.

**ಎಙ್ಗರಪಡಿಯೇ** - ಎಂದು ಈ ಮೇಲಿನ ಪಾಶುರದಲ್ಲಿ ಹೇಳಿರುವಹಾಗೆ, **ಸುಕೃತದುಷ್ಕೃತಗಳೆರಡೂ ಮುಮುಕ್ಷುವುಕ್ಕು** - ಮೋಕ್ಷಾರ್ಥಿಗೆ, **ನಿರಾಕರಣೀಯಙ್ಗಳಾಗವಿರೆ** - ನಿರಾಕರಿಸಲು ಯೋಗ್ಯವಾದವುಗಳೆಂದು, **ಸ್ರುತಿಸ್ಮೃತಿಗಳ್ ಶೊಲ್ಲುಗಿರದು** - ಶ್ರುತಿಸ್ಮೃತಿಗಳು ಹೇಳುವುವು. ಹಿಂದೆಯೇ ಶ್ರುತಿಸ್ಮೃತಿ ಪ್ರಮಾಣಗಳು ಉದಾಹರಿಸಲ್ಪಟ್ಟಿವೆ. ಸ್ವಾಮಿ ನಿಗಮಾಂತಮಹಾದೇಶಿಕರವರು **ಶ್ರುತಿಪ್ರಮಾಣಗಳನ್ನು** ಈ ಗ್ರಂಥದಲ್ಲಿ ಉದಾಹರಿಸಿಲ್ಲವು. ಏಕೆಂದರೆ ಈ ಗ್ರಂಥವು ಸಾಮಾನ್ಯವಾಗಿ ಸ್ತ್ರೀಮೊದಲಾದವರಿಗಾಗಿ ಬರೆದಿರುವದರಿಂದ ಶ್ರುತಿ ಅರ್ಥವನ್ನು ಉಪಪಾದಿಸುತ್ತಾರೇ ವಿನಾ ಸಾಕ್ಷಾತ್ತಾಗಿ ಉದಾಹರಿಸಿಲ್ಲವು.

**ಇಪ್ಪಡಿ** - ಹೀಗೆ ಎಂದರೆ ಈಗ ಉಪಪಾದಿಸಿದ ರೀತಿಯಲ್ಲಿ, **ಪುಣ್ಯಪಾಪ ರೂಪ** ವಾದ, **ಬಂಧಕಾರಣತ್ತೈ** . ಸಂಸಾರ ಬಂಧಕ್ಕೆ ಹೇತುವಾದ, **ಪಾಪ ಶಬ್ದ** ದಿಂದ, **ಶೊಲ್ಲಿ** - ಹೇಳಿ, **ಬಹುವಚನತ್ತಾಲೇ** - **"ಪಾಪೇಭ್ಯಃ"** ಎಂದು ಬಹುವಚನದಿಂದ **ಆನಂತ್ಯತ್ತೈ** - ಗಣನೆಮಾಡಲು ಸಾಧ್ಯವಿಲ್ಲದ ಭಾವವನ್ನು **ವಿವಕ್ಷಿಕ್ಕಿರದು** - ತಿಳಿಸುತ್ತದೆ. ಈ ಮುಮುಕ್ಷುವಿಗೆ ಸೃಷ್ಟಿಮೊದಲುಗೊಂಡು ಇದುವರಿವಿಗೂ ಎಷ್ಟು ಜನ್ಮಗಳಾದವೋ ತಿಳಿಯದು ಅವುಗಳಲ್ಲಿ ಈತನು ಬಂಧಕ ರೂಪಪ್ರವೃತ್ತಿಗಳಾದ ಸುಕೃತದುಷ್ಕೃತಗಳು ನಡೆದವೋ ಅವುಗಳನ್ನು ಲೆಕ್ಕ ಮಾ

(೧) ತಿರು. ೧. ೭. ೧೦

## ಪಾಪೇಭ್ಯ ಇತಿ ಬಹುವಚನೇನ "ಸರ್ವ" ಶಬ್ದಸ್ಯ ಕಿಂಪ್ರಯೋಜನಮ್ ?

**ಇನಿ ಸರ್ವಶಬ್ದತ್ತಾಲೇ ವಿಶೇಷತ್ತಿಕ್ಕಿರದೆನ್ನೆನ್ನಿಲ್ ? ಪ್ರಾಪ್ತಿ ವಿರೋಧಿಯಾನ ಕರ್ಮತ್ತುಕ್ಕು ಕಾರಣಮಾಯ್, ಕಾರಮುಮಾಯ್, ವರುಗಿರ ಅವಿದ್ಯೆಯುಮ್, ವಿಪರೀತವಾಸನೈಯುಮ್ ವಿಪರೀತ ರುಚಿಯುಮ್, ಸ್ಥೂಲಸೂಕ್ಷ್ಮರೂಪ ಪ್ರಕೃತಿಸಂಬಂಧತ್ತೈಯುಮ್, ಪಾಪರಾಶಿಯಿಲೇ ಶೇರ್‍ಕ್ಕೈಕ್ಕಾಗ.**

---

ಡಲು ಸಾಧ್ಯವಿಲ್ಲವು. ಆದುದರಿಂದ **ಪಾಪೇಭ್ಯಃ** ಎಂಬ ಬಹುವಚನದಿಂದ ಇವುಗಳ ಆನಂತ್ಯವು ಸೂಚಿತವೆಂದು ಹೇಳಿದರು.

### ಪಾಪೇಭ್ಯಃ ಎಂದು ಬಹುವಚನವಿರುವಾಗ ಇನ್ನು ಸರ್ವ ವಿಂಬ ಪದ ಪ್ರಯೋಜನವೇನು ?

ಪಾಪ್ಯೇಭ್ಯಃ ಎಂಬ ಬಹುವಚನದಿಂದಲೇ ಸರ್ವಪುಣ್ಯಾಪಾಪಗಳ ನಿವೃತ್ತಿಯುಂಟಾಗುತ್ತಪೆ ಎಂದರ್ಥವಾದರೆ **ಇನಿ** – ಇನ್ನು **ಸರ್ವಶಬ್ದತ್ತಾಲೇ** – ಸರ್ವಶಬ್ದದಿಂದ **ವಿಶೇಷಿಕ್ಕಿರದು ಎನ್ನಿನ್ನಿಲ್ ?** – ಆ ಪಾಪೇಭ್ಯಃ ಎಂಬುದಕ್ಕೆ ಸರ್ವ ಎಂಬ ವಿಶೇಷಣದಿಂದ ತೋರುವ ಅರ್ಥವು ಯಾವುದು ಎಂದರೆ ? ಅದಕ್ಕೆ ಸಂಬಂಧಪಟ್ಟವೆಲ್ಲವು ಎಂಬರ್ಥವಲ್ಲಿ ಸರ್ವಶಬ್ದಪ್ರಯೋಜನವೆನ್ನುತ್ತಾರೆ. ಪಾಪ ಪುಣ್ಯ ಸಂಬಂಧವಾದವೆಲ್ಲಾ ತೊಲಗಿದ ಹೊರ್ತು ಮೋಕ್ಷವಿಲ್ಲವು. ಆದುದರಿಂದ ತತ್ಸಂಬಂಧವರ್ಗವೆಲ್ಲಾ ತೊಲಗುತ್ತವೆಂಬ ಅರ್ಥದಲ್ಲಿ ಈ ಸರ್ವಶಬ್ದದ ಪ್ರಯೋಜನವೆನ್ನುತ್ತಾರೆ. **ಪ್ರಾಪ್ತಿವಿರೋಧಿಯಾನ** – ದಿವ್ಯವೈಕುಂಠಪ್ರಾಪ್ತಿಗೆ ವಿರೋಧವಾದ, **ಕರ್ಮತ್ತುಕ್ಕು** – ಪುಣ್ಯಾಪಾಪರೂಪ ಕರ್ಮಗಳಿಗೆ ( ಜಾತ್ಯೇಕವಾಚಕ) **ಕಾರಣಮಾಯ್** – ಕಾರಣವಾಗಿಯೂ, **ಕಾರ್ಯಮುಮಾಯ್** – ಕಾರ್ಯವಾಗಿಯೂ, **ವರುಗಿರ** – ಬರುವ, **ಅವಿದ್ಯೆ** ಅಜ್ಞಾನ, ಜ್ಞಾನತಿರೋಹಿತತ್ವ, ಈ ಜ್ಞಾನವು ಈತನು ಮಾಡುವ ಪುಣ್ಯಾಪಾಪರೂಪ ಪ್ರವೃತ್ತಿಗೆ ಕಾರಣವಾಗುತ್ತದೆ. ಈ ಜ್ಞಾನದಿಂದ ಈ ಪಾಪಗಳು ಕಾರ್ಯವಾಗಿ ಉಂಟಾಗುತ್ತದೆ. ಆದುದರಿಂದಲೇ **ಕರ್ಮಾವಿದ್ಯಾದಿಚಕ್ರೇ** ಎಂದು ಪ್ರಯೋಗಿಸಿರುತ್ತಾರೆ. (ರಹಸ್ಯ. ಪುಟಗಳನ್ನು ನೋಡಿ ; ಈ ಕಾರಣಾ ಕಾರ್ಯಸಂಬಂಧವು ಚಕ್ರರೂಪದಲ್ಲಿ ಪರಿಣಮಿಸುತ್ತದೆಂಬುದಕ್ಕೆ **"ಪಾಪಃಪ್ರಜ್ಞಾಂನಾಶಯತಿ, ನಷ್ಟಪ್ರಜ್ಞಃ ಪಾಪಮೇವ ನಿತ್ಯಮಾರಭತೇ ನರಃ"** ಎಂಬುದು ಅನುಸಂಧೇಯವು. **ವಿಪರೀತವಾಸನೈಯುಮ್** – ವಿಷಯೋಪಭೋಗಗಳಲ್ಲಿ ದುರಾಶೆಯುಂಟಾಗುವ ವಾಸನೆಯೂ, **ವಿಪರೀತರುಚಿಯುಮ್** – ದುಷ್ಟಸಹವಾಸದ ಮೂಲಕ ಕೆಟ್ಟ ಭೋಗಗಳಲ್ಲಿ ಅಪೇಕ್ಷೆಯೂ, **ಸ್ಥೂಲಸೂಕ್ಷ್ಮ**

## ಅಥೋಕ್ತಪ್ರಕಾರೇಣ ಶ್ರೀ ಭಾಷ್ಯಕಾರ್ಯೈರಪ್ಯರ್ಥೋऽವರ್ಣಿತ ಇತ್ಯಾಹ

**ಇಪ್ಪಡಿ "ಸರ್ವಪಾಪೇಭ್ಯಃ" ಎಜ್ಗಿರ ವಿರೋಧಿ ವರ್ಗತ್ತೈಯೆಲ್ಲಾವಱ್ "ಮನೋವಾಕ್ಕಾಯೈಃ" ಎನ್ರು ತುಡಜ್ಗಿ ಮೂನ್ರು ಚೂರ್ಣಿಕೆಯಾಲೇ ಶಾಬ್ದಮಾಗುವುಮ್ ಆರ್ಥಮಾಗವುಮ್ ಅರುಳಿಚ್ಚೆಯ್‍ದಾರ್.**

**ರೂಪಪ್ರಕೃತಿಸಂಬಂಧತ್ತೈಯುಮ್** – ಜನ್ಮಉಂಟಾಗುವಾಗ ಪ್ರಾಪ್ತವಾಗುವ ಸ್ಥೂಲಶರೀರಪ್ರಾಪ್ತಿಯೂ ನಿರ್ಯಾಣಕಾಲದಲ್ಲಿ ಉಂಟಾಗುವ ಭೂತಸೂಕ್ಷ್ಮ ಇಂದ್ರಿಯಾದಿಗಳು, ಈ ಸ್ಥೂಲಸೂಕ್ಷ್ಮರೂಪದಲ್ಲಿ ಪ್ರಕೃತಿಸಂಬಂಧವು ಈತನಿಗೆ ಸೃಷ್ಟಿಯಲ್ಲಿ ಸ್ಥೂಲರೂಪದಲ್ಲಿ ಅನುಸರಿಸಿ ಬಂದುದು; ಪ್ರಳಯದಲ್ಲಿ ರೂಕ್ಷ್ಮರೂಪದಲ್ಲಿ ಅಂಟಿದುದು. ಈ ಲೀಲಾವಿಭೂತಿಯನ್ನು ಬಿಟ್ಟು ನಿತ್ಯವಿಭೂತಿಯನ್ನು ಹೋಗಿ ಸೇರಬೇಕಾದರೆ ಈ ಐದೂ ಬಿಟ್ಟುತೊಲಗಬೇಕು. ಉಪಾಯಾನುಷ್ಠಾನಮಾಡಿದರೆ, ಅರ್ಚಿರಾದಿಮಾರ್ಗವು ನಿರ್ಯಾಣಾನಂತರ ದೊರೆತು ವಿರಜಾನಾದಿಯಲ್ಲಿ ಅವಗಾಹನಾನಂತರ ಇವೆಲ್ಲಾ ನಿಶ್ಶೇಷವಾಗಿ ತೊಲೆದುಹೋದನಂತರ ದಿವ್ಯವೈಕುಂಠ ಪ್ರಾಪ್ತಿಯು. ಇವೆಲ್ಲವನ್ನೂ, **ಪಾಪರಾಶಿ ಯುಲ್ಲಿ ಶೇರ್‍ಕ್ಕೈಕ್ಕಾಗ** – ಸೇರಿಸುವದಕ್ಕಾಗಿ, ಸರ್ವಶಬ್ದಪ್ರಯೋಗವು. ಪ್ರಕೃತಿಸಂಬಂಧ, ಕರ್ಮಅಜ್ಞಾನ, ವಾಸನಾರುಚಿ ಇವುಗಳು ಚಕ್ರರೂಪದಲ್ಲಿ ಉಂಟಾಗುತ್ತಾ ಬಂಧ ದೆಶೆಯಲ್ಲಿ ಸಂಬಂಧಿಸಿಕೊಂಡಿವೆ. ಇವಷ್ಟೂ ತೊಲಗಬೇಕಾಗಿರುವದರಿಂದ ಸರ್ವಶಬ್ದವು.

**ಸರ್ವಧರ್ಮಾನ್** – ಎಂಬಿರುವ ಸರ್ವಶಬ್ದಕ್ಕೂ ಇದೀಗ ವ್ಯತಾಸವು. ಅಲ್ಲಿ ಧರ್ಮಗಳೆಲ್ಲಾ ಎಂಬರ್ಥವಲ್ಲವು. ಅಲ್ಲಿ ಪಾಪಪರಿಹಾರಪ್ರಾಯಶ್ಚಿತ್ತ ಧರ್ಮಗಳು ಯಾವುವೋ ಅಷ್ಟು ಮಾತ್ರವೇ ಎಂಬರ್ಥವು; ಎಲ್ಲಾ ಧರ್ಮಗಳು ಅಲ್ಲವು; ನೈಮಿತ್ತಿಕ ನಿತ್ಯಧರ್ಮಗಳು ಸೇರಲಿಲ್ಲವು. ಅಥವಾ ಇನ್ನೊಂದು ಅಭಿಪ್ರಾಯವಾದರೆ ಉಪಾಯಗಳಾದ ಕರ್ಮಯೋಗ ಜ್ಞಾನಯೋಗಕ್ಕೆ ಸೇರಿದ ಧರ್ಮಗಳು ಮಾತ್ರವೇ ವಿನಾ ಎಲ್ಲಾ ಧರ್ಮಗಳನ್ನೂ ಬಿಡಬೇಕೆಂಬ ಅರ್ಥವಲ್ಲವು. ಇಲ್ಲಿ ಸರ್ವಪಾಪೇಭ್ಯಃ ಎಂಬಲ್ಲಿ ಸರ್ವಶಬ್ದವು ಪುಣ್ಯಪಾಪ ಎಲ್ಲಾ ಕರ್ಮಗಳು ತತ್ಕಾರಣಕಾರ್ಯರೂಪ ತತ್ಸಂಬಂಧಿಗಳೆಲ್ಲಾ ತೊಲಗಬೇಕು ಎಂಬ ಅರ್ಥವು. ಈ ಸರ್ವಶಬ್ದಕ್ಕೆ ಪ್ರಕಾರಣಾನುಗುಣವಾಗಿ ಅಭಿಪ್ರಾಯಗಳು.

## ಮುಂದೆ ತಾವು ಅರ್ಥಮಾಡಿರುವಹಾಗೆಯೇ ಶ್ರೀ ಭಾಷ್ಯಕಾರರ ಅಭಿಪ್ರಾಯವು ಎನ್ನುತ್ತಾರೆ.

**ಇಪ್ಪಡಿ** – ಈಗ ತಾವು ಸರ್ವಶಬ್ದಾರ್ಥವನ್ನು ಉಪಪಾದಿಸಿದ ರೀತಿಯಲ್ಲೇ **ಸರ್ವಪಾಪೇಭ್ಯಃ** –ಎನ್ನುವ, **ವಿರೋಧಿವರ್ಗತ್ತೈ** – ಮೋಕ್ಷಪ್ರಾಪ್ತಿಗೆ ವಿರೋಧಗ

ಳಾದ ಪುಣ್ಯಪಾಪರೂಪಸಮೂಹವನ್ನೆಲ್ಲಾ, **"ಮನೋವಾಕ್ಕಾಯೈಃ" ಎನ್ರು ತುಡಙ್ಗಿ**-ಎಂದಾರಂಭಿಸಿ **ಮೂನ್ರು ಚೂರ್ಣಿಕೆಯಾಲೇ**-ಮೂರು ಸಾಧನಭೂತ ವಾಕ್ಯಗಳಿಂದ, ಶಾಬ್ದವಾಗಿಯೂ, ಆರ್ಥವಾಗಿಯೂ, **ಅರುಳಿಚ್ಚೆಯ್ ದಾರ್** – ದಯಮಾಡಿ ಅಪ್ಪಣೆ ಕೊಡಿಸಿದರು. ಯಾರು ಎಂದು ಹೇಳಲಿಲ್ಲವು **ಮನೋವಾಕ್ಕಾಯೈ** ಎಂದಾರಂಭಿಸಿ ಹೇಳಿದ ವಾಕ್ಯಗಳು ಸರ್ವಶ್ರೀವೈಷ್ಣವರಿಗೂ ತಿಳಿದ ವಿಷಯ ವಾದುದರಿಂದ ಗೌರವಾತಿಶಯದಿಂದಲೂ ಶ್ರೀಭಾಷ್ಯಕಾರರು ಎಂದು ಹೇಳಲಿಲ್ಲವು. ಆ ಮೂರು ಸಾರಭೂತವಾಕ್ಯಗಳನ್ನೂ ನಾವು ಶ್ರೀಯಃಪತಿಗೆ ಪ್ರಣಾಮವನ್ನೆಸಗುವ ಕಾಲದಲ್ಲಿ ಹೇಳಿ ಅಪರಾಧಗಳ ಕ್ಷಮೆಯನ್ನು ಬೇಡುತ್ತೇವೆ. ಶರಣಾಗತಿಗದ್ಯದಲ್ಲಿ ರುವ ಆ ಮೂರು ವಾಕ್ಯಗಳು ಯಾವುವೆಂದರೆ

(೧) **ಮನೋವಾಕ್ಕಾಯೈರನಾದಿಕಾಲ ಪ್ರವೃತ್ತಾನಂತಾ ಕೃತ್ಯಕರಣ ಕೃತ್ಯಾಕರಣ ಭಗವದಪಚಾರ ಭಾಗವತಾಪಚಾರಾ ಸಹ್ಯಾಪಚಾರರೂಪ ನಾನಾವಿಧಾನಂತಾಪಚಾರಾ ನಾರಬ್ಧಕಾರ್ಯಾ ನಾರಬ್ಧಕಾರ್ಯಾಕೃತಾನ್ ಕ್ರಿಯ ಮಾಣಾನ್ ಕರಿಷ್ಯಮಾಣಾಂಶ್ಚ ಸರ್ವಾನಶೇಷತಃಕ್ಷಮಸ್ವ.**

(೨) **ಅನಾದಿ ಕಾಲಪ್ರವೃತ್ತ ವಿಪರೀತಜ್ಞಾನಮ್ ಆತ್ಮವಿಷಯಂ ಕೃತ್ಸ್ನಂ ಜಗದ್ವಿಷಯಂ ವಿಪರೀತವೃತ್ತಂಚಾ ಶೇಷವಿಷಯ ಮದ್ಯಾಪಿ ವರ್ತಮಾನಂ ವರ್ತಿಷ್ಯಮಾಣಂ ಚ ಸರ್ವಂ ಕ್ಷಮಸ್ವ.**

(೩) **ಮದೀಯಾನಾದಿ ಕರ್ಮಪ್ರವಾಹ ಪ್ರವೃತ್ತಾಂ ಭಗವತ್ಸ್ವರೂಪ ತಿರೋಧಾನಕರೀಂ ವಿಪರೀತಜ್ಞಾನಜನನೀಂ ಸ್ವವಿಷಯಾಯಾಶ್ಚ ಭೋಗ್ಯ ಬುದ್ಧೇರ್ಜನನೀಂದೇಹೇಂದ್ರಿಯತ್ವೇನ ಭೋಗ್ಯತ್ವೇನ ಸೂಕ್ಷ್ಮರೂಪೇಣ ಚಾವಸ್ಥಿತಾಂದೈ ವೀಂಗುಣಮಯೀಂ ಮಾಯಾಂದಾಸಭೂತ ಶ್ಶರಣಾಗ ತೋಸ್ಮಿತವಾಸ್ಮಿದಾಸ ಇತಿವಕ್ತಾರಂ ಮಾಂತಾರಯ"** ಇವಕ್ಕೆ ಸ್ವಾಮಿದೇಶಿಕರವರೇ ೭ ಪುಟ ವ್ಯಾಖ್ಯಾನ ಬರೆದಿರುತ್ತಾರೆ—ಅಷ್ಟನ್ನೂ ಇಲ್ಲಿ ಬರೆಯಲು ಸಾಧ್ಯವಿಲ್ಲವು. **"ಯದ್ಬ್ರಹ್ಮಕಲ್ಪ"** ವೆಂದು ಹೇಳಿರುವ ಹಾಗೆ ಅನಾದಿಕಾಲದಿಂದ ಪ್ರವೃತ್ತಿ ವಾದವು; ಆದುದರಿಂದ ಅನಂತವಾದವೆಂದು ಹೇಳಿದರು. ಒಂದಕ್ಕಿಂತ ಒಂದು ಕ್ರೂರವಾದ ಅಪರಾಧಗಳು ಐದುವಿಧ ಹೇಳಲ್ಪಟ್ಟವು. **ಅಕೃತ್ಯಕರಣ** – ಶಾಸ್ತ್ರದಲ್ಲಿ ಹೇಳಿರುವ ನಿಷಿದ್ಧಕರ್ಮಗಳಿಗೆ ನಿಸಿದ್ಧಾಚರಣೆಯು, **ಕೃತ್ಯಾಕರಣ**— ಶಾಸ್ತ್ರದಲ್ಲಿ ಹೇಳಿರುವ ಸ್ವವರ್ಣೋಚಿತ ನಿತ್ಯ ನೈಮಿತ್ತಿಕಾದಿಗಳನ್ನು ಅನುಷ್ಠಿಸದೇ ಇರೋಣವು. **ಭಗವದಪಚಾರಗಳು** – ೩೨ ವಿಧ ಅಪರಾಧಗಳೆಂದು ಹಿಂದೆಯೇ ವಿವರಣಮಾಡಿದೆ. ಭಗವಂತನದೇ ಎಲ್ಲಾ ವಸ್ತುಗಳು ಅವುಗಳು ತನ್ನದೆಂದೂ ಅರ್ಚಾವಿಗ್ರಹಾದಿಗಳಲ್ಲಿ ಪ್ರಾಕೃತ ಕಲ್ಲು ಬೆಳ್ಳಿ ಮುಂತಾದ ಭ್ರಮೆಗಳೂ ಇವೆಲ್ಲಾ

## "ಆರಬ್ಧಕಾರ್ಯಕ್ಷಮಸ್ವ" ಇತಿಪ್ರಾರ್ಥನಮ್ ನಾನುಪಪನ್ನಮಿತಿ ದರ್ಶಯತಿ

**(೧) ಕ್ಷಪಯಿತ್ವಾಧಿಕಾರಂ (ತಂ) ಸ್ವಂ ಶಶ್ವತ್ಕಾಲೇನ ಭೂಯಸಾ।**

ಭಗವದಪಚಾರಗಳೇ, **ಭಾಗವತಾಪಚಾರ** - ತದೀಯರ ವಿಷಯದಲ್ಲಿ ಅಪಚಾರ ಪಡುವದು "**ಬ್ರಾಹ್ಮಣೇಭ್ಯೋ ವಿಶೇಷತಃ**" ಎಂಬಲ್ಲಿ ಹೇಳಿರುವ ಹಾಗೆ ಬ್ರಾಹ್ಮಣ ದೂಷಣ, ಅವಮಾನ ಮೊದಲಾದವು. ಅದರಲ್ಲೂ ಬ್ರಾಹ್ಮಣ ಪರಿವ್ರಾಜಕರಲ್ಲಿ ಅಪರಾಧವು ಇನ್ನೂ ಕ್ರೂರವಾದುದು. **ಅಸಹ್ಯಾಪಚಾರ**ದಲ್ಲಿ ಗುರು ಮಾತಾ ಪಿತ್ರಾದಿ ದ್ರೋಹಗಳು ಸೇರಿದವು. ಮಿತ್ರದ್ರೋಹವೂ ಇದರಲ್ಲೇ ಸೇರಿತು. **ಆರಬ್ಧಕಾರ್ಯ** - ಹಿಂದಿನ ಕರ್ಮವಾಸನೆಗಳಿಗನುಗುಣವಾಗಿ ಆರಂಭಿಸಿದ ಬಂಧಕ ಕರ್ಮಗಳು, **ಅನಾರಬ್ಧಕಾರ್ಯ** - ಬುದ್ಧಿ ಪೂರ್ವೋತ್ತರಾಘಗಳೇ, ಅದಕ್ಕಾಗಿ ಪ್ರಾಯಶ್ಚಿತ್ತಾದಿಗಳನ್ನು ಮಾಡದೇ ಇರೋಣವು. ಇತ್ಯಾದಿಗಳನ್ನೆಲ್ಲಾ ಕ್ಷಮಿಸು ಎಂಬ ಪ್ರಾರ್ಥನೆ ಇವುಗಳನ್ನೆಲ್ಲಾ **ಕಾರಣಮುಮಾಯ್ ಕಾರ್ಯಮುಮಾಯ್ವರುಗಿರೆ ಅವಿದ್ಯೆಯ** ಮೂಲಕ ಉಂಟಾದವೆಂದು ಹೇಳಲ್ಪಟ್ಟವು ಎರಡನೆಯ ವಾಕ್ಯದಲ್ಲಿ ಹೇಳಿರುವವೆಲ್ಲಾ ವಿಪರೀತ ವಾಸನಾರುಚಿಗಳಿಂದುಂಟಾದ ಜ್ಞಾನತಿರೋಹಿತತ್ವ ರೂಪಾವಿದ್ಯೆಯಿಂದುಂಟಾದವು ಹೇಳಲ್ಪಟ್ಟವು. ಮೂರನೆಯ ವಾಕ್ಯದಲ್ಲಿ ಹೇಳಿರುವದು ಪ್ರಕೃತಿಸಂಬಂಧದಿಂದುಂಟಾದವು ಹೇಳಲ್ಪಟ್ಟವು. ಅರ್ಥವಾಗಿ ಹೇಗೆ ಹೇಳಲ್ಪಟ್ಟವೆಂಬುದನ್ನು ಸೂಕ್ಷ್ಮವಾಗಿ ತೋರಿಸಿರುವೆವು.

## ಆರಬ್ಧಕಾರ್ಯಕ್ಷಮಸ್ವ ಎಂಬ ಶ್ರೀಯತಿವರ್ಯರ ಪ್ರಾರ್ಥನೆಯೂ ಉಪಪನ್ನವಾದುದೇ

ಆರಬ್ಧಕಾರ್ಯಕ್ಕಾಗಿಯೇ ಈ ಜನ್ಮ, ದೇಹಪ್ರಾಪ್ತಿ ಮೊದಲಾದವು ಸರ್ವೇಶ್ವರನಿಂದುಂಟಾದುದು. ಅಭ್ಯುಗತ ಪ್ರಾರಬ್ಧಾನುಭವಕ್ಕಾಗಿಯೇ ಈ ದೇಹಪ್ರಾಪ್ತಿಯು; ಯೋಗನಿಷ್ಠರಿಗೂ ಕೂಡ ಪ್ರಾರಬ್ಧ ಕಳೆದರೇನೆ ಮೋಕ್ಷವು. ಅನಭ್ಯುಪಗತ ಪ್ರಾರಬ್ಧವನ್ನು ಮುಂದಿನ ಜನ್ಮದಲ್ಲಿ ಭಕ್ತಿಯೋಗನಿಷ್ಠನು ಅನುಭವಿಸಬೇಕಾಗಿರುತ್ತದೆ. ಬ್ರಹ್ಮರುದ್ರಾದಿಗಳ ಅವರುಗಳ ಅಧಿಕಾರ ಮುಗಿದ ನಂತರವೇ ಮೋಕ್ಷವೆಂದು ಹೇಳಿರುವಾಗ ಈ ಆರಬ್ಧಕಾರ್ಯಕ್ಷಮಸ್ವ ಎಂಬ ಪ್ರಾರ್ಥನೆಯು ಹೇಗೆ ಸರಿಯು? ಎಂಬಾಕ್ಷೇಪವನ್ನು ತರಬಹುದು. ಅದೂ ಅಲ್ಲದೆ ಶ್ರೀದೇಶಿಕರವರೇ ಯಾವ ಯಾವ ಅಪರಾಧಗಳು ಪ್ರಪದನದಿಂದ ಕಳೆಯುತ್ತವೆ. ಎಂದು ಅಪರಾಧ ಪರಿಹಾರಾಧಿಕಾರದಲ್ಲಿ **ಪ್ರಾರಬ್ಧೇತರ ಪೂರ್ವಪಾಪಮಖಿಲಂ** ಕಳೆಯುತ್ತವೆ ಎಂದು ಹೇಳಿದುದು ಹೇಗೆ? ಇತ್ಯಾದ್ಯಾಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಾರೆ ಮೊದಲು

---

(೧) ಲಕ್ಷ್ಮೀಧರ್ಮ ೧೭-೧೮

**ವೇಧಸೋಯತ್ರ ಮೋದನ್ತೇ ಶಙ್ಕರಾಸ್ಸಪುರಂದರಾಃ।" ಏನ್ರುವುಮ್ (೨) ಯಾವದಧಿಕಾರ ಮವಸ್ಥಿತಿ ರಾಧಿಕಾರಿಕಾಣಾಮ್" ಎನ್ರುಶೊಲ್ಲುಗಿರ ಪಡಿಯೇ ಶಿಲರ್ಕ್ಕು ಅಧಿಕಾರಾವಸಾನತ್ತಿಲೇ ಮೋಕ್ಷಮಾಯಿರುನ್ದದು. ಅಧಿಕಾರಿಗಳಲ್ಲಾದಾರ್ಕ್ಕು (೩) "ಅನಾರಬ್ಧಕಾರ್ಯೇ**

---

ಪೂರ್ವಪಕ್ಷವನ್ನು ಉಪಪಾದಿಸುತ್ತಾರೆ:—**ಅಧಿಕಾರಾರ್ (ತಾರ್) ಸ್ವಾರ್** - ತಮ್ಮ ತಮ್ಮ ಅಧಿಕಾರಕ್ಕೆ ಬಾರಿ ಬಾರಿಗೂ ಎಂದರೆ ಪ್ರತಿದಿನದಲ್ಲೂ, **ಕ್ಷಪಯಿತ್ವಾ**- **"ಭೋಗಾದೇವಕ್ಷಯಃ"** ಎಂಬಲ್ಲಿ ಹೇಳಿರುವ ಹಾಗೆ ಭೋಗದಿಂದ ಕಳೆದು ಕೊಂಡು, ವೇಧಸಃ - ಪ್ರತಿ ಅಂಡದ ಆಧಿಪತ್ಯವನ್ನು ಹೊಂದಿದ ಚತುರ್ಮುಖ ಬ್ರಹ್ಮರುಗಳೂ, **ಸಪುರುಂದರಾಃ** - ಇಂದ್ರರುಗಳಿಂದ ಕೂಡಿದ, **ಶಂಕರಾಃ**- ಶಂಕರರೂ, **ಯತ್ರ** - ಯಾವ ನಿತ್ಯವಿಭೂತಿಯಲ್ಲಿ **ಮೋದನ್ತೆ** - ಪರಿಪೂರ್ಣ ಬ್ರಹ್ಮಾನಂದವನ್ನು ಅನುಭವಿಸುವರೋ, ಇವರುಗಳಿಗೆಲ್ಲಾ ಅವರುಗಳ ಅಧಿಕಾರ ಸಮಾಪ್ತಿಯಲ್ಲೇ ಮೋಕ್ಷವಾಗಿರುವಾಗ, ಆರಬ್ಧಕಾರ್ಯಾರ್ಕ್ಷಮಸ್ವವೆಂಬ ಪ್ರಾರ್ಥನೆಯು ಅನುಪಪನ್ನವಲ್ಲವೋ ? ಮತ್ತು ಜ್ಞಾನಿಗಳಾದ ಯೋಗನಿಷ್ಠರಿಗೆ ದೇಹಪಾತ ಸಮಯದಲ್ಲಿ ಕರ್ಮಶೇಷವಿರುವದಿಲ್ಲವಾದುದರಿಂದ, ಬರೀ ಅರ್ಚಿರಾದಿಗತಿಗಾಗಿ ಮಾತ್ರ ಸೂಕ್ಷ್ಮಶರೀರ ಉಂಟು ; ಸುಖದುಃಖಗಳ ಅನುಭವವೂ ಇಲ್ಲವು ; ಎಂದು ಸೂತ್ರಕಾರರು ಹೇಳಿರುತ್ತಾರೆ ; ಇದು ಸರಿಯಾಗಿ ತೋರುವದಿಲ್ಲವು, ಎಂದು ಪೂರ್ವಪಕ್ಷವು. ಏಕೆಂದರೆ ವಸಿಷ್ಠಾದಿಗಳು ಮಹಾಜ್ಞಾನಿಗಳಾದರೂ, ಕರ್ಮಫಲ ರೂಪ ದೇಹಾನ್ತರಪ್ರಾಪ್ತಿಯೂ ಉಂಟು ; ಮತ್ತು ಪುತ್ರಜನ್ಮ ವಿಪತ್ತುಗಳಿಂದ ಸುಖದುಃಖಪ್ರಾಪ್ತಿಯು ಉಂಟು. ಅದಕ್ಕೆ **"ಯಾವದಧಿಕಾರಂ"** ಎಂಬ ಸೂತ್ರವು ಸಮಾಧಾನವನ್ನು ಹೇಳುತ್ತದೆ:—ವಸಿಷ್ಠಾದಿಗಳಿಗಾದರೂ **ಆಧಿಕಾರಿಕಾಣಾಂ ಯಾವತ್** - ಅಧಿಕಾರ ಸಮಾಪ್ತಿಯಾಗುವವರೆಗೂ, ಅರ್ಚಿರಾದಿಗತಿ ಪ್ರಾಪ್ತಿಯು ಇಲ್ಲವು. ಮತ್ತೇನೆಂದರೆ ಅಧಿಕಾರ ಮುಗಿಯುವವರೆಗೂ **ಅವಸ್ಥಿತಿಃ** ಆರಬ್ಧಕಾರ ನಿರ್ವಾಹದಲ್ಲೇ ಇರತಕ್ಕದ್ದಾಗಿರುತ್ತದೆ. ಜ್ಞಾನಿಗಳಾದರೂ ಆರಬ್ಧ ಕರ್ಮಫಲವನ್ನು ಅನುಭವಿಸಿಯೇತೀರಬೇಕು. **ಭೋಗಾದೇವಕ್ಷಯ : ಎಜ್ಗ್ಗರ ಪಡಿಯೇ** - ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವಹಾಗೆ **ಆರಬ್ಧಕಾರ್ಯಾರ್** - ಆರಬ್ಧ ಕಾರ್ಯವನ್ನು ಕ್ಷಮಿಸು ಎಂಬ ಪ್ರಾರ್ಥನೆಯು ಹೇಗೆ ಎಂಬ ಭಾವವು.

ಇನ್ನೊಂದು ಬ್ರಹ್ಮಸೂತ್ರದ ಮೂಲಕವಾಗಿಯೂ ಪೂರ್ವಪಕ್ಷವನ್ನು ಉಪ ಪಾದಿಸುತ್ತಾರೆ. ಹೇಗೆಂದರೆ ಉಪಾಯಾನುಷ್ಠಾನ ಮಾಡಿದವನಿಗೆ ಪೂರ್ವಾಘದ ವಿನಾಶವೂ ಉತ್ತರಾಘದ ಅಶ್ಲೇಷವೂ ನಾಲ್ಕನೆಯ ಅಧ್ಯಾಯದ ಪ್ರಥಮಪಾದ

---

(೨) ಬ್ರ. ಸೂ. ೩. ೩. ೩೧ (೩) ಬ್ರ. ಸೂ. ೪. ೧. ೧೫.

**ಏವತತ್ಪೂರ್ವೇತದವಧೇಃ" ಎಙ್ಗರಪಡಿಯೇ ಪ್ರಾರಬ್ಧಕರ್ಮ ಭೋಗಾವಸಾನತ್ತಿಲೇಯಾಯಿರನ್ದದು. ಇಪ್ಪಡಿಇರುಕ್ಕ, ಇವ್ವಿಡತ್ತಿಲ್ ಆರಬ್ಧಕಾರ್ಯತ್ತೈಕ್ಷಮಿಕ್ಕೈಯಾವದೆನ್ನಿಲ್ ; ಫಲಪ್ರದಾನ**

ದಲ್ಲಿ ಹೇಳಿರುತ್ತದೆ, ಮೇಲಿನಸೂತ್ರದಲ್ಲಿ ಅಧಿಕಾರಿಗಳಾದ ಬ್ರಹ್ಮರುದ್ರೇಂದ್ರಾದಿಗಳು ವಸಿಷ್ಠರು ಮೊದಲಾದವರುಗಳಿಗೆ ಮೋಕ್ಷವು ಯಾವಾಗ ಎಂಬುದು ಚರ್ಚಿಸಲ್ಪಟ್ಟಿತು. ಅಂತಹ ಅಧಿಕಾರಿಗಳಲ್ಲದವರ ವಿಷಯದಲ್ಲಿ ಹೇಗೆ ? ಎಂಬ ಚರ್ಚೆಯು. ಉಪಾಯಾನುಷ್ಠಾನಕ್ಕಿಂತ ಮುಂಚೆ ಇದ್ದ ಎಲ್ಲಾ ಪುಣ್ಯಪಾಪಗಳಿಗೆಲ್ಲಾ ವಿನಾಶವೂ ಅಶ್ಲೇಷವೇ ? ಅಥವಾ ಆರಬ್ಧಕರ್ಮವ್ಯತಿರಿಕ್ತಗಳಾದ ಕರ್ಮಗಳಿಗೆ ಮಾತ್ರ ವಿನಾಶ ಅಶ್ಲೇಷಗಳೇ ? ಎಂಬ ಸಂಶಯವು. ಏಕೆಂದರೆ **ಸರ್ವೇಪಾಪ್ಮಾನಃಪ್ರದೂಯನ್ತೇ** ಸಮಸ್ತ ಪಾಪಗಳೂ ದಹಿಸಿ ಹೋಗುತ್ತವೆ ಎಂದು ಸರ್ವಶಬ್ದದಲ್ಲಿ ಆರಬ್ಧಕರ್ಮಗಳೂ ಸೇರಿರುವದರಿಂದ ಎಲ್ಲಾ ತೊಲಗುತ್ತವೆಯೇ ? ಎಂದರೆ ಹಾಗಲ್ಲವು. **ತು** ಶಬ್ದವು ಸಂಶಯವನ್ನು ಛೇದಿಸುತ್ತದೆ, **ಪೂರ್ವೇ**-ಅನುಷ್ಠಾನಕ್ಕೆ ಪೂರ್ವಮಾಡಿದ, **ಅನಾರಬ್ಧ ಕಾರ್ಯೇ** - ಉಪಾಯಾನುಷ್ಠಾನಕ್ಕಾಗಿ ಆರಬ್ಧಕರ್ಮಗಳಿಗೆ ವ್ಯತಿರಿಕ್ತಗಳಾದವು ನಷ್ಟವಾಗುವುವು. ಏಕೆಂದರೆ **ತ ದ ವ ಧೇ ಃ** - **"ತಸ್ಯತಾವದೇವಚಿರಂಯಾವನ್ನವಿಮೋಕ್ಷ್ಯೇಅಥಸಂಪತ್ಸ್ಯೇ"** ( ) ಶ್ರುತಿಯಲ್ಲಿ ಉಪಾಯಾನುಷ್ಠಾನ ಮಾಡಿದ ಪ್ರಪನ್ನನಿಗೆ ಎಲ್ಲಾ ಪ್ರಾಕೃತಶರೀರದಿಂದ ಬಿಡುಗಡೆಯಾದನಂತರ ಮೋಕ್ಷಸಾಮ್ರಾಜ್ಯವೆಂದು ಹೇಳಿರುವದರಿಂದಲೂ ಮತ್ತು ಸೂಕ್ಷ್ಮಶರೀರಕೂಡ ಇಲ್ಲದಿದ್ದರೆ ಆತ್ಮನಿಗೆ ಗಮನಕ್ಕೆ ಯೋಗ್ಯತೆಯೇ ಇಲ್ಲವಾಗುವದರಿಂದಲೂ, ಅನಾರಬ್ಧಕಾರ್ಯಗಳಾದ ಸಂಚಿತಕರ್ಮಗಳಿಗೆ **ಅಶ್ಲೇಷವು. ಸರ್ವೇಪಾಪ್ಮಾನಃಪ್ರದೂಯನ್ತೇ** ಎಂಬಲ್ಲಿ ಸರ್ವಶಬ್ದಕ್ಕೆ ವ್ಯಾಖ್ಯಾನ ಹೇಗೆಂದರೆ ? ಪ್ರಾರಬ್ಧವ್ಯತಿರಿಕ್ತವಾದುವೆಂಬ ಅಭಿಪ್ರಾಯವು. **ಎಙ್ಗರಪಡಿಯೇ** - ಎಂದು ಈ ಮೇಲಿನ ಸೂತ್ರದಲ್ಲಿ ಹೇಳಿರುವ ಹಾಗೆ **ಪ್ರಾರಬ್ಧಕರ್ಮಭೋಗಾವಸಾನತ್ತಿಲೇ** - ಪ್ರಾರಬ್ಧಕರ್ಮಫಲಾನುಭವಾನಂತರವೇ, **ಇರನ್ದದು** - ಮೋಕ್ಷಪ್ರಾಪ್ತಿಯು ಇರತಕ್ಕದ್ದು. ಆದುದರಿಂದ ಪಾರಬ್ಧಕರ್ಮವು ಅನುಭವಿಸತಕ್ಕದ್ದಾಗಿರುತ್ತದೆ. **ಇಪ್ಪಡಿ ಇರುಕ್ಕ** - ಹೀಗಿರುವಾಗ ಆರಬ್ಧಕಾರ್ಯಾಕ್ಷಮಸ್ವ ಎಂದು ಹೇಳಿದುದು ಹೇಗೆ ಎಂಬ ಪೂರ್ವಪಕ್ಷವು. ಇದಕ್ಕೆ ಸಮಾಧಾನವನ್ನು ಹೇಳುತ್ತಾರೆ-**ಇವ್ವಿಡತ್ತಿಲ್** - ಈ ಸ್ಥಳದಲ್ಲಿ, **ಆರಬ್ಧಕಾರ್ಯತ್ತೈ** ಆರಬ್ಧಕರ್ಮವನ್ನು ಕ್ಷಮಿಸೋಣವು, **ಯಾವದೆನ್ನಿಲ್** - ಯಾವದು ಎಂದರೆ ? **ಫಲಪ್ರದಾನಪ್ರವೃತ್ತಕರ್ಮಙ್ಗಳ್** - ಫಲವನ್ನು ಕೊಡುವದಕ್ಕಾಗಿ ಆರಂಭಿಸಿದ ಕರ್ಮಗಳು, ಈಗ ಚೇತನನಿಗೆ ಉಂಟಾಗಿ ಅಭ್ಯುಪಗತ ಪ್ರಾರಬ್ಧಗಳಾದ ಕರ್ಮಗಳು, **ಜನ್ಮಾಂತರ** - ಮುಂದಿನ ಜನ್ಮದಲ್ಲಿ ಅನುಭವಿಸಬೇಕಾದ (ಅನಭ್ಯುಪಗತಪ್ರಾರಬ್ಧ

**ಪ್ರವೃತ್ತಮಾನ ಕರ್ಮತ್ತಿಲುಮ್ ಜನ್ಮಾಂತರ, ದಿವಸಾಂತರ ಸ್ಥಿತ್ಯಾದಿಗಳುಕ್ಕು ಆರಂಭಕಮಾನ ಅಂಶಮುಮ್ ಇ ಸ್ವತಂತ್ರಪ್ರಪತ್ತಿನಿಷ್ಠನುಕ್ಕು ಅನಿಷ್ಟಮಾಯ್, ಅತ್ತೈಯುಮ್ ಪತ್ತ ಇವರ್ ಶೋಕಿಕ್ಕಿಲ್, ಅವ್ವಂಶತ್ತೈಯುಮ್ ಈಶ್ವರರ್ ಕ್ಷಮಿಕ್ಕುಮ್.**

ಕರ್ಮ) **ದಿವಸಾಂತರ** – ಮುಂದಿನ ದಿನದಲ್ಲಿ ಮಾಡುವ, ಪ್ರಾರಬ್ಧದಲ್ಲೇ ಮುಂದೆ ಅನುಭವಿಸಬೇಕಾದುದು, **ಸ್ಥಿತ್ಯಾದಿಗಳುಕ್ಕು** – ವರ್ತಮಾನಕಾಲದಲ್ಲಿಯೇ ಮೊದಲಾದವುಗಳಲ್ಲೇ ಅನುಭವಿಸಬೇಕಾದುದು, **ಆರಂಭಕಮಾನಅಂಶಮುಮ್** – ಇಂತಹ ಆರಬ್ಧಕರ್ಮಗಳೂ, **ಇಸ್ವತಂತ್ರನಿಷ್ಠನುಕ್ಕು**–ಈ ಪ್ರಪತ್ತಿನಿಷ್ಠನಿಗೆ, **ಅನಿಷ್ಟಮಾಯ್** – ಇಷ್ಟವಲ್ಲದ ಫಲಪ್ರದವಾದುದಾಗಿ, **ಅತ್ತೈಯುಮ್** – ಅಂತವುಗಳನ್ನೂ ಕೂಡ, **ಈಶ್ವರರ್ ಕ್ಷಮಿಕ್ಕುಮ್** – ಈಶ್ವರನು ಕ್ಷಮಿಸುವನು. ದೃಪ್ತ ಪ್ರಪತ್ತಿನಿಷ್ಠನಿಗೆ ಭರನ್ಯಾಸಪ್ರಭಾವದಿಂದ ಆರಬ್ಧಕರ್ಮಗಳು ಹೋಗುತ್ತವೆಯೇ? ಇಲ್ಲವೇ? ಪ್ರಾರಬ್ಧಕ್ಕಾಗಿ ಶರೀರಪ್ರಾಪ್ತವಾಗಿ ತದನುಭವಮಾಡಿಯೇ ತೀರಬೇಕೇ ಹೇಗೆ? ಪ್ರಾರಬ್ಧವೂ ಕೂಡ ಕಳೆಯುತ್ತದೋ ಎಂಬ ಪ್ರಶ್ನೆಯಲ್ಲಿ ಆರಬ್ಧವೂ ಕಳೆಯಲಿ ಎಂಬ ಪ್ರಾರ್ಥನೆಯಲ್ಲಿ ಏನೂ ಅನುಪಪನ್ನವಾದುದು ಇಲ್ಲವೆನ್ನುತ್ತಾರೆ—“**ಸಾಧ್ಯಭಕ್ತಿಸ್ತು ಸಾಹನ್ತ್ರೀ ಪ್ರಾರಬ್ಧಸ್ಯಾಪಿಭೂಯಸೀ**” ಎಂಬ ಪ್ರಮಾಣವೇ ಇರುತ್ತದೆ. **ಸಾಧ್ಯಭಕ್ತಿ** ಎಂದರೆ ಶರಣಾಗತಿಯು. **ಸಾಧ್ಯಾಭಕ್ತಿರ್ಯಯಾಸಾ** ಎಂಬ ವ್ಯುತ್ಪತ್ತಿಯು ಮೂಲಕ. ಕ್ಷಮಾಷೋಡಶಿಯು **ದೇವತ್ವಾಂಶರಣಂ ಪ್ರಪನ್ನಮಪಿಮಾಂ ದುಃಖಾನನನ್ಯಾಶ್ರಯಂಬಾಧನ್ತೇಯದಿ ಸರ್ವಪಾಪನಿವಹಾನ್ಮೋಕ್ಷಯಿಷ್ಯಾಮ್ಯಹಮ್ । ಇತ್ಯುಕ್ತಂ ತವವಾಕ್ಯಮರ್ಥವಿಧುರಂ ಜಾಯೇತ ಯದ್ವಾಭಶಾಂಸ್ತ್ರತ್ರಾಶಕ್ತ ಇತಿ ಪ್ರಥೇತಹಿ ತತೋ ಮಾಂ ರಕ್ಷತು ತ್ವತ್ಕ್ಷಮಾ॥** ತಾವು ಭರನ್ಯಾಸವನ್ನನುಷ್ಠಿಸಿ ಪ್ರಪನ್ನರಾಗಿದ್ದರೂ ಆರಬ್ಧಕರ್ಮಗಳಿಗೆ ಸೇರಿದ ಪಾಪಮೂಲಕದುಃಖಗಳು ಪ್ರಾಪ್ತವಾದರೆ, ನೀನು ಚರಮಶ್ಲೋಕದಲ್ಲಿ ಸರ್ವಪಾಪಗಳಿಂದಲೂ ಬಿಡಿಸುವೆನು ಅಳಬೇಡವೆಂದು ಹೇಳಿದ ಅಮೋಘೋಕ್ತಿಯು ನಿರರ್ಥಕವಾದುದಾಗುವದಿಲ್ಲವೇ? ಎಂದರೆ ಅದಕ್ಕೆ ಪ್ರತಿಯಾಗಿ ಸ್ವಾಮಿಯು ಹೇಳಬಹುದೇನೆಂದರೆ ಅಲ್ಪಸ್ವಲ್ಪ ಪಾಪಗಳನ್ನು ಮಾಡಿದ್ದರೆ ಬಿಡಿಸಬಹುದಾಗಿತ್ತು; ಮಹಾಪಾಪಿಯಾದ ನಿನ್ನನ್ನು ಬಿಡಿಸಲು ಹೇಗೆ ಸಾಧ್ಯವೆನ್ನುತ್ತೀಯೇ? ಆಗ ನೀನು ಮಹಾಪಾಪಿಯ ವಿಷಯದಲ್ಲಿ ಅಶಕ್ತನೆಂದು ಹೇಳಿಕೊಳ್ಳಬೇಕಾಗುತ್ತದೆ. ಸರ್ವಶಕ್ತನು, ಅಘಟಿತಘಟನಾಶಕ್ತಿಯುತನು ಎಂಬ ಬಿರುದುಗಳು ನಿನಗೆ ಸಲ್ಲುವದಿಲ್ಲವು. ಅವುಗಳನ್ನು ಕಾಪಾಡಿಕೊಳ್ಳಬೇಕಾಗಿದ್ದರೆ ನಿನ್ನ ಕ್ಷಮಾಗುಣವು ನನ್ನನ್ನು ದುಃಖಗಳಿಂದ ಕಾಪಾಡಲಿ ಎಂಬುದು ಶ್ಲೋಕತಾತ್ಪರ್ಯವು. ಆದುದರಿಂದ ಪ್ರಾರಬ್ಧವೂ

ಕಳೆಯಬೇಕೆಂಬ ಪ್ರಾರ್ಥನೆಯಲ್ಲಿ ಏನೊಂದೂ ಅಯಥಾರ್ಥವಾದುದೇನೂ ಇಲ್ಲವು.

ಇದು ಗೀತೆಯಲ್ಲೂ ಉಪಪಾದಿತವು.—ಎಲ್ಲಿ? ಎಂದರೆ—ಬಹಳ ದೂರ ಉಪದೇಶಮಾಡಿದರೂ ಅರ್ಜುನನು ಯುದ್ಧಕ್ಕೆ ಸಿದ್ಧನಾಗದಿರಲು, ಸ್ವಾಮಿಯು ಹೇಳುತ್ತಾರೆ—**ನಯೋತ್ಸ್ಯೇ** - ನಾನು ಯುದ್ಧಮಾಡುವದಿಲ್ಲವೆಂದಲ್ಲವೇ ನಿನ್ನ ಸಙ್ಕಲ್ಪವು - ಅದು ಸಾಗುವಹಾಗೆ ಇಲ್ಲವು; ನಿನ್ನ ಕೈಯಲ್ಲೇ ನಡೆಯುವಹಾಗೆ ಮಾಡುವೆನು; **ಸ್ವಭಾವಸ್ತ್ವಾಂನಿಯೋಕ್ಷ್ಯಸಿ** - ನಿನ್ನ ಕ್ಷತ್ರಿಯ ಸ್ವಭಾವವೇ ನಿನ್ನನ್ನು ಯುದ್ಧಮಾಡುವ ಹಾಗೆ ಮಾಡಿಸುವದು. ನೀನು ಯಾವಾಗ ಯುದ್ಧ ರಂಗವನ್ನು ತ್ಯಜಿಸಿಹೋಗುವೆಯೋ, ಆಗ ದುರ್ಯೋಧನನು ನಿನ್ನನ್ನು ನೋಡಿ, **ಹೇಡಿಯು ಬೆನ್ನುತೋರಿಸಿ** ಹೋಗುತ್ತಾನೆಂದು ಹೀಯಾಳಿಸುವನು, ಆಗ ಯಾರೋ ಹೇಡಿ? ಎಂದು ಹೇಳಿ ಯುದ್ಧಕ್ಕೆ ಪುನಃಹೋಗಿ ಶತ್ರುಗಳನ್ನೆಲ್ಲಾ ಕೊಲ್ಲುವಿ; ಇದೇತಕ್ಕೆಂದರೆ? **"ಈಶ್ವರಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ। ಭ್ರಾಮಯನ್ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ"** - ನಿನಗೆ ಪ್ರಾರಬ್ಧಕರ್ಮಾನುಸಾರಶರೀರವನ್ನು ಕೊಟ್ಟು ನಿನ್ನ ಹೃದಯದಲ್ಲೇ ಇದ್ದು ಆರಬ್ಧಕರ್ಮಫಲಗಳನ್ನು ಅನುಭವಿಸುವಹಾಗೆ ಮಾಡುವೆನು ಎಂದು ಶ್ರೀಕೃಷ್ಣನು ಹೇಳಿದನು. ಆರಬ್ಧಕರ್ಮಫಲವು ಎರಡು ವಿಧವು - ಸುಕೃತಫಲವಾಗಿ ಸುಖ ವನ್ನುಂಟುಮಾಡುವುವು; ದುಷ್ಕೃತಫಲವಾಗಿ ದುಃಖವನ್ನುಂಟುಮಾಡುವುವು. ಸುಕೃತಫಲವಾಗಿ ಸುಖವನ್ನು ಕೊಟ್ಟರೆ, ಕುಚೇಲರ ಹಾಗೆ ಲಿಪ್ತನಾಗದೇ ಅನು ಭವಿಸಿ ಬಿಡಬಹುದು; ದುಃಖವನ್ನುಂಟುಮಾಡುವ ಆರಬ್ಧವು ತೊಲಗುತ್ತದೆಯೋ ಇಲ್ಲವೇ ಎಂಬ ವಿಷಯದಲ್ಲಿ ಶ್ರೀಕೃಷ್ಣಭಗವಾನ್ ಹೇಳುತ್ತಾರೆ - **"ತಮೇವಶರಣಂ ಗಚ್ಛಸರ್ವಭಾವೇನ ಭಾರತ"** ಎಂಬ ಹಾಗೆ ಮಾಡಿದುದಾದರೆ ಪ್ರಾರಬ್ಧವೂ ಕಳೆ ಯುವದರಲ್ಲಿ ಸಂದೇಹವಿಲ್ಲವು - ಆದುದರಿಂದ ಇವುಗಳನ್ನು **ಕ್ಷಮಸ್ವ** ಎಂಬ ಪ್ರಾರ್ಥ ನೆಯಲ್ಲಿ ಅನುಪಪನ್ನವಾದುದು ಯಾವುದೂ ಇಲ್ಲವು ಎಂಬ ಭಾವವು.

ಭರನ್ಯಾಸಕ್ಕೆ ಮುಂದೆಮಾಡಿದ ಸಂಚಿತದಲ್ಲಿ ಸೇರಿದ ಆರಬ್ಧಕರ್ಮದ ಫಲವು ಅದಕ್ಕಾಗಿ ಮಾಡಿದ ಶರಣಾಗತಿಯಿಂದ ಬಿಡುಗಡೆಯು. ಶರಣಾಗತ್ಯನುಷ್ಠಾನ ಕಾಲವು ಅತ್ಯಲ್ಪವು. ಆ ಕಾಲದಲ್ಲಿ ಯಾವ ದುಷ್ಕೃತಿಯೂ ಸಂಭವಿಸುವದಿಲ್ಲವು. ಅನುಷ್ಠಾನದ ಉತ್ತರ ಕಾಲದಲ್ಲಿ ಮಾಡಿದ ಆರಬ್ಧಕರ್ಮವಾದರೆ ತಚ್ಛಾಂತಿಗಾಗಿ ಮಾಡಿದ ಪುನಶ್ಶರಣಾಗತಿಯಿಂದ ನಿವಾರಣವು. ಇವೆಲ್ಲಾ ಅಪರಾಧಪರಿಹಾರಾಧಿ ಕಾರದ ಕೊನೆಯ ಶ್ಲೋಕದಲ್ಲಿ ಉಪಪಾದಿತವು. ಪರಾಂಬರಿಸಬಹುದು. ಆದರೆ ಅಲ್ಲಿ **ಪ್ರಾರಬ್ಧೇತರ ಪೂರ್ವಪಾಪಮಖಿಲಮ್** ಎಂದು ಹೇಳಿರುವದು ಈ ಅಭಿ ಪ್ರಾಯಕ್ಕೆ ವಿರೋಧವಲ್ಲವೋ? ಎಂದರೆ ಅಲ್ಲವೆನ್ನುವೆವು. ಈ ಪ್ರಾರಬ್ಧವನ್ನು

### ಆರ್ತಪ್ರಪನ್ನ ವಿಷಯೇಽಪಿ "ಆರಬ್ಧಕಾರ್ಯಂ ಕ್ಷಮಸ್ವೇ"ತ್ಯುಕ್ತಿಃ ಯುಕ್ತಾ.

**ಅಪ್ಪೋದೇ ಮೋಕ್ಷಮ್ ಪೆತ್ತನ್ರಿ ಧರಿಕ್ಕಮಾಟ್ಟಾದ ಆರ್ತ್ಯತಿಶಯ ಮುಡೈಯಾರ್ಕ್ಕು ಅಕ್ಷಣತ್ತಿಲೇ ಪ್ರಾರಬ್ಧಕಾರ್ಯಮಾನ ಕರ್ಮತ್ತೈ ನಿಶ್ಶೇಷ ಮಾಗಕ್ಷಮಿಕ್ಕುಮಾಕೈಯಾಲ್, ಆರಬ್ಧ ಕರ್ಮತ್ತೈಕ್ಷಮಿಕ್ಕವೇಣುಮೆನ್ರು ಅಪೇಕ್ಷಿಕ್ಕ ಕುರೈಯಿಲ್ಲೈ.**

---

ಅನುಭವಿಸುವದಕ್ಕಾಗಿಯೇ ಈತನಿಗೆ ಜನ್ಮ, ಶರೀರಪ್ರಾಪ್ತಿ ಮೊದಲಾದವು ಬಂದಿರುವದರಿಂದ ಸಾಯುವ ತನಕ ತಪ್ಪಿದ್ದಲ್ಲವಾದುದನ್ನು ತಿಳಿಸುವದಕ್ಕಾಗಿ ಹಾಗೆ ಪ್ರಯೋಗವು. ಸಂಸಾರ ಬಂಧನವು ಸಾಯುವ ತನಕ ದೃಪ್ತಶರಣಾಗತನಿಗೆ ತಪ್ಪಿದ್ದಲ್ಲವೆಂಬ ಭಾವವು.

ಹೀಗೆ ದೃಪ್ತಶರಣಾಗತನ ವಿಷಯದಲ್ಲಿ ಪ್ರಯೋಗದ ಸಾಮಂಜಸ್ಯವನ್ನು ಹೇಳಿ, ಆರ್ತ ಶರಣಾಗತನ ವಿಷಯದಲ್ಲೂ ಆರಬ್ಧಕರ್ಮವನ್ನು ಕ್ಷಮಸ್ವ ಎಂಬ ಪ್ರಾರ್ಥನೆಯೂ ಉಪಪನ್ನವಾದುದೇ ಎಂದು ತಿಳಿಸುತ್ತಾರೆ—

### ಆರ್ತಪ್ರಪನ್ನನ ವಿಷಯದಲ್ಲೂ "ಆರಬ್ಧಕಾರ್ಯಂ ಕ್ಷಮಸ್ವ" ಎಂಬ ಉಕ್ತಿಯೂ ಯುಕ್ತವಾದುದೇ

**ಅಪ್ಪೋದೇ** - ಆಗಲೇನೆ, **ಮೋಕ್ಷಮ್ ಪೆತ್ತನ್ರಿ** - ಮೋಕ್ಷವನ್ನು ಹೊಂದಿದಲ್ಲದೆ, **ಧರಿಕ್ಕಮಾಟ್ಟಾದ** - ತನಗೆ ಸ್ಥಿತಿಯೇ ಸಾಧ್ಯವಲ್ಲದ, **ಆರ್ತ್ಯತಿಶಯ ಮುಡೈಯಾರ್ಕ್ಕು** - ಸಂಸಾರ ಮಧ್ಯೆ ಇರುವದು ಉರಿಯುವ ಬೆಂಕಿಯ ಮಧ್ಯದಲ್ಲಿರುವಹಾಗೆ ಹೆಚ್ಚಾದ ದೈನ್ಯವನ್ನು ಹೊಂದಿರುವವರಿಗೆ, **ಆಕ್ಷಣದಲ್ಲೇ, ಪ್ರಾರಬ್ಧ ರೂಪವಾದ ಕರ್ಮವನ್ನು, ನಿಶ್ಶೇಷವಾಗ ಕ್ಷಮಿಕ್ಕುಂ** - ಸ್ವಲ್ಪವೂ ಇಲ್ಲದ ಹಾಗೆ ಒಡನೆ ಕ್ಷಮಿಸಿಬಿಡುವನು, **ಆಗೈಯಾಲ್** - ಆದುದರಿಂದ, **ಆರಬ್ಧ ಕರ್ಮವನ್ನು, ಕ್ಷಮಿಕ್ಕವೇಣುಮೆನ್ರು** - ಕ್ಷಮಿಸಬೇಕೆಂದು ಪ್ರಾರ್ಥಿಸುವದರಲ್ಲಿ, **ಕುರೈಯಿಲ್ಲೈ** - ಏನೊಂದೂ ನ್ಯೂನತೆಯಿಲ್ಲವು, ಎಂದರೆ ಪ್ರಾರ್ಥನೆಯು ಉಪಪನ್ನವಾದುದೇ. ಆರ್ತಪ್ರಪತ್ತಿಯನ್ನು ಅನುಷ್ಠಿಸಿದವನು ಹಾಗೆ ಪ್ರಾರ್ಥಿಸುವದು ಸರಿಯಾದುದೆ: ಆತನು ಒಡನೇ ಶರೀರದ ವಿಯೋಗವನ್ನು ತದ್ದ್ವಾರಾ ಸರ್ವಾರಬ್ಧಕರ್ಮಗಳ ನಿವಾರಣೆಯನ್ನು ಅಪೇಕ್ಷಿಸುವನು. ಅಂತಹ ಆರ್ತಪ್ರಪನ್ನನ ಕೋರಿಕೆಯನ್ನು ಒಡನೆ ದೇಹವಿಯೋಗ ಉಂಟಾಗುವಹಾಗೆ ಮಾಡಿ, ನಡೆಸಿಕೊಡುವನು. ಅಥವಾ ಅಂತಹ ಪ್ರಪನ್ನನಿಗೆ, ಶರಭಂಗ ಮಹಾಋಷಿಯು ಅನುಷ್ಠಿಸಿದಹಾಗೆ ಅಗ್ನಿಪ್ರವೇಶಾದಿಗಳ ಮೂಲಕ ಶರೀರತ್ಯಾಗಮಾಡಲು ಅನುಮತಿಯೂ ಶಾಸ್ತ್ರದಲ್ಲಿ ಉಂಟು. **ತತೋಽಗ್ನಿಂ ಸುಸಮಾಧಾಯ ಹುತ್ವಾಚಾಜ್ಯೇನ ಮನ್ತ್ರವಿತ್ । ಶರಭಂಗೋ ಮತೇಜಾಃ ಪ್ರವೇಶಹುತಾಶನಮ್"** (ರಾ. ಅರಣ್ಯ. ೫. ೩೯.) ಎಂದು ಇದೆ.

## ಥ "ಕ್ರಿಯಮಾಣಾ ಕರಿಷ್ಯಮಾಣಾ ಕ್ಷಮಸ್ವ" ಇತಿ ಪ್ರಾರ್ಥನಾಅ ತಾತ್ಪರ್ಯ ಮಾಹ

---

**ಇನ್ವಿಡತ್ತಿಲ್ ಪ್ರಪತ್ತಿಕಾಲುತ್ತುಕ್ಕು ಮುನ್ಪುಳ್ಳವತ್ರೈ ಕೃತಾನೆನ್ರು ಡುತ್ತುಪಿನ್ಪುಳ್ಳವತ್ರೈ ಕರಿಷ್ಯಮಾಣಾನೆನ್ರು ಶೊಲ್ಲಾನಿನ್ರದು—ಪ್ರಪತ್ತಿಕಾಲತ್ತಿಲೇ ಪಣ್ಣುವನ ಶಿಲಪಾಪಙ್ಗಳ್ ಕಾಣ್ಗಿರಲೋಮ್. ಇಪ್ಪಡಿ ಇರುಕ್ಕೆ**

---

### ಮುಂದೆ "ಕೃತಾಃಕರಿಷ್ಯಮಾಣಾ ಕ್ಷಮಸ್ವ" ಎಂಬುದರ ತಾತ್ಪರ್ಯವನ್ನು ತಿಳಿಸುತ್ತಾರೆ

**ಇನ್ವಿಡತ್ತಿಲ್** - ಈ ಸಂದರ್ಭದಲ್ಲಿ, ಶರಣಾಗತಿಗದ್ಯದಲ್ಲಿ ಅಪರಾಧಗಳನ್ನು ಕ್ಷಮಿಸು ಎಂದು ಪ್ರಾರ್ಥಿಸುವ ಸಂದರ್ಭದಲ್ಲಿ, **ಪ್ರಪತ್ತಿಕಾಲತ್ತುಕ್ಕು ಮುನ್ಪುಳ್ಳವತ್ರೈ** - ಪ್ರಪತ್ತಿಯನ್ನು ಅನುಷ್ಠಿಸುವ ಕಾಲಕ್ಕೆ ಮುಂಚೆ ಇರುವ, **ಕೃತಾನೆನ್ರುಡುತ್ತಿ** - ಕೃತಾಃ ಎಂದು ಆರಿಸಿ ಹೇಳಿ, **ಪಿನ್ಪುಳ್ಳವತ್ರೈ** - ಪ್ರಪತ್ತಿಗೆ ಅನಂತರ ಮಾಡುವುವಗಳನ್ನು, **ಕರಿಷ್ಯಮಾಣಾನೆನ್ರು** - ಕರಿಷ್ಯಮಾಣಾಗಳೆಂದು, **ಶೊಲ್ಲಾನಿನ್ರದು** - ಹೇಳಿರುವದು ಯಾವುವೆಂದರೆ ತಿಳಿಸುತ್ತಾರೆ.—ಪ್ರಪದನವನ್ನು ಅನುಷ್ಠಿಸುವ ಕಾಲದಲ್ಲಿ, **ಪಣ್ಣುವನ** - ಮಾಡುವ, **ಶಿಲಪಾಪಙ್ಗಳ್** - ಕೆಲವು ಪಾಪಗಳನ್ನು, **ಕಾಣ್ಗಿರಲೋಮ್** - ನಾವು ಕಂಡದು ಇಲ್ಲವು. ಈ ಭರನ್ಯಾಸಾನುಷ್ಠಾನದಿಂದ ಬಂದ ಪ್ರಯೋಜನವು, ಹಿಂದಿನ ಪಾಪಗಳೆಲ್ಲಾ ನಾಶವಾಗಬೇಕೆಂದು ಮುಂದಿನ ಪ್ರಾಮಾದಿಕ ಪಾಪಗಳು ಲೇಪಿಸದೆ ಇರುವದಕ್ಕಾಗಿ. ಹೀಗಿರುವಾಗ ಆ ಅನುಷ್ಠಾನ ಕಾಲದಲ್ಲೇ ಪಾಪಗಳನ್ನೆಸಗುವನೇ ? ಎಂದಿಗೂ ಇಲ್ಲವೆಂಬ ಭಾವವು. ಇದನ್ನೇ ಹಿಂದೆ ಅಪರಾಧಪರಿಹಾರಾಧಿಕಾರದಲ್ಲಿ "**ಧೀಪೂರ್ವೋತ್ತರಪಾಪಮಜನನಾತ್**" ಬುದ್ಧಿಪೂರ್ವಕವಾಗಿ ಪ್ರಪನ್ನನು ಮುಂದಕ್ಕೇ ಮಾಡುವದಿಲ್ಲವೆಂದು ಹೇಳಿದನಂತರ ಆ ಕಾಲದಲ್ಲೇ ಮಾಡುತ್ತಾನೆಯೇ ? ಎಂಬ ಭಾವವು. ಹಾಗೆಯೇ ಆ ಅಧಿಕಾರದ ಆ ಶ್ಲೋಕದಲ್ಲೂ "ಮಾಧವದಯೆ ಎಂಬ ಮಂದಾಕಿನಿಯಲ್ಲಿ ಭರನ್ಯಾಸವೆಂಬ ಅವಗಾಹನ ಸ್ನಾನಮಾಡಿ ಮಾಲಿನ್ಯವನ್ನೆಲ್ಲಾ ಕಳೆದುಕೊಂಡವನು ಎಂದಿಗಾದರೂ ಪುನಃ ಕೆಸರುಗುಂಡಿಯಲ್ಲಿ ಬಿದ್ದು ಕಳಂಕವನ್ನು ಹೊಂದುವನೇ ? ಎಂದು ಹೇಳಿ, ಹಾಗೆ ಬಿದ್ದವನನ್ನು ಪ್ರಪನ್ನರಾದ ಪ್ರಾಜ್ಞರು ಹತ್ತಿರ ಸೇರಿಸುವದಿಲ್ಲ, ಎಂದು ಅಪ್ಪಣೆಕೊಡಿಸಿರುತ್ತಾರೆ". ಶರಣಾಗತಿಯನ್ನನುಷ್ಠಿಸುವ ಕಾಲದಲ್ಲೂ ಬುದ್ಧಿಪೂರ್ವಕವಲ್ಲದ ಅಪರಾಧಪ್ರಾಪ್ತಿಯುಂಟಾಗಬಹುದು. ಈತನನ್ನು ಯಾವುದಾದರೂ ಕೀಟವು ಆ ಕಾಲದಲ್ಲಿ ಕಚ್ಚಬಹುದು. ಅದರ ಜ್ಞಾನವಿಲ್ಲದೆ, ಈತನು ಅದರಿಂದ ನಿವಾರಣೆಯನ್ನು ಹೊಂದುವದಕ್ಕಾಗಿ ಅದನ್ನು ನಾಶಮಾಡಬಹುದು.

**ಕ್ರಿಯಮಾಣಙ್ಗಳೈ ಕ್ಷಮಿಕ್ಕೈ ಯಾವ ತೆನ್ನಿಲ್ ? "ಪ್ರಾರಬ್ಧೋಽಪರಿಸಮಾಪ್ತಶ್ಚವರ್ತಮಾನಃ" ಎನ್ಗಿರ ಪ್ರಕ್ರಿಯೈಯಾಲೇ ಪ್ರಪತ್ತಿ ಮುನ್ಬೇತೊಡಙ್ಗಿ ಪಿನ್ಬೇತಲೈಕ್ಕಟ್ಟವೇಣ್ಡುಮ್ಪಡಿ. ಚಿರಕಾಲಸಾಧ್ಯಮಾಯಿರುಕ್ಕು ಮವತ್ತೈಯುಮ್, ತತ್ಕ್ಷಣತ್ತಿಲ್ ಪ್ರಾಮಾದಿಕಙ್ಗಳೈಯುಮ್, ಇಙ್ಗೇಕ್ರಿಯಮಾಣ ಮೆನ್ಗಿರದು.**

---

ಅಥವಾ ಮನಸ್ಸು ಯಾವುದೋ ಒಂದನ್ನು ಜ್ಞಾಪಕಕ್ಕೆ ತಂದುಕೊಂಡು ಅಪರಾಧ ಸಂಕಲ್ಪವನ್ನು ಮಾಡಬಹುದು. ಇವೆಲ್ಲಾ **ಕ್ರಿಯಮಾಣಾ** – ಎಂಬುದರಲ್ಲೇ ಅಂತರ್ಗತವು.

ಪ್ರಾರಬ್ಧಕರ್ಮವನ್ನು ಅನುಭವಿಸುವದಕ್ಕಾಗಿಯೇ ಈ ಶರೀರವಾದುದರಿಂದ ಆರಬ್ಧಕಾರ್ಯಾ ಎಂಬುದೇನೋ ಸರಿ ಎಂದು ಹಿಂದೆ ಹೇಳಲ್ಪಟ್ಟಿತು. ಆರಬ್ಧವಲ್ಲದೆ ಅನಾರಬ್ಧವಾದುವು ಎರಡು ವಿಧವು ಎಂದು ಕ್ರಿಯಾ ಕರಿಷ್ಯಮಾಣಾ ಎಂದು ವಿಭಾಗಿಸಿ ಹೇಳಲ್ಪಟ್ಟವು. ಇದಲ್ಲದೆ ಅನಭ್ಯುಪಗತಪ್ರಾರಬ್ಧ ಬೇರೆ ಇರುತ್ತವೆ. ಹೀಗೆ ಎಲ್ಲವೂ **ಅಶೇಷತಃ** ಕ್ಷಮಸ್ವ ಎಂದು ಪ್ರಾರ್ಥಿಸಿರುತ್ತಾರೆ.

ಬುದ್ಧಿಪೂರ್ವಾಘಗಳಿಗೆ ಪ್ರಾಯಶ್ಚಿತ್ತವನ್ನು ವಿಧಿಸಿರುವದರಿಂದ ಅವು ಇಲ್ಲಿ ಸೇರಲಿಲ್ಲವು. ಈ ವಿಷಯವು ಶ್ರೀ ಭಾಷ್ಯದಲ್ಲೂ ವ್ಯಕ್ತವು. ಆದುದರಿಂದ ಕ್ರಿಯಮಾಣಾ ಎಂದು ಹೇಳುವದರಲ್ಲಿ ಮುಖ್ಯವಾಗಿ ಪ್ರಾಮಾದಿಕವಾಗಿ ಬುದ್ಧಿಪೂರ್ವಕವಾಗಿ ನಡೆಯದೇ ಇರುವ ಪಾಪಗಳೇ ಕರಿಷ್ಯಮಾಣಾ ಎಂದು ಹೇಳಿದರ ಅಭಿಪ್ರಾಯವೆಂದು ತಿಳಿಸುತ್ತಾರೆ—**ಇಪ್ಪಡಿ ಇರುಕ್ಕೆ** – ಪ್ರಪನ್ನನು ಶರಣಾಗತಿಯನ್ನು ಅನುಷ್ಠಿಸುವ ಕಾಲದಲ್ಲೇ ಅಪರಾಧಗಳನ್ನು ಮಾಡದೇ ಇರುವಾಗ, **ಕ್ರಿಯಮಾಣಙ್ಗಳೈಕ್ಷಮಿಕ್ಕೆ** – ಕ್ರಿಯಮಾಣಗಳನ್ನು ಕ್ಷಮಿಸೋಣವೆಂಬುದು, **ಯಾವುದೆನ್ನಿಲ್**– ಯಾವುದೆಂದರೆ ? ಕ್ರಿಯಮಾಣಾ, ಕರಿಷ್ಯಮಾಣಾ ಎಂಬುವಗಳಿಗಿರುವ ವ್ಯತ್ಯಾಸವನ್ನು ತೋರಿಸುತ್ತಾರೆ **ಪ್ರಾರಬ್ಧಃ** ಎಂದರೆ ಹಿಂದೆ ಆರಂಭಿಸಲ್ಪಟ್ಟಿದ್ದಾಗಿಯೂ, **ಅಪರಿಸಮಾಪ್ತಶ್ಚ** – ಅವು ಇನ್ನೂ ಮುಗಿಯದೇ ಇರುವದಾಗಿಯೂ ಇರುವುವೆ **ವರ್ತಮಾನಃ** – ಈಗಿನವು ಎಂದು ಹೇಳಲ್ಪಡುವುವು" ಎಂದು **ಪಕ್ರಿಯೈಯಾಲೇ**– ಹೇಳಿರುವ ನ್ಯಾಯದ ಪ್ರಕಾರ **ಪ್ರಪತ್ತಿಕ್ಕು ಮುನ್ಬೇತೊಡಙ್ಗಿ** – ಪ್ರಪತ್ತಿಗೆ ಮುಂದೆಯೇ ಆರಂಭಿಸಿ, **ಪಿನ್ಬೇತಲೈಕಟ್ಟುವೇಣ್ಡುಮ್ಪಡಿ** – ಅನಂತರವೂ ಅಂಟಿದವು ಎಂದು ಹೇಳುವ ಹಾಗೆ **ಚಿರಕಾಲಸಾಧ್ಯಮಾಯಿರುಕ್ಕುಮವತ್ತೈಯುಮ್** – ಬಹುಕಾಲವನುಸರಿಸಿ ಬರುವುವುಗಳನ್ನೂ, ಇಙ್ಗು – ಶ್ರೀ ಭಾಷ್ಯಕಾರರು ಈ ಸಂದರ್ಭವಲ್ಲಿ, **ಕ್ರಿಯಮಾಣಙ್ಗಳೆನ್ಗಿರದು** – **ಕ್ರಿಯಮಾಣಾ ಕ್ಷಮಸ್ವ** ಎಂದು ಪ್ರಾರ್ಥಿಸಿರುವದು. ಇವೂ ಪ್ರಾರಬ್ಧದಲ್ಲೇ ಸೇರಿದವು, ಪ್ರಪತ್ತಿಗೆ

ಮುಂದೆಯೇ ಆರಂಭಿಸಿದವುಗಳಾಗಿ, ಬಹುಕಾಲವನ್ನುಸರಿಸಿ ಬಂದು ಮುಂದೆ ಫಲವನ್ನು ಅನುಭವಿಸತಕ್ಕವುಗಳಾಗಿರುವದನ್ನೇ ಕ್ರಿಯಮಾಣವೆಂದು ಹೇಳಿದರು ಎಂಬ ಭಾವವು.

**ಈ ಕ್ರಿಯಮಾಣಾ** - ಎಂದು ಹೇಳಿರುವದರಲ್ಲೇ ಮುಂದೆ ಪ್ರಾಮಾದಿತವಾಗಿ ಮಾಡುವ ಅಪರಾಧಗಳೂ ಸೇರಿದವು ಎಂದೇ **ತಕ್ಷಣತ್ತಿಲ್ ಪ್ರಾಮಾದಿಕಙ್ಗಳೈಯುಮ್** ಎಂಬ ವಾಕ್ಯ ಖಂಡದಿಂದ ತಿಳಿಸುತ್ತಾರೆ. ಪ್ರಪದನಕ್ಕೆ **ಅನುಕೂಲ್ಯಸಙ್ಕಲ್ಪವೂ** ಪ್ರಾತಿಕೂಲವರ್ಜನೆಯೂ ಅಙ್ಗಗಳು, ಆದುದರಿಂದ **ತಕ್ಷಣತ್ತಿಲ್** - ಆ ಪ್ರಪತ್ತಿಯನ್ನು ಅನುಷ್ಠಿಸುವ ಅಲ್ಪಕಾಲದಲ್ಲಿ ಉಂಟಾಗಬಹುದಾದ ಮತ್ತು **ಪ್ರಾಮಾದಿಙ್ಗಳೈಯುಮ್** - ಬುದ್ಧಿಪೂರ್ವವಲ್ಲದ ಅಪರಾಧಗಳನ್ನೂ, **ಇಙ್ಗೇ - ಈ** ಸಂದರ್ಭದಲ್ಲಿ **ಕ್ರಿಯಮಾಣಮೆಙ್ಗಿರದು** - ಕ್ರಿಯಮಾಣವೆಂದು ಹೇಳಿರುವದು, ಕೆಲವರು ಅಭಿಪ್ರಾಯಪಡುವಹಾಗೆ ಬುದ್ಧಿಪೂರ್ವಕಾಪರಾಧಗಳನ್ನೂ ಸೇರಿಸಿ ಶ್ರೀಯತಿವರ್ಯರು ಪ್ರಾರ್ಥಿಸಿರುತ್ತಾರೆ ಎಂದು ತಾತ್ಪರ್ಯವಲ್ಲವೆಂಬ ಭಾವವು. ಏಕೆಂದರೆ ಅವರು ಶ್ರೀ ಭಾಷ್ಯದಲ್ಲೇ (೪. ೧. ೧೩) **"ತದಧಿಗಮೇ"** ಎಂಬ ಬ್ರಹ್ಮಸೂತ್ರವ್ಯಾಖ್ಯಾನದಲ್ಲಿ ಅಪ್ಪಣೆಕೊಡಿಸಿರುತ್ತಾರೇನೆಂದರೆ **"ತದಿದಂ ಅಶ್ಲೇಷವಾಚನಂ ಪ್ರಾಮಾದಿವಿಷಯಂ ಮನ್ತವ್ಯಮ್.** ಉಪಾಯಾನುಷ್ಠಾನದಿಂದ ಮುಂದೆ ಮಾಡುವ ಅಪರಾಧವು ಲೇಪಿಸುವದಿಲ್ಲವೆಂಬುದು ಪ್ರಾಮಾದಿಕ ಅಪರಾಧಗಳು ಮಾತ್ರ ವಿಷಯವಾದುದೆಂದು ಬರೆದಿರುತ್ತಾರೆ—ಮನಃಪೂರ್ವಕವಾಗಿ ಮಾಡುವ ಅಪರಾಧಕ್ಕೆ ಪುನಶ್ಶರಣಾಗತಿಯು ವಿಧಿಸಿರುತ್ತದೆ ಇದನ್ನು ಹಿಂದೆಯೇ ಆಚಾರ್ಯರವರು **"ಧೀಪೂರ್ವೋತ್ತರ ಮಜನಸಾತ್ ಜಾತೇಪಿತತನ್ನಿಷ್ಕೃತೇಃ ಕೌಟಿಲ್ಯೇಸತಿ ಶಿಕ್ಷಯಾ ಪ್ಯನಘಯನ್ನೋಽಡೀಕರೋತ್ರಿ ಪ್ರಭುಃ"** ಎಂದು ಉಪದೇಶಿಸಿರುತ್ತಾರೆ. ಪ್ರಪನ್ನನು ಬುದ್ಧಿಪೂರ್ವಕವಾಗಿ ಮಾಡುವ ಅಪರಾಧಗಳು ಭರನ್ಯಾಸದಿಂದ ಪರಿಹಾರವಾಗುವದಿಲ್ಲವು ಪುನಶ್ಶರಣಾಗತಿಯಿಂದ ಪರಿಹಾರವು. ಹಾಗೆ ಅನುಷ್ಠಿಸದೇ ಇದ್ದರೆ ಶಿಕ್ಷೆಯು ಎಂದು ಹೇಳಲ್ಪಟ್ಟಿರುತ್ತದೆ. ಪುನಶ್ಶರಣಾಗತಿಯಿಂದ ತತ್ಪರಿಹಾರವು ಈ ಲೋಕದ ನ್ಯಾಯಾಧಿಪತಿಗಳಲ್ಲದ ಗುಣವು ಅದೂ ಕೂಡ ಸರ್ವೇಶ್ವರನ ದಯಾ ಪ್ರೇರಿತಕ್ಷಮಾಗುಣ ಫಲವೇ. **ಅಶೇಷತಃ** ಕ್ಷಮಸ್ವ ಎಂದು ಹೇಳಿರುವದು ಪಾಪಗಳಿಗೆ ಬಹುವಾದ ಶಕ್ತಿಗಳುಂಟೆಂಬುದು ಸೂಚಿಸಲ್ಪಟ್ಟಿವು. ಅವು ಯಾವುವೆಂದರೆ ಜ್ಞಾನತಿರೋಧಾನವಾಗಿ ಮುಂದೆ ಪುನಃ ಅಪರಾಧ ನಡೆಸೋಣವು, ಸತ್ಕಾರ್ಯಮಾಡಲು ಅವಕಾಶಕೊಡದೇ ಇರೋಣವು, ಕೆಟ್ಟದ್ದರಲ್ಲಿ ರುಚಿಯನ್ನುಂಟುಮಾಡೋಣವು, ಇವಕ್ಕೆಲ್ಲಾ ವಾಸನಾಸಂಬಂಧ ಉಂಟು. **ಕ್ಷಮಸ್ವ** ಎಂಬುದರಿಂದ ಪಾಪಕ್ಕಾಗಿ ಶಿಕ್ಷಿಸುವ ನಿಗ್ರಹ

**ಕರಿಷ್ಯಮಾಣಙ್ಗಳಾವನ ? ಪಿನ್ಬುತುಡಙ್ಗುಮವೈ. ಇಪ್ಪಡಿ ಕ್ರಿಯಮಾಣೈಕ ದೇಶಙ್ಗಳಾಯುಮ್, ಕರಿಷ್ಯಮಾಣಙ್ಗಳಾಯುಮುಳ್ಳ ಉತ್ತರಾಘುತ್ತಿಲ್ ಬುದ್ಧಿಪೂರ್ವಕಮಲ್ಲಾದವೈ ಈಶ್ವರರ್ ಕ್ಷಮಿಕ್ಕ, ಶ್ಲೇಷಿಯಾದೆ ಪೋಮ್.**

---

ನಿವೃತ್ತಿಯುಂಟಾಗಿ, ಕರುಣೆಯಿಂದ ಪ್ರಸನ್ನನಾಗಿ ಕ್ಷಮಾಗುಣ ಮೂಲಕ ಕ್ಷಮಿಸೋಣವು.

ಅಪರಾಧವು ಭಾಗವತಾಪಚಾರರೂಪವಾದರೆ ಆ ಭಾಗವತ ಪ್ರಸನ್ನತೆಯ ಮೂಲಕವಾಗಿಯೇ ಸರ್ವೇಶ್ವರನು ಕ್ಷಮಿಸೋಣವು, "**ನಾಭಾಗತನಯಂ ಶರಣಾಂಯಾಹಿ ಅಹಂ ಭಕ್ತಪರಾಧೀನಃ**" ಎಂದು ಹೇಳಿ ಅಂಬರೀಷೋಪಾಖ್ಯಾನದಲ್ಲಿ ದುರ್ವಾಸ ಋಷಿಯು ಮಾಡಿದ ಅಪರಾಧವನ್ನು ಕ್ಷಮಿಸೋಣವು. ಶ್ರೀ ಲಕ್ಷ್ಮಣನು ಹಾಗೆಯೇ ಪರಮ ಭಾಗವತನಾದ ಸುಗ್ರೀವನ ಮೂಲಕ ಕ್ಷಮಾಪಣೆಯನ್ನು ಕೇಳಿಕೊಂಡಿರುತ್ತಾನೆ—"**ಮಯಾ ತ್ವಂ ಪುರುಷಾಣ್ಯುಕ್ತಃ ತಚ್ಚ ತ್ವಂ ಕ್ಷಂತುಮರ್ಹಸಿ**" ಇಲ್ಲಿಯೂ ಕ್ಷಮಿಸುವನು ಸರ್ವೇಶ್ವರನೇ.

ಮುಂದೆ **ಕರಿಷ್ಯಮಾಣಾ ಕ್ಷಮಸ್ವ** ಎಂದು ಹೇಳಿದರಲ್ಲಾ, ಅವು ಯಾವುವು ಎಂಬುದನ್ನು ತಿಳಿಸುತ್ತಾರೆ—**ಕರಿಷ್ಯಮಾಣಙ್ಗಳಾವನ** - ಕರಿಷ್ಯಮಾಣಗಳು ಯಾವುವು ? ಅದಕ್ಕೆ ಉತ್ತರ-**ಪಿನ್ಬುತುಡಙ್ಗುಮವೈ** - ಪ್ರಪತ್ತಿ ಕಾಲಕ್ಕೆ ಮುಂದಿನ ಕಾಲದಲ್ಲಿ ಪ್ರಾರಂಭಿಸಿ ಮಾಡುವ ಅಪರಾಧಗಳು. ಇವು ಎರಡುವಿಧ ಬುದ್ಧಿಪೂರ್ವಕವಾದವು, ಅಬುದ್ಧಿಪೂರ್ವಕವಾದವು ಎಂದು ಮುಂದೆ ಹೇಳುತ್ತಾರೆ. **ಇಪ್ಪಡಿ ಕ್ರಿಯಮಾಣೈಕದೇಶಙ್ಗಳಾಯುಮ್** - ಹೀಗೆ ಹಿಂದೆ ಉಪದೇಶಿಸಿದ ರೀತಿಯಲ್ಲಿ ಪ್ರಪದನದ ಪೂರ್ವಕಾಲದಲ್ಲಿ ಮಾಡಬೇಕಾಗಿದ್ದ ಒಂದು ಭಾಗವಾಗಿ ಇದ್ದ ಸಂಚಿತ ಅಪರಾಧಗಳು ; ಇವುಗಳ ವಿನಾಶವುಂಟು ಪ್ರಪತ್ತಿಯ ಮೂಲಕವೆಂದು "ತದಧಿಗಮೇ" ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವದು ; ಮತ್ತು **ಕರಿಷ್ಯಮಾಣಙ್ಗಳಾಯುಮುಳ್ಳ** - ಪ್ರಪತ್ತ್ಯನುಷ್ಠಾನವಾದನಂತರ ಮಾಡಬಹುದಾದ **ಉತ್ತರಾಘುತ್ತಿಲ್** - ಉತ್ತರಾಪರಾಧಗಳಲ್ಲಿ, **ಬುದ್ಧಿಪೂರ್ವಕಮಲ್ಲಾದವೈ**- ಬುದ್ಧಿಪೂರ್ವಕಮಾಡದೇ ಇರುವವು. **ಈಶ್ವರರ್ ಕ್ಷಮಿಕ್ಕ** - ಸರ್ವೇಶ್ವರನು ಕ್ಷಮಿಸಲಾಗಿ, **ಶ್ಲೇಷಿಯಾದೇಪೋಮ್**-ಲೇಪಿಸದೆ ಹೋಗುವುವು.

**ಬುದ್ಧಿಪೂರ್ವಕಙ್ಗಳಾನವೈ ಪ್ರಪನ್ನನುಕ್ಕು (೧) "ಪ್ರಾಯಶ್ಚಿತ್ತಿರಿಯುಂ ಸಾತ್ರಯತ್ಪುನ ಶ್ಶರಣಂವ್ರಜೇತ್" ಎಙ್ಗೈಯಾಲೇ ಪುನಃ ಪ್ರಪತ್ತಿಯಾಲೇ ಶಮಿಕ್ಕುಮ್,**

ಇದರಿಂದ **"ತದಧಿಗಮ ಅಶ್ಲೇಷವಿನಾಶೌ ಪೂರ್ವೋತ್ತರಾಘಯೋಃ"** ಎಂಬ (ಬ್ರ. ಸೂ. ೪. ೧. ೧೩) ಬ್ರಹ್ಮಸೂತ್ರದಲ್ಲಿ ಹೇಳಿರುವದನ್ನು ಸಂಗ್ರಹಿಸಿ ಹೇಳಿದರು.

ಅಬುದ್ಧಿ ಪೂರ್ವಕಗಳಾದ ಅಪರಾಧಗಳು ಮಾತ್ರ ಲೇಪಿಸುವದಿಲ್ಲವೆಂದು ಶ್ರೀ ಯತಿವರ್ಯರು ಹಾಗೆಯೇ ಹೇಳಿರುವದನ್ನು ತಿಳಿಸಿರುತ್ತಾರೆ. ಹಾಗಾದರೆ ಪ್ರಪದನಾನುಷ್ಠಾನಾನಂತರ ಬುದ್ಧಿ ಪೂರ್ವಕವಾಗಿ ಮಾಡಿದ ಅಪರಾಧಗಳು ತೊಲಗುವ ಬಗೆ ಹೇಗೆ? ಎಂದರೆ ಹಿಂದೆ ಅಪರಾಧ ಪರಿಹಾರಾಧಿಕಾರದಲ್ಲಿ ಹೇಳಿರುವದನ್ನೇ ಪುನಃ ಅನುವಾದ ಮುಖೇನ ಹೇಳುತ್ತಾರೆ.—**ಬುದ್ಧಿಪೂರ್ವಕಙ್ಗಳಾನವೈ** - ಬುದ್ಧಿ ಪೂರ್ವಕಗಳಾಗಿ ಮಾಡಿದ ಪ್ರಪದನದ ಉತ್ತರ ಕಾಲದ ಪಾಪಗಳನ್ನು, **ಪ್ರಪನ್ನನುಕ್ಕು** - ಪ್ರಪನ್ನನಿಗೆ, **ಯತ್ಪುನಶ್ಶರಣಂವ್ರಜೇತ್** - ಪುನಃ ಪಾಪ ಪರಿಹಾರಕ್ಕೋಸ್ಕರವೇ ಸಂಕಲ್ಪಿಸಿ ಮಾಡುವ ಶರಣಾಗತಿಯು ಯಾವುದುಂಟೋ ಅದೇ **ಪ್ರಾಯಶ್ಚಿತ್ತಿರಿಯುಂ** - ಈ ಬುದ್ಧಿ ಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತವು" **ಎಙ್ಗೈಯಾಲೇ,** ಎಂದು ಹೇಳಿರುವದರಿಂದ, **ಪುನಃ ಪ್ರಪತ್ತಿಯಾಲೇ** - ಪುನಃ ಆಚಾರ್ಯರನ್ನು ಆಶ್ರಯಿಸಿ ಶರಣಾಗತಿಯನ್ನನುಷ್ಠಿಸುವದರಿಂದ, **ಶಮಿಕ್ಕುಮ್** - ಶಮನವಾಗುತ್ತದೆ, ನಿವಾರಣವಾಗುತ್ತದೆಂಬ ಭಾವವು. (೧೩೭ ನೆಯ ಪುಟವನ್ನು ನೋಡಿ). ಹಾಗೆ ಶರಣಾಗತಿಯನ್ನು ಬುದ್ಧಿ ಪೂರ್ವೋತ್ತರಾಘ ಶಮನಕ್ಕಾಗಿ ಅನುಷ್ಠಿಸದೇ ಹೋದರೆ **"ಲಘುರ್ದಂಡಃ. ಪ್ರಪನ್ನಸ್ಯರಾಜಪುತ್ರಾಪರಾಧವತ್"** ಲಘುವಾದ ಶಿಕ್ಷೆಯನ್ನು ರಾಜಪುತ್ರನು ಮಾಡಿದ ಅಪರಾಧಕ್ಕೆ ಹೇಗೋ ಹಾಗೆ ಅನುಭವಿಸಬೇಕು ಎಂದು ಅಲ್ಲಿಯೇ ಉಪಪಾದಿಸಿ ಕೊನೆಯಲ್ಲಿ **"ಕಾಟಿಲ್ಯೇಸತಿ ಶಿಕ್ಷಯಿತ್ವಾಪ್ಯನಘಯನ್ ಕ್ರೋಡೀಕರೋತಿಪ್ರಭುಃ"** ಎಂಬಲ್ಲಿ ಹೇಳಿರುತ್ತಾರೆ (೧೬೦೭ ನೆಯ ಪುಟ ನೋಡಿ)

ಮುಂದಿನ ವಾಕ್ಯಗಳಿಗೆ ಸಾರದೀಪಿಕೆಯವರು ಈ ಅವತಾರಿಕೆಯನ್ನು ಕೊಟ್ಟಿರುತ್ತಾರೇನೆಂದರೆ **"ಅವನಿ ನನ್ನೈಪ್ಪೆರ ನಿನ್ನೈಕ್ಕುವೆನ್ಬೋದುಪಾತ ಕಮು ವಿಲಕನ್ರು ಎಙ್ಗರ ಪಾಶುರತ್ತಿನ್ ಆಪಾತ ಪ್ರತೀತಾರ್ಥತ್ತೈನಿರಸಿಕ್ಕರಾಶ್"** ಎಂದು ಹೇಳಿರುತ್ತಾರೆ. ಆ ಪಾಶುರದ ಮೇಲೆ ಮಾತ್ರ ತೋರುವ ಅರ್ಥವು ಸರಿಯಲ್ಲವೆಂದು ಆ ಅರ್ಥವನ್ನು ನಿರಸನಮಾಡುತ್ತಾರೆ. ಮೇಲೆ ತೋರುವ ಅರ್ಥವು ಎಲ್ಲಾ

(೧) ಲಕ್ಷ್ಮೀಧರ್ಮ ೧೭. ೯೩

**ಬುದ್ಧಿಪೂರ್ವಕಙ್ಗಳಾನವೈ ಪ್ರಪನ್ನನುಕ್ಕು** (೧) **"ಪ್ರಾಯಶ್ಚಿತ್ತಿರಿಯುಂ ಸಾತ್ರಯತ್ಪುನ ಶ್ಶರಣಂವ್ರಜೇತ್" ಎಙ್ಗ್ರಯಾಲೇ ಪುನಃ ಪ್ರಪತ್ತಿಯಾಲೇ ಶಮಿಕ್ಕುಮ್,**

ಇದರಿಂದ **"ತದಧಿಗಮ ಉತ್ತರಪೂರ್ವಾಘಯೋಃ ಅಶ್ಲೇಷವಿನಾಶೌ"** ಎಂಬ (ಬ್ರ. ಸೂ. ೪. ೧. ೧೩) ಬ್ರಹ್ಮಸೂತ್ರದಲ್ಲಿ ಹೇಳಿರುವದನ್ನು ಸಂಗ್ರಹಿಸಿ ಹೇಳಿದರು.

ಅಬುದ್ಧಿ ಪೂರ್ವಕಗಳಾದ ಅಪರಾಧಗಳು ಮಾತ್ರ ಲೇಪಿಸುವದಿಲ್ಲವೆಂದು ಶ್ರೀ ಯತಿವರ್ಯರು ಹಾಗೆಯೇ ಹೇಳಿರುವದನ್ನು ತಿಳಿಸಿರುತ್ತಾರೆ. ಹಾಗಾದರೆ ಪ್ರಪದನಾನುಷ್ಠಾನಾನಂತರ ಬುದ್ಧಿ ಪೂರ್ವಕವಾಗಿ ಮಾಡಿದ ಅಪರಾಧಗಳು ತೊಲಗುವ ಬಗೆ ಹೇಗೆ? ಎಂದರೆ ಹಿಂದೆ ಅಪರಾಧ ಪರಿಹಾರಾಧಿಕಾರದಲ್ಲಿ ಹೇಳಿರುವದನ್ನೇ ಪುನಃ ಅನುವಾದ ಮುಖೇನ ಹೇಳುತ್ತಾರೆ.—**ಬುದ್ಧಿಪೂರ್ವಕಙ್ಗಳಾನವೈ** - ಬುದ್ಧಿ ಪೂರ್ವಕಗಳಾಗಿ ಮಾಡಿದ ಪ್ರಪದನದ ಉತ್ತರ ಕಾಲದ ಪಾಪಗಳನ್ನು, **ಪ್ರಪನ್ನನುಕ್ಕು** - ಪ್ರಪನ್ನನಿಗೆ, **ಯತ್ಪುನಶ್ಶರಣಂವ್ರಜೇತ್** - ಪುನಃ ಪಾಪ ಪರಿಹಾರಕ್ಕೋಸ್ಕರವೇ ಸಂಕಲ್ಪಿಸಿ ಮಾಡುವ ಶರಣಾಗತಿಯು ಯಾವುದುಂಟೋ ಅದೇ **ಪ್ರಾಯಶ್ಚಿತ್ತಿರಿಯುಂ** - ಈ ಬುದ್ಧಿ ಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತವು" **ಎಙ್ಗ್ರಯಾಲೇ,** ಎಂದು ಹೇಳಿರುವದರಿಂದ, **ಪುನಃ ಪ್ರಪತ್ತಿಯಾಲೇ** - ಪುನಃ ಆಚಾರ್ಯರನ್ನು ಆಶ್ರಯಿಸಿ ಶರಣಾಗತಿಯನ್ನನುಷ್ಠಿಸುವದರಿಂದ, **ಶಮಿಕ್ಕುಮ್** - ಶಮನವಾಗುತ್ತದೆ, ನಿವಾರಣವಾಗುತ್ತದೆಂಬ ಭಾವವು. (೧೫೩೨ ನೆಯ ಪುಟವನ್ನು ನೋಡಿ). ಹಾಗೆ ಶರಣಾಗತಿಯನ್ನು ಬುದ್ಧಿ ಪೂರ್ವೋತ್ತರಾಘ ಶಮನಕ್ಕಾಗಿ ಅನುಷ್ಠಿಸದೇ ಹೋದರೆ **"ಲಘುರ್ದಂಡಃ, ಪ್ರಪನ್ನಸ್ಯರಾಜಪುತ್ರಾಪರಾಧವತ್"** ಲಘುವಾದ ಶಿಕ್ಷೆಯನ್ನು ರಾಜಪುತ್ರನು ಮಾಡಿದ ಅಪರಾಧಕ್ಕೆ ಹೇಗೋ ಹಾಗೆ ಅನುಭವಿಸಬೇಕು ಎಂದು ಅಲ್ಲಿಯೇ ಉಪಪಾದಿಸಿ ಕೊನೆಯಲ್ಲಿ **"ಕೌಟಿಲ್ಯೇಸತಿ ಶಿಕ್ಷಯಿತ್ವಾಪ್ಯನಘಯನ್ ಕ್ರೋಡೀಕರೋತಿಪ್ರಭುಃ"** ಎಂಬಲ್ಲಿ ಹೇಳಿರುತ್ತಾರೆ (೧೬೦೬ ನೆಯ ಪುಟ ನೋಡಿ)

ಮುಂದಿನ ವಾಕ್ಯಗಳಿಗೆ ಸಾರದೀಪಿಕೆಯವರು ಈ ಅವತಾರಿಕೆಯನ್ನು ಕೊಟ್ಟಿರುತ್ತಾರೇನೆಂದರೆ "**ಅವನಿವನ್ನೈಪ್ಪೆರ ನಿನ್ನೈಕ್ಕುಮ್ಪೋದುಪಾತಕಮುಂ ವಿಲಕನ್ರು ಎಙ್ಗರ ಪಾಶುರತ್ತಿನ್ ಆಪಾತ ಪ್ರತೀತಾರ್ಥತ್ತೈನಿರಸಿಕ್ಕರಾರ್**" ಎಂದು ಹೇಳಿರುತ್ತಾರೆ. ಆ ಪಾಶುರದ ಮೇಲೆ ಮಾತ್ರ ತೋರುವ ಅರ್ಥವು ಸರಿಯಲ್ಲವೆಂದು ಆ ಅರ್ಥವನ್ನು ನಿರಸನಮಾಡುತ್ತಾರೆ. ಮೇಲೆ ತೋರುವ ಅರ್ಥವು ಎಲ್ಲಾ

(೧) ಲಕ್ಷ್ಮೀಧರ್ಮ ೧೭. ೬೩

**ಪ್ರಿಯತಮೈ ಯುಡಂಬಿ ಅಳಕ್ಕುಮ್, ವತ್ಸತ್ತಿನ್ ವಳವುಪ್ಪೋಲೆ ಪ್ರಪನ್ನನುಡೈಯ ದೋಷಮೆಜ್ಜರ ವಾರ್ತ್ತೈಯುಮ್ ಶರಣಾಗತರಾನಾಲ್ ಈಶ್ವರರ್ ಕೈವಿಡಾದೇತ್ತಿರುತ್ತ ಮೆನ್ರಪಡಿ.**

ವಾಗುವಪದರಿಂದ ಸರಿಯಾದ ಅಭಿಪ್ರಾಯವನ್ನು ತಿಳಿಸುತ್ತಾರೆ. **ಪ್ರಿಯತಮೈ ಯುಡಂಬಿ ಅಳುಕ್ಕುಮ್** – ಪ್ರಿಯತಮಳಾದ ಹೆಂಡತಿಯ ಶರೀರದ ಕೊಳೆಯು ಗಂಡನಿಗೆ ಹೇಗೆ ಭೋಗ್ಯವೋ, **ವತ್ಸತ್ತಿನುಡೈಯ ವಳವುಮ್ಪೋಲೆ** – ಆಗ ತಾನೇ ಹುಟ್ಟಿದ ಕರುವಿನ ಮೈಮೇಲಿರುವ ಗರ್ಭಚೀಲದ ಕೊಳೆಯು ತಾಯಿಯಾದ ಹಸುವಿಗೆ ಹೇಗೆ ಭೋಗ್ಯವಾಗಿ ನೆಕ್ಕುತ್ತದೋ ಹಾಗೆಯೇ, **ಪ್ರಪನ್ನನುಡೈಯ ದೋಷಮೆಜ್ಜರ** – ಪ್ರಪನ್ನನ ಅಪರಾಧಗಳೂ (ಸರ್ವೇಶ್ವರನಿಗೆ ತುಂಬಾ ಭೋಗ್ಯ ವಾದುವು) **ಎನ್ರುಮ್** – ಎನ್ನುವ ಮಾತೂ ಸಹ, ಎಂದು ಇತರರು ಅಭಿಪ್ರಾಯ ಪಡುವ ಹಾಗಲ್ಲವೆಂದು ಶ್ರೀ ದೇಶಿಕರವರು ಅದಕ್ಕೆ ಸರಿಯಾದ ಅರ್ಥವನ್ನು ಹೇಳುತ್ತಾರೆ. ಹೇಗೆಂದರೆ **ದುಷ್ಟರುಮ್ ಶರಣಾಗತರಾನಾಲ್** - ದುಷ್ಟರೂ ಸ್ವಾಮಿಯಲ್ಲಿ ಶರಣಾಗತಿಯನ್ನನುಷ್ಠಿಸಿದರೆ, **ಈಶ್ವರನ್ ಕೈವಿಡಾದೆ** - ಈಶ್ವರನು ಆತನು ದುಷ್ಟನಾಗಿದ್ದನೆಂದು ಕೈಬಿಡದೆ ತ್ಯಜಿಸದೇ, **ತಿರುತ್ತಮೆನ್ರಪಡಿ**-ಮುಂದಕ್ಕೆ ಸರಿಯಾದ ಮಾರ್ಗದಲ್ಲಿರುವ ಹಾಗೆ ಮಾಡುವನು ಎಂಬ ಅಭಿಪ್ರಾಯವು. ಶ್ರೀ ರಾಮಚಂದ್ರ ಪ್ರಭುವೂ ಹಾಗೆಯೇ ಹೇಳಿರುತ್ತಾರೆ:—**ಆನಯೈನಂ ಹರಿ ಶ್ರೇಷ್ಠ ದತ್ತಮಸ್ಯಾಭಯಂಮಯಾ| ವಿಭೀಷಣೋವಾ ಸುಗ್ರೀವ ಯದಿ ವಾ ರಾವಣ ಸ್ಸಯಮ್"** ಈಗ ವಿಭೀಷಣನೇನೋ ಸುಕೃತಿಯು, ಆತನಿಗೆ ಅಭಯವು ನ್ಯಾಯವು. ಒಂದು ವೇಳೆ ಪರಮದುಷ್ಕೃತಿಯಾದ ರಾವಣನೇ ಶರಣಾಗತನಾದರೋ ಆತನಿಗೂ ಅಭಯವನ್ನೇ ಕೊಡತಕ್ಕವನು ತಾನು ಎಂದು ಹೇಳಿಕೊಂಡಿರುತ್ತಾರೆ. **ಈಶ್ವರರ್ ಕೈವಿಡರ್** ಎಂಬುದಕ್ಕೂ ದೃಷ್ಟಾಂತವಾಗಿ ಹೇಳಿಗುತ್ತಾರೆ. ಶರಣಾಗತನು ಮಿತ್ರಭಾವದಿಂದ ಬಂದವನು | ಅಂತವನನ್ನು **"ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ | ದೋಷೋಯದ್ಯಪಿ ತಸ್ಯಸ್ಯಾತ್ ಸತಾಮೇತದಗರ್ಹಿತಮ್"** ಎಷ್ಟೇ ದೋಷಿಯಾಗಿದ್ದರೂ ಆತನು ಶರಣಾಗತನಾಗಿ ಬಂದನೇ ಎಂಬ ವಾತ್ಸಲ್ಯದಿಂದ ಆತನನ್ನು ತ್ಯಜಿಸಲಾರನೆಂದೂ ಹೇಳಿರುತ್ತಾರೆ. ಕರುವಿನ ಶರೀರದ ಕೊಳೆಯನ್ನು ಪರಿಗಣಿಸಿದೇ ಹಸುವು ಅದನ್ನು ನೆಕ್ಕುವದು ವತ್ಸಲತ್ವವು. ಹಾಗೆ ಶರಣಾಗತನಲ್ಲಿ ಸ್ವಾಮಿಗೆ ವಾತ್ಸಲ್ಯವೆಂಬ ಭಾವವು. ಈ ಮೇಲಿನ ವಾಕ್ಯದ ಅಭಿಪ್ರಾಯವು ಬುದ್ಧಿಪೂರ್ವೋತ್ತರಾಘದ ವಿಷಯವಲ್ಲವು. ಸಂಚಿತ ಎಲ್ಲಾ ಪೂರ್ವಾಘಗಗಳ ವಿಷಯವೆಂದು ಮುಂದೆ ತಿಳಿಸುತ್ತಾರೆ.—

ಹಾಗಲ್ಲದೆ ಬುದ್ಧಿಪೂರ್ವೋತ್ತರಾಘಗಳನ್ನು ಪ್ರಪನ್ನನು ಮಾಡಿದರೂ ಅವೂ

**ಇಜ್ಞನನ್ರಿಕ್ಕೇ ಬುದ್ಧಿಪೂರ್ವೋತ್ತರಾಘಮುಮ್ ಈಶ್ವರನುಕ್ಕು ಭೋಗ್ಯಮಾಮೆನ್ರು ವಿವಕ್ಷಿತಮಾಗಿಲ್ ಪ್ರಪನ್ನನುಕ್ಕಿದುವೇ ಯಥಾಶಕ್ತಿ ಸಂಪಾದ್ಯಮಾಮ್.**

ಕೂಡ ಸರ್ವೇಶ್ವರನಿಗೆ ಭೋಗ್ಯವೆಂದು ಅರ್ಥಮಾಡಿದರೆ ಅಪಾರ್ಥವಾಗುತ್ತದೆಂದು ತಿಳಿಸುತ್ತಾರೆ. ಈ ವಿಷಯವನ್ನೆಲ್ಲಾ ನಿಪುಣತರವಾಗಿ ವಿಸ್ತರವಾಗಿ ಪ್ರಭಾವ ವ್ಯವಸ್ಥಾಧಿಕಾರದಲ್ಲಿ ಹೇಳಿರುತ್ತಾರೆ (೨೬೯೭ನೆಯ ಪುಟದಿಂದ ಪರಾಂಬರಿಸಬಹುದು, ಹಾಗಾದರೆ ಇಲ್ಲಿ ಏತಕ್ಕೆ ? ಪುನರುಕ್ತಿಯಲ್ಲವೋ, ಅಲ್ಲಿ ಉಪಪಾದಿಸಿರುವದು **ಸರ್ವ ಧರ್ಮಾ೯** ಎಂಬರ್ಥದ ಉಪಪಾದನೆಯಲ್ಲಿ. ಇಲ್ಲಿ **ಸರ್ವ ಪಾಪೇಭ್ಯಃ** ಎಂಬುದರ ಉಪಪಾದನೆಯಾದುದರಿಂದ ಪುನರುಕ್ತಿಯಾಗುವದಿಲ್ಲ. ಅದೂ ಅಲ್ಲದೆ ಒಬ್ಬ ಮಹನೀಯರ ಅಭಿಪ್ರಾಯಕ್ಕೆ ಸರಿಯಾದ ಅರ್ಥವನ್ನು ಮಾಡತಕ್ಕದ್ದೆಂದು ತಿಳಿಸುವದಕ್ಕಾಗಿ ಎಂದು ಭಾವಿಸತಕ್ಕದ್ದು.

**ಇಜ್ಞನನ್ರಿಕ್ಕೇ** - ಈಗ ತಾವು ಆ ವಾಕ್ಯಕ್ಕೆ ಅರ್ಥಮಾಡಿದ ಹಾಗೆ ಗ್ರಹಿಸದೇ, **ಬುದ್ಧಿಪೂರ್ವೋತ್ತರಾಘವೂ ಕೂಡ, ಈಶ್ವರ ನಕ್ಕು** -- ಸರ್ವೇಶ್ವರನಿಗೆ, **ಭೋಗ್ಯಮಾಮೆನ್ರು** - ಭೋಗ್ಯವಾದುವಾಗುವುವು ಎಂದು **ವಿವಕ್ಷಿತಮಾಗಿಲ್** - ಹೇಳತಕ್ಕದ್ದು ಎಂಬುದು ಭಾವನೆಯಾದರೆ, **ಪ್ರಪನ್ನನುಕ್ಕು** - ಪ್ರಪನ್ನನಿಗೆ, **ಇದುವೇ** - ಹೀಗೆ ಬುದ್ಧಿಪೂರ್ವಕವಾಗಿ ಅಪರಾಧ ಮಾಡುವವೇ, **ಸಂಪಾದ್ಯ ಮಾಮ್** - ಸ್ವಾಮಿಗೆ ಭೋಗ್ಯವಾಗಿ ಅವಕ್ಕಾಗಿ ಆತನಿಗೆ ನಿಗ್ರಹ ಸಙ್ಕಲ್ಪ ಉಂಟಾಗದೇ ಇರುವದರಿಂದ ಈ ಪ್ರಪನ್ನನಿಗೆ **ಯಥಾಶಕ್ತಿ** - ತನ್ನ ಶಕ್ತ್ಯನುಗುಣವಾಗಿ **ಸಂಪಾದ್ಯಮಾಮ್** - ಸಂಪಾದನೆಗೆ ಹೇತುವಾಗಬಹುದು, ಅನುಕೂಲವಾಗಬಹುದೆಂಬ ತಾತ್ಪರ್ಯವು. ಉತ್ತರಾಘಗಳು ಸರ್ವೇಶ್ವರನಿಗೆ ಭೋಗ್ಯವಾದುದರಿಂದ, ಯಥಾಶಕ್ತಿ ಉತ್ತರಾಘಗಳನ್ನು ಸಂಪಾದಿಸಿಕೊಳ್ಳತಕ್ಕದೆಂಬ ಅಭಿಪ್ರಾಯವಾಗುತ್ತದೆ. ಅಥವಾ ಒಬ್ಬನನ್ನು ಪೀಡಿಸಿ ದ್ರವ್ಯವನ್ನು ಕಸಕೊಂಡು ಜೀವನ ಮಾಡಬಹುದೆಂದಾಗುತ್ತದೆ.

ಬುದ್ಧಿಪೂರ್ವೋತ್ತರಾಘವು ಸಂಭವಿಸಿ ಅದಕ್ಕಾಗಿ ಪ್ರಾಯಶ್ಚಿತ್ತರೂಪದಲ್ಲಿ ಪುನಃ ಪ್ರಪತ್ತಿಯನ್ನು ರಾಜಸ ತಾಮಸ ಸ್ವಭಾವಪ್ರೇರಿತರಾಗಿ ಮಾಡಿಕೊಳ್ಳದಿದ್ದರೆ ಅಂತವರನ್ನು ಕೂಡ, ತನ್ನನ್ನು ಒಂದು ಸಲ ಆಶ್ರಯಿಸಿದರೇ ಎಂಬ ಪ್ರೀತಿಯಿಂದ ಅವರುಗಳನ್ನು ನರಕಭಾಕ್ಕಾಗಿ ಮಾಡದೆ ಅಲ್ಪಶಿಕ್ಷೆಯನ್ನು ಕೊಟ್ಟು ಕಾಪಾಡುವದೂ ಕೂಡ ಸರ್ವೇಶ್ವರನ ಕ್ಷಮಾಗುಣ ಮಹಿಮೆಯೇ ಎಂದು ಸಪ್ರಮಾಣವಾಗಿ ತಿಳಿಸುತ್ತಾರೆ—**ಪ್ರಕೃತಿ ವಿಶೇಷಸ್ವಭಾವತ್ತಾಲೇ** - ದೇಹದ ರಾಜಸ ತಾಮಸ ಗುಣಗಳಿಂದ, ಪ್ರಕೃತಿಗೆ ತ್ರಿಗುಣವೆಂದು ಹೆಸರು ; ತ್ರಿಗುಣವು

**ಪ್ರಕೃತಿ ವಿಶೇಷಸ್ಸ್ವಭಾವತ್ತಾಲೇ ಅಪರಾಧಙ್ಗಳ್ ಬುದ್ಧಿಪೂರ್ವಕವಾಗ ವನ್ದಾಲುಮ್ ಪುನಃ ಪ್ರಪತ್ತಿ ಪಣ್ಣಾದಾರ್ ಪಕ್ಕಲಿಲುಮ್ " (೧) ದೇವಂ ಶಾರ್ಙ್ಗಧರಂ ವಿಷ್ಣುಮ್‌ಯೇ ಪ್ರಪನ್ನಾಃ ಪರಾಯಣಮ್। ನತೇಷಾಂ ಯಮ ಸಾಲೋಕ್ಯಂ ನಚತೇ ನರಕೌಕಸಃ॥" (೨) "ಯಸ್ಮಿನ್‌ಕಸ್ಮಿನ್ ಕುಲೇಜಾತಾ ಯತ್ರಕುತ್ರ ನಿವಾಸಿನಃ। ವಾಸುದೇವರತಾ ನಿತ್ಯಂ ಯಮ ಲೋಕಂನಯಾನ್ತಿತೇ॥" ಇತ್ಯಾದಿಗಳಿರ್ ಪಡಿಯೇ ನರಕಾದಿಗಳ್ ವಾರಾದ ಪಡಿಪಣ್ಣಿ ರಾಜಪುತ್ರಾದ್ಯಪರಾಧತ್ತಿರ್ ಪೋಲೇ ಲಘುಪ್ರತ್ಯವಾಯತ್ತಾಲೇ ಕಣ್ಣಳಿಕ್ಕಿರುದುವುಮ್ ಕ್ಷಮಾವಿಶೇಷಮ್.**

ಯಾವುದು ? ಸಾತ್ವಿಕ ರಾಜಸ ತಾಮಸಗುಣಗಳು ; ಅದರಲ್ಲಿ ಸಾತ್ವಿಕವು ತಲೆ ಎತ್ತಿದ್ದರೆ ಬುದ್ಧಿಪೂರ್ವೋತ್ತರಾಘಕ್ಕೆ ಮನಗೊಡನು ; ಒಂದು ವೇಳೆ ಏನೋ ಅತಿಕ್ರಮದಿಂದ ನಡೆದು ಹೋದರೆ ಅದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಯತ್ನಿಸುವನು ; ಹಾಗೆ ಯತ್ನಿಸದೇ ಇರುವ ಸ್ವಭಾವ ಹೇಳಬೇಕಾಗಿರುವದರಿಂದ ಹಾಗೇ ಅರ್ಥವು ; **ಅಪರಾಧಙ್ಗಳ್** - ಅಪರಾಧಗಳು, **ಬುದ್ಧಿಪೂರ್ವಕವಾಗ ವಂದಾಲುಮ್,** ಬುದ್ಧಿಪೂರ್ವಕವಾಗಿ ಪ್ರಾಪ್ತವಾದರೂ, **ಪುನಃ ಪ್ರಪತ್ತಿಪಣ್ಣಾ ದಾರ್** - ಅವುಗಳ ನಿವಾರಣೆಗಾಗಿ ಪ್ರಾಯಶ್ಚಿತ್ತ ರೂಪದಲ್ಲಿ ಪುನಃ ಪ್ರಪತ್ತಿಯನ್ನು ಅನುಷ್ಠಿಸದೇ ಇರುವ, **ಪಕ್ಕಲಿಲೇ**-ವಿಷಯದಲ್ಲಿ, **ದೇವಂ**-ಲೀಲಾವಿಭೂತಿಯಲ್ಲಿ ಕ್ರೀಡಿಸುವ, **ಶಾರ್ಙ್ಗಧರಂ**-ಶಾರ್ಙ್ಗವೆಂಬ ಧನಸ್ಸನ್ನು ಧರಿಸಿರುವ, ವಿಷ್ಣುವನ್ನು **ಪರಾಯಣಮ್** - ಶ್ರೇಷ್ಠನಾದ ಆಧಾರ ಗತಿ ಎಂದು ಪ್ರಪನ್ನರು ಆಶ್ರಯಿಸಿದರೆ **ತೇಷಾಂ**-ಅವರಿಗೆ, **ಯಮಸಾಲೋಕ್ಯಂ**-ಯಮನೊಂದಿಗೆ ಆತನ ಲೋಕವನ್ನು ಹೊಂದೋಣವು, **ನ** - ಇಲ್ಲವು. ಮತ್ತು **ತೇ** - ಅವರಿಗೆ **ನರಕೌಕಸಃ** - ನರಕ ವಾಸವು, **ನ** - ಇಲ್ಲವು" (೩) ಇದು ಹಿಂದೆಯೇ ಉದಾಹೃತವು ೧೪೮ನೆಯ ಪುಟ ನೋಡಿ. **ಯಸ್ಮಿನ್‌ಕಸ್ಮಿನ್‌ಕುಲೇಜಾತಾಃ** - ಯಾವುದೋ ಒಂದು ಕುಲ ದಲ್ಲಿ ಹುಟ್ಟಿದವರಾದರೂ, **ಯತ್ರಕುತ್ರನಿವಾಸಿನಃ** - ಎಲ್ಲೋ ಒಂದು ಕಡೆಯಲ್ಲಿ, ಮೂಲೆಯಲ್ಲಿ ವಾಸಮಾಡುವರಾದರೂ, **ನಿತ್ಯಂವಾಸುದೇವರತಾಃ** - ನಿತ್ಯವೂ ವಾಸುದೇವನಲ್ಲೇ ನಿರತರಾಗಿದ್ದರೆ, **ಯಮಲೋಕಂ ನಯಾನ್ತಿತೇ** - ಅವರು ಗಳು ಯಮಲೋಕವನ್ನು ಕುರಿತು ಹೋಗುವದಿಲ್ಲವು" **ಇತ್ಯಾದಿಗಳಿರ್ ಪಡಿಯೇ**- ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವಹಾಗೆ, **ನರಕಾದಿಗಳ್** - ನರಕ ಪ್ರಾಪ್ತಿ ಮೊದಲಾದ ಶಿಕ್ಷೆಗಳು, ಇಲ್ಲಿ ಆದಿಶಬ್ದದಿಂದ ನಾನಾ ವಿಧ ಜನ್ಮಗಳು ಹೇಳ ಲ್ಪಟ್ಟವು. **ವಾರಾದಪಡಿಪಣ್ಣಿ** - ಬಾರದ ಹಾಗೆ ಮಾಡಿ, **ರಾಜಪುತ್ರಾದ್ಯಪರಾ**

(೧) ವಾಮನ ಪುರಾಣ ೯೪. ೪೩. (೨)

**ಪಾಪಙ್ಗಳುಕ್ಕು ದೃಷ್ಟಪ್ರತ್ಯವಾಯಙ್ಗಳುಮ್, ನರಕಾದಿಪ್ರತ್ಯವಾಯಙ್ಗಳುಂ, ಉಣ್ಡಾಯಿರುಕ್ಕ ನರಕಾದಿಗಳ್ ಇವನುಕ್ಕಿಲ್ಲೇ ಎನ್ರು ವಿಶೇಷವಚಧತ್ತಿರ್ ಪೋಲೇ** – ರಾಜಪುತ್ರನೇ ಮೊದಲಾದವರು ಮಾಡಿದ ಅಪರಾಧದ ಹಾಗೆ, ರಾಜನ ಬಂಧು ಮಿತ್ರ ಸಹೋದರರೂ ಮತ್ತು ಆತನ ಮಂತ್ರಿಶ್ರೇಷ್ಠ ಮೊದಲಾದವರು ಆದಿಶಬ್ದದಿಂದ ಹೇಳಲ್ಪಟ್ಟರು. **ಲಘುಪ್ರತ್ಯವಾಯತ್ತಾಲೇ-ಕಂಜಾ ಭವಂತಿ, ಕಾಣಾ ಭವಂತಿ ಅವಿಧೇಯಪುತ್ರಾ ಭವಂತಿ** ಇತ್ಯಾದಿ ಲಘುಶಿಕ್ಷೆಯ ಮೂಲಕ, **ಕಣ್ಣಳಿಕ್ಕಿರದುವುಮ್** – ಕಣ್ಣು ಸಂಜ್ಞೆಯ ಮೂಲಕ ಅಲ್ಪದಂಡನೆಯನ್ನು ಕೊಡುವದೂ ಕೂಡ **ಕ್ಷಮಾವಿಶೇಷಮ್** – ಸರ್ವೇಶ್ವರನು ಪ್ರಪನ್ನಾನುಗ್ರಹಕ್ಕಾಗಿ ತೋರಿದ ಕ್ಷಮಾಗುಣವಿಶೇಷವೇ.

ಹೀಗೆ ಪ್ರಪನ್ನನಿಗೆ ಎಂದಿಗೂ ನರಕ ಬಾಧೆಯೂ ಇಲ್ಲವು. ಜನ್ಮಾಂತರವೂ ಇಲ್ಲವೆಂದು ಪ್ರಮಾಣ ಪೂರ್ವಕವಾಗಿ ತಿಳಿಸಿದರು. ಇದರ ಮೇಲೆ ಒಂದು ಪೂರ್ವ ಪಕ್ಷವನ್ನು ವಾದರೂಪವಲ್ಲಿ ತರಬಹುದೇನೆಂದರೆ ? ನರಕಪ್ರಾಪ್ತಿಯನ್ನುಂಟುಮಾಡುವ ಅಪರಾಧಗಳನ್ನೇ ಸರ್ವೇಶ್ವರನು ಕ್ಷಮಿಸಿದನಂತರ, ಈ ಅಲ್ಪಶಿಕ್ಷೆಯಿಂದಲೂ ಕ್ಷಮಿಸಲಾರನೋ. ಆದುದರಿಂದ ಬುದ್ಧಿಪೂರ್ವೋತ್ತರಾಘಗಳನ್ನೆಲ್ಲಾ ಲಘುಶಿಕ್ಷೆಯಿಲ್ಲದೇನೆ ಕ್ಷಮಿಸುವನು ಎಂದು ಏಕೆ ಹೇಳಕೂಡದು ? ಎಂದಾಕ್ಷೇಪತಂದರೆ ಅದಕ್ಕೆ ಸಮಾಧಾನ ಹೇಳುತ್ತಾರೆ. ಅದೂ ಅಲ್ಲದೆ ಲಘುಶಿಕ್ಷೆಯಿಂದ ಕುಂಟನಾಗುವುದು, ಕುರುಡನಾಗುವದು ಇತ್ಯಾದಿಕ್ಲೇಶಗಳನ್ನು ಕೆಲವು ಬುದ್ಧಿಪೂರ್ವೋತ್ತರಾಘಗಳನ್ನು ಮಾಡಿದವರಲ್ಲಿ ಕಾಣಬರಲಿಲ್ಲವು. ಹೀಗಿರುವಾಗ ಅದಕ್ಕಾಗಿ ಪುನಃ ಪ್ರಪತ್ತಿಯನ್ನು ವಿಧಿಸುವದೂ, ಪುನಃ ಪ್ರಪತ್ತಿಮಾಡಿದವರಿಗೆ ಅಲ್ಪಶಿಕ್ಷೆಯನ್ನು ಹೇಳುವದು ಯಾವ ನ್ಯಾಯವು ಎಂದಾಕ್ಷೇಪತಂದರೆ, ಅವುಗಳನ್ನುಪಪಾದಿಸಿ, ಸಮಾಧಾನವನ್ನು ಹೇಳುತ್ತಾರೆ—ಪಾಪಗಳನ್ನು ಮಾಡಿದರೆ ಇಲ್ಲಿಯಾದರೂ ಶಿಕ್ಷೆಯೂ ಮತ್ತು ನರಕಾದಿಗಳ ಪ್ರಾಪ್ತಿಯೂ ಉಂಟಾಗಬಹುದು. ನರಕಾದಿಗಳಿಲ್ಲವೆಂದರೆ ಇಲ್ಲಿಯೂ ಶಿಕ್ಷೆಯೂ ಇಲ್ಲವೆಂದು ಏಕೆ ಹೇಳಕೂಡದು ? ಎಂಬ ವಾದ ನ್ಯಾಯತಂದರೆ **"ನಹಿವಚನವಿರೋಧೇ ನ್ಯಾಯಃಪ್ರವರ್ತತೇ"** ಎಂಬ ಉಕ್ತಿಯಪ್ರಕಾರ ವಾದರೂಪನ್ಯಾಯವು ಪ್ರಮಾಣವಚನಗಳನ್ನು ಹೊಡೆಯಲಾರದು ಎಂದು ಸಮಾಧಾನ ಹೇಳುತ್ತಾರೆ.

**ಪಾಪಙ್ಗಳುಕ್ಕು** – ಪಾಪಗಳಿಗೆ ಎಂದರೆ ಪಾಪಗಳನ್ನು ಮಾಡಿದರೆ, **ದೃಷ್ಟಪ್ರತ್ಯವಾಯಙ್ಗಳುಮ್** – ನಮಗೆ ತೋರಿಬರುವ ಕ್ಲೇಶಗಳೂ ಮತ್ತು **ನರಕಾದಿಪ್ರತ್ಯವಾಯಙ್ಗಳುಮ್** – ನರಕಪ್ರಾಪ್ತಿ, ಪುನರ್ಜನ್ಮ ಮೊದಲಾದ ಪ್ರತ್ಯವಾಯಗಳು ಎಂದರೆ ಶಿಕ್ಷೆಗಳು, **ಉಣ್ಡಾಯಿರುಕ್ಕ** – ಉಂಟಾಗಿರುವಾಗ **ನರಕಾದಿಗಳ್**-

**ನಙ್ಗಳ್ ಶೊನ್ನಾಲ್, ದೃಷ್ಟಪ್ರತ್ಯವಾಯಙ್ಗಳುಕ್ಕು ಬಾಧಕರಿಲ್ಲೈ; ವಚನ ವಿರೋಧತ್ತಿಲ್ ನ್ಯಾಯಮ್ ಪ್ರವರ್ತ್ತಿಯಾದು. ಸಾಪರಾಧರುಮಾಯ್ ಅನುತಾಪಮುನ್ರಿಕ್ಕೇ ಪುನಃ ಪ್ರಪತ್ತಿಯುಮ್ ಪಣ್ಣಾದೇ ಇರುಪ್ಪಾರ್ ಶಿಲ**

ನರಕವೇ ಮೊದಲಾದವುಗಳು, **ಇವನುಕ್ಕು** – ಈ ಬುದ್ಧಿಪೂರ್ವೋತ್ತರಾಘವನ್ನು ಸಂಪಾದಿಸಿಕೊಂಡ ಪ್ರಪನ್ನನಿಗೆ, **ಇಲ್ಲೈ ಎನ್ರು** – ಇಲ್ಲವೆಂದು, **ವಿಶೇಷವಚನ ಙ್ಗಳ್ ಶೊನ್ನಾಲ್** – ವಿಶೇಷ ಪ್ರಮಾಣಗಳನ್ನು ಹೇಳಿದರೆ, **ದೃಷ್ಟಪ್ರತ್ಯವಾಯ ಙ್ಗಳುಕ್ಕು** – ನಮಗೆ ಕಾಣುವ ಅಲ್ಪಶಿಕ್ಷೆಗಳಿಲ್ಲವೆಂಬ, **ಬಾಧಕರಿಲ್ಲೈ** – ಪ್ರಮಾಣ ವಚನಗಳಿಗೆ ಬಾಧೆಯನ್ನು ತರುವರಿಲ್ಲವೆಂದು ನರಕಾದಿಗಳಿಲ್ಲವೆಂದರೆ ದೃಷ್ಟಪ್ರತ್ಯ ವಾಯಗಳೂ ಇಲ್ಲವೆಂದು ಹೇಳಲು ಹೇಗೆ ಸಾಧ್ಯವು. ದೃಷ್ಟಪ್ರತ್ಯವಾಯಗಳೂ ಉಂಟೆಂಬ ಪ್ರಮಾಣವಚನಗಳಿಗೆ ವಿರೋಧವಾಗಿ ನ್ಯಾಯವನ್ನು ತರಲು ಸಾಧ್ಯ ವಿಲ್ಲವೆನ್ನುತ್ತಾರೆ.—**ವಚನವಿರೋಧತ್ತಿಲ್** – ಪ್ರಮಾಣವಚನದ ವಿರೋಧವಾಗಿ **ನ್ಯಾಯಮ್** – ವಾದನ್ಯಾಯವು; **ಪ್ರವರ್ತ್ತಿಯಾದು** – ಪ್ರವರ್ತಿಸಲಾರದು. ಪ್ರಮಾಣಕ್ಕೂ ವಾದಕ್ಕೂ ಪರಸ್ಪರ ವಿರೋಧ ತೋರಿದರೆ ಪ್ರಮಾಣಕ್ಕೆ ಪ್ರಾಶಸ್ತ್ಯ ವೇವಿನಾ ವಾದಕ್ಕಲ್ಲವು. ಇದು ಓಂದೆಯೂ ಉಪಪಾದಿಸಲ್ಪಟ್ಟಿರುತ್ತದೆ. ತಾವು ಪ್ರಮಾಣಶರಣರೆಂದೂ, ಆದುದರಿಂದ ಬರೀ ತರ್ಕಕ್ಕೆ ತಾವು ಗಮನ ಕೊಡುವದಿಲ್ಲ ವೆಂದೂ, ಹೇಳಿಕೊಂಡಿರುತ್ತಾರೆ. ತರ್ಕಕ್ಕೆ ಶಾಸ್ತ್ರಪ್ರಮಾಣವಚನ ಬಲವಿದ್ದರೆ ಅಂತಹ ತರ್ಕವು ಗ್ರಾಹ್ಯವಾಗಿ ಸತ್ತರ್ಕವೆನಿಸುತ್ತದೆ. ಶಾಸ್ತ್ರವಚನಕ್ಕೆ ವಿರು ದ್ಧವು ಕುತರ್ಕವು. ಇದು **"ತರ್ಕಾಪ್ರತಿಷ್ಠಾನಾತ್"** ಬ್ರಹ್ಮಸೂತ್ರದಲ್ಲೂ ಉಪ ಪಾದಿತವು. **"ಆರ್ಷಂಧರ್ಮೋಪದೇಶಂ ಚ ವೇದಶಾಸ್ತ್ರಾವಿರೋಧಿನಾ। ಯಸ್ತರ್ಕೇಣಾನುಸಂಧತ್ತೇ ಸಧರ್ಮಂ ವೇದ ನೇತರಃ"** ಎಂಬುದು ಅನು ಸಂಧೇಯವು. ಶ್ರುತಿಯಲ್ಲಿ **ಕಂಜಾಭವಂತಿ ಕಾಣಾಭವಂತಿ** ಎಂದು ಹೇಳಿದ್ದರೂ ಅವು ಕೆಲವು ಪ್ರಪನ್ನರ ಅಪರಾಧದಲ್ಲಿ ಕಾಣದೇ ಹೋದರೂ, ಅಂತಹ ಅಪರಾಧ ಗಳು ಸರ್ವೇಶ್ವರನಿಗೆ ಭೋಗ್ಯವಾಗಿ ಅವುಗಳಿಗೆ ಶಿಕ್ಷಿಸನು ಎಂದು ಹೇಳಲು ಸಾಧ್ಯ ವಿಲ್ಲವು. ಏಕೆಂದರೆ ಆ ದೃಷ್ಟಪ್ರತ್ಯವಾಯಗಳು ನಾನಾ ವಿಧ ಕ್ಲೇಶಗಳ ರೂಪ ದಲ್ಲಿ ಉಂಟಾಗಬಹುದೆಂದು ಮುಂದೆ ತಿಳಿಸುತ್ತಾರೆ. **ಸಾಪರಾಧರುಮಾಯ್** – ಪ್ರಪತ್ತ್ಯನಂತರ ಬುದ್ಧಿಪೂರ್ವಕವಾಗಿ ಅಪರಾಧ ಮಾಡಿದವರಾದರೂ, **ಅನುತಾಪ ಮುನ್ರಿಕ್ಕೇ** – ಅಯ್ಯೋ ಮಾಡಿಬಿಟ್ಟೆನೇ ಕೆಟ್ಟುಹೋದನೇ ಎಂಬ ಅನುತಾಪ ವಿಲ್ಲದೆಯೂ, **ಪುನಃ ಪ್ರಪತ್ತಿಯುಮ್ ಪಣ್ಣಾದೆ ಇರುಪ್ಪಾರ್** – ಅದಕ್ಕೆ ಪ್ರಾಯಶ್ಚಿತ್ತರೂಪದಲ್ಲಿ ಪುನಃ ಪ್ರಪತ್ತಿಯನ್ನು ಅನುಷ್ಠಿಸದೇ ಇರುವ, **ಶಿಲಪ್ರಪ ನ್ನರ್ ಕ್ಕು** – ಕೆಲವು ಪ್ರಪನ್ನರಿಗೆ, **ಉಪಕ್ಲೇಶಙ್ಗಳಾಗ ಚ್ಚೊನ್ನ** – ದುಃಖಪ್ರಾಪ್ತಿ

**ಪ್ರಪನ್ನರ್ಕ್ಕು ಉಪಕ್ಲೇಶಙ್ಗಳಾಗ · ಚೊನ್ನಕಾಣತ್ವಾದಿ ದೃಷ್ಟಪ್ರತ್ಯವಾಯಙ್ಗಳ್, ಕಾಣಾದಿರಾ ನಿನ್ರೋಮೆನ್ಗೈಮನ್ದಚೋದ್ಯಮ್. ಅವರ್ಗಳುಕ್ಕುಮ್ ಅಪರಾಧಾದಿ ತಾರತಮ್ಯತ್ತುಕ್ಕೇಡಾಗ ನಾನಾ ಪ್ರಕಾರ ತಾಪತ್ರಯಾನುಭವಮ್, ಉಪಯುಕ್ತ ಜ್ಞಾನಮಾಂದ್ಯಮ್, ಇಙ್ಗುಳ್ಳಭಗವ**

---

ಉಂಟಾಗುತ್ತದೆಂದು ಹೇಳಲ್ಪಟ್ಟ, **ಕಾಣತ್ವಾದಿ** - ಕಣ್ಣುಕಾಣದೆ ಹೋಗೋಣ, ಆದಿಶಬ್ದದಿಂದ ಕುಂಟಾಗೋಣ, ಅವಿಧೇಯಪುತ್ರಗಳೇ ಮೊದಲಾದವು ಹೇಳಲ್ಪಟ್ಟವು, ಇವೇ ಮೊದಲಾದ, **ದೃಷ್ಟಪ್ರತ್ಯವಾಯಙ್ಗಳ್** - ಕಣ್ಣಿಗೆ ತೋರಿಬರುವ ಕ್ಲೇಶಗಳು, **ಕಾಣಾದಿರಾನಿನ್ರೋಃ** - ಕಾಣಬರುವದಿಲ್ಲವಲ್ಲಾ, **ಎಙ್ಗೈ** - ಎಂದು ವಾದವನ್ನು ತರುವದು, **ಮನ್ದಚೋದ್ಯಮ್** - ಜ್ಞಾನ ಶೂನ್ಯರ ಪೂರ್ವಪಕ್ಷವು. ಪ್ರಪನ್ನರು ಅಪರಾಧಿಗಳೆಂಬುದು ತಿಳಿಯುವದು ; ಅವರುಗಳಿಗೆ ಕಣ್ಣು ಹೋಗಿಲ್ಲಾ ಕಾಲೂ ಕುಂಟಿಲ್ಲಾ ಸುಖವಾಗಿಯೇ ಇದ್ದಾರೆ. ಆದುದರಿಂದ ಪ್ರಪನ್ನರು ಅನಂತರ ಅಪರಾಧಿಗಳಾದರೆ ಸರ್ವೇಶ್ವರು ಮನ್ನಿಸಿ ಬಿಡುವನು ; ಪುನಃ ಪ್ರಪತ್ತಿ ಮೊದಲಾದವುಗಳು ಯಾವುವೂ ಬೇಕಾಗಿಲ್ಲವೆಂದು ಹೇಳುವ ಪೂರ್ವಪಕ್ಷವು ಜ್ಞಾನಶೂನ್ಯರ ಮಾತು ಎಂದು ಹೇಳಿ ಮುಂದಕ್ಕೆ ಅವರುಗಳು ಮಾಡಿದ ಅಪರಾಧ ತಾರತಮ್ಯಕ್ಕನುಗುಣವಾಗಿ ಶಿಕ್ಷೆಯನ್ನು ನಾನಾ ವಿಧವಾಗಿ ಉಂಟುಮಾಡುವನೆಂದು ಹೇಳುತ್ತಾರೆ. **ಅನುತಾಪಮುನ್ರಿಕ್ಕೇ** ಎಂದು ಏತಕ್ಕೆ ಹೇಳಿದರು ? ಎಂದರೆ "**ಅನುತಾಪಾದುಪರಮಾತ್ ಪ್ರಾಯಶ್ಚಿತ್ತೋನ್ಮುಖಾತ್ತತಃ। ತತ್ಪೂರಣಾಚ್ಚಾಪರಾಧಾಸ್ಸರ್ವೇ ನಶ್ಯನ್ತಿ ಪಾದಶಃ** (೧೫೯ ನೆಯ ಪುಟನೋಡಿ) ಎಂಬಲ್ಲಿ ಹೇಳಿರುವಹಾಗೆ ಬುದ್ಧಿಪೂರ್ವೋತ್ತರಾಘಮಾಡಿದ ಶಿಕ್ಷೆಯಿಂದ ತಪ್ಪಿಸಿಕೊಳ್ಳಬೇಕಾದರೆ, ಅಯ್ಯೋ ಪಾಪ ಮಾಡಿದನೇ ಎಂಬ (೧) ಅನುತಾಪ ಪ್ರಥಮತಃಬೇಕು, (೨) ಇನ್ನು ಮುಂದೆ ಇಂತಹ ಪಾಪಮಾಡುವದಿಲ್ಲವೆಂಬ ನಿರ್ಧರವು (೩) ಇದಕ್ಕೆ ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂಬ ಸಙ್ಕಲ್ಪ (೪) ಅದಕ್ಕಾಗಿ ಪ್ರಾಯಶ್ಚಿತ್ತ ಪೂರಣವಾಗಿ ಶರಣಾಗತಿಯು ; ಹೀಗೆ ಮಾಡಿದರೆ ಶಿಕ್ಷೆ ತಪ್ಪುತ್ತೆ. ಕಾಲು ಕಾಲು ಭಾಗವಾಗಿ ಶಿಕ್ಷೆಯು ತೊಲಗುತ್ತದೆಂಬ ಭಾವವು. ಅಂತಹ ಮನ್ದ್ಯಚೋದ್ಯಕ್ಕೆ ಪರಿಹಾರ ಹೇಳುತ್ತಾರೆ **ಅವರ್ಗಳುಕ್ಕುಮ್** - ಆ ಪಾಪರಾಧಿಗಳಾದ ಪ್ರಪನ್ನರಿಗೂ, **ಅಪರಾಧಾದಿ ತಾರತಮ್ಯಕ್ಕೇಡಾಗ** - ಅಪರಾಧವೇ ಮೊದಲಾದ ತರತಮ ಭಾಗಕ್ಕೆ ಸರಿಯಾದ **ನಾನಾ ಪ್ರಕಾರ ತಾಪತ್ರಯಾನುಭವಮ್** - ನಾನಾ ವಿಧವಾದ ತಾಪತ್ರಗಳ ಅನುಭವವೂ, **ಉಪಯುಕ್ತಜ್ಞಾನ ಮಾಂದ್ಯಮ್** - ಪ್ರಪನ್ನನಿಗೆ ಬೇಕಾದ ಜ್ಞಾನಕ್ಕೆ ಸಂಕೋಚವೂ **ಇಙ್ಗುಳ್ಳಭಗವದನುಭವರಸ ಸಂಕೋಚವಿಚ್ಛೇದಙ್ಗಳ್** - ಇಲ್ಲಿಯೇ ತನಗಿದ್ದ ಭಗವದಾರಾಧನಾನುಭವ ಆನಂದ ಸಂಕೋಚ ಮತ್ತು

**ಸಂಕೋಚ ವಿಚ್ಛೇಧಙ್ಗಳ್ ಭಗವದ್ಭಾಗವತ ಕೈಂಕರ್ಯರಸ ವಿಚ್ಛೇದಮ್, ಭಗವದಪಚಾರ ಭಾಗವತಾಪಚಾರಾದಿಗಳ್, ಶಿಷ್ಟ ಬಹಿಷ್ಕಾರಾದಿಗಳ್, ಸುಕೃತ ವಿಶೇಷನಾಶಮ್, ಸಾತ್ವಿಕಾನಾದರಮ್, ಮನೋರಥ ಭಂಗ ಕ್ಲೇಶಮ್, ಎನ್ರಿಪ್ಪುಡೈಗಳಿಲ್ ಏದೇನುಮೊರು ಉಪಕ್ಲೇಶರೂಪಮಾನ ಪ್ರತ್ಯವಾಯ್ ಕಾಣಲಾಮ್.**

**ಅಕೃತ್ಯಕರಣ ಕೃತ್ಯಾಕರಣ (ಣಾದಿ) ರೂಪಙ್ಗಳಾನ ನಾನಾ ವಿಧ**

---

ಇಲ್ಲದೇ ಹೋಗೋಣ (ಇದು ಈತನ ಇಂದ್ರಿಯ ದೌರ್ಬಲ್ಯಾದಿ, ವ್ಯಾಧಿ, ಅಶೌಚ ಮೊದಲಾದವುಗಳಿಂದ ಉಂಟಾಗಬಹುದು) **ಭಗವದ್ಭಾಗತ ಕೈಙ್ಕರ್ಯಸವಿಚ್ಛೇದಮ್** - ಭಗವದ್ಭಾಗವತ ಕೈಂಕರ್ಯದಿಂದುಂಟಾಗುವ ಆನಂದದಲ್ಲಿ ವಿಚ್ಛೇದವೂ, **ಭಗವದಪಚಾರ ಭಾಗವತಪಚಾರಾದಿಗಳ್**-ಭಗವದ್ಭಾಗವತಾಪಚಾರಾದಿಗಳೂ, **ಶಿಷ್ಟಗರ್ಹಾ ಬಹಿಷ್ಕಾರಾದಿಗಳುಮ್** - ಶಿಷ್ಟರಾದ ಜನರು ಹೀಯಾಳಿಸುವದೂ ಮತ್ತು ಪುನಃ ತಮ್ಮಲ್ಲಿ ಬಾರದ ಹಾಗೆ ಬಹಿಷ್ಕಾರಹಾಕೋಣವೂ, ಆದಿಶಬ್ದದಿಂದ ಪ್ರಾಯಶ್ಚಿತ್ತಮಾಡಿಕೊಂಡರೆ ಬರಬಹುದು ಇಲ್ಲವಾದರೆ ಕೂಡದು ಎಂದು ಆಜ್ಞಾಪಿಸುವದೂ, ಹೇಳಲ್ಪಟ್ಟಿತು., **ಸುಕೃತವಿಶೇಷನಾಶಮ್** - ಹಿಂದೆ ಮಾಡಿದ ಸುಕೃತ ಫಲರೂಪವಾಗಿ ಉಂಟಾದ ಸುಖದ ನಾಶವು, **ಸಾತ್ವಿಕಾನಾದರಮ್** - ಸಾತ್ವಿಕರಾದ ದೊಡ್ಡವರು ಅನಾದರದಿಂದ ಕಾಣೋಣವು, **ಮನೋರಥಭಂಗಕ್ಲೇಶಮ್**- ತನಗೆ ಉಂಟಾಗತಕ್ಕ ಮನೋರಥವು ತಪ್ಪಿ, ಅದರಿಂದ ಕ್ಲೇಶವೂ, **ಎನ್ರಿಪ್ಪುಡೈಗಳಿಲ್** - ಇವೇ ಮೊದಲಾದ ವಿಷಯಗಳಲ್ಲಿ, **ಏದೇನುಮೊರು ಉಪಕ್ಲೇಶರೂಪಮಾನ**- ಯಾವುದಾದುರೂ ಒಂದು ಖೇದರೂಪವಾದ, **ಪ್ರತ್ಯವಾಯಮ್, ಕಾಣಲಾಮ್** - ತೊಂದರೆಯನ್ನು ಕಾಣಬಹುದು. "**ಇಹೈವೇಷಾಂ ಕೇಚಿದುಪಪ್ಲವಾ ಭವಂತೀ**" ಎಂದು ಹೇಳಿದುದು ಸಾಮಾನ್ಯವಾಗಿ ಹೇಳಿ **ಖಂಜಾಭವಂತಿ ಕಾಣಾ ಭವಂತಿ** ಒಂದೆರಡು ನಿದರ್ಶನವಾಗಿ ತೋರಲ್ಪಟ್ಟವು. ಅಪರಾಧಗಳು ನಾನಾವಿಧವು. ಅವುಗಳಿಗೆ ಪ್ರಾಯಶ್ಚಿತ್ತಮಾಡಿಕೊಳ್ಳದಿದ್ದರೆ, ಉಪಕ್ಲೇಶಗಳು ಉಂಟಾಗುತ್ತವೆಂದು ಹೇಳಿದರು. ಮುಂದೆ **ಖಂಜಾಭವಂತೀ** ಇತ್ಯಾದಿ ಗೃಶ್ಯಫಲವನ್ನು ಹೇಳಿದುದು ಉಪಲಕ್ಷಣರೂಪದಲ್ಲಿ ಭಾವಿಸತಕ್ಕದ್ದು. ಹಾಗೆ ಕುಂಟ ಕುರುಡರಾಗದಿದ್ದರೆ ಸ್ವಾಮಿಯು ಬುದ್ಧಿಪೂರ್ವಕ ತಪ್ಪುಮಾಡಿದರೂಪ್ರಪನ್ನನನ್ನು ಮನ್ನಿಸಿದನೆಂದುಭಾವಿಸತಕ್ಕದ್ದಲ್ಲವು. ಅನೇಕ ವಿಧ ಶಿಕ್ಷೆಗಳಲ್ಲಿ ಯಾವದಾದರೂ ಒಂದು ವಿಧ ಕ್ಲೇಶವು ಪ್ರಾಪ್ತವಾಗುತ್ತದೆ.

**ಅಕೃತ್ಯಕರಣ** - ಮಾಡಬಾರದಾದ ದುಷ್ಕೃತ್ಯಗಳನ್ನು ಮಾಡೋಣವು, **ಕೃತ್ಯಾಕರಣ** - ಮಾಡಬೇಕಾದುದನ್ನು ಮಾಡದಿರುವದು, **ರೂಪಙ್ಗಳಾನ** ನಾನಾ ವಿಧ ಪಾಪಗಳಿಗೆ, **ಇಪ್ಪಡಿ** - ಮೇಲೆ ನಿರೂಪಿಸಿದ ರೀತಿಯಲ್ಲಿ, **ನಾನಾವಿಧ ದೃಷ್ಟ**

**ಪಾಪಙ್ಗಳಿಕ್ಕಿಪ್ಪಡಿ ನಾನಾವಿಧ ದೃಷ್ಟ ಪ್ರತ್ಯವಾಯ ಕರತ್ವಮುಮ್, ಶ್ರುತಿಗಳಿಲುಮ್ ಮನ್ವಾದಿ ಧರ್ಮಶಾಸ್ತ್ರಙ್ಗಳಿಲುಮ್, ಇತಿಹಾಸ, ಪುರಾಣ, ಭಗವಚ್ಛಾಸ್ತ್ರಾದಿಗಳಿಲುಮ್ ಪ್ರಸಿದ್ಧಮಾಕೈಯಾಲೇ ಕಾಣತ್ವಾದ್ಯುಪ ಕ್ಲೇಶವಿಶೇಷೋದಾಹರಣಂ ಉಪಲಕ್ಷಣಮೆನ್ನು ವಾಕ್ಯೋಪಕ್ರಮತ್ತಿಲ್ ಸಮು ವಾಕ್ಯೋಪಕ್ರಮತ್ತಿಲ್ ಸಮುದಾಯನಿರ್ದೇಶಗಳಾಲೇ ಸಿದ್ಧಮ್. ವಚನ**

---

**ಪ್ರತ್ಯವಾಯ ಕರತ್ವಮುಮ್** – ನಾನಾವಿಧ ತೋರಿಬರುವ ಕ್ಲೇಶಗಳನ್ನುಂಟು ಮಾಡೋಣವು, ಶ್ರುತಿಗಳಲ್ಲೂ ಮನುಧರ್ಮಶಾಸ್ತ್ರ ಮೊದಲಾದವುಗಳಲ್ಲೂ, ಇತಿಹಾಸ, ಪುರಾಣ, ಭಗವಚ್ಛಾಸ್ತ್ರವೆಂದರೆ ಪಾಂಚರಾತ್ರಾದಿಗಳಲ್ಲೂ **ಪ್ರಸಿದ್ಧಮಾಗೈಯಾಲೇ** – ಪ್ರಸಿದ್ಧವಾಗಿ ಹೇಳಿರುವದರಿಂದ, **ಕಾಣತ್ವಾದಿ ಉಪಕ್ಲೇಶೋದಾಹರಣಂ** – ಕಣ್ಣುಕಾಣದೇ ಹೋಗೋಣ ಮೊದಲಾದ ಉದಾಹರಣವು, **ಉಪಲಕ್ಷಣಮೆನ್ನು** – ಇವೆಲ್ಲಾ ಹೇಳುವದಕ್ಕೆ ಬದಲಾಗಿ ಹೇಳಿದ ಉದಾಹರಣೆಯಾಗಿ, **ಮೆನ್ನುಮಿಡಂ** – ಎಂದು ಹೇಳುವ ಸಂದರ್ಭದಲ್ಲಿ, **ವಾಕ್ಯೋಪಕ್ರಮತ್ತಿಲ್** – ಶ್ರುತಿಯು ಆರಂಭಿಸಿ ಹೇಳುವ ಸಂದರ್ಭದಲ್ಲಿ, **ಸಮುದಾಯನಿರ್ದೇಶತ್ತಾಲ್** – ಇಂತಹ ಉಪಕ್ಲೇಶಗಳು ಉಂಟಾಗುತ್ತವೆ ಎಂದು ಹೇಗೆಂದರೆ **"ಕೇಚಿದುಪಕ್ಲೇಶಾ ಭವಂತಿ"** ಕೆಲವು ಉಪಕ್ಲೇಶಗಳುಂಟಾಗುತ್ತವೆ ಎಂದು ಸಾಮಾನ್ಯವಾಗಿ ಹೇಳಿ, ಅನಂತರ **ಖಂಜಾಭವಂತಿ** ಎಂದು ಹೇಳಿರುವದರಿಂದಲೂ, ಇದನ್ನೇ ಉಪಬ್ರಹ್ಮಣಮಾಡಿ **"ತಸ್ಯಾಯುಕೀರ್ತಿ ರ್ಲಕ್ಷ್ಮೀಶ್ಚ ವಿದ್ಯಾಪ್ರಜ್ಞಾ ಚನಶ್ಯತಿ"** ಬುದ್ಧಿಪೂರ್ವೋತ್ತರವಾಗಿ ಪಾಪಮಾಡಿದ ಮನುಷ್ಯನ ಆಯುಸ್ಸು, ಕೀರ್ತಿ, ಸಂಪತ್ತೂ, ವಿದ್ಯಾ, ಪ್ರಜ್ಞಾ ಇವೆಲ್ಲಾವೂ ನಾಶವಾಗುತ್ತವೆಂದು ಹೇಳಿರುವದರಿಂದ, **ಸಿದ್ಧಮ್**– ಖಂಜತ್ವಾಗಳು ಉಪಲಕ್ಷಣವಾಗಿ ಹೇಳಿದ ಉಕ್ತಿ ಎಂಬುದು, **ಸಿದ್ಧಮ್** – ಸಿದ್ಧವು, ಹಾಗೆ ಉಪಲಕ್ಷಣವಿಲ್ಲದೆ ಇದ್ದರೆ ಸಮುದಾಯನಿರ್ದೇಶವಲ್ಲದೆ ಅಲ್ಲಿಯೂ ಕೂಡ **ಖಂಜಾಭವಂತಿ ಕಾಣಾಭವಂತಿ** ಎಂದೇ ಹೇಳಬೇಕಾಗಿತ್ತು. ಆದರೆ ಹಾಗೆ ಹೇಳದಿರುವದರಿಂದ ಉಪಲಕ್ಷಣವಾಗಿ ಹೇಳಲ್ಪಟ್ಟಿತೆಂಬ ಭಾವವು.

ಮುಂದೆ ಪೂರ್ವಪಕ್ಷಿಗಳು ಹೇಳಬಹುದೇನೆಂದರೆ—ಹಾಗೆ ಪ್ರಪನ್ನನಿಗೆ ಪ್ರಪದನಾನಂತರಂ ಉಪಕ್ಲೇಶಗಳು ಪ್ರಾಪ್ತವಾದರೆ, ಅವು ಬುದ್ಧಿಪೂರ್ವೋತ್ತರಾಘಗಳ ಫಲವೆಂದು ಹೇಳುವದಕ್ಕೆ ಬದಲಾಗಿ ಪ್ರಾರಬ್ಧಕರ್ಮವಿಶೇಷಫಲವೆಂದು ಏಕೆ ಹೇಳಕೂಡದು ? ಬುದ್ಧಿಪೂರ್ವೋತ್ತರಾಘಗಳನ್ನೂ ಕೂಡ ಶರಣಾಗತವತ್ಸಲನು ಮನ್ನಿಸಿಬಿಡಬಹುದು.

ಇದಕ್ಕೆ ಸಮಾಧಾನವಾಗಿ ಸ್ವಾಮಿದೇಶಿಕರವರು ಹೇಳುತ್ತಾರೇನೆಂದರೆ. ಅದು ಪ್ರಾರಬ್ಧಕರ್ಮಫಲವೇ ಎಂಬದಾಗಿ ನಿಷ್ಕರ್ಷಿಸಲು ನಿಮಗೆ ಸಾಧನವೇನಿದೆ ? ಆದುದ

**ಬಲಸಿದ್ಧಮಾಯ್ ಬುದ್ಧಿಪೂರ್ವೋತ್ತರಾಘ ಫಲಮಾನ ಉಪಕ್ಲೇಶ ವರ್ಗತ್ತೈ ಪ್ಪ್ರಾರಬ್ಧಕರ್ಮ ವಿಶೇಷ ಫಲಮೆನ್ರು ನಿಷ್ಕರ್ಷಿಕ್ಕ ವಿರಗಿಲ್ಲೈ. ಇವೈ ಯಥಾಸಂಭವಂ ಉಭಯವಿಧ ಕರ್ಮತ್ತಾಲುಮ್ ವರುಮ್. ಆಗೈಯಾಲಿರೇ ಬುದ್ಧಿಪೂರ್ವೋತ್ತರಾಘತ್ತುಕ್ಕು ಸಾತ್ವಿಕರ್ ಅಞ್ಜಿ ಪೋರುಕಿರದು.**

---

ರಿಂದ ಅಂತಹ ಉಪಕ್ಲೇಶಗಳು ಬುದ್ಧಿಪೂರ್ವೋತ್ತರಾಘಫಲವಾಗಿ ಯಾದರೂ ಉಂಟಾಗಬಹುದು, ಅಥವಾ ಪ್ರಾರಬ್ಧಕರ್ಮವಿಶೇಷಫಲವಾಗಿ ಯಾದರೂ ಹೀಗೆ ಎರಡು ವಿಧವಾಗಿ ಉಂಟಾಗಬಹುದೆಂದು ಮುಂದಿನ ಎರಡು ವಾಕ್ಯಗಳಿಂದ ತಿಳಿಸುತ್ತಾರೆ.—**ವಚನಬಲಸಿದ್ಧಮಾಯ್** - ಪ್ರಮಾಣವಾಕ್ಯದ ಬಲದಿಂದುಂಟಾದ, **ಬುದ್ಧಿಪೂರ್ವೋತ್ತರಾಘಫಲಮಾನ**-ಬುದ್ಧಿಪೂರ್ವಕಮಾಡಿದ ಅಪರಾಧಫಲವಾಗಿ, **ಉಪಕ್ಲೇಶವರ್ಗಕ್ಕೆ**-ನಾನಾವಿಧ ದುಃಖಸಮೂಹಕ್ಕೆ, "**ತಸ್ಯಾಯುಃಕೀರ್ತಿ**" ಮೊದಲಾದವುಗಳ ನಾಶರೂಪದುಃಖಗಳಿಗೆ ಎಂಬ ಭಾವವು, **ಪ್ರಾರಬ್ಧಕರ್ಮವಿಶೇಷಮೆಂದೇ ನಿಷ್ಕರ್ಷಿಕ್ಕ** - ನಿಷ್ಕರ್ಷಿಸಿ ಹೇಳುವದಕ್ಕೆ, **ವಿರಗಿಲ್ಲೈ** - ನಿಮಗೆ ಸಾಧನವೇನೂ ಇಲ್ಲವು. **ಇವೈ** - ಈ ಪ್ರಪನ್ನನಿಗೆ ಉಂಟಾಗುವ ದುಃಖಗಳು, **ಯಥಾ ಸಂಭವಂ**- ಪ್ರಾಪ್ತವಾದುದನ್ನು ನೋಡಿ, **ಉಭಯವಿಧಕರ್ಮತ್ತಾಲುಮ್** - ಎರಡು ವಿಧಗಳಾದ ಪ್ರಾರಬ್ಧಕರ್ಮ ಮತ್ತು ಬುದ್ಧಿಪೂರ್ವೋತ್ತರಾಘಕರ್ಮಗಳಿಂದಲೂ, **ವರುಮ್** - ಉಂಟಾಗಬಹುದು. **ಆಗೈಯಾಲಿರೇ** - ಆದುದರಿಂದಲ್ಲವೇ **ಬುದ್ಧಿಪೂರ್ವೋತ್ತರಾಘತ್ತುಕ್ಕು** - ಬುದ್ಧಿಪೂರ್ವಕ ಮಾಡುವ ಅಪರಾಧಗಳಿಗೆ, **ಅಂಜಿ** - ಭಯಪಟ್ಟು, **ಸಾತ್ವಿಕರ್** - ಸಾತ್ವಿಕರು, **ಪೋರುಕಿರದು** - ನಡೆದುಕೊಳ್ಳುವದು. ಬುದ್ಧಿಪೂರ್ವೋತ್ತರಾಘಕ್ಕೆ ಶಿಕ್ಷೆಯುಂಟೆಂಬುದನ್ನು ಮುಖ್ಯವಾಗಿ ಸಾತ್ವಿಕರ ನಡತೆಯಿಂದ ಗ್ರಹಿಸಬಹುದು. ಹಾಗೆ ಹೇಳುವದಕ್ಕೆ ನಮಗೆ ಅವರ ನಡೆತೆಯೇ ಮುಖ್ಯಹೇತುವೆನ್ನುತ್ತಾರೆ. ಸಾತ್ವಿಕರು ಬುದ್ಧಿಪೂರ್ವೋತ್ತರಾಘಕ್ಕೆ ವಿಶೇಷ ಭಯಪಟ್ಟು ನಡೆದುಕೊಳ್ಳುತ್ತಾರೆ. ಹಾಗೆ ಶಿಕ್ಷೆಯಿಲ್ಲದಿದ್ದರೆ ಬುದ್ಧಿಪೂರ್ವೋತ್ತರಾಘಕ್ಕೆ ಅವರು ಭಯಪಡುವದೇತಕ್ಕೆ ಎಂಬ ಭಾವವು. ಸುಗ್ರೀವನು ತನ್ನ ಭಾಷೆಗೆ ತಪ್ಪಿದನೆಂದು ಲಕ್ಷ್ಮಣನು ಕೋಪಿಸಿದನು. ಸುಗ್ರೀವನು ಲಕ್ಷ್ಮಣನ ಕ್ಷಮೆಯನ್ನು ಪ್ರಾರ್ಥಿಸಲು, ಲಕ್ಷ್ಮಣನು ಭಾಗವತಾಪಚಾರ ಉಂಟಾಯಿತೆಂದು ಭಯಪಟ್ಟು ಸುಗ್ರೀವನನ್ನು ಕುರಿತು ಕ್ಷಮಿಸೆಂದು ಪ್ರಾರ್ಥಿಸಿರುತ್ತಾನೆ. ಬುದ್ಧಿಪೂರ್ವೋತರಾಘದಿಂದ ಭಯವಿಲ್ಲದಿದ್ದರೆ ಲಕ್ಷ್ಮಣನ "**ತ್ವಂಕ್ಷಂತುಮರ್ಹಸಿ**" ಎಂಬ ಉಕ್ತಿಯು ನಿರರ್ಥಕವು ಎಂಬ ಭಾವವು.

ಉತ್ತರಾಘದಿಂದ **ಪ್ರತ್ಯವಾಯವಿಲ್ಲವೆಂದರೆ ಬಾಧಕವನ್ನು** ಹೇಳುತ್ತಾರೆ **ಇಜ್ಞನಲ್ಲಾದಪೋದು** - ಬುದ್ಧಿಪೂರ್ವೋತ್ತರಾಘಕ್ಕೆ ಪುನಃ ಪ್ರಾಯಶ್ಚಿತ್ತರೂಪ

## ಉತ್ತರಾಘಪ್ರತ್ಯವಾಯಾನಂಗೀಕಾರೇ ಬಾಧಕಮಾಹ

**ಇಙ್ಙನಲ್ಲಾದಪೋದು ಪುನಃ ಪ್ರಪತ್ತಿವಿಧಾಯಿಕಶಾಸ್ತ್ರಮುಮ್, ಅಪ್ಪಡಿಕ್ಕು ಶಿಷ್ಟಾನುಷ್ಠಾನಮ್, ಪೂರ್ವಸಂಪ್ರದಾಯಮುಮ್ ವಿರೋಧಿಕ್ಕುಮ್.**

---

ಶರಣಾಗತಿಯೂ, ಹಾಗೆ ಅನುಷ್ಠಿಸದಿದ್ದರೆ ಶಿಕ್ಷೆಯೂ ಎಂಬ ಅಭಿಪ್ರಾಯವನ್ನು ಅಂಗೀಕರಿಸದೇ ಹೋದರೆ, **ಪುನಃ ಪ್ರಪತ್ತಿವಿಧಾಯಿಕ ಶಾಸ್ತ್ರಮುಮ್** – **"ಅಭಿಪ್ರಾಯಸಂಪ್ಲವೇಸಧ್ಯಃ ಪ್ರಾಯಶ್ಚಿತ್ತಂ ಸಮಾಚರೇತ"** "ಪ್ರಾಯಶ್ಚಿತ್ತಿರಿಯಂ ಸಾತ್ರ **ಯತ್ಪುನಶ್ಶರಣಂವ್ರಜೇತ್**" ಇತ್ಯಾದಿ ಬುದ್ಧಿಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತವನ್ನು ವಿಧಿಸುವ ಶಾಸ್ತ್ರವೂ, **(೨) ಅಪ್ಪಡಿಕ್ಕು** – ಹಾಗೆ ಹೇಳವದಕ್ಕೆ ಅನುಗುಣವಾಗಿ, **ಶಿಷ್ಟಾನುಷ್ಠಾನಕ್ಕೂ** – ಪ್ರಾಜ್ಞರು ಮಾಡಿದ ಅನುಷ್ಠಾನಕ್ಕೂ, ಇದಕ್ಕೆ ನಿದರ್ಶನವಾಗಿ ದೂರ್ವಾಸರು ಅಂಬರೀಷನಲ್ಲಿ ಮಾಡಿದ ಶರಣಾಗತಿ, ಲಕ್ಷ್ಮಣನು ಸುಗ್ರೀವನಲ್ಲಿ ಮಾಡಿದ ಕ್ಷಮಾಪಣೆಯೂ ಇತ್ಯಾದಿ ನಿದರ್ಶನಗಳು, **(೩) ಪೂರ್ವಸಂಪ್ರದಾಯಮುಮ್** – ಪೂರ್ವದಲ್ಲಿ ಆಚಾರ್ಯರು ನಡೆಸಿದಕ್ಕೂ **ವಿರೋಧಿಕ್ಕುಮ್** – ವಿರೋಧಿಸುವದು. ಶ್ರೀ ಯತಿವರ್ಯರು, ತಮ್ಮ ಪತ್ನಿಯು ಆಚಾರ್ಯರಾದ ಪೆರಿಯ ನಂಬಿಯ ಪತ್ನಿಯ ವಿಷಯದಲ್ಲಿ ಮಾಡಿದ ಅಪರಾಧಕ್ಕಾಗಿ ಪೆರಿಯನಂಬಿಯಕ್ಷಮಾಪಣೆಯನ್ನು ಬೇಡಿದ್ದಾರೆ. ಹಾಗೆಯೇ ತಿರುಕ್ಕೋಟ್ಟಿಯಾರ್ ನಂಬಿಯನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿರುತ್ತಾರೆ. ಏಕೆಂದರೆ ಗುರುವಾದ ತಮ್ಮ ಆಜ್ಞೆಯನ್ನು ಮೀರಿ ಶ್ರೀ ಯತಿವರ್ಯರು ತಮ್ಮ ಶಿಷ್ಯರೆಲ್ಲರೂ ದ್ವಯಮಂತ್ರಾರ್ಥಗಳನ್ನು ತಿಳಿಯಲರ್ಹರೆಂದು ತಿಳಿದು ಅವುಗಳನ್ನು ಪ್ರಕಟಿಸಿದುದರಿಂದ ಪೂರ್ವಸಂಪ್ರದಾಯಕ್ಕೆ ಇವುಗಳನ್ನು ನಿದರ್ಶನಙ್ಗಳಾಗಿ ಇಟ್ಟುಕೊಳ್ಳಬಹುದು. ಹಾಗೆ ಉತ್ತರಾಘಗಳಿಂದ ಪ್ರತ್ಯವಾಯವಿಲ್ಲದಿದ್ದ ಪಕ್ಷದಲ್ಲಿ ಶ್ರೀ ಯತಿವರ್ಯರ ಪ್ರವೃತ್ತಿಗಳು ನಿರರ್ಥಕವಾದುವುಗಳೆಂದು ಹೇಳಬೇಕಾಗುತ್ತದೆ.—

ಪೂರ್ವಪಕ್ಷಿಯು ಪುನಃ ಹೇಳಬಹುದ ಏನೆಂದರೆ; ನಂಜೀಯರು, ಶ್ರೀ ಯತಿವರ್ಯರ ಮುಖ್ಯ ಶಿಷ್ಯರಲ್ಲೊಬ್ಬರಾದ ಕೂರೇಶರ ಪುತ್ರರಾದ ಶ್ರೀ ಪರಾಶರಭಟ್ಟರವರ ಶಿಷ್ಯರು. ಅವರು ಹೇಳಿರುವದೇನೆಂದರೆ, ಅಪಚಾರಗಳನ್ನು ಬುದ್ಧಿಪೂರ್ವಕ ನಡೆಸಿದರೂ ಅನುತಾಪವುಂಟಾಗದಿದ್ದರೆ ಆತನು ಪ್ರಪನ್ನನೇ ಅಲ್ಲವು, ಆತನಿಗೆ ಉಪಾಯಾನುಷ್ಠಾನದ ಜ್ಞಾನವೇ ಉಂಟಾಗಲಿಲ್ಲವೆಂದು ಭಾವಿಸತಕ್ಕದ್ದು ಎಂದು ಹೇಳಿರುವದರಿಂದ, ಅವರು ಹೇಳಿರುವದು ಪ್ರಪನ್ನನು ಬುದ್ಧಿಪೂರ್ವಕವಾಗಿ ನಡೆಸಿದ ವಿಷಯವೇ ಅಲ್ಲವು. ಆದುದರಿಂದ ಸರಿಯಾದ ಪ್ರಪನ್ನನು ಬುದ್ಧಿಪೂರ್ವಕವಾಗಿ ಅಪರಾಧ ನಡೆಸಿದರೂ ಎಂದಿಗೂ ಶಿಕ್ಷಿಸನು ಎಂದು ಪೂರ್ವಪಕ್ಷತಂದರೆ, ಶ್ರೀ

**"ಅಪರಾಧಾನಂತರ ಅನುತಾಪಂ ಪಿರನ್ದದಿಲ್ಲೈಯಾಗಿಲ್ ಜ್ಞಾನಮ್ ಪಿರನ್ದದಿಲ್ಲೈಯಾಗಕ್ಕಡವದೆ" ನ್ರ್ರನಞ್ಜೀಯರ್ ವಾರ್ತ್ತೈಕ್ಕುಮ್ ಅನುತಾಪ ಪಿರವಾದಾರುಡೈಯ ಜ್ಞಾನಮಾಂದ್ಯತ್ತಿಲೇ ತಾತ್ಪರ್ಯಮ್.**

---

ನಂಜೀಯರ ಉಕ್ತಿಯನ್ನು ಉದಾಹರಿಸಿ, ಅದಕ್ಕೆ ಸರಿಯಾದ ತಾತ್ಪರ್ಯವನ್ನು ತಿಳಿಸುತ್ತಾರೆ.

"**ಅಪರಾಧಾನಂತರ** – ಪ್ರಪನ್ನನಾದವನಿಗೆ ಬುದ್ಧಿಪೂರ್ವೋತ್ತರಾಘವನ್ನು ಮಾಡಿದನಂತರ, **ಅನುತಾಪಂ ಪಿರನ್ದದಿಲ್ಲೈ ಯಾಗಿಲ್** – ಅಯ್ಯೋ ಮಾಡಿಬಿಟ್ಟನೇ ಕೆಟ್ಟು ಹೋದನೆ ಎಂಬ ಪರಿತಾಪ ಉಂಟಾಗಲಿಲ್ಲವಾದರೆ, **ಜ್ಞಾನಮ್ ಪಿರನ್ದದಿಲ್ಲೈ** – ಜ್ಞಾನವು ಹುಟ್ಟಲಿಲ್ಲವೆಂದು, **ಆಗಕ್ಕಡವದು** – ಭಾವಿಸತಕ್ಕದ್ದಾಗಿದೆ." **ಎನ್ರ್ರ** – ಎಂಬದಾಗಿ ಹೇಳಿದ, **ನಂಜೀಯರ ವಾರ್ತ್ತೈಕ್ಕುಮ್** – ನಂಜೀಯರ ಹೇಳಿಕೆಗೂ, **ಅನುತಾಪಪಿರವಾದಾರುಡೈಯ** – ಅನುತಾಪವುಂಟಾದೆ ಪ್ರಾಯಶ್ಚಿತ್ತಮಾಡಿಕೊಳ್ಳದಿರುವವರ **ಜ್ಞಾನಮಾಂದ್ಯತ್ತಿಲೇ** – ಜ್ಞಾನಸಂಕೋಚ ಉಂಟಾಗಿದೆ ಎಂಬುದರಲ್ಲಿ ತಾತ್ಪರ್ಯಮ್. ನಂಜೀಯರು ಹೇಳಿರುವದೂ ಪ್ರಪನ್ನನಾಗಿ ಜ್ಞಾನಪೂರ್ವಕವಾಗಿ ಅಪರಾಧಮಾಡಿದ್ದರೂ, ಅದಕ್ಕಾಗಿ ಅನುತಾಪವಿಲ್ಲದೆಯೂ ಪ್ರಾಯಶ್ಚಿತ್ತಮಾಡಿಕೊಳ್ಳಬೇಕು, ಇಲ್ಲವಾದರೆ ಸ್ವಾಮಿಯು ಶಿಕ್ಷಿಸುವನು ಎಂಬ ಜ್ಞಾನವಿಲ್ಲದವನನ್ನು ಕುರಿತು ಹೇಳಿದುದೇ ಎಂಬ ಭಾವವು. ಇದನ್ನೇ ಸ್ವಾಮಿದೇಶಿಕರವರು "**ಧೀಪೂರ್ವೋತ್ತರಪಾಪ್ಮನಾಮುಜನಸಾತ್ ಜಾತೇಪಿ ತನ್ನಿಷ್ಕೃತೇಃ ಕೌಟಿಲ್ಯೇಸತಿ ಶಿಕ್ಷಯಾಪ್ಯನಘಯೇತ್ಕ್ರೋಡೀಕರೋತಿ ಪ್ರಭುಃ** ಎಂದು ಅಪ್ಪಣೆ ಕೊಡಿಸಿರುತ್ತಾರೆ ನಂಜೀಯರು **ಜ್ಞಾನಂ ಪಿರನ್ದದಿಲ್ಲೈ** – ಎಂದು ಹೇಳಿರುದನ್ನೇ ಶ್ರೀ ದೇಶಿಕರವರು **ಕೌಟಿಲ್ಯೇಸತಿ** – ಎಂದು ವ್ಯಾಖ್ಯಾನಮಾಡಿರುತ್ತಾರೆ. ಪೂರ್ವಪಕ್ಷಿಯು ಇದು ಅಪ್ರಪನ್ನನನ್ನು ಕುರಿತು ಹೇಳಿದುದು ಎಂದು ವಾದಿಸುವನು. ಶ್ರೀ ದೇಶಿಕರು ಇದೂ ಪ್ರಪನ್ನನ ಬುದ್ಧಿಪೂರ್ವೋತ್ತರಾಘದ ವಿಷಯವೇ ಎಂದು ತಿಳಿಸಿರುತ್ತಾರೆ.

### ಬುದ್ಧಿಪೂರ್ವಕವಾಗಿ ಮಾಡಿದ ಉತ್ತರಾಘಗಳ ವಿಷಯದಲ್ಲಿ ಉಪಪಾದಿಸಿದ ಅಭಿಪ್ರಾಯಗಳನ್ನು ನಿಗಮನಮಾಡಿ ಹೇಳುತ್ತಾರೆ.

ಹಾಗೆ ನಿಗಮನಮಾಡಿ ಹೇಳುವದರಲ್ಲಿ ಪ್ರಪನ್ನರನ್ನು ಉತ್ತಮ ಮಧ್ಯಮಾಧಮ ವರ್ಗಕ್ಕೆ ಸೇರಿದವರಾಗಿ ವಿಭಾಗಿಸಿ ಹೇಳುತ್ತಾರೆ. ಉತ್ತಮರು ಯಾರೆಂದರೆ **ಸೋಪಾಧಿಕಙ್ಗಳಾನ** – ಇಲ್ಲಿ ಉಪಾಧಿ ಯಾವುದೆಂದರೆ ಪ್ರಾರಬ್ಧಕರ್ಮವು. ಇದು ಸುಕೃತ ದುಷ್ಕೃತರೂಪವಾಗಿ ಎರಡುವಿಧವು. ಇಂತಹ ಪ್ರಾರಬ್ಧಕರ್ಮದಿಂದ ಸೇರಿದ,

## ಧೀಪೂರ್ವೋತ್ತರಾಘವಿಷಯೇ ಉಪಪಾದಿತಾರ್ಥಾ ನಿಗಮಯತಿ.

**ಸೋಪಾಧಿಕಙ್ಗಳಾನ ಭಗವದಭಿಪ್ರಾಯ ಭೇದತ್ತಕ್ಕೀಡಾಗವರುಮ್ ಬುದ್ಧಿಪೂರ್ವಾಪಚಾರಮ್ ಶಿಲರ್ಕ್ಕು ಪಿರವಾದು. ಶಿಲರ್ಕ್ಕು ಪಿರನ್ದು ಅನುತಾಪಾದಿಗಳಾಲೇ ಕಳಿಯುಮ್. ಕಠಿನ ಪ್ರಕೃತಿಗಳುಕ್ಕು ಅನುತಾಪಮುಂ ಪಿರವಾದು. ಶಿಲರ್ಕ್ಕು ಪಿರನ್ದು ಅನುತಾಪಾದಿಗಳಾಲೇ ಕಳಿಯುಮ್. ಕಠಿನ ಪ್ರಕೃತಿಗಳುಕ್ಕು, ಅನುತಾಪಮುಮ್ ಪಿರವಾದು. ಆಗೈಯಾಲ್ ಬುದ್ಧಿಪೂರ್ವೋತ್ತರಾಘಂ ಪಿರನ್ದಾಲ್ ಅನುತಪ್ತನಾಯ್ ಪುನಃ ಪ್ರಪತ್ತಿ**

---

**ಭಗವದಭಿಪ್ರಾಯಭೇದತ್ತ ಕ್ಕೀಡಾಗ** – ಭಗವಂತನ ಸಙ್ಕಲ್ಪಭೇದಕ್ಕನುಗುಣವಾಗಿ **ವರುಮ್** – ಬರುವ, **ಬುದ್ಧಿಪೂರ್ವಕವಾದ ಅಪಚಾರವು ; ಶಿಲರ್ಕ್ಕು ಪಿರವಾದು** – ಕೆಲವರಿಗೆ ಅವರು ಯಾರೆಂದರೆ ಸುಕೃತಿಗಳಾದ ಸಾತ್ವಿಕರಿಗೆ, **ಪಿರವಾದು**- ಹುಟ್ಟುವದೇ ಇಲ್ಲವು. ಉತ್ತಮ ಪ್ರಪನ್ನರು ಇವರು. ಇವರ ವಿಷಯವಾಗಿಯೆ ಹಿಂದೆ **ಪಾಪ್ಮಾನಾಮುಜನಸಾತ್** – ಎಂದು ಹೇಳಿದರು. ಸಾರಸಂಗ್ರಹಾಚಾರ್ಯರು ಭಗವಂತನ ಸಙ್ಕಲ್ಪ ಭೇದವನ್ನು ತಿಳಿಸುವದಕ್ಕಾಗಿ **ಕ್ಷಿಪಾಮ್ಯಜಸ್ರಂ**" (ಗೀ ) ಎಂಬುದನ್ನು ಉದಾಹರಿಸಿರುತ್ತಾರೆ. ಇದು ಆ ಪ್ರಪನ್ನನಾದ ಆಸುರ ಸ್ವಭಾವನನ್ನು ಕುರಿತು ಹೇಳಿದುದು. ಈ ಸಂದರ್ಭವಾದರೋ ಪ್ರಪನ್ನನ ಬುದ್ಧಿಪೂರ್ವಾಘಕ್ಕೆ ಅನುಗುಣವಾದ ಶಿಕ್ಷಾರೂಪಸಂಕಲ್ಪವು, ಖಂಜನಾಗಿ ಕಾಣನಾಗಿ ಅವಿಧೇಯಪುತ್ರನುಳ್ಳವನಾಗಿ, ಸಾತ್ವಿಕರಿಂದ ತ್ಯಜಿಸಲ್ಪಟ್ಟವನಾಗಿರುವ ಭಗವತ್ಸಙ್ಕಲ್ಪಭೇದವು. ಮಧ್ಯಮ ಪ್ರಪನ್ನರು ಯಾರೆಂದರೆ ತಿಳಿಸುತ್ತಾರೆ ಪ್ರಾರಬ್ಧದಲ್ಲಿ ದುಷ್ಕೃತಾಂಶವೂ ಇದ್ದರೆ ಭಗವಂತನ ಸಙ್ಕಲ್ಪಾನುಗುಣವಾಗಿ, **ಶಿಲರ್ಕ್ಕು** – ಕೆಲವರಿಗೆ, **ಅನುತಾಪಾದಿಗಳಾಲೇ** – ಬುದ್ಧಿಪೂರ್ವಕವಾದ ಅಪಚಾರವು **ಅನುತಾಪಾದಿಗಳಾಲೇ** ಅನುತಾಪ, ಆದಿ ಶಬ್ದದಿಂದ ಉಪರಮ, ಪ್ರಾಯಶ್ಚಿತ್ತಸಙ್ಕಲ್ಪಾನುಷ್ಠಾನಗಳು ಹೇಳಲ್ಪಟ್ಟವು, ಇವುಗಳಿಂದ, **ಕಳಿಯುಮ್** – ನಿವೃತ್ತಿಯನ್ನು ಹೊಂದುತ್ತದೆ. **ಜಾತೇಽಪಿ ತನ್ನಿಷ್ಕೃತೇಃ** – ಎಂಬ ವರ್ಗವು ಹೇಳಲ್ಪಟ್ಟಿತು. ಪ್ರಪನ್ನರಲ್ಲಿ ಮೂರನೆಯ ವರ್ಗಕ್ಕೆ ಸೇರಿದವರು ಯಾರೆಂದರೆ— **ಕಠಿನ ಪ್ರಕೃತಿಗಳಿಕ್ಕು** – ಬುದ್ಧಿಮಾಂದ್ಯದಿಂದ ಕಠಿನ ಸ್ವಭಾವದವರಿಗೆ **ಅನುತಾಪಾದಿ** ಗಳು **ಪಿರವಾದು** – ಉಂಟಾಗುವದಿಲ್ಲವು. ಇವರಿಗೆ ಹೇಗೆ ? ಎಂದರೆ **ಕೌಟಿಲ್ಯೇಸತಿ ಶಿಕ್ಷಯಾಪ್ಯನಘಯನ್ ಕ್ರೋಡೀಕರೋತಿಪ್ರಭುಃ** ಎಂದು ಹೇಳಿಲ್ಪಟ್ಟಿತು. ಇದನ್ನೇ ಮುಂದೆ ಉಪಪಾದಿಸಿ ಹೇಳುತ್ತಾರೆ. **ಆಗೈಯಾಲ್** – ಆ ಕಾರಣದಿಂದ, **ಬುದ್ಧಿಪೂರ್ವೋತ್ತರಾಘಂ ಪಿರನ್ದಾಲ್** – ಬುದ್ಧಿಪೂರ್ವೋತ್ತರಾಘವು ಸಂಭವಿಸಿದರೆ,

**ಪಣ್ಣಾದ ಪ್ಪೋದು ಉಪಕ್ಲೇಶಂ ಶೊಲ್ಲುಗಿರ ಶ್ರುತ್ಯಾದಿಗಳಿನ್ ಕಟ್ಟಳೈಯಿಲೇ ಲಘುಪ್ರತ್ಯವಾಯತ್ತಾಲೇ ತೀರುಮ್.**

**ವಿವೇಕಿನಾಂ ಪ್ರಪನ್ನಾನಾಂ ಧೀಪೂರ್ವಾಗಸ್ಯನುದ್ಯಮಃ ।**
**ಮಧ್ಯಾನಾ ಮನುತಾಪಾದಿ ಶಿಕ್ಷಾಕಠಿನ ಚೇತಸಾಮ್ ॥**

---

**ಅನುತಪ್ತನಾಯ್** – ಅನುತಾಪವನ್ನು ಹೊಂದಿದವನಾಗಿ **ಪುನಃ ಪ್ರಪತ್ತಿಯನ್ನು ಪಣ್ಣಾದಪ್ಪೋದು** – ಮಾಡದೇ ಹೋದರೆ, **ಉಪಕ್ಲೇಶಂ ಶೊಲ್ಲುಗಿರ** – ಲಘು ಶಿಕ್ಷೆಯಿಂದುಂಟಾಗುವ ದುಃಖ ಉಂಟೆಂದು ಹೇಳುವ, **ಶ್ರುತ್ಯಾದಿಗಳಿಲ್** – ಶ್ರುತಿ ಇತಿಹಾಸಪುರಾಣಾದಿಗಳಲ್ಲಿ ಹೇಳಿರುವ, **ಕಟ್ಟಳೈಯಿಲೇ** – ವಿಧಿಗಳಿಗನುಗುಣವಾಗಿ, **ಲಘುಪ್ರತ್ಯವಾಯತ್ತಾಲೇ** - ಅಲ್ಪಶಿಕ್ಷೆಯಿಂದ, **ತೀರುಮ್** – ಬುದ್ಧಿಪೂರ್ವೋತ್ತರಾಗವು ಕಳೆದು ಹೋಗುತ್ತದೆ.

ಇಷ್ಟುದೂರ ಉಪಪಾದಿಸಿದ ಬುದ್ಧಿಪೂರ್ವೋತ್ತರಾಘ ವಿಷಯದಲ್ಲಿ ಕೆಲವರು ಭಿನ್ನಾಭಿಪ್ರಾಯವನ್ನು ಹೊಂದಿರುವದರಿಂದ, ಆ ವಿಷಯದಲ್ಲಿ ನಿಷ್ಕರ್ಷಾರ್ಥವು ಆವಶ್ಯಕವಾದುದರಿಂದ ಒಂದು ಕಾರಿಕೆಯ ಮೂಲಕ ಅದನ್ನು ತಿಳಿಸುತ್ತಾರೆ.— ಪೂರ್ವಾರ್ಧದಿಂದ ಉತ್ತಮ ಪ್ರಪನ್ನನಿಗೆ ಬುದ್ಧಿಪೂರ್ವಾಘದಲ್ಲಿ ಮನಸ್ಸೇ ಉಂಟಾಗುವದಿಲ್ಲವೆನ್ನುತ್ತಾರೆ. **ವಿವೇಕಿನಾಂ ಪ್ರಪನ್ನಾನಾಂ** – ತಿಳುವಳಿಕೆ ಚನ್ನಾಗಿರುವ ಪ್ರಪನ್ನರಿಗೆ, ವಿವೇಕಿ ಯಾರೆಂದರೆ ಇದು ಯುಕ್ತ ಇದು ಅಯುಕ್ತವೆಂದು ಚನ್ನಾಗಿ ವಿಮರ್ಶಿಸಿ ತಿಳಿದವನು, ಅಂತವರಿಗೆ, **ಧೀಪೂರ್ವಾಗಸಿ** – ಬುದ್ಧಿಪೂರ್ವಕಾಪರಾಧದಲ್ಲಿ **ಅನುದ್ಯಮಃ**- ವಿಶೇಷವಾದ ಪ್ರಯತ್ನವಿರುವದೇ ಇಲ್ಲವು. **"ಪಾಪಾನಾಮಜನನಾತ್"** ಎಂದು ಹಿಂದೆ ಹೇಳಿರುವದರ ಅರ್ಥವು. ರಾಜ್ಯಪ್ರಾಪ್ತಿಯು ಭರತನಿಗೆ ಅಪರಾಧ ಹೇತುವು. ತಾಯಿಯು ಅದಕ್ಕೆ ಎಷ್ಟೋ ಸಹಾಯ ಮಾಡಿದರೂ ಆತನಿಗೆ ರಾಜ್ಯಾಪಹಾರ ಮಾಡಬೇಕೆಂಬ ಬುದ್ಧಿಯು ಉದಿಸಲೇ ಇಲ್ಲವು. ಆದುದರಿಂದಲೇ ನಿಗಮಾಂತ ಮಹಾದೇಶಿಕರು **"ಭರತಾಯ ಪರಂ ನಮೋಽಸ್ತು ತಸ್ಮೈ ಪ್ರಥಮೋದಾಹರಣಾಯ ಭಕ್ತಿಭಾಜಾಮ್"** ಎಂದು ಪಾದುಕಾ ಸಹಸ್ರದಲ್ಲಿ ಮಂಗಳಶ್ಲೋಕವಾಗಿ ಹೇಳಿದರು. **ಮಧ್ಯಮ** ಪ್ರಪನ್ನನು ಯಾರೆಂದರೆ— **ಮಧ್ಯಾನಾಮನುತಾಪಾದಿ** – ಮಧ್ಯಮ ಪ್ರಪನ್ನರಿಗಾದರೋ **ಅನುತಾಪಾದಿ**ಗಳು ಉಂಟಾಗುತ್ತವೆ, ಆದಿಶಬ್ದದಿಂದ ಉಪರಮ, ಶರಣಾಗತಿ ಸಂಕಲ್ಪಾನುಷ್ಠಾನಗಳು ಉಂಟಾಗುತ್ತವೆ. ಇದು ದೂರ್ವಾಸಾದಿಗಳಲ್ಲಿ ಕಾಣಬಹುದು. **ಅಧಮ ಪ್ರಪನ್ನನು** ಎಂದು ಹೇಳಲು ಇಷ್ಟವಿಲ್ಲದೆ ಮೂರನೆಯ ವರ್ಗದವರು ಯಾರೆಂದರೆ ಹೇಳುತ್ತಾರೆ—**ಕಠಿನಚೇತನಾಂ** - ತಪ್ಪುಮಾಡಿದ್ದಕ್ಕೆ ಪುನಶ್ಶರಣಾಗತಿ ರೂಪ ಪ್ರಾಯಶ್ಚಿತ್ತವು ಆವಶ್ಯಕವು, ತಪ್ಪುಮಾಡಿಬಿಟ್ಟೆನೇ ಎಂಬ ಅನುತಾಪವಿಲ್ಲದ ಕಠಿನ

**ಆನ ಪಿನ್ಬು ಒರುಪಡಿಯಾಲುಮ್ ಭಗವನ್ನಿಗ್ರಹಮ್ ವಾರಾಮೈಕ್ಕಾಗ ಬುದ್ಧಿಪೂರ್ವಾಪರಾಧಮ್ ಪರಿಹರಣೀಯುಮ್.**

**ಪ್ರೀತಿಮೇವ ಸಮುದ್ದಿಶ್ಯ ಸ್ವತಂತ್ರಾಜ್ಞಾನುಪಾಲನೇ ।**
**ನಿಗ್ರಹಾನುದಯೋಽಸ್ಯಸ್ಯ ನಾಂತರೀಯಕ ಮೇವ ವಾ ॥**

---

ಸ್ವಭಾವವುಳ್ಳವರಿಗೆ, ಶಿಕ್ಷಾ-ಶಿಕ್ಷೆಯು. ಆದುದರಿಂದ ಉಪದೇಶಮುಖೇನ ನಿಗಮನ ಮಾಡಿ ಹೇಳುತ್ತಾರೆ—**ಆನ ಪಿನ್ಬು** - ನಾವು ಮೇಲೆ ಕಾರಿಕೆಯಲ್ಲಿ ಹೇಳಿರುವದು ಸ್ಥಾಪಿತವಾದನಂತರ, **ಒರುಪಡಿಯಾಲುಮ್** - ಒಂದು ಕಾರಣದಿಂದಲೂ, **ಭಗವನ್ನಿಗ್ರಹವು, ವಾರಾಮೈಕ್ಕಾಗ** ಬಾರದೇ ಇರುವದಕ್ಕಾಗಿ, **ಬುದ್ಧಿಪೂರ್ವಾಪರಾಧವು, ಪರಿಹರಣೀಯುಮ್** - ಪರಿಹರಿಸತಕ್ಕದ್ದು, ಬಾರದಹಾಗೆ ಜಾಗರೂಕರಾಗಿರತಕ್ಕದ್ದು.

ಹೀಗೆ ಪ್ರಪನ್ನನ ಉತ್ತರಾಘವೂ ಕೂಡ ಭಗವಂತನಿಗೆ ಭೋಗ್ಯವಾದುದೇ ಅದಕ್ಕಾಗಿ ಭಗವನ್ನಿಗ್ರಹವಿಲ್ಲವೆಂಬ ಅಭಿಪ್ರಾಯವು ಸರಿಯಲ್ಲವೆಂದೂ ಅದಕ್ಕಾ ಪ್ರಾಯಶ್ಚಿತ್ತವನ್ನೂ ಪುನಃ ಶರಣಾಗತಿಯನ್ನು, ಅನುಷ್ಠಿಸತಕ್ಕದ್ದೆಂದೂ ಹಾಗೆ, ಪ್ರಾಯಶ್ಚಿತ್ತವನ್ನು ಕೈಕೊಳ್ಳದಿದ್ದರೆ ಲಘುಶಿಕ್ಷೆಯುಂಟೆಂದೂ ತೀರ್ಮಾನಿಸಿದರು. ಹೀಗೆ ಹೇಳುವವರ ಇನ್ನೊಂದು ಸರಿಯಲ್ಲದ ಅಭಿಪ್ರಾಯವೇನೆಂದರೆ ಪ್ರಪನ್ನನಿಗೆ ನಿತ್ಯನೈಮಿತ್ತಿಕಾನುಷ್ಠಾನಗಳು ಬೇಕಿಲ್ಲವೆಂಬುದು. ಇದನ್ನು ಹಿಂದೆಯೇ ಖಂಡಿಸಿ, ಸ್ವತಂತ್ರವಾದ ಭಗವಂತನ ಆಜ್ಞಾಕೈಂಕರ್ಯಗಳನ್ನು ಮಾಡಲೇಬೇಕೆಂದು ತೀರ್ಮಾನಿಸಿದರು. ಹಾಗೆ ನಿತ್ಯನೈಮಿತ್ತಿಕರೂಪವಾದ ಆಜ್ಞಾಕೈಂಕರ್ಯಗಳನ್ನು ಮಾಡಿದರೆ ಉತ್ತರಾಘಗಳಲ್ಲಿ ಉದ್ಯಮವು ಉಂಟಾಗುವದಿಲ್ಲವೆಂದು ಹೇಳಲು ಹೊರಟು, ಹಾಗೆ ಹೇಳಿದರೆ ಹಿಂದೆ ಸ್ವಾಮಿ ಪ್ರೀತಿಗಾಗಿಯೇ ಅವುಗಳನ್ನು ಮಾಡತಕ್ಕದ್ದೆಂದು ಹೇಳಿದುದಕ್ಕೆ ವಿರೋಧವಾಗಿ ಇಲ್ಲಿ ಹೇಳಿದರು ಎಂದು ಎಲ್ಲಿ ಗ್ರಹಿಸುವರೋ ಎಂಬ ಶಂಕಾದಿಂದ ಹೇಳುತ್ತಾರೇನೆಂದರೆ—ಅವುಗಳನ್ನು ಸ್ವಾಮಿ ಪ್ರೀತ್ಯರ್ಥವಾಗಿಯೇ ನಡೆಸಿದರೂ ಸ್ವತಸಿದ್ಧವಾಗಿ ಭಗವನ್ನಿಗ್ರಹ ಉಂಟಾಗುವ ಉತ್ತರಾಘದ ಸಂಭವ ವಿರುವದಿಲ್ಲವೆಂದು ಇನ್ನೊಂದು ಕಾರಿಕೆಯ ಮೂಲಕ ತಿಳಿಸುತ್ತಾರೆ.—

**ಪ್ರೀತಿಮೇವ ಸಮುದ್ದಿಶ್ಯ** - ಶೇಷಿಯಾದ ಭಗವಂತನ ಪ್ರೀತಿಯೇ ಮುಖ್ಯೋದ್ದೇಶವಾಗಿ, **ಸ್ವತಂತ್ರಾಜ್ಞಾನುಪಾಲನೇ** - ಸ್ವತಂತ್ರನಾದ ಶ್ರಿಯಃಪತಿಯ ಆಜ್ಞಾಕೈಂಕರ್ಯಗಳಾದ ನಿತ್ಯನೈಮಿತ್ತಿಕಗಳ ಅನುಷ್ಠಾನದಲ್ಲೀ" **ಅಸ್ಯ** - ಈ ಪ್ರಪನ್ನನಿಗೆ, **ನಿಗ್ರಹಾನುದಯಃ** - ಉತ್ತರಾಪರಾಧಗಳಿಂದುಂಟಾಗುವ ನಿಗ್ರಹದ ಸಂಭವವೂ ಉಂಟಾಗುವದಿಲ್ಲ. **ನಾಂತರೀಯಕಮೇವವಾ** - ಅದು ಉಂಟಾಗುವದು ಇನ್ನು ಯಾವುದರ ಅಪೇಕ್ಷೆಯಿಲ್ಲದೇನೆ ಉಂಟಾಗುತ್ತದೆ. ಶ್ರೀ

**ಇಪ್ಪಡಿ ಯಥಾಶಕ್ತಿ ಅಪರಾಧಙ್ಗಳೈ ಪರಿಹರಿತ್ತುಕ್ಕೊಂಡು ಪೋರಾನಿನ್ರಾಲ್ ಭಾಗವತಾಪಚಾರಮುಮ್ ಅದುಡೈಯಾರೋಡು ಸಂಸರ್ಗಮುಮ್ ಪೋರ ಪರಿಹರಣೀಯಮ್.**

ಯಾಮುನ ಮುನಿಗಳು ಅವರು ರಚಿಸಿದ ಗೀತಾರ್ಥಸಂಗ್ರಹದ ೩೦ ನೆಯ ಶ್ಲೋಕದಲ್ಲಿ "**ಕುರ್ಯಾತ್ಪ್ರೀತ್ಯೈವ ಕಾರಿತಃ**" ಎಂಬಲ್ಲಿ ಇಲ್ಲಿ ಹೇಳಿರುವ ಹಾಗೆ ನಿತ್ಯನೈಮಿತ್ತಿಕಗಳೂ ಕೂಡ ಭಗವತ್ಪ್ರೀತಿಗಾಗಿಯೇ ಮುಖ್ಯವಾಗಿ ಮಾಡತಕ್ಕದ್ದು. ಇದರ ವ್ಯಾಖ್ಯಾನಕ್ಕೆ ೩ ನೆಯ ಷಟ್ಕದ ೨ ನೆಯ ಸಂಪುಟದ ೨೬೪೮ ನೆಯ **ಪು**ಟವನ್ನು ನೋಡಿ. ಭಗವತ್ಪ್ರೀತಿಗಾಗಿ ಮಾಡಿದರೂ ಇನ್ನೊಂದು ಪ್ರಯೋಜನವಾದ ಭಗವನ್ನಿಗ್ರಹ ಉಂಟಾಗುವ ಪ್ರವೃತ್ತಿಯೇ ಲಭಿಸಲಾರದು. ಅದು ಸ್ವತಸ್ಸಿದ್ಧವಾಗಿಯೇ ಉಂಟಾಗುತ್ತದೆಂದು ಹೇಳಿದರು. ಕುಚೇಲರು ಪ್ರಪನ್ನರು; ಅವರಿಗೆ ಬೇಕಾದುದು ಮೋಕ್ಷವು. ಅದರೊಂದಿಗೆ ಐಹಿಕೈಶ್ವರ್ಯ ಮೂಲಕ ಸುಖಾದಿಗಳು ಸ್ವತಸ್ಸಿದ್ಧವಾಗಿ ಹೇಗೆ ಉಂಟಾದವೋ ಹಾಗೆಯೇ ಇಲ್ಲಿಯೂ ನಿತ್ಯನೈಮಿತ್ತಿಕಗಳಿಂದ ಭಗವತ್ಪ್ರೀತಿಯುಂಟಾಗಬೇಕೆಂಬುದು ಮುಖ್ಯೋದ್ದೇಶವು. ಅದರೊಂದಿಗೆ ಬುದ್ಧಿಪೂರ್ವಾಪರಾಧಗಳ ಮೂಲಕ ಭಗವನ್ನಿಗ್ರಹ ಉಂಟಾಗುವ ಸಂಭವವು ತಪ್ಪುತ್ತದೆಂಬ ಭಾವವು. **ನಾಂತರೀಯಕಮೇವವಾ** – ಇನ್ನೊಂದರ ಅಪೇಕ್ಷೆಯಿಲ್ಲದೆ ಸ್ವತಸ್ಸಿದ್ಧವಾಗಿ ಉಂಟಾಗುತ್ತದೆ. **ವಾ** – ಎಂಬುದು ಇಲ್ಲಿ ವಿಕಲ್ಪವಲ್ಲವು. ಅವಧಾರಣಾರ್ಥವನ್ನೇ ಸಮರ್ಥಿಸಿ ಹೇಳುತ್ತದೆ.

ಆದುದರಿಂದ, ನಾವು ಈಗ ಉಪದೇಶಿಸಿದ ರೀತಿಯಲ್ಲಿ, ನಿತ್ಯನೈಮಿತ್ತಿಕಗಳು, ಸ್ವಾಮಿಯಿಂದ ವಿಧಿಸಲ್ಪಟ್ಟ ಆಜ್ಞಾಕೈಂಕರ್ಯಗಳಾಗಿ ಆತನ ಆಜ್ಞೆಯನ್ನು ಶಿರಸಾ ವಹಿಸಿ ಅನುಷ್ಠಿಸಿದರೆ, **ಯಥಾಶಕ್ತಿ** – ತನ್ನ ಶಕ್ತಿಗೆ ಅನುಗುಣವಾಗಿ, **ಅಪರಾಧಙ್ಗಳೈ** – ಬುದ್ಧಿಪೂರ್ವಕ ಅಪರಾಧಗಳನ್ನು, **ಪರಿಹರಿತ್ತುಕೊಂಡು**–ಸಂಭವವಾಗದ ಹಾಗೆ ಪರಿಹರಿಸಿಕೊಂಡು, **ಪೋರಾ ನಿನ್ರಾಲ್** – ಹೋಗುವದಾದರೆ, **ಭಾಗವತಾಪಚಾರಮುಮ್** – ಆ ಅಪರಾಧಗಳಲ್ಲಿ ಬಹು ಕ್ರೂರವಾದ ಭಾಗವತಾಪಚಾರವೂ **ಅದುಡೈಯಾರೋಡು ಸಂಸರ್ಗಮುಮ್** – ಭಾಗವತಾಪಚಾರವನ್ನು ಮಾಡುವರೊಂದಿಗೆ ಸಂಸರ್ಗವೂ, ಸ್ನೇಹವೂ, **ಪೋರಪರಿಹರಣೀಯಮ್** – ಹೆಚ್ಚಾಗಿ ಕಷ್ಟಪಟ್ಟು ಪರಿಹರಿಸಿಕೊಳ್ಳತಕ್ಕದ್ದು. ಪ್ರಾಸಙ್ಗಿಕವಾಗಿ ಭಾಗವತಾಪರಾಧಕ್ಕೆ ಭಯಪಟ್ಟು ಜಾಗರೂಗಿರಬೇಕೆಂದು ಒಂದೆ ಹೇಳಿರುವದನ್ನೇ ಇಲ್ಲಿ ಜ್ಞಾಪಕಕ್ಕೆ ಕೊಟ್ಟಿರುತ್ತಾರೆ. **ತ್ರಸ್ಯಬ್ರಹ್ಮವಿದಾಗಸಃ** ಎಂದು ಶಿಂಗ ಭೂಪಲನಿಗೆ ಮಾಡಿದ ಉಪದೇಶವು. ಬ್ರಹ್ಮವಿತ್ತಿಗೆ ಅಪರಾಧ ಮಾಡದೆ ಭಯದಿಂದಿರು ಎಂದು ಹೇಳಿದರು. ಈ ಭಾಗವತಾಪಚಾರಿಯ ವಿಷಯದಲ್ಲಿ ಶ್ರೀಮನ್ನಾರಾಯಣನೂ ತಟಸ್ಥನಾಗಿರು

## ಉಕ್ತಾರ್ಥಾ ಕಾರಿಕೈಸ್ಸಂಗೃಹ್ಣಾತಿ

**ಬ್ರಹ್ಮವಿತ್ಪಾಪವರ್ಗಾಣಾಮನಂತಾನಾಂ ಮಹೀಯಸಾಮ್ ।**
**ತದ್ವೇಷಿ ಸಂಕ್ರಮಂ ಜಾನನ್ ತ್ರಸ್ಯೇತ್ತದಪರಾಧತಃ ॥**

ವನು. ನೀನು ನನ್ನ ಭಕ್ತರ ವಿಷಯದಲ್ಲಿ ಅಪರಾಧಿಯು ; **ಅಹಂ ಭಕ್ತಪರಾಧೀನಃ** ಎಂದು ಹೇಳಿಕೊಂಡು ಸುಮ್ಮನಿರುವನು. ಇದಕ್ಕೆ ಪ್ರಾಯಶ್ಚಿತವೂ ಆ ಭಾಗವತನಲ್ಲೇ ಕ್ಷಮಾಪಣೆಯನ್ನು ಬೇಡತಕ್ಕದ್ದಾಗಿರುತ್ತದೆ. ಆತನಿಲ್ಲದಿದ್ದರೆ ತನ್ನ ಗುರುವಿನಲ್ಲಿ ಪ್ರಾಯಶ್ಚಿತ್ತ ಶರಣಾಗತಿಯನ್ನು ಮಾಡತಕ್ಕದ್ದಾಗಿರುತ್ತದೆ.

### ಮೇಲೆ ಹೇಳಿದವುಗಳನ್ನೆಲ್ಲಾ ಕಾರಿಕೆಗಳ ಮೂಲಕ ಸಂಗ್ರಹಿಸಿ ಹೇಳುತ್ತಾರೆ.

ಪ್ರಪನ್ನನಿಗೆ ಉತ್ತರಾಘ ಸಂಭವಿಸದೇ ಇರುವದಕ್ಕಾಗಿ, ಅವುಗಳಿಗೆ ಭಯಪಟ್ಟು ಜಾಗರೂಕನಾಗಿ ನಿತ್ಯನೈಮಿತ್ತಿಕಾದಿಗಳನ್ನು ಭಗವತ್ಪ್ರೀತ್ಯರ್ಥವಾಗಿಯೇ ಅನುಷ್ಠಿಸತಕ್ಕದ್ದೆಂದು ಸ್ಥಾಪಿಸಲ್ಪಟ್ಟಿತು. ಮುಂದೆ ಆ ಉತ್ತರಾಘಗಳಲ್ಲಿ ತುಂಬಾ ಪ್ರಬಲವಾದುದು ಭಾಗವತಾಪಚಾರವಾಗಿ ಅದನ್ನು ಮುಖ್ಯವಾಗಿ ಪರಿಹರಿಸತಕ್ಕದ್ದೆಂದು ಸಹೇತುಕವಾಗಿ ಹೇಳುತ್ತಾರೆ. **ಬ್ರಹ್ಮವಿತ್ಪಾಪವರ್ಗಾಣಾಂ** – ಬ್ರಹ್ಮವಿತ್ತುಗಳಿಗೆ ಎಂದರೆ ಭಾಗವತರಿಗೆ ಮಾಡುವ ಅಪರಾಧಗಳು, **ಅನನ್ತಾನಾಂ** – ಎಷ್ಟು ಅನುಭವಿಸಿದರೂ ತೀರದೇ ಇರುವ, **ಮಹೀಯಸಾಂ** – ಕ್ರೌರ್ಯದಲ್ಲಿ ಹೆಚ್ಚಿರುವ, ಎಂದರೆ ಸುರಾಪಾನ, ಬ್ರೂಣಹತ್ಯ, ಮಾತಾ ಪಿತೃಹತ್ಯ ಗುರುತಲ್ಪಗಮನ ಇತ್ಯಾದಿ ಪಾಪಗಳಿಗಿಂತಲೂ ಹೆಚ್ಚಾದವೆಂದೂ, **ತದ್ವೇಷಿ ಸಂಕ್ರಮಂಜಾನನ್** – ಅಂತಹ ಬ್ರಹ್ಮವಿತ್ತಿಗೆ ದ್ವೇಷಿಯೊಡನೆ ಸಂಬಂಧವನ್ನು ಎಂದರೆ ಸಂಸರ್ಗವನ್ನು ಹೊಂದುವನಿಗೆ, ಶ್ರುತಿಯಲ್ಲಿ ಹೇಳಿರುವ ಮರ್ದೆಶೆಯನ್ನೂ ತಿಳಿದವನಾಗಿ, **ತದಪರಾಧತಃ** – ಅಂತಹ ಬ್ರಹ್ಮವಿತ್ತಿಗೆ ಮಾಡುವ ಅಪರಾಧಗಳ ದೆಸೆಯಿಂದ, **ತ್ರಸ್ಯೇತ** – ಭಯಪಟ್ಟಿರತಕ್ಕದ್ದು. ಇದು ವಿಧಿಯೆಂವೇ ಭಾವಿಸತಕ್ಕದ್ದು. ಇದನ್ನು ತಿಳಿದವನು ಅದಕ್ಕಾಗಿ ಅಂಜಿ ಭಾಗವತಾಪಚಾರವನ್ನು ಹೊಂದುವದಿಲ್ಲವೆಂಬ ಭಾವವು. ಶ್ರುತಿಯಲ್ಲಿ ಏನು ಹೇಳಿದೆ ಎಂದರೆ ; **ತಸ್ಯಪುತ್ರಾದಾಯಮುಪಯನ್ತಿ ಸುಹೃದಸ್ಸಾಧುಕೃತ್ಯಾಂದ್ವಿಷನ್ತಃ ಪಾಪಕೃತ್ಯಾಂ**" ಎಂದಿರುವದರಿಂದ (ಶಾಟ್ಯಾಯನೋಕ್ತಿ) ಭಾಗವತನನ್ನು ದ್ವೇಷಿಸಿದರೆ ಆ ಪ್ರಪನ್ನನ ಪಾಪಕೃತ್ಯಗಳು ಈತನನ್ನು ಬಂದು ಸೇರುತ್ತವೆ. ಆದುದರಿಂದ ಇದಕ್ಕೆ ಅಂಜಿ ವರ್ತಿಸತಕ್ಕದು ಎಂದು ಹೇಳಲ್ಪಟ್ಟಿತು.

**ಸಾಪರಾಧೇಷು ಸಂಸರ್ಗೇಽಪ್ಯಪರಾಧಾನ್ ವಹತ್ಯಸೌ ।**
**ಮೋಕ್ತುಮೀಶ್ವರ ಕೃತ್ಯಾನಿ ತನ್ನಿರೋಧಾದಭೀಪ್ಸತಿ ॥**

ಇಲ್ಲಿ ಒಂದು ಪೂರ್ವಪಕ್ಷವು ಉದಿಸಬಹುದು ; ಏನೆಂದರೆ **"ಸರ್ವೇಪಾಪ್ಮಾನಃ ಪ್ರದೂಯನ್ತೇ"** (ಛಾಂ ೫. ೧೭. ೫) ಎಂದು ಹೇಳಿರುವಾಗ ಇನ್ನು ದ್ವೇಷಿಯಲ್ಲಿ ಬಂದು ಸೇರುವ ಪಾಪಗಳು ಎಲ್ಲಿಯದು ? ಎಂದರೆ, ಇದು ಅಗ್ನಿಹೋತ್ರಾದಿಗಳಿಂದುಂಟಾಗುವ ಫಲವು. ಉಪಾಯಾನುಷ್ಠಾನಕ್ಕೆ ಪ್ರತಿಬಂಧಕಗಳಾದ ಪಾಪಗಳೆಲ್ಲಾ ಕಳೆಯುತ್ತವೆ. ಉಪಾಯಾನುಷ್ಠಾನಾನಂತರ ಉಂಟಾಗುವ ಪಾಪಗಳಿರಬಹುದು. ಪ್ರಪನ್ನನಿಗೆ ಪೂರ್ವಾಘಗಳ ನಾಶವೂ ಉತ್ತರಾಘಗಳ (ಅಬುದ್ಧಿಪೂರ್ವಕ) ಅಶ್ಲೇಷವೂ ಹೇಳಿರುವಾಗ ಪುನಃ ಪಾಪಗಳೆಲ್ಲಿಯದು ? ಎಂದರೆ ಪ್ರಾರಬ್ಧಾನುಭವಕ್ಕಾಗಿ ಕೊಟ್ಟಿರುವ ಶರೀರ ಮೂಲಕ ಉಂಟಾಗುವ ಪಾಪಗಳು ಇದ್ದೇ ಇವೆ. ಆದುದರಿಂದ ಯಾವ ಪಾಪಗಳು ಕಳೆಯುತ್ತವೆ ಎಂಬ ವಿಷಯದಲ್ಲಿ **ಪ್ರಾರಬ್ಧೇತರ ಪೂರ್ವ ಪಾಪಮಖಿಲಂ** ಎಂದು ಹೇಳಿದವು. ಆದುದರಿಂದ **ಆರಬ್ಧ ಕಾರ್ಯಾಕ್ರಿಯಾನ್ ಕರಿಷ್ಯಮಾಣಾನ್** ಎಂಬ ಪ್ರವೃತ್ತಿಗಳು ಇದ್ದೇ ಇರುತ್ತವೆ. ಆದುದರಿಂದ ಮೇಲಿನ ಪೂರ್ವಪಕ್ಷಗಳು ಯಾವುವೂ ಸರಿಯಾದವಲ್ಲವು. ಈ ಪ್ರವೃತ್ತಿಗಳು ಎಲ್ಲಿಯವರಿಗೂ ಉಂಟು ಎಂದರೆ **"ಯಾವನ್ನವಿಮೋಕ್ಷ್ಯೇ ಅಥ ಸಂಪತ್ಸ್ಯೇ"** ಈ ಪ್ರಪನ್ನನಿಗೆ ಶರೀರವಿರುವ ತನಕ. ಆದುದರಿಂದ ಪ್ರಪನ್ನನ ದ್ವೇಷಿಗೆ ಪ್ರಪನ್ನನ ಪಾಪಗಳು ಬಂದು ಸೇರುತ್ತವೆ. ಎಂಬುದರಲ್ಲಿ ಅನುಪಪನ್ನವಾದುದೂ ಯಾವುದೂ ಇರುವದಿಲ್ಲವು. ಈ ಮೇಲಿನ ಶ್ರುತಿಯನ್ನು ಉದಾಹರಿಸಿರುವದರಿಂದ, ಪ್ರಾಸಙ್ಗಿಕವಾಗಿ ಅಯಥಾರ್ಥವಾದ ಜೀವನ್ಮುಕ್ತಿಯುಂಟೆಂಬ ವಾದವೂ ನಿರಸ್ತವು. ಉಪಾಸಕನಿಗೆ ಸಶರೀರವಾಗಿಯೇ ಮುಕ್ತಿ ಎಂದರೆ ಜೀವನ್ಮುಕ್ತಿಯುಂಟೆಂದೂ ಅದು ಗೀತಾ ದ್ವಿತೀಯಾಧ್ಯಾಯದ ಕೊನೆಯ ಶ್ಲೋಕದಲ್ಲಿ ಹೇಳಲ್ಪಟ್ಟಿದೆ ಎನ್ನುವರು. ಸಶರೀರನಾಗಿ, ಶರೀರದ ಮೂಲಕ ಜ್ಞಾನ ತಿರೋಹಿತತ್ವವೂ ಇರುವಾಗ ಸುಕೃತ ದುಷ್ಕೃತ ಪ್ರವೃತ್ತಿಗಳು ಇದ್ದೇ ಇರುತ್ತವೆ. **"ತಮೇವಂ ವಿದ್ವಾನ್ ಅಮೃತ ಇಹಭವತಿ"** ಎಂಬಲ್ಲಿ ಹೇಳಿದೆಯಲ್ಲಾ ಎಂದರೆ ಉಪಾಸನಾ ಕಾಲದಲ್ಲಿನ ಆನಂದವು ಮೋಕ್ಷಾನಂದಕ್ಕೆ ತುಲ್ಯವಾದುದೆಂದು ಹೇಳಿತು. ಉಪಾಸನಾ ಮುಗಿದನಂತರ ಹೇಯತ್ವವು ತಪ್ಪಿದ್ದಲ್ಲವು.

**ಸಾಪರಾಧೇಷು** - ಹಾಗೆ ಭಾಗವತಾಪಚಾರವನ್ನೂ ಹೊಂದಿದವರುಗಳಲ್ಲಿ, **ಸಂಸರ್ಗೇಽಪಿ** – ಸಂಸರ್ಗವನ್ನು ಹೊಂದಿದ್ದರೂ, ಸೇರಿದ್ದರೂ ಎಂಬ ಭಾವವು, **ಅಸೌ** – ಈ ಪ್ರಪನ್ನನು, **ಅಪರಾಧಾನ್** – ಆತನ ಅಪರಾಧಗಳನ್ನು, **ವಹತಿ** - ವಹಿಸುವನು. ಫಲವು, ಯಾವನು ಕರ್ತಾವೋ **"ಪ್ರಯೋಕ್ತರಿ"** ಅವನಲ್ಲಿಯಲ್ಲವೇ

ಸೇರಬೇಕು. ಅಪರಾಧ ಮಾಡಿದವನು ಬೇರೆ, ಆ ಅಪರಾಧವು ಸಂಸರ್ಗದಿಂದ ಇವನಿಗೆ ಹೇಗೆ ಉಂಟುತ್ತೇ ಎಂದರೆ ಈತನು ಸಹಾಯಕಗೋಷ್ಠಿಗೆ (abettor) ಸೇರಿ ಫಲವನ್ನು ಅನುಭವಿಸುವನು. ದುಷ್ಟ ದುರ್ಯೋದನನೊಂದಿಗೆ ಸಂಸರ್ಗದಿಂದ ಭೀಷ್ಮ ದ್ರೋಣರೂ ದೋಷಿಗಳಾಗಿ ಶ್ರೀ ಕೃಷ್ಣಸಹಾಯದಿಂದ ಪಾಂಡವರಿಂದ ಕೊಲ್ಲಲ್ಪಟ್ಟರು. ಹಾಗೆ ಫಲ ಉಂಟಾಗುವದಕ್ಕೆ ಹೇತುವನ್ನು ಉತ್ತರಾರ್ಧದಿಂದ ತಿಳಿಸುತ್ತಾರೆ. **ತದ್ವಿರೋಧಾತ್** - ಯಾವಾಗ ಭಾಗವತ ದ್ವೇಷಿಯಾದನೋ, ಹಿಂದೆ **ಈಶ್ವರ** ಶಬ್ದವಿರುವದರಿಂದ, **ತದ್ವಿರೋಧಾತ್** ಎಂದರೆ ಅಂತಹ ಸಂಸರ್ಗಿಯು ಈಶ್ವರವಿರೋಧಿಯಾಗುವದರಿಂದ, ಆತನ ನಿಗ್ರಹಕ್ಕೆ ಪಾತ್ರನಾಗಿ, ಆಗ **ಅಸೌ** - ಎಂದು ಇಟ್ಟಿಕೊಳ್ಳಬೇಕು, ಈ ಸಂಸರ್ಗಿಯೂ ಕೂಡ, **ಈಶ್ವರಕೃತ್ಯಾನಿ**- ಆ ದ್ವೇಷಿಗೆ ಉಂಟುಮಾಡುವ ಈಶ್ವರಕೃತ್ಯಗಳಾದ ದಂಡನೆಗಳನ್ನು, **ವೋಢುಮಭೀಪ್ಸತಿ** - ಹೊಂದಲು ಅಪೇಕ್ಷಿಸುವನಾಗುವನು. ಭಾಗವತ ದ್ವೇಷಿಯು ಭಗವಂತನಿಗೂ ದ್ವೇಷಿಯು, ಅಂತವನ ಸಂಸರ್ಗವನ್ನು ಹೊಂದಿದರೆ ಅವನಿಗೆ ಯಾವ ದಂಡನೆಯೋ, ಆ ಸಂಸರ್ಗಿಗೂ ಕೂಡ ಅದೇ ದಂಡನೆಯು. ಹೀಗೆ ಸಾರದೀಪಸಾರ ವಿವರಣೆ ವ್ಯಾಖ್ಯಾತೃಗಳು ಅರ್ಥಮಾಡಿರುತ್ತಾರೆ. ಸಾರಾ ಸ್ವಾದಿನಿ ಸಾರ ಪ್ರಕಾಶ ವ್ಯಾಖ್ಯಾತೃಗಳ ಅರ್ಥ ಹೇಗೆಂದರೆ ? ಭಾಗವತ ದ್ವೇಷಿಯೊಂದಿಗೆ ಸಂಸರ್ಗ ಬೇಡವೆಂದೇನೋ ಹೇಳಿದುದು ಸರಿಯೇ. ಆಗಲಿ ಅಂತಹ ದ್ವೇಷಿಯ ಸಂಸರ್ಗಕ್ಕೆ ಇವನನ್ನು ದ್ವೇಷಿಸಿ ದಂಡನೆಯನ್ನು ಮಾಡಹುದೋ ? ಎಂದರೆ ಅವರವರ ಅಪರಾಧಗಳಿಗೆ ದಂಡನೆ ಮಾಡುವವನು ಸ್ವತಂತ್ರನಾದ ಈಶ್ವರನು ; ಪರತಂತ್ರನಾದ ಇವನು ದಂಡನೆ ವಹಿಸುವದು ಈತನಿಗೆ ಸ್ವರೂಪವಿರುದ್ಧವೆಂದು ಹೇಳಿ ಅದಕ್ಕನುಗುಣವಾಗಿ ವ್ಯಾಖ್ಯಾನ ಮಾಡಿರುತ್ತಾರೆ. ಹೇಗೆಂದರೆ ? **ಅಯಂ** - ಈತನು, **ತದ್ವಿರೋಧಾತ್** - ಆ ಭಾಗವತ ದ್ವೇಷಿಯ ವಿರೋಧದಿಂದ, ಈಶ್ವರಕೃತ್ಯಾನಿ ಸ್ವತಂತ್ರನಾದ ಈಶ್ವರನ ಕೃತ್ಯಗಳಾದ ದಂಡನೆಗಳನ್ನು **ವೋಢುಮಭೀಪ್ಸತಿ** - ತಾನು ಮಾಡಲು ಇಚ್ಛಿಸುವನು. ಇದು ಸ್ವರೂಪ ವಿರೋಧವೆಂಬ ಭಾವವು. ಸಾರಸಂಗ್ರಹ ವ್ಯಾಖ್ಯಾತಾ ಇನ್ನೊಂದು ವಿಧವಾಗೆ ಅರ್ಥಮಾಡಿರುತ್ತಾರೆ.— ಭಾಗವತದ್ವೇಷಿ ಸಂಸರ್ಗವೇನೋ ಬೇಡ ಎಂದು ಉಪದೇಶಿಸಿದುದೇನೋ ಸರಿಯೇ. ಆತನೊಂದಿಗೆ ಸೇರಿ ನೀನು ಮಾಡುವದು ಸರಿಯಲ್ಲವೆಂಬ ಸದುಪದೇಶವು ಕೂಡದೋ ? ಎಂದರೆ "**ಆತ್ಮದ್ರುಹಮನುಗ್ರಾಹ್ಯದಂ**" ಎಂಬ ಹೇಳಿಕೆಯ ಪ್ರಕಾರ ಆತನು ಭಗವನ್ನಿಗ್ರಹಕ್ಕೆ ಪಾತ್ರನಾಗಿ ಸುತರಾಂ ಅಯೋಗ್ಯನಾದ ಪ್ರಯುಕ್ತ ಆತನಲ್ಲಿ ದಯೆಯು ಭಗವಂತನಿಗೆ ಸ್ವಲ್ಪವೂ ಇಷ್ಟವಿಲ್ಲವಾದುದರಿಂದ ತಟಸ್ಥನಾಗಿರಬೇಕೆಂದು ಉತ್ತರಾರ್ಧದಿಂದ ತಿಳಿಸುತ್ತಾರೆಂದು ಅರ್ಥಮಾಡಿರುತ್ತಾರೆ. **ತದ್ವಿ**

**ತನ್ನಿನೈವಿಲ್ ವಿಲಕ್ಕಿನ್ರಿತ್ತನ್ನೈ ವಣ್ಣಾದಾರ್ ನಿನ್ನೈವನ್ನೈತ್ತುನ್ ವಿಳೈತು. ವಿಲಕ್ಕುನಾಥ್ | ಎನ್ನಿನ್ನೈಯಿಃಪ್ಪವತ್ತಿಲಿನ್ರ ಮಾತ್ತಿಯಿಣ್ಯೆಯುಡಕ್ಕಿ ಮಡ್ಯೈ**

**ರೋಧಾತ್** - ಭಾಗವತ ವಿರೋಧವು ಭಗವಂತನಿಗೆ ಇಷ್ಟವಿಲ್ಲದೆ ತುಂಬಾ ಬಾಧಕವಾಗಿರುವದರ ದೆಸೆಯಿಂದ, **ಈಶ್ವರಕೃತ್ಯಾನಿ** - ಆತನು ಮಾಡತಕ್ಕ ಉಪದೇಶ ದಂಡನೆಗಳನ್ನು, **ಮೋಡುಮುಭೀಪ್ಸ್ಯತಿ** - ತಾನು ಮಾಡಲು ಇಚ್ಛಿಸುವನು. ಇದು ಸ್ವರೂಪ ವಿರುದ್ಧವಾದುದೆಂಬ ಭಾವವು.

ಪೂರ್ವಾರ್ಧದಲ್ಲಿ ಹೇಳಿರುವದರ ಸಮರ್ಥನೆಗಾಗಿ ಉತ್ತರಾರ್ಧವು ಪ್ರಯುಕ್ತವೆಂದು ಅರ್ಥಮಾಡುವದೇ ಯುಕ್ತವಾದುದಱಿಂದ ಮೊದಲು ಕೊಟ್ಟಿರುವ ಅರ್ಥವೇ ಗ್ರಾಹ್ಯವು.

ಈ ಚರಮ ಶ್ಲೋಕದ ಮೂರನೆಯಪಾದವಾದ "**ಅಹಂ ತ್ವಾ ಸರ್ವಪಾಪೇಭ್ಯಃ**" ಅರ್ಥಗಳನ್ನೆಲ್ಲಾ ಸಂಗ್ರಹಿಸಿ ಒಂದು ಪಾಶುರದ ಮೂಲಕ ತಿಳಿಸುತ್ತಾರೆ. ತಾ... ಸತ್ಯಸಂಕಲ್ಪನು ಸರ್ವಜ್ಞನು, ಸರ್ವಕಾರಣಭೂತನು ಸರ್ವನಿಯನ್ತಾ ನಿರಕುಂಶ ಸ್ವಾತಂತ್ರ್ಯಯುಕ್ತನು, ನಿರವಧಿಕಕಾರುಣ್ಯಾಜಲಧಿಯು, ಅಪಾರ ಸೌಲಭ್ಯ ಸೌಶೀಲ್ಯಾದಾರ್ಯಾನಂತ ಕಲ್ಯಾಣಗುಣಗಣ ಮಹೋದಧಿಯು, ಸರ್ವಶೇಷಿಯಾದ **ಅಹಂ**-ನಾನು, ಅನಾದಿ ಪ್ರಕೃತ್ಯಾದಿಗಳಿಂದ ಬದ್ಧನಾಗಿ ಸಾಂಸಾರಿಕ ಸುಖದುಃಖಾದಿಗಳನ್ನನುಭವಿಸುತ್ತಾ ಅನಂತ ಪಾಪಗಳಿಂದ ಕಾರ್ಪಾಸ ಬೀಜವು ತಂತುಗಳಿಂದ ಪರಿವೃತವಾಗಿರುವ ಹಾಗೆ ಬಂಧಿಸಲ್ಪಟ್ಟವನನ್ನು ಕಂಡು ಪರಿತಾಪದಿಂದ ತನ್ನನ್ನಾಶ್ರಯಿಸಿದನೆಂಬ ವ್ಯಾಜದಿಂದ ವೈರಾಗ್ಯವನ್ನು ಹುಟ್ಟಿಸಿ, ಮುಮುಕ್ಷುವಾದ ನಿನ್ನನ್ನೂ (ತ್ವಾ ಎಂಬುವದರರ್ಥವು) ಸಮಸ್ತ ಪಾಪಗಳಿಂದಲೂ ಬಿಡಿಸಿ, ಯಾವಾಗ ಶರೀರವನ್ನು ತ್ಯಜಿಸಿ ನಿತ್ಯವಿಭೂತಿಗೆ ಬರಲು ನಿನಗೆ ಇಷ್ಟವೆ ..ಅನುಮತಿ ಪ್ರತೀಕ್ಷೆಯನ್ನು ಲೀಲಾನಾರತಿಯು ಮಾಡುತ್ತಿರುವನೆಂದು ಅಪ್ಪಣೆ ..ಡಿಸುತ್ತಾರೆ.

**ಅರ್ಥವು** - **ತನ್ ನಿನ್ನೈವಿಲ್**-ಸತ್ಯ ಸಙ್ಕಲ್ಪನಾದ ತ.. ಸಂಕಲ್ಪದಲ್ಲಿ, **ವಿಲಕ್ಕುಇನ್ರಿ** - ಯಾವವೊಂದು ತಡೆಯಿಲ್ಲದ ಹಾಗೆಮಾಡಿ, **ತನ್ನೈನಣ್ಣಾದಾರ್** - ತನ್ನನ್ನು ಆಶ್ರಯಿಸದೇ ಇರುವವರ, **ನಿನ್ನೈವು ಅನ್ನೈತ್ತುಮ್** - ಮನೋರಥಗಳೆಲ್ಲವನ್ನೂ **ತಾನ್ ವಿಳೈತ್ತು** - ತಾನೇ ಉಂಟಾಗುವ ಹಾಗೆ ಮಾಡಿ **ವಿಲಕ್ಕುಮ್** - ಅನಂತರ ..ಶಮಾಡುವ, **ನಾಥ್** - ನಮ್ಮ ಸ್ವಾಮಿಯಾದ ವಾಸುದೇವನು **ನನ್ನಿನವ್ವೈ**-ನನ್ನ ಸಙ್ಕಲ್ಪವನ್ನು, **ಇಭವತ್ತಿಲ್**-ಈ ಜನ್ಮದಲ್ಲೇ, **ಇನ್ರುಮಾತ್ತಿ** - ಯಾವುದೋ ಒಂದು ಸುಕೃತವನ್ನು ಮೂಲಮಾಡಿಕೊಂಡು ಸಂಸಾರದಲ್ಲಿ ಭೋಗ್ಯಬುದ್ಧಿಯನ್ನು ನಿವೃತ್ತಿಮಾಡಿ, ವೈರಾಗ್ಯವನ್ನು ಹುಟ್ಟಿಸಿ, **ಇಣ್ಣೈಅಡಿಕೀಳ್**-ನಿನ್ನ ಚರಣದ್ವಂದದ ಕೆಳಗೆ **ಎನ್ನೈ ಅಡೈಕ್ಕಿಲುಂ ಎನ್ರುವೈತ್ತು** - ನನ್ನನ್ನು ರಕ್ಷಿಸಲು ಯೋಗ್ಯ

**ಕ್ಕಲಮೆನ್ರೆನ್ನೈವೈತ್ತು ಮುನ್ನಿನೈಪಾಲ್ ಯಾನ್ಮುಯನ್ರ ವಿನೈಯಾಲ್**
**ವನ್ದಮುನಿವಯರ್ನ್ದು ಮುತ್ತಿತರಮುನ್ನೇ ತೋನ್ರಿ । ನನ್ನಿನೈ ವಾನಾಮಿಶ್ಶೈ**
**ಯುನ್ ಕಾಲಮಿನ್ರೋನಾಳೈಯೋವೆನ್ರುನಕ್ಕೈಶೆಯ್ಗಿನ್ರಾನೇ ॥ ॥ ೪೯ ॥**

ವಾದ ವಸ್ತುವೆಂದು ಸಂಕಲ್ಪಿಸಿ, **ಮುನ್ನಿನವಾಲ್** ಮುಂದೆ ಇದ್ದ ನನ್ನ ತಪ್ಪಾದ ಮನೋರಥಗಳಿಂದ, **ಯಾನ್ಮುಯನ್ರ ನ್ನೈಯಾಲ್** - ನಾನು ಮಾಡಿದ ಕರ್ಮಗಳಿಂದ, **ವಂದ ಮುನಿವು** - ಬಂದಂಥಾ ನಿಗ್ರಹವು. **ಅಯರ್ನ್ದು** - ಮರೆತು ಬಿಟ್ಟು, **ಮುತ್ತಿತರ** - ಮುಕ್ತಿಯನ್ನು ಕೊಡುವದಕ್ಕೆ, **ಮುನ್ನೈ** - ನಾನು ಕೇಳುವದಕ್ಕೆ, ಮುಂಚಿತವಾಗಿಯೇ ಸಂಕಲ್ಪಿಸಿ ಅಥವಾ - ಎದುರಿಗೆ ನಿಂತು (ಅರ್ಜುನನಿಗೆಯಾದರೆ ಲೀಲಾಸಾರಥಿಯಾಗಿ ಪ್ರತ್ಯಕ್ಷವಾಗಿ ನಿಂತು,) **ನನ್ನಿನವಾಲ್** - ನನ್ನ ಒಳ್ಳೆ ಜ್ಞಾನದಿಂದ, **ನಾಮಿಶ್ಶೈಯುಂಕಾಲ** - ನಾನು ಅಪೇಕ್ಷಿಸುವ ಕಾಲವು, **ಇನ್ರೋನಾಳೆಯೋ** - ಆರ್ತನಾಗಿ ಅಪೇಕ್ಷಿಸುವ ಕಾಲವು **ಈವತ್ತೋ** ಅಥವಾ ನಾಳೆಯೋ, ಎಂದರೆ ದೃಪ್ತನಾಗಿ ದೇಹಾವಸಾನಾನಂತರವೋ, **ಎನ್ರು** - ಎಂಬದಾಗಿ, **ನಗೈಶೆಯ್ಗಿನ್ರಾನ್** - ನಗುವ ಮುಖವನ್ನು ಪ್ರದರ್ಶಿಸುತ್ತಾನೆ, ಸ್ಮಿತವಕ್ತ್ರನಾಗಿದ್ದಾನೆಂಬ ಭಾವವು.

**ಉಪಪಾದನೆ** - ಈ ಪಾಶುರದಲ್ಲಿ ಶ್ರೀನಿಗಮಾಂತ ಮಹಾದೇಶಿಕರವರು ಅರ್ಜುನನಿಗೆ ಪ್ರಸನ್ನವದನನಾಗಿ ಮಂದಹಾಸವನ್ನು ಸುರಿಸುತ್ತಾ ಮುಗುಳುನಗೆಯಿಂದ ತೋರಿದ ಸ್ಮಿತವಕ್ತ್ರವನ್ನು ಅನುಭವಿಸುವವರಾಗಿ, ಅಂತಾ ಬಂಧುಗಳು ಮತ್ತು ಗುರುಗಳಾದ ಭೀಷ್ಮ ದ್ರೋಣಾದಿಗಳನ್ನು ಯುದ್ಧದಲ್ಲಿ ಕೊಲ್ಲಲಾರೆನೆಂದು "ಸೀದಮಾನ"ನಾಗಿರುವಾಗ "**ಪ್ರಹಸನ್ನಿವ**" ನಗುವನ ಹಾಗೆ ಉಪದೇಶವನ್ನು ಸ್ವಾಮಿ ತೊಡಗಿದನೋ, ಹಾಗೆಯೇ ಲೀಲಾಸಾರಥಿಯು ಇಲ್ಲಿಯೂ ಪಾಪಗಳು ಹೋಗುವ ಬಗೆ ಹೇಗೆ ಉಪಾಸನವು ನನ್ನಿಂದ ನಾಗದೇ ಎಂದು ಶೋಕಿಸುತ್ತಿರುವವನಿಗೆ ಪಾಪ ನಿವಾರಕವಾದ ಅಮೋಘಮಾರ್ಗವನ್ನು ತಿಳಿಸಿ, ನಿತ್ಯ ವಿಭೂತಿಗೆ ಯಾವಾಗ ಬರಲು ಇಷ್ಟವೆಂದು ನಗುತ್ತಾ ಕೇಳುವಹಾಗೆ ಇದೆ ಎಂದು ಅನುಭವಿಸುತ್ತಾರೆ. ಅವತಾರಗಳಲ್ಲಿ ನಮಗಾದರೋ ಜನ್ಮವಿಲ್ಲವಾದುದರಿಂದ, ನಮಗೆ ಅರ್ಚ್ಯಾವತಾರಿಯಾಗಿ ಪ್ರತ್ಯಕ್ಷವಾದುದರಿಂದ ಪ್ರಪನ್ನನಿಗೆ ಅರ್ಚಾವತಾರಿಯು ಸ್ಮಿತವಕ್ತ್ರನಾಗಿ ಸೇವೆಯನ್ನೀಯುವದರಿಂದ, ಮುಮುಕ್ಷುವೂ ಕೂಡ ಇದೇ ರೀತಿಯಲ್ಲೇ ಅನುಭವಿಸಬಹುದೆಂಬುದೂ ತೋರಿಬರುತ್ತದೆ. ಮೊದಲು **ಅಹಂ** - ಶಬ್ದಾರ್ಥವನ್ನು ಉಪಪಾದಿಸುತ್ತಾರೆ. ತಾನು ಎಂತವನೆಂದರೆ; **ತನ್ನಿನೈವಿಲಕ್ಕಿನ್ನಿ** - ತನ್ನ ಸತ್ಯಸಙ್ಕಲ್ಪತೆಗೆ ಏನೊಂದೂ ವಿಘ್ನವಿಲ್ಲವು.

ತನ್ನ ಸಙ್ಕಲ್ಪವು ಎಂತಾದ್ದೆಂದರೆ ಶಿಷ್ಟಪರಿಗ್ರಹ, ರಕ್ಷಣೆ; ದುಷ್ಟನಿಗ್ರಹ ಇವೆರಡರ ವಿಷಯದಲ್ಲಿ ಪ್ರತಿಬಂಧಕ ಮಾಡುವವರಿಲ್ಲವು. ಈ ಅಭಿಪ್ರಾಯವೇ ಅಮೋಘವಾಗಿ ಭಯನಿವಾರಕ ಸ್ತೋತ್ರವೆಂಬ ಪ್ರತೀತಿಯುಳ್ಳ ಅಭೀತಿಸ್ತವದ **"ವಿಧಿಸ್ತ್ರಿಪುರಮಾರ್ದನ"** ವೆಂಬಲ್ಲಿ ಉಪಪಾದಿತವು. ದಾಸನು ಅದಕ್ಕೆ ಬರೆದಿರುವ ಉಪಪಾದನೆಯನ್ನು ಕಟಾಕ್ಷಿಸಬಹುದು. ಶಿಷ್ಟಪರಿಪಾಲನೆಯ ಸಙ್ಕಲ್ಪದಲ್ಲಿ ಯಾವ ವಿಘ್ನಗಳೂ ಉಪಯೋಗವಾಗುವದಿಲ್ಲವೆಂಬುದಕ್ಕೆ ಅಲ್ಲಿ ಅನೇಕ ನಿದರ್ಶನಗಳನ್ನು ಉದಾಹರಿಸಿರುತ್ತದೆ. ಅಂಬರೀಷನಿಗೆ ದುರ್ವಾಸರಿಂದಲೂ, ಪ್ರಹ್ಲಾದನಿಗೆ ಹಿರಣ್ಯಕಶಿಪುವಿನಿಂದಲೂ ರುದ್ರನಿಗೆ ಭಸ್ಮಾಸುರನಿಂದಲೂ, ಪಾಂಡವರಿಗೆ ದುರ್ಯೋಧನಾದಿಗಳಿಂದಲೂ, ಪ್ರತಿಬಂಧಕಗಳು ಕಾರ್ಯಕಾರಿಯಾಗಲಿಲ್ಲವು ಹಾಗೆಯೇ ಸ್ವಾಮಿಯು ನಿಗ್ರಹಕ್ಕೆ ಯೋಗ್ಯನೆಂದು ಸಂಕಲ್ಪಿಸಿದುದಕ್ಕೆ ಅನ್ಯಥಾ ಮಾಡಲು ಯಾರಿಗೂ ಶಕ್ತಿಯಿಲ್ಲವು. ವಿಭೀಷಣನ ರಕ್ಷಣಾ ಸಙ್ಕಲ್ಪದಲ್ಲಿ ಸುಗ್ರೀವ, ಜಾಂಬವ ಅಂಗದಾದಿಗಳ ವಾದಗಳು ನಿರರ್ಥಕಗಳಾದವು.

**ತನ್ನೈಯನ್ ಡಾರ್....ವಿಲಕ್ಕುಮ್**-ತನ್ನನ್ನು ಆಶ್ರಯಿಸದೇ ಇರುವವರ ಮನೋರಥಗಳನ್ನೆಲ್ಲಾ ಹಾಳುಮಾಡುವನೆಂಬುದಕ್ಕೆ ನಿದರ್ಶನವನ್ನು ಪೌಂಡ್ರಕ ವಾಸುದೇವ, ರಾವಣ ಕುಂಭಕರ್ಣ, ಹಿರಣ್ಯಕಶಿಪು ದುರ್ಯೋಧನಾದಿಗಳ ವೃತ್ತಾಂತಗಳಲ್ಲಿ ಕಾಣಬಹುದು-**ಎನ್ನಿನನ್ನೈ ಇಬ್ಬವತ್ತಿಲ್ ಇತ್ಯಾದಿ**-ಸರ್ವೇಶ್ವರನು ತುಂಬಾ ಕರುಣೆಯಿಂದ ಶರೀರೇಂದ್ರಿಯಗಳನ್ನು ನಮಗೆ ಕೊಟ್ಟಿರುವದು ಆತನನ್ನು ಆಶ್ರಯಿಸಿ ತನ್ನನ್ನು ಬಂದು ಸೇರಲಿ ಎಂಬದಾಗಿ. ನಾವು ಅಂತಹ ಸುಸಮಯವನ್ನು ಉಪಯೋಗಿಸಿಕೊಳ್ಳದೆ ಉಪಭೋಗಾ ಸಕ್ತರಾಗಿರುತ್ತೇವೆ. ಆದರೆ ಸರ್ವೇಶ್ವರನು ನಮಗೆ ನಾಥನು ನಾವು ಆತನಿಗೆ ಅಧೀನರು ; ಆದುದರಿಂದ ಆತನೇ ನಮ್ಮನ್ನು ಕರುಣಿಸಿ, ಒಂದು ಸುಕೃತವನ್ನು ವ್ಯಾಜಮಾಡಿಕೊಂಡು, ಭೋಗ್ಯಬುದ್ಧಿಯನ್ನು ಹೋಗಲಾಡಿಸಿ, ತನ್ನ **ಅಣೈಅಡಿಕ್ಕೀಳ್** ತನ್ನ ಚರಣಾರವಿಂದದ್ವಯವನ್ನು ಆಶ್ರಯಿಸುವ ಹಾಗೆ ಮಾಡಿ, ತನ್ಮೂಲಕವಾಗಿ ನಮ್ಮಗಳ ಪಾಪರಾಶಿಯನ್ನೆಲ್ಲಾ ಹೋಗಲಾಡಿಸಿ, ಆರ್ತನಾಗಿ ಒಡನೆಯೇ ಈವತ್ತೇ ಮುಕ್ತಿಯನ್ನು ದಯಪಾಲಿಸಬೇಕೆಂದರೆ ಹಾಗೆಯೇ ನಡಿಸಲು ಸಿದ್ಧನಾಗಿ, ದೃಪ್ತನಾಗಿ ದೇಹಾವಸಾನಾಂತರ ಬೇಕೆಂದರೆ ಅದಕ್ಕೂ ಬದ್ಧನಾಗಿ, ಈ ಪ್ರಿಯಸಾದ ಪ್ರಪನ್ನನು ಯಾವಾಗ ಬರುವನೆಂದು ಅವಸರ ಪ್ರತೀಕ್ಷೆಮಾಡುತ್ತಾ ಮುಗುಳನಗೆಯಿಂದ ಲೀಲಾಸಾರಥಿಯು ಅರ್ಜುನನ ಶೋಕವನ್ನು ಹೋಗಲಾಡಿಸಿ ಸೇವೆಯನ್ನಿತ್ತನೆಂಬ ತಾತ್ಪರ್ಯವು.

ಈ ಪಾಶುರವು **ಅಹಂತ್ವಾಸರ್ವಪಾಪೇಭ್ಯಃ** ಎಂಬುದರ ಅಭಿಪ್ರಾಯವೆಂದು ಹೇಳಿದನಂತರ, ಮುಕ್ತಿತರವೆಂದು ನಾಲ್ಕನೆಯ ಪಾದದ ಅರ್ಥವನ್ನು ಹೇಳಿಹುದು

## ಮೋಕ್ಷಯಿಷ್ಯಾಮಿಶಬ್ದಾರ್ಥಮಾಹ

**“ಮೋಕ್ಷಯಿಷ್ಯಾಮಿ” ಎನ್ರದು ಉನಕ್ಕಿಷ್ಟಮಾನಪ್ಪೋತು ಮುಕ್ತನಾಕ್ಕುವೆನೆನ್ರಪಡಿ. ಶಿಲರ್ ಪಾಪಙ್ಗಳೈ “ನಕ್ಷಮಾಮಿ” ಎಙ್ಗೈಯುಮ್, ಇಙ್ಗೇ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎಙ್ಗೈಯುಮ್, ವಿರುದ್ಧಮನ್ರೋ? ಆಗೈಯಾಲ್ ಇದು ಉಪಚ್ಛಂದ ನಮಾಮುತ್ತ ನ್ನೈಯನ್ರೋ? ಮೆನ್ನಿಲ್, ಇವ್ವೈಯಿರಣ್ಡುಮ್ ಭಿನ್ನವಿಷಯಮಾಗೈಯಾಲೇ ವಿರೋಧಮಿಲ್ಲೈ.**

---

ಹೇಗೆ? ಎಂದರೆ ಯಾವಾಗಲೂ ಹಿಂದಿನ ಉಪಪಾದನೆಯನ್ನು ಸಙ್ಗ್ರಹಿಸಿ ಪಾಶುರಗಳಿಂದಾಗಲಿ ಶ್ಲೋಕದಿಂದಾಗಲಿ ಹೇಳುವಾಗ ಮುಂದಿನ ಭಾಗದ ಅರ್ಥವನ್ನೂ ಸಂಗತಿಗಾಗಿ ಸೂಚಿಸುವ ಪದ್ಧತಿಯನ್ನನುಸರಿಸಿ, **ಮೋಕ್ಷಯಿಷ್ಯಾಮಿಮಾಶುಚಃ** ಎಂಬುದರ ಅರ್ಥವನ್ನು ತಿಳಿಸಿದರು. ಅದರ ಅರ್ಥವನ್ನು ಮುಂದೆ ಉಪಪಾದಿಸುತ್ತಾರೆ.

ಮೋಕ್ಷಯಿಷ್ಯಾಮಿ ಎಂಬದರ ಅರ್ಥವನ್ನು ತಿಳಿಸುತ್ತಾರೆ.

**ಇನ್ರೋ ನಾಳೈಯೋ ವಿನ್ರು ನಗೈಶೆಯಗಿನ್ರಾನ್, ಎನ್ರದು** – ಎಂದು ಹೇಳಿರುವದು **ಉನಕ್ಕಿಷ್ಟಮಾನಪ್ಪೋದು ಮುಕ್ತನಾಕ್ಕುವೆ ಎನ್ರಪಡಿ** – ನಿನಗೆ ಇಷ್ಟವಾದಾಗ ನಿನ್ನನ್ನು ಮುಕ್ತನಾಗಿ ಮಾಡುವೆನು ಎಂದು ಹೇಳಿದ ಹಾಗೆ. ಹಾಗಾದರೆ ಭವಿಷ್ಯತ್ಕಾಲದಲ್ಲಿ ಎಂದು ಹೇಳಿದ ಹಾಗಾಯಿತು. ಶರಣಾಗತಿಯ ಉತ್ತರಕ್ಷಣದಲ್ಲೋ ಅಥವಾ ನಾಳೆಯೋ? ದೇಹಾವಸಾನಾನಂತರ ಈ ಪ್ರಪನ್ನನಿಗೆ ಇಷ್ಟವಾದ ಕಾಲದಲ್ಲಿ. ಪ್ರಪನ್ನ ವಾತ್ಸಲ್ಯ ಜಲನಿಧಿಯಾಗಿರುವ ಸ್ವಾಮಿಯು ಶರಣಾಗತನಾದ ಕ್ಷಣವೇ ಮುಕ್ತಿಕೊಡಬೇಕಲ್ಲವೇ? ಎಂದರೆ ಮುಮುಕ್ಷುವಿನ ಇಷ್ಟಾನುಸಾರ ನಡೆಯುವದು ನ್ಯಾಯವಾದುದು ಎಂಬ ಭಾವವು.

ಇನ್ನೊಂದು ಆಕ್ಷೇಪಣೆಯೇನೆಂದರೆ? ವರಾಹಾವತಾರಿಯಾಗಿ ಸ್ವಾಮಿಯು ಭೂಮಿದೇವಿಗೆ ಹೇಳಿರುತ್ತಾರೇನೆಂದರೆ ಅಪರಾಧಿಗಳ ವಿಷಯದಲ್ಲಿ **“ಪದ್ಮಪತ್ರಶತೇನಾಪಿ ನಕ್ಷಮಾಮಿ ವಸುಂಧರೇ। ಉಪಚಾರ ಶತೇನಾಪಿ ನಕ್ಷಮಾಮಿ ವಸುಂಧರೇ”** ನೂರು ಕಮಲಗಳನ್ನು ತಂದು ಅಷ್ಟೋತ್ತರ ಶತರೂಪದಲ್ಲಿ ಅರ್ಚಿಸಿದರೂ, ಅಥವಾ ನೂರು ವಿಧ ಅಥವಾ ನೂರು ಸಾರಿ ಉಪಚಾರಗಳನ್ನು ಮಾಡಿದರೂ, ನಾನು ಅಂತಹ ಅಪರಾಧಗಳನ್ನು ಕ್ಷಮಿಸುವದಿಲ್ಲವೆಂದು ತಾವೇ ಸ್ವತಃ ಹೇಳಿರುತ್ತಾರೆ. ಹಾಗೆಯೇ ಗೀತೆಯಲ್ಲೂ ಅಪರಾಧಿಗಳನ್ನು ಪುನಃ ಪುನಃ ಸಂಸಾರದಲ್ಲೇ ಮುಳಿಗಿಸುತ್ತೇನೆ ಎಂದು **ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್; ಕ್ಷಿಪಾಮ್ಯಜಸ್ರ ಮಾಸುರೇಷ್ವೇವ ಯೋನಿಷು।** ಎಂಬದಾಗಿ.

**"ನಕ್ಷಮಾಮಿ" ಎನ್ರದು "ಪದ್ಮಪತ್ರಶತೇನಾಪಿ ನಕ್ಷಮಾಮಿ ವಸುಂಧರೇ | ಉಪಚಾರಶತೇನಾಪಿ ನಕ್ಷಮಾಮಿ ವಸುಂಧರೇ" ಎನ್ನಾರ್ ಪ್ರೋಲೆ ಶೊಲ್ಲುಗಿರ ಪ್ರೋಲಿಯಾನ ಪ್ರಾಯಶ್ಚಿತ್ತಾನ್ತರಙ್ಗಳಾಲ್ ಕ್ಷಮಿಯೋೞ ಎನ್ರಪಡಿ, ಇಙ್ಙ ಸರ್ವಪಾಪಪ್ರಾಯಶ್ಚಿತ್ತಮಾಯಿರುಪ್ಪದೊರು ಉಪಾಯ ವಿಶೇಷ**

ಅರ್ಜುನನಿಗೆ ತಿಳಿಸಿರುತ್ತಾರೆ - ಹೀಗೆ ಅಪರಾಧಿಗಳಿಗೆ ನಿಗ್ರಹವೇ ಎಂದು ಹೇಳಿರುವಾಗ, ಇದು **ಬಾಲಾತುರಾದ್ಯುಪಚ್ಛಂದನತುಲ್ಯಂ** ಎಂಬಲ್ಲಿ ಹೇಳಿರುವ ಹಾಗೆ ಉಪಚ್ಛಂಧನಕ್ಕಾಗಿ **ಮೋಕ್ಷಯಿಷ್ಯಾಮಿ** ಎಂದು ಹೇಳಿದುದಲ್ಲವೋ ? ಎಂದರೆ, ಇವೆರಡೂ ಭಗವದ್ವಾಕ್ಯವು. ಒಂದಕ್ಕೊಂದು ವಿರುದ್ಧವಲ್ಲವು. ಭಿನ್ನ ಸಂದರ್ಭಗಳಲ್ಲಿ ಹೇಳಿದವೆಂದು ಸಮಾಧಾನವನ್ನು ಹೇಳುತ್ತಾರೆ— **ಶಿಲರ್** - ಕೆಲವರು, ಇವರು ಯಾರೆಂದರೆ ಶರಣಾಗತಿಯು ಉಪಾಯವೇ, ಅಲ್ಲವೆಂದು ಹೇಳುವವರು ಶಾಂಕರರು, ಮಾಧ್ವರು ನಮ್ಮಲ್ಲೇ ಕೆಲವರೂ ಸಹ, **ಪಾಪಗಳನ್ನು, "ನಕ್ಷಮಾಮಿ"** - ನಾನು ಸಹಿಸುವನಲ್ಲವೆಂದು, **ಎಙ್ಙೈಯುಮ್** - ವರಾಹಾವತಾರಿಯಾಗಿ ಹೇಳಿದುದೂ, **ಇಙ್ಗೇ ಸರ್ವಪಾಪೇಭ್ಯಃ ಮೋಕ್ಷಯಿಷ್ಯಾಮಿ ಎಙ್ಙೈಯುಮ್** ಎಂದು ಹೇಳಿದುದೂ, **ವಿರುಧಮನ್ರೋ** - ವಿರುದ್ಧವಲ್ಲವೋ ? **ಆಗೈಯಾಲ್** - ಆ ಕಾರಣದಿಂದ, ಇದು **ಉಪಚ್ಛಂದನ ಮತ್ತನ್ಯೈಯನ್ರೋ** - ಅರ್ಜುನನ ಕೈಯಲ್ಲಿ ಕೆಲಸಮಾಡಿಸುವದಕ್ಕಾಗಿ ಪುಸಲಾಯಿಸಿ ಹೇಳಿದುದಲ್ಲವೋ ? ಕಹಿಯಾಗಿರುವ ಔಷಧವನ್ನು ಬಾಲನು ಕುಡಿಯುದೇ ಇದ್ದರೆ ಸಕ್ಕರೆ ಹಾಗೆ ಸಿಹಿಯಾಗಿದೆ ಕುಡಿದುನೋಡು ಎಂದು ಸುಳ್ಳು ಪ್ರೇರಣೆ ಮಾಡಿದಹಾಗೆ ಅಲ್ಲವೋ ? ಎಂದಾಕ್ಷೇಪಣೆ ತಂದರೆ ಇದಕ್ಕೆ ಸಮಾಧಾನ ಹೇಳುತ್ತಾರೆ-**ಇವೈಯಿರಣ್ಡುಮ್**- ಇವೆರಡು ಭಗವದುಕ್ತಿಗಳು, **ಭಿನ್ನ ವಿಷಯಮಾಗೈಯಾಲೇ** - ಭಿನ್ನ ವಿಷಯವಾದುದರಿಂದ **ವಿರೋಧಮಿಲ್ಲೈ** - ಪರಸ್ಪರ ವಿರೋಧವಾಕ್ಯಗಳಲ್ಲವು. ಅದು ಹೇಗೆ ವಿರುದ್ಧವಾದವಲ್ಲವೆಂಬುದನ್ನು ಮುಂದೆ ಉಪಪಾದಿಸುತ್ತಾರೆ.

**"ನಕ್ಷಮಾಮಿ" ಎನ್ರದು** - ನಕ್ಷಮಾಮಿ ಎನ್ನುವ ಶ್ರೀವರಾಹಾವತಾರಿಯ ವಾಕ್ಯವು, ಓ ಭೂಮಿದೇವಿಯೇ **ಶತಕಮಲಪತ್ರಗಳಿಂದಲೂ ಕೂಡ** ನಾನು ಕ್ಷಮಿಸುವನಲ್ಲವು ; ಎಂದರೆ ಅವುಗಳಿಂದ ಅರ್ಚನೆಮಾಡಿದರೂ ಕ್ಷಮಿಸುವನಲ್ಲವು. ಮತ್ತು ಶತೋಪಚಾರಗಳಿಂದಲೂ ಕ್ಷಮಿಸುವನಲ್ಲವು, **ಎನ್ರಾರ್ ಪ್ರೋಲೆ** - **ಶೊಲ್ಲುಗಿರ ಪ್ರೋಲಿಯಾನ** ಎಂದು ಹೇಳಿರುವಹಾಗೆ ಇರುವ, **ಪ್ರಾಯಶ್ಚಿತ್ತಾನ್ತರಙ್ಗಳಾಲ್** - ಬೇರೆ ಪ್ರಾಯಶ್ಚಿತ್ತಗಳಿಂದ, ಒಂದೊಂದು ಪ್ರಾಯಶ್ಚಿತ್ತ ಒಂದೊಂದು ಪಾಪಗಳನ್ನು ಹೋಗಲಾಡಿಸಿ ಸರ್ವಪಾಪಗಳು ಕಳೆಯದೇ ಇರುವದರಿಂದ, **ಕ್ಷಮಯೋೞ** - ಕ್ಷಮಿಸುವನಲ್ಲವು, **ಎನ್ರಪಡಿ** - ಎಂದು ಹೇಳುವ ಅಭಿಪ್ರಾಯವು,

**ತ್ತಾಲೆ ಎಲ್ಲಾಕ್ತ್ರೈಯುಮ್ ಕ್ಷಮಿಪ್ಪೇನೆನ್ಗಿರದು. "ಯದಿವಾ ರಾವಣಸ್ಸ್ವಯಂ" ಎನ್ರಿರೆ ಶರಣ್ಯಾಭಿಪ್ರಾಯ ಮಿರುಪ್ಪದು. ಇಪ್ಪಡಿ ವ್ಯವಸ್ಥಿತ ವಿಷಯಮಾಗ ವಚನಙ್ಗಳ್ ತಾನೇ ಕಾಟ್ಟುಗೈಯಾಲೇ ವಿರೋಧಮಿಲ್ಲಾ ಮೈಯಾಲೇ ಉಪಚ್ಛಂದನ ಮಾತ್ರಮನ್ರು. ಇಙ್ಙ್ನಲ್ಲಾದ ಪೋದುಭಕ್ತಿ ಪ್ರಪತ್ತಿರೂಪ**

---

ಇಙ್ಗ – ಈ ಪ್ರಪತ್ತಿಯಲ್ಲಾದರೋ, ಸರ್ವಪಾಪಪ್ರಾಯಶ್ಚಿತ್ತಮಾಯಿರುಪ್ಪದು- ಸಮಸ್ತ ಪಾಪಗಳಿಗೂ ಒಂದೇ ಪ್ರಾಯಶ್ಚಿತವಾಗಿರುವ, ಒರು ಉಪಾಯವಿಶೇಷ ತ್ತಾಲೇ – ಶರಣಾಗತಿಯಾದ ಒಂದು ಉಪಾಯವಿಶೇಷದಿಂದ, ಯೆಲ್ಲಾತ್ತು ಯುಮ್ – ಎಲ್ಲಾ ಅಪರಾಧಗಳನ್ನು, ಕ್ಷಮಿಪ್ಪೇನೆನ್ಗಿರದು – ಕ್ಷಮಿಸುತ್ತೇನೆ ಎಂದು ಹೇಳುವದು, "ಯದಿವಾರಾವಣಸ್ಸ್ವಯಮ್" ಎಂಬದಾಗಿ 'ಎಂದರೆ ಮಹಾಪರಾಧಿಯಾದ ಆ ರಾವಣನೇ ಶರಣಾಗತನಾದರೂ ಗ್ರಾಹ್ಯನೇ, ಎನ್ರಿರೇ – ಎಂದಲ್ಲವೇ ಶರಣ್ಯಾಭಿಪ್ರಾಯಮಿರುಪ್ಪದು – ಶರಣ್ಯನಾದ ಶ್ರೀರಾಮಚಂದ್ರ ಪ್ರಭುವಿನ ಅಭಿಪ್ರಾಯವು. ವರಾಹಾವತಾರಿಯ ಅಭಿಪ್ರಾಯವು ಶತಪದ್ಮಪತ್ರ ದಿಂದಲೂ ಶತೋಪಚಾರದಿಂದಲೂ ಎಲ್ಲೋ ಒಂದೊಂದುಪಾಪವು ಕಳೆಯಬಹುದು. ಆದುದರಿಂದ ಎಲ್ಲಾ ಪಾಪವೂ ಕಳೆಯದೇ ಇದ್ದುದರಿಂದ "ನಕ್ಷಮಾಮಿ" ಎಂದರು. ಈ ಶರಣಾಗತಿಯಾದರೋ ಸರ್ವಾಪರಾಧಗಳಿಗೂ ಒಂದೇ ಪ್ರಾಯಶ್ಚಿತ್ತರೂಪವಾ ದುದು ಭರನ್ಯಾಸವು ; ಆದುದರಿಂದ ಇಲ್ಲಿ ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ ಎಂದು ಹೇಳಲ್ಪಟ್ಟಿತು. ಯದಿವಾರಾವಣಸ್ಸ್ವಯಮ್ ಎಂಬ ಶ್ಲೋಕ ಅನೇಕ ಸಲ ಉದಾಹೃತವು ; "ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂಮಯಾ। ವಿಭೀಷಣೋ ವಾ ಸುಗ್ರೀವ ಯದಿವಾ ರಾವಣ ಸ್ಸ್ವಯಮ್-ರಾವಣನಿಗಿಂತ ಅಪರಾಧಮಾಡಿದವರಿಲ್ಲ. ಅಂತವನೂ ಕೂಡ ಶರಣಾಗತನಾದರೆ ಪಾಪಗಳೆಲ್ಲಾ ಕಳೆದು ರಕ್ಷಿಸಲ್ಪಡುವನು. ವಿಭೀಷಣನೇನೋ ಸುಕೃತಿಯು ; ವಿಭೀಷಣನಾದರೆ ಏನು ? ರಾವಣನಾದರೆ ಏನು ? ಎಲ್ಲಾ ಪಾಪಗಳು ಕಳೆಯುವವರಿಂದ ಇಬ್ಬರೂ ರಕ್ಷಿಸಲ್ಪಡುವರೆಂಬ ಭಾವವು. ಮುಂದೆ ಇಪ್ಪಡಿಯೆಂಬ ವಾಕ್ಯದಿಂದ ಮೋಕ್ಷ ಯಿಷ್ಯಾಮಿ ಎಂಬುದು ಉಪಚ್ಛಂದನ ವಾಕ್ಯಲ್ಲವೆಂದು ನಿಗಮನಮಾಡಿ ಹೇಳು ತ್ತಾರೆ. ಇಪ್ಪಡಿ – ಹೀಗೆ, ವ್ಯವಸ್ಥಿತವಿಷಯಮಾಗ – ನಕ್ಷಮಾಮಿ ಎಂಬ ವಾಕ್ಯ ತಾತ್ಪರ್ಯ ಹಾಗೆ, ಮೋಕ್ಷಯಿಷ್ಯಾಮಿ ಎಂಬುದರ ತಾತ್ಪರ್ಯ ಹೀಗೆ ಎಂದು ನಿಶ್ಚಯಿಸಿ ವಿಷಯ ಭೇದವೆಂದು, ವಚನಗಳುತಾನೇ, ಕಾಟ್ಟುಗೈಯಾಲೇ- ಸ್ಪಷ್ಟವಾಗಿ ತೋರಿಸುವದರಿಂದ, ವಿರೋಧ ಮಿಲ್ಲಾಮೈಯಾಲೇ – ಈ ಎರಡು ವಚನಗಳಿಗೂ ಪರಸ್ಪರ ವಿರೋಧವಿಲ್ಲದುದರಿಂದ, ಉಪಚ್ಛಂದನ ಮಾತ್ರಮನ್ರು ಉಪಚಂದನಕ್ಕಾಗಿ ಮಾಡಿದ ಪ್ರಯೋಗವಲ್ಲವು. ಇಙ್ಙನಲ್ಲಾದಪೋದು-ಹೀಗೆ

## ಪಾಪಮೋಕ್ಷಣಶಬ್ದಾರ್ಥಂತತ್ಪ್ರಕಾರಾಂಶ್ಚಾಹ

**ಮೋಕ್ಷೋಪಾಯಙ್ಗಳೈ ವಿಧಿಕ್ಕಿರ ಶಾಸ್ತ್ರಙ್ಗಳೆಲ್ಲಾಮ್ ವ್ಯಾಕುಲಙ್ಗಳಾಮ್. ಇಙ್ಗು ಪಾಪಙ್ಗಳಿಲ್ ನಿನ್ರುಮ್ ವಿಡುವಿಕ್ಕೈ ಯಾವದು ? ಅನಾದಿಯಾನ ವಿಪರೀತಾನುಷ್ಠಾನತ್ತಾಲೇ ಪಿರನ್ದ ನಿಗ್ರಹಾಭಿಪ್ರಾಯತ್ತೈ ಈಶ್ವರನ್ ತಾನೇ ವಿಡುಗೈ. ಇನ್ನಿಗ್ರಹನಿವೃತ್ತಿಯಾಲೇ ನಿಗ್ರಹಕಾರ್ಯಙ್ಗಳಾನ ಅವಿದ್ಯಾದಿಗಳೆಲ್ಲಾಮ್ ನಿವೃತ್ತಙ್ಗಳಾಮ್, ಈಶ್ವರನುಡೈಯ ನಿಗ್ರಹನಿವೃತ್ತಿಯಾವದು ?**

ಪರಸ್ಪರ ವಿರೋಧವಚನವು, **"ರಾಮೋದ್ವಿರ್ನಾಭಿಭಾಷತೇ"** ಎಂದು ಹೇಳಿದ್ದರೂ, ಹಾಗೆ ವಂಚಿಸುವವಾಕ್ಯವೆಂದು ಭಾವಿಸಿದರೆ, **ಭಕ್ತಿಪ್ರಪತ್ತಿರೂಪಮೋಕ್ಷೋಪಾಯಂಗಳೈ** – ಈ ಎರಡು ಮೋಕ್ಷೋಪಾಯಗಳನ್ನು, **ವಿಧಿಕ್ಕಿರ,** ವಿಧಿಸಿರುವ, **ಶಾಸ್ತ್ರಙ್ಗಳೆಲ್ಲಾಮ್**-ಉಪನಿಷತ್ತೂ, ವ್ಯಾಸಸೂತ್ರ, ಇತಿಹಾಸಪುರಾಣಗಳೆಲ್ಲಾ, **ವ್ಯಾಕುಲಙ್ಗಳಾಮ್** – ಪರಸ್ಪರ ವಿರೋಧ ಉಳ್ಳವುಗಳಾಗುವುವು. ಅವುಗಳಿಗೆ ಪರಸ್ಪರ ಐಕಕಂಠ್ಯವಿಲ್ಲದೆ ಹೋಗುವುವು. ಆಗ ಭಕ್ತಿಮಾರ್ಗವು ಉಪಚ್ಛಂದನವೆಂದು ಹೇಳಬೇಕಾಗುತ್ತದೆ. ಉಪಚ್ಛಂದನವಲ್ಲದುದು ಯಾವುದು ಎಂದು ತಿಳಿಯುವ ಬಗೆ ಹೇಗೆ ಎಂಬ ತಾತ್ಪರ್ಯವು

ಪಾಪಮೋಕ್ಷಣ **ಶಬ್ದಾರ್ಥವನ್ನೂ** ಅವು ಕಳೆಯುವ ಬಗೆಯನ್ನೂ ತಿಳಿಸುತ್ತಾರೆ.

---

**ಇಙ್ಗು**-ಈ ಸಂದರ್ಭದಲ್ಲಿ, ಪಾಪಮೋಕ್ಷಣ ಸಂದರ್ಭದಲ್ಲಿ, **ಪಾಪಙ್ಗಳಿಲ್ ನಿನ್ರು ವಿಡವಿಕ್ಕೈ ಯಾವದು?** ಪಾಪಗಳವಶೆಯಿಂದ ಬಿಡಿಸೋಣವೆಂದರೆ ಏನು? **ಅನಾದಿಯಾನ**-ಅನಾದಿಯಾಗಿ ಬಂದ, **ವಿಪರೀತಾನುಷ್ಠಾನತ್ತಾಲೇ**-ಭಗವಂತನ ಆಜ್ಞಾರೂಪಧರ್ಮಗಳಿಗೆ ವಿರುದ್ಧವಾಗಿ ಅನುಷ್ಠಿಸುವದರಿಂದ, **ಪಿರನ್ದ**-ಹುಟ್ಟಿದ, **ನಿಗ್ರಹಾಭಿಪ್ರಾಯತ್ತೈ**-ಅಧರ್ಮಗಳನ್ನು ಆಚರಿಸಿದನಾದುದರಿಂದ ಶಿಕ್ಷಿಸಬೇಕೆಂಬ ಸಙ್ಕಲ್ಪವನ್ನು **ಈಶ್ವರನು** ತಾನೇ, **ವಿಡುಗೈ**-ಬಿಡೋಣವು-ಇವನು ಅನುಷ್ಠಿಸಿದ ಭರನ್ಯಾಸದಿಂದ ಸುಪ್ರೀತನಾಗಿ ಈತನ ಅಧರ್ಮಾಚರಣೆಗಾಗಿ ಶಿಕ್ಷಿಸುವ ಸಂಕಲ್ಪವನ್ನು ಬಿಟ್ಟುಬಿಡೋಣವು-**ಇನ್ನಿಗ್ರಹನಿವೃತ್ತಿಯಾಲೇ**-ಈ ನಿಗ್ರಹಸಙ್ಕಲ್ಪವನ್ನು ಬಿಡೋಣದರಿಂದ, ನಿಗ್ರಹಸಙ್ಕಲ್ಪಙ್ಗಳಾನ – ಶಿಕ್ಷಿಸುವ ಸಙ್ಕಲ್ಪದಕಾರ್ಯಗಳಾದ, **ಅವಿದ್ಯಾದಿಗಳೆಲ್ಲಾಮ್** – ಅಜ್ಞಾನವೇ ಮೊದಲಾದವುಗಳಾದ, ವಾಸನಾ, ರುಚಿ ಪ್ರಕೃತಿಸಂಬಂಧಗಳು ಹೇಳಲ್ಪಟ್ಟವು, ಇವೆಲ್ಲವೂ, **ನಿವೃತ್ತಙ್ಗಳಾಮ್**–ಬಿಟ್ಟುಹೋಗುವುವು **ಈಶ್ವರನ** ನಿಗ್ರಹನಿವೃತ್ತಿಯು ಯಾವುದು ? "ಮತ್ಪ್ರಸಾದಾತ್" ನನ್ನ ಅನುಗ್ರಹದಿಂದ **ಎಙ್ಗರ**-ಎಂಬಂತೆ ಹೇಳಿರುವ ಅಭಿಪ್ರಾಯವಿಶೇಷಮ್–ಸಂಕಲ್ಪರೂಪವಿಶೇಷವು. **" ಮತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಚ ಶಾಶ್ವತಮ್ ಅಚಿರೇಣಾಧಿಗಚ್ಛತಿ "** ಎಂದು ;

**ಮತ್ಪ್ರಸಾದಾತ್ ಎಙ್ಗರ ಅಭಿಪ್ರಾಯವಿಶೇಷಮ್. ಜೀವನುಕ್ಕು ಅವಿದ್ಯಾದಿಗಳುಡೈಯ ನಿವೃತ್ತಿಯಾವದು ; ಜ್ಞಾನವಿಕಾಸಾದಿಗಳ್. ಇ(ಜ್ಜೀ)ವನುಕ್ಕಿಪ್ಪಡಿ ಪುಣ್ಯಪಾಪ ರೂಪಮಾನಸಂಸಾರ ಕಾರಣಮ್ ಕಳಿಯುಮ್ ಕ್ರಮಮೇದೆನ್ನಿಲ್ ? ಉಪಾಯ ವಿರೋಧಿಗಳ್ ಮುನ್ಬೇ ಸ್ವಹೇತುಕ್ಕಳಾಲೇ ಕಳಿನ್ದಾಲ್, ಪ್ರಾರಬ್ಧೇತರಙ್ಗಳಾಯ್ ಪ್ರಾಪ್ತಿವಿರೋಧಙ್ಗಳಾಗವಲ್ಲ ಪೂರ್ವ ಪುಣ್ಯ ಪಾಪಙ್ಗಳ್ ಉಪಾಯಾರಂಭತ್ತಿಲೇ ನಿಶ್ಶೇಷಮಾಕ ಕಳಿಯುಮ್.**

ಇನ್ನೊಂದು ಕಡೆಯಲ್ಲೂ, ತತ್ಪ್ರಸಾದಾತ್ ಪರಾಂಶಾನ್ತಿಂಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ಎಂದೂ, ಹೇಳಲ್ಪಟ್ಟಿರುತ್ತದೆ. ಶ್ರೀ ಯತಿವರ್ಯರೂ ಸಹ ಈ ಅಭಿಪ್ರಾಯವನ್ನೇ **ಮತ್ಪ್ರಸಾದಾದೇವ** ಎಂದರಾಂಭಿಸಿ ಸ್ವಾಮಿಯು, ಈ ನಿಗ್ರಹ ನಿವೃತ್ತಿಯಿಂದ ಅನುಗ್ರಹಿಸುವ ಪ್ರಕಾರವನ್ನು ಶರಣಾಗತಿಗದ್ಯದಲ್ಲಿ ವಿಸ್ತರಿಸಿರುತ್ತಾರೆ. **ಜೀವನುಕ್ಕು**-ಜೀವಾತ್ಮನಿಗೆ, **ಅವಿದ್ಯಾದಿಗಳುಡೈಯ**-ಅಜ್ಞಾನವೊದಲಾದವುಗಳ **ನಿವೃತ್ತಿಯಾವದು ?** - ಬಿಟ್ಟುಹೋಗುವುದು ಯಾವುದು ? **ಜ್ಞಾನವಿಕಾಸ್ಸೈ** - ಹಿಂದೆಇದ್ದಜ್ಞಾನ ತಿಲೋಹಿತತ್ವವುಕಳೆದುಹೋಗಿ ಜ್ಞಾನವಿಕಾಸಾದಿ ಉಂಟಾಗೋಣವು. ಶ್ರುತಿಯು **" ಸ್ವೇನರೂಪೇಣಾಭಿನಿಷ್ಪದ್ಯತೆ "**, ಬ್ರಹ್ಮಸೂತ್ರವು **" ಸಂಪದ್ಯಾವಿರ್ಭಾವಸ್ಸ್ವೇನಶಬ್ದಾತ್ "** ಎಂಬಲ್ಲೂ ಇದು ಉಪಪಾದಿತವು. ಇಲ್ಲಿ ಆದಿಪದದಿಂದ ದೇಶವಿಶೇಷ ಪ್ರಾಪ್ತಿ ಮತ್ತು ಕೈಂಕರ್ಯಪ್ರಾಪ್ತಿಗಳು ಹೇಳಲ್ಪಟ್ಟವು. ಅಲ್ಲಿ ಜ್ಞಾನವಿಕಾಸ ಉಂಟಾಗುವದರಿಂದ ಶಾಸ್ತ್ರದ ಅವಶ್ಯಕವೂ, ಪಾಪಗಳನ್ನೆಸಗುವ ಸಂಭವವೂ, ಇಲ್ಲವು.

**ಇಜ್ಜೀವನಕ್ಕು** - ಈ ಆತ್ಮನಿಗೆ, **ಇಪ್ಪಡಿ** - ಈ ರೀತಿಯಾಗಿ, **ಪುಣ್ಯಪಾಪ** ರೂಪವಾದ, **ಸಂಸಾರಕಾರಣಮ್** - ಸಂಸಾರಬಂಧಕ್ಕೆ ಕಾರಣವಾದುದಾಗಿರುವುದು, **ಕಳಿಯುಮ್ ಕ್ರಮವೇದೆನ್ನಾಲ್**-ಕಳಿಯುವಕ್ರಮವು ಹೇಗೆ ? ಎಂದರೆ **ಉಪಾಯ ವಿರೋಧಿಗಳ್** - ಉಪಾಯಾನುಷ್ಠಾನವನ್ನು ಮಾಡಲು ವಿರೋಧಿಗಳಾದ ಪಾಪಗಳು, **ಮುನ್ಬೇ** - ಉಪಾಯಾನುಷ್ಠಾನಕ್ಕೆ ಮುಂದೆ, **ಸ್ವಹೇತುಕ್ಕಳಾಲ್** - ಈ ಮುಮುಕ್ಷುವಿನ ಸುಕೃತವಿಶೇಷಗಳ ಮೂಲಕ ಉಂಟಾದ ಭಗವನ್ನಿಗ್ರಹ ನಿವೃತ್ತಿಯಮೂಲಕ, **ಕಳಿನ್ದಾಲ್** - ಕಳಿದು ಹೋದರೆ, **ಪ್ರಾರಬ್ಧೇತರಙ್ಗಳಾಯ್** - ಈಗ ಪ್ರಾಪ್ತವಾಗಿರುವ ಶರೀರ ಮೂಲಕ ಉಂಟಾದ ಪ್ರಾರಬ್ಧಕರ್ಮವಲ್ಲದೆ ಬೇರೆಯಾಗಿ, **ಪ್ರಾಪ್ತಿ ವಿರೋಧಙ್ಗಳಾಗವಲ್ಲ** - ಪ್ರಾಪ್ತಿವಿರೋಧಪಾಪಗಳಾದ, **ಪೂರ್ವಪುಣ್ಯ ಪಾಪಙ್ಗಳ್** - ಹಿಂದಿನ ಜನ್ಮ ಈ ಜನ್ಮಗಳಲ್ಲಿ ಮಾಡಿದ ಪಾಪಗಳೆಲ್ಲಾ, **ಉಪಾಯಾರಂಭತ್ತಿಲೇ** - ಉಪಾಯವನ್ನು ಆರಂಭಿಸಿದಾಗಲೇ, ನಿಶ್ಶೇಷಮಾಗ ಕಳೆಯುಮ್ - ನಿಶ್ಶೇಷವಾಗಿ ಈ ಉಪಾಯವಾದ ಭರ

**ತ್ತಾಲೆ ಎಲ್ಲಾತ್ತೈಯುಮ್ ಕ್ಷಮಿಪ್ಪೇನೆನ್ಗಿರದು. "ಯದಿವಾ ರಾವಣಸ್ಸಯಂ" ಎನ್ರಿರೆ ಶರಣ್ಯಾಭಿಪ್ರಾಯ ಮಿರುಪ್ಪದು. ಇಪ್ಪಡಿ ವ್ಯವಸ್ಥಿತ ವಿಷಯಮಾಗ ವಚನಙ್ಗಳ್ ತಾನೇ ಕಾಟ್ಟುಗೈಯಾಲೇ ವಿರೋಧಮಿಲ್ಲಾ ಮೈಯಾಲೇ ಉಪಚ್ಛಂದನ ಮಾತ್ರವನ್ರು. ಇಙ್ಙ್ನಲ್ಲಾದ ಪೋದುಭಕ್ತಿ ಪ್ರಪತ್ತಿರೂಪ**

ಇಙ್ಗ - ಈ ಪ್ರಪತ್ತಿಯಲ್ಲಾದರೋ, **ಸರ್ವಪಾಪಪ್ರಾಯಶ್ಚಿತ್ತಮಾಯಿರುಪ್ಪದು**- ಸಮಸ್ತ ಪಾಪಗಳಿಗೂ ಒಂದೇ ಪ್ರಾಯಶ್ಚಿತವಾಗಿರುವ, ಒರು **ಉಪಾಯವಿಶೇಷ ತ್ತಾಲೇ**- ಶರಣಗತಿಯಾದ ಒಂದು ಉಪಾಯವಿಶೇಷದಿಂದ, **ಯೆಲ್ಲಾತ್ತು ಯುಮ್** - ಎಲ್ಲಾ ಅಪರಾಧಗಳನ್ನು, **ಕ್ಷಮಿಪ್ಪೇನೆನ್ಗಿರದು** - ಕ್ಷಮಿಸುತ್ತೇನೆ ಎಂದು ಹೇಳಿರುವದು, **"ಯದಿವಾರಾವಣಸ್ಸಯಮ್"** ಎಂಬದಾಗಿ ಎಂದರೆ ಮಹಾಪರಾಧಿಯಾದ ಆ ರಾವಣನೇ ಶರಣಾಗತನಾದರೂ ಗ್ರಾಹ್ಯನೇ, **ಎನ್ರಿರೇ** - ಎಂದಲ್ಲವೇ **ಶರಣ್ಯಾಭಿಪ್ರಾಯಮಿರುಪ್ಪದು** - ಶರಣ್ಯನಾದ ಶ್ರೀರಾಮಚಂದ್ರ ಪ್ರಭುವಿನ ಅಭಿಪ್ರಾಯವು. ವರಾಹಾವತಾರಿಯ ಅಭಿಪ್ರಾಯವು ಶತಪವ್ರಪತ್ರ ದಿಂದಲೂ ಶತೋಪಚಾರದಿಂದಲೂ ಎಲ್ಲೋ ಒಂದೊಂದುಪಾಪವು ಕಳೆಯಬಹುದು ಆದುದರಿಂದ ಎಲ್ಲಾ ಪಾಪವೂ ಕಳೆಯದೇ ಇದ್ದುದರಿಂದ **"ನಕ್ಷಮಾಮಿ"** ಎಂದರು. **ಈ** ಶರಣಾಗತಿಯಾದರೋ ಸರ್ವಾಪರಾಧಗಳಿಗೂ ಒಂದೇ ಪ್ರಾಯಶ್ಚಿತ್ತರೂಪವಾ ದುದು ಭರನ್ಯಾಸವು; ಆದುದರಿಂದ ಇಲ್ಲಿ **ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ** ಎಂದು ಹೇಳಲ್ಪಟ್ಟಿತು. **ಯದಿವಾರಾವಣಸ್ಸಯಮ್** ಎಂಬ ಶ್ಲೋಕ ಅನೇಕ ಸಲ ಉದಾಹೃತವು; "**ಅನಯ್ನೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂಮಯಾ। ವಿಭೀಷಣೋ ವಾ ಸುಗ್ರೀವ ಯದಿವಾ ರಾವಣ ಸ್ಸ್ವಯಮ್**-ರಾವಣನಿಗಿಂತ ಅಪರಾಧಮಾಡಿದವರಿಲ್ಲ. ಅಂತವನೂ ಕೂಡ ಶರಣಾಗತನಾದರೆ ಪಾಪಗಳೆಲ್ಲಾ ಕಳೆದು ರಕ್ಷಿಸಲ್ಪಡುವನು. ವಿಭೀಷಣನೇನೋ ಸುಕೃತಿಯು; ವಿಭೀಷಣನಾದರೆ ಏನು? ರಾವಣನಾದರೆ ಏನು? ಎಲ್ಲಾ ಪಾಪಗಳು ಕಳೆಯುವದರಿಂದ ಇಬ್ಬರೂ ರಕ್ಷಿಸಲ್ಪಡುವರೆಂಬ ಭಾವವು. ಮುಂದೆ ಇಪ್ಪಡಿಯೆಂಬ ವಾಕ್ಯದಿಂದ **ಮೋಕ್ಷ ಯಿಷ್ಯಾಮಿ** ಎಂಬುದು ಉಪಚ್ಛಂದನ ವಾಕ್ಯವಲ್ಲವೆಂದು ನಿಗಮನಮಾಡಿ ಹೇಳು ತ್ತಾರೆ. **ಇಪ್ಪಡಿ**- ಹೀಗೆ, **ವ್ಯವಸ್ಥಿತವಿಷಯಮಾಗ**- ನಕ್ಷಮಾಮಿ ಎಂಬ ವಾಕ್ಯ ತಾತ್ಪರ್ಯ ಹಾಗೆ, ಮೋಕ್ಷಯಿಷ್ಯಾಮಿ ಎಂಬುದರ ತಾತ್ಪರ್ಯ ಹೀಗೆ ಎಂದು ನಿಶ್ಚಯಿಸಿ ವಿಷಯ ಭೇದವೆಂದು, **ವಚನಗಳುತಾನೇ, ಕಾಟ್ಟುಗೈಯಾಲೇ**- ಸ್ಪಷ್ಟವಾಗಿ ತೋರಿಸುವದರಿಂದ, **ವಿರೋಧ ಮಿಲ್ಲಾಮೈಯಾಲೇ** - ಈ ಎರಡು ವಚನಗಳಿಗೂ ಪರಸ್ಪರ ವಿರೋಧವಿಲ್ಲದುದರಿಂದ, **ಉಪಚ್ಛಂದನ ಮಾತ್ರಮುನ್ನು** ಉಪಚಂದನಕ್ಕಾಗಿ ಮಾಡಿದ ಪ್ರಯೋಗವಲ್ಲವು. **ಇಙ್ಗನಲ್ಲಾದಪೋದು**-ಹೀಗೆ

ಪತ್ತಿಲ್ ಬುದ್ಧಿಪೂರ್ವೋತ್ತರಾಘಂಗಳ್ ಸ್ವಾಧಿಕಾರಾನುಗುಣ ಪ್ರಾಯಶ್ಚಿತ್ತವಿಶೇಷತ್ತಾಲೇಯಾದಲ್,, ಶಿಕ್ಷಾರ್ಥವಾಗ ಲಘುಫಲವಿಶೇಷತ್ತಾಲೇಯಾದಲ್, ತೀರುಮ್.

ಪ್ರಪನ್ನನುಕ್ಕು ಪ್ರಾರಬ್ಧತ್ತಿಲ್ ಇಚ್ಛಿತ್ತಕಾಲತ್ತುಕ್ಕುಳ್ಳೇ ವಿಪಕ್ವಮಾಯ್ ಕರ್ಮಾಂಶಮ್ ಅನುಭವತ್ತಾಲುಮ್ ಅವಾನ್ತರ ಪ್ರಾಯಶ್ಚಿತ್ತತ್ತಾಲುಮ್ ನಾಶ್ಯಂ. ಮೇಲುಳ್ಳತುಮ್ ಉಪಾಯಮಾಹಾತ್ಮ್ಯತ್ತಾಲೇ ಕಳಿಯುಮ್.

---

ಕಹೋಳರ ಹಾಗೆ ಶೂದ್ರಪಕ್ವಾನ್ನವನ್ನು ತಿನ್ನುವಪು; ಇವುಗಳು ಲೇಪಿಸುವದಿಲ್ಲವೆಂಬ ಭಾವವು.

ಅನಾಪತ್ತಿಲ್ - ಆಪತ್ತು ಇಲ್ಲದ ಸಂದರ್ಭದಲ್ಲಿ, ಬುದ್ಧಿಪೂರ್ವೋತ್ತರಾಘಗಳು, ಸ್ವಾಧಿಕಾರಾನುಗುಣ - ತನಗೆ ಉಪಾಸನದಲ್ಲೋ ಪ್ರಪತ್ತಿಯಲ್ಲೋ ಅಧಿಕಾರವೆಂಬುದನ್ನರಿತು, ಪ್ರಾಯಶ್ಚಿತ್ತವಿಶೇಷತ್ತಾಲೇ - ಪ್ರಾಯಶ್ಚಿತ್ತವಿಶೇಷದಿಂದ, ಉಪಾಸನದಲ್ಲಿ ಅಧಿಕಾರವಾದರೆ ಪ್ರಾಯಶ್ಚಿತ ರೂಪದಲ್ಲಿ ಉಪಾಸನಮಾಡಿ, ಪ್ರಪದನದಲ್ಲಿ ಅಧಿಕಾರವಾದರೆ, ಪ್ರಾಯಶ್ಚಿತ್ತಕ್ಕಾಗಿ ಪುನಃ ಪ್ರಪದನದಿಂದ, ಎಂಬ ಭಾವವು; ಕಠಿನಸ್ವಭಾವನಾಗಿ ಈ ಬುದ್ಧಿಪೂರ್ವಾಘಕ್ಕೆ ಪುನಶ್ಶರಣಾಗತಿ ಮೊದಲಾದವನ್ನು ಮಾಡದಿದ್ದರೆ, ಶಿಕ್ಷಾರ್ಥವಾಗ - ಶಿಕ್ಷೆಗೋಸ್ಕರವಾಗಿ, ಲಘುಫಲವಿಶೇಷತ್ತಾಲೇ - ಅಲ್ಪಫಲವಾದ ದಂಡನೆಯ ವಿಶೇಷದಿಂದ ತೀರುಮ್-ಕಳೆದು ಹೋಗುವುವು. ಅಬುದ್ಧಿಪೂರ್ವಕವಾದುದು ಶರಣಾಗತಿ ಮಾಹಾತ್ಮ್ಯೆಯಿಂದಲೇ ಲೇಪಿಸುವದಿಲ್ಲವು. ಬುದ್ಧಿಪೂರ್ವಕವಾದುದು ಪುನಶ್ಶರಣಾಗತಿಯಿಂದ ಕಳೆಯುತ್ತವೆ

ಹೀಗೆ ಪ್ರಾಯಶ್ಚಿತ್ತ ಶರಣಾಗತಿಯನ್ನು ಅನುಷ್ಠಿಸದೇ ಹೋದರೆ ಅಲ್ಪದಂಡನೆಯೆಂಬ ಭಾವವು. ಅನಾಪತ್ತಿಲ್ ಬುದ್ಧಿಪೂರ್ವೋತ್ತರಾಘಂ ಎಂದು ಏಕೆ ಹೇಳಲ್ಪಟ್ಟಿತೆಂದರೆ ಆಪತ್ತಿನಲ್ಲಿ ಬುದ್ಧಿಪೂರ್ವಕವಾಗಿ ಮಾಡುವ ಅಪರಾಧವು ಅಪರಾಧವಾಗುವದಿಲ್ಲವೆಂಬ ಭಾವವು.

ಮುಂದೆ ಪ್ರಾರಬ್ಧರೂಪವಾಗಿ ಬಂದ ಪುಣ್ಯಪಾಪಗಳು ಕಳೆಯುವ ಬಗೆ ಹೇಗೆ ಎಂಬುವನ್ನು ತಿಳಿಸುತ್ತಾರೆ—ಪ್ರಪನ್ನನುಕ್ಕು - ಪ್ರಪನ್ನನಿಗೆ, ಇಚ್ಛಿತ್ತಕಾಲತ್ತುಕ್ಕುಳ್ಳೇ - ಆತನು ಅಪೇಕ್ಷಿಸಿದ ಕಾಲದೊಳಗೇನೇ, ಆರ್ತನಾಗಿದ್ದರೆ ಒಡನೆ, ದೃಪ್ತನಾಗಿದ್ದರೆ ದೇಹಾವಸಾನಾನಂತರ ಎಂಬ ಬಾವವು, ವಿಪಕ್ವಮಾಯ್ - ಫಲಕೊಡಲು ಸಿದ್ಧವಾಗಿ, ಕರ್ಮಾಂಶಮ್ - ಕರ್ಮಭಾಗವು, ಅನುಭವತ್ತಾಲುಮ್- ಅನುಭವಿಸಿಯಾದರೂ, ಅವಾಂತರ ಪ್ರಾಯಶ್ಚಿತ್ತತ್ತಾಲುಮ್ - ಅದು ಬುದ್ಧಿಪೂರ್ವೋತ್ತರಾಘವಾಗುವದರಿಂದ ಅದಕ್ಕಾಗಿ ಪುನಃ ಪ್ರಾಯಶ್ಚಿತ್ತರೂಪ ಪ್ರಪತ್ತ್ಯನುಷ್ಠಾನದಿಂದಲೂ, ಮೇಲುಳ್ಳದವುಮ್ - ಅನಭ್ಯುಪಗತಪ್ರಾರಬ್ಧವೂ, ಉಪಾ

## ಪುಣ್ಯಸ್ಯನಿವೃತ್ತಿಪ್ರಕಾರಮಾಹ

**ಉಭಯ ಭಾವ(ನ)ನಾ ಕ್ರಮುತ್ತಾಲೇವಂದ ಬುದ್ಧಿ ಪೂರ್ವೋತ್ತರ ಪುಣ್ಯಜ್ಗಳಿಲ', ಪ್ರತಿಬಂಧಕಮಿಲ್ಲಾದನ್ವೈಯುಮು', ಉಪಾಸನುಕ್ಕುವಿದ್ಯಾನುಗುಣ ಪೂರ್ವೋತ್ತರ ಪುಣ್ಯಜ್ಗಳುಮು', ಫಲಪ್ರದಾನತ್ತಾಲೇ ಕಳೈಯುಮು'.**

**ಯಮಾಹಾತ್ಮ್ಯತ್ತಾಲೇ** – ಪ್ರಪದನ ಮಾಹಾತ್ಮ್ಯಯಿಂದ, **ಕಳಿಯುಮು'** – ಕಳೆದು ಹೋಗುತ್ತದೆ.

ಹಿಂದೆ ಯಾವಯಾವ ಪಾಪಗಳು ಸಕೃತ್ ಪ್ರಪತ್ತಿಯಿಂದ ಕಳೆಯುತ್ತವೆ ಎಂದು ಹೇಳುವ ಸಂದರ್ಭದಲ್ಲಿ **ಪ್ರಾರಬ್ಧೇತರವೆಂ**ದು ಆರಂಭಿಸಿ ಹೇಳಿದರು. ಹಾಗಾದರೆ ಪ್ರಾರಬ್ಧ ಕಳೆ... ...? ಇಲ್ಲವೇ ? ಎಂಬ ಪ್ರಶ್ನೆಗೆ ಸಮಾಧಾನವಾಗಿ ಕಳೆಯುತ್ತೇ ಎಂದು ಹೇಳುತ್ತಾರೆ. ಪ್ರಾರಬ್ಧವು ಎರಡು ವಿಧವು ಅಭ್ಯುಪಗತ, ಅನಭ್ಯುಪಗತವೆಂಬದಾಗಿ, ಅನಭ್ಯುಪಗತವು ದೇಹಾಂತರದಲ್ಲಿ ಅನುಭವಿಸತಕ್ಕದ್ದು. ಆದರೆ ಈ ಪ್ರಪನ್ನನಿಗೆ ದೇಹಾಂತರಪ್ರಾಪ್ತಿಯಿಲ್ಲವಾದುದರಿಂದ **ಮೇಲುಳ್ಳದುವುಮು' ಉಪಾಯಮಾಹಾತ್ಮ್ಯನಾಲೇ ಕಳಿಯುಮು'** ಎಂದು ಹೇಳಿದರು. ಆ ಅಭ್ಯುಪಗತ ಪ್ರಾರಬ್ಧದಲ್ಲಿ ವಿಪಕ್ವಾಂಶವು ಅನುಭಾವ್ಯಂ, ವಿಪಕ್ವವಲ್ಲದ ಕರ್ಮಾಂಶನಿವೃತ್ತಿಗಾಗಿ ಸಙ್ಕಲ್ಪಿಸಿ ಪುನಃ ಪ್ರಪದನಮಾಡಿದರೆ ಆ ಪ್ರಾರಬ್ಧಾಂಶವೂ ಕಳೆಯುತ್ತದೆ ಎಂದು ಹೇಳಿದರು. ಇದಕ್ಕೆ ಪ್ರಮಾಣವಾಗಿ "ಸಾಧ್ಯಭಕ್ತಿಸ್ತುಸಾಹನ್ತ್ರೀ ಪ್ರಾರಬ್ಧಸ್ಯಾಪಿ **ಭೂಯಸೀ** ಎಂಬುದು ಉದಾಹೃತವು. ಲೀಲಾಸಾರಥಿಯೂಕೂಡಾ ಅಭ್ಯುಪಗತ ಪ್ರಾರಬ್ಧಾಂಶವೂ ಕಳೆಯುವದಕ್ಕೆ ಶರಣಾಗತಿರೂಪ ಸಾಧನವನ್ನೇ "**ತಮೇವಶರಣಂಗಚ್ಛ ಸರ್ವಭಾವೇನಭಾರತ**" ಎಂಬಲ್ಲಿ ಹೇಳಿರುತ್ತಾರೆ. **ಸರ್ವಭಾವೇನ** ಎಂಬ ಪ್ರಯೋಗವು ಸಾರ್ಥವಾದುದು.

ಹಿಂದೆ ಪೂರ್ವೋತ್ತರಾಘಗಳ ನಿವೃತ್ತಿ ಹೇಗೆಂಬುದನ್ನು ತಿಳಿಸಿದರು. ಮುಂದೆ ಪುಣ್ಯಗಳನಿವೃತ್ತಿ ಹೇಗೆಂಬುದು ಚರ್ಚಿಸಲ್ಪಡುತ್ತದೆ.

### ಪುಣ್ಯದ ನಿವೃತ್ತಿಪ್ರಕಾರವನ್ನು ತಿಳಿಸುತ್ತಾರೆ.

**ಉಭಯ ಭಾವನಾಕ್ರಮುತ್ತಾಲೇ** – ಕೆಲವು ಮುಮುಕ್ಷುಗಳಿಗೆ ಉಭಯ ಭಾವನೆಗಳುಂಟು:-ಅವು ಯಾವುವೆಂದರೆ ಬ್ರಹ್ಮಪ್ರಾಪ್ತಿ ಮತ್ತು ಕರ್ಮಾನುಭವ ಇವೆರಡರ ಕ್ರಮದಿಂದ, ಹೀಗೆ ಎರಡು ಭಾವನೆ ಇರುವವರು ದೃಪ್ತಪ್ರಪನ್ನರು. ಭಾವನಾಯುಕ್ತರು ಮೂರು ವಿಧ (೧) ಬ್ರಹ್ಮಭಾವಾತ್ಮಿಕ (೨) ಕರ್ಮಭಾವಾತ್ಮಿಕ (೩) ಉಭಯ ಭಾವಾತ್ಮಿಕವೆಂದು ವಿಷ್ಣುಪುರಾಣ ಷಷ್ಠಾಂಶ ಸಪ್ತಮೋಧ್ಯಾಯದಲ್ಲಿ ಹೇಳಲ್ಪಟ್ಟಿರುತ್ತದೆ. ಬ್ರಹ್ಮಭಾವಾತ್ಮಿಕರು ಸನಕಸನಂದನಾದಿಗಳು ;

**ವಿದ್ಯೈಕ್ಕು ಅನುಪಯುಕ್ತ ಬುದ್ಧಿಪೂರ್ವೋತ್ತರ ಪುಣ್ಯಙ್ಗಳಿಲ್ ಪ್ರತಿಬದ್ಧ**
ಕರ್ಮಭಾವಾತ್ಮಕರು ದೇವಾದಿಗಳೂ ಸ್ಥಾವರಗಳೂ; ಉಭಯ ಭಾವಾತ್ಮಕರು ಹಿರಣ್ಯಗರ್ಭಾದಿಪ್ರಪನ್ನರು.

**" ತ್ರಿವಿಧಾಭಾವನಾ ಭೂಪ ವಿಶ್ವ ಮೇತ ನ್ನಿಬೋಧತಾಮ್ ।**
**ಬ್ರಹ್ಮಾಖ್ಯಾಕರ್ಮಸಂಜ್ಞಾ ಚ ತಥಾಚೈವೋಭಯಾತ್ಮಿಕಾ ॥**
**ಕರ್ಮಭಾವಾತ್ಮಿಕಾ ಏಕಾ ಬ್ರಹ್ಮಭಾವಾತ್ಮಿಕಾ ಪರಾ ।**
**ಉಭಯಾತ್ಮಿಕಾ ತಥೈವಾನ್ಯಾ ತ್ರಿವಿಧಾಭಾವಭಾವನಾ ॥**
**ಸನಂದನಾದಯೋಯೇತು ಬಹ್ಮಭಾವನಯಾಯುತಾಃ ।**
**ಕರ್ಮಭಾವನಯಾಚಾನ್ಯೇ ದೇವಾದ್ಯಾಸ್ಥಾ ಪರಾಪರಾಃ ।**
**ಹಿರಣ್ಯಗರ್ಭಾದಿಷುಚ ಬ್ರಹ್ಮಕರ್ಮಾತ್ಮಿಕಾದ್ವಿಧಾ ॥೫೦॥**

ಎಂಬೀಶ್ಲೋಕಗಳು ಅನುಸಂಧೇಯವು. ಆದುದರಿಂದ ಉಭಯ ಭಾವನಾಕ್ರಮತ್ತಾಲೇ ಎಂದರೆ ಮೋಕ್ಷಸುಖ ಸಂಸಾರಸುಖಗಳನ್ನು ಅನುಭವಿಸಬೇಕೆಂಬ ಭಾವನಾ ಇರುವ ಕ್ರಮದಿಂದ ಎಂಬರ್ಥವು, **ವಂದ** - ಉಂಟಾದ, ಬುದ್ಧಿಪೂರ್ವಕವಾದಉತ್ತರಪುಣ್ಯಗಳಲ್ಲಿ, **ಪ್ರತಿಬಂಧಕಮಿಲ್ಲಾದವೈಯುಮ್** - ಫಲಕ್ಕಾಗಿಪುಣ್ಯಗಳನ್ನು ಆಚರಿಸಿದರೆ ಬಂಧಕಗಳು. ಅದೇಕರ್ಮಗಳನ್ನು ಫಲಾಕಾಂಕ್ಷೆಯಿಲ್ಲದೆ ಸರ್ವೇಶ್ವರಕೈಂಕರ್ಯಕ್ಕಾಗಲೀ, ಆತನಪ್ರೀತ್ಯರ್ಥವಾಗಲಿ ಮಾಡಿದರೆ ಬಂಧಕಗಳಲ್ಲವು. ಹೀಗೆ ಪ್ರತಿಬಂಧಕವಿಲ್ಲದವು ಯಾವುವೆಂದರೆ ನಿತ್ಯನೈಮಿತ್ತಿಕ ಕರ್ಮಗಳು ಮತ್ತು ಪರೋಪಕಾರಾರ್ಥವಾಗಿ ಮಾಡಿದವುಗಳು, ಇವುಗಳನ್ನು ಫಲತ್ಯಾಗಮಾಡಿ ಅನುಷ್ಠಿಸಿದವು, ಮತ್ತು **ಉಪಾಸನಕ್ಕು** - ಭಕ್ತಿಯೋಗ ನಿಷ್ಠನಿಗೆ, **ಪೂರ್ವೋತ್ತರ ಪುಣ್ಯಙ್ಗಳುಮ್**-ಪೂರ್ವಪುಣ್ಯಗಳು ಯಾವುವೆಂದರೆ ಮೇಲೆ ಹೇಳಿದ ಕರ್ಮಯೋಗಾದಿಗಳು ಉತ್ತರಪುಣ್ಯಗಳು ಯಾವುವು ಎಂದರೆ ಶ್ರವಣ, ಕೀರ್ತನ ಮೊದಲಾದವುಗಳು ಭಗವದ್ಭಾಗವತ ಕೈಂಕರ್ಯಗಳು, **ಫಲಪ್ರದಾನತ್ತಾಲೇಕಳಿಯುಮ್**-ಇವುಗಳಿಂದ ಪ್ರೀತನಾದ ಸರ್ವೇಶ್ವರನು ಈ ಪ್ರಪನ್ನನಿಗೆ ದೇಹಾವಸಾನಪರ್ಯಂತರವೂ ಫಲವನ್ನು ಎಂದರೆ ಐಹಿಕಸುಖಗಳನ್ನು ಕೊಡುವದರ ಮೂಲಕ, **ಕಳೈಯುಮ್** ನಿವೃತ್ತಿಯಾಗುತ್ತವೆ. ವಿದ್ಯೈಕ್ಕು - ಬ್ರಹ್ಮವಿದ್ಯೆಗೆ, ಇದು ಭಕ್ತಿಯೋಗವು, ಉಪಾಸನವು ; ಇದಕ್ಕೆ ಉಪಯುಕ್ತ ಬುದ್ಧಿಪೂರ್ವೋತ್ತರಪುಣ್ಯಗಳು ಯಾವುವೆಂದರೆ ಕರ್ಮಯೋಗಾದಿಗಳು, ಅನುಪಯುಕ್ತವಾದವು ಯಾವುವೆಂದರೆ ದೇವಾಲಯನಿರ್ಮಾಣ, ಬಡಹುಡುಗರಿಗೆ ಅನ್ನಹಾಕುವದು, ಕೆರೆ, ಸ್ಕೂಲು, ಆಸ್ಪತ್ರೆ ಮೊದಲಾದವುಗಳನ್ನು ಕಟ್ಟಿಸುವದು ಅಂತಹ ಬುದ್ಧಿಪೂರ್ವಕವಾದ ಪುಣ್ಯಗಳಲ್ಲಿ, ಪ್ರತಿಬದ್ಧಫಲಙ್ಗಳುಮ್ - ಇನ್ನೂ ಅವು ಫಲಗಳನ್ನುಕೊಡದೇ ಇರುವುವು, ಇವು ಹಿಂದಿನಜನ್ಮಗಳ

**ಫಲಙ್ಗಳುಮ್, ವಿದ್ಯೋಪಯುಕ್ತ ಪೂರ್ವೋತ್ತರ ಪುಣ್ಯಙ್ಗಳಿಲ್ ಅನುಕೂಲಪ್ರತಿಕೂಲ ಪ್ರಬಲಕರ್ಮಾನ್ತರಫಲಙ್ಗಳಾಲೇ ನಿರುದ್ಧಾವಸರಙ್ಗಳಾಯ್, ಫಲಮ್ ಕೊಡುಕ್ಕಪ್ಪೇರಾದೆ ಮಿಕುತಿಯಾಯ್ ನಿನ್ರವೈಯುಮ್ ಅನ್ತಿಮ ಕಾಲತ್ತಿಲೇ ಕಳಿಯುಮ್.**

---

ದ್ದಾಗಿರಬಹುದು, ಅಥವಾ ಅನಭ್ಯುಪಗತ ಪುಣ್ಯಗಳಾಗಿರಬಹುದು; **ವಿದ್ಯೋಪಯುಕ್ತಪೂರ್ವೋತ್ತರಪುಣ್ಯಙ್ಗಳಿಲ್** - ಬ್ರಹ್ಮವಿದ್ಯೆಗೆ ಉಪಯುಕ್ತವಾದವುಗಳಾಗಿ, ಉಪಾಯಾನುಷ್ಠಾನಕ್ಕೆ ಪೂರ್ವವಾಗಿಯೂ, ಉತ್ತರಕಾಲದಲ್ಲೂ ಮಾಡಿದ ಪುಣ್ಯಗಳಲ್ಲಿ, ಇವು ಯಾವುವೆಂದರೆ **ದೈವಮೇವಾಪರೆ** ಎಂದಾರಂಭಿಸಿ ಗೀತೆಯಲ್ಲಿ ಹೇಳಿದ ಕರ್ಮಯೋಗದ ಅಙ್ಗಗಳೂ, ಅವುಗಳಿಗೆ ಅಙ್ಗಗಳಾದ ನಿತ್ಯನೈಮಿತ್ತಿಕಾನುಷ್ಠಾನಗಳೂ, **ಅನುಕೂಲ ಪ್ರತಿಕೂಲ ಪ್ರಬಲಕರ್ಮಾನ್ತರ ಫಲಙ್ಗಳಾಲೇ** - ಇವುಗಳ ಫಲಕರ್ತೃತ್ವಾದಿತ್ಯಾಗಗಳಮೂಲಕ ಅನುಷ್ಠಿಸಿದ್ದರೆ ಅನುಕೂಲ ಫಲ, ಸಾತ್ವಿಕ ತ್ಯಾಗವೇಳದೆ ಅನುಷ್ಠಿಸಿದ್ದರೆ ಸ್ವರ್ಗಾದಿಭೋಗವನ್ನು ಕೊಡುವದಾಗಿ ಬಂಧಕವಾಗಿ ಪ್ರತಿಕೂಲಫಲ, ಈಗ ಪ್ರಾಪ್ತವಾಗಿರುವ ಶರೀರಮೂಲಕ ಪ್ರಬಲವಾದಪುಣ್ಯಫಲಕೊಡುವ ಕರ್ಮಗಳನ್ನು ಮಾಡಿರಬಹುದು, ಇವುಗಳಅನುಭವಕ್ಕೆ ಸಮಯವಿಲ್ಲದೆ **ನಿರುದ್ಧಾವಸರಙ್ಗಳಾಯ್** - ತಡೆಯಲ್ಪಟ್ಟ ಕಾಲವುಳ್ಳವುಗಳಾಗಿಯೂ ಇರುವ **ಫಲಂಕೊಡುಕ್ಕಪ್ಪೇರಾದೆ** - ಫಲಗಳನ್ನು ಕೊಡುವದಕ್ಕೆಆಗದೆ, **ಮಿಕುದಿಯಾಯ್ ನಿನ್ರವೈಯುಮ್** - ಅನುಭವಿಸಲು ಆಗದೆ ಹೆಚ್ಚಾಗಿರುವವುಗಳು, **ಅನ್ತಿಮಕಾಲತ್ತಿಲೇ** - ದೇಹಾವಸಾನಕಾಲದಲ್ಲಿ, **ಕಳಿಯುಮ್** - ಕಳೆದುಹೋಗುತ್ತವೆ.

ಪುಣ್ಯದವಿಷಯದಲ್ಲಿ ಮೇಲೆ ನಿರ್ಧರಿಸಿ ಹೇಳಿದ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಸಾಧನವೇನಾದರೂ ಉಂಟೋ ? ಎಂದರೆ ಪುಣ್ಯವೂ ಪಾಪದಹಾಗೆಯೇ ಬಂಧಕವು. ಅವುಗಳೂ ಕಳೆದುಹೋಗದಹೊರತು ಮೋಕ್ಷಪ್ರಾಪ್ತಿಯಿಲ್ಲವೆಂಬುದಕ್ಕೆ ವ್ಯಾಸಸೂತ್ರ ಪ್ರಮಾಣವನ್ನು ಉದಹರಿಸುತ್ತಾರೆ—ಬ್ರ. ಸೂ: ೪. ೧. ೧೪ ಪಾಪವೇನೋ ದುಃಖಫಲವನ್ನು ಕೊಡುವದಾದುದರಿಂದ ಪಾಪಪರಿಹಾರಮಾರ್ಗವೇನೋ ನ್ಯಾಯವು. ಪುಣ್ಯವು ಅನುಕೂಲಫಲವನ್ನು ಕೊಡುವದರಿಂದ ಅದು ಏತಕ್ಕೆಪರಿಹರಣೀಯವು ? ಎಂದರೆ ಪುಣ್ಯವೂ ಬಂಧಕವಾದುದರಿಂದ ಪುಣ್ಯಪಾಪಗಳೆರಡೂ ತೊಲಗಬೇಕು. ಇದನ್ನೇ ಈ ಸೂತ್ರವು ತಿಳಿಸುತ್ತದೆ. **ಇತರಸ್ಯಾಪಿ**-ಪಾಪಗಳಿಗಿಂತ ಇತರವಾದ ಪುಣ್ಯಗಳೂ **ಏವಂ** - ಪಾಪಗಳಹಾಗೆ, ಅಶ್ಲೇಷವಿನಾಶದಲ್ಲಿ ಸಮಾನವಾದವುಗಳು. ಪುಣ್ಯಫಲವಾಗಿ ಉಂಟಾಗುವ ಸ್ವರ್ಗಾದಿಗಳೂ ಮುಮುಕ್ಷುವಿಗೆ ಅನಿಷ್ಟವಾದುದರಿಂದ **ಅಘ** ವೆಂಬ ೧೩ ನೆಯ ಸೂತ್ರದಲ್ಲಿ

**ಇವ್ವರ್ಥಮ್ "ಇತರಸ್ಯಾಪ್ಯೇವ ಮಸಂಶ್ಲೇಷಃ ಪಾತೇತು" ಎನ್ಗಿರ ಸೂತ್ರತ್ತಿಲೇ ಅಭಿಪ್ರೇತಮ್. ಭಗವತ್ಪ್ರೀತಿಮಾತ್ರಮೇ ಫಲಮಾಗ ಅನುಷ್ಠಿತ್ತ ಕೇವಲಕೈಙ್ಕರ್ಯರೂಪ ಸುಕೃತಙ್ಗಳ್ ಅಪ್ಪೋದು ದತ್ತಫಲಂಗಳಾಕೈಯಾಲೇ ಯವತ್ತುಕ್ಕು ಅಶ್ಲೇಷಶೊಲ್ಲವೇಣ್ಡಾ. ಲೋಕಸಙ್ಗ್ರಹಾರ್ಥ ವಿಧಿಯಾಲ್ ಅನುಷ್ಠಿಕ್ಕಕ್ಕಡವನ್ವೈಯುಮ್ :ತನಕ್ಕಪ್ಪಡಿಯೇ ಭಗವದಾಜ್ಞಾಙ್ಗಳಾಗೈಯಾಲೇ, ಯವ್ವೈಯುಮ್ ಇವನುಕ್ಕು ಕೇವಲ ಕೈಙ್ಕರ್ಯಙ್ಗಳಾಯ್ ದತ್ತಫಲಙ್ಗಳ್.**

ರುವ ಶಬ್ದದಲ್ಲೇ ಪುಣ್ಯಗಳೂ ಸೇರಿದವು. **ಪಾತೇತು** - ವಿದ್ಯಾನುಗುಣವಾದ ಪುಣ್ಯದಿಂದುಂಟಾಗುವ ವೃಷ್ಟಿ ಅನ್ನ, ಆರೋಗ್ಯ ಮೊದಲಾದವುಗಳಿಗೆ ಶರೀರಾವಸಾನ ಉಂಟಾದನಂತರ, **ಅಸಂಶ್ಲೇಷಃ** - ಲೇಪವಿಲ್ಲದಿರೋಣವು ಸಿದ್ಧಿಸುತ್ತದೆ. ತು ಶಬ್ದದಿಂದ ಶರೀರವಿರುವಾಗ ವಿದ್ಯಾನುಗುಣ ಪುಣ್ಯಫಲವು ವಿದ್ಯೆಯಲ್ಲಿ ಉಪಯುಕ್ತವಾಗುತ್ತದೆ.

**ಭಗವತ್ಪ್ರೀತಿಯೇ, ಫಲವಾಗಿ, ಅನುಷ್ಠಿತ** - ಅನುಷ್ಠಿಸಲ್ಪಟ್ಟ, **ಕೇವಲ ಕೈಙ್ಕರ್ಯರೂಪ ಸುಕೃತಗಳು, ಅಪ್ಪೋದು** - ಅವುಗಳನ್ನು ಅನುಷ್ಠಿಸಿದಕಾಲದಲ್ಲೇ, **ದತ್ತಫಲಙ್ಗಳಾಕೈಯಾಲೇ** - ಸರ್ವೇಶ್ವರನಿಂದ ಸ್ವಯಂಪ್ರಯೋಜನವಾಗಿ ಕೊಡಲ್ಪಟ್ಟ ಫಲಗಳುಳ್ಳವು ಆದುದರಿಂದ, **ಅವತ್ತುಕ್ಕು** - ಅಂತಹಸುಕೃತಗಳು ಬಂಧಕಗಳಾಗಲಾರವಾದುದರಿಂದ, **ಅಶ್ಲೇಷಶೊಲ್ಲವೇಣ್ಡಾ** - ಅವುಗಳಿಗೆ ಅಶ್ಲೇಷ ಹೇಳಬೇಕಾದುದಿಲ್ಲವು **ಲೋಕಸಙ್ಗ್ರಹಾರ್ಥವಿಧಿಯಾಲ್** - ಗೀತೆಯಲ್ಲಿ "**ಲೋಕಸಙ್ಗ್ರಹಮೇವಾಪಿಸಂಪಶ್ಯನ್ಕರ್ತುಮರ್ಹಸಿ**" ಎಂಬಲ್ಲಿ (ಗೀ.೩.೨೦) ಲೀಲಾಸಾರಥಿಯು, ಆಜ್ಞಾ ಕೈಂಕರ್ಯಗಳಾಗಿ ಅವಶ್ಯಕಮಾಡಬೇಕಾಗಿರುವ ನಿತ್ಯನೈಮಿತ್ತಿಕ ಕರ್ಮಗಳನ್ನು ಲೋಕಸಂಗ್ರಹ ಪ್ರಯೋಜನ ದೃಷ್ಟಿಯಿಂದಲಾದರೂ ಮಾಡಬೇಕೆಂದು ವಿಧಿಸಿರುವದರಿಂದ, **ಅನುಷ್ಠಿಕ್ಕವನ್ವೈಯುಮ್'**-ಅನುಷ್ಠಿಸಬೇಕಾದವನ್ನು, **ತನಕ್ಕು**-ಪ್ರಸನ್ನನಾದತನಗೆ, **ಅಪ್ಪಡಿಯೇ**-ಹಾಗೆಯೇ, **ಭಗವದಾಜ್ಞಾಸಿದ್ಧಙ್ಗಳಾಗೈಯಾಲೇ**-ಭಗವಂತನ ಆಜ್ಞೆಯಿಂದ ಉಂಟಾದವಾದುದರಿಂದ, **ಇವನುಕ್ಕು ಕೇವಲಕೈಙ್ಕರ್ಯಙ್ಗಳಾಯ್'**-ಇವನು ಸ್ವಯಂ ಪ್ರಯೋಜನವಾಗಿ ಫಲಕರ್ತೃತ್ವಾದಿಗಳನ್ನು ಅಪೇಕ್ಷಿಸದೇ ಅನುಷ್ಠಿಸುವದರಿಂದ, ದತ್ತಫಲಙ್ಗಳ್ - ಸ್ವಾಮಿಯುತಾನಾಗಿಯೇ ಅನುಗ್ರಹಿಸಿದ, ಆರೋಗ್ಯ, ಅನ್ನ ಮೊದಲಾದ ರೂಪದಲ್ಲಿ, **ದತ್ತಫಲಙ್ಗಳ್** - ಕೊಡಲ್ಪಟ್ಟಫಲಗಳನ್ನುಳ್ಳವು. **ಲೋಕಸಂಙ್ಗ್ರಹಾರ್ಥವಿಧಿಸಿದ್ಧವುಗಳಲ್ಲಿ**, ನಿತ್ಯನೈಮಿತ್ತಿಕಗಳು ಮಾತ್ರವೇ ಅಲ್ಲವು. ಕರ್ಮಯೋಗದ **ದೈವಮೇವಾಪರೇ** ಎಂಬಲ್ಲಿ ಹೇಳಿದವೂ ಮತ್ತು ಅನುಜ್ಞಾ ಕೈಂಕರ್ಯಗಳಾದ ಭಗವ

**ಇವತ್ತಿಲ್ ಅನವಧಾನತ್ತಾಲೇ ಸಾತ್ವಿಕತ್ಯಾಗರಹಿತಮಾನ ಅನುಷ್ಠಿತಙ್ಗಳ್ ಉಂಡಾಗಿಲ್ ಅವೈಯುಮ್ ಎಲ್ಲಾಮ್ "ತಾನ್ಯೇವ ಭಾವೋಪಹತಾನಿ ಕಲ್ಕಃ" ಎಙ್ಗಿರಪಡಿಯೇ ಪಾಪತುಲ್ಯಙ್ಗಳಾಯ್ ಮೋಕ್ಷಯಿಷ್ಯಾಮಿಕ್ಕು ವಿಷಯಮಾಮ್.**

ದ್ಭಾಗವತಕೈಂಕರ್ಯಗಳೂ, ದೇಹಯಾತ್ರೆಗೆಬೇಕಾದ ಕರ್ಮಗಳೂ ಎಲ್ಲವೂ ಸೇರಿದವು. ಆಜ್ಞಾ ಕೈಂಕರ್ಯಗಳಲ್ಲಿ ನಿತ್ಯನೈಮಿತ್ತಿಕಾನುಷ್ಠಾನಗಳು ಸೇರಿದವು. ಗೋಬಲೀವರ್ದನ್ಯಾಯದ ಪ್ರಕಾರ ನಿತ್ಯನೈಮಿತ್ತಿಕಗಳನ್ನು ಎರಡನೆಯ ಸಲದಲ್ಲಿ ಹೇಳಲ್ಪಟ್ಟವೆಂದು ಭಾವಿಸಿ, ಮಿಕ್ಕವುಗಳನ್ನು ಮೊದಲು ಹೇಳಿದವುಗಳಲ್ಲಿ ಸೇರಿದವೆಂದು ಭಾವಿಸಬಹುದು.

**ಇವತ್ತಿಲ್** - ಇವುಗಳಲ್ಲಿ ಎಂದರೆ ಹಿಂದೆ ಹೇಳಿದ ಸುಕೃತಕರ್ಮಗಳಲ್ಲಿ, **ಅನವದಾನತ್ತಾಲೇ** - ಜಾಗರೂಕತೆ ಇಲ್ಲದಿರುವದರಿಂದ, **ಸಾತ್ವಿಕತ್ಯಾಗರಹಿತಮಾನ ಅನುಷ್ಠಿತಙ್ಗಳ್ ಉಂಡಾಗಿಲ್** - ಸಾತ್ವಿಕತ್ಯಾಗಹೇಳದೆ ಅನುಷ್ಠಿತಗಳಾದವಾದರೆ, **ಅವೈಯುಮ್** - ಅಂತಹ ಸುಕೃತಙ್ಗಳೆಲ್ಲವೂ, **ತಾನ್ಯೇವಭಾವೋಪಹತಾನಿಕಲ್ಮಃ** (ಭಾರ. ಆದಿಪರ್ವದ ಪ್ರಥಮ ಸರ್ಗದ ಕೊನೆಯಶ್ಲೋಕ) ಆ ಯಜ್ಞದಾನ ತಪಸ್ಸುಗಳಾದ ಕರ್ಮಯೋಗ ಪ್ರಕ್ರಿಯೆಗಳೆಲ್ಲಾ, **ಭಾವೋಪಹತಾನಿ** ಭಗವತ್ಪ್ರೀತಿಗಾಗಿ ಸ್ವಯಂಪ್ರಯೋಜನವಾಗಿ ಅಲ್ಲದೆ ಅವುಗಳಲ್ಲಿ ಕರ್ತೃತ್ವ ಮಮತಾ ಫಲಗಳನ್ನು ಬಿಡದೆ, ಅನುಷ್ಠಿಸಿದುದಾದರೆ **ಕಲ್ಕಃ ಪಾಪಹೇತು;** ಎಂದರೆ ನಿಷಿದ್ಧವು, ಎಂದರೆ ಹಾಗೆಫಲಾಕಾಂಕ್ಷೆಯಿಂದ ನಡೆಸತಕ್ಕದ್ದಲ್ಲವೆಂಬ ಭಾವವು. **ಎಙ್ಗಿರಪಡಿಯೇ** - ಎಂಬಲ್ಲಿಹೇಳಿರುವಹಾಗೆ, **ಪಾಪತುಲ್ಯಙ್ಗಳಾಯ್** - ಇದು **"ಕಲ್ಕಃ"** ಎಂಬುದರ ಅರ್ಥವು; ಪಾಪಕ್ಕೆ ಸಮಾನವಾಗಿ, **ಮೋಕ್ಷಯಿಷ್ಯಾಮಿಕ್ಕು** - ಮೋಕ್ಷಯಿಷ್ಯಾಮಿ ಎಂಬ ಪ್ರಯೋಗಕ್ಕೆ, **ವಿಷಯಮಾಮ್** - ಸೇರಿದುದಾಗುತ್ತದೆ. ಪಾಪಗಳೆಲ್ಲಾ ಕಳೆಯುವ ಕಾಲದಲ್ಲಿ ಇವೂ ಕಳೆದು ಹೋಗುತ್ತವೆಂಬ ಭಾವವು. ಆ ಪೂರ್ವಾ ಶ್ಲೋಕವು ಯಾವುದೆಂದರೆ—

**"ತಪೋನಕಲ್ಕೋಽಧ್ಯಯನಂ ನಕಲ್ಕಃ ಸ್ವಾಭಾವಿಕೋವೇದವಿಧಿರ್ನಕಲ್ಕಃ।**
**ಪ್ರಸಹ್ಯ ವಿತ್ತಾಹರಣಂ ನಕಲ್ಕಃ ತಾನ್ಯೇವ ಭಾವೋಪಹತಾನಿಕಲ್ಕಃ ॥**

ಕೃಛ್ರಚಾಂದ್ರಾಯಣಾದಿ ತಪಸ್ಸುಗಳು ಭಗವತ್ಪ್ರೀತ್ಯರ್ಥವಾಗಿ ಫಲಾಭಿಸಂಧಿಯಿಲ್ಲದೆ ತ್ಯಾಗ ಹೇಳಿ ನಡೆಸಿದರೆ ನಿಷಿದ್ಧವಾದವಲ್ಲವು ಬಂಧಕವಲ್ಲವು. ಹಾಗೆಯೇ ಸ್ವಾಭಾವಿಕವಾದ ವೇದವಿಧಿಗಳನ್ನು ಅನುಸರಿಸಿರುವ ಸಂಧ್ಯಾದಿ ಕರ್ಮಗಳೂ ದೋಷಯುಕ್ತವಾದವಲ್ಲವು. ಬಲಾತ್ಕರಿಸಿ ಭಗವದ್ಭಾಗವತ ಕೈಙ್ಕರ್ಯಗಳಿಗೂ ಪಂಚ ಮಹಾ ಯಜ್ಞಗಳಾಗಿಯೂ ಧನಾರ್ಜನೆಯನ್ನು ಮಾಡುವದೂ

**ಫಲಾನ್ತರಾರ್ಥಮಾಗ ಪ್ಪಣ್ಣಿನ ಪ್ರಪತ್ತ್ಯಂತರಙ್ಗಳುಮ್ ದತ್ತಫಲಙ್ಗಳಾಯ್ ಪೋಮ್. ಪೂರ್ವಪ್ರಪತ್ತಿಕ್ಕು ಕ್ಕೋಲಿನ ಫಲತ್ತೈ ಪ್ಪೆತ್ತ ಪುನಃ ಪ್ರಪತ್ತಿ ಪಣ್ಣುಗೈ ಮಹಾವಿಶ್ವಾಸತ್ತೋಡೇ ಕೂಡ ಅನುಷ್ಠಿತ್ತ ಪೂರ್ವಪ್ರಪತ್ತಿ ಪ್ರತಿ ಸಂಧಾನತ್ತಾಲೇ ಕೂಡಾದು.**

ದೋಷವಲ್ಲವು. "ಮುಕ್ತಸಙ್ಗಸ್ಸಮಾಚರ" ಎಂದು ಅನುಜ್ಞೆಯುಂಟು. ಇವುಗಳನ್ನೇ ಇಂತಹ ಭಾವನೆಯಿಲ್ಲದೆ ಅನುಷ್ಠಿಸಿದುದಾದರೆ ದುಷ್ಟವಾಗುವುವು. ಈ ಶ್ಲೋಕವನ್ನು ಪ್ರಯೋಗಿಸಲು ಕಾರಣವೇನೆಂದರೆ ಭಾರತವು ಮಹತ್ತಾದುದು, ವೇದಕ್ಕೆ ಸಮಾನವಾಗಿ ಪಂಚಮವೇದವೆಂದು ಹೇಳಿಸಿಕೊಳ್ಳುವುದರಿಂದ ಮಹಾತ್ಮ್ಯೆ ಹೆಚ್ಚು ಎಂದು ಹೇಳಿ, ಅದರಲ್ಲಿ ಯುದ್ಧವರ್ಣನೆ, ಐಹಿಕಗಳಾದ ಅಶಾಶ್ವತ ಫಲಗಳುಂಟಾಗುವ ಕ್ರಮ ಇತ್ಯಾದಿಗಳೆಲ್ಲಾ ಇರುವಾಗ ಹೇಗೆ ಉತ್ತಮ ಗ್ರಂಥವೆಂಬಾಕ್ಷೇಪಣೆಯುಂಟಾಗಬಹುದೆಂದು ಭಾವಿಸಿ, ಅಂತವುಗಳೂ ಕೂಡ ಭಗವತ್ಪ್ರೀತ್ಯರ್ಥವಾಗಿ ಫಲಾಭಿಸಂಧಿಯಿಲ್ಲದ ಭಾವವಿದ್ದರೆ ಮೋಕ್ಷಸಾಧನವಾಗುತ್ತವೆಂದೂ ಅಂತಹ ಭಾವವಿಲ್ಲದಿದ್ದರೆ ಅವೇ ದೋಷಯುಕ್ತವಾಗುತ್ತೆಂದೂ ಸಮಾಧಾನವನ್ನು ಹೇಳಿದರು.

**ಫಲಾನ್ತರಾರ್ಥಮಾಗ** – ಮೋಕ್ಷವಲ್ಲದೆ ಬೇರೇ ಫಲಗಳಿಗಾಗಿ, ಮಗ, ಬಂಧುವರ್ಗಮೊದಲಾದವರುಗಳ ಐಹಿಕ ತೊಂದರೆ ನಿವಾರಣಕ್ಕಾಗಿ ಅಥವಾ ಶ್ರೇಯಸ್ಸಿನ ಪ್ರಾಪ್ತಿಗಾಗಿ, **ಪಣ್ಣಿನ** - ಮಾಡಿದ, **ಪ್ರಪತ್ತ್ಯನ್ತರಙ್ಗಳುಮ್** - ಬೇರೇ ಪ್ರಪತ್ತಿಗಳೂ (ಅಂತಹ ಸುಕೃತಗಳೂ ಸಹ) **ಧತ್ತಫಲಙ್ಗಳಾಯ್ ಪೋಮ್** - ಸ್ವಾಮಿಯ ಅನುಗ್ರಹದಿಂದ ದತ್ತಫಲಗಳಾಗಿ ಕಳೆಯಬಹುದು. **ಪೂರ್ವಪ್ರಪತ್ತಿಕ್ಕು ಕೋಲಿನ ಫಲತ್ತೈ** – ಮೊದಲು ಆಚಾರ್ಯರ ಮೂಲಕ ಅನುಷ್ಠಿಸಿದ ಪ್ರಪತ್ತಿಗೆ ಅಪೇಕ್ಷಿಸಿದ ಫಲವಾದ ಮೋಕ್ಷವನ್ನೂ, **ಪೆತ್ತ** – ಕುರಿತು, **ಪ್ರಪತ್ತಿ ಪಣ್ಣುಗೈ** – ಪುನಃ ಪ್ರಪತ್ತಿಯನ್ನು ಮಾಡುವುದು, **ಮಹಾವಿಶ್ವಾಸತ್ತೋಡೇ ಕೂಡ** - ಅಂಗವಾದ ಮಹಾವಿಶ್ವಾಸದೊಂದಿಗೆ, **ಅನುಷ್ಠಿತ್ತ** – ಹಿಂದೆ ಮೊದಲು ಅನುಷ್ಠಿಸಿದ **ಪೂರ್ವಪ್ರಪತ್ತಿ** - ಮೋಕ್ಷಾರ್ಥ ಪ್ರಪತ್ತಿಗೆ, **ಪ್ರತಿಸಂಧಾನತ್ತಾಲೇ** - ವಿರೋಧವಾಗುವದರಿಂದ, ವಿರೋಧ ಮಹಾತ್ಮ್ಯೆಯುಳ್ಳದೆಂದು ಭಾವನೆಯುಂಟಾಗುವದರಿಂದ ಎಂಬರ್ಥವು, **ಕೂಡಾದು** – ಅಂತಹ ಅನುಷ್ಠಾನವು ಸರಿಯಲ್ಲವು ಹಿಂದೆ ಅನುಷ್ಠಿಸಿದ ಕಾಲದಲ್ಲಿ ಮಹಾವಿಶ್ವಾಸವಿದ್ದುದು ಕಳೆದುಹೋಗಿ ಈಗ ಆ ಪ್ರಪದನದ ಮಹಾತ್ಮ್ಯೆಯಲ್ಲಿ ಶಂಕಾ ಉಂಟಾಗಿ ಪುನಃ ಪ್ರಪತ್ತಿಯನ್ನು ಅನುಷ್ಠಿಸಿದ ಹಾಗೆ ಆಗುತ್ತದೆಯಾದುದರಿಂದ ಪುನಃ ಪ್ರಪದನವು ಮೋಕ್ಷಕ್ಕಾಗಿ ಕೂಡದೆಂಬ ಭಾವವು. ಆ ಸಂದರ್ಭದಲ್ಲಿ ಪೂರ್ವಪ್ರಪತ್ತಿಯೂ ಆಂಜನೇಯನ ಬ್ರಹ್ಮಾಸ್ತ್ರ

**ಇನ್ವರ್ಥಮ್ "ಇತರಸ್ಯಾಪ್ಯೇವ ಮಸಂಶ್ಲೇಷಃಪಾತೇತು" ಎನ್ಗಿರ ಸೂತ್ರತ್ತಿಲೇ ಅಭಿಪ್ರೇತಮ್. ಭಗವತ್ಪ್ರೀತಿಮಾತ್ರಮೇ ಫಲಮಾಗ ಅನುಷ್ಠಿತ್ತ ಕೇವಲಕೈಙ್ಕರ್ಯರೂಪ ಸುಕೃತಙ್ಗಳ್ ಅಪ್ಪೋದು ದತ್ತಫಲಂಗಳಾಕ್ಕೈಯಾಲೇ ಯವತ್ತುಕ್ಕು ಅಶ್ಲೇಷಶೊಲ್ಲವೇಣ್ಡಾ. ಲೋಕಸಙ್ಗ್ರಹಾರ್ಥ ವಿಧಿಯಾಲ್ ಅನುಷ್ಠಿಕ್ಕೈಕ್ಕುಮವೈಯುಮ್ ತನಕ್ಕಪ್ಪಡಿಯೇ ಭಗವದಾಜ್ಞಾಙ್ಗಳಾಗೈಯಾಲೇ, ಯವೈಯುಮ್ ಇವನುಕ್ಕು ಕೇವಲ ಕೈಙ್ಕರ್ಯಙ್ಗಳಾಯ್ ದತ್ತಫಲಙ್ಗಳ್.**

ರುವ ಶಬ್ದದಲ್ಲೇ ಪುಣ್ಯಗಳೂ ಸೇರಿದವು. **ಪಾತೇತು** – ವಿದ್ಯಾನುಗುಣವಾದ ಪುಣ್ಯದಿಂದುಂಟಾಗುವ ವೃಷ್ಟಿ ಅನ್ನ, ಆರೋಗ್ಯ ಮೊದಲಾದವುಗಳಿಗೆ ಶರೀರಾವಸಾನ ಉಂಟಾದನಂತರ, **ಅಸಂಶ್ಲೇಷಃ** – ಲೇಪವಿಲ್ಲದಿರೋಣವು ಸಿದ್ಧಿಸುತ್ತದೆ. ತುಶಬ್ದದಿಂದ ಶರೀರವಿರುವಾಗ ವಿದ್ಯಾನುಗುಣ ಪುಣ್ಯಫಲವು ವಿದ್ಯೆಯಲ್ಲಿ ಉಪಯುಕ್ತವಾಗುತ್ತದೆ.

**ಭಗವತ್ಪ್ರೀತಿಯೇ, ಫಲವಾಗಿ, ಅನುಷ್ಠಿತ** – ಅನುಷ್ಠಿಸಲ್ಪಟ್ಟ, **ಕೇವಲಕೈಙ್ಕರ್ಯರೂಪ ಸುಕೃತಗಳು, ಅಪ್ಪೋದು** – ಅವುಗಳನ್ನು ಅನುಷ್ಠಿಸಿದಕಾಲದಲ್ಲೇ, **ದತ್ತಫಲಙ್ಗಳಾಕ್ಕೈಯಾಲೇ** – ಸರ್ವೇಶ್ವರನಿಂದ ಸ್ವಯಂಪ್ರಯೋಜನವಾಗಿ ಕೊಡಲ್ಪಟ್ಟ ಫಲಗಳುಳ್ಳವು ಆದುದರಿಂದ, **ಅವತ್ತುಕ್ಕು** – ಅಂತಹಸುಕೃತಗಳು ಬಂಧಕಗಳಾಗಲಾರವಾದುದರಿಂದ, **ಅಶ್ಲೇಷಶೊಲ್ಲವೇಣ್ಡಾ** – ಅವುಗಳಿಗೆ ಅಶ್ಲೇಷ ಹೇಳಬೇಕಾದುದಿಲ್ಲವು **ಲೋಕಸಙ್ಗ್ರಹಾರ್ಥವಿಧಿಯಾಲ್** – ಗೀತೆಯಲ್ಲಿ "**ಲೋಕಸಙ್ಗ್ರಹಮೇವಾಪಿಸಂಪಶ್ಯನ್ಕರ್ತುಮರ್ಹಸಿ**" ಎಂಬಲ್ಲಿ (ಗೀ.೩.೨೦) ಲೀಲಾಸಾರಥಿಯು, ಆಜ್ಞಾ ಕೈಂಕರ್ಯಗಳಾಗಿ ಅವಶ್ಯಕಮಾಡಬೇಕಾಗಿರುವ ನಿತ್ಯನೈಮಿತ್ತಿ ಕರ್ಮಗಳನ್ನು ಲೋಕಸಂಗ್ರಹ ಪ್ರಯೋಜನ ದೃಷ್ಟಿಯಿಂದಲಾದರೂ ಮಾಡಬೇಕೆಂದು ವಿಧಿಸಿರುವದರಿಂದ, **ಅನುಷ್ಠಿಕ್ಕುಮವೈಯುಮ್**–ಅನುಷ್ಠಿಸಬೇಕಾದವನ್ನು, **ತನಕ್ಕು**–ಪ್ರಸನ್ನನಾದತನಗೆ, **ಅಪ್ಪಡಿಯೇ**–ಹಾಗೆಯೇ, **ಭಗವದಾಜ್ಞಾಸಿದ್ಧಙ್ಗಳಾಗೈಯಾಲೇ**–ಭಗವಂತನ ಆಜ್ಞೆಯಿಂದ ಉಂಟಾದವಾದುದರಿಂದ, **ಇವನುಕ್ಕು ಕೇವಲಕೈಙ್ಕರ್ಯಙ್ಗಳಾಯ್**–ಇವನು ಸ್ವಯಂ ಪ್ರಯೋಜನವಾಗಿ ಫಲಕರ್ತೃತ್ವಾದಿಗಳನ್ನು ಅಪೇಕ್ಷಿಸದೇ ಅನುಷ್ಠಿಸುವದರಿಂದ, ದತ್ತಫಲಙ್ಗಳ್ – ಸ್ವಾಮಿಯುತಾನಾಗಿಯೇ ಅನುಗ್ರಹಿಸಿದ, ಆರೋಗ್ಯ, ಅನ್ನ ಮೊದಲಾದ ರೂಪದಲ್ಲಿ, **ದತ್ತಫಲಙ್ಗಳ್** – ಕೊಡಲ್ಪಟ್ಟಫಲಗಳನ್ನುಳ್ಳವು. ಲೋಕಸಂಙ್ಗ್ರಹಾರ್ಥವಿಧಿಸಿದ್ಧವುಗಳಲ್ಲಿ, ನಿತ್ಯನೈಮಿತ್ತಿಕಗಳು ಮಾತ್ರವೇ ಅಲ್ಲವು. ಕರ್ಮಯೋಗದ **ದೈವಮೇವಾಪರೇ** ಎಂಬಲ್ಲಿ ಹೇಳಿದವೂ ಮತ್ತು ಅನುಜ್ಞಾ ಕೈಂಕರ್ಯಗಳಾದ ಭಗವ

**ಉದಿಯಾದೊೞಿಗೈ. ಇಪ್ಪಡಿ ಸರ್ವಕರ್ಮಙ್ಗಳು ಕ್ಕೞಿಯಾನಿರ್ಕ ಸುಹೃತ್ತುಕ್ಕೞುಮ್ ದ್ವಿಪತ್ತುಕ್ಕೞುಮ್ ಕೂರಿಟ್ಟುಕ್ಕೊಳ್ಳುಮ್ ಅವೈಯುವೈ ಎನ್ರಿಲ್ ? ಅಶ್ಲೇಷವಿನಾಶವಿಷಯಙ್ಗಳುಮ್ ಬುದ್ಧಿಪೂರ್ವೋತ್ತರಪುಣ್ಯಙ್ಗಳಿಲ್ ಕರ್ಮಾ**

---

ವಿಷಯದಲ್ಲಿ, **ಕರ್ಮಫಲಪ್ರದಾನಾಭಿಸಂಧಿ** – ಕರ್ಮಗಳಿಗೆ ಫಲವನ್ನು ಕೊಡುವ ಸಙ್ಕಲ್ಪವು, **ಉದಿಯಾದೊೞಿಗೈ** – ಉಂಟಾಗದೇನೇ ಇರೋಣವು.

**ಇಪ್ಪಡಿ** – ಈ ಪ್ರಕಾರವಾಗಿ, **ಸರ್ವಕರ್ಮಙ್ಗಳೂ ಕೞಿಯಾನಿರ್ಕ** – ಸಮಸ್ತ ಪುಣ್ಯಾಪಾಪಕರ್ಮಗಳೂ ಕಳೆದು ಹೋದನಂತರ, **ಸುಹೃತ್ತುಕ್ಕೞುಮ್ ದ್ವಿಷತ್ತುಕ್ಕೞುಮ್** – **"ಸುಹೃದಃ ಸಾಧುಕೃತ್ಯಾಂ ದ್ವಿಷನ್ತಃ ಪಾಪಕೃತ್ಯಾಂ** ಎಂಬಲ್ಲಿ ಸಾಧುಕೃತ್ಯಗಳು ಸುಹೃತ್ತುಗಳನ್ನೂ ಪಾಪಕೃತ್ಯಗಳು ದ್ವೇಷಗಳಲ್ಲೂ ಹೋಗಿ ಸೇರುತ್ತವೆ ಎಂದು (          ) ಶಾಸ್ತ್ರದಲ್ಲಿ **ಕೂರಿಟ್ಟುಕ್ಕೊಳ್ಳುಮ್** - ವಿಭಾಗಿಸಿ ಕೊಳ್ಳುವ, **ಅವೈ** – ಪುಣ್ಯಾಪಾಪಗಳು **ಯುವೈ** – ಯಾವುವು ? **ಎನ್ರಿಲ್** – ಎಂದರೆ, ಸರ್ವಕ್ಕೂ ಅಶ್ಲೇಷ ವಿನಾಶಗಳನ್ನು ಹೇಳಿದನಂತರ, ಇನ್ನು ಸುಹೃತ್ ದುಷ್ಕೃತರನ್ನು ಹೋಗಿ ಸೇರಲು ಪುಣ್ಯಾಪಾಪಗಳು ಎಲ್ಲಿವೆ ಎಂಬ ಚೋದ್ಯವು ; ಇದನ್ನು ಪರಿಹರಿಸುತ್ತಾರೆ (೧) **ಅಶ್ಲೇಷ ವಿನಾಶ ವಿಷಯಙ್ಗಳುಮ್** - ಅನಾದಿ ಕಾಲದಿಂದ ಅನುಷ್ಠಿತಗಳಾದ ಆರೋಗ್ಯ ಅನ್ನಪಶು ಸ್ವರ್ಗಾದಿಗಳಿಗೆ ಹೇತುವಾದ ಸುಕೃತಗಳಲ್ಲಿ ಅನುಭವಿಸದೇ ಇರುವುವು ; (೨) ಮತ್ತು **ಬುದ್ಧಿಪೂರ್ವೋತ್ತರ ಪುಣ್ಯಙ್ಗಳಿಲ್, ಕರ್ಮಾಂತರ ಪ್ರತಿಬದ್ಧ ಫಲಙ್ಗಳುಮ್** – ಬುದ್ಧಿಪೂರ್ವಕವಾಗಿ ಮಾಡಿದ ಪುಣ್ಯಗಳಲ್ಲಿ, **ಕರ್ಮಾನ್ತರ ಪ್ರತಿಬದ್ಧಫಲಙ್ಗಳುಮ್** - ಬೇರೇ ಪ್ರಬಲಕರ್ಮಗಳ ಅನುಭವದಿಂದ ತಡೆಯಲ್ಪಟ್ಟ ಫಲಗಳಾಗಿರುವುವು ; ಇವುಗಳು **ಸುಹೃದಸ್ಸಾದುಕೃತ್ಯಾಂ** ಎಂಬ ವಚನಕ್ಕೆ ಸೇರಿಪವು ಎಂಬ ಭಾವವು. ಇದು ವ್ಯಾಸಸೂತ್ರ (೮. ೧. ೧೭) ವಾದ **"ಅನ್ಯಾಪಿಹ್ಯೇಕೇಷಾಮುಭಯೋಃ"** ಎಂಬಲ್ಲಿ ಉಪಪಾದಿತವು. ಆದರೆ ಕರ್ಮಾನ್ತರದಿಂದ ಸುಕೃತಫಲಪ್ರತಿಬದ್ಧವಾಗಿರುವದುಂಟೋ ? ಎಂದರೆ ಉಂಟೆಂದು ಮುಂದಿನ ಸೂತ್ರವಾದ **"ಯದೇವವಿದ್ಯಯಾ ಇತಿಹಿ** (೪. ೧. ೧೮.) ಎಂಬಲ್ಲಿ ಉಪಪಾದಿತವು.

ಆಗಲಿ, ವಿದ್ಯಾರಂಭಕ್ಕೆ ಪೂರ್ವವಾದ ಪುಣ್ಯಾಪಾಪಗಳು ನಾಶವಾಗುವವೆಂದೂ ಅನಂತರ ಅಬುದ್ಧಿಪೂರ್ವಕಗಳು ಲೇಪಿಸುವದಿಲ್ಲವೆಂದೂ ಹೇಳಲ್ಪಟ್ಟನಂತರ **ಸುಹೃದಸ್ಸಾದುಕೃತ್ಯಾಂ** ಎಂಬಲ್ಲಿ ಹೇಳಲ್ಪಟ್ಟಿರುವ ಪುಣ್ಯಕರ್ಮಗಳು ಸುಹೃತ್ತಿನಲ್ಲಿ ಸೇರಿಕೊಳ್ಳುವುವು ಯಾವುವು ? ಎಂದರೆ ವಿದ್ಯೆಯಿಂದ ಕೆಲವು ಸುಕೃತಗಳು ವೃಷ್ಟಿ ಪಶ್ವನ್ನಾರೋಗ್ಯಾದಿ ರೂಪದಿಂದ ಅನುಭವಿಸಲ್ಪಡುವುವಲ್ಲದೆ ಅನುಭವಿಸದೇ ಇರುವ ಪುಣ್ಯಗಳುಂಟು, ಅವೂ ಮತ್ತು ಉತ್ತರ ಪುಣ್ಯಗಳಲ್ಲಿ, ಪ್ರತಿಬದ್ಧವಾಗಿ

**ಫಲಾನ್ತರಾರ್ಥವಾಗ ಪ್ಪಣ್ಣಿನ ಪ್ರಪತ್ತ್ಯಂತರಙ್ಗಳುಮ್ ದತ್ತಫಲಙ್ಗಳಾಯ್ ಪ್ಪೋಮ್. ಪೂರ್ವಪ್ರಪತ್ತಿಕ್ಕು ಕ್ಕೋಲಿನ ಫಲತ್ತೈ ಪ್ಪತ್ತ ಪುನಃ ಪ್ರಪತ್ತಿ ಪಣ್ಣುಗೈ ಮಹಾವಿಶ್ವಾಸತ್ತೋಡೇ ಕೂಡ ಅನುಷ್ಠಿತ್ತ ಪೂರ್ವಪ್ರಪತ್ತಿ ಪ್ರತಿ ಸಂಧಾನತ್ತಾಲೇ ಕೂಡಾದು.**

ದೋಷವಲ್ಲವು. "ಮುಕ್ತಸಙ್ಗಸ್ಸಮಾಚರ" ಎಂದು ಅನುಜ್ಞೆಯುಂಟು. ಇವುಗಳನ್ನೇ ಇಂತಹ ಭಾವನೆಯಿಲ್ಲದೆ ಅನುಷ್ಠಿಸಿದುದಾದರೆ ದುಷ್ಟವಾಗುವುವು. ಈ ಶ್ಲೋಕವನ್ನು ಪ್ರಯೋಗಿಸಲು ಕಾರಣವೇನೆಂದರೆ ಭಾರತವು ಮಹತ್ತಾದುದು, ವೇದಕ್ಕೆಸಮಾನವಾಗಿ ಪಂಚಮವೇದವೆಂದು ಹೇಳಿಸಿಕೊಳ್ಳುವುದರಿಂದ ಮಹಾತ್ಮ್ಯೆ ಹೆಚ್ಚು ಎಂದು ಹೇಳಿ, ಅದರಲ್ಲಿ ಯುದ್ಧವರ್ಣನೆ, ಐಹಿಕಗಳಾದ ಅಶಾಶ್ವತ ಫಲಗಳುಂಟಾಗುವ ಕ್ರಮ ಇತ್ಯಾದಿಗಳೆಲ್ಲಾ ಇರುವಾಗ ಹೇಗೆ ಉತ್ತಮ ಗ್ರಂಥವೆಂಬಾಕ್ಷೇಪಣೆಯುಂಟಾಗಬಹುದೆಂದು ಭಾವಿಸಿ, ಅಂತವುಗಳೂ ಕೂಡ ಭಗವತ್ಪ್ರೀತ್ಯರ್ಥವಾಗಿ ಫಲಾಭಿಸಂಧಿಯಿಲ್ಲದ ಭಾವವಿದ್ದರೆ ಮೋಕ್ಷಸಾಧನವಾಗುತ್ತದೆಂದೂ ಅಂತಹ ಭಾವವಿಲ್ಲದಿದ್ದರೆ ಅವೇ ದೋಷಯುಕ್ತವಾಗುತ್ತೆಂದೂ ಸಮಾಧಾನವನ್ನು ಹೇಳಿದರು.

**ಫಲಾನ್ತರಾರ್ಥವಾಗ** - ಮೋಕ್ಷವಲ್ಲದೆ ಬೇರೇ ಫಲಗಳಿಗಾಗಿ, ಮಗ, ಬಂಧುವರ್ಗಮೊದಲಾದವರುಗಳ ಐಹಿಕ ತೊಂದರೆ ನಿವಾರಣಕ್ಕಾಗಿ ಅಥವಾ ಶ್ರೇಯಸ್ಸಿನ ಪ್ರಾಪ್ತಿಗಾಗಿ, **ಪಣ್ಣಿನ** - ಮಾಡಿದ, **ಪ್ರಪತ್ತ್ಯನ್ತರಙ್ಗಳುಮ್** - ಬೇರೇ ಪ್ರಪತ್ತಿಗಳೂ (ಅಂತಹ ಸುಕೃತಗಳೂ ಸಹ) **ಧತ್ತಫಲಙ್ಗಳಾಯ್ ಪ್ಪೋಮ್** - ಸ್ವಾಮಿಯ ಅನುಗ್ರಹದಿಂದ ದತ್ತಫಲಗಳಾಗಿ ಕಳೆಯಬಹುದು. **ಪೂರ್ವ ಪ್ರಪತ್ತಿಕ್ಕು ಕೋಲಿನ ಫಲತ್ತೈ** - ಮೊದಲು ಆಚಾರ್ಯರ ಮೂಲಕ ಅನುಷ್ಠಿಸಿದ ಪ್ರಪತ್ತಿಗೆ ಅಪೇಕ್ಷಿಸಿದ ಫಲವಾದ ಮೋಕ್ಷವನ್ನೂ, **ಪತ್ತ** - ಕುರಿತು, **ಪ್ರಪತ್ತಿ ಪಣ್ಣುಗೈ** - ಪುನಃ ಪ್ರಪತ್ತಿಯನ್ನು ಮಾಡುವುದು, **ಮಹಾವಿಶ್ವಾಸತ್ತೋಡೆ ಕೂಡ** - ಅಂಗವಾದ ಮಹಾವಿಶ್ವಾಸದೊಂದಿಗೆ, **ಅನುಷ್ಠಿತ್ತ** - ಒಂದೆ ಮೊದಲು ಅನುಷ್ಠಿಸಿದ **ಪೂರ್ವಪ್ರಪತ್ತಿ** - ಮೋಕ್ಷಾರ್ಥ ಪ್ರಪತ್ತಿಗೆ, **ಪ್ರತಿಸಂಧಾನತ್ತಾಲೇ** - ವಿರೋಧವಾಗುವದರಿಂದ, ವಿರೋಧ ಮಹಾತ್ಮ್ಯೆಯುಳ್ಳದೆಂದು ಭಾವನೆಯುಂಟಾಗುವದರಿಂದ ಎಂಬರ್ಥವು, **ಕೂಡಾದು** - ಅಂತಹ ಅನುಷ್ಠಾನವು ಸರಿಯಲ್ಲವು. ಹಿಂದೆ ಅನುಷ್ಠಿಸಿದ ಕಾಲದಲ್ಲಿ ಮಹಾವಿಶ್ವಾಸವಿದ್ದುದು ಕಳೆದುಹೋಗಿ ಈಗ ಆ ಪ್ರಪದನದ ಮಹಾತ್ಮ್ಯೆಯಲ್ಲಿ ಶಂಕಾ ಉಂಟಾಗಿ ಪುನಃ ಪ್ರಪತ್ತಿಯನ್ನು ಅನುಷ್ಠಿಸಿದ ಹಾಗೆ ಆಗುತ್ತದೆಯಾದುದರಿಂದ ಪುನಃ ಪ್ರಪದನವು ಮೋಕ್ಷಕ್ಕಾಗಿ ಕೂಡದೆಂಬ ಭಾವವು. ಆ ಸಂದರ್ಭದಲ್ಲಿ ಪೂರ್ವಪ್ರಪತ್ತಿಯೂ ಆಂಜನೇಯನ ಬ್ರಹ್ಮಾಸ್ತ್ರ

**ವುಮ್‌, ಆಶ್ರಿತರ್ ಪಕ್ಕಲಿಲ್ ಪಣ್ಣಿನ ಪ್ರಾತಿಕೂಲ್ಯತ್ತುಕ್ಕು ಮೇಲ್ ಕ್ಷಮೈ ಕ್ಕೊಳ್ಳ ಅವಸರಮ್ ಕೊಡುಕ್ಕೈಕಾಗವುಮ್‌, ಇವ್ವಾಶ್ರಿತರುಡೈಯ ಅನ್ತಿಮ ಶರೀರ ವಿಶ್ಲೇಷತ್ತಳವುಮ್ ಇವರ್‌ಗಳುಡೈಯ ಪುಣ್ಯಪಾಪಜ್ಗಳೈ ಅಶಲ, ಪಿಳನ್ದೇರಿಡಾದೊಳಿಗಿರರ್.**

---

ಅಂತವನನ್ನು ಹೋಗಿ ಸೇರುವದು ಯುಕ್ತವಲ್ಲವಾದುದರಿಂದಲೂ, ಮತ್ತು **ಆಶ್ರಿತರ ಪಕ್ಕಲಿಲ್** - ಆಶ್ರಿತರಾದ ಪ್ರಪನ್ನರ ವಿಷಯದಲ್ಲಿ, **ಪಣ್ಣಿನ ಪ್ರಾತಿ ಕೂಲ್ಯತ್ತುಕ್ಕು** - ಆಗ ದ್ವೇಷಿಯಾಗಿ ಮಾಡಿದ ಪ್ರತಿಕೂಲಾಚರಣೆಗೆ, **ಮೇಲ್** - ಅನಂತರ, **ಕ್ಷಮೆಕ್ಕೊಳ್ಳ ಅವಸರಮ್ ಕೊಡುಕ್ಕೈಕ್ಕಾಗವುಮ್**-ತಾನು ಹಿಂದೆ ನಡೆದುದು ಸರಿಯಲ್ಲವೆಂದು ತಿಳಿದು ಆತನ ಕ್ಷಮೆಯನ್ನು ಪ್ರಾರ್ಥಿಸುವದರ ಮೂಲಕ ಸುಹೃತ್ತಾಗಿ ನಡೆಯುವದಕ್ಕೆ ಅವಸರವನ್ನು ಕೊಡುವದಕ್ಕಾಗಿಯೂ, **ಇವ್ವಾಶ್ರಿತರುಡೈಯ** - ಈ ಪ್ರಪನ್ನರ, **ಅನ್ತಿಮಶರೀರ ವಿಶ್ಲೇಷತ್ತಳವುಮ್** - ಕೊನೆಯಲ್ಲಿ ಶರೀರ ಪರಿತ್ಯಾಗಕಾಲದವರೆಗೂ, **ಇವರ್‌ಗಳುಡೈಯ ಪುಣ್ಯಪಾಪ ಜ್ಗಳ್** - ಈ ಪ್ರಪನ್ನರ ಪುಣ್ಯಪಾಪಗಳು, **ಅಶಲ್ ಪಿಳನ್ದು** - ಬೇರೊಬ್ಬನಿಂದ ತೆಗೆದು ವಿಭಾಗಿಸಿ, **ಏರಿಡಾದೊಳಿಗಿರರ್** - ಸುಹೃತ್ತು ದ್ವೇಷಿಗಳಲ್ಲಿ ಆರೋಪಿಸದೆ ದೇಹಾವಸಾನದವರೆಗೂ ನಿಲ್ಲಿಸಿರುತ್ತಾನೆ.

ಈ ಪ್ರಪನ್ನನ ಸುಕೃತವು ಆತನ ಸುಹೃತ್ತಿನಲ್ಲಿ ಅನ್ತಿಮದಶೆಯಲ್ಲಿ ಹೋಗಿ ಸೇರುತ್ತದೆಂದು ಹೇಳಲ್ಪಟ್ಟಿತಲ್ಲಾ, ಯಾವನಲ್ಲಿ ಹೋಗಿ ಸೇರಿತೋ ಅವನೇನು ಅಪ್ರಪನ್ನನೇ, ಪ್ರಸನ್ನನೇ, ಎಂಬ ವಿಷಯದಲ್ಲಿ ಅಪ್ರಪನ್ನನನ್ನು ಹೋಗಿ ಸೇರುತ್ತ ದೆಂದು ತಿಳಿಸುತ್ತಾರೆ. ಏಕೆಂದರೆ ಆ ಸುಕೃತವು ಸ್ವರ್ಗಾದ್ಯಶಾಶ್ವತಸುಖವನ್ನುಂಟು ರಿಂದಲೂ, ಅಂತಹ ಸುಖವು ಪ್ರಪನ್ನನಿಗೆ ಪ್ರಾತಿಕೂಲ್ಯವಾಗಿ ದುಃಖರೂಪವಾದು ಮಾಡುವದದರಿಂದಲೂ, ಅಮುಮುಕ್ಷು ವಿಷಯವೆಂದು ತಿಳಿಸುತ್ತಾರೆ. **ಸ್ವರ್ಗಾದ್ಯರ್ಥ ಸುಕೃತಮ್** - ಸ್ವರ್ಗಾದಿ ಫಲವನ್ನು ಕೊಡುವ ಸುಕೃತವು, ಆದಿಪದದಿಂದ ಇತರ ದೇವಲೋಕಸುಖವು ಹೇಳಲ್ಪಟ್ಟಿತು. **ಮುಮುಕ್ಷುವುಕ್ಕು**-ಮೋಕ್ಷಾರ್ಥಿಗೆ, **ಪಾಪ ಸಮಾನಮಾಗೈಯಾಲ್** - ಪಾಪಕ್ಕೆ ಸಮಾನವಾದುದರಿಂದ, **ಅದುಮ್** - ಆ ಪ್ರಪನ್ನನ ಸುಕೃತವೂ, **ಮುಮುಕ್ಷುವಾನ ಸುಹೃತ್ತಿನ್ ಪಕ್ಕಲ್**- ಮೋಕ್ಷಾರ್ಥಿ ಯಾದ ಸುಹೃತ್ತನ್ನು ಕುರಿತು, **ಸಂಕ್ರಮಿಯಾದು** - ಹೋಗಿ ಸೇರುವದಿಲ್ಲವು. ಪ್ರಪನ್ನನ ಸುಕೃತವು ಹೋಗಿ ಸೇರುವದು ಮೋಕ್ಷಾರ್ಥಿಯಲ್ಲದ ಸುಹೃತ್ತನ್ನೇ ಎಂಬ ಭಾವವು.

ಮುಂದೆ ಕೆಲವು ಶಂಕಾಗಳನ್ನು ಅನುವಾದಮಾಡಿ ಪರಿಹರಿಸುತ್ತಾರೆ. ಹಿಂದೆ ಪುಣ್ಯಪಾಪಗಳು ಮಾಡಿದ ಒಡನೆಯೇ ನಷ್ಟವಾಗಿ ಹೋಗುತ್ತವೆಂದೂ ಭಗವಂತನ

**ಸ್ವರ್ಗಾದ್ಯರ್ಥಸುಕೃತಮ್' ಮುಮುಕ್ಷುವುಕ್ಕು ಪಾಪ (ಸಮಾನ) ಮಾಗೈಯಾಲೇ, ಯದುವುಮ್' ಮುಮುಕ್ಷುವಾನ ಸುಹೃತ್ತಿನ್' ಪಕ್ಕಲ್' ಸಂಕ್ರಮಿಯಾದು. ಆರೇನುಮ್' ಪಣ್ಣಿನ ಕರ್ಮಜ್ಗಳ್' ವೇರೇ ಶಿಲರ್' ಪಕ್ಕಲೀಲೇ ಸಂಕ್ರಮಿಕ್ಕೈಯಾವದೆನ್ನೆನ್ರಿಲ್' ! ಕರ್ತ್ತಾವೈಪ್ಪತ್ತ ಈಶ್ವರನುಕ್ಕುವರುಮ್' ನಿಗ್ರಹಾನುಗ್ರಹಜ್ಗಳೋಡು ಸಮಾನಮಾಗ ಇವನುಡೈಯ ಶತ್ರುಮಿತ್ರರ್'ಗಳ್' ಪಕ್ಕಲಿಲೇ ನಿಗ್ರಹಾನುಗ್ರಹಂಗಳ್' ಉದಿಕ್ಕೈ. ಆರೇನುಮ್'**

---

ಅನುಗ್ರಹ ನಿಗ್ರಹಾನುರೂಪದಲ್ಲಿ ನಿಲ್ಲುತ್ತವೆಂದು ಹೇಳಲ್ಪಟ್ಟಿತು ಆದುದರಿಂದ ಅದ್ರವ್ಯರೂಪದಲ್ಲಿ ಭಗವತ್ಪ್ರೀತ್ಯಪ್ರೀತಿರೂಪದಲ್ಲಿದ್ದುದು ಅನ್ಯತ್ರ ಸಂಕ್ರಮಿಸುವುವು ಎಂದರೇನು ? ಮತ್ತು ಒಬ್ಬನು ಮಾಡಿದ ಸುಕೃತ ದುಷ್ಕೃತಗಳು ಇನ್ನೊಬ್ಬನಲ್ಲಿ ಸಂಕ್ರಮಿಸುತ್ತವೆಂಬುದು ನ್ಯಾಯವಾದ ಹೇಳಿಕೆಯೇ ? ಎಂದು ಶಂಕಿಸಿ ಉತ್ತರವನ್ನು ಹೇಳುತ್ತಾರೆ.—**ಆರೇನುಮ್' ಪಣ್ಣಿನ ಕರ್ಮಜ್ಗಳ್'** - ಯಾರೋ ಒಬ್ಬರು ಮಾಡಿದ ಕರ್ಮಗಳು, **ವೇರೇ ಶಿಲರ್' ಪಕ್ಕಲಿಲೇ** - ಬೇರೆ ಕೆಲವರ ವಿಷಯದಲ್ಲಿ **ಸಂಕ್ರಮಿಕ್ಕೈಯಾವುದೆನ್ರೆನ್ರಿಲ್'** - ಹೋಗಿ ಸೇರುವದು ಎಂಬುದು ಎಂತಾದ್ದು ? **ಕರ್ತ್ತಾವೈಪತ್ತ** - ಪ್ರಪನ್ನನಾದ ಸುಕೃತ ದುಷ್ಕೃತಗಳನ್ನು ಮಾಡಿದ ಕರ್ತೃವನ್ನು ಕುರಿತು, **ಈಶ್ವರನುಕ್ಕುವರುಮ್'**-ಈಶ್ವರನಿಗುಂಟಾಗುವ, **ನಿಗ್ರಹಾನುಗ್ರಹಂಗಳೋಡು** - ನಿಗ್ರಹ ಮತ್ತು ಅನುಗ್ರಹಗಳೊಂದಿಗೆ, **ಸಮಾನಮಾಗ** - ಸಮಾನವಾಗಿರುವ, **ಇವನುಡೈಯ** - ಪ್ರಪನ್ನನ, **ಶತ್ರುಮಿತ್ರರ್'ಗಳ್' ಪಕ್ಕಲಿಲೇ** - ಶತ್ರುಮಿತ್ರರುಗಳ ವಿಷಯದಲ್ಲಿ, **ನಿಗ್ರಹಾನುಗ್ರಹಂಗಳ್' ಉದಿಕ್ಕೈ**-ನಿಗ್ರಹಾನುಗ್ರಹಂಗಳು ಉದಿಸೋಣವು. ಸುಕೃತ ದುಷ್ಕೃತಗಳು ದ್ರವ್ಯವಲ್ಲವು, ಅದ್ರವ್ಯವು. ಏನೊಂದು ದ್ರವ್ಯಗಳೂ ಶತ್ರುಮಿತ್ರರನ್ನು ಹೋಗಿ ಸೇರುವದಿಲ್ಲ, ಏಕೆಂದರೆ ಇದು ಅದ್ರವ್ಯವು. ಇವು ಏನು ಮಾಡುತ್ತವೆ ? ಎಂದರೆ ಭಗವತ್ಪ್ರೀತಿ ಮತ್ತು ಅಪ್ರೀತಿಯನ್ನು ಈ ಸುಕೃತ ದುಷ್ಕೃತಗಳು ಉಂಟುಮಾಡುತ್ತವೆ. ಸರ್ವೇಶ್ವರನು ಪ್ರಪನ್ನನಲ್ಲಿ ನಿಗ್ರಹಾನುಗ್ರಹ ಬುದ್ಧಿಯನ್ನು ತ್ಯಾಗಮಾಡುವದರಿಂದ ಆ ಸಂಕಲ್ಪವು ಶತ್ರುಮಿತ್ರರುಗಳಲ್ಲಿ ಉಂಟಾಗುವಹಾಗೆ ಮಾಡುತ್ತದೆಂಬ ತಾತ್ಪರ್ಯವು. ಆನಂದ ರಾಮಾಯಣದಲ್ಲಿ ಶ್ರೀರಾಮಶಬ್ದಮಾಹಾತ್ಮ್ಯೆಯನ್ನು ಉಪಪಾದಿಸುವದಕ್ಕಾಗಿ ಚಮತ್ಕಾರವಾಗಿ ಹೇಳಿರುವದೇನೆಂದರೆ, **ರಾ** - ಎಂದು ಉಚ್ಚರಿಸಲು ಬಾಯಿಯನ್ನು ತೆಗೆದರೆ ಉಚ್ಚರಿಸಿದವನಲ್ಲಿ ಇದ್ದ ಪಾಪಗಳೆಲ್ಲಾ ಹೊರಗೆ ಬರುತ್ತವೆಂದೂ, ಅನಂತರ **ಮ** - ಶಬ್ದೋಚ್ಚಾರಣೆಗೆ ಬಾಯಿ ಮುಚ್ಚಬೇಕಾಗುವದರಿಂದ ಪಾಪಗಳೆಲ್ಲಾ ಹೊರಗೇನೇ ನಿಂತುಹೋಗುತ್ತವೆಂದು ಹೇಳಲ್ಪಟ್ಟಿರುತ್ತದೆ. ಇದು ಚಮತ್ಕಾರ ಹೇಳಿಕೆಯಾದರೂ, ಪಾಪಗಳು ಏನೋ ಒಂದು ವಿಧದ್ರವ್ಯವೇದೂ ಗಾಳಿ

**ಅನುಷ್ಠಿತ್ತ ಕರ್ಮಙ್ಗಳುಕ್ಕು ಅರೇನುಮ್ಪುಕ್ಕಲಿಲೇ ನಿಗ್ರಹಾನುಗ್ರಹ ಹಂಗಳ' ಪಿರನ್ದಾಲ' ಅತಿಪ್ರಸಂಗಮು' ವಾರಾದೋ ಎನ್ನಿಲ'? ಇದುವುಮು' ಮುಮುಕ್ಷು ವಿಷಯತ್ತಿಲ' ಅನುಕೂಲ ಪ್ರತಿಕೂಲರ್ಕ್ಕು ಉಪಚಾರಾಪಚಾರ ರೂಪಮಾನ ಕರ್ಮಮಡಿಯಾಗವರುಗಿರತಾಗೈಯಾಲೇ ಅತಿಪ್ರಸಂಗಮಿಲ್ಲೈ.**

ರೂಪದಲ್ಲಿ ಹೊರಗೆ ಅಲ್ಲೇ ಬಂದು ನಿಲ್ಲುತ್ತವೆ ಎಂಬ ತಪ್ಪು ಅಭಿಪ್ರಾಯವನ್ನುಂಟು ಮಾಡಬಹುದು. ಪುಣ್ಯಪಾಪಗಳು ಸ್ವಾಮಿಯಲ್ಲಿ ಪ್ರೀತ್ಯಪ್ರೀತಿಗಳನ್ನುಂಟುಮಾಡಿ ನಷ್ಟವಾಗುವುವು. ಈ ಪ್ರೀತಿಯೂ ಪ್ರಪನ್ನನ ಸುಕೃತಫಲವೂ ಸೇರುವದರಿಂದ ಇನ್ನೂ ಸ್ವಲ್ಪ ಹೆಚ್ಚು ಪ್ರೀತಿಯನ್ನುಂಟುಮಾಡಬಹುದೆಂಬುದು ತಾತ್ಪರ್ಯವಾದುದ ರಿಂದ ಯಾವುದೊಂದು ಶಂಕಾವಿಗೂ ಕಾರಣವಿಲ್ಲವು. ಪಾಪಗಳ ವಿಷಯದಲ್ಲೂ ನಿಗ್ರಹಕ್ಕೆ ಇನ್ನೂ ಸ್ವಲ್ಪ ನಿಗ್ರಹವು ಸೇರುತ್ತದೆಂಬ ಭಾವವು.

ಆಗಲಿ, ಅದ್ರವ್ಯವೆಂದು ಉಪಪಾದಿಸಿ ಹೇಳಿದ್ದೇನೋ ಒಪ್ಪಿದೆವು. ಇನ್ನೊಂದು ಆಕ್ಷೇಪಣೆಯಾದ ಒಬ್ಬನು ಮಾಡಿದ ಕೃತ್ಯಗಳಿಗೆ ಇನ್ನು ಬೇರೆ ಜನರಿಗೆ ಸ್ವಾಮಿಯ ನಿಗ್ರಹಾನುಗ್ರಹಫಲಗಳು ಎಂಬುದು ಅತಿ ಪ್ರಸಂಗವಲ್ಲವೋ? ಹಾಗೆ ಈಶ್ವರನು ಮಾಡುವುದು ವಿಹಿತವೋ? ಎಂದರೆ ಸರಿಯಾದುದೇ ಎಂದು ತಿಳಿಸು ತ್ತಾರೆ. **ಇದುವುಮು'** - ಹೀಗೆ ಪ್ರಪನ್ನನ ಸುಹೃತ್ತುಗಳಿಗೆ ಪ್ರಪನ್ನನ ಸುಕೃತ ಸೇರಿದ ಅನುಗ್ರಹವೂ, ಪ್ರಪನ್ನನ ದುಷ್ಕೃತಿಗಳಿಗೆ ಪ್ರಪನ್ನನ ದುಷ್ಕೃತದಫಲವಾಗಿ ನಿಗ್ರಹವೂ, **ಮುಮುಕ್ಷುವಿಷಯತ್ತಿಲ'** - ಮೋಕ್ಷಾರ್ಥಿಯಾಗಿ ಸರ್ವೇಶ್ವರನನ್ನು ಆಶ್ರಯಿಸಿದ ಮಹಾಭಾಗವತನ ವಿಷಯದಲ್ಲಿ, **ಅನುಕೂಲಪ್ರತಿಕೂಲರ್ಕ್ಕು** - ಮಿತ್ರಶತ್ರುಗಳಿಗೆ, **ಉಪಚಾರಾಪಚಾರರೂಪಮಾದ, ಕರ್ಮಮಡಿಯಾಗ**-ಇವರು ಗಳುಮಾಡಿದ ಕರ್ಮಮೂಲಕವಾಗಿ, **ವರುಗಿರದಾಗೈಯಾಲೇ** - ಉಂಟಾಗುತ್ತವೆ ಯಾದುದದರಿಂದ **ಅತಿಪ್ರಸಂಗಮಿಲ್ಲೈ** - ವಿಪರೀತಾಚರಣೆಯಾಗುವದಿಲ್ಲವು. ತನ್ನನ್ನು ಆಶ್ರಯಿಸಿ ಉಪಾಯಾನುಷ್ಠಾನ ಮಾಡಿದವನು, ಸರ್ವೇಶ್ವರನಿಗೆ ತುಂಬಾ ಪ್ರಿಯನು. **ಜ್ಞಾನೀ ತ್ವಾತ್ಮೈವ ಮೇ ಮತಂ** ಎಂದೂ ಆತನನ್ನು ಸುಹೃತ್ತಾಗಿ ಭಾವಿಸುವನು. ಅಂತವನಿಗೆ ಅನುಕೂಲನಾಗಿ ಹಿತವನ್ನು ಆಚರಿಸಿ ಉಪಚಾರ ಮಾಡಿದರೆ ಅಂತವನು ತನಗೆ ಬಹು ಇಷ್ಟವಾಗಿ, ಆ ಮುಮುಕ್ಷುವಿಗೆ ಮಾಡಬೇ ಕಾಗಿದ್ದ ಅನುಗ್ರಹವನ್ನು ಈ ತನ್ನವನಿಗೆ ಅನುಕೂಲನಾಗಿರುವವನಿಗೆ ತೋರಿಸು ವದೇ ನ್ಯಾಯವೇ ವಿನಾ ವಿಪರೀತವಾದುದೇನೂ ಅಲ್ಲವು. ವಿಭೀಷಣನಿಗೆ ಆಂಜನೇಯನು ಅನುಕೂಲನಾಗಿ ಪರಮ ಸುಹೃತ್ತಾಗಿದ್ದನೆಂದು ಭಾವಿಸಿ, ವಿಭೀಷ ಣನಿಗೆ ಮುಕ್ತಿಯನ್ನು ಕೊಡಬೇಕಾಗಿ ಬಂದಾಗ, ಆತನ ಸುಕೃತಗಳಿಗಾಗಿ ಆಂಜನೇಯನಲ್ಲಿ ತನ್ನ ಭಕ್ತನಿಗೆ ಅನುಕೂಲನಾಗಿದ್ದನೇ ಎಂಬ ಭಾವದಿಂದ ಹೆಚ್ಚು

**ಆಗ್ಯೆಯಾಲೇಯಿರೇ ಉದಾಸೀನರ್ಪಕ್ಕಲ‘ ಸುಕೃತ ದುಷ್ಕೃತಂಗಳಿರುಣ್ಡುವು‘ ಸಂಕ್ರಮಿಕ್ಕ ಮೆನ್ನಾದೊಳಿಗಿರದು. ಫಲಸಾರೂಪ್ಯಮಾತ್ರತ್ತಾಲೆ ಇಜ್ಜ ಸಂಕ್ರಮಣೋಪಚಾರಮು‘.**

---

ಅನುಗ್ರಹ ತೋರುವದರಲ್ಲಿ ಅಸಂಭಾವಿತವಾದುದೇನೂ ಇಲ್ಲವೆಂಬ ಭಾವವು. ಹಾಗೆಯೇ ಪಾಂಡವರು ಸ್ವಾಮಿಯಾದ ಶ್ರೀ ಕೃಷ್ಣನನ್ನು ಆಶ್ರಯಿಸಿದರಾದುದರಿಂದ, ಪಾಂಡವರ ಶತ್ರುಗಳಾದ ದುರ್ಯೋಧನಾದಿಗಳಲ್ಲಿ ಪಾಂಡವರ ಬುದ್ಧಿಪೂರ್ವೋತ್ತರಾಘದ ನೆಪಹೂಡಿಕೊಂಡು ದುರ್ಯೋಧನಾದಿಗಳ ವಿಷಯದಲ್ಲಿ ವಿಶೇಷ ನಿಗ್ರಹ ಸಂಕಲ್ಪವನ್ನು ಮಾಡುವದು ನ್ಯಾಯವೇ ಸರಿ, ಹಾಗೆಯೇ, ದುರ್ಯೋಧನಾತಿಥ್ಯವನ್ನು ನಿರಾಕರಿಸಿ ಹೇಳಿರುತ್ತಾರೇನೆಂದರೆ **‘ದ್ವಿಷದನ್ನಂ ನಭೋಕ್ತವ್ಯಂ** ದ್ವೇಷಿಯಾದ ನಿನ್ನ ಅನ್ನವು ಸರಿಯಲ್ಲವೆಂದು ಹೇಳಿ, ಅದಕ್ಕೆ ಕಾರಣವನ್ನು **ಪಾಂಡವಾರ್ನ್ದ್ವಿಷಸೇರಾಜನ್ಮಮಪ್ರಾಣಾಹಿ ಪಾಂಡವಾಃ** – ಭಕ್ತರಾದ ಪಾಂಡವರು ನನಗೆ ಪ್ರಿಯತಮರು, ಪಾಂಡವರ ದ್ವೇಷಿಯಾದ ನೀನೂ ನನಗೂ ದ್ವೇಷಿಯು ಎಂದು ಸ್ಪಷ್ಟಪಡಿಸಿರುತ್ತಾರೆ. ಆದುದರಿಂದ ವಿಶೇಷ ನಿಗ್ರಹ ಸಂಕಲ್ಪಕ್ಕೆ ದುರ್ಯೋಧನನು ಅರ್ಹನೆಂಬುದನ್ನು ಅಲ್ಲಿ ತೋರಿಸಿರುತ್ತಾರೆ—ಮಹಾಭಾಗವತೋತ್ತಮರಾಗಿ ತನ್ನನ್ನು ಆಶ್ರಯಿಸಿರುವರ ಸುಹೃತ್ತಿನಲ್ಲಿ ವಿಶೇಷಾನುಗ್ರಹವೂ, ತದ್ದ್ವೇಷಿಗಳಲ್ಲಿ ವಿಶೇಷನಿಗ್ರಹವೂ ಯುಕ್ತವಾದುದ್ದೇ ಸರಿ ಎಂಬ ಭಾವವು. ಅತಿಪ್ರಸಂಗವಲ್ಲವು. ಆಕ್ಷೇಪಣೆಯ ಪ್ರಕಾರ ಪುಣ್ಯಪಾಪಗಳ ಸಂಕ್ರಮಣವು ಅದ್ರವ್ಯವೇ; ಅವರ ಅಭಿಪ್ರಾಯವು ಪ್ರಪನ್ನನ ಸುಹೃತ್ತು ದುಷ್ಕೃತಗಳಲ್ಲಿ ಅನುಗ್ರಹ ನಿಗ್ರಹ ಸಂಕಲ್ಪವೆಂದೂ; ಪ್ರಪನ್ನನು ಮಹಾಭಾಗವತನು, ಅಂತವನಿಗೆ ಸಾಧುಕೃತ್ಯವನ್ನು ಎಸಗಿದ್ದ ಮಿತ್ರನಿಗೆ ಹೆಚ್ಚಾದ ಅನುಗ್ರಹವೂ, ದ್ವೇಷಿಗೆ ಹೆಚ್ಚಾದ ನಿಗ್ರಹವೂ ಸಾಧುವಾದುದೇವಿನಾ ಅತಿಪ್ರಸಜ್ಗವಾಗುವದಿಲ್ಲವೆಂದು ತೋರ್ಪಡಿಸಿದರು. ಆದರೆ ಈ ಪ್ರಪನ್ನನ ಮಿತ್ರನು ಪುಣ್ಯಕೃತ್ಯಗಳ ಅನುಗ್ರಹಫಲವನ್ನು ಈಶ್ವರಾನುಗ್ರಹರೂಪದಲ್ಲಿ ಹೊಂದುವವನೂ, ಪಾಪಕೃತ್ಯಗಳಿಕ್ಕಾಗಿ ನಿಗ್ರಹವನ್ನು ಹೊಂದುವವನೂ ಮುಮುಕ್ಷುವೋ? ಅಮುಮುಕ್ಷುವೋ? ಎಂಬ ಸಂದರ್ಭದಲ್ಲಿ ಅಮುಮುಕ್ಷು ವಿಷಯವೆಂದು ಅಪ್ಪಣೆಕೊಡಿಸಿದರು. ಹಾಗಾದರೆ ಪ್ರಪನ್ನನ ವಿಷಯದಲ್ಲಿ ಮಿತ್ರತೆಯಾಗಲಿ ದ್ವೇಷವಾಗಲಿ ಇಲ್ಲದೆ ಉದಾಸೀನರ ವಿಷಯದಲ್ಲಿ ಹೇಗೆ? ಎಂದರೆ, **ಆಗ್ಯೆಯಾಲ್ ಯಿರೇ** – ಆದುದರಿಂದ ಅಲ್ಲವೇ, **ಉದಾಸೀನರ್ ಪಕ್ಕಲ‘** ಮಿತ್ರನೂ ಅಲ್ಲದೆ, ಶತ್ರುವೂ ಅಲ್ಲದೆ ಪ್ರಪನ್ನನ ವಿಷಯದಲ್ಲಿ ಉದಾಸೀನರಾಗಿರುವವರ ವಿಷಯದಲ್ಲಿ, ಸುಕೃತ ದುಷ್ಕೃತಗಳೆರಡೂ, **ಸಂಕ್ರಮಿಕ್ಕ ಮೆನ್ನಾದೊಳಿಗಿರದು** – ಹೋಗಿ ಸೇರುತ್ತವೆಂದು ಹೇಳದೆ ಇರುವದು. ಪ್ರಪನ್ನನ

**ಇಸ್ಸುಕೃತ ದುಷ್ಕೃತ ಸಂಕ್ರಾನ್ತಿ ಶೊಲ್ಲುಗಿರ ಶ್ರುತಿಯಾಲೇ ಈಶ್ವರನುಕ್ಕು ಅತ್ಯರ್ಥಪ್ರಿಯನಾನ ಜ್ಞಾನಿಯ ವಿಷಯತ್ತಿಲ್ಪಣ್ಣಿನ ಉಪಚಾರಾಪಚಾರಙ್ಗಳಾಲ್ ವರುಮ್ ಪ್ರೀತಿಕೋಪಙ್ಗಳನುಡೈಯ ತೀವ್ರಶಮುತ್ತುಂ ಸೂಚಿತಮಾಯುತ್ತು.**

---

ಸ್ನೇಹಿತನಲ್ಲಿ ಅನುಗ್ರಹವನ್ನೂ ದ್ವೇಷಿಯಲ್ಲಿ ನಿಗ್ರಹವನ್ನೂ, ಈಶ್ವರನು ತೋರಿಸುವದಕ್ಕೆ ಕಾರಣವುಂಟು; ಏನೆಂದರೆ ಮಹಾಭಾಗವತನಾದ ಈ ಪ್ರಪನ್ನನಿಗೆ ಸ್ನೇಹಿತನು ಉಪಚಾರವನ್ನೆಸಗಿರುವದೂ, ದ್ವೇಷಿಯು ಅಹಿತವಾದ ಅಪಚಾರವನ್ನು ಮಾಡಿರುವದೂ, ಕಾರಣಗಳು. ಉದಾಸೀನರಲ್ಲಿ ಈ ಪುಣ್ಯಾಪಾಪಗಳ ಸಂಕ್ರಮಣಕ್ಕೆ ಕಾರಣವೇ ಇಲ್ಲವಾದುದರಿಂದ ಅವರ ವಿಷಯಗಳಲ್ಲಿ ಏನನ್ನೂ ಹೇಳಲಿಲ್ಲವು ಎಂಬ ತಾತ್ಪರ್ಯವು. ಪ್ರಪನ್ನನ ಮಿತ್ರದ್ವೇಷಿಗಳಲ್ಲಿ ಸುಕೃತ ದುಷ್ಕೃತಗಳ ಸಂಕ್ರಮಣಗಳು ಸಕಾರಣಗಳಾಗಿ ಯುಕ್ತವಾದುವೇ ಎಂದು ನಿರ್ಧರಿಸಿ ಹೇಳಿದರು.

ಮುಂದೆ ಸಂಕ್ರಮಣವೆಂಬ ಶಬ್ದಕ್ಕೆ ಸರಿಯಾದ ಅರ್ಥವನ್ನು ತಿಳಿಸುತ್ತಾರೆ. **ಸಂಕ್ರಮಣ**ವೆಂದರೆ ಪ್ರಪನ್ನನನ್ನು ಬಿಟ್ಟು ಆತನ ಸುಕೃತ ದುಷ್ಕೃತಗಳು, ಮಿತ್ರದ್ವೇಷಿಗಳನ್ನು ಹೋಗಿ ಸೇರುವದು ಎಂದರೆ ಯಾವುದೋ ಒಂದು ದ್ರವ್ಯವು ಪ್ರಪನ್ನನನ್ನು ಬಿಟ್ಟು ಇತರರನ್ನು ಸೇರುತ್ತದೆ ಎಂಬ ಅರ್ಥವಲ್ಲವು. ಸಂಕ್ರಮಣ ಶಬ್ದಕ್ಕೆ ಇಲ್ಲಿ ಮುಖ್ಯಾರ್ಥ ಹೇಳಕೂಡದು. ಔಪಚಾರಿಕಾರ್ಥವನ್ನು ಹೇಳತಕ್ಕದ್ದು. ಏಕೆಂದರೆ **ಫಲಸಾರೂಪ್ಯಮಾತ್ರತ್ತಾಲೇ** - ಪ್ರಪನ್ನನಿಗೆ ಯಾವ ಫಲವನ್ನು ಆ ಸುಕೃತ ದುಷ್ಕೃತಗಳಿಗೆ ಕೊಡತಕ್ಕದ್ದೋ ಅದಕ್ಕೆ ಸಮಾನಫಲವೇ ಶತ್ರುಮಿತ್ರಗಳಲ್ಲಿ ಭಗವತ್ಸಙ್ಕಲ್ಪದಿಂದುಂಟಾಗುವದರಿಂದ; ಆದುದರಿಂದ ಸ್ವಾಮಿಗೆ ವೈಷಮ್ಯನೈರ್ಘೃಣ್ಯ ಹೇಳಲಾಗುವದಿಲ್ಲವು. ಆದುದರಿಂದ ಈ **"ಸುಹೃದ ಸ್ಸಾಧುಕೃತ್ಯಾಂ ದ್ವಿಷನ್ತಃ ಪಾಪಕೃತ್ಯಾಂ"** ಎಂಬ ಶ್ರುತಿಯಿಂದ ತೋರುವ ಮಹತ್ತಾದ ಅರ್ಥವೇನೆಂದರೆ ತಿಳಿಸುತ್ತಾರೆ.—

**ಇಸ್ಸುಕೃತ ದುಷ್ಕೃತ ಸಂಕ್ರಾಂತಿ ಶೊಲ್ಲುಗಿರ ಶ್ರುತಿಯಾಲೇ** - ಮೇಲೆ ಉದಾಹರಿಸಿರುವ, **"ಸುಹೃದಸ್ಸಾಧುಕೃತ್ಯಾಂ"** ಎಂದು ಸುಕೃತ ದುಷ್ಕೃತಗಳು ಪ್ರಪನ್ನನ ಮಿತ್ರ ಶತ್ರುಗಳನ್ನು ಹೋಗಿ ಸೇರುತ್ತವೆಂದು ಹೇಳುವ ಶ್ರುತಿಯಿಂದ, ಏನು ಸೂಚಿಸಲ್ಪಡುತ್ತದೆಂಬುದನ್ನು ತಿಳಿಸುತ್ತಾರೆ:- ಈಶ್ವರನಿಗೆ **ಅತ್ಯರ್ಥಪ್ರಿಯನಾನ** - ಇಷ್ಟೆಂದು ಹೇಳಲು ಸಾಧ್ಯವಿಲ್ಲದಷ್ಟು ಪ್ರಿಯನಾಗಿರುವ, **ಜ್ಞಾನಿ ವಿಷಯತ್ತಿಲ್** - ಭಕ್ತಿಪ್ರಪತ್ತಿಗಳಾದ ಎರಡು ಉಪಾಯಗಳಲ್ಲಿ ಒಂದನ್ನು ಅನುಷ್ಠಿಸಿರುವ ಪ್ರಾಜ್ಞನ ವಿಷಯದಲ್ಲಿ, **ಪಣ್ಣಿನ** - ಮಾಡಿದ, **ಉಪಚಾರಾಪಚಾರಙ್ಗಳಾಲ್** - ಮಿತ್ರನು ಅನುಷ್ಠಿಸಿದ ಉಪಚಾರವೇನು, ಶತ್ರುವಾಗಿ ಮಾಡಿದ ಅಪ

ಚಾರವೇನು, ಇವುಗಳಿಂದ, **ವರುಮ್** - ಉಂಟಾಗುವ, **ಪ್ರೀತಿಕೋಪಂಗಳಿನುಡೈಯ** - ಈಶ್ವರನ ಪ್ರೀತಿ ಮತ್ತು ಕೋಪಗಳ, **ತೀವ್ರತಮತ್ವಂ** - ಅತ್ಯಂತ ಹೆಚ್ಚಾಗಿರುವ ಭಾವವು, **ಸೂಚಿತಮಾಯ್‌ತ್ತು** - ಸೂಚಿಸಲ್ಪಟ್ಟಿತು. ಆದುದರಿಂದಲೇ ಅಪಚಾರಗಳಲ್ಲಿ ತುಂಬಾ ತೀವ್ರತಮವಾದುದು, ತುಂಬಾ ಕ್ರೂರವಾದುದು ಭಾಗವತಾಪಚಾರವೆಂದೂ, **"ತ್ರಸ್ಯಬ್ರಹ್ಮವಿದಾಗಸಃ"** ಎಂದೂ ಶ್ರೀ **"ವಿಷ್ಣೋರ್ನನಮಾನಸಾತ್ ಗುರುತರಂ ಶ್ರೀವೈಷ್ಣವೋಲ್ಲಂಘನಮ್"** ಎಂದೂ ಉಪದೇಶಿಸಲ್ಪಟ್ಟಿರುತ್ತದೆ.—ಪರಮ ಭಾಗವತರಾದ ಜಡಭರತರನ್ನು ತನ್ನ ಆಂದೋಳನವನ್ನು ಹೊರುವದಕ್ಕಾಗಿ ತನ್ನ ಕಡೆಯವರು ನೇಮಿಸಿದುದರಿಂದ ಭಾಗವತಾಪಚಾರ ಬಂತೇ ಎಂದು ದೇಹಕಂಪನದಿಂದ ರಹೋಗಣನೆಂಬರಾಜನು ಹೇಳುತ್ತಾನೇನೆಂದರೆ—**"ನಾಹಂವಿಶಂಕೇ ಸುರರಾಜವಜ್ರಾತ್ ನತ್ರ್ಯಕ್ಷಶೂಲಾತ್ ನಯಮಸ್ಯಪಾಶಾತ್ । ನಾಗ್ನ್ಯರ್ಕಸೋಮಾನಿಲ ವಿತ್ತಪಾಸ್ತ್ರಾತ್ ಶಂಕೇಭೃಶಂ ಬ್ರಹ್ಮಕುಲಾವಮಾನಾತ್"** ಇಂದ್ರನ ವಜ್ರಾಯುಧಕ್ಕಾಗಲಿ ರುದ್ರನ ಶೂಲಕ್ಕಾಗಲಿ ಯಮನ ಪಾಶಕ್ಕಾಗಲಿ ಅಗ್ನಿ ಸೂರ್ಯ ಚಂದ್ರ ವಾಯು ಕುಬೇರರ ಅಸ್ತ್ರಕ್ಕಾಗಲಿ ನಾನು ಭಯಪಡುವನಲ್ಲವು. ಬ್ರಹ್ಮಕುಲಕ್ಕೆ ಎಲ್ಲಿ ಅವಮಾನಮಾಡಿದೆನೋ ಎಂಬ ಶಙ್ಕಾ ನನ್ನನ್ನು ಬಾಧಿಸುತ್ತದೆಂದು ರಾಜನು ಹೇಳಿರುತ್ತಾನೆ. ಹಾಗೆಯೇ ಪ್ರಪನ್ನರ ಮಿತ್ರರಲ್ಲೂ ಸರ್ವೇಶ್ವರನಿಗೆ ವಿಶೇಷ ಪ್ರೀತಿಯು. ಇದನ್ನು ಮಹರ್ಷಿಯು ರಾಮಾಯಣದಲ್ಲಿ ಬಹು ನಿಪುಣತರವಾಗಿ ಉಪಪಾದಿಸಿರುತ್ತಾರೆ. ಯಾವಾಗ ವಿಭೀಷಣನು ತನ್ನ ಭ್ರಾತಾವಿನಿಂದ ಅವಮಾನಿತನಾದನೋ,ಆಗಶ್ರೀರಾಮನನ್ನು ಆಶ್ರಯಿಸುವದಕ್ಕಾಗಿ ಹೊರಟನೋ, ಆಗ ಆತನೊಂದಿಗೆ ಭಕ್ತರಾದ ನಾಲ್ಕು ಅನುಚರರೂ ಜೊತೆಯಲ್ಲೇ ಹೊರಟುಬಂದರು. ಶ್ರೀರಾಮಗೋಷ್ಠಿಯಲ್ಲಿ ವಿಭೀಷಣನು ಯೋಗ್ಯನೇ ? ಸೇರಿಸಿಕೊಳ್ಳಬಹುದೇ ? ಎಂಬ ಚರ್ಚೆಯು ನಡೆಯಿತೇ ವಿನಾ, ಈ ನಾಲ್ಕುಜನರ ವಿಷಯದಲ್ಲಿ ಚರ್ಚೆಯೇ ಉಂಟಾಗಲಿಲ್ಲ. ಶ್ರೀರಾಮಚಂದ್ರನು ತನ್ನ ಸಙ್ಕಲ್ಪವನ್ನು **"ದತ್ತ ಮಸ್ಯಾಭಯಂ"** ಎಂದು ಹೇಳಿ **ಆನಯೈನಂ**– ಕರೆದುಕೊಂಡು ಬಾ ಎಂದು ಸುಗ್ರೀವನಿಗೆ ಆಜ್ಞಾಪಿಸಿದನೋ, ಒಡನೆ ವಿಭೀಷಣನು **"ಖಾತ್ಪಪಾತಾವನೀಂ ಹೃಷ್ಟೋಭಕ್ತೈರನುಚರೈಸ್ಸಹ । ಸ ತು ರಾಮಸ್ಯಧರ್ಮಾತ್ಮಾನಿಪಪಾತ ವಿಭೀಷಣಃ । ಪಾದಯೋಶ್ಶರಣಾನ್ವೇಷೀ ಚತುರ್ಭಿಸಹರಾಕ್ಷಸೈಃ,** ತನ್ನ ನಾಲ್ಕು ಜನ ಅನುಚರರಾಗಿ ಉಪಚಾರಗಳನ್ನೆಸಗಿದ ನಾಲ್ಕುಜನರೊಂದಿಗೆ ಶ್ರೀರಾಮಚಂದ್ರನ ಪಾದಕಮಲಕ್ಕೆರಗಿದನೆಂದು ಹೇಳಿರುವದರಿಂದ ವಿಭೀಷಣನು ಗ್ರಾಹ್ಯನಾದುದರಿಂದ, ಈ ನಾಲ್ಕು ಜನರೂ ಪರಮಗ್ರಾಹ್ಯರಾದರೆಂದು ಹೇಳಲ್ಪಟ್ಟಿರುತ್ತದೆ.

## ಸರ್ವಪಾಪೇಭ್ಯಃ ಇತಿಪ್ರಯೋಗೇ ಸರ್ವಶಬ್ದಾರ್ಥವಾಹ

**"ಸುದುಷ್ಕರೇಣಶೋಚೇದ್ಯಃ" ಎನ್ಗಿರ ಶ್ಲೋಕತ್ತಿಲ್ ಚೊನ್ನ ಯೋಜನೈಯಿಲ್ ಸರ್ವಪಾಪೇಭ್ಯಃ ಎನ್ಗಿರದು ಅಧಿಕಾರಿಯುಡೈಯ ಅಪೇಕ್ಷೈಕ್ಕೇಡಾಗ ಪ್ರಾಪ್ತಿ ವಿರೋಧಿಗಳ್ಳೈಯುಮ್ ಉಪಾಯವಿರೋಧಿಗಳ್ಳೈಯುಮ್ ಪ್ರತಿಕೂಲಾನು ಭವಹೇತುಕ್ಕಳೈಯುಮ್, ಸಙ್ಗ್ರಹಿಕ್ಕಿರದು. ಇಙ್ಗು ಪ್ರಾಪ್ತಿವಿರೋಧಿಯಾ ವದು? ಸಾಪರಾಧನಾನ ಇವನ್ ನಮ್ಮೈ ಅನುಭವಿಕ್ಕಕಡವನಲ್ಲನ್ ಎಙ್ಗಿರ**

---

ಈ ನಾಲ್ಕು ಜನರ ವಿಷಯದಲ್ಲಿ ಕೃಪಾನಿಧಿಯ ಅನುಗ್ರಹವು ಅಷ್ಟು ನಿರತಿಶಯ ವಾದುದೆಂಬ ಭಾವವು.

## ಸರ್ವಪಾಪೇಭ್ಯಃ ಎಂಬಲ್ಲಿರುವ ಸರ್ವಶಬ್ದಾರ್ಥವನ್ನು ಹೇಳುತ್ತಾರೆ

**ಸುದುಷ್ಕರೇಣಶೋಚೇದ್ಯಃ** - ಎಂಬ ಚರಮಶ್ಲೋಕ ಸಙ್ಗ್ರಹಾರ್ಥವನ್ನು ಹಿಂದೆ ಶ್ರೀನಿಗಮಾನ್ತ ದೇಶಿಕರವರು ಅನುಗ್ರಹಿಸಿದುದು, ಯಾವು ಯಾವುದಕ್ಕಾಗಿ ಯಾವನು **ಸುದುಷ್ಕರೇಣ** - ತುಂಬಾ ಕಷ್ಟದಿಂದ ಶೋಕಿಸುತ್ತಾನೋ ಎಂದು ಸುದುಷ್ಕರ ಶಬ್ದವನ್ನು ಉಪಯೋಗಿಸಿದ್ದರು. ಅದಕ್ಕೆ ವ್ಯಾಖ್ಯಾನವಾಗಿ ಇಲ್ಲಿ ಹೇಳುತ್ತಾರೆ; ಎಂಬ **ಶ್ಲೋಕತ್ತಿಲ್ ಚೊನ್ನ ಯೋಜನೆಯಿಂದ** - ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟ ಯೋಜನೆಯಲ್ಲಿ, **ಸರ್ವಪಾಪೇಭ್ಯಃ ಎನ್ಗಿರದು** - ಎಂಬುದು, **ಅಧಿಕಾರಿಯುಡೈಯ ಅಪೇಕ್ಷೈಕ್ಕೇಡಾಗ**-ಅಧಿಕಾರಿಯ ಅಪೇಕ್ಷೆಗೆ ಅನುಗುಣವಾಗಿರುವ, **ಪ್ರಾಪ್ತಿವಿರೋಧಿಗಳುಮ್** - ಮೋಕ್ಷಪ್ರಾಪ್ತಿಗೆ ವಿರೋಧವಾಗಿರುವ ಪಾಪಗಳೂ, **ಉಪಾಯವಿರೋಧಿಗಳುಮ್** - ಉಪಾಯಾನುಷ್ಠಾನಕ್ಕೆ ವಿರೋಧಗಳಾದ ಪಾಪಗಳೂ, ಮತ್ತು **ಪ್ರತಿಕೂಲಾನುಭವಹೇತುಕ್ಕಳೈಯುಮ್**- ದುಃಖಾನುಭವಕ್ಕೆ ಕಾರಣಗಳಾದ ಪ್ರಾರಬ್ಧಕರ್ಮಗಳೂ, **ಸಙ್ಗ್ರಹಿಕ್ಕಿರದು** - ಇವನ್ನೆಲ್ಲಾ ಒಟ್ಟು ಸೇರಿಸಿ ಸರ್ವಶಬ್ದದಿಂದ ಹೇಳಲ್ಪಡುತ್ತದೆ. ಮೂರುವಿಧ ಪಾಪಗಳೂ ಸಙ್ಗ್ರಹಿಸಿ ಹೇಳಲ್ಪಟ್ಟವೆಂದು ತಿಳಿಸಿದರು. ಆ ಮೂರೂ ಯಾವುವೆಂಬುದನ್ನು ವಿಶದೀಕರಿಸುತ್ತಾರೆ.— **ಇಙ್ಗು** - ಈ ಸರ್ವಪಾಪೇಭ್ಯಃ ಎಂಬ ಪ್ರಯೋಗದಲ್ಲಿ, **ಪ್ರಾಪ್ತಿವಿರೋಧಿ ಪಾಪಗಳು ಯಾವುವು? ಸಾಪರಾಧನಾನ ಇವನ್**-ಅಪರಾಧಯುಕ್ತನಾದಈ ಮೋಕ್ಷಾರ್ಥಿಯು, **ನಮ್ಮೈ** - ಸರ್ವೇಶ್ವರನಾದ ನನ್ನನ್ನು, **ಅನುಭವಿಕ್ಕಕ್ಕಡವನಲ್ಲನ್** - ಸೇರಿ ಅನುಭವಿಸುವ ಯೋಗ್ಯತೆಯಿಲ್ಲದವನು, **ಎಙ್ಗಿರ ಸಙ್ಕಲ್ಪವು** - ಎಂಬ ಭಗವತ್ಸಙ್ಕಲ್ಪರೂಪವಾದುದು. ಹಿಂದೆ ಪಾಪವು ಏನು ಮಾಡುತ್ತದೆ ಎಂದರೆ ಭಗವಂತನಲ್ಲಿ ನಿಗ್ರಹ ಸಙ್ಕಲ್ಪವನ್ನುಂಟುಮಾಡುವಂತಾದ್ದೆಂದು ಹೇಳಿರುವ

**ಭಗವತ್ಸಙ್ಕಲ್ಪಮ್. ಉಪಾಯ ವಿರೋಧಿಯಾವುದು ? ನಮ್ಮೈ ಇವನ್ ತೆಳಿನ್ದು ವಶೀಕರಿಕ್ಕಕ್ಕಡವನಲ್ಲ ವೆಙ್ಗರ ಸಙ್ಕಲ್ಪಮ್. ಪ್ರತಿಕೂಲಾನುಭವ ಹೇತುವಾವುದು ? ಅವ್ವೋ ಪ್ರತಿಕೂಲಾನುಷ್ಠಾನಙ್ಗಳಾಲೇ ವನ್ದ ಅವ್ವೋ ಫಲಪ್ರದಾನ ಸಙ್ಕಲ್ಪಮ್.**

---

ದರಿಂದ ತವನುಗುಣವಾಗಿ ನಿಗ್ರಹಸಙ್ಕಲ್ಪವೆಂದೇ ವ್ಯಾಖ್ಯಾನಮಾಡಿ ಪ್ರಾಪ್ತಿ ವಿರೋಧಿಪಾಪವಾದುದರಿಂದ, ಸರ್ವೇಶ್ವರನೊಂದಿಗೆ ನಿತ್ಯವಿಭೂತಿಯನ್ನು ಸೇರಿ ಆತ ನನ್ನು ಅನುಭವಿಸಲು ಯೋಗ್ಯತೆ ಇಲ್ಲದವನೆಂಬ ಸಂಕಲ್ಪವೆಂಬ ವ್ಯಾಖ್ಯಾನವು. **ಉಪಾಯವಿರೋಧಿಯಾವುದು ?** – ಉಪಾಯಕ್ಕೆ ವಿರೋಧಿಪಾಪವೆಂದರೆ ಯಾವುದು ? **ನಮ್ಮೈ**-ನನ್ನನ್ನು, **ತೆಳಿನ್ದು** – ಸಿದ್ಧೋಪಾಯನಾದ ಪರಮ ಸುಹೃತ್ತಾದ ಮಾರ್ಗದರ್ಶಿ ಎಂದು ತಿಳಿದು, **ವಶೀಕರಿಕ್ಕಕ್ಕಡವನಲ್ಲ** – **ತಸ್ಯ ಚ ವಶೀಕರಣಾಂ ತಚ್ಛರಣಾಗತಿರೇವ** ಎಂದು ತಿಳಿದು ಶರಣಾಗತಿಯ ಮೂಲಕ ನಮ್ಮನ್ನು ವಶಮಾಡಿಕೊಳ್ಳುವ ಯೋಗ್ಯತೆ ಇಲ್ಲದವನು. ತಾನೇ ಕೃಪಾಳುವಾದ ಉದಾರಿಯು, ಅಘಟಿತಘಟನಾಶಕ್ತಿಯುಳ್ಳವನು, ಪಾಪಗಳನ್ನೆಲ್ಲಾ ಹೋಗಲಾಡಿಸುವನು ಇತ್ಯಾದಿ ವಿಶ್ವಾಸಗಳಿಲ್ಲದವನಾಗಿರುವನು ಎಂಬ ಸರ್ವೇಶ್ವರನ ಸಙ್ಕಲ್ಪವು. **ಪ್ರತಿಕೂಲಾನುಭವಹೇತುವಾವುದು ?** – ಪ್ರತಿಕೂಲಾನುಭವವು, ಪುನಸ್ಸಂಸಾರವು ; ಅಂತಹ ಅನುಭವಕ್ಕೆ ಕಾರಣವಾದ ಪಾಪವು ಯಾವುದು ? **ಅವ್ವೋ ಪ್ರತಿಕೂಲಾನುಷ್ಠಾನಙ್ಗಳಾಲೇ** - ಆಯಾ ಬಂಧಕಗಳನ್ನುಂಟುಮಾಡುವ ಪ್ರವೃತ್ತಿಗಳಿಂದ, **ಅವ್ವೋ ಫಲಪ್ರದಾನ ಸಙ್ಕಲ್ಪಮ್** - ಆಯಾ ಫಲಗಳನ್ನುಂಟುಮಾಡುವ ಭಗವತ್ಸಙ್ಕಲ್ಪರೂಪವಾದುದು.

ಇಲ್ಲಿ **ಸುದುಷ್ಕರೇಣ ಶೋಚೇದ್ಯಃ** – ಎಂಬ ಶ್ಲೋಕವು **"ಚತುರ್ವಿಧಾ ಭಜನ್ತೇ ಮಾಂ"** ಎಂಬಲ್ಲಿ ಹೇಳಿರುವ **ಆರ್ತ, ಅರ್ಥಾರ್ಥೀ ಜಿಜ್ಞಾಸು ಜ್ಞಾನೀ** ಎಂಬ ನಾಲ್ಕು ಜನರೂ ಮಾಡುವ ಶರಣಾಗತಿಗೆ ಅನ್ವಯಿಸುವದರಿಂದ, **ಯೇನಯೇನೇಷ್ಟಹೇತುನಾ** ಎಂಬಲ್ಲಿ ಚತುರ್ವಿಧ ಪುರುಷಾರ್ಥಗಳಿಗೂ, ಐಹಿಕ ಸ್ವರ್ಗ, ಕೈವಲ್ಯ, ಮೋಕ್ಷಪ್ರಾಪ್ತಿಗಳಿಗೂ ಅನ್ವಯಿಸುವಹಾಗೆ, ಪ್ರಾಪ್ತಿವಿರೋಧಿ ಉಪಾಯವಿರೋಧಿ, ಪ್ರತಿಕೂಲಾನುಭವಹೇತು ಇತರ ಪುರುಷಾರ್ಥಗಳಿಗೂ ಅನ್ವಯಿಸತಕ್ಕದ್ದೆಂಬುದು ಸ್ವಾಮಿದೇಶಿಕವರ್ಯರ ಅಭಿಪ್ರಾಯವು. **ಅಧಿಕಾರಿಯುಡೈಯ ಈಡಾಗ** ವೆಂದು ಹೇಳಿರುವದರಲ್ಲಿ ಈ ನಾಲ್ಕುವಿಧ ಅಧಿಕಾರಿಗಳನ್ನೂ ಮನಸ್ಸಿನಲ್ಲಿಟ್ಟು ಹೇಳಿರುತ್ತಾರೆ.

ಹೀಗೆ ಸರ್ವಪಾಪಗಳಿಂದಲೂ ಬಿಡುಗಡೆಯು ಶರಣಾಗತಿಯಿಂದುಂಟಾಗುತ್ತದೆಂದು ಹೇಳಿದರು. ಅದರಿಂದ ಸರ್ವನಿಗ್ರಹ ನಿವೃತ್ತಿಸಙ್ಕಲ್ಪ ಉಂಟಾಗುವದರಿಂದ

**ಮುಮುಕ್ಷು ವೈಪತ್ತ ಸರ್ವನಿಗ್ರಹಙ್ಗಳುಮ್ ನಿವೃತ್ತಙ್ಗಳಾನಾಲ್, ನಿಗ್ರಹಕಾರ್ಯಙ್ಗಳಾನ ಅಚಿತ್ಸಂಬಂಧಾದಿಗಳ್ ನಿಗ್ರಹನಿವೃತ್ತಿರೂಪ ಪ್ರಸಾದತ್ತಾಲೇ ನಿವೃತ್ತಙ್ಗಳಾಮ್. ಪಿನ್ಬು ಕಾರಣಾಭಾವತ್ತಾಲೇ ಕಾರ್ಯಮಾನ ಪ್ರತಿಕೂಲಙ್ಗಳೊನ್ರುಮ್ ವಾರಾದು.**

**ಇದು "ಅನಾವೃತ್ತಿಶ್ಶಬ್ದಾತ್" ಎಙ್ಗರಸೂತ್ರತ್ತಿಲೇ ವಿವಕ್ಷಿತಮ್. ಇನ್ದ**

---

ಪ್ರಾಪ್ತವಾಗುವ ಅಮೋಘಫಲವೇನೆಂಬುದನ್ನು ತಿಳಿಸುತ್ತಾರೆ—**ಮುಮುಕ್ಷು ವೈಪ್ಪತ್ತ** - ಮೋಕ್ಷಾರ್ಥಿಯನ್ನು ಕುರಿತ, **ಸರ್ವನಿಗ್ರಹಙ್ಗಳುಮ್** - ಸರ್ವೇಶ್ವರನ ಸಮಸ್ತ ನಿಗ್ರಹ ಸಙ್ಕಲ್ಪವೂ, **ನಿವೃತ್ತಙ್ಗಳಾನಾಲ್** - ನಿವರ್ತಿಸಿ ಹೋದರೆ, **ನಿಗ್ರಹಕಾರ್ಯಙ್ಗಳಾನ** - ಆ ನಿಗ್ರಹಸಙ್ಕಲ್ಪದಿಂದುಂಟಾದ **ಅಚಿತ್ಸಂಬಂಧಾದಿಗಳ್** - ದೇಹಪ್ರಾಪ್ತಿರೂಪ ಅಚಿತ್ಸಂಬಂಧಾದಿಗಳು, ಆದಿ ಶಬ್ದದಿಂದ ಅವಿದ್ಯಾಕರ್ಮವಾಸನಾರುಚಿ ಮೊದಲಾದವುಗಳು ಹೇಳಲ್ಪಟ್ಟವು, **ನಿಗ್ರಹನಿವೃತ್ತಿರೂಪ ಪ್ರಸಾದತ್ತಾಲೇ** - ನಿಗ್ರಹವು ತಪ್ಪಿ ಅನುಗ್ರಹರೂಪಪ್ರಸನ್ನತೆಯಿಂದ, **ನಿವೃತ್ತಙ್ಗಳಾಮ್** - ಅರ್ಚಿರಾದಿಮಾರ್ಗ ದೊರೆತು ವಿರಜಾವಗಾಹನದಿಂದ ಆ ಅಚಿತ್ಸಂಬಂಧಾದಿಗಳು ಸಂಪೂರ್ಣವಾಗಿ ಕಳೆದುಹೋಗುತ್ತವೆ ಎಂಬ ಭಾವವು. ಸಂಸಾರದಲ್ಲೇ ಬಿದ್ದಿರುವದಕ್ಕೆ ಕಾರಣ ಭಗವನ್ನಿಗ್ರಹಸಙ್ಕಲ್ಪವು. ಆ ನಿಗ್ರಹ ಸಙ್ಕಲ್ಪವು ಹೋಗಿ ಯಾವಾಗ ಅನುಗ್ರಹ ಸಙ್ಕಲ್ಪವುಂಟಾಯಿತೋ, ಆಗ ಕಾರಣವೇ ಇಲ್ಲವಾದುದರಿಂದ ದೇಹಪ್ರಾಪ್ತಿಯಿಂದುಂಟಾಗುವ ಕಾರ್ಯವೂ ಇಲ್ಲವಾಗುತ್ತದೆಂದು ಮುಂದೆ ಹೇಳುತ್ತಾರೆ. **ಪಿನ್ಬು** - ಅನಂತರ, **ಕಾರಣಾಭಾವತ್ತಾಲೇ** - ಕಾರಣವೇ ಇಲ್ಲದುದರಿಂದ, **ಕಾರ್ಯಮಾನ** - ಅದರ ಕಾರ್ಯವಾದ **ಪ್ರತಿಕೂಲಙ್ಗಳೊನ್ರುಮ್** - ಪ್ರತಿಕೂಲಗಳಾದ ಪುನಸ್ಸಂಸಾರಪ್ರಾಪ್ತಿ ತನ್ಮೂಲಕ ದುಃಖಮೊದಲಾದವು ಯಾವುವೂ, **ವಾರಾದು** - ಬರುವುದಿಲ್ಲವು. ಪರಬ್ರಹ್ಮಪ್ರಾಪ್ತಿಯುಂಟಾದನಂತರ ಪುನಃಸಂಸಾರಪ್ರಾಪ್ತಿಯಿಲ್ಲವೆಂಬ ಭಾವವು.

**ಇದು** - ಕಾರಣವಾದ **ಅಚಿತ್ಸಂಬಂಧವು** ಈ ಪ್ರಪನ್ನನಿಗೆ ಯಾವಾಗ ತೊಲಗಿತೋ ಆಗ ಅದರ ಕಾರ್ಯವಾದ ಯಾವ ಪ್ರತಿಕೂಲಗಳು ಉಂಟಾಗುವದಿಲ್ಲವೆಂಬುದು, **"ಅನಾವೃತ್ತಿಶಬ್ದಾತ್"** ಎನ್ನುವ ಸೂತ್ರದಲ್ಲಿ, **ವಿವಕ್ಷಿತಮ್** - ಹೇಳಲ್ಪಟ್ಟಿರುತ್ತದೆ; ಯಾರಿಂದವೆಂದರೆ ಪ್ರಾಜ್ಞರಾದ ವ್ಯಾಸಮಹರ್ಷಿಯಿಂದ. ಈ ಸೂತ್ರಾರ್ಥವೇನೆಂದರೆ—ನಿತ್ಯವಿಭೂತಿಯನ್ನು ಹೋಗಿ ಸೇರಿ ಪರಿಪೂರ್ಣ ಬ್ರಹ್ಮಾನಂದವನ್ನು ಹೊಂದಿದವನಿಗೆ ಪುನಃ ಲೀಲಾವಿಭೂತಿಗೆ ಬಂದು ಸಂಸಾರಬಂಧವನ್ನು ಹೊಂದುವ ಇಷ್ಟವಿಲ್ಲವು. ಆಗಲಿ, ಜೀವಾತ್ಮನು ಪರಮಾತ್ಮನಿಗೆ ಅಧೀನನು ಶೇಷಭೂತನು, ನಿಯಾಮಕನು, ಸತ್ತಾಸ್ಥಿತಿಗಳೂ ಆತನಿಂದಲೇ, ಹೀಗೆ ಅನೇಕ ಪ್ರಮಾಣ

ಗಳು ಹೇಳುತ್ತವೆ **"ಯತೋವಾ ಇಮಾನಿಭೂತಾನಿ ಜಾಯನ್ತೇ" "ಅಂತರೋ ಯಮಯತಿ"** ಇತ್ಯಾದಿಗಳು. ಹೀಗಿದ್ದರೂ ಅನೇಕ ಪ್ರಮಾಣಗಳಿಂದ ಆತನು ಪ್ರಪನ್ನನಿಗೆ ಮುಕ್ತಿಯನ್ನು ಕೊಟ್ಟನಂತರ ಪುನಃ ಸಂಸಾರಬಂಧವನ್ನು ಹೊಂದುವದಕ್ಕಾಗಿ ಇಲ್ಲಿಗೆ ಹಿಂತಿರುಗಿ ಕಳುಹಿಸುವದಿಲ್ಲವು. ಅಂತಹ ಪ್ರಮಾಣಗಳು ಯಾವುವು ? ಎಂದರೆ **"ಏತೇನ ಪ್ರತಿಪದ್ಯಮಾನಾಃ ಇಮಾಂ ಮಾನವಂ ಆವರ್ತಂ ನಾವರ್ತನ್ತೇ"** (ಛಾಂ. ೪. ೧. ೬) **"ಸಖಲ್ವೇವಂ ವರ್ತಯನ್ ಯಾವದಾಯುಷಂ ಬ್ರಹ್ಮಲೋಕಂ ಅಭಿಸಂಪದ್ಯತೇ ನಚಪುನರಾವರ್ತತೇ"** (ಛಾಂ. ೮. ೧೫. ೧) **"ಮಾಮುಪೇತ್ಯಶು ಪುನರ್ಜನ್ಮದುಃಖಾಲಯ ಮಶಾಶ್ವತಮ್ ನಾಪ್ನುವನ್ತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ** (ಗೀ. ೮. ೧೫. ೧೬) **"ಇದಂ ಜ್ಞಾನ ಮುಪಾಶ್ರಿತ್ಯ ಮಮಸಾಧರ್ಮ್ಯ ಮಾಗತಾಃ। ಸರ್ಗೇಪಿನೋಪಜಾಯನ್ತೇಪ್ರಳಯೇ ನವ್ಯಥನ್ತಿಚ"** (ಗೀ.೧೪.೨) ಇತ್ಯಾದಿ. ಹೀಗೆ **ಶಬ್ದಾತ್** - ವೇದಪ್ರಮಾಣಗಳಿಂದಲೂ ಅವುಗಳ ಉಪಬ್ರಹ್ಮಣದಿಂದಲೂ ಪುನರಾವೃತ್ತಿಯಿಲ್ಲವು. ಏಕೆಂದರೆ ಸರ್ವೇಶ್ವರನು, ಅತ್ಯರ್ಥಪ್ರಿಯನು ಬಂದು ಸೇರುವನೇ ಎಂದು ಕಾದಿದ್ದು ಬರಮಾಡಿಕೊಂಡು ಆತನನ್ನು ದುಃಖಾನುಭವಕ್ಕೆ ಈ ಹೇಯ ಜಗತ್ತಿಗೆ ಎಂದಿಗಾದರೂ ಕಳುಹಿಸುವನೇ ? ಅಥವಾ ಈ ಚೇತನನು ದುಃಖಗಂಧವೇ ಇಲ್ಲದ ಶಾಶ್ವತಪರಿಪೂರ್ಣಬ್ರಹ್ಮಾನುಭವವನ್ನು ಅನುಭವಿಸಿದನಂತರ ಇಲ್ಲಿನ **"ಸಂಸಾರಸಾಗರಂ ಘೋರಂ ಅನಂತಕ್ಲೇಶಭಾಜನಮ್** ಎಂಬಲ್ಲಿ ಹೇಳಿರುವ ಈ ಘೋರ ಕ್ಲೇಶಾನುಭವಗಳನ್ನು ಅನುಭವಿಸಲು ಒಪ್ಪಿ ಬರುವನೇ ? ಎರಡೂ ಇಲ್ಲವು. ಆದುದರಿಂದ **ಅನಾವೃತ್ತಿಶಬ್ದಾತ್** ಎಂದು ಹೇಳಲ್ಪಟ್ಟಿತು. ಆದರೆ ಇಂತಹ ಕ್ಲೇಶಾನುಭವಗಳಿಲ್ಲದ ಹಾಗೆ ಮಾಡಿ, ಸ್ವಾಮಿ ಪರವಾಸುದೇವನು ಕೆಲವು ನಿತ್ಯಮುಕ್ತರುಗಳನ್ನು ಇಲ್ಲಿನ ಅಮೋಘ ಕೆಲಸಗಳಿಗಾಗಿ ನಿಯಮಿಸಿ ಕಳುಹಿಸಬಹುದು. ಇದನ್ನು ಗ್ರಹಿಸಬಹುದಾದ ಒಂದು ಇತಿಹಾಸವು ರಾಮಾಯಣದಲ್ಲಿದೆ. ಅನೇಕ ಪ್ರಪನ್ನರು ರಾಮಾವತಾರ ಸಮಾಪ್ತಿ ಕಾಲದಲ್ಲಿ ಶ್ರೀರಾಮನೊಂದಿಗೆ ಸರಯೂ ನದಿಯಲ್ಲಿ ಪ್ರವೇಶಮಾಡಿದರು ವಿಭೀಷಣನು ತಾನೂ ಜೊತೆಯಲ್ಲಿ ಬರಲು ಅನುಮತಿಯನ್ನು ಪ್ರಾರ್ಥಿಸಿದನು. ಅದಕ್ಕೆ ಪ್ರಭುರಾಮಚಂದ್ರನು ಹೇಳುತ್ತಾನೇನೆಂದರೆ ? **"ಶಾಸಿತಸ್ತಂ ಸಖಿತ್ವೇನ ಕಾರ್ಯಂ ತೇ ಮಮ ಶಾಸನಮ್ । ಪ್ರಜಾಸ್ಸಂರಕ್ಷಧರ್ಮೇಣ ನೋತ್ತರಂ ವಕ್ತುಮರ್ಹಸಿ"** ಅಧರ್ಮಿಗಳಾದ ರಾಕ್ಷಸರಲ್ಲಿ ಧರ್ಮ ವನ್ನುಂಟುಮಾಡುವಹಾಗೆ ನೀನೂ ಧರ್ಮದಿಂದ ಪರಿಪಾಲನೆ ಮಾಡು. ನಿನ್ನಿಂದ ಈ ಕೆಲಸ ಆಗತಕ್ಕದ್ದಾಗಿ ನಾನು ಆಜ್ಞಾಪಿಸಿರುವೆನು. ನಿನ್ನ ಮನೋಗತಿಯು ನನ್ನನ್ನು ಹಿಂಬಾಲಿಸಿ ಬರಬೇ

**ನಿಷ್ಕರ್ಷಙ್ಗಳೆಲ್ಲಾಮ್ ಭಾಷ್ಯತ್ತಿಲೇ ಸತ್ಸಂಪ್ರದಾಯತ್ತೋಡೇ ಕೂಡ ಚಿರಪರಿಶ್ರಮಮುಮ್ ಪಣ್ಣಿನ ಮಹಾಪ್ರಾಜ್ಞರುಕ್ಕು ನಿಲಮಾಯಿರುಕ್ಕುಮ್.**

---

ಕೆಂಬುದು ತಿಳಿಯುವದು. ಆದರೂ ನಿನ್ನಿಂದ ಮಹತ್ತಾದ ಕೆಲಸ ನಡೆಯಬೇಕಾಗಿರುವದರಿಂದ **ನೋತ್ತರಂಪಕ್ಕುಮರ್ಹಸಿ** ಇದಕ್ಕೆ ಬದಲು ಹೇಳಬೇಡ ಎಂದು **ಹೇಳಿರುತ್ತಾರೆ.** ಆದುದರಿಂದ ಮಹತ್ತಾದ ಕೆಲಸಗಳನ್ನು ಇಲ್ಲಿ ನಡೆಸುವದಕ್ಕಾಗಿ ಪರವಾಸುದೇವನು ನಿತ್ಯರನ್ನೂ ಮುಕ್ತರನ್ನೂ ಇಲ್ಲಿಗೆ ಕಳುಹಿಸಿಕೊಡಬಹುದು ಎಂಬುದು ಇದರಿಂದ ಸೂಚಿತವು.

**ಇನ್ದ ನಿಷ್ಕರ್ಷಙ್ಗಳೆಲ್ಲಾ** - ಹೀಗೆ ನಿರ್ಧರಿಸಿ ಹೇಳಿದ ಅಭಿಪ್ರಾಯಗಳೆಲ್ಲಾ **ಭಾಷ್ಯತ್ತಿಲೇ** - ಶ್ರೀ ಯತಿವರ್ಯರು ವ್ಯಾಸಸೂತ್ರಗಳಿಗೆ ಅನುಗ್ರಹಿಸಿರುವ ಶ್ರೀ ಭಾಷ್ಯವೆಂಬ ವ್ಯಾಖ್ಯಾನದಲ್ಲಿ, **ಸತ್ಸಂಪ್ರದಾಯತ್ತೋಡೆ** - ಅವರು ಏರ್ಪಡಿಸಿದ ನಾಲ್ಕು ಭಾಷ್ಯಾಧಿಕಾರಿಗಳಾದ ಅವರ ಶಿಷ್ಯರ ಮೂಲಕ ಮತ್ತು ಅವರನ್ನು ಗುರುಗಳನ್ನಾಗಿ ಆಶ್ರಯಿಸಿ ತಿಳಿದ, ಹೀಗೆ ಸತ್ಸಂಪ್ರದಾಯವಾಗಿ ಬಂದ **ಚಿರಪರಿಶ್ರಮಂ ಪಣ್ಣಿನ** - ಬಹುಕಾಲ ಶ್ರೀ ಭಾಷ್ಯಾದಿಗ್ರಂಥಗಳನ್ನು ವ್ಯಾಸಂಗಮಾಡಿ ವಿವೇಕಿಸಿ ತಿಳಿದ, **ಮಹಾಪ್ರಾಜ್ಞರುಗಳಿಗೆ - ನಿಲಮಾಯಿರುಕ್ಕುಮ್** - ಸ್ಥಿರವಾಗಿರುವುವು. ಭಾಷ್ಯಾದಿಗಳಲ್ಲಿ ಪರಿಶ್ರಮ ಹೊಂದಬೇಕಾದರೆ ಅಲ್ಪಕಾಲ ಸಾಲದು. ಪುನಃ ಪುನಃ ವಿಮರ್ಶಿಸಿ ತಿಳಿಯತಕ್ಕದ್ದಾಗಿರುತ್ತದೆ. ಶ್ರೀ ದೇಶಿಕರವರೇ ಎಲ್ಲಾದರೂ ೩೦ ಸಲ ಆವರ್ತಿಸಿ ತಿಳಿದಿರುವದಾಗಿ ಹೇಳಿಕೊಂಡಿರುತ್ತಾರೆ.

ಶ್ರೀ ಭಾಷ್ಯವನ್ನು ಆಚಾರ್ಯ ಮುಖೇನ ವ್ಯಾಸಂಗ ಮಾಡುವ ಸುಕೃತವು ಬಹು ಮಂದಿಗೆ ಇಲ್ಲವೇ ಎಂದು ಪರಿತಾಪಪಡಬೇಕಾಗಿದೆ.

## ಹೀಗೆ ಅನಿಷ್ಟ ನಿವೃತ್ತಿಮಾತ್ರ ಹೇಳಲ್ಪಟ್ಟಿತು. ಇಷ್ಟಪ್ರಾಪ್ತಿಯು ಹೇಳಲಿಲ್ಲವಲ್ಲಾ ಎಂದರೆ ಸಮಾಧಾನವು

---

**ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ** ಎಂಬುದರಿಂದ ಸಮಸ್ತ ಸುಕೃತ ದುಷ್ಕೃತಗಳೂ ಅನಿಷ್ಟವಾದವಾದುದರಿಂದ ಅವೆಲ್ಲವೂ ತೊಲಗುತ್ತವೆ ಎಂದು ಇಷ್ಟು ಮಾತ್ರವೇ ಹೇಳಲ್ಪಟ್ಟಿತೇ ವಿನಾ, ದಿವ್ಯವೈಕುಂಠಪ್ರಾಪ್ತಿ ಪರಿಪೂರ್ಣ ಬ್ರಹ್ಮಾನುಭವ, ಕೈಂಕರ್ಯಾದಿ ಇಷ್ಟಪ್ರಾಪ್ತಿಯು ಹೇಳಲಿಲ್ಲವಲ್ಲಾ, ಇದಕ್ಕೆ ಸಮಾಧಾನವೇನು? ಎಂದರೆ ತಿಳಿಸುತ್ತಾರೆ. **ತತ್ಪ್ರಸಾದಾತ್ ಪರಾಂ ಶಾನ್ತಿಂ** ಗೀ. ೧೮. ೬೨ ಎಂಬಲ್ಲಿ ಹೇಳಿರುವ ಹಾಗೆ ಅಪರಾಧಪರಿಹಾರವೇನೋ ನಿಪುಣತರವಾಗಿ ಹೇಳಲ್ಪಟ್ಟಿತು. **ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್**-ಎಂದು ಹೇಳಿರುವ ಹಾಗೂ, ಅಷ್ಟಾಕ್ಷರ ಮನ್ತ್ರದ್ವಯಮನ್ತ್ರಗಳಲ್ಲೂ ಹೇಳಿರುವ ಹಾಗೆ ಈ ಚರಮ ಶ್ಲೋಕವಲ್ಲೂ ಹೇಳ

**ಇತ್ಥಮನಿಷ್ಟ ನಿವೃತ್ತಿರುಕ್ತಾ ನತು ಇಷ್ಟಪ್ರಾಪ್ತಿರಿತ್ಯತ್ರಾಹ.**

---

**ಇಪ್ಪಡಿ "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎನ್ರು ಕಾರ್ಯಕಾರಣ ರೂಪ ಸಮಸ್ತ ಪ್ರತಿಬಂಧ ಪ್ರವಾಹ ನಿವೃತ್ತಿಯೈ ಚ್ಯೊಲ್ಲ, ಸ್ವತಃ ಪ್ರಾಪ್ತಮಾನ ಪರಿಪೂರ್ಣ ಭಗವದನುಭವಾವಿರ್ಭಾವಮು' ಶೊಲ್ಲಿ**

---

ಬೇಡವೇ ಎಂದಾಕ್ಷೇಪಣೆ ತಂದರೆ ಅದಕ್ಕೆ ಸಮಾಧಾನವನ್ನು ಮುಂದಿನ ವಾಕ್ಯ ದಿಂದ ತಿಳಿಸುತ್ತಾರೆ.—ಯಾವಾಗ ಸರ್ವಾಪರಾಧಗಳೂ, ಮುಕ್ತಿಗೆ ಬೇಕಾದ ಸರ್ವ ಪ್ರತಿಬಂಧಕಗಳೂ, ಇವುಗಳನ್ನು ಕಾರಣರೂಪದಲ್ಲಿದ್ದು ಕಾರ್ಯವಾಗಿ ಉಂಟುಮಾಡುವ ಹೇಯವಾದ ಅಚಿತ್ಸಂಬಂಧವೂ, ತೊಲಗಿದನಂತರ ಪರಿಪೂರ್ಣಬ್ರಹ್ಮಾನುಭವಾದಿಗಳು ಸ್ವತಃಪ್ರಾಪ್ತವಾದುವಾಗಿ ತತ್ಪ್ರಾಪ್ತಿಯನ್ನು ಹೇಳಿದಂತೆ ಆಯಿತು ಎನ್ನುತ್ತಾರೆ—

**ಇಪ್ಪಡಿ** - ಹೀಗೆ, ಹೇಗೆ ಎಂದರೆ ಅವರೇ ತಿಳಿಸುತ್ತಾರೆ:-**ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎನ್ರು**-ಎಂಬದಾಗಿ; **ಕಾರ್ಯಕಾರಣರೂಪ** ವಾದ, **ಸಮಸ್ತ ಪ್ರತಿಬಂಧ ಪ್ರವಾಹದ** -ನಿವೃತ್ತಿಯನ್ನು **ಚೊಲ್ಲ**-ಹೇಳಲಾಗಿ, **ಸ್ವತಃಪ್ರಾಪ್ತವಾದ ಪರಿಪೂರ್ಣ** ಭಗವದನುಭವದ, **ಆವಿರ್ಭಾವಮು'** - ಉಂಟಾಗೋಣವೂ ಸಹ ಅದರಿಂದ **ಶೊಲ್ಲಿತ್ತಾಯಿತ್ತು**-ಹೇಳಿದಂತೆ ಆಯಿತು. ಯಾವಾಗ ಹೇಯಶರೀರವೂ ಕೂಡ ನಿವೃತ್ತಿಸಿ ಹೋಯಿತೆಂಬುದು, ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎಂಬಲ್ಲಿ ಹೇಳಲ್ಪಟ್ಟಿತೋ, ಆಗ ಸ್ವತಃ ಭಗವತ್ಪ್ರಾಪ್ತಿಯನ್ನು ಆದರಿಂದಲೇ ಹೇಳಿದಂತಾಯಿತು ಎಂಬ ಭಾವವು. ಈ ಅಭಿಪ್ರಾಯವನ್ನು ಮುಂದೆ ಶೌನಕ ವಾಕ್ಯದಿಂದ ಸಮರ್ಥಿಸಿ ಹೇಳುತ್ತಾರೆ. ಈ ಶ್ಲೋಕಗಳು ಮೂಲಮನ್ತ್ರಾಧಿಕಾರದಲ್ಲಿ ಉದಾಹೃತಗಳು. ಇವುಗಳ ಅರ್ಥಕ್ಕೆ ೩೩೫೭ ನೆಯ ಪುಟವನ್ನು ನೋಡಿ. ಸತ್ಖ್ಯಾತಿವಾದವನ್ನು ಬಹು ನಿಪುಣತರವಾಗಿ ಉಪಪಾದಿಸುವುವು. ತಾತ್ಪರ್ಯವೇನೆಂದರೆ ರತ್ನದ ಮೇಲಿನ ಕೊಳೆಯನ್ನು ತೊಳೆಯುವದರಿಂದ ಮೊದಲಿದ್ದ ಪ್ರಕಾಶವೇ ಹೇಗೆ ಬೆಳಗುತ್ತದೋ ಹಾಗೆಯೇ ಆತ್ಮನ ಜ್ಞಾನವೂ ಕೂಡ ಪ್ರಕೃತಿಯಿಂದ ತಿರೋಹಿತವಾದುದು ಹೋಗಿ, ನೈಜಸ್ವರೂಪವು ಉಂಟಾಗಿ ಬೆಳಗುತ್ತದೆ. ಹಾಗೆಯೇ ಕೊಳಬಾವಿಗಳನ್ನು ತೋಡುವದರಿಂದ ಅಲ್ಲಿಯೇ ಮೊದಲೇ ಇದ್ದ ನೀರೂ ಆಕಾಶವೂ ಸಹ ತೋರಿ ಬರುತ್ತದೆ. ಇರುವದೇ ಯಾವಾಗಲೂ ತೋರಿಬರುತ್ತದೇ ವಿನಾ, ಇಲ್ಲದಿರುವದಕ್ಕೆ ಉತ್ಪತ್ತಿ ಎಂದಿಗೂ ಇಲ್ಲವು. ಹಾಗೆಯೇ ಜೀವಾತ್ಮನಿಗೆ ಪ್ರಾಪ್ತವಾಗಿದ್ದ ಪ್ರಕೃತಿ ಸಂಬಂಧವು ಯಾವಾಗ ಕಳೆಯಿತೋ, ಆತನ ಜ್ಞಾನ ಮೊದಲಾದ ಗುಣಗಳು ಮರೆಸಿ ಹೋಗಿದ್ದವು ತೋರಿಬರುತ್ತವೇ ವಿನಾ ಹೊಸದಾಗಿ ಹುಟ್ಟುವದಿಲ್ಲವು, **ಎನ್ರು** -

**ತ್ತಾಯಿತ್ತು. "ಯಥಾನ್ನಿ ನಕ್ರಿಯತೇ ಜ್ಯೋತಾ ಮಲಪ್ರಕ್ಷಳನಾನ್ಮಣೇಃ। ದೋಷಪ್ರಹಾಣಾನ್ನ ಜ್ಞಾನ ಮಾತ್ಮನಃ ಕ್ರಿಯತೇ ತಥಾ। ಯಥೋದಪಾನಕರಣಾತ್ ಕ್ರಿಯತೇ ನಜಲಾಂಬರಮ್। ಸದೇವ ನೀಯತೇ ವ್ಯಕ್ತಿಂ ಅಸತಃ ಸ್ಸಂಭವಃ ಕುತಃ। ತಥಾ ಹೇಯಗುಣಧ್ವಂಸಾತ್ ಅವಬೋಧಾದಯೋ ಗುಣಾಃ। ಪ್ರಕಾಶ್ಯನ್ತೇ ನಜನ್ಯನ್ತೇ ನಿತ್ಯಾ ಏವಾ ಆತ್ಮನೋ ಹಿ ತೇ" ಎನ್ರು ಶ್ರೀ ಶೌನಕ ಭಗವಾನ್ ಅರುಳಿಚ್ಚೆಯ್ದಾನ್. ಜ್ಞಾನದ್ರವ್ಯಮುಮ್ ಇದನುಡೈಯ ಸರ್ವವಿಷಯ ವಿಕಾಸತ್ತುಕ್ಕು ಸ್ವರೂಪಯೋಗ್ಯತಾರೂಪೈಯಾನ ಶಕ್ತಿಯುಮ್ ನಿತ್ಯಙ್ಗಳಾಗೈಯಾಲೇ ಯವ**

---

ಎಂಬದಾಗಿ, **ಶ್ರೀಶೌನಕ ಭಗವಾನ್** – ಪೂಜ್ಯರಾದ ಶೌನಕ ಭಾಗವತರು, **ಅರುಳಿಚ್ಚೆಯ್ದಾನ್** – ಕೃಪಯಾ ಅಪ್ಪಣೆಕೊಡಿಸಿರುತ್ತಾರೆ. ಯಾವಾಗ ಪ್ರಕೃತಿ ಸಂಬಂಧವು ತೊಲಗಿತೋ, ಆಗ ಅದರ ಕಾರ್ಯರೂಪಗಳಾದ ಅವಿದ್ಯಾಕರ್ಮಾದಿಗಳು ತೊಲಗಿದುದರಿಂದ, **"ಸಂಪದ್ಯಾವಿರ್ಭಾವ ಸ್ವೇನ ಶಬ್ದಾತ್"** ಎಂಬ ಸೂತ್ರದಲ್ಲೂ, **ಸ್ವೇನರೂಪೇಣಾಭಿನಿಷ್ಪದ್ಯತೇ** ಎಂದೂ ಶ್ರುತಿಯಲ್ಲೂ, ನಿತ್ಯವಾದ ಮೊದಲಿನ ಸ್ವರೂಪದ **ಆವಿರ್ಭಾವವು** ಉಂಟಾಗುತ್ತದೆ ಎಂದು ಹೇಳಲ್ಪಟ್ಟಿರುತ್ತದೆ. ಹಾಗೆ ಯಾವುವು ಆವಿರ್ಭವಿಸುತ್ತವೆ ಎಂದರೆ ಹೇಳುತ್ತಾರೆ.—

ಜೀವಾತ್ಮನು ಜ್ಞಾನ ಸ್ವರೂಪನೂ ಮತ್ತು ಜ್ಞಾನಗುಣಕನೂ, ಆದುದರಿಂದ ಆತನನ್ನು **ಜ್ಞಾನದ್ರವ್ಯಮುಮ್** ಎಂದು ಉದ್ದೇಶಿಸಿ ಹೇಳುತ್ತಾರೆ ಜ್ಞಾನದ್ರವ್ಯವೂ, ಮತ್ತು **ಇದನುಡೈಯ ಸರ್ವವಿಷಯ ವಿಕಾಸತ್ತುಕ್ಕು** – ಇದಕ್ಕೆ ಪ್ರಕೃತಿ ಸಂಬಂಧವು ತೊಲಗುವವರಿಂದ ಎಲ್ಲಾ ವಿಷಯದಲ್ಲೂ ವಿಕಾಸವನ್ನು ಹೊಂದುವದಕ್ಕೂ, ಪ್ರಕೃತಿ ಸಂಬಂಧವಿರುವತನಕ ಈ ಜ್ಞಾನಕ್ಕೆ ವಿಭುತ್ವವು ತೋರುತ್ತಿರಲಿಲ್ಲವು, ಯಾವಾಗ ಪ್ರಕೃತಿ ಸಂಬಂಧತೊಲಗಿತೋ, ಆಗ ಅದು ವಿಕಾಸ ಹೊಂದಿ, ಧರ್ಮಭೂತಜ್ಞಾನವೂ ವಿಕಾಸಹೊಂದಿತೆಂದು ಇಲ್ಲಿ ಹೇಳಲ್ಪಟ್ಟಿತು ; **ಸ್ವರೂಪಯೋಗ್ಯತಾರೂಪೈಯಾನ ಶಕ್ತಿಯುಮ್** - ಸಮಸ್ತ ವಿಷಯವನ್ನೂ ಏಕಕಾಲದಲ್ಲಿ ಗ್ರಹಿಸುವ ಶಕ್ತಿಯೂ, **ಸರ್ವವಿಷಯವಿಕಾಸಮ್** – ಎಂಬುದರಿಂದ ಈತನಿಗೆ ಆಗ ಉಂಟಾಗುವ ಸರ್ವಜ್ಞತ್ವ ಸತ್ಯಸಙ್ಕಲ್ಪತ್ವಾದಿಗಳು ಸಂಗ್ರಹೀತವು ; **ನಿತ್ಯಙ್ಗಳಾಗೈಯಾಲೇ** – ನಿತ್ಯಗಳಾಗಿ ಯಾವಾಗಲೂ ಇರುವುವಾದುದರಿಂದ, **ಅವತ್ತಿಲ್** - ಅವುಗಳನ್ನು ಹೇಳುವ ಸಂದರ್ಭದಲ್ಲಿ, **ಆವಿರ್ಭಾವಃ** ಎಂಬ ಶಬ್ದವು, **ಮುಖ್ಯಮ್** - ಮುಖ್ಯಾರ್ಥದಲ್ಲೇ ಉಪಯೋಗಿಸಲ್ಪಟ್ಟಿರುತ್ತದೆ. ಇಲ್ಲಿ ಆವಿರ್ಭಾವಃ ಎಂದರೆ ಹಿಂದೆ ಮರೆಸಿ ಹೋಗಿದ್ದದು ಪ್ರಕಾಶಿಸುತ್ತದೆ ಎಂಬರ್ಥವಾದುದರಿಂದ ಮುಖ್ಯಾರ್ಥವೇ, ಗೌಣ ಅಥವಾ ಔಪಚಾರಿಕಾರ್ಥದಲ್ಲಿ ಉಪಯೋಗಿಸ

**ತ್ತಿಲ' ಆವಿರ್ಭಾವ ಶಬ್ದಮ' ಮುಖ್ಯಮ'. ಸರ್ವವಿಷಯ ವಿಕಾಸಮುಮ' ದುಃಖನಿವೃತ್ತ್ಯಾದಿಗಳುಮ', ಸಂಕಲ್ಪಾದಿಗಳುಮ್, ಆಗಂತುಕಙ್ಗಳಾಯಿ ರುಕ್ಕ, ಇವೈ ನಿವೃತ್ತಪ್ರತಿಬಂಧ ಸ್ವರೂಪೋಪಾಧಿಙ್ಗಳಾಕೈಯಾಲೇ ಮೇಲ್ ಮುಳಕ್ಕನಡಕ್ಕುಮಪ್ಪಡಿ ತೋತ್ತುಗೈಕ್ಕಾಕ, ಇವತ್ತಿಲ' "ಆವಿಸ್ಯುರ್ಮಮ ಸಹಜ ಕೈಂಕರ್ಯವಿಧಯಃ" ಇತ್ಯಾದಿಗಳಾಲೇ "ಆವಿರ್ಭಾವ" ಶಬ್ದಮ'" ಪ್ರಯುಕ್ತಮಾಗಿರದು.**

---

ಸ್ಪಡಲಿಲ್ಲವೆಂಬ ಭಾವವು. **ಸಂಪದ್ಯಾವಿರ್ಭಾವಃ** ಎಂದೇ ಸೂತ್ರದಲ್ಲೂ ಪ್ರಯೋಗವು. **ಆವಿರ್ಭಾವ** ವೆಂದರೆ ಜ್ಞಾನದ **ತಿರೋಧಾನ ನಿವೃತ್ತಿಯೇ.**

ಆಗಲಿ, ಕೆಲವು ವಿಷಯಗಳು ಆಗಂತುಕಗಳಾಗಿ ಎಂದರೆ ಹೊಸದಾಗಿ ಉಂಟಾದವುಗಳು ಇವೆಯಲ್ಲಾ, ಆವಿರ್ಭಾವ ಶಬ್ದದ ಪ್ರಯೋಗವು ಔಪಚಾರಿಕ ವಲ್ಲವೋ ಎಂಬ ಆಕ್ಷೇಪಣೆಗೆ ಸಮಾಧಾನವನ್ನು ಹೇಳುತ್ತಾರೆ.—ಆಗಂತುಕಗಳು ಯಾವುವೆಂದರೆ ತಿಳಿಸುತ್ತಾರೆ—**ಸರ್ವವಿಷಯವಿಕಾಸಮುಮ'** – ಧರ್ಮಭೂತಜ್ಞಾನ ದ್ವಾರಾ ಸಮಸ್ತವನ್ನೂ ಅನುಕೂಲವಾಗಿ ವಿಷಯೀಕರಿಸುವದೂ, **ದುಃಖನಿವೃತ್ತ್ಯಾದಿಗಳುಮ'** – ದುಃಖದ ನಿವೃತ್ತಿ, ಮೊದಲಾದವುಗಳು, **ಸಂಕಲ್ಪಾದಿಗಳುಮ'** – ಪಿತೃಲೋಕ ಸಂಚಾರ ಮಾಡಬೇಕೆಂಬ ಸಂಕಲ್ಪಾದಿಗಳೂ **"ಸಙ್ಕಲ್ಪಾದೇವಾಸ್ಯ"** ಎಂದು ಹೇಳಲ್ಪಟ್ಟಿರುತ್ತದೆ, **ಕೈಙ್ಕರ್ಯಗಳೂ** – ಶ್ರಿಯಃಪತಿಗೆ ಪ್ರತ್ಯಕ್ಷವಾಗಿ ಮಾಡುವ ಸರ್ವವಿಧ ಕೈಙ್ಕರ್ಯಗಳೂ, **ಆಗಂತುಕಙ್ಕಳಾಯಿರುಕ್ಕ** - ಹಿಂದೆ ಯಿಲ್ಲದ ಈಗ ಹೊಸದಾಗಿ ಉಂಟಾಗಿರುವ, **ಇವೈ** – ಇವುಗಳೂ, **ನಿವೃತ್ತ ಪ್ರತಿಬಂಧಸ್ವರೂಪೋಪಾಧಿಕಙ್ಕಳಾಗೈಯಾಲೇ** – ಪ್ರತಿಬಂಧವು ನಿವರ್ತಿಸಿ ಹೋಗಿ ಹಿಂದೆ ಇದ್ದ ಸ್ವರೂಪಪ್ರಾಪ್ತಿಯಿಂದ, **ಮೇಲ' ಮುಳಕ್ಕ** - ಅನಂತರ ಯಾವಾಗಲೂ ಕಾಲಚಕ್ರವಿರುವವರೆಗೂ, **ನಡಕ್ಕುಮಪ್ಪಡಿ** – ನಿತ್ಯವಾಗಿ ನಡೆಯುತ್ತವೆ ಎಂಬದಾಗಿ, **ತೋತ್ತುಗೈಕ್ಕಾಗ** – ತೋರಿಬರುವದಕ್ಕಾಗಿ, **ಇವತ್ತಿಲ'** – ಇವುಗಳಲ್ಲಿ **"ಆವಿಸ್ಯುರ್ಮಮ ಸಹಜ ಕೈಂಕರ್ಯವಿಧಯಃ"** ಎಂದು (ಅಷ್ಟಶ್ಲೋ. ೩) ಶ್ರೀ ಪರಾಶರಭಟ್ಟರವರು, **ಇತ್ಯಾದಿಗಳಾಲೇ** - ಇವೇ ಮೊದಲಾದವುಗಳಲ್ಲಿ **ಆವಿರ್ಭಾವ** ಶಬ್ದವು, **ಪ್ರಯುಕ್ತಮಾಗಿರದು** – ಪ್ರಯೋಗಿಸಲ್ಪಟ್ಟಿರುತ್ತದೆ. ಶ್ರೀ ಪರಾಶರಭಟ್ಟರವರು ಶ್ರುತಿಸೂತ್ರಗಳಲ್ಲಿನ ಪ್ರಯೋಗವಾದ ಆವಿರ್ಭಾವ ಶಬ್ದವನ್ನನುಸರಿಸಿ **ಆವಿಸ್ಯುಃ** ಆವಿರ್ಭವಿಸಲಿ ಎಂದು ಪ್ರಾರ್ಥಿಸಿರುತ್ತಾರೆ. ಈ ಕೈಂಕರ್ಯಗಳು ನಿತ್ಯವಿಭೂತಿಯಲ್ಲಿ ಉಂಟಾಗಿರುವುವು **ಸಹಜ** ವಾದವೆಂದು ಹೇಳಿರುತ್ತಾರೆ. ಏಕೆಂದರೆ ಆತನು ಶೇಷಿಯು, ಸ್ವಾಮಿಯು ; ತಾವು ಶೇಷಭೂತರು ದಾಸರು. ಕಿಂಕರನಿಗೆ ಕೈಂಕರ್ಯವು ನಿತ್ಯವೂ ಸಹಜವಾದುದೇ. ಈ

**ಸ್ವರೂಪಯೋಗ್ಯತ್ವತ್ತಾಲೇ ಕರ್ಮೋಪಾಧಿಕಮಾನ ಬಹುವಿಧರೂಪ ಅನು ಕೂಲ್ಯಪ್ರಾತಿಕೂಲಙ್ಗಳ್ ನಡನ್ದ ಭಗವದ್ವಿಭೂತಿಯಾನ ವಸ್ತುಗಳುಕ್ಕು ಮೇಲೆಲ್ಲಾಮ್ ಮೋಕ್ಷದಶೈಯಿಲ್ ಆನುಕೂಲ್ಯಮೇ ಸ್ವರೂಪಪ್ರಾಪ್ತಿಮಾಗೈ**

---

ಅಮೋಘಾಭಿಪ್ರಾಯವನ್ನು ಲಕ್ಷ್ಮಣನು ತಿಳಿಸುತ್ತಾನೆ - ಹೇಗೆಂದರೆ **"ಕುರುಷ್ವಮಾ ಮನುಚರಂ ವೈಧರ್ಮ್ಯಂನೇಹ ವಿದ್ಯತೇ."** ಯಾವಾಗಲೂ ದಾಸಭೂತನಾದವನು ತನ್ನ ಸ್ವಾಮಿಗೆ ಮಾಡುವ ಕೈಂಕರ್ಯದಲ್ಲಿ ವೈಧರ್ಮ್ಯವೇನೂ ಇಲ್ಲವೆಂದು ಹೇಳಿದುದರಿಂದ, **ಸಹಜ** ವಾದುದು ಎಂಬ ತಾತ್ಪರ್ಯವು. ಪ್ರತಿಬಂಧಕಗಳು ತೊಲಗಿ ಮೊದಲಿದ್ದ ಸ್ವರೂಪಾವಿರ್ಭಾವವು ಯಾವಾಗ ಉಂಟಾಯಿತೋ, ಆಗ ಅದರಿಂದುಂಟಾದ ಕಾರ್ಯರೂಪವಾದವುಗಳನ್ನು **ಆವಿರ್ಭಾವ** ಶಬ್ದದಿಂದ ಪ್ರಯೋಗಿಸುವದೇನೂ ತಪ್ಪಲ್ಲವೆಂಬ ತಾತ್ಪರ್ಯವು. ಯದ್ಯಪಿ ಅವು ಆಗಂತುಕಗಳಾಗಿದ್ದರೂ, ಅವು ಆವಿರ್ಭವಿಸಿರುವದು ಏತರಿಂದ? ಎಂದರೆ **ನಿವೃತ್ತ ಪ್ರತಿಬಂಧ ಸ್ವರೋಪ್ಪೋಪಾಧಿಕಙ್ಗಳಾಗೈಯಾಲೇ** ಎಂದು ಹೇಳಿ, ಅನಂತರ ಅವು ಯಾವಾಗಲೂ ಸತ್ಯವಾಗಿರುತ್ತವೆಯಾದುದರಿಂದ **"ಆವಿಸ್ಯುಃ"** ಎಂದು ಅಭಿಯುಕ್ತರ ಪ್ರಯೋಗವು ಎಂದು ಹೇಳಿದರು. **ಆವಿಸ್ಯುಃ** ಎಂಬುದರ ಅರ್ಥವೇನೆಂದರೆ ಯಾವಾಗಲೂ ಮುಂದಕ್ಕೆ ಪ್ರಕಾಶಿಸುತ್ತಾ ಇರಲಿ ಎಂಬುದು. ಅವರು **ಆವಿಸ್ಯುಃ** ಎಂದು ಹೇಳಿದರೆ ವಿನಾ **ಉತ್ಪಾದ್ಯಂತಾಂ** ಎಂದು ಅಪ್ಪಣೆ ಕೊಡಲಿಲ್ಲವೆಂಬ ತಾತ್ಪರ್ಯವು.

ಈ ಲೀಲಾ ವಿಭೂತಿಯಲ್ಲಿ ಈ ಚೇತನನು ಇರುವತನಕ ಹೇಯ ಅಚಿತ್ಸಂಸರ್ಗವು ದೇಹರೂಪದಲ್ಲಿತ್ತು. ಆಗ ಈ ಚೇತನನಿಗೆ ಅದರಿಂದ ಅಲ್ಪಾನುಕೂಲವಾಗಿಯೂ ವಿಶೇಷ ಪ್ರತಿಕೂಲವಾಗಿಯೂ ಇತ್ತು. ಈಗ ಮುಕ್ತದೆಶೆಯಲ್ಲಿ ಪ್ರಾತಿಕೂಲ್ಯವೆಲ್ಲಾ ಕಳೆದು ಹೋಗಿ ಎಲ್ಲಾ ಅನುಕೂಲವಾಗಿ ತೋರುವದನ್ನು **ಆವಿರ್ಭಾವ** ಶಬ್ದದಿಂದ ಹೇಳಬಹುದೋ ಎಂಬ ಶಂಕಾದಲ್ಲಿ, ಹಾಗೆ ಹೇಳುವದರಲ್ಲೇನೂ ವಿರೋಧವಿಲ್ಲವೆಂದು ಹೇಳುತ್ತಾರೆ.— **ಸ್ವರೂಪಯೋಗ್ಯತ್ವತ್ತಾಲೇ** - ಈಗ ಮುಕ್ತದೆಶೆಯಲ್ಲಿ ಸೂಕ್ಷ್ಮಶರೀರವೂ ಕಳೆದು ಹೋಗಿ ಜ್ಞಾನಸ್ವರೂಪಪ್ರಕಾಶ ಉಂಟಾಗುವದರ ಮೂಲಕ ಸ್ವರೂಪಯೋಗ್ಯತೆಯುಂಟಾಗಿ, **ಕರ್ಮೋಪಾಧಿಯಿಂದ, ಬಹುವಿಧವಾದ ಆನುಕೂಲ್ಯಪ್ರಾತಿಕೂಲ್ಯಗಳು, ನಡನ್ದ** - ಉಂಟಾದ **ಭಗವದ್ವಿಭೂತಿಯಾನವಸ್ತುಗಳುಕ್ಕು** - ಭಗವಂತನ ಲೀಲಾವಿಭೂತಿಯ ವಸ್ತುಗಳಿಗೆ, **ಮೇಲೆಲ್ಲಾಮ್** - ಅನಂತರ ಎಲ್ಲವೂ, **ಮೋಕ್ಷದಶೆಯಲ್ಲಿ, ಆನುಕೂಲ್ಯಮೇ ಸ್ವರೂಪಪ್ರಾಪ್ತಮಾಗೈಯಾಲೇ**- ತನಗೆ ಈಗ ಬಂದಿರುವ ಪರಿಶುದ್ಧ ಪ್ರಕಾಶರೂಪಾವಸ್ಥೆಯಲ್ಲಿ ಉಂಟಾಗುವದರಿಂದ, **ಅದಿಲುಮ್** - ಆ ಲೀಲಾ

**ಯಾಲೇ, ಅದಿಲುಮ್‌ ಆವಿರ್ಭಾವ ಶಬ್ದತ್ತುಕ್ಕು ವಿರೋಧಮಿಲ್ಲೈ. ಆಗೈಯಾಲ್‌ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎನ್ರ ಇನ್ನನುಕೂಲಾವ ಸ್ಥಾಂತರಮ್‌ ಸಿದ್ಧಮಾಯಿತ್ತು.**

---

ವಿಭೂತಿಯ ಸರ್ವವಸ್ತುವಿನಲ್ಲೂ, **ಆವಿರ್ಭಾವ ಶಬ್ದತ್ತುಕ್ಕು** - ಆವಿರ್ಭಾವ ಶಬ್ದವನ್ನು ಉಪಯೋಗಿಸುವದರಲ್ಲಿ, ವಿರೋಧವೇನೋ ಇಲ್ಲವು. **ಆಗೈಯಾಲ್‌** - ಆದುದರಿಂದ "**ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ**" - **ಎನ್ರ** - ಎಂದು ಹೇಳುವದರಿಂದ, **ಇನ್ನನುಕೂಲಾವಸ್ಥೈಯುಮ್‌** - ಈ ಲೀಲಾವಿಭೂತಿಯೂ ಸರ್ವವೂ ಕೂಡ ಅನುಕೂಲವಾಗಿರುವ ಈ ನೂತನವಾದ ಅವಸ್ಥೆಯೂ, **ಸಿದ್ಧಮಾಯಿತ್ತು** - ಸಿದ್ಧವಾದುದಾಯಿತು. ಈ **ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ** ಎಂಬುದಕ್ಕೆ ಹಿಂದೆ ಹೇಳಿದ ಸರ್ವಾಪರಾಧ ನಿವೃತ್ತಿಯೂ, ಸ್ವಾಮಿಯ ನಿಗ್ರಹ ಸಙ್ಕಲ್ಪನಿವೃತ್ತಿಯೂ, ಅಚಿತ್ಸಂಸರ್ಗ ನಿವೃತ್ತಿಯೂ ಮೋಕ್ಷಾನಂದ ಪ್ರಾಪ್ತಿಯೂ ಹೇಗೆ ಬೋಧಿತವೋ ಹಾಗೆಯೇ ಲೀಲಾವಿಭೂತಿಯು ಸರ್ವವಸ್ತುಗಳ ಅನುಕೂಲ್ಯ ಪ್ರಾಪ್ತಿಯೂ ಅರ್ಥವಾಗಿ ತೋರುತ್ತದೆಂಬ ಭಾವವು.

ಈ ಸಂದರ್ಭದಲ್ಲಿ, ಮೂಲಮನ್ತ್ರದ್ವಯಗಳಲ್ಲಿ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಗಳೆರಡೂ ವ್ಯಕ್ತವಾಗಿ ಹೇಳಿ, ಈ ಚರಮಶ್ಲೋಕದಲ್ಲಿ ವ್ಯಕ್ತವಾಗಿಲ್ಲದೆ ಅರ್ಥವಾಗಿ ಗ್ರಹಿಸತಕ್ಕದ್ದೆಂದು ಒಂದು ಪೂರ್ವಪಕ್ಷವನ್ನುಪಪಾದಿಸಿ ಅದನ್ನು ಪರಿಹರಿಸುತ್ತಾರೆ. ಚರಮ ಶ್ಲೋಕದ ಹಿಂದಿನ ಶ್ಲೋಕವಾದ "**ಮನ್ಮನಾಭವ ಮದ್ಭಕ್ತೋ ಮದ್ಯಾಜೀ ಮಾಂನಮಸ್ಕುರು। ಮಾಮೇವೈಷ್ಯಸಿ ಸತ್ಯಂತೇ ಪ್ರತಿಜಾನೇಪ್ರಿಯೋಽಸಿಮೇ**" ಭಕ್ತಿಯೋಗವನ್ನೇ ಅನುಷ್ಠಿಸು ಎಂದು ಹೇಳಿ, ಈ ಶ್ಲೋಕದಲ್ಲಿ ತದಂಗವಾಗಿ ಶರಣಾಗತಿಯನ್ನು ಅನುಷ್ಠಿಸು ಎಂದು ಏಕಾಭಿಪ್ರಾಯವಾಗಿ ಉಪದೇಶಿಸಿದರು ಎಂದು ಏಕೆ ಗ್ರಹಿಸಕೂಡದು ? ಗೀತೆ ಎಲ್ಲವೂ ಭಕ್ತಿಯೋಗವನ್ನು ಕುರಿತದ್ದೇ ಎಂದೂ, ಶ್ರೀ ಯತಿವರ್ಯರ ವ್ಯಾಖ್ಯಾನವನ್ನು ಪರಿಶೀಲಿಸಿದರೆ ಹಾಗೆಯೇ ತೋರುತ್ತದೆಂದೂ, ಅವರ ಶರಣಾಗತಿಗದ್ಯದಲ್ಲಿ **ಪರಭಕ್ತಿ ಪರಜ್ಞಾನ ಪರಮಭಕ್ತಿಯುತಂ ಮಾಂಕುರುಷ್ವ** ಎಂದು ಹೇಳಿರುವದರಿಂದಲೂ ಶರಣಾಗತಿಗದ್ಯವು ಅಂಗಶರಣಾಗತಿವಿಷಯವೆಂದೂ ಅಭಿಪ್ರಾಯಪಡುವರು. ಈ ಅಭಿಪ್ರಾಯವನ್ನು ನಿರಾಕರಿಸುತ್ತಾರೆ.

**ಈ ಚರಮಶ್ಲೋಕವು ಭಕ್ತಿಯೋಗಕ್ಕೆ ಅಂಗಪ್ರಪತ್ತಿಬೋಧಕವೆಂದು ಏಕೆ ಹೇಳಕೂಡದೆಂಬ ಪಕ್ಷವನ್ನು ನಿರಾಕರಿಸುತ್ತಾರೆ.**

---

ಈ ಚರಮಶ್ಲೋಕದಲ್ಲಿ **ಸರ್ವಪಾಪೇಭ್ಯಃ** ಎಂಬುದರಿಂದ ಅನಿಷ್ಟನಿವೃತ್ತಿಯು

**ಚರಮ ಶ್ಲೋಕೋಯಂ ಅಂಗಪ್ರಪತ್ತಿವಿಧಾಯಕಃ ಕಿಂನಸ್ಯಾದಿತ್ಯತ್ರಾಹ.**

---

**ಏಕ ಶಬ್ದತ್ತುಕ್ಕು ಉಪಾಯ ಫಲೈಕ್ಯಮ್' ಪೊರುಳಾನಪೋದು, ಇಷ್ಟ ಪ್ರಾಪ್ತಿಯುಮ್ ಇ ಶ್ಲೋಕತ್ತಿಲೇ ಸುವ್ಯಕ್ತಮಾಗ ಚೊಲ್ಲಿತ್ತಾಮ್. ಆಗೈಯಾಲ್ "ಮಾಮೇವೈಷ್ಯಸಿ" ಎನ್ರು ಕೀಳಿಲ್ ಶ್ಲೋಕತ್ತಿಲೇ ವಿಶದಮಾಗ ಚೊನ್ನ ಅರ್ಥಮ್' ಇಙ್ಗು ಪ್ರಾಪ್ತಿವಿರೋಧಿಯೈಕ್ಕಳಿಕ್ಕೈಯಾಲುಮ್', ಏಕ ಶಬ್ದತ್ತಿಲ್ ವಿವಕ್ಷಾವಿಶೇಷತ್ತಾಲುಮ್ ಶೊಲ್ಲಿತ್ತಾಮ್. ಆನಪಿನ್ಬು ಇದು ಸಾಪೇಕ್ಷಮಾಯ್'ಕೊಂಡು ಕೀಳಿಲ್' ಶ್ಲೋಕತ್ತುಕ್ಕು ಶೇಷಮಾಗಿರದನ್ರು.**

---

ಸುವ್ಯಕ್ತವಾಗಿ ಯಾವಾಗ ಹೇಳಿತೋ ಆಗ ಇಷ್ಟಪ್ರಾಪ್ತಿಯೂ ಅರ್ಥವಾಗಿ ತೋರುತ್ತದೆ ಎಂದು ಹಿಂದೆ ಹೇಳಲ್ಪಟ್ಟಿತು. ಈಗ ಆ ಇಷ್ಟಪ್ರಾಪ್ತಿಯೂ ಈ ಶ್ಲೋಕದಲ್ಲಿ ಸುವ್ಯಕ್ತವೆಂದು ಹೇಳುತ್ತಾರೆ. ಹೇಗೆಂದರೆ **ಮಾಮೇಕಂ ಶರಣಂವ್ರಜ** ಎಂಬಲ್ಲಿರುವ **ಏಕ** ಶಬ್ದಪ್ರಯೋಗದಿಂದ ವ್ಯಕ್ತವೆನ್ನುತ್ತಾರೆ. **ಏಕಶಬ್ದತ್ತುಕ್ಕು** - ಪೂರ್ವಾರ್ಧದಲ್ಲಿರುವ ಏಕ ಶಬ್ದಕ್ಕೆ, **ಉಪಾಯ ಫಲೈಕ್ಯಮ್' ಪೊರುಳಾನಪೋದು** - ಪ್ರಪದನಾನುಷ್ಠಾನವಾದ ಉಪಾಯವಾದ ಫಲವಾಗಿ ಉಪೇಯವು, ಉಪಾಯೋಪಾಯಐಕ್ಯವು, ಅರ್ಥವಾದಾಗ, **ಇಷ್ಟಪ್ರಾಪ್ತಿಯುಮ್** - ಪ್ರಾಪ್ಯದ ಪ್ರಾಪ್ತಿರೂಪವಾದ ಇಷ್ಟಪ್ರಾಪ್ತಿಯೂ ಈ ಶ್ಲೋಕದಲ್ಲಿ, **ಸುವ್ಯಕ್ತಮಾಗ** - ಸ್ಪಷ್ಟವಾಗಿ, **ಶೊಲ್ಲಿತ್ತಾಮ್'** - ಹೇಳಿದಂತೇ ಆಗುತ್ತದೆ. **ಆಗೈಯಾಲ್** - ಆದುದರಿಂದ, **"ಮಾಮೇವೈಷ್ಯಸಿ" ಎನ್ರು ಕೀಳಿಲ್ ಶ್ಲೋಕತ್ತಿಲೇ** - **ಮಾಮೇವೈಷ್ಯಸಿ** ಎಂದು ಇಷ್ಟಪ್ರಾಪ್ತಿಯಾದ ಪರಬ್ರಹ್ಮಪ್ರಾಪ್ತಿಯನ್ನು ಹಿಂದಿನ ಶ್ಲೋಕದಲ್ಲಿ, **ವಿಶದಮಾಗಿ ಚೊನ್ನ** - ಹೇಳಿದ, **ಅರ್ಥಂ** - ಅಭಿಪ್ರಾಯವು, ಇಙ್ಗು ಈ ಚರಮಶ್ಲೋಕದಲ್ಲಿ, **ಪ್ರಾಪ್ತಿವಿರೋಧಿಯೈಕಳಿಕ್ಕೈಯಾಲುಮ್'** - ಪ್ರಾಪ್ತಿಗೆ ವಿರೋಧಿಯಾದ ಸರ್ವಪಾಪಗಳೂ ಕಳೆದುಹೋಗುವದರಿಂದಲೂ, **ಮಾಮೇಕಂ** ಎಂಬಲ್ಲಿರುವ, **ಏಕಶಬ್ದತ್ತಿಲ' ವಿವಕ್ಷಾವಿಶೇಷತ್ತಾಲುಮ್'** - ತಾನೊಬ್ಬನೇ, ಉಪಾಯವೂ ಉಪೇಯನೂ ತಾನೇ ಎಂದು ಹೇಳಬೇಕಾಗಿರುವದರಿಂದಲೂ, **ಶೊಲ್ಲಿತ್ತಾಮ್** - ವ್ಯಕ್ತವಾಗಿಯೇ ಇಷ್ಟಪ್ರಾಪ್ತಿಯೂ ಹೇಳಲ್ಪಟ್ಟಿದೆ ಎಂದೂ ಭಾವಿಸಬಹುದು. **ಆನಪಿನ್ಬು** - ಹೀಗಾದನಂತರ, ಹೇಗಾದನಂತರವೆಂದರೆ ಹಿಂದಿನ ಶ್ಲೋಕದಲ್ಲೂ ಭಕ್ತ್ಯುಪಾಯಕ್ಕೆ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಯನ್ನೂ, ಹಾಗೆಯೇ ಈ ಶ್ಲೋಕದಲ್ಲೂ ಹೇಳಿರುವ ಶರಣಾಗತಿರೂಪ ಉಪಾಯಕ್ಕು ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಯೂ ವ್ಯಕ್ತವಾಗಿಯೇ ಹೇಳಿರುವದರಿಂದ ಎರಡೂ ಬೇರೆ ಬೇರೆ ಉಪಾಯವಾದುದರಿಂದ, **ಇದು** - ಈ ಚರಮಶ್ಲೋಕವು, **ಸಾಪೇಕ್ಷಮಾಯ್'**

**ಕ್ಕೊಂಡು** – ಹಿಂದಿನ ಭಕ್ತ್ಯುಪಾಯ ಶ್ಲೋಕಕ್ಕೆ ಬೇಕಾದ ಅಂಗವಾಗಿ, **ಕೀಳಿಲ್ ಶ್ಲೋಕತ್ತುಕ್ಕು**–ಹಿಂದಿನ ಶ್ಲೋಕಕ್ಕೆ **ಶೇಷವಾಗಿರದು** – ಅಂಗವಾಗಿ ಸಂಬಂಧಿಸಿ ದುದು ಎಂಬ ಕೆಲವರ ಹೇಳಿಕೆಯು, **ಅನ್ರು** – ಸರಿಯಾದುದಲ್ಲವು. ಈ ಚರಮ ಶ್ಲೋಕವನ್ನು ಸ್ವತಂತ್ರವಾಗಿ ಅನ್ವಯಿಸದೆ, ಹಿಂದಿನ ಉಪಾಸನಾರೂಪೋಪಾ ಯಕ್ಕೆ ಸಂಬಂಧಿಸಿದುದೆಂದೂ ಆ ಭಕ್ತ್ಯುಪಾಯಕ್ಕೆ ಅಂಗವೆಂದೂ ಕೆಲವರು ಹೇಳು ವರು. ಅದು ಸರಿಯಾದ ಅಭಿಪ್ರಾಯವಲ್ಲವೆಂದು ನಿರಾಕರಿಸಿದರು. ಎರಡರಲ್ಲೂ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಯೂ ಹೇಳುವದರಿಂದ ಎರಡು ಅನುಷ್ಠಾನಗಳೂ ಉಪಾಯಗಳೇ. ಅರ್ಜುನನು ಮೊದಲಿನಿಂದಲೂ ಐಕಾನ್ತ್ಯ ಭಕ್ತ್ಯುಪಾಯದಲ್ಲಿ ತನಗೆ ಶಕ್ತಿಯಿಲ್ಲವೆಂದೂ, ಶರಣಾಗತಿಯು ಉಪಾಯವೇ ಅಲ್ಲದೆ, ಇದು ಒಂದೇ ಉಪಾಯವಾದರೆ ತನ್ನ ಪಾಪಗಳೆಲ್ಲಾ ಹೋಗುವ ಬಗೆ ಹೇಗೆ, ಪಾಪಗಳು ಕಳೆ ಯದೇ ಮುಕ್ತಿಯಿಲ್ಲವೇ ಎಂದು ಶೋಕಿಸುತ್ತಾನೆ. ಆಗ ಕೃಪಾಪಿಯೂ ಷಜಲ ಧಿಯು ನೀನು ಶೋಕಿಸಬೇಡ ಲಘೂಪಾಯವೂ ಉಂಟು. ಅದು ಶರಣಾಗತಿಯು ಎಂದು ಹೇಳಲು, ಶೋಕವನ್ನು ನೀಗಿ ಯುದ್ಧಕ್ಕಾಗಿ **"ನಷ್ಟೋಮೋಹಸ್ಸ್ಮೃತಿ ರ್ಲಬ್ಧಾ"** ಎಂದು ಹೇಳಿ, ಧನುಸ್ಸನ್ನು ತೆಗೆದುಕೊಳ್ಳುತ್ತಾನೆ. ಆದುದರಿಂದ ಶರಣಾಗತಿ ಗದ್ಯವೂ ಅಂಗಶರಣಾಗತಿಗದ್ಯವಿಷಯವಲ್ಲವು. ಶ್ರೀ ಭಾಷ್ಯಕಾರರು ಅನುಷ್ಠಿಸಿರುವದು ಶರಣಾಗತಿಗದ್ಯದಲ್ಲಿ ಹೇಳಿರುವದು ಅಂಗಿಶರಣಾಗತಿಯೇ. ಪರ ಭಕ್ತಿ ಪರಜ್ಞಾನ ಪರಮಾಭಕ್ತಿರೂಪ ಅವಸ್ಥೆಗಳು ನಮ್ಮಾಳ್ವಾರವರಿಗೆ ಉಂಟಾದ ಹಾಗೆ ಭರನ್ಯಾಸದಲ್ಲೂ ಉಂಟಾಗಬಹುದು. ಶ್ರೀ ಭಾಷ್ಯಕಾರರು ಅನುಷ್ಠಿಸಿದುದು ತಮ್ಮ ಆಚಾರ್ಯರಾದ ಯಾಮುನಮುನಿಗಳಹಾಗೆ ಸ್ವತಂತ್ರ ಪ್ರಪತ್ತಿಯೇ ವಿನಾ ಉಪಾಸನವಲ್ಲವು.

ಆಗಲಿ, ಸರ್ವಪಾಪಗಳ ನಿವೃತ್ತಿಯಿಂದ ಭಗವತ್ಪ್ರಾಪ್ತಿ ಸ್ವತಸ್ಸಿದ್ಧವೆಂದು ಹೇಳಿದರೆ, ಕೆಲವರಿಗೆ ಸ್ವಾತ್ಮಾನುಭವರೂಪ ಕೈವಲ್ಯ ಉಂಟಾಗುವದು ಹೇಗೆ? ಸರ್ವಪಾಪನಿವೃತ್ತಿಯಿಂದ ಕೈವಲ್ಯ ಭಗವತ್ಪ್ರಾಪ್ತಿ ಎರಡೂ ಉಂಟಾಗುತ್ತದೋ? ಎಂಬ ಶಂಕಾವನ್ನು ಅನುವದಿಸಿ ಸಮಾಧಾನವನ್ನು ಹೇಳುತ್ತಾರೆ—ಸಮಾಧಾನ ವನ್ನು ತುಂಬಾ ಉಪಪಾದನೆ ವಾದಗಳಿಂದ ಕೊನೆಯಲ್ಲಿ ಹೇಳುತ್ತಾರೇನೆಂದರೆ **"ಆಗೈಯಾಲ್ ಬ್ರಹ್ಮಪ್ರಾಪ್ತಿ ಇಲ್ಲಾದರ್ಕ್ಕು (ಕೇವಲರಿಗೆ ಎಂಬ ಭಾವವು) ಇ ಶ್ಲೋಕತ್ತಿಲ್ ಚೊಲ್ಲುಗಿರ ಸರ್ವಪಾಪನಿವೃತ್ತಿಯಿಲ್ಲೈ. ಸರ್ವಪಾಪನಿವೃತ್ತಿ ಯುಡೈಯಾರ್ಕ್ಕು ಬ್ರಹ್ಮಾನುಭವ ಸಂಕೋಚಮಿಲ್ಲೈ"** ಎಂಬದಾಗಿ ನಿಗಮನ ದಲ್ಲಿ ಹೇಳುವದರಿಂದ ಕೈವಲ್ಯಾನುಭವ ಮಾಡುವವರಿಗೆ ಸರ್ವಪಾಪನಿವೃತ್ತಿ ಹೇಳಲು ಸಾಧ್ಯವಿಲ್ಲವೆಂಬುದು ಅಭಿಪ್ರಾಯವು.

## ಕೈವಲ್ಯೇ ಸರ್ವಪಾಪ ನಿವೃತ್ತಿಸ್ತು ನಾಸ್ತೀತ್ಯಾಹ

**“ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ” ಎನ್ರು ಇವ್ವಳವಾಲ್ “ಮಾಮೇವೈಷ್ಯಸಿ” ಎನ್ರು ಶೊನ್ನ ಭಗವತ್ಪ್ರಾಪ್ತಿ ಸಿದ್ಧಿಕ್ಕುಮೋ? ಸರ್ವಪಾಪ ನಿವೃತ್ತಿಯುಂಡಾಯೇ ಭಗವತ್ಪ್ರಾಪ್ತಿ ಯನ್ರಿಕ್ಕೇ ಸ್ವಾತ್ಮ ಮಾತ್ರಾನುಭವರೂಪಮಾನ. ಕೈವಲ್ಯಮ್ ಪೆರುವಾರು ಮಿಲ್ಲೈಯೋ? ಭಗವತ್ಪ್ರಾಪ್ತಿಯಿಲ್ ಕಾಟ್ಟಿಲ್ ವೇರ್ಪಟ್ಟ ಕೈವಲ್ಯಮ್ “ಐಹಲೌಕಿಕ ಮೈಶ್ವರ್ಯಂ ಸ್ವರ್ಗಾದ್ಯಂ**

---

**ಕೈವಲ್ಯದಲ್ಲಾದರೋ ಸರ್ವಪಾಪನಿವೃತ್ತಿಯು ಇಲ್ಲವು. ಆದುದರಿಂದ ಭಗವತ್ಪ್ರಾಪ್ತಿ ಇಲ್ಲವು. ಬರೀ ಆತ್ಮಾನುಭವವೇ.**

---

ಮೊದಲು ಆತ್ಮಾನುಭವವೆಂದು ಕೈವಲ್ಯ ಶಬ್ದದಿಂದ ಹೇಳಲ್ಪಡುವಂತಾದ್ದು ಭಗವತ್ಪ್ರಾಪ್ತಿಗಿಂತ ಬೇರೆಯಾದುದು ಒಂದು ಅನುಭವ ಉಂಟೋ ಇಲ್ಲವೋ ಎಂದು ಚರ್ಚಿಸಿ, ಅಂತಾದೊಂದು ಅನುಭವ ಉಂಟೆಂದು ಸ್ಥಾಪಿಸುತ್ತಾರೆ.—ಶ್ರೀ ನಾರದ ಭಗವಾನರವರೂ, ಆಳವಂದಾರ್ರವರೂ, ಶ್ರೀ ಯತಿವರ್ಯರೂ ಗೀತಾ ಚಾರ್ಯನೂ, ವ್ಯಾಸಮಹರ್ಷಿ ಮೊದಲಾದವರೆಲ್ಲಾ ಭಗವತ್ಪ್ರಾಪ್ತಿಗಿಂತ ಬೇರೆಯಾಗಿ ಸಾತ್ಮಾನು ಭವರೂಪವಾದ ಒಂದು ಕೈವಲ್ಯವೆಂಬುವದು ಒಂದುಂಟೆಂದು ಸಪ್ರಮಾಣವಾಗಿ ಪ್ರಥಮತಃ ಸ್ಥಾಪಿಸುತ್ತಾರೆ.—

**“ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ” ಎನ್ರು** - ಎಂಬದಾಗಿ, **ಇವ್ವಳವಾಲ್** - ಇಷ್ಟು ಮಾತ್ರ ಉಕ್ತಿಯಿಂದ, **“ಮಾಮೇವೈಷ್ಯಸಿ” ಎನ್ರು** - ಎಂಬದಾಗಿ, **ಶೊನ್ನ** - ಹಿಂದಿನ ಶ್ಲೋಕದಲ್ಲಿ ಹೇಳಿದ, **ಭಗವತ್ಪ್ರಾಪ್ತಿಯು, ಸಿದ್ಧಿಕ್ಕುಮೋ?** - ಸಿದ್ಧಿಸುತ್ತದೆಯೋ? ಸರ್ವಪಾಪಗಳಿಂದಲೂ ಬಿಡುಗಡೆಯನ್ನು ಹೊಂದುವಿ ಇಷ್ಟು ಮಾತ್ರವೇ ಹೇಳಿರುವದರಿಂದ ಭಗವತ್ಪ್ರಾಪ್ತಿ ಸಿದ್ಧವೋ? ಎಂದು ಪ್ರಶ್ನಿಸುತ್ತಾರೆ. ಬೇರೆಯಾದ ಕೈವಲ್ಯಪ್ರಾಪ್ತಿಯು ಸಿದ್ಧಿಸಲಾರದೋ? ಎಂಬುದು ಪ್ರಶ್ನೆಯ ಆಶಯವು. ಅದನ್ನೇ ವ್ಯಕ್ತಪಡಿಸುತ್ತಾರೆ—**ಸರ್ವಪಾಪನಿವೃತ್ತಿಯುಂಡಾಯ್** - ಸರ್ವಪಾಪನಿವೃತ್ತಿಯುಂಟಾಗಿಯೂ, **ಭಗವತ್ಪ್ರಾಪ್ತಿಯನ್ರಿಕ್ಕೆ** - ಭಗವತ್ಪ್ರಾಪ್ತಿಯಲ್ಲದೆ, **ಸ್ವಾತ್ಮಮಾತ್ರಾನುಭವರೂಪಮಾನ ಕೈವಲ್ಯಂ** - ತನ್ನ ಸ್ವಂತ ಆತ್ಮಾನುಭವಮಾತ್ರರೂಪವಾಗಿ ಕೈವಲ್ಯವೆಂದು ಹೇಳಿಸಿಕೊಳ್ಳುವದನ್ನು, **ಪೆರುವಾರುಮ್ ಇಲ್ಲೈಯೋ ?** - ಹೊಂದುವರೂ ಇಲ್ಲೆಯೋ? ಸರ್ವಪಾಪನಿವೃತ್ತಿಯುಂಟಾಗಿದ್ದರೆ ಕೈವಲ್ಯಾನುಭವಕ್ಕೆ ಕಾರಣವಿಲ್ಲವೆಂಬ ಅಭಿಪ್ರಾಯದಿಂದ ಈ ಪ್ರಶ್ನೆಯು. ಹಾಗಾದರೆ ಕೈವಲ್ಯವೆಂಬ ಅನುಭವ ವುಂಟೋ? ಎಂದರೆ ಉಂಟು ಎಂದು ಮುಂದಿನ ವಾಕ್ಯಗಳಿಂದ ಸ್ಥಾಪಿಸುತ್ತಾರೆ—

**ಪಾರಲೌಕಿಕನುಮ್ । ಕೈವಲ್ಯಂಭಗವಂತಂ ಚ ಮನ್ತ್ರೋಽಯಂ ಸಾಧಯಿಷ್ಯತಿ" ಎನ್ರು ನಾರದಾದಿಗಳಾಲೇ ಶೊಲ್ಲಪ್ಪಟ್ಟದರೇ. ಆಳವಂದಾರುಮ್ (೧) "ಐಶ್ವರ್ಯಾಕ್ಷರ ಯಾಥಾತ್ಮ್ಯ ಭಗವಚ್ಚರಣಾರ್ಥಿನಾಮ್" ಎನ್ರುಮ್, "ಸಂಸೃತ್ಯಕ್ಷರ ವೈಷ್ಣವಾಧ್ವಸು" ಎನ್ರುಮ್ ಅರುಳಿಚ್ಚೆಯ್ದಾರ್.**

---

**ಐಹಲೌಕಿಕಮೈಶ್ವರ್ಯಂ** ಈ ಲೋಕದಲ್ಲಿ ಉಂಟಾಗುವ ಐಶ್ವರ್ಯವನ್ನೂ, **ಪಾರಲೌಕಿಕಂ** – ಬೇರೆ ಲೋಕದಲ್ಲುಂಟಾಗುವ, **ಸ್ವರ್ಗಾದ್ಯಮ್** – ಸ್ವರ್ಗಲೋಕವೇ ಮೊದಲಾದವನ್ನೂ, ಆದಿ ಶಬ್ದದಿಂದ ಅಗ್ನಿ, ಯಮ ವರುಣ ಕುಬೇರಾದಿ ಲೋಕಗಳ ಮತ್ತು ವಿಷ್ಣುಲೋಕಗಳು ಹೇಳಲ್ಪಟ್ಟವು, **ಕೈವಲ್ಯಂ**–ಕೈವಲ್ಯವನ್ನೂ, **ಭಗವಂತಂಚ** – ವೈಕುಂಠಲೋಕವನ್ನೂ, **ಮನ್ತ್ರೋಽಯಂ** – ಈ ಮನ್ತ್ರವು **ಸಾಧಯಿಷ್ಯತಿ** – ಸಾಧಿಸಿಕೊಡುತ್ತದೆ, **ಎನ್ರು** – ಎಂಬದಾಗಿ, ನಾರದರೇ ಮೊದಲಾದವರುಗಳಿಂದ, **ಶೊಲ್ಲಪ್ಪಟ್ಟದಿರೇ** – ಹೇಳಲ್ಪಟ್ಟಿರುತ್ತದೆಯಷ್ಟೇ ಈ ಪ್ರಮಾಣವನ್ನು ಉದಾಹರಿಸಿರುವದು ಕೈವಲ್ಯವೇ ಬೇರೆ, ವೈಕುಂಠಪ್ರಾಪ್ತಿಯೇ ಬೇರೆ, ಎರಡೂ ಒಂದೇ ಅಲ್ಲವು. ಆಳವಂದಾರ್ರವರು, ಅವರು ಅಪ್ಪಣೆಕೊಡಿಸಿರುವ ಗೀತೆಯ ೮ ನೆಯ ಅಧ್ಯಾಯದ ಸಙ್ಗ್ರಹ ಶ್ಲೋಕದಲ್ಲೂ "ಐಶ್ವರ್ಯ – ಈ ಶಬ್ದದಿಂದ ಆರ್ತನೂ ಅರ್ಥಾರ್ಥಿಯೂ ಅಪೇಕ್ಷಿಸುವ ಐಹಲೌಕಿಕ ಮತ್ತು ಪಾರಲೌಕಿಕ ಸ್ವರ್ಗಾದಿ ಹೇಳಲ್ಪಟ್ಟಿತು, **ಅಕ್ಷರಯಾಥಾತ್ಮ್ಯ** – ದಿಂದ ಜಿಜ್ಞಾಸುವು ಅಪೇಕ್ಷಿಸುವ ಕೈವಲ್ಯವನ್ನೂ, **ಭಗವಚ್ಚರಣಾರ್ಥಿನಾಂ** – ಜ್ಞಾನಿಯು ಅಪೇಕ್ಷಿಸುವ ಮೋಕ್ಷವೂ, **ಎನ್ರುಮ್** – ಎಂಬದಾಗಿಯೂ, ಹಾಗೆಯೇ ಆಳವಂದಾರ್ರವರು ಅವರು ಅನುಗ್ರಹಿಸಿರುವ ಚತುಶ್ಶ್ಲೋಕಿಯಲ್ಲೂ **"ಸಂಸೃತ್ಯಕ್ಷರ ವೈಷ್ಣವಾಧ್ವಸು"** – ಸಂಸೃತಿ ಎಂಬುದರಿಂದ ಆರ್ತನೂ ಅರ್ಥಾರ್ಥಿಗೂ ಉಂಟಾಗಿ ಪುನರ್ಜನ್ಮ, ಅಕ್ಷರ ಶಬ್ದದಿಂದ ಜಿಜ್ಞಾಸುವಿಗೆ ಉಂಟಾಗುವ ಕೈವಲ್ಯ, **ವೈಷ್ಣವಾಧ್ವಸು** - ಭಗವತ್ಪ್ರಪನ್ನನಾದ ಜ್ಞಾನಿಗೆ ಉಂಟಾಗುವ ಮುಕ್ತಿ, **ಎನ್ರು** – ಎಂಬದಾಗಿ **ಅರುಳಿಚ್ಚೆಯ್ದಾರ್** – ಕೃಪಯೂ ಅಪ್ಪಣೆ ಕೊಡಿಸಿರುತ್ತಾರೆ. ಕೆಲವರು ಹೇಳುವ ಹಾಗೆ ಕೈವಲ್ಯವೂ ಮುಕ್ತಿಯೂ ಒಂದೇ ಅಲ್ಲವು. ಎರಡೂ ಬೇರೆ ಬೇರೆ. ಮೊದಲನೆಯದು ಆತ್ಮಾನುಭವವು, ಎರಡನೆಯದು ಪರಿಪೂರ್ಣಬ್ರಹ್ಮಾನುಭವವೆಂಬ ಭಾವವು. ಅದಕ್ಕಾಗಿ ಪ್ರಮಾಣಗಳನ್ನು ಉದಾಹರಿಸಿದರು.

ಮುಂದೆ ಶ್ರೀ ಭಾಷ್ಯಕಾರರೂ ಹಾಗೆಯೇ ಅಪ್ಪಣೆ ಕೊಡಿಸಿರುತ್ತಾರೆಂದು ತಿಳಿಸುತ್ತಾರೆ. ಇದರಿಂದ ಸಾಂಪ್ರದಾಯಕವಾದ ಅಭಿಪ್ರಾಯವನ್ನು ತಿಳಿಸು

---

(೧) ನಾರದೀಯ

**ಗದ್ಯತ್ತಿಲುಮ್ "ಸರ್ವಕಾಮಾಂಶ್ಚಸಾಕ್ಷರಾನ್" ಎನ್ಗಿರವಾಕ್ಯಮ್ ಉಪಾತ್ತಮಾಯಿತ್ತು. ಶ್ರೀಗೀತಾ ಭಾಷ್ಯಾದಿಗಳಿಲುಮ್ ಇವ್ವರ್ಥಂ ಪ್ರಪಂಚಿತಮ್. ಆಗೈಯಾಲೇ "ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ" ಎನ್ಗಿರ ಸರ್ವಪಾಪ ನಿವೃತ್ತಿ ಕೈವಲ್ಯತ್ತುಕ್ಕುಮ್ ಭಗವತ್ಪ್ರಾಪ್ತಿಕ್ಕುಮ್ ಪೊದುವನ್ರೋ ವೆನ್ನೈ**

---

ತ್ತಾರೆ—**ಸರ್ವಕಾಮಾಂಶ್ಚ - ಸರ್ವಧರ್ಮಾಂಶ್ಚ ಸಂತ್ಯಜ್ಯ ಸರ್ವಕಾಮಾಂಶ್ಚ ಸಾಕ್ಷರಾನ್ ಲೋಕವಿಕ್ರಾನ್ತ ಚರಣೌ ಶರಣಂ ತೇಽವ್ರಜಂ ವಿಭೋ** ಎಂಬುದು ಪೂರ್ವಶ್ಲೋಕವು, **ಸರ್ವಧರ್ಮಾಂಶ್ಚ** - ಕರ್ಮಯೋಗಾದಿ ಸಹಕೃತ ಉಪಾಸನ ಮೊದಲಾದವುಗಳನ್ನು ಅಥವಾ ಪಾಪಪರಿಹಾರಕ್ಕಾಗಿ ವಿಧಿಸಿರುವ ವ್ರತಗಳನ್ನೂ, **ಸಂತ್ಯಜ್ಯ** - ಚನ್ನಾಗಿ ಬಿಟ್ಟು ಬಿಟ್ಟು ಇದರಿಂದ ಸಂಧ್ಯಾವಂದನಾದಿ ಆಜ್ಞಾ ಕೈಂಕರ್ಯಗಳನ್ನು ಬಿಟ್ಟು ಎಂಬರ್ಥವಲ್ಲವು, **ಸರ್ವಕಾಮಾಂಶ್ಚ** - ಸಮಸ್ತ ಅಶಾಶ್ವತ ಪುರುಷಾರ್ಥಗಳನ್ನು ಈಯುವ ಕಾಮ್ಯ ಕರ್ಮಗಳನ್ನೂ, ಐಹಿಕಸ್ವರ್ಗಾದಿ ಐಶ್ವರ್ಯ ಫಲಗಳನ್ನು ಕೊಡುವ ಕಾಮ್ಯ ಕರ್ಮಗಳನ್ನು, **ಸಾಕ್ಷರಾನ್** - ಆತ್ಮಾನುಭವರೂಪ ಕೈವಲ್ಯವನ್ನು ಕೊಡುವ ಕರ್ಮಗಳನ್ನೂ, **ಸಂತ್ಯಜ್ಯ** - ತ್ಯಜಿಸಿ, **ಹೇವಿಭೋ** - ಓ ಸರ್ವಸಮರ್ಥನಾದ, ಅಘಟಿತಘಟನಾಶಕ್ತಿಯುಳ್ಳ ಸ್ವಾಮಿಯೇ, **ತೇ** - ನಿನ್ನ **ಲೋಕವಿಕ್ರಾನ್ತ ಚರಣೌ** - ಲೋಕವನ್ನೆಲ್ಲಾ ವ್ಯಾಪಿಸಿ ಅಳೆದ ಚರಣ ದ್ವಂದ ವನ್ನು, **ಶರಣಂ** - ಉಪಾಯವನ್ನಾಗಿ, **ಅವ್ರಜಂ** - ಹೊಂದಿರುವೆನು. **ಎನ್ಗಿರ ವಾಕ್ಯಮ್** - ಎನ್ನುವ ವಾಕ್ಯವು, **ಉಪಾತ್ತಮಾಯಿತ್ತು** - ಅಂಗೀಕರಿಸಲ್ಪಟ್ಟಿತು. ಇವರೂ ಕೈವಲ್ಯವನ್ನು ತ್ಯಾಜ್ಯವರ್ಗದಲ್ಲೇ **ಸಂತ್ಯಜ್ಯ** ಎಂದು ಸೇರಿಸಿರುತ್ತಾರೆ. **ಶ್ರೀ ಗೀತಾ ಭಾಷ್ಯತ್ತಿಲುಮ್** - ಶ್ರೀ ಯತಿವರ್ಯರು ಅನುಗ್ರಹಿಸಿರುವ, **ಶ್ರೀ ಗೀತಾ ಭಾಷ್ಯತ್ತಿಲುಮ್** - ಭಾಷ್ಯದಲ್ಲೂ ಸಹ, **ಇವ್ವರ್ಥಂ** - ಈ ಕೈವಲ್ಯವು ಮುಮುಕ್ಷುವಿಗೆ ಇಷ್ಟವಲ್ಲದುದು ಎಂಬ ಅಭಿಪ್ರಾಯವು, **ಪ್ರಪಂಚಿತಮ್** - ವ್ಯಕ್ತವಾಗಿ ತೋರಿಸಲ್ಪಟ್ಟಿರುತ್ತದೆ. ಎಲ್ಲಿ ಎಂದರೆ **"ಯಸ್ಸ ಸರ್ವೇಷು ನಶ್ಯತ್ಸು ನವಿನಶ್ಯತಿ"** (ಗೀ. ೮. ೨೦) ಎಂಬುದರ ವ್ಯಾಖ್ಯಾನದಲ್ಲಿ ಎಂದು ಸಾರಪ್ರಕಾಶಿಯವರು ಬರೆದಿರುತ್ತಾರೆ. ಆ ಶ್ಲೋಕಗಳ ಅವತಾರಿಕೆಯಲ್ಲಿ ಇನ್ನೂ ವ್ಯಕ್ತವು. **"ಅಥಕೈವಲ್ಯಂಪ್ರಾಪ್ತಾನಾಮಪಿ ಪುನರಾವರ್ತಿರ್ನವಿದ್ಯತ ಇತ್ಯಾಹ"** ಎಂದು ಅವತಾರಿಕೆಯು. ಹೀಗೆ ಕೈವಲ್ಯಕ್ಕೂ ಮೋಕ್ಷಕ್ಕೂ ಪುನರಾವರ್ತಿಯಿಲ್ಲವೆಂದೂ ಅವು ಆತ್ಮಾನುಭವ ಪರಮಾತ್ಮಾನುಭವರೂಪವಾಗಿ ಎರಡೂ ಬೇರೆ ಬೇರೆಯಾದರೂ, ಎರಡಕ್ಕೂ ಸರ್ವಪಾಪನಿವೃತ್ತಿಯು ಸಮವು ಎಂಬುದು ಪೂರ್ವಪಕ್ಷವು. ಇದು ಮಂದ ಚೋದ್ಯವೆಂದು ನಿರಾಕರಿಸುತ್ತಾರೆ. ಅದಕ್ಕೆ ಕಾರಣವನ್ನು ತಿಳಿಸುತ್ತಾರೆ— **ಆಗೈಯಾಲ್** - ಆದುದರಿಂದ, **"ಸರ್ವ ಪಾಪೇಭ್ಯೋಮೋಕ್ಷಯಿಷ್ಯಾಮಿ,**

**ಮುಂದಚೋದ್ಯಮು'. ಎಜ್ಗನೇ ಯೆನ್ರಿಲ' - ಸರ್ವಪಾಪಜ್ಗಳುಮ' ಕಳಿನ್ದಾಲ' ಸ್ವತಃಪ್ರಾಪ್ತಮಾನ ಭಗವದನುಭವತ್ತೈಯಿಳನ್ದು ಕಿಡೈಕ್ಕಕ್ಕಾರಣಮಿಲ್ಲಾಮೈಯಾಲೇ ಅಪ್ಪೋದುಭಗವದನು ಭವರಹಿತಮಾನ ವಾತ್ಮಮಾತ್ರಾನುಭವಮ್, ಘುಟಿಯಾದು. ಆಗೈಯಾಲ್ ಅನ್ನವಸ್ಥೈಯಿಲ' ಐಶ್ವರ್ಯಮುಮ' ಜರಾಮರಣಾದಿ ದುಃಖಗಳುಮ' ವರುಗೈಕ್ಕೀಡಾನ ಕರ್ಮಜ್ಗಳ್**

---

**ಎಜ್ಗರ** - ಎನ್ನುವ, **ಸರ್ವಪಾಪ** ನಿವೃತ್ತಿಯೂ, **ಕೈವಲ್ಯತ್ತುಕ್ಕುಮ್** - ಕೈವಲ್ಯಕ್ಕೂ, **ಭಗವತ್ಪ್ರಾಪ್ತಿಗೂ, ಪೊದುವನ್ರೋ** - ಸಮಾನವಲ್ಲವೋ, **ಎನ್ಗೈ** - ಎಂಬ ಹೇಳಿಕೆಯು, **ಮುಂದ ಚೋದ್ಯಮು'** - ಬುದ್ಧಿಯಿಲ್ಲದ ಪೂರ್ವಪಕ್ಷವು. ಕೈವಲ್ಯಪ್ರಾಪ್ತಿಗೂ ಪುನರಾವೃತ್ತಿಯಿಲ್ಲವು. ಭಗವತ್ಪ್ರಾಪ್ತಿಗೂ ಪುನರಾವೃತ್ತಿಯು ಇಲ್ಲವು. ಆದುದರಿಂದ ಎರಡರ ವಿಷಯದಲ್ಲೂ ಸರ್ವಪಾಪಗಳಿಂದ ಬಿಡುಗಡೆಯು ಆವಶ್ಯಕವು ಎಂಬುದು ಪೂರ್ವಪಕ್ಷವು. ಚೋದ್ಯವು ಮುಂದವು ಹೇಗೆ ಎಂದರೆ ಸರ್ವಪಾಪನಿವೃತ್ತಿಯಾದರೆ ಮೋಕ್ಷ ಉಂಟಾಗುವಾಗ ಕೈವಲ್ಯಪ್ರಾಪ್ತಿಯು ಹೇಗೆ ಎಂಬು ಪೂರ್ವಪಕ್ಷಿಯನ್ನು ಕೇಳಿದರೆ ನಿರುತ್ತರವಾಗುತ್ತದೆ. ಸರ್ವಪಾಪನಿವೃತ್ತಿಯಾದರೆ ಮೋಕ್ಷವೇ ಉಂಟಾಗುವಾಗ ಕೈವಲ್ಯಪ್ರಾಪ್ತಿ ಏತರಿಂದ ಎಂಬುದು ಸ್ವತಃತಾನೇ ಯೋಚಿಸ ಬೇಕಾದ ವಿಷಯವು. ಹಾಗೆ ಯೋಚಿಸದೇ ಹೋದುದರಿಂದ **ಮುಂದ ಚೋದ್ಯವು** - ಅದು ಹೇಗೆ **ಮುಂದ ಚೋದ್ಯ** ವೆಂಬುದನ್ನು ಉಪಪಾದಿಸುತ್ತಾರೆ.—

**ಎಜ್ಗನೇಯೆನ್ರಿಲ್** - ಅದು ಹೇಗೆ ಮುಂದ ಚೋದ್ಯವೆಂದರೆ ? - **ಸರ್ವಪಾಪಜ್ಗಳುಮ' ಕಳಿನ್ದಾಲ್** - ಎಲ್ಲಾ ಪಾಪಗಳೂ ಕಳೆದು ಹೋದರೆ, **ಸ್ವತಃಪ್ರಾಪ್ತಮಾನ** - ಯಾವಾಗ ಅನಿಷ್ಟವು ತೊಲಗಿತೋ ಆಗ ಸ್ವತಃ ಉಂಟಾಗುವ ಇಷ್ಟಪ್ರಾಪ್ತಿಯಾದ, **ಭಗವದನುಭವ ರಹಿತಮಾನ** - ಪರಿಪೂರ್ಣಬ್ರಹ್ಮಾನುಭವವಿಲ್ಲದಿರುವ, **ಆತ್ಮಾನುಭವ** ರೂಪವಾದ ಕೈವಲ್ಯವು, **ಘುಟಿಯಾದು** - ಉಂಟಾಗಲು ಕಾರಣವಿಲ್ಲವು. ಅದು ಯಾವಾಗ ಸರ್ವಪಾಪನಿವೃತ್ತಿಯುಂಟಾಯಿತೋ, ಆಗ ಪರಿಪೂರ್ಣಬ್ರಹ್ಮಾನುಭವವೇ ಲಭಿಸತಕ್ಕದ್ದು, ಆತ್ಮಾನುಭವವಾದ ಕೈವಲ್ಯವು ಲಭಿಸಲು ಕಾರಣವಿಲ್ಲವು ಎಂಬ ಭಾವವು. ಆದುದರಿಂದ ಕೈವಲ್ಯ ಉಂಟಾಗಬೇಕಾದರೆ ಸರ್ವಪಾಪಗಳ ನಿವೃತ್ತಿಯಿಲ್ಲವೆಂದೇ ಭಾವಿಸಬೇಕಾಗಿರುತ್ತದೆ. ಆ ಕೈವಲ್ಯಾವಸ್ಥೆಯಪ್ರಾಪ್ತಿಗೆ ಯಾವ ಯಾವ ಕರ್ಮಗಳ ವಿನಾಶವೂ ಯಾವ ಕರ್ಮಗಳ ವಿನಾಶವಿಲ್ಲದೆಯೂ ಇರಬೇಕೆಂಬುದನ್ನು ಚರ್ಚಿಸುತ್ತಾರೆ—**ಆಗೈಯಾಲೇ** - ಆ ಕಾರಣದಿಂದ, **ಅನ್ನವಸ್ಥೈಯಿಲ್** - ಆ ಕೈವಲ್ಯಾವಸ್ಥೆಯಲ್ಲಿ, **ಐಶ್ವರ್ಯಮುಮ'** - ಐಶ್ವರ್ಯವೂ, **ಜರಾಮರಣಾದಿ ದುಃಖಜ್ಗಳುಮ'** - ವಾರ್ಧಕ್ಯಮರಣ ಮೊದಲಾದ

**ಕಳಿನ್ದು ಪರಿಪೂರ್ಣ ಭಗವದನುಭವತ್ತುಕ್ಕು ಪ್ರತಿಬಂಧಕಮಾನ ಕರ್ಮಂ ಕಳಿಯಾದೇ ಕಿಡಕ್ಕಿರವಳವಿಲೇ (೧) "ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ" ಎನ್ರುಮ್ಪಡಿ ಯಿರುಪ್ಪದೊರು ಸ್ವಾತ್ಮಾನುಭವಾನಂದವಿಶೇಷಮು'. (೨) "ಆತ್ಮಾರ್ಥೀಚೇತ್ ತ್ರಯೋಪ್ಯೇತೇ ತತ್ಕೈವಲ್ಯಸ್ಯ ಸಾಧಕಾಃ" ಎನ್ರು ಶೊಲ್ಲುಗಿರಪಡಿಯೇ, ತನಕ್ಕು ಶಕ್ಯಮಾಯ್' ಇರುಪ್ಪದೊರು ಉಪಾಯ ವಿಶೇಷತ್ತಾಲೇ ಸಿದ್ಧಿತ್ತ ಇವ್ವಾನುಭವತ್ತೈ**

---

ದುಃಖಗಳು, **ವರುಗೈಕ್ಕೀಡಾನ ಕರ್ಮಙ್ಗಳನು'** - ಬರುವದಕ್ಕೆ ಅನುಕೂಲವಾದ ಕರ್ಮಗಳು, **ಕಳೈನ್ದು** - ಕಳೆದುಹೋಗಿ, **ಪರಿಪೂರ್ಣಭಗವದನುಭವತ್ತುಕ್ಕು** - ಪರಿಪೂರ್ಣಬ್ರಹ್ಮಾನುಭವಕ್ಕೆ, **ಪ್ರತಿಬದ್ಧಮಾನ** - ಪ್ರತಿಬಂಧಕವಾಗಿರುವ, **ಕರ್ಮಮ್ ಕಳಿಯಾದೆ** - ಕರ್ಮವು ಕಳೆದು ಹೋಗದೆ, **ಕಿಡಕ್ಕಿರವಳವಿಲೇ** - ಇರುವ ಅವಸ್ಥೆಯಲ್ಲಿ, **(೧) "ಯಂ ಲಬ್ಧ್ವಾ...."** ಯಾವ ಯೋಗದಲ್ಲಿ ಆತ್ಮಾನುಭವಕ್ಕಿಂತ ಮೇಲಾದ ಪ್ರಯೋಜನವು ಇಲ್ಲವೆಂದು ತಿಳಿಯಲ್ಪಟ್ಟಿರುತ್ತದೋ" **ಎನ್ರುಮ್ಪಡಿ** - ಎಂಬಲ್ಲಿ ಹೇಳಿರುವ ಹಾಗೆ, **ಇರುಪ್ಪದೊರು** - ಇರುವ ಒಂದು **ಸ್ವಾತ್ಮಾನುಭವವಿಶೇಷವು** ಕೈವಲ್ಯವು ಎಂಬ ಭಾವವು. ಈ ಯೋಗ ಮಹಿಮೆಯಿಂದ ಜನ್ಮಜರಾಮರಣಗಳ ಆವೃತ್ತಿಯನ್ನುಂಟುಮಾಡುವ ಸಂಸಾರಪ್ರಾಪ್ತಿಯನ್ನು ಕೊಡುವ ಕರ್ಮಗಳ ನಿವೃತ್ತಿಯುಂಟಾಗಿರುವದರಿಂದ ಈ ಕೈವಲ್ಯ ಪ್ರಾಪ್ತಿಯಲ್ಲಿ ಆತ್ಮಾನುಭವಕ್ಕಿಂತ ಹೆಚ್ಚಿನ ಆನಂದವಿಲ್ಲವೆಂಬುದು ತೋರಿ ಅನುಭವಿಸುವನು. ಆದರೆ ಭಗವದನುಭವಕ್ಕೆ ಪ್ರತಿಬಂಧಕ ಉಂಟುಮಾಡುವ ಕರ್ಮಗಳು ಕಳೆಯಲಿಲ್ಲವೆಂದು ಭಾವಿಸತಕ್ಕದ್ದೆಂಬ ಭಾವವು. **(೨) ಆತ್ಮಾರ್ಥೀಚೇತ'** - ಆತ್ಮಾನುಭವದ ಅಪೇಕ್ಷೆಯಿದ್ದುದಾದರೆ, **ತ್ರಯೋಪ್ಯೇತೇ** - ಈ ಕರ್ಮಯೋಗ, ಜ್ಞಾನಯೋಗ ಭಕ್ತಿಯೋಗಗಳಾದ ಈ ಮೂರೂ, **ಅಪಿ** ಶಬ್ದದಿಂದ ಪ್ರಪತ್ತಿಯೂ ಹೇಳಲ್ಪಟ್ಟಿತು; ಏಕೆಂದರೆ ಉಪಾಸನದಿಂದ ನಾಲ್ಕು ಜನ ಭಕ್ತರಾದ ಆರ್ತ, ಅರ್ಥಾರ್ಥಿ ಜಿಜ್ಞಾಸು (ಈತನೇ ಕೇವಲನು) ಜ್ಞಾನಿಗಳು ಅಚಿದನುಭವ, ಆತ್ಮಾನುಭವ, ಭಗವದನುಭವಗಳನ್ನು ತಮ್ಮ ಇಷ್ಟಾನುಸಾರಹೊಂದಬಹುದು. ಹಾಗೆಯೆ ಪ್ರಪತ್ತಿಮೂಲಕ ಈ ಎಲ್ಲಾ ಅನುಭವಗಳನ್ನು ಹೊಂದಬಹುದೆಂಬ ಭಾವದಿಂದ ಹೇಳುತ್ತಾರೆ. **ತತ್ಕೈವಲ್ಯಸಾಧಕಾಃ** - ಆತ್ಮಾನುಭವರೂಪ ಕೈವಲ್ಯವನ್ನು ಸಾಧಿಸಿ ಕೊಡುವುಗಳಾಗುವುವು," **ಎನ್ರು ಶೊಲ್ಲುಗಿರಪಡಿಯೇ** - ಎಂದು ಹೇಳಿರುವ ಹಾಗೆ, **ತನಕ್ಕು ಶಕ್ಯಮಾಯ್' ಇರುಪ್ಪದೊರು ಉಪಾಯ ವಿಶೇಷತ್ತಾಲೇ** - ತನಗೆ ಶಕ್ತಿಯಿರುವ ಯಾವದಾದರೂ ಒಂದು ಉಪಾಯ ವಿಶೇಷದಿಂದ, ಉಪಾಸ

---

(೧) ಗೀ. ೬. ೨೨ (೨) ಗೀತಾರ್ಥಸಙ್ಗ್ರಹ. ೨೭

**ಅಚಿದನುಭವತ್ತೋಡುಮ್, ಭಗವದನುಭವತ್ತೋಡುಮು', ತುವಕ್ಕಿಲ್ಲಾದ ಪಡಿಯಾಲೇ ಕೈವಲ್ಯಮೆನ್ರು ಪೇರಿಟ್ಟಾರ'ಗಳ'. ಭಗವತ್ಪ್ರಾಪ್ತಿಯಿಲ' ಕೈವಲ್ಯಶಬ್ದಮು' ಸರ್ವೋಪಾಧಿನಿವೃತ್ತಿಯೈ ನಿನಕ್ಕಿರದು. ಆತ್ಮಾನಾತ್ರಾ**

---

ಸವೋ ಇಲ್ಲವೇ ಪ್ರಪತ್ತಿಮೂಲಕವಾಗಿಯೋ ಎಂಬ ಭಾವವು, **ಸಿದ್ಧಿತ್ತಾಲೇ**-ಸಿದ್ಧಿಸಿದರೆ, **ಇಪ್ಪನುಭವತ್ತೈ** - ಕೈವಲ್ಯವೆಂಬ ಈ ಅನುಭವವನ್ನು, **ಅಚಿದನುಭವತ್ತೋಡು** - ಆರ್ತ ಮತ್ತು ಅರ್ಥಾರ್ಥಿಗಳಿಗೆ ಉಂಟಾಗಿ ಅಚಿತ್ರಸ ಅನುಭವದೊಂದಿಗೂ, **ಭಗವದನುಭವತ್ತೋಡು** - ಪರಿಪೂರ್ಣಬ್ರಹ್ಮಾನುಭವರೂಪವಾದ ಮೋಕ್ಷದೊಂದಿಗೂ, **ತುವಕ್ಕಿಲ್ಲಾದಪಡಿಯಾಲೇ** - ಸಂಬಂಧವಿಲ್ಲದೆ, ಅವುಗಳಿಗಿಂತ ಬೇರೆಯಾಗಿರುವದರಿಂದ, **ಕೈವಲ್ಯಮೆನ್ರುಪೇರಿಟ್ಟಾರ'ಗಳ'** - ಈ ಆತ್ಮಾನುಭವಕ್ಕೆ ಕೈವಲ್ಯವೆಂಬ ಹೆಸರನ್ನು ಕೊಟ್ಟಿರುತ್ತಾರೆ. ಆದರೆ ಕೆಲವರು ಕೈವಲ್ಯವೆಂದರೆ ಮೋಕ್ಷವೆಂದೇ ಭಾವಿಸಿ ಸಮಾನ ಪದಗಳಾಗಿ ಭಾವಿಸುತ್ತಾರಲ್ಲಾ ಅದು ಏಕೆ ಎಂದರೆ ಕಾರಣವನ್ನು ತಿಳಿಸುತ್ತಾರೆ.

**ಭಗವತ್ಪ್ರಾಪ್ತಿಯಿಲ್**-ಭಗವತ್ಪ್ರಾಪ್ತಿಯಲ್ಲಿ, **ಕೈವಲ್ಯಶಬ್ದವು, ಸರ್ವೋಪಾಧಿನಿವೃತ್ತಿಯೈ** - ಸಂಸಾರವನ್ನುಂಟುಮಾಡುವ ಸಮಸ್ತವಾದ ಕರ್ಮಗಳ ಮೂಲಕವಾಗಿ ತೊಂದರೆ ಏನೂ ಇಲ್ಲವೆಂಬುದನ್ನು, **ನಿನಕ್ಕಿರದು** - ಸ್ಮರಿಸುವ ಹಾಗೆ ಮಾಡುತ್ತದೆ. ಕೇವಲನಿಗೆ ಪುನಸ್ಸಂಸಾರಪ್ರಾಪ್ತಿಯಿಲ್ಲದೆ ಮೋಕ್ಷವೆಂದು ಛಾಂದೋಗ್ಯದಲ್ಲಿ **"ತದ್ಯ ಇತ್ಥಂವಿದುಃ"** ಎಂಬಲ್ಲಿ ಹೇಳಿ ಮುಂದಕ್ಕೆ ಜ್ಞಾನಿಯ ಹಾಗೆಯೇ ಈತನಿಗೂ ಅರ್ಚಿರಾದಿಗತಿಯೂ, **"ಯಂಪ್ರಾಪ್ಯನನಿವರ್ತನ್ತೇ ತದ್ಧಾಮಪರಮಂಮಮ"** ಅಪುನರಾವರ್ತಿಯೂ ಹೇಳಿರುವದರಿಂದ ಕ್ರಮೇಣ ಈತನಿಗೂ ಮೋಕ್ಷ ಉಂಟಾಗುವದರಿಂದ, **ಸರ್ವೋಪಾಧಿನಿವೃತ್ತಿಯೈ ನಿನಕ್ಕಿರದು** - ಎಂದು ಹೇಳಿದರು. ಕ್ರಮೇಣ ಮೋಕ್ಷವೇ ವಿನಾ ಪುನಸ್ಸಂಸಾರವಿಲ್ಲದುದರಿಂದಲೇ, ಅರ್ಜುನನೂ ಸಹ ೧೨ ನೆಯ ಅಧ್ಯಾಯದ ಪ್ರಥಮಶ್ಲೋಕದಲ್ಲಿ ಜ್ಞಾನಿಯ ಉಪಾಸನೆಗೆ ಐಕಾಂತ್ಯ ಭಕ್ತಿಯು ಬೇಕಾಗಿರುವದರಿಂದ ಅಂತಹ ಭಕ್ತಿಯೋಗಕ್ಕೆ ಚಿತ್ತಸಮಾಧಾನವಿಲ್ಲವೆಂದು ಭಾವಿಸಿ, ಜ್ಞಾನಿಯಾಗಿ ನಿನ್ನನ್ನು ಉಪಾಸಿಸಬೇಕೇ, ಇಲ್ಲವೇ ಜಿಜ್ಞಾಸುವಾಗಿ ಉಪಾಸಿಸಲೇ ಎಂದು ಕೇಳುತ್ತಾನೆ. ಕೇವಲನ ಉಪಾಸನೆ ಕ್ಲೇಶೋಧಿಕವಾದುದರಿಂದ ಅದು ಬೇಡ; ಜ್ಞಾನಿಯಾಗಿ ಉಪಾಸಿಸುವನೇ ಪ್ರಾಜ್ಞನು; ನೀನು ಚಿತ್ತಸಮಾಧಾನವನ್ನು ಹೊಂದುವದು ಕಷ್ಟವೆಂದಲ್ಲವೇ ಪೇಚಾಡುತ್ತೀ. ಅದು ಸುಲಭವಾಗಿ ಲಭಿಸಲು ಉಪಾಯವನ್ನು ತಿಳಿಸುವೆನು ಕೇಳು ಎನ್ನುತ್ತಾರೆ. ಹೀಗೆ ಅರ್ಜುನನೇ ಎರಡು ಸಂದರ್ಭದಲ್ಲೂ ಮೋಕ್ಷವಾದುದರಿಂದ ಯಾವುದನ್ನು ಅನುಷ್ಠಿಸಲಿ ಎಂದು ಕೇಳಿರುತ್ತಾನೆ. ಹೀಗಿರು

**ನುಭವ ವಿಷಯಮಾಗ (೧) "ಸ್ವಾತ್ಮಾನುಭೂತಿ ರಿತಿ ಯಾಕಿಲ ಮುಕ್ತಿ ರುಕ್ತಾ" ಇತ್ಯಾದಿಗಳಿಲ' ಪ್ರಯುಕ್ತಮುಕ್ತಿಶಬ್ದಮುಮ' (೨) "ವಿಗತೇಚ್ಛಾ ಭಯಕ್ರೋಧೋ ಯ ಸ್ಸದಾ ಮುಕ್ತ ಏವಸಃ" ಇತ್ಯಾದಿಗಳಿರ'ಪ್ಪೋಲೆ**

---

ವಾಗ ಸಾರದೀಪಿಕೆಯವರು "**ಕೇವಲರ' ದ್ವಿವಿಧರ':- ಕ್ರಮೇಣ ಮುಕ್ತಿ ಪರ್ಯಂತ ಭಾಗಿಗಳೆನ್ರುಮ', ಪುನಸ್ಸಂಸೃತಿ ಭಾಗಿಗಳೆನ್ರುಮ'**" ಎಂದು ಬರೆಯಲು ಪ್ರಮಾಣವ್ಯಾವುದೋ ತಿಳಿಯಲಿಲ್ಲವು. ಗೀತೆಯಲ್ಲೂ, ಛಾಂದೋಗ್ಯದಲ್ಲೂ ಅವರುಗಳಿಗೆ ಪುನರಾವೃತ್ತಿಯಿಲ್ಲವೆಂದೂ, ಅರ್ಚಿರಾದಿಗತಿಯು ಎಂದೂ ಹೇಳಿರುತ್ತದೆ.

ವರದರಾಜಸ್ತವದಲ್ಲಿ ಕೇವಲ ಆತ್ಮಾನುಭವವನ್ನೂ ಮುಕ್ತಿ ಎಂದೇ ಪ್ರಯೋಗಿಸಿರುತ್ತಾರಲ್ಲಾ ಅದು ಹೇಗೆ ? ಎಂದರೆ ಕ್ರಮೇಣ ಆತ್ಮಾನುಭವದಿಂದ ಮುಕ್ತಿಯೂ ಲಭಿಸುವದರಿಂದ ಹಾಗೆ ಪ್ರಯೋಗಿಸಿರುತ್ತಾರೆಂದು ಹೇಳುತ್ತಾರೆ. ಆ ಶ್ಲೋಕ ಯಾವುದೆಂದರೆ "**ಭೋಗಾ ಇಮೇ ವಿಧಿಶಿವಾದಿ ಪದಂಚ ಕಿಂಚ ಸ್ವಾತ್ಮಾನುಭೂತಿ ರಿತಿಯಾಕಿಲ ಮುಕ್ತಿರುಕ್ತಾ । ಸರ್ವನ್ತದೂ ಷಜಲ ಜೋಷ ಮಹಂ ಜುಷೇಯ ಹಸ್ತ್ಯದ್ರಿನಾಥ ತವದಾಸ್ಯ ಮಹಾರಸಜ್ಞಃ**" ಐಹಿಕೈಶ್ವರ್ಯಗಳ ಭೋಗಗಳೂ ಮತ್ತು ಇವುಗಳಿಗಿಂತ ಮೇಲಾದ ಚತುರ್ಮುಖ ರುದ್ರ ಆದಿ ಶಬ್ದದಿಂದ ಸ್ವರ್ಗವೊದಲಾದ ಲೋಕಗಳ ಭೋಗಗಳೂ, ಅವುಗಳಿಗಿಂತ ಮೇಲಾದ ಆತ್ಮಾನುಭವರೂಪವಾದ ಕೈವಲ್ಯವೆಂಬ ಮುಕ್ತಿಯೂ ಇವುಗಳೆಲ್ಲವೂ ಊಷರ ಜಲವನ್ನು ಸೇವೆಮಾಡಿದಹಾಗೆ; ಯಾರಿಗೆಂದರೆ ಹಸ್ತಗಿರಿನಾಥನಾದ ಶ್ರೀ ವರದರಾಜನೇ ನಿನ್ನ ದಾಸ್ಯವೆಂಬ ಮಹತ್ತಾದ ಅಮೃತರಸಪಾನ ಮಾಡಿದ ಪರಮಜ್ಞಾನಿಗೆ ಐಹಿಕೈಶ್ವರ್ಯ, ಸ್ವರ್ಗಾದಿಭೋಗ ಕೈವಲ್ಯ ಇವೆಲ್ಲಾ ಊಷರಜಲಪಾನದ ಹಾಗೆ ಎಂಬ ಭಾವವು. ಹಾಗೆಯೇ ಗೀತೆಯಲ್ಲೂ ಪ್ರಯೋಗ ಉಂಟೆಂದು ಉದಾಹರಿಸುತ್ತಾರೆ :— **ಆತ್ಮಮಾತ್ರಾನುಭವವಿಷಯಮಾಗ** - ಕೇವಲ ಆತ್ಮಾನುಭವ ವಿಷಯವಾಗಿಯೇ "**ಸ್ವಾತ್ಮಾನುಭೂತಿರಿತಿ ಯಾಕಿಲ ಮುಕ್ತಿರುಕ್ತಾ** - ತನ್ನ ಆತ್ಮ ವಿಷಯವಾದ ಅನುಭವವೆಂದು ಯಾವ ಮುಕ್ತಿ ಎಂದು ಹೇಳಲ್ಪಟ್ಟಿತೋ" **ಇತ್ಯಾದಿಗಳಿಲ'** - ಇವೇ ಮೊದಲಾದವುಗಳಲ್ಲಿ, **ಪ್ರಯುಕ್ತ ಮುಕ್ತಿ ಶಬ್ದಮುಮ'** - ಪ್ರಯೋಗಿಸಲ್ಪಟ್ಟ ಮುಕ್ತಿ ಶಬ್ದವೂ ಕೂಡ, "**ವಿಗತೇಚ್ಛಾ** - ನಶ್ವರಗಳಾದ ಐಹಿಕಗಳಲ್ಲಿ ಇಚ್ಛೆ ಎಂದರೆ ಕಾಮನೆಯು ಇಲ್ಲದೆ ಇರೋಣವು, ಹಾಗೆಯೇ **ಭಯ, ಕೋಪ,** ವಿಲ್ಲದಿರುವನೂ **ಸದಾ** - ಯಾವಾಗಲೂ, ಆತನು **ಮುಕ್ತ ಏವ ಸಃ** - ಮುಕ್ತಿಯನ್ನು ಹೊಂದಿದವನ ಹಾಗೆಯೇ" **ಇತ್ಯಾದಿಗಳಿರ'ಪ್ಪೋಲೇ**-

---

(೧) ನಾರದಸ್ತವ. ೪೧. (೨) ಗೀ. ೫ ೨೮.

**ನಿರ್ವಾಹ್ಯಮ್' (೧) "ಜರಾಮರಣಮೋಕ್ಷಾಯ" ಎನ್ರದುವುಮ್ ದೇವರ್'ಗಳುಡೈಯ ಅಮರತ್ವವ್ಯಪದೇಶಮ್ಪೋಲೆ ಅಪೇಕ್ಷಿತಮ್'. ಕ್ರಮೇಣ ಮುಕ್ತಿ**

---

ಇವೇ ಮೊದಲಾದವುಗಳಲ್ಲಿ ಹೇಳಿರುವಹಾಗೆ, **ನಿರ್ವಾಹ್ಯಮ್'** - ನಿರ್ವಾಹಿಸತಕ್ಕದ್ದಾಗಿರುತ್ತದೆ. ಕಾಮಕ್ರೋಧಮೋಹಾದಿಗಳು ಇಲ್ಲದೆ ಇರುವರೆಲ್ಲಾ ಹೇಗೆ ಮುಕ್ತರೇ ಅಲ್ಲವೋ, ಹೇಗೆ ಕ್ರಮೇಣ ಮುಕ್ತರಾಗುವ ಸಂಭವ ಉಂಟೋ, ಹಾಗೆಯೇ ಆತ್ಮಾನುಭವ ಶೀಲನೂ ಕ್ರಮೇಣ ಮುಕ್ತನಾಗುವದರಲ್ಲಿ ಸಂದೇಹವಿಲ್ಲವೆಂದು ಔಪಚಾರಿಕವಾಗಿ ಹೇಳಲ್ಪಟ್ಟಿತು. ಈ ಅಭಿಪ್ರಾಯ ಸಮರ್ಥನೆಗಾಗಿಯು ಪೂರಾ ಶ್ಲೋಕಾರ್ಥಕ್ಕೂ ದಾಸನು ಬರೆದಿರುವ ಭಗವದ್ಗೀತೆಯ ೬೨೦ ನೆಯ ಪುಟ ನೋಡಿ. "**ಜರಾಮರಣಮೋಕ್ಷಾಯ** - ಮುಂದೆ ಮುಪ್ಪು ಮರಣಗಳಿಂದ ಬಿಡುಗಡೆಯನ್ನು ಹೊಂದುವದಕ್ಕಾಗಿ ಎಂದು ಗೀತಾ ಸಪ್ತಮಾಧ್ಯಾಯಾಂತ್ಯದಲ್ಲಿ ಹೇಳಿರುವದೂ, **ದೇವರ್'ಗಳುಡೈಯ** - ದೇವತೆಗಳ, **ಅಮರತ್ವವ್ಯಪದೇಶಮ್ಪೋಲೇ** - ಅವರಿಗೆ ಅಪೇಕ್ಷಿತವಾದ ಅಮರತ್ವವನ್ನು ಹೇಳುವಹಾಗೆ, **ಅಪೇಕ್ಷಿತಮ್'** - ಮುಂದಕ್ಕೆ ಅಪೇಕ್ಷಿತವಾದುದು ಎಂಬ ಭಾವವು. "**ಜರಾಮರಣಮೋಕ್ಷಾಯ ಮಾಮಾಶ್ರಿತ್ಯಯತನ್ತಿಯೇ । ತೇಬ್ರಹ್ಮಾತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಮ್**" ಎಂಬುದು ಪೂರಾ ಶ್ಲೋಕವು. ದಾಸನು ಬರೆದಿರುವ ೪೪೫-೬ನೆಯ ಪುಟಗಳನ್ನು ನೋಡಿ. ಇಲ್ಲಿ ಬ್ರಹ್ಮಶಬ್ದವು ೨ ನೆಯ ಅಧ್ಯಾಯದ ಕೊನೆಯ ಶ್ಲೋಕದಲ್ಲಿ **ಬ್ರಹ್ಮನಿರ್ವಾಣಮೃಚ್ಛತಿ** ಎಂಬಲ್ಲೂ ಹೇಳಿರುವ ಪ್ರಕೃತಿ ವಿಯುಕ್ತ ಆತ್ಮಾ ಮಹಾಪರಿಶುದ್ಧನಾಗಿ ಜ್ಞಾನೈಕಾಕಾರತೆಯಿಂದ ಶೋಭಿಸುತ್ತಿರುವನೆಂಬುದನ್ನು ಬೋಧಿಸುತ್ತದೆ. ಇದು ಮುಂದೆ ಜರಾಮರಣಮೋಕ್ಷವು ಅಪೇಕ್ಷಿತವಾಗಿ ಉಪಾಸನದ್ವಾರಾ ಲಭಿಸುತ್ತದೆಂಬುದನ್ನು ತಿಳಿಸುತ್ತದೆ. ಆದುದರಿಂದ ಪಂಚಾಗ್ನಿ ವಿದ್ಯಾನಿಷ್ಠನಾದ ಕೇವಲನು ಕ್ರಮೇಣ ಹೊಂದುವನೆಂಬ ಭಾವದಿಂದ ಮುಕ್ತಿ ಶಬ್ದದಿಂದ ಔಪಚಾರಿಕವಾಗಿ ಹೇಳಲ್ಪಟ್ಟಿರುತ್ತದೆಂಬ ಭಾವವು. ದೇವತೆಗಳಿಗೆ ಅಮರರು ಎಂದು ಹೆಸರು. ಏಕೆಂದರೆ ಅಮರಾಃ ಎಂದರೆ **ನಮ್ರಿಯಂತೇ** ಅಥವಾ **ನಾಸ್ತಿ ಮರೋಏಷಾಂ ತೇ** ಎಂಬ ವ್ಯುತ್ಪತ್ತಿಯಿಂದಲೂ ಅವರಿಗೆ ಮರಣವಿಲ್ಲವೆಂಬರ್ಥವಾಗುತ್ತದೆ. ಹಾಗೆ ಅರ್ಥಮಾಡಿದರೆ ಸೃಷ್ಟಿಲಯಾದಿಗಳಿಂದಲೂ ತಪ್ಪಿಸಿಕೊಂಡವರೆಂಬ ಅಪಾರ್ಥ ಉಂಟಾಗುತ್ತದೆ. ಆದುದರಿಂದ ಅಮರತ್ವವು ಅಪೇಕ್ಷಿತವೆಂದು ಇಟ್ಟುಕೊಳ್ಳಬೇಕು. ಅವರುಗಳು ನಮ್ಮಹಾಗೆ ಜೀವಕೋಟಿಗೆ ಸೇರಿದವರಾಗಿ ಅರ್ಥಿತ್ವಸಾಮರ್ಥ್ಯಗಳು ಇರುವದರಿಂದ "**ತದುಪರ್ಯಪಿ ಬಾದರಾಯಣಃ ಸ್ಸಂಭವಾತ್**" ಎಂಬ ಸೂತ್ರದಲ್ಲಿ ಹೇಳಿರುವ ಹಾಗೆ

---

(೧) ಗೀ. ೭. ೨೯.

**ಪರ್ಯಂತಮಾಯ್ ವಿಷಯತ್ತೈ ಪ್ಪತ್ತ ಚೊಲ್ಲುಗಿರದಾಗವುಮಾಮ್‘. ಇಪ್ಪಡಿ ವಿಭವ ವ್ಯೂಹ ಸಾಲೋಕ್ಯಾದಿ ಮಾತ್ರತ್ತಿಲ್ ಮುಕ್ತಿಶಬ್ದಮುಮ್ ನಿರ್ವಾಹ್ಯಮ್. (೧) “ಲೋಕೇಷುವಿಷ್ಣೋರ್ನಿವಸನ್ತಿಕೇಚಿ ತ್ಸಮೀಪ ಮೃಚ್ಛನ್ತಿ ಚ ಕೇಚಿದನ್ಯೇ। ಅನ್ಯೇತುರೂಪಂ ಸದೃಶಂ ಭಜನ್ತೇ ಸಾಯುಜ್ಯ ಮನ್ಯೇ ಸತುಮೋಕ್ಷಉಕ್ತಃ” ಎನ್ರು ನಿಯಮಿಕ್ಕಪಟ್ಟದಿರೇ.**

---

ಉಪಾಸನಮಾಡಿದರೆ ಪುನರಾವೃತ್ತಿಯಿಲ್ಲದ ಮೋಕ್ಷ ಉಂಟೆಂಬ ಭಾವವು. ಕ್ರಮೇಣ ಉಂಟೆಂಬ ತಾತ್ಪರ್ಯವನ್ನು ತಿಳಿಸುತ್ತಾರೆ—**ಕ್ರಮೇಣ ಮುಕ್ತಿ ಪರ್ಯನ್ತಮಾಮ್‘ ವಿಷಯತ್ತೈ** - ಕ್ರಮವಾಗಿ ಮುಕ್ತಿಯವರೆಗೂ ಫಲವೆಂಬ ವಿಷಯವನ್ನೂ, **ಪ್ಪತ್ತ** - ಕುರಿತು, **ಚೊಲ್ಲುಗಿರದಾಗವುಮಾಮ್‘** - ಹೇಳುತ್ತದೆಂದಾದರೂ ಆಗಬಹುದು. ಅಂತಹ ಸಂದರ್ಭದಲ್ಲಿ ಔಪಚಾರಿಕವಾಗಿ ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದಾಗಿರುತ್ತದೆಂಬುದು ತಾತ್ಪರ್ಯವು.

ಕೈವಲ್ಯವನ್ನು ಸೇರಿದವರಿಗೆ ಪುನರಾವೃತ್ತಿಯಿಲ್ಲದೆ ಭಗವದುಪಾಸನಾ ಅಥವಾ ಶರಣಾಗತಿಯ ಮೂಲಕ ಮುಕ್ತಿಯಾದುದರಿಂದ, ಕೈವಲ್ಯ ಶಬ್ದಕ್ಕೆ ಮುಕ್ತಿಯೆಂದು ಔಪಚಾರಿಕವಾಗಿ ಕೆಲವರು ಹೇಗೆ ಹೇಳಿದರೋ, ಹಾಗೆಯೇ ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ ಶಬ್ದಗಳೂ ಔಪಚಾರಿಕವಾಗಿ ಸಾಯುಜ್ಯವಾದ ಮುಕ್ತಿಯೇ ಎಂದು ಹಿಂದೆ ಪರಿಪೂರ್ಣಬ್ರಹ್ಮಾನುಭವಾಧಿಕಾರದಲ್ಲಿ ಹೇಳಿರುವದನ್ನು ಜ್ಞಾಪಕಕ್ಕೆ ತರುತ್ತಾರೆ—“**ಲೋಕೇಷು ವಿಷ್ಣೋಃ** - ಎಂಬ ಶ್ಲೋಕಾರ್ಥ ಉಪಪಾದನಗಳಿಗೆ ಪರಿಪೂರ್ಣ ಬ್ರಹ್ಮಾನುಭವಾಧಿಕಾರದ ೧೮೨೬-೧೮೮೦ ನೆಯ ಪುಟಗಳನ್ನು ನೋಡಿ. ಅಲ್ಲಿ ಸಾಲೋಕ್ಯ, ಸಾರೂಪ್ಯ, ಸಾಮೀಪ್ಯಾದಿ ಮೋಕ್ಷವಲ್ಲವೆಂದು, ಔಪಚಾರಿಕವಾಗಿ ಸಾಯುಜ್ಯ ಸಮಾನವೆಂದೂ, ಸಾಯುಜ್ಯವೇ ಸಾಕ್ಷಾನ್ಮೋಕ್ಷವೆಂದೂ, ಇದು ಜಿತನ್ತಾ ಸ್ತೋತ್ರ ಶ್ಲೋಕವಾದ “**ಮೋಕ್ಷಮ್, ಸಾಲೋಕ್ಯ ಸಾರೂಪ್ಯಂ ಪ್ರಾರ್ಥಯೇ ನ ಕದಾಚನ। ಇಚ್ಛಾಮ್ಯಹಂ ಮಹಾಬಾಹೋ ಸಾಯುಜ್ಯಂ ತವ ಸುವ್ರತ.**” ಎಂಬಲ್ಲಿ ವ್ಯಕ್ತವೆಂದೂ, ಇದು ಮುಕ್ತಾನಂದ ತಾರತಮ್ಯವನ್ನು ಬೋಧಿಸುತ್ತದೆಂಬ ಭಾವವು ಸರಿಯಲ್ಲವೆಂದೂ ಅಲ್ಲಿ ಉಪದಿಷ್ಟವು; **ಎನ್ರು** - ಎಂಬದಾಗಿ, **ನಿಯಮಿಕ್ಕಪ್ಪಟ್ಟದಿರೇ** - ಎಂದಲ್ಲವೇ ವಿಧಿಸಲ್ಪಟ್ಟಿರುವದು. ಇಲ್ಲಿ ಸಾಯುಜ್ಯವನ್ನು ಕುರಿತು **ಸತುಮೋಕ್ಷ ಉಕ್ತಃ** ಎಂಬ ಪ್ರಯೋಗದಿಂದಲೂ, **ತು** ಶಬ್ದವು ಮಿಕ್ಕ ಮೂರನ್ನೂ ವ್ಯಾವರ್ತಿಸಿ ಹೇಳುವದರಿಂದಲೂ, ಆ ಮೂರೂ ಮೋಕ್ಷವಲ್ಲವೆಂಬುದು ವ್ಯಕ್ತವು. ಅವುಗಳ ವಿಷಯದಲ್ಲಿ ಮೋಕ್ಷ ಶಬ್ದವು **ಕ್ರಮೇಣ** - ಉಂಟಾಗುವದರಿಂದ ಔಪಚಾರಿಕವು.

---

(೧)

**ಕೇವಲಾತ್ಮಾನುಭವಮ್ ನಿತ್ಯಮನ್ನೆನ್ನು ಬಿಡಮುವು', ಸಾಕ್ಷಾನ್ಮೋಕ್ಷ ಮನ್ನೆನ್ನು ಬಿಡಮುವು', (೧) ಚತುರ್ವಿಧಾ ಮಮಜನಾಭಕ್ತಾ ಏವಹಿ ತೇ ಶ್ರುತಾಃ । ತೇಷಾ ಮೇಕಾನ್ತಿನ ಶ್ರೇಷ್ಠಾ ಸ್ತೇಚೈವಾ ನನ್ಯದೇವತಾಃ । ಅಹ ಮೇವ ಗತಿಸ್ತೇಷಾಂ ನಿರಾಶೀಃ ಕರ್ಮ ಕರ್ಮಿಣಾಮ್ । ಯೇತು ಶಿಷ್ಟಾ ಸ್ತ್ರಯೋ ಭಕ್ತಾಃ ಫಲಕಾಮಾ ಹಿ ತೇ ಮತಾಃ । ಸರ್ವೇಚ್ಯವನ ಧರ್ಮಾಣಃ ಪ್ರತಿಬುದ್ಧಸ್ತು ಮೋಕ್ಷಭಾಕ್ ॥" ಎಜ್ಞ್ಗರ ವಚನತ್ತಾಲೇ ಸಿದ್ಧಮು'.**

---

ಹಾಗೆಯೇ ಈ ಕೈವಲ್ಯ ಶಬ್ದದಿಂದ ಮೋಕ್ಷವೆಂದು ಹೇಳುವದೂ ಸಹ ಔಪಚಾರಿಕವು. ಕೈವಲ್ಯ ಸಾಕ್ಷಾನ್ಮೋಕ್ಷದ ಹಾಗೆ **ನಿತ್ಯ**ವಲ್ಲವೆಂಬುದಕ್ಕೂ ಮತ್ತು ಸಾಕ್ಷಾನ್ಮೋಕ್ಷವಲ್ಲವೆಂಬುದಕ್ಕೂ ಪ್ರಮಾಣವನ್ನು ಮುಂದೆ ಉದಾಹರಿಸು ತ್ತಾರೆ.—(೧) ಈ "ಚತುರ್ವಿಧಾ" ಇತ್ಯಾದಿ ಶ್ಲೋಕಗಳು ಹಿಂದೆ ಉಪಾಯ ವಿಭಾ ಗಾಧಿಕಾರದಲ್ಲಿ ಉದಾಹೃತವು. ಇವುಗಳ ಪ್ರತಿಪದಾರ್ಥ ಉಪಾದನೆಗೆ ೮೮೨-೩ ನೆಯ ಪುಟಗಳನ್ನು ಪರಾಂಬರಿಸಿ. ಈ ಅನು ಗೀತಾ ವಾಕ್ಯಗಳು ಭಗವದ್ಗೀತಾ ಶ್ಲೋಕಗಳಾದ "**ಚತುರ್ವಿಧಾ ಭಜನ್ತೇ ಮಾಂ**" ಎಂಬುವುಗಳ ವ್ಯಾಖ್ಯಾನವು· ಯಾವಾಗ ತನ್ನನ್ನು ಆಶ್ರಯಿಸಿದರೋ ಆಗ ಮಮ **ಜನರು. ತವಾಸ್ಮೀತಿಚ ಯಾಚತೇ,** ಆದುದರಿಂದ **ಮಮಜನಾಃ** - ಆದರೆ ಅವರುಗಳಲ್ಲಿ ಜ್ಞಾನಿಯೇ ಪ್ರಾಪ್ಯನಾದ ತನ್ನನ್ನೇ ಅಪೇಕ್ಷಿಸಿ, ಅನನ್ಯಗತಿಕರಾಗಿ ನನ್ನನ್ನೇ ಉಪಾಸಿಸಿ ಸರ್ವ ಕರ್ಮಗಳ ಫಲಾಪೇಕ್ಷೆಯಿಲ್ಲದೆ ನನ್ನಲ್ಲೇ ಎಲ್ಲವನ್ನೂ ಸಮರ್ಪಿಸುವವನು. ಇವರಿಗೆ ಮಾತ್ರ ಮೋಕ್ಷವೇ ವಿನಾ ಇನ್ನೂ ಮೂರು ಜನರಾದ ಆರ್ತ ಅರ್ಥಾರ್ಥೀ ಜಿಜ್ಞಾಸು ಇವರುಗಳಿಗೆ ಮುಕ್ತಿಯಿಲ್ಲವು. ಏಕೆಂದರೆ ತನ್ನನ್ನಲ್ಲದೆ, ಇತರ ಫಲಕಾಮರು, ಆದು ದರಿಂದ ಚ್ಯವನ ಧರ್ಮರು. ಆರ್ತನಿಗೂ ಅರ್ಥಾರ್ಥಿಗೂ ಮೋಕ್ಷವಿಲ್ಲನೆ ಪುನಸ್ಸಂ ಸಾರ ಪ್ರಾಪ್ತಿಯಾದುದರಿಂದ ಚ್ಯವನ ಧರ್ಮರು. ಕೇವಲರಿಗೆ ಪುನಸ್ಸಂಸಾರ ಪ್ರಾಪ್ತಿಯಿಲ್ಲದೆ ಇರುವಾಗ ಚ್ಯವನ ಧರ್ಮರು ಹೇಗೆ? ಎಂಬುದು ಅಲ್ಲಿ ಉಪಪಾದಿ ಸಲ್ಪಟ್ಟಿರುತ್ತದೆ. ಮೋಕ್ಷಪ್ರಾಪ್ತಿಯಿಂದ ಜಾರಿದವರಾದುದರಿಂದ ಚ್ಯವನ ಧರ್ಮ ರೆಂದು ಹೇಳಲ್ಪಟ್ಟಿರುತ್ತದೆ. ಇವರುಗಳು ಮುಂದಕ್ಕೆ ಐಕಾಂತ್ಯ ಭಕ್ತಿಯಿಂದ ಉಪಾಸಿಸಿ ಮೋಕ್ಷವನ್ನು ಹೊಂದುತ್ತಾರೆ. ಈ ನಾಲ್ವರಲ್ಲಿ ತುಂಬಾ ಪ್ರಾಜ್ಞನು ಯಾರು ಎಂದರೆ ಜ್ಞಾನಿಯು. ಏಕೆಂದರೆ ಐಕಾಂತ್ಯ ಭಕ್ತಿಯಿಂದ ಮೋಕ್ಷ ಹೊಂದುವನಾದುದರಿಂದ ಎಂಬುದು ಸಜ್ಞ್ರಹಾರ್ಥವು." **ಎಜ್ಞ್ಗರವಚನತ್ತಾಲೇ** - ಎಂಬ ಪ್ರಮಾಣದಿಂದ, **ಸಿದ್ಧಂ** - ಸ್ಥಾಪಿತವು. ಕೈವಲ್ಯವು ಅನಿತ್ಯವಾದುದು ಮತ್ತು ಮೋಕ್ಷವಲ್ಲವು ಎಂಬುದು ಸ್ಥಾಪಿತವು.

---

(೧) ಭಾರತಾ ಶಾನ್ತಿ ೩೫೦-೨೪. ೫.

**ಕೈವಲ್ಯ ನಿಷ್ಠೋಽಪಿ ಕ್ರಮೇಣ ಮುಕ್ತೋಽಭವತೀತ್ಯಾಹ.**

**(೧) "ಮುಚ್ಯೇತಾರ್ತಸ್ತಥಾರೋಗಾತ್ ಶ್ರುತ್ವೇಮಾ ಮಾದಿತ ಕಥಾಮ್ । ಜಿಜ್ಞಾಸುರ್ಲಭತೇ ಭಕ್ತಿಂ ಭಕ್ತೋ ಭಕ್ತಗತಿಂ ಲಭೇತ್' ಎನ್ಱ್ಯಾಲೇ ಶ್ರೀ ಗೀತೆಯಿಲ್ "ಜಿಜ್ಞಾಸುಃ" ಎನ್ಱ ಆತ್ಮಾನಿಷ್ಠನುಮ್ ಜ್ಞಾನಿಯಾ ಮೆನ್ರು ಉಕ್ತನಾಯ್ತ್ತು.**

**ಕೇವಲನು ಕ್ರಮೇಣ ಭಕ್ತಿನಿಷ್ಠನಾಗಿ ಮುಕ್ತಿಹೊಂದುವನು.**

(೧) ಇದು ಶ್ವೇತದ್ವೀಪದಲ್ಲಿ ಶ್ರೀ ಹರಿಯಿಂದ ಶ್ರೀ ನಾರದರಿಗೆ ಉಪದಿಷ್ಟವಾದ ತಮ್ಮ ದಶಾವತಾರ ಚರಿತ್ರೆಯ ಕಥನವು ಇದನ್ನು ಶ್ರೀ ಭೀಷ್ಮರು ಯುಧಿಷ್ಠರಾದಿಗಳಿಗೆ ಹೇಳುವ ಪ್ರಕರಣವು. ಈ ದಶಾವತಾರ ಚರಿತ್ರೆಯನ್ನು ಕೇಳುವವನಿಗೆ ಉಂಟಾಗುವ ಫಲ ಶ್ರುತಿಯನ್ನು ತಿಳಿಸುತ್ತಾರೆ— **ತಥಾ** - ಹಾಗೆಯೇ **ಆರ್ತಃ** - ರೋಗಪೀಡಿತನಾಗಿ ದೈನ್ಯವನ್ನು ಹೊಂದಿದವನು (ಹಾಗೆಯೇ ಇಲ್ಲಿ ಅರ್ಥಮಾಡತಕ್ಕದ್ದಾಗಿರುತ್ತದೆ) **ಆದಿತಃ** - ಮೊದಲಿನಿಂದ, **ಇಮಾಂ ಕಥಾಮ್** - ಈ ದಶಾವತಾರ ಕಥೆಯನ್ನೂ, **ಶ್ರುತ್ವಾ** - ಕೇಳಿ, **ರೋಗಾತ್** - ರೋಗದಿಂದ ಬಿಡಲ್ಪಟ್ಟ ಆರೋಗ್ಯವನ್ನು ಹೊಂದುವನು, **ಜಿಜ್ಞಾಸುಃ** - ಆತ್ಮಸ್ವರೂಪನಿಷ್ಠನು, **ಭಕ್ತಿಂಲಭತೇ** - ಉಪಾಸನ ಮೂಲಕ ಏಕಾಂತ ಭಕ್ತನಿಷ್ಠನಾಗಿ ಮೋಕ್ಷವನ್ನು ಹೊಂಮವನು; **ಭಕ್ತಃ** - ಜ್ಞಾನಿಯಾದ ಉಪಾಸಕನು, **ಭಕ್ತಗತಿಂ** - ಭಕ್ತರಿಗುಂಟಾಗುವ ಗತಿಯನ್ನು ಎಂದರೆ ಮೋಕ್ಷವನ್ನು, **ಲಭೇತ್** - ಹೊಂದುವನು" **ಎನ್ಱ್ಯಾಲೇ** - ಎಂದು ಹೇಳಿರುವದರಿಂದ, **ಶ್ರೀ ಗೀತೆಯಿಲ್** - ಶ್ರೀಮದ್ಭಗವದ್ಗೀತೆಯಲ್ಲಿ, **"ಜಿಜ್ಞಾಸುಃ" ಎನ್ಱ ಆತ್ಮಾನಿಷ್ಠನುಮ್** - ಜಿಜ್ಞಾಸು ಎಂಬ ಆತ್ಮೋಪಾಸಕನು ಎಂದರೆ ಪರಿಶುದ್ಧ ಆತ್ಮಪ್ರಾಪ್ತಿಗಾಗಿ ಭಗವದುಪಾಸನವನ್ನು ಮಾಡುವವನು, **ಕ್ರಮೇಣ** - ಕಾಲಕ್ರಮದಿಂದ, **ಜ್ಞಾನಿಯಾಮೆನ್ರು ಉಕ್ತನಾಯ್ತ್ತು** - ಅಲ್ಲಿ ಭಗವದುಪಾಸನಮಾಡಿ ಭಕ್ತಿಯೋಗನಿಷ್ಠನಾಗಿ ಮುಕ್ತಿಯನ್ನು ಹೊಂದುವನು ಎಂದು ಹೇಳಲ್ಪಟ್ಟಿತು.

ಪುರುಷಾರ್ಥಗಳಲ್ಲಿ ಅತ್ಯುತ್ತಮವಾಗಿ ನಿತ್ಯವಾಗಿರುವದು ಯಾವುದೆಂದರೆ ಪರಿಪೂರ್ಣಬ್ರಹ್ಮಾನುಭವವೂ ಮತ್ತು ಅವನಿಗೆ ಮಾಡುವ ದಾಸ್ಯವು. ಇದೇ ಮುಕ್ತಿ ಎಂಬುದು ಎಂದು ಹೇಳುತ್ತಾರೆ **ಪತ್ತು** - ವಿಷಯ ಸಂಬಂಧವು **ಅತ್ತದೆನಿಲ್** - ಬಿಟ್ಟುಹೋದರೆ, **ಉಯಿರ್** - ಪರಿಶುದ್ಧವಾದ ಜ್ಞಾನೈಕಾಕಾರದಿಂದ

(೧) ಭಾರತ ಶಾನ್ತಿ ೩೪೮-೮೧,

**ಭಗವದನುಭವಂ ನಿತ್ಯಮ್ ; ಕೈವಲ್ಯ ಮನಿತ್ಯ ಮಿತಿ ನಮ್ಮಾಳ್ವಾರ್ ಪಾಶುರ ಮುದಾಹರತಿ.**

---

**(೧) "ಮನ್ನುರಿಲ್" ಎನ್ರು ಭಗವದನುಭವತ್ತೈ ನಿತ್ಯಮೆನ್ಗೈಯಾಲುಮ್**

**ಭಗವದನುಭವವು ನಿತ್ಯವು ಕೈವಲ್ಯ ಮನಿತ್ಯವು ಎಂಬುದಕ್ಕೆ ನಮ್ಮಾಳ್ವಾರ್ ಪಾಶುರವನ್ನು ಉದಾಹರಿಸುತ್ತಾರೆ.**

---

(೧) ಈ ಪೂರಾ ಪಾಶುರವು ಯಾವುದೆಂದರೆ ?

**ಅತ್ತದು ಪತ್ತೆನಿಲ್ | ಉತ್ತದು ವೀಡುಯಿರ್ |**
**ಶೆತ್ತದು ಮನ್ನುರಿಲ್ | ಅತ್ತಿರೆ ಪತ್ತೇ ||೫||**

ಶೋಭಿಸುವ ಆತ್ಮತತ್ವವು. **ವೀಡು** - ಕೈವಲ್ಯವೆಂಬ ಮೋಕ್ಷವನ್ನು **ಉತ್ತದು** - ಹೊಂದುವದು. ಪ್ರಕೃತಿಸಂಬಂಧದಿಂದ ಜ್ಞಾನತಿರೋಹಿ ತತ್ವವನ್ನು ಐಶ್ವರ್ಯಾನುಭವದಲ್ಲೇ ಮಮತೆ ಹೆಚ್ಚಿ ಇನ್ನೂ ಹೆಚ್ಚಿನ ಐಶ್ವರ್ಯದಲ್ಲಿ ಕಾಮನೆಯುಂಟಾಗುತ್ತದೆ. ಹೇಗೆಂದರೆ—"**ದರಿದ್ರಃ ಪ್ರಾರ್ಥಯತ್ಯರ್ಥ ಮರ್ಥವಾ ರಾಜಮಿಚ್ಛತಿ | ರಾಜಾ ಚ ಪೃಥಿವೀಶತ್ವಂ ಪೃಥ್ವೀಶಚಕ್ರವರ್ತಿತಾಮ್ ಇನ್ದ್ರತ್ವಂ ಚಕ್ರವರ್ತೀ ಚ ಸ ಚಾಸ್ಮಾದ್ಬ್ರಹ್ಮಣಃ ಪದಮ್ | ತಸ್ಮಾದಪಿ ಪುನಸ್ತಾಸ್ಮಾತ್ ತಸ್ಮಾದಪಿ ಪುನಃ ಪುನಃ | ತಸ್ಮಾದುರನ್ತಾಂ ದುಷ್ಪೂರಾಂ ತ್ಯಜ ತೃಷ್ಣಾ ಮಿಮಾಂ ದ್ವಿಜ||**" ಎಂಬಲ್ಲಿ ಹೇಳಿರುವ ಹಾಗೆ ಹೆಚ್ಚಿನ ಐಹಿಕೈಶ್ವರ್ಯ ಸ್ವರ್ಗೈಶ್ವರ್ಯ ಪುನಃ ಪುನಃ ಸಂಸಾರಪ್ರಾಪ್ತಿ ಹೀಗಾಗುವದರಿಂದ ತೃಷ್ಣೆಯನ್ನು ನೀಗಿಕೊಂಡರೆ, ಕೈವಲ್ಯಪ್ರಾಪ್ತಿಯುಂಟಾಗುತ್ತದೆಂಬ ಭಾವವು ; **ಅದು ಶೆತ್ತು** - ಆ ಕೈವಲ್ಯವೆಂಬ ಮೋಕ್ಷವನ್ನು ಬಿಟ್ಟರೆ ಎಂದರೆ ಆ ಆತ್ಮಾನುಭವಕ್ಕಿಂತಲೂ ಹೆಚ್ಚಿನ ಶಾಶ್ವತ ಪುರುಷಾರ್ಥ ಉಂಟೆಂಬ ಜ್ಞಾನ ಉಂಟಾದಳೆ, **ಮಱು ಉರಿಲ್** - ಅಂತಹ ಅದ್ವಿತೀಯವಾದ ಶಾಶ್ವತವಾದ ಪುರುಷಾರ್ಥವನ್ನು ಹೊಂದಬೇಕಾದರೆ, **ಅತ್ತು** - ಎಲ್ಲಾ ಸಂಗವನ್ನೂ ಬಿಟ್ಟು, **ಇರೈ** - ಸರ್ವೇಶ್ವರನನ್ನೇ, **ಪತ್ತೇ** - ಆಶ್ರಯಿಸತಕ್ಕದ್ದಾಗಿರುತ್ತದೆ. ಅಥವಾ, **ಮನ್ನುರಿಲ್** - ಸ್ಥಿರವಾದ ಪದವು, ಬೇಕಾಗಿದ್ದರೆ, **ಅತ್ತು** - ತಾನು ಶೇಷಭೂತನೆಂಬ ದೃಢಸಂಬಿಕೆಯನ್ನು ಹೊಂದಿ, **ಇರೈ** - ಈಶ್ವರನನ್ನು, **ಪತ್ತಿ** - ಆಶ್ರಯಿಸಿ, **ಅರು** - ವಿಷಯದಲ್ಲಿ ಅನುರಾಗವನ್ನು ಕತ್ತರಿಸಿ ಹಾಕು" **ಎನ್ರು** - ಎಂಬದಾಗಿ, ಎಂಬಲ್ಲಿ, **ಭಗವದನುಭವತ್ತೈ** - ಭಗವದನುಭವವನ್ನು, **ನಿತ್ಯಮೆನ್ಗೈಯಾಲುಮ್** - ಶಾಶ್ವತವಾದ ಅತಿಶಯಿತವಾದ

---

(೧) ಮರು, ೧. ೨. ೫.

**ಇದುಕ್ಕು ವ್ಯವಚ್ಛ್ಯೇದ್ಯಮಾಗ ಚ್ಚೊಲ್ಲುಮ್ ಆತ್ಮಮಾತ್ರಾನುಭವಮ್ ನಿತ್ಯಮನ್ರೆನ್ನು ಮಿಡಂ ವ್ಯಂಜಿತಮ್.**

**ತರ್ಹಿನಾಶರಾಹಿತ್ಯ ಪ್ರತಿಪಾದಕಗಾಥಾ ವಿರೋಧ ಇತ್ಯತ್ರಾಹ**

---

**ಇದುಕ್ಕು (೧) "ಇರುದಿಕೂಡಾ" ಇತ್ಯಾದಿಗಳಿಲ್ ನಾಶಮಿಲ್ಲೇ ಎಙ್ಗರ ಪಾಶುರಮುಮ್, ಚಾತುರ್ಮಾಸ್ಯಾದಿ ಕರ್ಮಫಲ ವಿಶೇಷಙ್ಗಳಿಲ್ ಅಕ್ಷಯ್ಯತ್ವೋಕ್ತಿ ಪೋಲೇ (೨) "ಎನ್ನೈಯೂಳಿ" ಎಙ್ಗರ ಅತಿಚಿರಕಾಲಸ್ಥಾಯಿತ್ವಾಭಿಪ್ರಾಯಮುಮ್.**

---

ಪುರುಷಾರ್ಥವೆಂದು ಹೇಳಿರುವದರಿಂದಲೂ, **ಇದಕ್ಕುವ್ಯವಚ್ಛೇದ್ಯಮಾಗ ಚೊಲ್ಲುಮ್** - ಭಗವದನುಭವಕ್ಕಿಂತ ಕೀಳಾದುದೆಂದು ವ್ಯವಚ್ಛೇದ್ಯಮಾಡಿ ಹೇಳಿರುವ **ಆತ್ಮಾನುಭವಮ್** - ಕೈವಲ್ಯವು, **ನಿತ್ಯಮನ್ರೆನ್ನುಮಿಡಮ್** - ನಿತ್ಯವಲ್ಲವೆಂಬ ಸ್ಥಳವು, **ವ್ಯಂಜಿತಮ್** - ವ್ಯಕ್ತವಾದುದು ಆಯಿತು.

**ಹಾಗಾದರೆ ಕೈವಲ್ಯಕ್ಕೆ ನಾಶರಾಹಿತ್ಯ ಹೇಳುವ ಪಾಶುರಾರ್ಥವಿರೋಧವೋ ಎಂದರೆ ಇಲ್ಲವೆನ್ನುತ್ತಾರೆ—**

---

**ಇದಕ್ಕು** - ಈ ಅಭಿಪ್ರಾಯಕ್ಕೆ ಅಥವಾ ಈ ಪಾಶುರಕ್ಕೆ, **(೧) "ಇರುದಿಕೂಡಾ"** - ನಾಶವು ಇಲ್ಲವು" **ಇತ್ಯಾದಿಗಳಿಲ್** - ಇವೇ ಮೊದಲಾದ ಪಾಶುರಗಳಲ್ಲಿ, **ನಾಶಮಿಲ್ಲೈ** - ಕೈವಲ್ಯಕ್ಕೆ ನಾಶವಿಲ್ಲವೆಂಬ **ಪಾಶುರಮೂ, ಚಾತುರ್ಮಾಸ್ಯಾದಿ ಕರ್ಮಫಲವಿಶೇಷಙ್ಗಳಿಲ್** - ಚಾತುರ್ಮಾಸ್ಯವೇ ಮೊದಲಾದ ಯಜ್ಞಫಲ ವಿಶೇಷಗಳಲ್ಲಿ, **ಅಕ್ಷಯತ್ವ** - ನಾಶರಹಿತತ್ವ **ಉಕ್ತಿಪೋಲೆ** - ಹೇಳಿರುವಹಾಗೆ **"ಎನ್ನೈಯೂಳಿ"** ಅನೇಕ ಕಾಲವರ್ತಿ, **ಎಙ್ಗಿರ** - ಎಂದು ಹೇಳುವ, **ಅತಿಚಿರಕಾಲಸ್ಥಾಯಿತ್ವಾಭಿಪ್ರಾಯಮುಮ್** - ಅಲ್ಲಿ ಬಹುಕಾಲ ಸ್ಥಿರವಾಗಿ ಕೈವಲ್ಯದಲ್ಲಿರುವನು ಎಂಬ ತಾತ್ಪರ್ಯವು. ನಮ್ಮಾಳ್ವಾರ್ರವರು **ಇರುದಿಕೂಡಾ** ಎಂದರೆ ನಾಶರಹಿತ್ಯವು ಕೈವಲ್ಯದಲ್ಲಿ ಉಂಟೆಂದು ಹೇಳಿದುದು ಬಹುಕಾಲ ಅಲ್ಲಿ ಇರುತ್ತಾನೆಂಬ ಅಭಿಪ್ರಾಯದಿಂದ ಹೇಳಿದರೇ ವಿನಾ, ಅಲ್ಲಿಯೇ ನಿತ್ಯವಾಗಿ ಇದ್ದುಬಿಡುವನೆಂಬ ಅಭಿಪ್ರಾಯದಿಂದ ಹೇಳಲಿಲ್ಲವು. ಇದಕ್ಕೆ ಒಂದು ದೃಷ್ಟಾಂತರನನ್ನು ಕೊಟ್ಟರು; ಏನೆಂದರೆ ಚಾತುರ್ಮಾಸ್ಯ ಕರ್ಮಫಲದಲ್ಲಿ ಹೇಳಿರುವದೇನೆಂದರೆ ? **"ಅಕ್ಷಯ್ಯಂಹವೈ ಚಾತುರ್ಮಾಸ್ಯಯಾಜಿನ ಸ್ಸುಕೃತಂ ಭವತಿ"** ಚಾತುರ್ಮಾಸ್ಯ ಯಜ್ಞಾನುಷ್ಠಾತೃಗಳಿಗೆ ಉಂಟಾಗುವ ಸುಕೃತವು **ಅಕ್ಷಯುವಾದುದು** ಎಂದು ಹೇಳಿರುತ್ತದೆ.

---

(೧) ತಿರು. ೬. ೯. ೧೦ (೧) ತಿರು ೬. ೯. ೧೦

ಅಕ್ಷಯಶಬ್ದದಿಂದ ಹೇಳಲ್ಪಟ್ಟಿದುದು ಆ ಸುಕೃತವು ತುಂಬಾ ಕಾಲವನುಸರಿಸಿ ಬರುವಂತಾದ್ದು ಎಂದು ಹೇಗೆ ಅರ್ಥಮಾಡಿರುತ್ತಾರೋ, ಹಾಗೆಯೇ ನಮ್ಮಾಳ್ವಾರವರಿಗೆ ಕೈವಲ್ಯದಲ್ಲಿ ಸ್ವಾತ್ಮಾನುಭವವು ಚಿರಕಾಲವಿರುವಂತಾದ್ದೆಂಬ ಅಭಿಪ್ರಾಯವು. **"ಇರುದಿಕೊಡಾ"** ಎಂಬ ಪೂರಾಪಾಶುರವು ಯಾವುದೆಂದರೆ ?

**"ಕುರುಕಾ ನೀಳಾ ಇರುತಿಕೂಡಾ ವೆನ್ನೈಯೂಳಿ । ಚ್ಚಿರುಕಾ ಪೆರುಕಾ ವಳವಿನ್ಪ ಇನ್ಪ್ಪೇರ್ನ್ನಾಲುಮ್ । ಮುರು ಕಾಲಿನ್ರಿಮಾಯೋ ನುನಕ್ಕೇಯಾಳಾಗು। ಇನ್ಪ್ರುಕಾಲತ್ತೈಯುರುವೋ ವನ್ದೋ"** ಎಂಬುದು. ಇದರಲ್ಲಿ ಕೈವಲ್ಯದಲ್ಲಿ ಉಂಟಾಗುವ ಆನಂದಕ್ಕೂ ಪರಿಪೂರ್ಣ ಬ್ರಹ್ಮಾನಂದಕ್ಕೂ ಇರುವ ವೈಲಕ್ಷ್ಯವನ್ನು ನಿಪುಣತರವಾಗಿ ಹೇಳುತ್ತಾರೆ. ಐಹಿಕಾದಿ ಐಶ್ವರ್ಯಗಳು, ಅಶಾಶ್ವತವೆಂದು ಹೇಳಿದುದರಿಂದ ಬೇಡವೆಂದಾಯಿತು. ಹೋಗಲಿ, ಆತ್ಮಾನುಭವಾನಂದವು ಏಕೆ ಕೂಡದು ? ಅದು ಒಂದು ವೇಳೆ **ಕುರುಕಾ ನೀಳಾ** - ಸಂಕೋಚವಿಕಾಸಗಳು ಮತ್ತು **ಇರುತಿ** - ನಾಶವು ಕೂಡಾ - ಇಲ್ಲದೆ ಇದ್ದರೂ, **ಎನ್ನೈಯೂಳಿ** - ಬಹು ಕಾಲ ನಿತ್ಯವಾಗಿ ಅನುಭವವಿದ್ದರೂ **ಶಿರುಕಾ ಪೆರುಕಾ** - ಪದಾಕ್ಷಯ ವೃದ್ಧಿಗಳು ಇಲ್ಲದೆ, ಅವಧಿರಹಿತವಲ್ಲದೆಯೂ ಇದ್ದರೂ **ಇನ್ಬಮ್** - ಆತ್ಮಾನುಭವವು (ಕೈವಲ್ಯವು) **ಚೇರ'ನ್ಪಾಲುಮ್** - ಹೊಂದಿದ್ದರೂ, ಇಂತಹ ಆತ್ಮಾನುಭವವನ್ನು ಅನೇಕ ಕಾಲ ಹೊಂದಿದ್ದರೂ ಅಂತಹ ಆನಂದವು ಪರಿಪೂರ್ಣ ಬ್ರಹ್ಮಾನುಭವದಿಂದ ಕೂಡಿದ ಒಂದು ಕ್ಷಣಕಾಲದ ದಾಸ್ಯರಸಕ್ಕೆ ಸಮನಾದೀತೇ ಎಂದು ಕೈವಲ್ಯವನ್ನು ಜರಿಯುತ್ತಾರೆ. **ತೆರಿಯಿಲ್** - ಚನ್ನಾಗಿ ಪರಿಶೀಲಿಸಿದರೆ, **ಮುರು ಕಾಲ'ಯಿನ್ರಿ** - ಹಿಂದೆ ಒಂದು ಕಾಲದಲ್ಲೂ ಇಲ್ಲದೆ, **ಉನಕ್ಕೇ ಅಳಾಗುಮ'** - ನಿನಗೇ ಶೇಷಭೂತನಾಗಿ ದಾಸವೃತ್ತಿಯನ್ನು ಆಚರಿಸುವ, **ಶಿರುಕಾಲತ್ತೈ** - ಅತ್ಯಲ್ಪಕಾಲಕ್ಕೆ **ಅಂದೋ** - ಅಯ್ಯೋ, **ಉರುವೋ** - ಸಮಾನವೇ ? ಎಂದಿಗಾದರೂ ಸಮಾನವಾದೀತೇ ಎಂಬ ಭಾವವು. ಅದೇನು ಹಾಗೆ ಎಂದರೆ ನೀನು **ಮಾಯೋ**- ನೀನು ಆಶ್ಚರ್ಯಕಲ್ಯಾಣಗುಣ ವಿಭೂಷಣನು, ಪರಮಾನಂದಕರವಾದ ಲಾವಣ್ಯ ಶೋಭಾಯುಕ್ತನು. ನಿನ್ನ ಹಾಗೆಯೇ ದಿವ್ಯ ಮಂಗಳವಿಗ್ರಹಯುಕ್ತಳಾದ ಲಕ್ಷ್ಮಿಯೊಂದಿಗೆ ಇರುವವನು, ಇಂತಹ ಕ್ಷಣಕಾಲಾನುಭವವಾದರೂ ಆ ಆತ್ಮಾನುಭವ ಸುಖವೂ ಬಹುಕಾಲ ಏನೊಂದೂ ಸಂಕೋಚಾದಿಗಳಿಲ್ಲದೆ ಅನುಭವಿಸಿದರೂ ಇಂತಹ ಶ್ರಿಯಃಪತಿಗೆ ಶೇಷಭೂತನಾಗಿ ದಾಸ್ಯವನ್ನು ಮಾಡುವ ಬ್ರಹ್ಮಾನಂದದ ಒಂದು ಕ್ಷಣಕಾಲಕ್ಕೆ ಈಡಾದೀತೇ ಎಂಬ ಭಾವವು. ಈ ಪಾಶುರದಲ್ಲಿ **ಎನ್ನೈಯೂಳಿ** - ಎಂಬುದರಿಂದ ಕೈವಲ್ಯಾನಂದವು ನಿತ್ಯವೆಂದು ಹೇಳಲಿಲ್ಲವು. ಬಹುಕಾಲ ಸಾವಿರಾರು ವರ್ಷದ ಅನುಭವವೂ ಪರಿಪೂರ್ಣಬ್ರಹ್ಮಾನುಭವದ ಕ್ಷಣಕಾಲಕ್ಕೆ ಸಮವಾಗಲಾರದೆಂದು ಹೇಳಲ್ಪಟ್ಟಿತು.

## ಕೇವಲಾನಾಂಸ್ಥಾನಾತ್ ಬ್ರಹ್ಮೋಪಾಸಕಾನಾಂ ಸ್ಥಾನಂಭಿನ್ನಮಿತಿ ಪ್ರಮಾಣಂ ದರ್ಶಯತಿ

**(೧) "ಯೋಗಿನಾ ಮಮೃತಂ ಸ್ಥಾನಂ ಸ್ವಾತ್ಮಸಂತೋಷ ಕಾರಿಣಾಮ್'' ಎನ್ರು ಇವ್ವಾತ್ಮಾನುಭವಸ್ಥಾನವಿಶೇಷಮುಮ್ ಶೊಲ್ಲಪ್ಪಟ್ಟದು. ಇ ಸ್ಥಾನ ವಿಶೇಷಮ್ ಪರಮಪದ ಮನ್ರೆನ್ನು ಮಿಡಮ್ ಇ ಪ್ರಕರಣಂ ತನ್ನಿಲೇ (೨) ಏಕಾನ್ತಿನ ಸ್ಸದಾ ಬ್ರಹ್ಮಧ್ಯಾಯಿನೋ ಯೋಗಿನೋ ಹಿ ಯೇ। ತೇಷಾಂ**

---

## ಕೈವಲ್ಯಕ್ಕಿಂತ ಬ್ರಹ್ಮೋಪಾಸಕರ ಸ್ಥಾನವು ಭಿನ್ನವಾದುದೆಂಬುದಕ್ಕೆ ಪ್ರಮಾಣವನ್ನು ತೋರುತ್ತಾರೆ.

ಶ್ರೀ ಪರಾಶರರು ವಿಷ್ಣುಪುರಾಣದಲ್ಲಿ ಕೈವಲ್ಯವನ್ನು **ಅಮೃತಂ ಸ್ಥಾನಮ್'** ಎಂದು ಹೇಳಿರುವದರಿಂದ, ಅದೂ ನಿತ್ಯವಿಭೂತಿಯಲ್ಲೇ ಸೇರಿದ ಒಂದು ಸ್ಥಾನವೋ ಎಂಬ ಸಂದೇಹದಲ್ಲಿ, ಅದು ನಿತ್ಯವಿಭೂತಿಗೆ ಬಹಿಯಲ್ಲೇ ಒಂದು ಸ್ಥಾನವೆಂದೂ, ನಿತ್ಯಸೂರಿಗಳಿಗೂ ಮುಕ್ತರಿಗೂ ದೃಶ್ಯವಾದ ಸ್ಥಾನವೆಂದೂ, ಆ ಮಹರ್ಷಿಯೇ ಮುಂದೆ ಹೇಳುತ್ತಾರೆಂದು ಅವರ ವಾಕ್ಯಗಳನ್ನು ಉದಾಹರಿಸುತ್ತಾರೆ. **(೧) "ಯೋಗಿನಾಂ** - ಪರಿಶುದ್ಧಾತ್ಮಪ್ರಾಪ್ತಿಗಾಗಿ ಉಪಾಸಿಸುವ ಕೇವಲರಿಗೆ, ಅವರು ಎಂತವರೆಂದರೆ, **ಸ್ವಾತ್ಮಸಂತೋಷಕಾರಿಣಾಮ್'** - ತನ್ನ ಆತ್ಮಾವಿಗೆ ಆನಂದವನ್ನುಂಟು ಮಾಡುವವರಿಗೆ, **ಅಮೃತಮ್ ಸ್ಥಾನಮ್** - ಪುನರಾವೃತ್ತಿಯಿಲ್ಲದ ಒಂದು ಸ್ಥಾನವು. ಹಾಗೆಯೇ ಗೀತೆಯಲ್ಲೂ ಮತ್ತು ಛಾಂದೋಗ್ಯದಲ್ಲೂ ಕೇವಲರಿಗೆ ಪುನರಾವೃತ್ತಿಯಿಲ್ಲವೆಂದು ಹೇಳಿರುವದರಿಂದ **ಅಮೃತಂ ಸ್ಥಾನಮ್'** ಎಂದು ಹೇಳಲ್ಪಟ್ಟಿತು. ಆದರೆ ಆ ಸ್ಥಾನವು ನಿತ್ಯವಿಭೂತ್ಯಂತರ್ಗತವಾದುದಲ್ಲವೆಂದು ಮುಂದೆ ಹೇಳುತ್ತಾರೆ. ಇಲ್ಲಿ ನಾವು ಗ್ರಹಿಸತಕ್ಕದ್ದೇನೆಂದರೆ ತಿಳಿಸುತ್ತಾರೆ - **ಎನ್ರು** - ಎಂಬದಾಗಿ, **ಇವ್ವಾತ್ಮಾನುಭವಸ್ಥಾನ ವಿಶೇಷಂ ಶೊಲ್ಲಪ್ಪಟ್ಟದು** - ಪರಿಶುದ್ಧಾತ್ಮಪ್ರಾಪ್ತಿಗಾಗಿ ಉಪಾಸನೆಯನ್ನು ಮಾಡಿದುದರಿಂದ ತತ್ಕ್ರತುನ್ಯಾಯದ ಪ್ರಕಾರ ಈತನಿಗೆ ಒಂದು ಸ್ಥಾನವಿಶೇಷದಲ್ಲಿ ಆತ್ಮಾನುಭವದ ಪ್ರಾಪ್ತಿಯುಂಟಾಗುತ್ತದೆ. **ಇ ಸ್ಥಾನವಿಶೇಷಮ್** - ಈ ಕೈವಲ್ಯವೆಂಬ ಸ್ಥಾನವಿಶೇಷವು" **ಪರಮಪದ ಮನ್ರೆನ್ನುಮಿಡಮ್** - ಪರಮಪದವಲ್ಲವೆಂಬುದಕ್ಕೆ, **ಇಪ್ಪ್ರಕರಣಂ ತನ್ನಿಲ್** - ಇದೇ ಪ್ರಕರಣದಲ್ಲೇ ಮುಂದಿನ ಶ್ಲೋಕದಲ್ಲೇ ಆ ಮಹರ್ಷಿಯೇ ಹೇಳಿರುವದೇನೆಂದರೆ ತಿಳಿಸುತ್ತಾರೆ— **ಏಕಾನ್ತಿನಃ** - ಐಕಾನ್ತ್ಯ ಭಕ್ತಿಯುತರಾಗಿ,

---

(೧) ವಿಷ್ಣು. ಪು. ೧. ೬. ೮೮ (೨) ವಿ. ಪು. ೧. ೬. ೮೯

**ತತ್ಪರಮಂ ಸ್ಥಾನಂ ಯದ್ವೈ ಪಶ್ಯನ್ತಿಸೂರಯಃ" ಎನ್ರು ಭಗವತ್ಪ್ರಾಪ್ತಿ ಕಾಮನಾನ ಪರಮ್ಮೈಕಾನ್ತಿಕ್ಕು ಸೂರಿದೃಶ್ಯಮಾನ ಸ್ಥಾನಾನ್ತರಮ್ ಶೊಲ್ಲು ಕೈಯಾಲೇ ಸಿದ್ಧಮ್.**

---

**ಸದಾ** - ಯಾವಾಗಲೂ, **ಬ್ರಹ್ಮಧ್ಯಾಯಿನಃ** - ಪರಮಪುರುಷನನ್ನು ಉಪಾಸಿಸುವರಾಗಿ, **ಯೇ** - ಯಾವ, **ಯೋಗಿನೋಹಿ** - ಯೋಗಿಗಳಿದ್ದಾರೋ, **ತೇಷಾಂ** - ಅಂತವರಿಗೆ, **ತತ್ಪರಮಂ ಸ್ಥಾನಮ್** - ಆ ಪ್ರಸಿದ್ಧವಾದ ಅದಕ್ಕಿಂತಲೂ ಉತ್ಕೃಷ್ಟವಾದುದು ಇಲ್ಲದಿರುವ ಶ್ರೇಷ್ಠವಾದ **ಸ್ಥಾನವು, ನಿತ್ಯವಿಭೂತಿಯು** ಎಂಬರ್ಥವು. ಅದು ಎಂತಾದ್ದೆಂದು ಶ್ರುತಿಯಲ್ಲಿ ಹೇಳಲ್ಪಟ್ಟಿದೆ ಎಂದರೆ **ಯದ್ವೈ ಪಶ್ಯನ್ತಿಸೂರಯಃ - "ತದ್ವಿಷ್ಣೋಃ ಪರಮಂ ಪದಮ್' ಸದಾ ಪಶ್ಯನ್ತಿ ಸೂರಯಃ ದಿವೀವ ಚಕ್ಷುರಾತತಮ್' ತದ್ವಿಪ್ರಾಸೋ ವಿಪನ್ಯವೋ ಜಾಗ್ರವಾಗ್ಂಸಮಿಂಧತೇ ವಿಷ್ಣೋರ್ಯತ್ಪರಮಂಪದಮ್'"** ಅಲ್ಲಿ ನಿತ್ಯಸೂರಿಗಳು ಮುಕ್ತರೂ ಪರವಾಸುದೇವ ರೂಪಿಯಾದ ಶ್ರಿಯಃಪತಿಯನ್ನು ನೋಡುತ್ತಾ ಪರಮಾನಂದವನ್ನು ಹೊಂದುತ್ತಾರೆ. ಆ ನಿತ್ಯಸೂರಿಗಳು ಎಂತವರೆಂದರೆ **ವಿಪ್ರಾಸಃ** - ಮೇಧಾವಿಗಳಾಗಿ, **ಜಾಗೃವಾಂಸಃ** - ಭ್ರಮಜ್ಞಾನಗಳೊಂದೂ ಇಲ್ಲದವರು ಇಂತವರು, ಯಾವ ಪರಮಪದವೋ ಅದನ್ನು **ವಿಪನ್ಯವಃ** - ಸ್ತೋತ್ರ ಮಾಡುವವರಾಗಿ **ಸಮಿಂಧತೇ** - ಪ್ರಕಾಶಿಸುವರೋ ಅದು ವಿಷ್ಣುವಿನ ಪರಮಪದವು, **ಎನ್ರು** - ಎಂಬದಾಗಿ, **ಭಗವತ್ಪ್ರಾಪ್ತಿಕಾಮನಾನ** - ಭಗವಂತನನ್ನೇ ಪ್ರಾಪ್ಯವಾಗಿ ಹೊಂದಬೇಕೆಂಬ ಅಪೇಕ್ಷೆಯುಳ್ಳ, **ಪರಮ್ಮೈಕಾನ್ತಿಗೆ - ಸೂರಿದೃಶ್ಯಮಾನ** - ನಿತ್ಯಸೂರಿಗಳಿಂದ ಅನುಭವಿಸಲ್ಪಡುತ್ತಿರುವ, **ಸ್ಥಾನಾನ್ತರಮ್** - ಕೈವಲ್ಯಕ್ಕಿಂತ ಬೇರೆಯಾದ ಸ್ಥಾನವು ವೈಕುಂಠವೆಂದು, **ಶೊಲ್ಲುಗೈಯಾಲೇ** - ಈ ಪ್ರಮಾಣವು ಹೇಳುವದರಿಂದ, **ಸಿದ್ಧಮ್** - ಕೈವಲ್ಯವೇ ಬೇರೇ ಪರಮ ಪದವೇ ಬೇರೆ ಎಂಬುದು ಸ್ಥಾಪಿತವು. **ಇ ಸ್ಥಾನವಿಶೇಷಮ್' ಪರಮಪದ ಮನ್ರೆನ್ನುಮಿಡಮ್'** ಎಂಬುದು ಇದಕ್ಕೆ ಕರ್ತೃಪದವು.

### ಜಿಜ್ಞಾಸು ಶಬ್ದದಿಂದ ಬೋಧಿತ ಪಂಚಾಗ್ನಿವಿದ್ಯಾನಿಷ್ಠ ಕೇವಲನಿಗೆ ಅರ್ಚಿರಾದಿಗತಿ ಅಪುನರಾವೃತ್ತಿ ಎಂದು ಶ್ರೀ ಭಾಷ್ಯಕಾರೋಕ್ತಿಯು ಇರುವಾಗ ಕೈವಲ್ಯವು ಅನಿತ್ಯವು ಹೇಗೆ ?

---

ಜಿಜ್ಞಾಸುವೆಂದು ಗೀತೆಯಲ್ಲಿ ಹೇಳಿರುವ ಕೇವಲನು ಪಂಚಾಗ್ನಿವಿದ್ಯಾನಿಷ್ಠನು. ಆತನು ಸ್ವಾತ್ಮಶರೀರಕ ಪರಬ್ರಹ್ಮೋಪಾಸಕನು. ಆತನಿಗೆ, ಗೀತೆಯಲ್ಲೂ, ಛಾಂದೋಗ್ಯದಲ್ಲೂ ಅರ್ಚಿರಾದಿಗತಿ ಮತ್ತು ಬ್ರಹ್ಮಪ್ರಾಪ್ತಿಯೂ ಹೇಳಿರು

**ಪಂಚಾಗ್ನಿವಿದ್ಯಾನಿಷ್ಠಾನಾಂ ಕೇವಲಾನಾಂ ಅರ್ಚಿರಾದಿಗತಿಂ ಅಪುನರಾವೃತ್ತಿಂ ಚ ಶ್ರೀ ಭಾಷ್ಯಕಾರೋಕ್ತೇಃ, ಕಥಮ್ ಕೈವಲ್ಯಾಮನಿತ್ಯತ್ವಮಿತ್ಯತ್ರಾಹ.**

---

**ಪಂಚಾಗ್ನಿವಿದ್ಯಾದಿಗಳಿಲ್ ಚೊನ್ನ ಬ್ರಹ್ಮಾತ್ಮಕ ಸ್ವಾತ್ಮಾನುಸಂಧಾನನು' ಪಣ್ಣುವಾರ್ಕ್ಕು ಭಾಷ್ಯಾದಿಗಳಿಲೇ ಅರ್ಚಿರಾದಿಗತಿಯುಮ್' ಬ್ರಹ್ಮಪ್ರಾಪ್ತಿಯುಮ್ ಶೊಲ್ಲಪಟ್ಟದು. ಆಗೈಯಾಲ್' ಇಪ್ಪಂಚಾಗ್ನಿವಿದ್ಯಾನಿಷ್ಠರ್ಕ್ಕು ಆತ್ಮಮಾತ್ರಾನುಭವರೂಪಮಾನ ಅವಾಂತರ ಫಲಮ್ ವಸ್ವಾದಿಗಳುಮ್ ಮಧುವಿದ್ಯಾನ್ಯಾಯತ್ತಾಲೇ ಬ್ರಹ್ಮಪ್ರಾಪ್ತಿ ಪರ್ಯನ್ತಮಾಯ್' ವಿಡುಮ್'.**

---

ತ್ತದೆ ಎಂದು ಶ್ರೀ ಯತಿವರ್ಯರು ಅಭಿಪ್ರಾಯಪಟ್ಟಿರುತ್ತಾರೆ. ಇದು ಈಗ ಕೈವಲ್ಯವು ಅನಿತ್ಯವೆಂದು ಸ್ಥಾಪಿಸಿದುದಕ್ಕೆ ವಿರೋಧವೋ ಎಂದರೆ ಎಂದಿಗೂ ಇಲ್ಲವೆಂದು ಹೇಳುತ್ತಾರೆ. ಈ ಪಂಚಾಗ್ನಿವಿದ್ಯಾನಿಷ್ಠನಿಗೂ ಒಂದು ಸ್ಥಾನವಿಶೇಷದಲ್ಲಿ ಸ್ವಾತ್ಮಾನುಭವವೂ, ಮಧುವಿದ್ಯಾನಿಷ್ಠನಿಗೆ ವಸ್ವಾದಿಲೋಕಪ್ರಾಪ್ತಿ ಹೇಗೋ ಮತ್ತು ಪ್ರತರ್ದನ ವಿದ್ಯಾನಿಷ್ಠನಿಗೆ ಇಂದ್ರಲೋಕ ಪ್ರಾಪ್ತಿ ಹೇಗೋ ಹಾಗೆಯೇ ಪ್ರಾಪ್ತವಾಗಿ, ಅನಂತರ ಕ್ರಮೇಣ ಅರ್ಚಿರಾದಿ ಮಾರ್ಗ ಮತ್ತು ಬ್ರಹ್ಮಪ್ರಾಪ್ತಿ ಉಂಟಾಗುವದರಿಂದ ಕೈವಲ್ಯವು ಅನಿತ್ಯವೆಂಬುದರಲ್ಲಿ ಸಂದೇಹವಿಲ್ಲವೆನ್ನುತ್ತಾರೆ. ಅಥವಾ ಅರ್ಚಿರಾದಿ ಮಾರ್ಗ ಮಧ್ಯದಲ್ಲೇ ಎಲ್ಲಿಯಾದರೂ ನಿಂತು ಸ್ವಾತ್ಮಾನುಭವ ಪ್ರಾಪ್ತಿಯುಂಟಾಗಿ ಅಲ್ಲಿಂದ ಮುಂದಕ್ಕೆ ಹೋದರೂ ಹೋಗಬಹುದೆಂದು ತಾತ್ಪರ್ಯ ಚಂದ್ರಿಕೆಯಲ್ಲಿ ಹೇಳಿರುತ್ತಾರೆ.

**ಪಂಚಾಗ್ನಿವಿದ್ಯಾದಿಗಳಿಲೇ** – ಪಂಚಾಗ್ನಿವಿದ್ಯಾ, ಆದಿ ಶಬ್ದದಿಂದ ಮಧುವಿದ್ಯಾ, ಪ್ರತರ್ದನ ವಿದ್ಯೆಗಳು ಹೇಳಲ್ಪಟ್ಟವು; ದಹರ ವಿದ್ಯಾ ಮೊದಲಾದ ಜ್ಞಾನಿಯು ಅನುಷ್ಠಿಸುವ ವಿದ್ಯೆಗಳಿಗೆ, ಇವುಗಳಿಂದ ನೆಟ್ಟಗೆ ಎಲ್ಲಿಯೂ ನಿಲ್ಲದೆ ಅರ್ಚಿರಾದಿಗತಿಯೂ ಬ್ರಹ್ಮಪ್ರಾಪ್ತಿಯೂ; ಇನ್ನೂ ಕೆಲವು ಉಪಾಸನಗಳಲ್ಲಿ ನೆಟ್ಟಗೆ ಬ್ರಹ್ಮಪ್ರಾಪ್ತಿಯು ಇಲ್ಲವು; ಸ್ವಲ್ಪಕಾಲ ಬೇರೆ ಲೋಕಪ್ರಾಪ್ತಿಯುಂಟಾಗಿ, ಅಲ್ಲಿಂದ ಪುನರಾವೃತ್ತಿಯಿಲ್ಲದೆ **ಅರ್ಚಿರಾದಿಗತಿಯೂ ಬ್ರಹ್ಮಪ್ರಾಪ್ತಿಯೂ ಶೊಲ್ಲಪಟ್ಟದು**-ಹೇಳಲ್ಪಟ್ಟವು. **ಆಗೈಯಾಲ್'** – ಆದುದರಿಂದ, **ಇಪ್ಪಂಚಾಗ್ನಿವಿದ್ಯಾನಿಷ್ಠರ್ಕ್ಕು** – ಜಿಜ್ಞಾಸು ಶಬ್ದದಿಂದ ಹೇಳಲ್ಪಟ್ಟ ಪಂಚಾಗ್ನಿವಿದ್ಯಾನಿಷ್ಠರಿಗೆ, **ಆತ್ಮಮಾತ್ರಾನುಭವರೂಪಮಾನ ಅವಾಂತರ ಫಲಮ್'**-ಅವರುಗಳು ತಮ್ಮ ಆತ್ಮ ಪರಮಾತ್ಮ ಶರೀರವೆಂದು ತಿಳಿದು ಪರಿಶುದ್ಧಾತ್ಮ ಸ್ವರೂಪಪ್ರಾಪ್ತಿಗಾಗಿ ಉಪಾಸಿಸುವದರಿಂದ ತತ್ಕ್ರತುನ್ಯಾಯದ ಪ್ರಕಾರ ಆತ್ಮಾನುಭವರೂಪವಾದ ಮಧ್ಯದಲ್ಲೊಂಟಾ

ಗುವ ಫಲವು, **ವಸ್ವಾಲುಮ್'** – ಉಂಟಾದರೂ, **ಮಧುವಿದ್ಯಾನ್ಯಾಯತ್ತಾಲೇ** – ಮಧುವಿದ್ಯಾನ್ಯಾಯದ ಪ್ರಕಾರ ಎಂದರೆ ಮಧುವಿದ್ಯಾನಿಷ್ಠನಿಗೆ ವಸ್ವಾದಿಲೋಕ ಪ್ರಾಪ್ತಿ ಕೆಲವು ಕಾಲ ಉಂಟಾಗಿ ಅನಂತರ ಪುನರಾವೃತ್ತಿಯಿಲ್ಲದೆ ಬ್ರಹ್ಮಪ್ರಾಪ್ತಿಯು ಹೇಗೋ ಹಾಗೆಯೇ, **ಬ್ರಹ್ಮಪ್ರಾಪ್ತಿ ಪರ್ಯನ್ತಮಾಯ್' ವಿಡುಮ್'** – ಕ್ರಮೇಣ ಪರಿಪೂರ್ಣ ಬ್ರಹ್ಮಾನುಭವದವರೆಗೂ ಸಿದ್ಧಿ ಉಂಟಾಗುವದು. ಈ ವಿಷಯದಲ್ಲಿ ಸವಿಸ್ತಾರವಾದ ಉಪಪಾದನೆಗೆ ದಾಸನು ಭಗವದ್ಗೀತಾದ್ವಿತೀಯಷಟ್ಕದ ೯೮೪-೯೯೪ ನೆಯ ಪುಟಗಳನ್ನು ಪರಾಂಬರಿಸಿ. ಅಲ್ಲಿ ಈ ವಿದ್ಯೆಗೆ ಪಂಚಾಗ್ನಿ ವಿದ್ಯೆ ಎಂದು ಏಕೆ ಹೆಸರು ಎಂಬುದೂ ಉಪಪಾದಿತವು. ಶ್ರೀ ಯತಿವರ್ಯರೂ ಕ್ರಮೇಣಾ ಬ್ರಹ್ಮಪ್ರಾಪ್ತಿ ಎಂದೇ ಹೇಳಿರುವದರಿಂದ ಪಂಚಾಗ್ನಿವಿದ್ಯಾನಿಷ್ಠನಿಗೆ ಉಂಟಾಗುವ ಸ್ವಾತ್ಮಾನು ಸಂಧಾನವುಳ್ಳ ಕೈವಲ್ಯವು ಅನಿತ್ಯವೇ ಎಂಬ ಭಾವವು. ಗೀತಾ ೧೨ ನೆಯ ಅಧ್ಯಾಯದ ಪ್ರಥಮ ಶ್ಲೋಕದಲ್ಲಿ ಪ್ರಾಜ್ಞನಾದ ಅರ್ಜುನನು ಜ್ಞಾನಿಯಾಗಿ ದಹರ ವಿದ್ಯಾನಿಷ್ಠನಾಗಿ ನಿನ್ನನ್ನು ಬಂದು ಸೇರಲೋ? ಐಕಾಂತ್ಯವು ತನಗೆ ಅಸಾಧ್ಯವಾದುದರಿಂದ ಜಿಜ್ಞಾಸುವಾಗಿ ಪಂಚಾಗ್ನಿ ವಿದ್ಯಾನಿಷ್ಠನಾಗಿ ಬಂದು ಸೇರಲೋ? ಎಂದು ಪ್ರಶ್ನಿಸುತ್ತಾನೆ. ಇದು ವಿಳಂಬಯುಕ್ತವಾಗಿ ಕ್ಲೇಶಾಧಿಕವುಳ್ಳದ್ದಾದುದರಿಂದ ಬೇಡವೆಂದು ಹೇಳಿ ಜ್ಞಾನಿಯಾಗಿ ನೆಟ್ಟಗೆ ಎಲ್ಲಿಯೂ ನಿಲ್ಲದೆ ಬಂದು ಸೇರುವ ದಹರಾದಿವಿದ್ಯಾ ನಿಷ್ಠನಾಗು ಎಂದು ಉಪದೇಶಿಸುತ್ತಾರೆ.

**ಮಧುವಿದ್ಯಾನ್ಯಾಯ** – ಮಧುವಿದ್ಯೆಯು ಛಾಂ. ೩. ೧ ರಿಂದ ೧೧ ರವರೆಗೆ ಹೇಳಿರುತ್ತದೆ. ಈ ಬ್ರಹ್ಮವಿದ್ಯಾನಿಷ್ಠರಿಗೆ ವಸ್ವಾದಿಲೋಕಪ್ರಾಪ್ತಿಯಾಗಿ ಅನಂತರ ಮೋಕ್ಷವೆಂದು ಹೇಳಿರುತ್ತದೆ. ವ್ಯಾಸಶಿಷ್ಯರು ಜೈಮಿನ್ಯಾಚಾರ್ಯರು ವಸುಲೋಕದಲ್ಲೇ ಇರುವ ದೇವತೆಗಳಿಗೆ ಈಗಲೇ ವಸುಲೋಕಪ್ರಾಪ್ತಿಯಿರುವದರಿಂದ ಮಧುವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಊಹಿಸಿದರು. ಶ್ರೀ ವ್ಯಾಸಮಹರ್ಷಿಯು ತಮ್ಮ ಶಿಷ್ಯರ ಅಭಿಪ್ರಾಯವನ್ನು ಖಂಡಿಸಿ, ಹಾಗೆ ಮಧುವಿದ್ಯಾನಿಷ್ಠರಾದವರಿಗೆ ಕಲ್ಪಾಂತವಾದ ಮೇಲೆ ವಸ್ವಾದಿಲೋಕಪ್ರಾಪ್ತಿಯುಂಟಾಗಿ ಅನಂತರ ಮೋಕ್ಷವನ್ನು ಹೊಂದುವರು. (ಬ್ರ. ಸೂ. ೧. ೩. ೩೦-೨). ಇದಕ್ಕೆ ಮಧುವಿದ್ಯೆ ಎಂದು ಏಕೆ ಹೆಸರು ಎಂದರೆ ಅಲ್ಲಿ ಐದು ವಿಧ ದೇವತೆಗಳಿಗೆ ತುಂಬಾ ಸುಖಕರವಾಗಿ ಮಧುವಿನ ಹಾಗೆ ಭೋಗ್ಯವಾದುದರಿಂದ. ಹಾಗೆಯೇ ಕೌಷೀತಕೀಯಲ್ಲಿ ಹೇಳುವ ಪ್ರತರ್ದನ ವಿದ್ಯೆಯಲ್ಲಿ ಇಂದ್ರಶರೀರಕ ಪರಮಾತ್ಮೋಪಾಸನೆಯು ಹೇಳಲ್ಪಟ್ಟು ಅದರ ಫಲವಾಗಿ ಇಂದ್ರಲೋಕಪ್ರಾಪ್ತಿಯು ಹೇಳಲ್ಪಟ್ಟಿರುತ್ತದೆ. ಶಾಸ್ತ್ರದೃಷ್ಟಿಯಿಂದ ನನ್ನನ್ನು ಉಪಾಸಿಸು ಎಂದರೆ ಮಚ್ಛರೀರಕ ಪರಮಾತ್ಮನನ್ನು ಉಪಾಸಿಸು ಎಂಬ ಭಾವವು. ಬ್ರ. ಸೂ. ೧. ೧. ೨೯. ಇದಕ್ಕೆ ಪ್ರತರ್ದನ ವಿದ್ಯೆ ಎಂದು ಏಕೆ ಹೆಸರು

**ಪ್ರಕೃತಿ ಸಂಸೃಷ್ಟಮಾಯಾದಲ', ಪ್ರಕೃತಿ ವಿಯುಕ್ತಮಾಯಾದಲ', ಇರುಕ್ಕುಮ್ ಆತ್ಮವಸ್ತುವೈ ಬ್ರಹ್ಮದೃಷ್ಟಿಯಾಲೇ ಯಾದಲ್ ಪಣ್ಣುಮ್ ಅನುಸಂಧಾನಙ್ಗಳ್' ನಾಲುಕ್ಕುಮ್' ನಾಮಾದ್ಯುಪಾಸನಙ್ಗಳುಕ್ಕುಪ್ಪೋಲೆ ಅರ್ಚಿರಾದಿಗತಿಯುಮ್' ಬ್ರಹ್ಮಪ್ರಾಪ್ತಿಯುಮ್' ಇಲ್ಲೈಯೆನ್ರು ಮಿಡತ್ತೈ**

---

ಎಂದರೆ ಪ್ರತರ್ದನ ಋಷಿಯು ಇಂದ್ರನಲ್ಲಿಗೆ ಹೋಗಿ ಮನುಷ್ಯರಿಗೆ ಹಿತತಮವಾದ ಉಪಾಯವು ಯಾವುದು, ದಯಮಾಡಿ ತಿಳಿಸಿ ಎಂದು ಕೇಳುವ ಸಂದರ್ಭವಾದುದರಿಂದ ಹಾಗೆ ಹೆಸರು. ಹಾಗಲ್ಲದೆ ಬರೀ ಇಂದ್ರನನ್ನು ಉಪಾಸನೆಯನ್ನು ಮಾಡಿದರೆ ಇಂದ್ರನಿಗೆ ದಿವ್ಯ ಮಂಗಳ ವಿಗ್ರಹವಿಲ್ಲವಾದುದರಿಂದ ಪ್ರತೀಕಾಲಂಬನವಾಗುವದರಿಂದ, ಅಂತವನಿಗೆ ಕೈವಲ್ಯಪ್ರಾಪ್ತಿಯೂ ಅನಂತರ ಅರ್ಚಿರಾದಿಗತಿಯೂ ಮೋಕ್ಷವೂ ಇಲ್ಲವೆಂದು ಮುಂದೆ ಅಪ್ಪಣೆಕೊಡಿಸುತ್ತಾರೆ—

**ಪ್ರಕೃತಿ ಸಂಸೃಷ್ಟಮಾಯಾದಲ'** - ಶರೀರ ಸಂಬಂಧವಿರುವಹಾಗೆ ಯಾಗಲಿ, ಅಥವಾ **ಪ್ರಕೃತಿ ವಿಯುಕ್ತಮಾಯಾದಲ'** - ಶರೀರದಿಂದ ಬಿಡಲ್ಪಟ್ಟ ಅವಸ್ಥೆಯಲ್ಲೇ ಯಾಗಲಿ, **ಇರುಕ್ಕುಮ್'** - ಇರುವ, **ಆತ್ಮವಸ್ತುವೈ** - ಜೀವಾತ್ಮನನ್ನು, **ಸ್ವರೂಪೇಣಯಾದಲ್** - ಸ್ವರೂಪದಿಂದಲೇ ಯಾಗಲಿ, ಆತ್ಮನನ್ನು ಮಹಾ ಪರಿಶುದ್ಧವಾಗಿ ತೇಜೋಮಯವಾಗಿ ಜ್ಞಾನಸ್ವರೂಪ ಜ್ಞಾನಗುಣವುಳ್ಳದ್ದೆಂದಾಗಲಿ, ಅಥವಾ **ಬ್ರಹ್ಮದೃಷ್ಟಿಯಾಲೇ ಯಾದಲ'** - ಅದೇ ಬ್ರಹ್ಮವೆಂಬ ಭಾವನೆಯಿಂದಾಗಲಿ, **ಪಣ್ಣುಮ್** - ಮಾಡಿದ, **ಅನುಸಂಧಾನಙ್ಗಳ್'** - ಧ್ಯಾನ ಅಥವಾ ಉಪಾಸನೆ, **ನಾಲುಕ್ಕುಮ್'** - ನಾಲ್ಕುಕ್ಕೂ, ನಾಲ್ಕೂ ಹೇಗೆಂದರೆ

(೧) ಪ್ರಕೃತಿ ಸಂಸೃಷ್ಟ ಆತ್ಮಾವನ್ನು ಸ್ವರೂಪತಃ ಅನುಸಂಧಾನವು
(೨) ಪ್ರಕೃತಿ ಸಂಸೃಷ್ಟ ಆತ್ಮಾವನ್ನು ಬ್ರಹ್ಮದೃಷ್ಟಿಯಿಂದ ಅನುಸಂಧಾನವು
(೩) ಪ್ರಕೃತಿ ವಿಯುಕ್ತ ಆತ್ಮಾವನ್ನು ಸ್ವರೂಪತಃ ಅನುಸಂಧಾನವು
(೪) ಪ್ರಕೃತಿ ವಿಯುಕ್ತ ಆತ್ಮಾವನ್ನು ಬ್ರಹ್ಮದೃಷ್ಟಿಯಿಂದ ಅನುಸಂಧಾನವು.

ಹೀಗೆ ನಾಲ್ಕು ವಿಧ ಉಪಾಸನೆಗಳು, **ನಾಮಾದ್ಯುಪಾಸನಙ್ಗಳುಕ್ಕುಪ್ಪೋಲೆ** - ನಾಮ ಮೊದಲು ಪ್ರಾಣದವರೆಗೂ ಹೇಳಲ್ಪಟ್ಟ ಅಚಿತ್ತು ಚಿತ್ತುಗಳ ಧ್ಯಾನದ ಹಾಗೆ, **ಅರ್ಚಿರಾದಿಗತಿಯುಮ್',** **ಬ್ರಹ್ಮಪ್ರಾಪ್ತಿಯು ಮಿಲ್ಲೈ** - ಪರಬ್ರಹ್ಮಪ್ರಾಪ್ತಿಯೂ ಇಲ್ಲವು ಎಂಬ ಸಂದರ್ಭವನ್ನು (೧) **"ಅಪ್ರತೀಕಾಲಂಬನಾರ್ ನಯತೀತಿ ಬಾದರಾಯಣಃ** ಇತ್ಯಾದಿ" **ಎಙ್ಗಿರ ಸೂತ್ರತ್ತಿಲೇ** - ಎನ್ನುವ ಬ್ರಹ್ಮಸೂತ್ರದಲ್ಲಿ, **ಅರುಳಿಚ್ಚೆಯ್ದಾರ'** - ಕೃಪಯಾ ಅಪ್ಪಣೆ ಕೊಡಿಸಿರುತ್ತಾರೆ. ಮೇಲೆ ಹೇಳಿದ ನಾಲ್ಕು ವಿಧವಾದ ಉಪಾಸನೆಗಳೂ ಕೈವಲ್ಯೋಪಾಸನೆಯಾಗುವ

**(೧) "ಅಪ್ರತೀಕಾಲಂಬನಾನ್ನಯತೀತಿ ಬಾದರಾಯಣಃ ಉಭಯಥಾಚ ದೋಷವಚ್ಚ, ತತ್ಕ್ರತುಶ್ಚ" ಎಙ್ಗ ರ ಸೂತ್ರತ್ತಿಲೇ ಯರುಳಿಚ್ಚೆಯ'ದಾರ'.**

---

ದಿಲ್ಲವು. ಏಕೆಂದರೆ ಇವುಗಳು **ಪ್ರತೀಕಾಲಂಬನಗಳು.** ಆಲಂಬನವೆಂದರೆ ಉಪಾಸನೆಯು. ಇವು ಪ್ರತೀಕೋಪಾಸನೆಗಳು. **ಪ್ರತೀಕಾಲಂಬನರು** ಯಾರೆಂದರೆ **"ನಾಮಾದಿಪ್ರಾಣ ಶಬ್ದ ನಿರ್ದಿಷ್ಟಪ್ರತ್ಯಗಾತ್ಮ ಸ್ವರೂಪ ಪರ್ಯನ್ತಂ ಸರ್ವಂ ಸದಸದ್ವಸ್ತುಜಾತಂ ಬ್ರಹ್ಮದೃಷ್ಟ್ಯಾ ಸ್ವರೂಪೇಣ ವಾ ಯೇ ಉಪಾಸತೇ ತೇ ಪ್ರತೀಕಾಲಂಬನಾಃ** ಎಂದು ಶ್ರೀ ಯತಿವರ್ಯರು ವೇದಾನ್ತ ಸಾರದ ಈ ಬ್ರಹ್ಮ ಸೂತ್ರದಲ್ಲಿ ಅಪ್ಪಣೆಕೊಡಿಸಿರುತ್ತಾರೆ. ಇದು ಅಚಿದ್ವಸ್ತುವನ್ನಾಗಲಿ ಚಿದ್ವಸ್ತುವನ್ನಾಗಲಿ ಸ್ವರೂಪತಃ ಆಗಲಿ ಪರಬ್ರಹ್ಮವೆಂಬ ಭಾವದಿಂದಾಗಲಿ ಉಪಾಸಿಸಿದರೆ ಪರಬ್ರಹ್ಮೋಪಾಸನೆಯಾಗುವದಿಲ್ಲವು. ಅಂತಹ ಉಪಾಸನಕ್ಕೆ ಪುನರಾವೃತ್ತಿಯೇ ವಿನಾ ಅರ್ಚಿರಾದಿಗತಿಯೂ ಇಲ್ಲವು, ಮೋಕ್ಷವೂ ಇಲ್ಲವು. ಈ ನಾಲ್ಕು ವಿಧ ಉಪಾಸಕರಿಗೂ ಮೋಕ್ಷವಿಲ್ಲವೆಂಬುದನ್ನು ಹಿಂದೆಯೇ ಅರ್ಥಪಂಚಕಾಧಿಕಾರದಲ್ಲೇ ಉಪಪಾದಿಸಿರುತ್ತಾರೆ (೪೦೦ ನೆಯ ಪುಟವನ್ನು ಪರಾಂಬರಿಸಿ) ಇನ್ನು ಯಾರಿಗೆ ? ಎಂದರೆ **ಅಪ್ರತೀಕಾಲಂಬನರಿಗೆ** ಇವರುಗಳು ಪರಮಪುರುಷನ ದಿವ್ಯ ಮಙ್ಗಳ ವಿಗ್ರಹವನ್ನು ಉಪಾಸಿಸುವರು. ಇವರುಗಳು ಎರಡು ವಿಧವು. (೧) ಸರ್ವೇಶ್ವರನ ದಿವ್ಯ ಮಙ್ಗಳ ವಿಗ್ರಹವನ್ನು ಉಪಾಸಿಸುವರು. ಇವರುಗಳು ಸರ್ವೇಶ್ವರನು ಉಭಯ ವಿಭೂತಿನಾಯಕನು, ಕಲ್ಯಾಣಗುಣಾಕರನು, ಸರ್ವಕಾರಣನು, ಸರ್ವವ್ಯಾಪಿ, ಉಪಾಯೋಪೇಯನು ಎಂದು ಉಪಾಸಿಸುವರು (೨) ಆತ್ಮ ಶರೀರಕ ಪರಮಾತ್ಮೋಪಾಸಕರು. ಯಾರಿಗೆ ಮೋಕ್ಷವು ಎಂಬ ವಿಚಾರದಲ್ಲಿ **ಕಾರ್ಯಂ ಬಾದರಿರಸ್ಯಗತಿ ರುಪಪತ್ತೇಃ** (ಬ್ರ. ಸೂ. ೪. ೩. ೬) ಎಂಬ ಸೂತ್ರದಲ್ಲಿ (೧) ಬಾದರ್ಯಾಚಾರ್ಯರು ಹೇಳುತ್ತಾರೆ.—ಹಿರಣ್ಯಗರ್ಭನುಕಾರ್ಯವು, ಆತನನ್ನು ಉಪಾಸಿಸಿದರೆ ಅವಿದ್ಯಾ ನಿವೃತ್ತಿಯು, ಅದೇ ಮೋಕ್ಷವು ; ವಿಭುವಾದ ಈಶ್ವರನೊಂದಿಗೆ ಇರುವದು ನಿತ್ಯವಾದುದೇ. ಆದುದರಿಂದ ಅರ್ಚಿರಾದಿಗತಿಯು ಅವಿದ್ಯಾ ನಿವೃತ್ತಿಗಾಗಿ ಎಂದು ಹೇಳಿದರು. ಇದು ಅದ್ವೈತಿಗಳ ಮತವು.

(೨) ಜೈಮಿನ್ಯಾಚಾರ್ಯರು ಸಾಕ್ಷಾತ್ಸ್ವಾತ್ಮಶರೀರಕ ಪರಮಾತ್ಮನ ದಿವ್ಯ ಮಙ್ಗಳ ವಿಗ್ರಹವನ್ನುಪಪಾದಿಸಿದವರಿಗೆ ಮಾತ್ರ ಸದ್ವಿದ್ಯಾದಹರ ವಿದ್ಯೆಗಳಲ್ಲಿ ಹೇಳಿರುವ ಹಾಗೆ ಅರ್ಚಿರಾದಿಗತಿಯೂ ಮೋಕ್ಷವೂ ಎಂದು ಹೇಳಿದರು. ಇವೆರಡು ಅಭಿಪ್ರಾಯಗಳೂ ತಪ್ಪೆಂದು ಶ್ರೀ ಬಾದರಾಯಣರು (ವ್ಯಾಸರು) **ಅಪ್ರತೀಕಾಲಂಬನಾ ನಯತೀತಿ** (ಬ್ರ. ಸೂ. ೪. ೩. ೧೪) ಎಂಬ ಸೂತ್ರದಲ್ಲಿ

---

(೧) ಬ್ರ. ಸೂ. ೪. ೩. ೧೪.

**(೧) "ಶ್ರುತೋಪನಿಷತ್ಕಗತ್ಯಭಿದಾನಾಚ್ಚ" ಎಙ್ಗರ ಸೂತ್ರತ್ತಿಲುಮು' ಒರು**

ಹೇಳುತ್ತಾರೆ—ತಸ್ಯ ಅಭಿಪ್ರಾಯವಾದರೋ: **ಅಪ್ರತೀಕಾಲಂಬನಾನ್ ನಯತೀತಿ** - ಪ್ರತೀಕೋಪಾಸನೆ ಮಾಡದೇ ಪರಮಾತ್ಮ ದಿವ್ಯ ಮಙ್ಗಳ ವಿಗ್ರಹವನ್ನು ಉಪಾಸಿಸುವರಿಗೇ ಮೋಕ್ಷವು. ಇವರು ಎರಡು ವಿಧವು (೧) ಪರಿಶುದ್ಧಾತ್ಮಪ್ರಾಪ್ತಿಗಾಗಿ ಜೀವಾತ್ಮನು ಪರಮಾತ್ಮನಿಗೆ ಶರೀರವೆಂದು ಪರಮಾತ್ಮೋಪಾಸನೆಯನ್ನು ಮಾಡುವವರು; ಪಂಚಾಗ್ನಿವಿದ್ಯಾ, ಪ್ರತರ್ದನವಿದ್ಯಾ ಮೊದಲಾದವರು (೨) ಸರ್ವಾತ್ಮ ಶರೀರಕ ಪರಬ್ರಹ್ಮನ ದಿವ್ಯ ಮಙ್ಗಳ ವಿಗ್ರಹವನ್ನು ಉಪಾಸಿಸುವರು ಸದ್ವಿದ್ಯಾದಹರ ವಿದ್ಯಾ ನಿಷ್ಠರು. **ಉಭಯಥಾಪಿದೋಷನಚ್ಚ**-ಬಾದರಿ ಮತ್ತು ಜೈಮನ್ಯಾಚಾರ್ರ್ಯರ ಇಬ್ಬರ ಅಭಿಪ್ರಾಯದಲ್ಲೂ ದೋಷವಿರುವದರಿಂದ; ಹೇಗೆ ? ಎಂದರೆ **ಬಾದರಿ** ಮತದ ಪ್ರಕಾರ ಪ್ರತೀಕಾಲಂಬನವಾಗುತ್ತದೆ. ಅರ್ಚಿರಾದಿಗತಿ ಮೋಕ್ಷವೂ ಇಲ್ಲವು. ಜೈಮಿನ್ಯಾಚಾರ್ಯರ ಮತದ ಪ್ರಕಾರ ಪಂಚಾಗ್ನಿವಿದ್ಯಾ ನಿಷ್ಠನಿಗೆ ಮೋಕ್ಷವಿಲ್ಲವೆಂದು ಹೇಳಿದಂತಾಯಿತು. ಇದು ತಪ್ಪು. ಛಾಂದೋಗ್ಯವು **"ತದ್ಯ ಇತ್ಥಂವಿದುಃ"** ಎಂಬ ವಾಕ್ಯದಲ್ಲಿ ಪಂಚಾಗ್ನಿವಿದ್ಯಾನಿಷ್ಠರಿಗೂ ಅರ್ಚಿರಾದಿಗತಿ ಮೋಕ್ಷ ಉಂಟೆಂದು ಹೇಳುವದಕ್ಕೆ ವಿರುದ್ಧವಾಗುತ್ತದೆ. ಅದೂ ಅಲ್ಲದೆ **ತತ್ಕ್ರತುಶ್ಚ** - ತತ್ಕ್ರತುನ್ಯಾಯದ ಪ್ರಕಾರ ಪಂಚಾಗ್ನಿವಿದ್ಯಾ ನಿಷ್ಠನಿಗೆ ಸ್ವಾತ್ಮಪ್ರಾಪ್ತಿ ಕೈವಲ್ಯವು. ಸದ್ವಿದ್ಯಾದಹರ ವಿದ್ಯಾನಿಷ್ಠರಿಗೆ ಪರಮಾತ್ಮಪ್ರಾಪ್ತಿಯು. ಇದರಿಂದ ಬಾದರಿ ಜೈಮಿನಿಯವರ ಅಭಿಪ್ರಾಯಗಳು ಶಾಸ್ತ್ರವಿರುದ್ಧವು ಎಂಬುದು ಸೂತ್ರಾರ್ಥವು.

ಆದುದರಿಂದ ಮೇಲೆ ಹೇಳಿದ ನಾಲ್ಕು ವಿಧ ಉಪಾಸಕರೂ ಪ್ರತೀಕಾಲಂಬನ ಮಾಡುವವರಾದ ಕಾರಣ ಇವರು ಕೇವಲರಲ್ಲವು. ಇವರಿಗೆ ಅರ್ಚಿರಾದಿ ಮಾರ್ಗ ಮೋಕ್ಷಗಳಿಲ್ಲವು. ಇವರಿಗೆ ಪುನರಾವೃತ್ತಿಯೇ ಫಲವೆಂದು ತೀರ್ಮಾನಿಸಿದರು. ಹೀಗೆ ಜೀವಮಾತ್ರೋಪಾಸನೆಗೆ ಫಲವೆಂಬುದನ್ನು ಇನ್ನೊಂದು ಬ್ರಹ್ಮಸೂತ್ರವಾದ **"ಶ್ರುತೋಪನಿಷತ್ಕಗತ್ಯಭಿಧಾನಾಚ್ಚ** (ಬ್ರ. ಸೂ. ೧. ೨. ೧೬) ಎಂಬುದರಿಂದಲೂ ಸಿದ್ಧವೆನ್ನುತ್ತಾರೆ—

**(೧) ಶ್ರುತೋಪನಿಷತ್ಕಗತ್ಯಭಿದಾನಾಚ್ಚ ಎಙ್ಗರ** - ಎನ್ನುವ, ಸೂತ್ರದಲ್ಲಿ, **ಒರುವಿದ್ಯಾವಿಶೇಷತ್ತಿಲೇ** - ಒಂದು ಬ್ರಹ್ಮವಿದ್ಯೆಯಲ್ಲಿ, ಅದು ಯಾವುದೆಂದರೆ ಅಂತರಧಿಕರಣದ ಅಕ್ಷ್ಯಾಧಾರ ವಿದ್ಯೆಯಲ್ಲಿ, **ಉಪಾಸ್ಯನೈ** - ಉಪಾಸಿಸಲು ಯೋಗ್ಯನಾದ ಅಕ್ಷ್ಯಾಧಾರನು, **ಪರಮಾತ್ಮಾವೆನ್ರ್ರಿಕ್ಕು** - ಜೀವಾತ್ಮನೇ ಪರಮಾತ್ಮನೇ ಎಂಬ ಸಂದೇಹದಲ್ಲಿ ಜೀವಾತ್ಮನಲ್ಲ ಪರಮಾತ್ಮನೇ ಸರಿ ಎಂದು

(೧) ಬ್ರ. ಸೂ. ೧. ೨. ೧೬

**ವಿದ್ಯಾ ವಿಶೇಷತ್ತಿಲ್ ಉಪಾಸ್ಯನ್ನೈ ಪರಮಾತ್ಮಾವೆನ್ನೈಕ್ಕು ಅರ್ಚಿರಾದಿಗತಿ ಶೊನ್ನತ್ತೈ ಹೇತುವಾಗಕ್ಕೊಂಡು ಸಾಧಿಕ್ಕೈಯಾಲೇ ಜೀವಮಾತ್ರೋಪಾಸನತ್ತುಕ್ಕು ಅರ್ಚಿರಾದಿಗತಿಯಿಲ್ಲೈ ಎನ್ರು ಮಿಡನು' ಸಿದ್ಧಮಾಯಿತ್ತು.**

---

ಹೇಳಿ ಸಿದ್ಧಾನ್ತಿಸುವದಕ್ಕೆ, ಅರ್ಚಿರಾದಿಗತಿಯುಂಟೆಂದು ಹೇಳುವದಕ್ಕೆ, **ಹೇತುವಾಗಕ್ಕೊಂಡು, ಸಾಧಿಕ್ಕೈಯಾಲೇ** - ಸಾಧಿಸುವದರಿಂದ, **ಜೀವಮಾತ್ರೋಪಾಸನಕ್ಕು** - ದಿವ್ಯ ಮಙ್ಗಳ ವಿಗ್ರಹವಿಲ್ಲದಿರುವ ಪ್ರತೀಕೋಪಾಸನೆಗೆ, **ಅರ್ಚಿರಾದಿಗತಿಯಿಲ್ಲೈ, ಎನ್ರು ಮಿಡನು'** - ಎನ್ನುವ ಸಂದರ್ಭವು, **ಸಿದ್ಧಮಾಯಿತ್ತು** - ವ್ಯಕ್ತವಾಯಿತು. ಆ ಸೂತ್ರಾಭಿಪ್ರಾಯವೇನೆಂದರೆ **ಶ್ರುತೋಪನಿಷತ್ಕ** - ಉಪನಿಷತ್ತುಗಳಲ್ಲಿ ಹೇಳಿರುವ ಪರಬ್ರಹ್ಮ ಯಾಥಾರ್ಥ್ಯವನ್ನು ಕೇಳಿ ತಿಳಿದವರಿಗೆ, **ಗತ್ಯಭಿದಾನಾಚ್ಚ** - ಅರ್ಚಿರಾದಿಗತಿಯು ಮುಂದಿನ ಶ್ರುತಿವಾಕ್ಯದಲ್ಲಿ (ಛಾಂ. ೪. ೧೫. ೫. ೬) ಹೇಳಿರುವ ಹೇತುವಿನಿಂದ ಅಕ್ಷ್ಯಾಧಾರನು ಜೀವನಲ್ಲ ಪರಮಾತ್ಮನೇ ಸರಿ ಎಂಬುದು ಸೂತ್ರ ತಾತ್ಪರ್ಯವು. ಇಲ್ಲಿ ಪರಮಾತ್ಮನೆಂದೇ ಸಿದ್ಧಾನ್ತಿಸುವದಕ್ಕೆ ಹೇತುವೇನು ಎಂದರೆ ಅಂತಹ ಅಕ್ಷ್ಯಾಧಾರೋಪಾಸಕನಿಗೆ ಅರ್ಚಿರಾದಿಗತಿ ಹೇಳಿರುವದರಿಂದ. ಆದುದರಿಂದ ಅಕ್ಷ್ಯಾಧಾರನು ಜೀವನಾದರೆ, ಜೀವಾತ್ಮೋಪಾಸಕನಿಗೆ ಅರ್ಚಿರಾದಿಗತಿಯಿಲ್ಲವೆಂಬುದು ಸ್ಥಾಪಿತವು. ಆ ಜೀವಾತ್ಮನೇ ಪರಮಾತ್ಮನಿಗೆ ಶರೀರವೆಂದು ಭಾವಿಸಿ, ತತ್ಪ್ರಾಪ್ತಿಗಾಗಿ ಪರಮಾತ್ಮೋಪಾಸಕನಾದ ಪಂಚಾಗ್ನಿವಿದ್ಯಾ ನಿಷ್ಠನಿಗಾದರೋ, ಅರ್ಚಿರಾದಿಗತಿ ಮತ್ತು ಕ್ರಮೇಣ ಮೋಕ್ಷವೂ ಉಂಟು ಎಂಬ ಭಾವವು. ಈ ಸೂತ್ರದ ಮುಂದಿನ ಸೂತ್ರವಾದ **"ಅನವಸ್ಥಿತೇರ ಸಮ್ಭವಾಚ್ಚ ನೇತರಃ"** - ಈ ಅಕ್ಷ್ಯಾಧಾರನು, **ನೇತರಃ** - ಇನ್ನೊಬ್ಬನಾದ ಜೀವಾತ್ಮನಲ್ಲವು. ಏಕೆಂದರೆ ಜೀವನು ಅಕ್ಷಿಯಲ್ಲಿ ನಿಯಮೇನ ಇರುವದಿಲ್ಲವು. ನಿಯಮೇನ ಇರುವವನು ಪರಮಾತ್ಮನೇ; ಮತ್ತು **ಅಸಂಭವಾಚ್ಚ** - ಆನಂದತ್ವಕಲ್ಯಾಣಗುಣಾಕರತ್ವಾದಿಗಳು ಜೀವನಲ್ಲಿ ಅಸಂಭವವಾದುದರಿಂದ, ಎಂದು ವಿಶದವಾಗಿ ಜೀವಾತ್ಮನಲ್ಲವೆಂದು ಹೇಳಿರುತ್ತದೆ. ಈ ಸಂದರ್ಭದಲ್ಲಿ ಶೌನಕ ಮಹರ್ಷಿಯ ವಾಕ್ಯವು ಅನುಸಂಧೇಯವು.—

**ಆ ಬ್ರಹ್ಮಸ್ತಂಬ ಪರ್ಯನ್ತ ಜಗದಂತ ರ್ವ್ಯವಸ್ಥಿತಾಃ ।**
**ಪ್ರಾಣಿನಃ ಕರ್ಮಜನಿತ ಸಂಸಾರ ವಶವರ್ತಿನಃ ॥**
**ಯತಸ್ತತೋ ನತೇ ಧ್ಯಾನೇ ಧ್ಯಾನಿನಾ ಮುಪಕಾರಕಾಃ ।**
**ಅವಿದ್ಯಾನ್ತರ್ಗತಾ ಸ್ಸರ್ವೇ ತೇ ಹಿ ಸಂಸಾರಗೋಚರಾಃ ॥**

**ಯಸ್ಮಾತ್ತದಮಲಂ ಬ್ರಹ್ಮ ನಿಸರ್ಗಾದೇವ ಬೋಧವತ್ ।**
**ಧ್ಯೇಯಂ ಧ್ಯಾನವಿದಾಂ ಸಮ್ಯಕ್ತದ್ವಿಷ್ಣೋಃ ಪರಮಂ ಪದಮ್ ॥**

**ಕೈವಲ್ಯೇನಹಿ ಸರ್ವಪಾಪನಿವೃತ್ತಿ ಇತಿ ಅನ್ವಯವ್ಯತಿರೇಕಾಭ್ಯಾಂ ನಿಗಮಯತಿ.**

**ಆಗೈಯಾಲೇ ಬ್ರಹ್ಮಪ್ರಾಪ್ತಿಯಿಲ್ಲಾತಾರ್ಕ್ಕು ಇ ಶ್ಲೋಕತ್ತಿಲ್ ಚೊಲ್ಲುಗಿರ ಸರ್ವಪಾಪ ನಿವೃತ್ತಿಯಿಲ್ಲೈ. ಸರ್ವಪಾಪ ನಿವೃತ್ತಿಯುಡೈಯಾರ್ಕ್ಕು ಬ್ರಹ್ಮಾನುಭವ ಸಂಕೋಚಮಿಲ್ಲೈ.**

**ಅನಿಷ್ಟ ನಿವೃತ್ತ್ಯಾ ಇಷ್ಟಪ್ರಾಪ್ತಿ ಸಿದ್ಧಿರಿತಿ ಉಪಸಂಹಾರಃ**

**ಇಪ್ಪಡಿ ಇಜ್ಜ್ಗ ಸರ್ವಪಾಪನಿವೃತಿಯೈ ಚೊಲ್ಲುಗೈಯಾಲೇ ಕೇವಲಾನುಭವ**

---

ಬ್ರಹ್ಮರುದ್ರಾದಿಗಳೆಲ್ಲಾ ಜಗತ್ತುಗಳಲ್ಲಿರುವ ಪ್ರಾಣಿಗಳು, ಕರ್ಮಮೂಲಕ ಜನಿಸಿದವರಾಗಿ ದಿವ್ಯ ಮಙ್ಗಳ ವಿಗ್ರಹ ಯುಕ್ತರಲ್ಲವು. ಆದುದರಿಂದ ಮೋಕ್ಷಕ್ಕಾಗಿ ಉಪಾಸ್ಯರಲ್ಲವು. ಶ್ರೀ ಮಹಾವಿಷ್ಣುವೇ ಧ್ಯೇಯವು. ಆತನನ್ನು ಧ್ಯಾನಿಸಿದರೇನೆ ಪರಮಪದವೆಂದು ಹೇಳಲ್ಪಟ್ಟಿರುತ್ತದೆ.

**ಕೈವಲ್ಯಕ್ಕೆ ಪರಬ್ರಹ್ಮಪ್ರಾಪ್ತಿಯಿಲ್ಲದುದರಿಂದ ಸರ್ವಪಾಪನಿವೃತ್ತಿಯಿಲ್ಲವೆಂಬುದನ್ನು ಅನ್ವಯವ್ಯತಿರೇಕರೂಪದಲ್ಲಿ ನಿಗಮನಮಾಡಿ ಹೇಳುತ್ತಾರೆ.—**

**ಆಗೈಯಾಲ್** - ಇಷ್ಟು ದೂರ ಪ್ರಮಾಣ ಬಲಗಳ ಮೂಲಕ ಉಪಪಾದಿಸಿ ಸ್ಥಾಪಿಸಿರುವದರಿಂದ, **ಬ್ರಹ್ಮಪ್ರಾಪ್ತಿಯಿಲ್ಲಾತಾರ್ಕ್ಕು** - ಪರಬ್ರಹ್ಮಪ್ರಾಪ್ತಿಯಿಲ್ಲದೆ ಕೇವಲ ಆತ್ಮಾನುಭವ ಪ್ರಾಪ್ತಿಯುಂಟಾದವರಿಗೆ, **ಇ ಶ್ಲೋಕತ್ತಿಲ್ ಚೊಲ್ಲುಗಿರ** - ಈ ಚರಮ ಶ್ಲೋಕದಲ್ಲಿ ಹೇಳುವ, **ಸರ್ವಪಾಪನಿವೃತ್ತಿಯು** ಇಲ್ಲವು, **ಸರ್ವಪಾಪ ನಿವೃತ್ತಿ ಯುಡೈಯಾರ್ಕ್ಕು** - ಸರ್ವಪಾಪನಿವೃತ್ತಿಯನ್ನು ಹೊಂದಿದವರಿಗೆ, **ಬ್ರಹ್ಮಾನುಭವ ಸಂಕೋಚಮಿಲ್ಲೈ**-ಪರಿಪೂರ್ಣ ಬ್ರಹ್ಮಾನುಭವದಲ್ಲಿ ಸಂಕೋಚವಿಲ್ಲವು. ಇದು ಶ್ರೀ ಮಧ್ವಾಚಾರ್ಯರ ಅಭಿಪ್ರಾಯವಾದ ಮೋಕ್ಷಾನುಭವದಲ್ಲಿ ಆನಂದ ತಾರತಮ್ಯ ಉಂಟೆಂಬುದಕ್ಕೆ ವಿರುದ್ಧವಾದದು. ನಮ್ಮ ಸಿದ್ಧಾನ್ತಪ್ರಕಾರ ಆನಂದದಲ್ಲಿ ತಾರತಮ್ಯವಿಲ್ಲವೆಂಬುದು " **ಪರಮಂ ಸಾಮ್ಯ ಮುಪೈತಿ** ಎಂಬ ಶ್ರುತಿವಾಕ್ಯದಿಂದ ಸಿದ್ಧವು.

**ಅನಿಷ್ಟನಿವೃತ್ತಿಯಿಂದ ಇಷ್ಟಪ್ರಾಪ್ತಿಯ ಸಿದ್ಧಿಯು ಎಂಬುದನ್ನು ನಿಗಮನಮಾಡಿ ಹೇಳುತ್ತಾರೆ—**

**ಇಪ್ಪಡಿ** - ಈ ರೀತಿಯಲ್ಲಿ, **ಇಜ್ಜ್ಗ** - ಈ ಚರಮಶ್ಲೋಕದಲ್ಲಿ, **ಸರ್ವಪಾಪ**

**ಕಾರಣಮಾಯ್‌ ಪರಿಪೂರ್ಣಬ್ರಹ್ಮಾನುಭವತ್ತುಕ್ಕು ಪ್ರತಿಬಂಧಕಮಾನ ಕರ್ಮವಿಶೇಷಮುಮ್‌ ಕಳಿಗೈಯಾಲೇ "ಮಾಮೇವೈಷ್ಯಸಿ" ಎನ್ರು ಕೀಳ್‌ ಶ್ಲೋಕತ್ತಿಲ್‌ ಚೊನ್ನ ಅರ್ಥಮ್‌ ಸಿದ್ಧಮಾಯ್‌ತ್ತು.**

**ನಿವೃತ್ತಿಯೈ ಚ್ಚೊಲ್ಲುಗೈಯಾಲೇ** - ಸರ್ವಪಾಪನಿವೃತ್ತಿಯನ್ನು ಹೇಳುವದರಿಂದ, **ಕೇವಲಾನುಭವತ್ತುಕ್ಕು** - ಕೈವಲ್ಯದಲ್ಲಿ ಆತ್ಮಾನುಭವಕ್ಕೆ, **ಕಾರಣಮಾಯ್‌** - ಕಾರಣವಾಗಿಯೂ, **ಪರಿಪೂರ್ಣಬ್ರಹ್ಮಾನುಭವಕ್ಕೆ ಪ್ರತಿಬಂಧಕಮಾನ** - ಅಡ್ಡಿಯಾಗಿದ್ದ **ಕರ್ಮವಿಶೇಷಮ್‌** - ಪಾಪಶಬ್ದಕ್ಕೆ ಸೇರಿದ ಕರ್ಮವಿಶೇಷವೂ ಕೂಡ, **ಕಳಿಗೈಯಾಲೇ** - ನಿವೃತ್ತಿಸಿ ಹೋಗುವದರಿಂದ, **ಮಾಮೇವೈಷ್ಯಸಿ** - ನನ್ನ ಸಾಯುಜ್ಯವನ್ನೇ ಹೊಂದುವಿ, **ಎನ್ರು** - ಎಂಬದಾಗಿ, **ಕೀಳ್‌ ಶ್ಲೋಕತ್ತಿಲ್‌ ಚೊನ್ನ** - ಚರಮಶ್ಲೋಕದ ಹಿಂದಿನ ಶ್ಲೋಕದಲ್ಲಿ ಹೇಳಿದ, **ಅರ್ಥಮ್‌** - ಅಭಿಪ್ರಾಯವು, **ಸಿದ್ಧಮಾಯ್‌ತ್ತು** - ಸಿದ್ಧವಾಯಿತು. ಕೈವಲ್ಯಕ್ಕೆ ಒಡನೆ ಪರಬ್ರಹ್ಮಪ್ರಾಪ್ತಿಯಿಲ್ಲದೇ ಇರುವದಕ್ಕೆ ಕಾರಣವು ಸ್ವಲ್ಪ ಪಾಪರೂಪವಾದ ಕರ್ಮವು ಕಳಿಯದೇ ಇರೋಣವು. ಇದೂ ಯಾವಾಗ ಕಳೆಯಿತೋ ಆಗ ಎಲ್ಲಾ ಪಾಪಗಳೂ ಕಳೆದು ಅನಿಷ್ಟನಿವೃತ್ತಿ ಸಂಪೂರ್ಣವಾಯಿತು. ಆಗ ಇಷ್ಟಪ್ರಾಪ್ತಿಯಾದ ಪರಿಪೂರ್ಣಬ್ರಹ್ಮಾನುಭವವನ್ನು ಹೇಳಿದಂತೆ ಆಯಿತು. ಈ ಶ್ಲೋಕದ ಹಿಂದಿನ ಶ್ಲೋಕದಲ್ಲಿರುವ **"ಮಾಮೇವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋಸಿಮೇ"** ಇದಷ್ಟನ್ನು ಈ ಶ್ಲೋಕಕ್ಕೂ ಇಟ್ಟುಕೊಳ್ಳಬಹುದು ಎನ್ನುತ್ತಾರೆ. ಏಕೆಂದರೆ ಹಿಂದೆ ೬೫ ನೆಯ ಶ್ಲೋಕದಲ್ಲಿ ಗುರೂಪಾಯವನ್ನು ಹೇಳಿ ಅದರಿಂದುಂಟಾಗುವ ಫಲವನ್ನು ಹೇಳಿದನಂತರವೂ, ಅರ್ಜುನನು ಗುರೂಪಾಯವು ಅನೇಕರಿಗೆ ಸಾಧ್ಯವಿಲ್ಲವೇ ಎಂದು ಶೋಕಿಸಿದರಿಂದ ಲಘೂಪಾಯವನ್ನು ಸಂಗ್ರಹವಾಗಿ ಹೇಳುವ ಸಂದರ್ಭದಲ್ಲಿ, ಫಲವನ್ನು ಹೇಳದೇ ಇರುವ ಪ್ರಯುಕ್ತ, ಫಲವು ಲಘೂಪಾಯಕ್ಕೂ ಒಂದೇ ಎಂಬುದು **ವಿಕಲ್ಪೋಽವಿಶಿಷ್ಟಫಲತ್ವಾತ್‌** ಎಂಬ ಬ್ರ. ಸೂ. ದ ಪ್ರಕಾರ ಏರ್ಪಡುವದರಿಂದ, ಇಲ್ಲಿಯೂ **"ಮಾಮೇವೈಷ್ಯಸಿ ಸತ್ಯಂತೇ** ಇತ್ಯಾದಿಯನ್ನು ಇಟ್ಟುಕೊಳ್ಳತಕ್ಕದ್ದೆಂಬ ಭಾವವು. ಇದು ಹಿಂದಿನ ಶ್ಲೋಕದ ಕೊನೆಯಲ್ಲೂ ಈ ಶ್ಲೋಕಕ್ಕೆ ಪೂರ್ವಭಾವಿಯಾಗಿಯೂ ಇರುವದರಿಂದ ಕಾಕಾಕ್ಷಿನ್ಯಾಯದ ಪ್ರಕಾರ ಅನ್ವಯಿಸತಕ್ಕದ್ದು. ಇಂತಹ ಅನ್ವಯವನ್ನು ಹಿಂದೆ ಗೀತಾ ಸಪ್ತಮಾಧ್ಯಾಯ ೧೫-೧೬ ನೆಯ ಶ್ಲೋಕಗಳಲ್ಲಿ ಕಾಣಬಹುದು. **"ನಮಾಂ ದುಷ್ಕೃತಿನೋ ಮೂಢಾಃ"** ಎಂಬಲ್ಲಿ ನಾಲ್ಕು ಜನ ದುಷ್ಕೃತಿಗಳು ತನ್ನಲ್ಲಿ ಪ್ರಪದನ ಮಾಡುವದಿಲ್ಲವೆಂದು ಹೇಳಿ ೧೬ ನೆಯ ಶ್ಲೋಕದಲ್ಲಿ **ಚತುರ್ವಿಧಾಃ** - ಎಂದು ನಾಲ್ಕು ವಿಧ ಸುಕೃತಿಗಳ ವಿಷಯವನ್ನು ಹೇಳುವದರಿಂದ ಈ **ಚತುರ್ವಿಧಾಃ** ಎಂಬುದನ್ನು

**"ಮಾಮೇವೈಷ್ಯಸಿ" ಎನ್ಗಿರ ಪ್ಪ್ರಾಪ್ತಿಯಾವುದು ? ಪರಿಪೂರ್ಣಾನುಭವಮು'. ಇಪ್ಪಡಿ ಪೂರ್ಣಾನುಭವ ಸಿದ್ಧಿಕ್ಕಾಕ ಅರ್ಚಿರಾದಿಗತಿಯುಮ್' ದೇಶವಿಶೇಷಪ್ರಾಪ್ತಿಯುಮ್ ಮುಣ್ಡಾಗಿರದು.**

---

ಕಾಕಾಕ್ಷಿನ್ಯಾಯದಿಂದ ಎರಡು ಶ್ಲೋಕಗಳಿಗೂ ಅನ್ವಯವು ಹೇಗೋ, ಹಾಗೆ ಎಂಬ ಭಾವವು. ಅಲ್ಲಿ ಹೇಗೆ ಎರಡು ಶ್ಲೋಕಗಳಿಂದ **ಪ್ರಪದ್ಯನ್ತೇ** ಎಂಬುದರಿಂದ ಶರಣಾಗತಿಗೂ **ಭಜನ್ತೇ** ಎಂಬುದರಿಂದ ಉಪಾಸನೆಗೂ ಅನ್ವಯಿಸಿ ಹೇಳಲ್ಪಟ್ಟಿತೋ ಹಾಗೆಯೇ ೬೫ ನೆಯ ಶ್ಲೋಕದಲ್ಲಿ ಉಪಾಸನೆಯೂ, ೬೬ ನೆಯ ಈ ಚರಮಶ್ಲೋಕದಲ್ಲಿ ಪ್ರಪದನವೂ ಹೇಳಲ್ಪಟ್ಟವು.

ಮುಂದೆ **ಮಾಮೇವೈಷ್ಯಸಿ** ಎಂಬುದರ ತಾತ್ಪರ್ಯವನ್ನು ತಿಳಿಸುತ್ತಾರೆ **"ಮಾಮೇವೈಷ್ಯಸಿ" ಎನ್ಗಿರ** - ಎಂದು ಹೇಳುವ, **ಪ್ರಾಪ್ತಿಯು ಯಾವುದು ? ಪರಿಪೂರ್ಣಾನುಭವಮು'** – ಪರಿಪೂರ್ಣ ಬ್ರಹ್ಮಾನುಭವವು, ಅದರಿಂದುಂಟಾಗುವ ಆನಂದವು. **ಇಪ್ಪಡಿ** – ಈ ಪ್ರಕಾರವಾಗಿ, **ಪರಿಪೂರ್ಣ ಬ್ರಹ್ಮಾನುಭವವು ಸಿದ್ಧಿಕ್ಕಾಗ** – ಸಿದ್ಧಿಸುವದಕ್ಕಾಗಿ, **ಅರ್ಚಿರಾದಿಗತಿಯು ದೇಶವಿಶೇಷಪ್ರಾಪ್ತಿಯೂ** – ದಿವ್ಯ ವೈಕುಂಠದಲ್ಲಿ, **ಉಣ್ಡಾಗಿರದು** – ಉಂಟಾಗುತ್ತದೆ. ಕೆಲವರು ನಿತ್ಯವಿಭೂತಿ ಒಂದುಂಟೆಂದು ಒಪ್ಪಿದರೆ ಅದ್ವೈತಾಭಿಪ್ರಾಯಕ್ಕೆ ವಿರೋಧವಾಗುತ್ತದೆಂಬ ಭಾವದಿಂದ ಒಪ್ಪುವದಿಲ್ಲವು, ಆ ಅಭಿಪ್ರಾಯವು ಸರಿಯಲ್ಲವೆಂದು ತಿಳಿಸುವದಕ್ಕಾಗಿ, **ದೇಶವಿಶೇಷಪ್ರಾಪ್ತಿ** ಎಂಬ ಪ್ರಯೋಗವು. ಹಾಗೆಯೇ ಗೀತಾಚಾರ್ಯರು ಪ್ರಯೋಗಿಸಿರುತ್ತಾರೆ—

**"ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾ ತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮು'** ||

ಆ ಸ್ಥಾನವೇ ಸಾಯುಜ್ಯವಾದುದರಿಂದ, ಮೋಕ್ಷವು ಸಾರೂಪ್ಯಸಾಮೀಪ್ಯಾದಿರೂಪವೆಂಬ ಅಭಿಪ್ರಾಯವೂ ನಿರಸ್ತವು, ಶ್ರೀ ನಿಗಮಾನ್ತದೇಶಿಕರವರ ಪರಿಪೂರ್ಣ ಬ್ರಹ್ಮಾನುಭವಾಧಿಕಾರವನ್ನು ಪರಾಂಬರಿಸಿ.

ಹಾಗಾದರೆ ಇಂತಹ **ಪರಿಪೂರ್ಣಾನುಭವವು,** ಧ್ಯಾನಸಮಯದಲ್ಲಿ ಸಾಕ್ಷಾತ್ಕರಿಸುವಾಗ ಇಲ್ಲವೋ ? "ತಮೇವಂ ವಿದ್ವಾ್ ಅಮೃತ **ಮಿಹಭವತಿ"** ಎಂದು ಶ್ರುತಿ ಹೇಳುತ್ತದಲ್ಲಾ ? ಈ ಶ್ರುತಿಬಲದಿಂದ ಕೆಲವರು ಜೀವನ್ಮುಕ್ತಿ ಎಂದು ಹೇಳುತ್ತಾರಲ್ಲಾ ? ಇವು ಸರಿಯಾದ ಅಭಿಪ್ರಾಯವಲ್ಲವೋ ? ಶಾಸ್ತ್ರಗಳ ಮತ್ತು ಗುರುಗಳ ಮೂಲಕ ಸರ್ವೇಶ್ವರನ ಸ್ವರೂಪಸ್ವಭಾವಗಳ ಮಾಹಾತ್ಮ್ಯೆಯನ್ನು ಕೇಳಿತಿಳಿಯು ವಾಗಲೂ ಇಲ್ಲವೋ ? ಆತನ ದಿವ್ಯ ಚೇಷ್ಟಿತಗಳೆಲ್ಲಾ ಅತಿಮಾನುಷವೆಂದು ಗ್ರಹಿಸುವಾಗಲೂ ಇಲ್ಲವೋ? ವಿಷ್ಣುಲೋಕಕ್ಕೆ ದೇವತೆಗಳು ಹೋಗಿ ಸ್ವಾಮಿ

**ಇಕ್ಕ್ರುಮತ್ತಿಲೇ ಇನ್ನನುಭವಮು' ಕೊಡುಪ್ಪದಾಗ ಸ್ವತಂತ್ರ್ಗ ಅನಾದಿ ಯಾಗ ನಿಯಮಿತ್ತು ವೈತ್ತಾನೆನ್ರುಮಿಡನು', ಇಗ್ಗತಿವಿಶೇಷಾದಿಗಳ್ಳೈ ಪ್ರತಿ ಪಾದಿಕ್ಕಿರ ಶಾಸ್ತ್ರಙ್ಗಳಾಲೇ ಸಿದ್ಧಮ್. ಇಗ್ಗತಿವಿಶೇಷತ್ತುಕ್ಕು ಮುನ್ನು ಶಾಸ್ತ್ರತ್ತಾಲೇ ಬ್ರಹ್ಮಸ್ವರೂಪತ್ತೈಯರುಗಿರಪ್ಪೋದುಮು', ಯೋಗತ್ತಾಲೇ ಸಾಕ್ಷಾತ್ಕರಿಕ್ಕಿರಪ್ಪೋದುಮ್, ವಿಭವಲೋಕಾಧಿಗಳಿಲ' ಪ್ರಾಪಿಕ್ಕುಪ್ಪೋದು**

---

ಯನ್ನು ಕಂಡು ತಮ್ಮ ಕಷ್ಟಪರಿಹಾರಕ್ಕಾಗಿ ಮೊರೆಯಿಟ್ಟರೆಂದೂ, ಕೆಲವರು ಆ ವಿಷ್ಣು ಲೋಕವನ್ನು ಹೋಗಿಸೇರುವರೆಂದೂ ಹೇಳಿರುತ್ತದಲ್ಲಾ, ಅಲ್ಲಿಯೂ ಪರಿಪೂರ್ಣ ಬ್ರಹ್ಮಾನುಭವವಿಲ್ಲವೊ ? ಎಂದರೆ ಈ ಸಂದರ್ಭಗಳಲ್ಲೆಲ್ಲಾ ಪರಿಪೂರ್ಣ ಬ್ರಹ್ಮಾನು ಭವವಿಲ್ಲವೆಂದೂ ಪರಿಮಿತವಾದುದಾಗಿಯೂ ವಿಚ್ಛೇದಯುಕ್ತವಾಗಿಯೂ ಇರುತ್ತ ದೆಂದೂ ಉಪದೇಶಿಸುತ್ತಾರೆ.—

**ಇಕ್ಕ್ರುಮತ್ತಿಲೇ** – ಈ ಅರ್ಚಿರಾದಿಗತಿಮೂಲಕವಾಗಿಯೇ, **ಇನ್ನನುಭವ ಮು'** – ಈ ಮೋಕ್ಷರೂಪವಾದ ಪರಿಪೂರ್ಣಬ್ರಹ್ಮಾನುಭವದಿಂದುಂಟಾಗುವ ಆನಂ ದವನ್ನು **ಕೊಡುಪ್ಪದಾಗ** – ಕೊಡುವದಾಗಿ, **ಸ್ವತಂತ್ರನಾದ ಪರಬ್ರಹ್ಮನು** – **ಅನಾದಿಯಾಗ ನಿಯಮಿತ್ತುವೈತ್ತಾನ'** – ಒಂದು ದೇಶವಿಶೇಷದಲ್ಲಿ ಇಂತಹ ಮೋಕ್ಷಸುಖವನ್ನು ಏರ್ಪಡಿಸಿದನು, **ಎನ್ರುಮಿಡನು'** – ಎನ್ನುವ ಸಂದರ್ಭವನ್ನು, **ಇಗ್ಗತಿವಿಶೇಷಾದಿಗಳ್ಳೈ ಪ್ರತಿಪಾದಿಸು[illegible] ಸ್ತ್ರಙ್ಗಳಾಲೇ** ಛಾಂದೋಗ್ಯಬೃಹ ದಾರಣ್ಯಕಾದಿ ಉಪನಿಷತ್ತುಗಳಿಂದ ಸಿ[illegible]ಮು' - **"ತತ್ಪುರುಷೋಽಮಾನವಸ ಏನಾನ್ ಬ್ರಹ್ಮಗಮಯತಿ"** (ಛಾಂದೋಗ್ಯ), ಅಮಾನವನೆಂಬುವನು ಈ ಮೋ ಕ್ಷಾರ್ಥಿಯನ್ನು ಕರೆದುಕೊಂಡು ಹೋಗಿ ಪರವಾಸುದೇವನ ಮುಂದೆ ನಿಲ್ಲಿಸುವನು ಎಂದು ಹೇಳಿರುವದರಿಂದ **ಸಿದ್ಧಮು'** – ಸ್ಥಾಪಿತವು.

**ಇಗ್ಗತಿವಿಶೇಷತ್ತುಕ್ಕು ಮುನ್ನು** – ಸ್ಥೂಲದೇಹನಿರ್ಯಾಣವುಂಟಾಗಿ ಈ ಅರ್ಚಿ ರಾದಿಗತಿಯುಂಟಾಗುವದಕ್ಕಿಂತಮುಂಚೆ, (೧) **ಶಾಸ್ತ್ರತ್ತಾಲೇಬ್ರಹ್ಮಸ್ವರೂಪತ್ತೈ ಯರಿಗಿರಪ್ಪೋದು** – ಬ್ರಹ್ಮವಿದ್ಯೆಯಮೂಲಕವಾಗಿ ಆಚಾರ್ಯಮುಖೇನ ಪರಬ್ರಹ್ಮ ಸ್ವರೂಪವನ್ನು ತಿಳಿಯುವಾಗಲೂ, (೨) **ಯೋಗತ್ತಾಲೇ ಸಾಕ್ಷಾತ್ಕರಿಕ್ಕಿರ ಪ್ಪೋದುಮು'** – ಭಕ್ತಿಯೋಗವನ್ನು ಅನುಷ್ಠಿಸಿ ಐಕಾನ್ತ್ಯಭಕ್ತಿಯಿಂದ ಪರಮ ಪುರುಷನನ್ನು ಸಾಕ್ಷಾತ್ಕರಿಸುವಾಗಲೂ, (೩) **ವಿಭವಲೋಕಾದಿಗಳಿಲ'** – ವಿಷ್ಣು ಲೋಕಾದಿಗಳಲ್ಲಿ, ಆದಿಶಬ್ದದಿಂದ ಚತುರ್ಮುಖ ರುದ್ರಲೋಕಗಳು ಹೇಳಲ್ಪಟ್ಟವು **ಪ್ರಾಪ್ತಿಕ್ಕುಮು'ಪ್ಪೋದು**–ಆ ಲೋಕಾನುಭವವನ್ನು ಹೊಂದುವಾಗಲೂ, **ಪಿರಕ್ಕು ಮು' ಪ್ರಕಾಶಮು'**–ಉಂಟಾಗುವ ಜ್ಞಾನವಿಕಾಸವೂ, ತನ್ಮೂಲಕ ಸುಖವೂ (ಆನಂ ದವೂ) **ಸುಕೃತಾಧೀನಮಾಯುಮು'**–ತಾನು ಹಿಂದೆಮಾಡಿದ ಕರ್ಮಫಲಕ್ಕೆ ಅಧೀನ

**ಮ್, ಪಿರಕ್ಕುಂ ಪ್ರಕಾರಮ್ ಸುಕೃತಾಧೀನಮಾಯ್ ಕರಣಾಯತ್ತಮಾಯ್, ವರುಗಿರದಾಗೈಯಾಲೇ ಪರಿಮಿತಮುಮಾಯ್, ವಿಚ್ಛೇದವತ್ತಾಮಾಯ್ ಇರುಕ್ಕುಮ್. ಮುಕ್ತದಶೈಯಿಲ್ ಪ್ಪಿರಕ್ಕಿರ ಪ್ರಕಾಶಮ್ ಸಂಕೋಚ ವಿಚ್ಛೇದಙ್ಗಳುಕ್ಕು ಕಾರಣಮೊನ್ರು ಮಿಲ್ಲಾಮೈಯಾಲೇ ಪರಿಪೂರ್ಣ ವಿಷಯಮುಮಾಯ್, ಪುನರ್ವಿಚ್ಛೇದರಹಿತಮುಮಾಯ್, ಯಿರುಕ್ಕುಮ್.**

---

ವಾಗಿಯೂ, **ಕರುಣಾಯತ್ತಮಾಯುಮ್**-ದೇಹದೊಂದಿಗೆ ಇರುವದರಿಂದ ಇಂದ್ರಿಯಗಳ ಅಧೀನವಾಗಿಯೂ, ಹೀಗೆ ಇಂದ್ರಿಯ ಮತ್ತು ಸುಕೃತಕರ್ಮಗಳಿಗೆವಶವಾಗಿ **ವರುಗಿರದಾಗೈಯಾಲೇ** - ಬರುವಂತಾದ್ದಾದುದರಿಂದ, **ಪರಿಮಿತಮುಮಾಯ್** - ಆ ಸುಖವು ಪರಿಮಿತವಾದುದಾಗಿಯೂ, **ವಿಚ್ಛೇದವತ್ತುಮಾಯ್** - ನಿತ್ಯವಲ್ಲದೆ ಅಶಾಶ್ವತವಾಗಿಯೂ, **ಇರುಕ್ಕುಮ್** - ಇರುತ್ತದೆ. ಆದುದರಿಂದ ಮೇಲೆ ಹೇಳಿದ ಮೂರು ದಶೈಯಲ್ಲೂ ಕರ್ಮಜನಿತ ಶರೀರ ಮತ್ತು ಇಂದ್ರಿಯಗಳಮೂಲಕವಾಗಿಯೂ ಸುಕೃತಕರ್ಮಶೇಷಮೂಲಕವಾಗಿಯೂ ಯದ್ಯಪಿ ಆನಂದ ಉಂಟಾದರೂ, ಅದು ಪರಿಮಿತವಾಗಿ ಅಶಾಶ್ವತವಾದುದರಿಂದ ಪರಿಪೂರ್ಣಬ್ರಹ್ಮಾನುಭವದಹಾಗೆ ನಿರತಿಶಯವಾದ ಶಾಶ್ವತವಾದ ಆನಂದವಲ್ಲವು ಎಂಬ ಅಭಿಪ್ರಾಯವು. ಯದ್ಯಪಿ ಶಾಸ್ತ್ರಾಭ್ಯಾಸಕಾಲದಲ್ಲೂ, ಯೋಗದಶೈಯ ಉಪಾಸನಕಾಲದಲ್ಲೂ, ವಿಷ್ಣುಲೋಕಪ್ರಾಪ್ತಿಯುಂಟಾಗುವಾಗಲೂ ಮತ್ತು ರಾಮಕೃಷ್ಣಾದ್ಯವತಾರ ಮಾಡಿದದೇಶವಿಶೇಷದಲ್ಲೂ ರಾಮಕೃಷ್ಣಾದಿಗಳೇ ಪರತತ್ವವೆಂಬ ಜ್ಞಾನಸುಕೃತ ಮೂಲಕ ಉಂಟಾದಾಗಲೂ ಸ್ವಲ್ಪ ಹೆಚ್ಚಿನ ಆನಂದವೇ ಉಂಟಾದರೂ ಅವು ಪರಿಮಿತವಾಗಿಯೂ ಅಶಾಶ್ವತವಾದವು. ಜೀವನ್ಮುಕ್ತಿಯೂ ಇಂತಾದ್ದೇ. ಆದುದರಿಂದ ಪರಿಪೂರ್ಣಾನುಭವವಲ್ಲವು, ಹಾಗಾದರೆ ಪರಿಪೂರ್ಣಾನುಭವವುಎಂತಾದ್ದೆಂದರೆಮುಂದಿನವಾಕ್ಯದಿಂದ ತಿಳಿಸುತ್ತಾರೆ—**ಮುಕ್ತದಶೈಯಿಲ್** - ಮೋಕ್ಷದಶೈಯಲ್ಲಿ, **ಪಿರಕ್ಕಿರವಿಕಾಸಮ್**- **ಸ್ವೇನರೂಪೇಣಾಭಿನಿಷ್ಪದ್ಯತೇ** ಎಂಬಲ್ಲಿ ಹೇಳಿರುವಹಾಗೆ ಜ್ಞಾನತಿರೋಹಿತತ್ವವು ಕಳೆದು ಉಂಟಾಗುವ ಜ್ಞಾನವಿಕಾಸವು ಎಂದರೆ ಅದರಿಂದುಂಟಾಗುವ ಆನಂದವು **ಸಂಕೋಚವಿಚ್ಛೇದಙ್ಗಳುಕ್ಕು ಕಾರಣಮೊನ್ರುಮಿಲ್ಲಾಮೈಯಾಲೇ**-ಜ್ಞಾನತಿರೋಹಿತತ್ವವು ಅಶಾಶ್ವತೆ, ಇವುಗಳಿಗೆ ಸ್ಥೂಲಸೂಕ್ಷ್ಮಶರೀರವನ್ನು ಹೊಂದಿರುವದೇ ಕಾರಣವು, ಅವು ವಿರಜಾವಗಾಹನ, ಅಮಾನವಕರಸ್ಪರ್ಶಗಳಿಂದ ತೊಲಗುವದರಿಂದ ಅಂತಹ ಕಾರಣವುಯಾವುದೂ ಇಲ್ಲದುದರಿಂದ, **ಪರಿಪೂರ್ಣವಿಷಯಮುಮಾಯ್**-ಪರಿಪೂರ್ಣ ಬ್ರಹ್ಮಾನುಭವರೂಪವಾಗಿಯೂ, **ಪುನರ್ವಿಚ್ಛೇದರಹಿತಮಾಯುಮ್** -

**ಇನ್ವನುಭವಪರೀವಾಹಮಾಯ್ (೧) "ಕ್ರಿಯತಾಮಿತಿಮಾಂವದ" ಎಣ್ಣ ರಪ್ಪಡಿಯೇ ಶೇಷಿಯುಕನ್ದ ಪರಿಪೂರ್ಣಕೈಂಕರ್ಯಮ್ ವರುಗಿರದು.**

ಆನಂದಕ್ಕೆ ಪುನಃ ವಿಚ್ಛೇದಯಾವುದೂ ಇಲ್ಲದೆ ನಿತ್ಯವಾಗಿ, **ಇರುಕ್ಕುಮ್**-ಇರುತ್ತದೆ. ಇವ್ವನುಭವವು ಕೈಂಕರ್ಯರೂಪವಾಗಿ ಪರಿಣಮಿಸುತ್ತದೆ. ಆತನು ಶೇಷಿಯು, ಮುಕ್ತನು ಶೇಷನು. ಆದುದರಿಂದ ತನ್ನ ಸ್ವಾಮಿಗೆಮಾಡುವ ಕೈಂಕರ್ಯಸಾಮ್ರಾಜ್ಯವೇ ತನಗೆ ನಿರತಿಶಯಾನಂದಕರವಾಗುತ್ತದೆಂದು ಉಪದೇಶಿಸುತ್ತಾರೆ. ಇದೂ ಇಷ್ಟಪ್ರಾಪ್ತಿಯಲ್ಲೇ ಮುಖ್ಯವಾಗಿ ಅಂತರ್ಗತವೆಂದು ಭಾವಿಸತಕ್ಕದ್ದೆಂಬಭಾವವು.

**ಇನ್ವನುಭವಪರೀವಾಹಮಾಯ್** – ಈ ಪರಿಪೂರ್ಣ ಬ್ರಹ್ಮಾನುಭವದಪ್ರವಾಹವಾಗಿ, **"ಕ್ರಿಯತಾಮಿತಿಮಾಂ ವದ"** –ಇಂತಾದ್ದನ್ನುಮಾಡು ಎಂಬುದಾಗಿ ನನ್ನನ್ನು ಕುರಿತುಹೇಳು" **ಎಣ್ಣರಪಡಿಯೇ** – ಎಂಬಲ್ಲಿ ಹೇಳಿರುವಹಾಗೆ, **ಶೇಷಿಯುಗನ್ದ** – ಶೇಷಿಗೆ ಇಷ್ಟವಾದ, **ಪರಿಪೂರ್ಣಕೈಂಕರ್ಯಮ್** – ಸಮಸ್ತಕೈಂಕರ್ಯವೂ, **ವರುಗಿರದು** – ಉಂಟಾಗುವದು. ಸರ್ವವಿಧಶ್ರೇಯಸ್ಸನ್ನೂ ಅದರಲ್ಲಿ ನಿರತಿಶಯವಾದುದು ಮೋಕ್ಷಪ್ರಾಪ್ತಿಯೂ, ಇಂತವುಗಳನ್ನುಂಟುಮಾಡಿದಸ್ವಾಮಿಗೆ ಶೇಷಭೂತನು ಮಾಡುವದು ಕಿಂಕರತ್ವಾಧಿರಾಜ್ಯವು. ಇಂತಹ ಕೈಂಕರ್ಯಪ್ರಾಪ್ತಿಯು ಸ್ವಾಭಾವಿಕವಾಗಿಯೇ ಉಂಟಾಗುತ್ತದೆ. ಪರಿಪೂರ್ಣಬ್ರಹ್ಮಾನುಭವದಪರೀವಾಹವಾಗಿ ಉಂಟಾಗುತ್ತದೆಂಬ ಭಾವವು. ದುಡ್ಡಿಗೋಸ್ಕರ ಉಂಟಾದಸ್ವಾಮಿಭೃತ್ಯನ್ಯಾಯದಹಾಗೆ ಅಲ್ಲವು. ಅಂತಹ ಕೈಂಕರ್ಯವಿಷಯದಲ್ಲಿ ಕ್ಲೇಶಭಾವನೆ ಇರಬಹುದು. ಇಲ್ಲಿಯಾದರೋ ಕೈಂಕರ್ಯವು ಪ್ರೀತಿಯಿಂದುಂಟಾದುದಾಗಿ ಶೇಷಿಯುಪ್ರಸನ್ನನಾದರೆ ಸಾಕೆಂಬಭಾವನೆಯು; ಆದುದರಿಂದ ಶೇಷಿಯುಗದ್ದ ಕೈಂಕರ್ಯವೆಂದು ಹೇಳಲ್ಪಟ್ಟಿತು. **ಪರಿಪೂರ್ಣ** ವೆಂದು ಏಕೆ ಹೇಳಲ್ಪಟ್ಟಿತೆಂದರೆ ಒಬ್ಬರು ಒಂದು ಕೈಂಕರ್ಯವನ್ನು ವಹಿಸಿದ್ದರೆ, ಅವರೊಂದಿಗೆ ಇರುವರೆಲ್ಲಾ ಆ ಕೈಂಕರ್ಯದಲ್ಲೇ ಅನ್ವಯಿಸಿದಹಾಗೆ ಭಾವನೆಯು. ಲೋಕದಲ್ಲೂ ಅಂತಹ ಭಾವನೆಯುಂಟು, ಹೇಗೆಂದರೆ ಒಬ್ಬ ಮಹಾನುಭಾವರಿಗೆ ಒಂದು ಸಂಗಡವರು ಹಾರವನ್ನು ಸಮರ್ಪಿಸುವಾಗ ಇತರರು ಜೊತೆಯಲ್ಲಿದ್ದರೆ, ಇತರರೂ ಸಹ ಹಾರವನ್ನು ಸಮರ್ಪಿಸಿದ ಹಾಗೆ ಭಾವನೆಯು. ಹಾಗೆಯೇ ದಿವ್ಯವೈಕುಂಠದಲ್ಲಿ ಎಲ್ಲಾ ಮುಕ್ತರೂ ಪರಿಪೂರ್ಣಕೈಂಕರ್ಯವನ್ನು ಮಾಡಿದಹಾಗೆ ಭಾವನೆಯು.

**ಕ್ರಿಯತಾಂಇತಿಮಾಂವದ** ಎಂಬ ಪೂರಾಶ್ಲೋಕವು ಯಾವುದೆಂದರೆ **"ಪರವಾನಸ್ಮಿ ಕಾಕುತ್ಸ್ಥತ್ವಯಿ ವರ್ಷಶತಂ ಸ್ಥಿತೇ। ಸ್ವಯಂತು ರುಚಿರೇ ದೇಶೇ**

(೧) ರಾಮಾ. ಆರಣ್ಯ. ೧೫. ೭.

**" ಪಾರಮಾರ್ಥಿಕ " ಎಂಬ ಗದ್ಯವಾಕ್ಯತ್ರಿಕ್ಕೊನ್ನ ಫಲಪರ್ವಪರಂಪರ್ಯೆಯೆಲ್ಲಾ ಮು' ಇಬ್ಬೇ ಯಥಾಪ್ರಮಾಣಮು' ವಿವಕ್ಷಿಕ್ಕಪಡುಗಿರದು.**

---

**ಕ್ರಿಯತಾ ಮಿತಿಮಾಂಪದ"** ಇದು ಲಕ್ಷ್ಮಣನವಾಕ್ಯವು, ಪಂಚವಟಿ ತುಂಬಾರಮ್ಯವಾದ ಪ್ರದೇಶವಾದುದರಿಂದ ಶ್ರೀರಾಮಚಂದ್ರಪ್ರಭುವು ಲಕ್ಷ್ಮಣನನ್ನು ಕುರಿತು ಅಲ್ಲಿಯೇ ಕೆಲವುಕಾಲ ಇರುವದಾಗಿನಿಶ್ಚಯಿಸಿ, ಜಲ, ಪುಷ್ಪ, ಸಮಿತ್‌ಕುಶ ಮೊದಲಾದವುಗಳಿಗೆ ನಿನಗೆ ಅನುಕೂಲವಾಗಿರುವ ಒಂದು ಸ್ಥಳದಲ್ಲಿ ಆಶ್ರಮವನ್ನು ರಚಿಸು ಎಂದು ಹೇಳಲು ; ಆಗ ಲಕ್ಷ್ಮಣನು ತಾನು ಶೇಷನಾದುದರಿಂದ ತನಗೆಕೊಟ್ಟ ಸ್ವಾತಂತ್ರ್ಯವನ್ನು ಒಪ್ಪದೆ, ತಾನು ಮಾಡುವಕೈಂಕರ್ಯವು ದ್ವಯ ಉತ್ತರಾರ್ಧದಲ್ಲಿ ಹೇಳಿರುವ ಹಾಗೆ ಸೀತಾಸಮೇತನಾದ ರಾಮನಿಗಾದುದರಿಂದ "ಸೀತಾಸಮಕ್ಷಂ" ಹೇಳುತ್ತಾನೇನೆಂದರೆ ? **ಪರವಾನಸ್ಮಿ** - ನಾನು ಯಾವಾಗಲೂ ಅಸ್ವತಂತ್ರನು, ನಿನಗೆ ಅಧೀನನು ಮೂಲಮಂತ್ರದ ಪ್ರಣವಾರ್ಥದಲ್ಲೇ ತಿಳಿಸುಕೊಂಡೆನು, **ನಿಶ್ಚಿತ್ಯತ್ವದದೀನ ತಾಮು'.** ನಿನ್ನೊಂದಿಗೆ ಸದಾ ಇರುವಂತಾವನು, ಶೇಷಿಯಾದ ನಿಮಗೆ ಎಲ್ಲಿ ಇಷ್ಟವೋ ಅಲ್ಲಿ ಆಶ್ರಮವನ್ನು ನಿರ್ಮಿಸು ಎಂದು ಆಜ್ಞಾಪಿಸಿದತಕ್ಕದ್ದೆಂದು ಪ್ರಾರ್ಥಿಸುತ್ತಾನೆ. ಲಕ್ಷ್ಮಣನು ತನ್ನ ಸೌಕರ್ಯ ಮುಖ್ಯವಲ್ಲವೆಂದು ಹೇಳಿ ಎಲ್ಲಿನಿರ್ಮಿಸಲಿ ಎಂದು ಕೇಳಿಕೊಳ್ಳುತ್ತಾನೆ. ಈ ಮಾತಿಗೆ ಶ್ರೀರಾಮಚಂದ್ರನು ಸುಪ್ರೀತನಾಗಿ ಬಹುರಮ್ಯವಾದ ಪ್ರದೇಶವನ್ನು ಗೋದಾವರಿತೀರದಲ್ಲಿ ತೋರಿಸುತ್ತಾರೆ. ಆದುದರಿಂದ ಶ್ರಿಯಃಪತಿ **ಯುಗನ್ದ** ಕೈಂಕರ್ಯವನ್ನೆಸಗುವದೇ ಮುಕ್ತನಿಗೆ ಪರಿಪೂರ್ಣ ಕೈಂಕರ್ಯವು.

ಇಲ್ಲಿ **ಪಾರಮಾರ್ಥಿಕ** ಎಂದು ಏಕೆಹೇಳಲ್ಪಟ್ಟಿತು ಎಂದರೆ ರಾಜಸತಾಮಸ ಗುಣಾಧಿಕ್ಯದಿಂದ ಅಪಾರಮಾರ್ಥಿಕವಾಗಿಯೇ ತಿಳಿಯುವದೇ ಸಾಧಾರಣವೆಂದೂ ಪಾರಮಾರ್ಥಿಕಗ್ರಹಣೆಯು ದುಸ್ತರವೆಂಬ ಅಭಿಪ್ರಾಯವನ್ನು ತಿಳಿಸುವದಕ್ಕಾಗಿ, ಎಂಬ ಭಾವವು. ಅಲ್ಲಿಗದ್ಯದಲ್ಲಿ ಶ್ರೀ ಭಾಷ್ಯಕಾರರು ಹೇಳಿರುವ ಫಲಪರಂಪರ್ಯೆಯೆಲ್ಲಾ ಇಲ್ಲೂ ವಿವಕ್ಷಿತವೆಂದು ತಿಳಿಸುತ್ತಾರೆ. ಅವು ಯಾವುವೆಂದರೆ **ನಿತ್ಯಕೈಂಕರ್ಯಪ್ರಾಪ್ತ್ಯಪೇಕ್ಷಯಾ ಪಾರಮಾರ್ಥಿಕೀ ಭಗವಚ್ಚರಣಾರವಿಂದ ಶರಣಾಗತಿರ್ಯಥಾವಸ್ಥಿತಾ ವಿರತಾಸ್ತುಮೇ - ಅಸ್ತುತೇತಯೈವ ಸರ್ವಂಸಂಪತ್ಸ್ಯತೇ** ಎಂಬುದರಿಂದ ಶರಣಾಗತಿಫಲವು ಸಿದ್ಧಿಸಲಿ ಎಂದು ಭಗವಂತನನ್ನು ಕುರಿತು ಪ್ರಾರ್ಥಿಸುತ್ತಾರೆ. ಅದಕ್ಕೆ ಭಗನಂತನಪ್ರತಿವಚನವು .. **ಅಸ್ತುತೇ ತಯೈವ ಸರ್ವಂ ಸಂಪತ್ಸ್ಯತೇ.** ಈ **ಫಲಪರಂಪರ್ಯೆ** ಯಾವುದೆಂದರೆ **ಪಾರಮಾರ್ಥಿಕಭಕ್ತ್ಯಾದಿಕೃತತ್ವ, ಪರಿಪೂರ್ಣತ್ವ, ಅನವರತತ್ವ, ನಿತ್ಯತ್ವ, ವಿಶದತಮತ್ವ, ಅನನ್ಯಪ್ರಯೋಜನತ್ವ, ಅವನಧಿಕಾತಿಶಯ ಪ್ರಿಯತ್ವ ವಿಶಿಷ್ಟ ಭಗವದನುಭವ**

**ಇನಿಮೇಲ್ ಮಾಶುಚಃ ಎಙ್ಗರವಿತ್ತಾಲೇ ಕೀೞ್ ಅರುಳಿಚೆಯ್ದ ಅರ್ಥ ತ್ತಿಲ್ ತೀರ್ವು ಪ್ರಕಾಶಿತವಾಗಿರದು.**

---

**ಜನಿತತ್ವ,** ಅವನಧಿಕಾತಿಶಯ **ಪ್ರೀತಿಕಾರಿತತ್ವ, ಅಶೇಷಾವಸ್ಥೋಚಿತತ್ವ, ಅಶೇಷಶೇಷತೈಕರತಿರೂಪತ್ವ, ನಿತ್ಯತ್ವ,** ಇವುಗಳಿಂದ ಕೂಡಿದ ಫಲಪರಂಪರೈಯುಳ್ಳ ಕೈಂಕರ್ಯಗಳನ್ನು ಮಾಡುವ ಭಾಗ್ಯವು ನನಗೆ ಒದಗಲಿ ಎಂದು ಪ್ರಾರ್ಥಿಸಿಸಿದುದಕ್ಕೆ, ಸ್ವಾಮಿಯು ಹಾಗೆ ಆಗಲಿ ಎಂದು ಒಪ್ಪಿರುತ್ತಾರೆ. ಇಲ್ಲಿ ಭಗವಂತನ ವಾಕ್ಯದಲ್ಲಿ, **ತಯ್ಯೈವ** ಎಂಬಲ್ಲಿನಏವಕಾರದಿಂದಲೂ **ಸರ್ವಂಸಂಪತ್ಸ್ಯತೇ** ಎಂಬಲ್ಲಿನ ಸಾರಶಬ್ದದಿಂದಲೂ ಇಲ್ಲಿ ಶ್ರೀ ಯತಿವರ್ಯರು ಅನುಷ್ಠಿಸಿದ ಶರಣಾಗತಿಯು ಅಂಗಿಶರಣಾಗತಿಯೇ ವಿನಾ ಕೆಲವರು ಹೇಳುವಹಾಗೆ ಅಂಗಶರಣಾಗತಿಯು ಎಂಬವಾದವು ನಿರಸ್ತವು. ಇಲ್ಲಿ **ಯಥಾಪ್ರಮಾಣಮ್** ಎಂಬುದರಿಂದ ಮೇಲೆ ತಾವೇ ಉದಾಹರಿಸಿದ **ಕ್ರಿಯತಾಂಮಿತಿಮಾಂವದ** ಎಂಬ ಪ್ರಮಾಣದಲ್ಲಿ ಹೇಳಿರುವ ಹಾಗೆ ಎಂದು ಅರ್ಥ ಮಾಡಬಹುದು. ಅಥವಾ ಇನ್ನೂ ಇತರ ಇತಿಹಾಸ ಪುರಾಣಗಳಲ್ಲಿ ಉಪಪಾದಿಸಿರುವ ಹಾಗೆ ಎಂದು ಅರ್ಥಮಾಡಬಹುದು. ಗುಹ, ಆಂಜನೇಯ, ಶಬರಿ ಭರದ್ವಾಜ ಮೊದಲಾದವರು ಶ್ರೀರಾಮಚಂದ್ರಪ್ರಭುವಿಗೆ ಮಾಡಿದ ಕೈಂಕರ್ಯಗಳೂ ಶ್ರಿಕೃಷ್ಣನಿಗೆ ವಿದುರ, ಅರ್ಜುನ, ಕುಬ್ಜೆ ಮಾಲಾಕಾರಂದಿಗಳು ಮಾಡಿದ ಸ್ವಾಮಿಗೆ ಇಷ್ಟವಾದ ಕೈಂಕರ್ಯಗಳು ಇಲ್ಲಿ ಸೂಚಿಸಲ್ಪಟ್ಟವು.

**ಇನುಮೇಲ್** – ಇಲ್ಲಿಂದ ಮುಂದಕ್ಕೆ, **"ಮಾಶುಚಃ" ಎಙ್ಗರವಿತ್ತಾಲೇ** – ಎಂಬ ಪ್ರಯೋಗದಿಂದ, **ಕೀೞ್ ಅರುಳ್‌ಚೆಯ್ದ** – ಈ ಹಿಂದೆ ಹೇಳಿದ **ತೀರ್ವು** – ನಿಷ್ಕರ್ಷಾರ್ಥವು, **ಪ್ರಕಾಶಿತವಾಗಿರದು** - ವ್ಯಕ್ತವಾಗುತ್ತದೆ. ಹಿಂದೆ ಹೇಳಿದ ನಿಷ್ಕರ್ಷಾರ್ಥವು ಯಾವುದು ಎಂದರೆ ಅನಿಷ್ಟನಿವೃತ್ತಿಮೂಲಕ ಇಷ್ಟಪ್ರಾಪ್ತಿಯು. ಯಾವುದು ಪ್ರಕಾಶಿಸುತ್ತದೆ ? ಎಂದರೆ ಇಷ್ಟಪ್ರಾಪ್ತಿಯುಂಟಾಗುತ್ತದೆ ಎಂಬ ದಾರ್ಢ್ಯದಮೂಲಕ ಪರಮವಿಶ್ವಾಸವನ್ನಿಡಬಹುದೆಂಬ ಅರ್ಥವು ಪ್ರಕಾಶಿಸುತ್ತದೆ. ಅರ್ಜುನನಶೋಕಕ್ಕೆ ಕಾರಣವು ಯಾವುದು ಎಂದರೆ ತನ್ನ ಪಾಪರಾಶಿಗಳೆಲ್ಲಾ ಹೋಗುವ ಬಗೆ ಹೇಗೆ ? ತನಗೆ ಉಪಾಸನಮಾಡಲು ಐಕಾಂತ್ಯಭಕ್ತಿ ಸಾಧ್ಯವಿಲ್ಲವೇ ಎಂಬುದು. ಈಗ **ಶರಣವ್ರಜ ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ** ಎಂದು ಯಾವಾಗ ಹೇಳಿದರೋ ಆಗ ಶೋಕಕ್ಕೆ ಕಾರಣವು ಕಳೆದು ಹೋಯಿತು. ಆದುದರಿಂದ **ಮಾಚುಶಃ** ಎಂಬುದನ್ನು ಅನುವಾದರೂಪದಲ್ಲಿ ಹೇಳಿದರೆಂಬ ಭಾವವು. ಆದುದರಿಂದ ಪುನರುಕ್ತಿಯಾಗುವದಿಲ್ಲವೆಂಬ ಭಾವವು. ಅನುವಾದರೂಪದಲ್ಲಿ ಹೇಳಿದುದುತಾನೇ ಎಕೆ ? ಎಂದರೆ ಈ ಅನುವಾದ ವಾಕ್ಯದಿಂದ ವಿಶ್ವಾಸದ ದೃಢೀಕರಣಕ್ಕಾಗಿ ಎಂದು ಭಾವಿಸತಕ್ಕದ್ದು.

## ಮಾಶುಚಃಇತಿಶಬ್ದಸ್ಯಾರ್ಥವಾದ

**ಶಿಲರ್ "ಮಾಶುಚಃ" ಎಙ್ಗರ (ವಿದು) ವಿಧಿ (ಯಾಗೈ) ಯಾಲೇ ಪ್ರಪನ್ನ ನಾನ ಪಿನ್ಪು ಶೋಕಿಕ್ಕೈ ವಿಧ್ಯತಿಲಂಘನಮಾಯ್ ಇವನೈ ಉಪಾಯಭೂತನಾನ ಶರಣ್ಯನ್ ನೆಗಿಳ್ ನ್ದು ತನ್ ಕಾರ್ಯತ್ತುಕ್ಕುತಾನೇ ಕಡವನಾಗೈಯಾಗಿರ**

---

ಶೋಕಿಸುತ್ತಾಇದ್ದವನನ್ನು ಕಂಡು ಶೋಕನಿವೃತ್ತಿಗೆ ಕಾರಣವನ್ನು ಹೇಳಿ ಇನ್ನು ಶೋಕಿಸಬೇಡವೆಂಬುದು ಫಲಿತಾರ್ಥವಾಗಿ ಹೇಳಿದರು. ಆದರೆ ಕೆಲವರು **ಮಾಶುಚಃ** ಎಂಬುದು ವಿಧಿಪರವಾಕ್ಯವೆಂದೂ ತಾವು ವಿಧಿ ಎಂದು ಮಾಡಿರುವ ಅರ್ಥವೇ ಉಚಿತವಾದುದೆಂದೂ ಭಾವಿಸುವರು. ಏತಕ್ಕೆಂದರೆ ವಿಧಿಯಾದರೆ ಸರ್ವಸ್ವಾತಂತ್ರ್ಯವು ಸ್ವಾಮಿಯಲ್ಲೇ ಎಂದು ನಂಬಿ ಸುಖವಾಗಿರುವನು. ಹಾಗಿಲ್ಲದೆಹೋದರೆ ಶೋಕಿಸುತ್ತಿದ್ದರೆ, ಸ್ವಾಮಿಯ ಆಜ್ಞೆಯನ್ನು ಮೀರಿದುದೂ ಅಲ್ಲದೆ, ಸರ್ವರಕ್ಷಕನು ರಕ್ಷಿಸಲು ಸಿದ್ಧವಾಗಿದ್ದರೂ ಅದನ್ನು ಮರೆತು, ಏನು ಉಪಾಯವು ಪಾಪಪರಿಹಾರಕ್ಕೆ ಎಂಬ ಶೋಕವು ಇರುತ್ತದೇ ವಿನಾ ನಿವೃತ್ತಿಯಾಗುವದಿಲ್ಲವು. ಆದುದರಿಂದ ಸ್ವಾತಂತ್ರ್ಯತ್ಯಾಗಮಾಡಿ ವಿಧಿ ಎಂದು ಭಾವಿಸುವದೇ ಉಚಿತವೆನ್ನುವರು. ಈ ಅಭಿಪ್ರಾಯವನ್ನು ನಿರಸನಮಾಡಿ ಸ್ವವಾಕ್ಯ ವಿರೋಧವಾಗುತ್ತದೆಂದು ತಿಳಿಸುತ್ತಾರೆ—

**ಮಾಶುಚಃ** ಎಂಬುದರ ಅರ್ಥವನ್ನು ಉಪದೇಶಿಸುತ್ತಾರೆ:- ಮೊದಲು ಮಾಶುಚಃ ಎಂಬುದೇನು **ಅನುವಾದವೇ** ಅಥವಾ **ವಿಧಿಯೋ** ಎಂಬುದನ್ನು ಚರ್ಚಿಸಿ ಅನುವಾದವೆಂದು ಹೇಳಿ, ಕೆಲವರ ವಿಧಿ ಎಂಬ ಭಾವವನ್ನು ತಿರಸ್ಕರಿಸಿ ಹೇಳುತ್ತಾರೆ - **ಶಿಲರ್** - ಕೆಲವು ಪೂರ್ವಪಕ್ಷಿಗಳು, **"ಮಾಶುಚಃ" ಎಙ್ಗರವಿದು** ಎಂಬ ಪ್ರಯೋಗವು, **ವಿಧಿಯಾಗೈಯಾಲೇ** - ವಿಧಿಯಾಗುವದರಿಂದ, **ಪ್ರಪನ್ನ ನಾನಪಿನ್ಪು** - ಶರಣಾಗತಿಯನ್ನನುಷ್ಠಿಸಿದ ನಂತರ, **ಶೋಕಿಕ್ಕೈ** - ಶೋಕಿಸಿದರೆ **ವಿಧ್ಯತಿಲಂಘನಮಾಯ್** - ಈ ವಿಧಿಯನ್ನು ಮೀರಿದುದಾಗಿ, **ಇವನೈ** - ಈ ಪ್ರಪನ್ನನನ್ನು, **ಉಪಾಯಭೂತನಾನಶರಣ್ಯನ್** - ಸಿದ್ಧೋಪಾಯನಾಗಿ ರಕ್ಷಿಸಲು ಕಂಕಣ ಬದ್ಧನಾದ ಶರಣ್ಯನನ್ನು, **ನೆಗಳ್ ನ್ದು** - ಉಪೇಕ್ಷಿಸಿ, **ತನ್ ಕಾರ್ಯತ್ತುಕ್ಕು ತಾನೇ ಕಡವನಾಗೈಯಾಗಿರ ಪ್ರತ್ಯವಾಯಂ** - ತನ್ನ ಕೆಲಸಕ್ಕೆ ತಾನೇ ಗೊತ್ತುಗಾರನು ಎಂದರೆ ತಾನೇ ಸ್ವತಂತ್ರನೆಂಬ ಪ್ರತ್ಯವಾಯವು, **ಉಂಡಾಮ್**-ಉಂಟಾಗುತ್ತದೆ **ಎನ್ರುಚೊನ್ನಮಿಡಮ್** - ಎಂದು ಹೇಳಿದ ಈ ಪ್ರಕರಣವು. ಇದರಿಂದ ಪೂರ್ವಪಕ್ಷಿಯವಾದವು ಉಪಪಾದಿಸಲ್ಪಟ್ಟಿತು; ವಿಧಿಯಲ್ಲವಾದರೆ ಸಿದ್ಧೋಪಾಯನಾದ ಶ್ರೀಯಃಪತಿಯನ್ನು ಉಲ್ಲಂಘಿಸಿ, ತಾನೇ ಶೋಕಿಸುತ್ತಾಇದ್ದರೆ ತಾನೇ

**ಪ್ರತ್ಯಯಮುಂಡಾಮೆನ್ರು ಚೊನ್ನವಿಡಂ ಬುದ್ಧಿಪೂರ್ವೋತ್ತರಾಘತ್ತೈಯುಮ್‌ "ಸರ್ವಪಾಪೇಭ್ಯಃ" ಎನ್ಗಿರವಿಡತ್ತಿಲೇ ಕೂಟ್ಟಿತ್ತಾಙ್ಗಳೇ ಪಣ್ಣಿನ ವ್ಯಾಖ್ಯಾನತ್ತುಕ್ಕುಮ್‌, ಪ್ರಪನ್ನನೈ ಶರಣ್ಯನ್ ಒರುಪಡಿಯಾಲುಮ್‌ ಕೈವಿಡಾನೆನ್ಗಿರ ವಾಕ್ಯತ್ತುಕ್ಕುಮ್‌ ವಿರುದ್ಧಮಾಮ್‌.**

**ಆಗೈಯಾಲ್ ಇವ್ವುಪಾಯತ್ತಿಲ್ ಳಿಯುಮವನುಕ್ಕು ಶೋಕಹೇತು**

---

ಉಪಾಯವನ್ನು ಹುಡುಕಿಕೊಳ್ಳಬೇಕೆಂಬ ಸ್ವಾತಂತ್ರ್ಯವನ್ನು ವಹಿಸಿದಂತಾಗುತ್ತದೆ; ಇದು ಪ್ರಪನ್ನನಿಗೆ ಅಹಂಕಾರರೂಪವಾದುದು; ಆತನಿಗೆ ತಾನು ಶೇಷಭೂತನು ಅಧೀನನು ಎಂಬ ಪ್ರಪನ್ನನಿಗೆ ಮುಖ್ಯವಾಗಿ ಬೇಕಾದ ಸ್ವರೂಪವೇ ಇಲ್ಲವಾಗುತ್ತದೆ. ವಿಧಿಯನ್ನು ಅತಿಲಂಘನೆಮಾಡಿ ಶೋಕಿಸಿದರೆ ಪ್ರಪದನವು ಸಿದ್ಧಿಸದೇ ಪ್ರತ್ಯುತಪ್ರತ್ಯವಾಯವೇ ಉಂಟಾಗಬಹುದು; ಆದುದರಿಂದ **ಮಾಶುಚಃ**-ಎಂಬುದು ವಿಧಿಯೇ ಎಂಬ ಪೂರ್ವ ಪಕ್ಷವು. ಹಾಗೆ ಹೇಳಿದರೆ ಪೂರ್ವಪಕ್ಷಿಯು ಹಿಂದೆ ಬುದ್ಧಿಪೂರ್ವೋತ್ತರಾಘವೂ ಕೂಡ ಪ್ರಪನ್ನನಿಗೆ ಲೇಪಿಸುವದಿಲ್ಲವೆಂದು ಹೇಳಿದುದಾಗಿ ಸ್ವವಚನ ವಿರೋಧ ಉಂಟಾಗುತ್ತದೆಯಾದುದರಿಂದ ವಿಧಿವಾದವನ್ನು ನಿರಾಕರಿಸ್ತಾರೆ— **ಚೊನ್ನ ವಿಡಂ** - ಸ್ವಾತಂತ್ರ್ಯದ ಆರೋಪಣೆಯುಂಟಾಗುತ್ತದೆ ಎಂದು ಹೇಳುವ ಪ್ರಕರಣವು, **ಬುದ್ಧಿಪೂರ್ವೋತ್ತರಾಘತ್ತೈಯುಮ್‌** - ಬುದ್ಧಿಪೂರ್ವಕವಾಗಿ ಮಾಡಿದ ಅಪರಾಧಗಳನ್ನು, **ಸರ್ವಪಾಪೇಭ್ಯಃ ಎನ್ಗಿರ ವಿಡತ್ತಿಲೇ** - **ಸರ್ವಪಾಪೇಭ್ಯಃ** ಎನ್ನುವ ಸ್ಥಳದಲ್ಲಿ, **ಕೂಟ್ಟಿ** - ಸೇರಿಸಿ, **ತಾಙ್ಗಳೇ ಪಣ್ಣಿನ ವ್ಯಾಖ್ಯಾನತ್ತುಕ್ಕುಮ್‌** - ತಾವೇ ಮಾಡಿದ ವ್ಯಾಖ್ಯಾನಕ್ಕೂ, ಮತ್ತು **ಪ್ರಪನ್ನನೈ**- ಪ್ರಪನ್ನನನ್ನು ಉಪಾಯಾನುಷ್ಠಾನ ಮಾಡಿದವನನ್ನು, **ಒರುಪಡಿಯಾಲುಮ್‌** - ಒಂದು ರೀತಿಯಿಂದಲೂ **ಕೈವಿಡಾನ್** - **ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ** ಎಂಬಲ್ಲಿ ಹೇಳಿರುವ ಹಾಗೆ ಕೈಬಿಡುವದಿಲ್ಲ, **ಎನ್ಗಿರ ವಾಕ್ಯತ್ತುಕ್ಕುಮ್‌** - ಎನ್ನುವ ವಾಕ್ಯಕ್ಕೂ **ವಿರುದ್ಧಮಾಮ್‌** - ವಿರುದ್ಧವಾಗುತ್ತದೆ. **ಸರ್ವಪಾಪೇಭ್ಯಃ** ಎಂಬಲ್ಲಿ ಬುದ್ಧಿಪೂರ್ವೋತ್ತರಾಘವೂ ಕೂಡ ಸೇರಿತು ಎಂದು ಪೂರ್ವಪಕ್ಷಿಗಳೇ ಹೇಳಿರುವದರಿಂದ, ಅವುಗಳಿಂದಲೂ ಮೋಕ್ಷಯಿಷ್ಯಾಮಿ ಎಂದಾದನಂತರ ಇನ್ನೂ ಮಾಶುಚಃ ಎಂಬ ವಿಧಿಯು ನಿರರ್ಥಕವಲ್ಲವೇ ಎಂಬ ಭಾವವು. ಪ್ರಪನ್ನನನ್ನು ಶರಣ್ಯನು ಎಂದಿಗೂ ಕೈಬಿಡುವದಿಲ್ಲವು. ಹೀಗಿರುವಾಗ ಶೋಕಿಸಬೇಡ ಎಂದು ತಾನೇ ಶರಣ್ಯನು ಏಕೆ ಹೇಳಬೇಕು. ಅದೂ ನಿರರ್ಥಕವಲ್ಲವೋ ? ಆದುದರಿಂದ **ಮಾಶುಚಃ** ಎಂಬುದು ವಿಧಿಯಲ್ಲವು.

ಮುಂದೆ ತಮ್ಮ ಅಭಿಪ್ರಾಯವಾದ ಅನುವಾದವೆಂಬುದನ್ನು ಸಮರ್ಥಿಸಿ ನಿಗಮನಮಾಡಿ ಹೇಳುತ್ತಾರೆ. **ಆಗೈಯಾಲೇ** - ವಿಧಿ ಎಂಬ ವಾದವು ಸರಿಯಲ್ಲ

**ಕ್ಕೆಳಿಲ್ಲಾಮ್ ಕಳಿಗೈಯಾಲೇ ಶೋಕಿಕ್ಕ ವೇಣ್ಡಾಮೆನ್ರು ಮಿಡತ್ತೈ ಚ್ಚೊಲ್ಲಿ ಕ್ಕೊಂಡು ವಿಶ್ವಾಸತ್ತೈ ದೃಢೀಕರಿಕ್ಕೈಯಿಲೇ ತಾತ್ಪರ್ಯಮ್.**

ವಾದುದರಿಂದ, **ಇವ್ವುಪಾಯತ್ತಿಲ್ ಇಳಿಯುವನಕ್ಕು** - ಈ ಲಘೂಪಾಯವಾದ ಶರಣಾಗತಿಯನ್ನು ಅವಲಂಬಿಸುವವನಿಗೆ, **ಶೋಕಹೇತುಗಳೆಲ್ಲಾ** - ಶೋಕಕ್ಕೆ ಕಾರಣವಾದವುಗಳೆಲ್ಲಾ, ಅವು ಯಾವುವೆಂದರೆ ಗುರೂಪಾಯವಾದ ಉಪಾಸನೆಗೆ ಕರ್ಮಯೋಗ ಸಹಕೃತ, ಐಕಾಂತ್ಯ ಭಕ್ತಿಯು ಆವಶ್ಯಕವಾಗಿ, ಅದು ತನಗೆ ದುರ್ಲಭವಾಗಿ, ಆ ಕಾರಣದಿಂದ ಅಪರಾಧ ಪರಂಪರೆಗಳು ಕಳಿಯುವ ಬಗೆ ತಿಳಿಯದೇಯಿರುವ ಈ ಶೋಕಹೇತುಗಳೆಲ್ಲಾ, **ಕಳಿಗೈಯಾಲೇ** -ಹೋಗುವವರಿಂದ, **ಶೋಕಿಕ್ಕವೇಣ್ಡಾಮೆನ್ರು ಮಿಡತ್ತೈ** - ಇನ್ನು ಮುಂದೆ ಶೋಕಿಸಲು ಕಾರಣವಿಲ್ಲವೆಂದು ಹೇಳುವ ಪ್ರಕರಣವನ್ನು, **ಶೊಲ್ಲಿಕ್ಕೊಂಡು** - ಹೇಳಿ, **ವಿಶ್ವಾಸತ್ತೈ** - ಶರಣಾಗತಿಯನ್ನು ಅನುಷ್ಠಿಸುವದಕ್ಕೆ ಮಹಾವಿಶ್ವಾಸವನ್ನು, **ದೃಢೀಕರಿಕ್ಕೈಯಿಲೇ** - ದೃಡೀಕರಿಸಿ ಹೇಳುವದರಲ್ಲಿ, **ತಾತ್ಪರ್ಯಮ್** - **ಮಾಶುಚಃ** ಎಂಬುದಕ್ಕೆ ತಾತ್ಪರ್ಯವು. ಅರ್ಜುನನನ್ನು ಕುರಿತು ಶ್ರೀ ಕೃಷ್ಣನು **ಮಾಶುಚಃ** - ಶೋಕಿಸಬೇಡವೆಂದು ಹೇಳಬೇಕಾದರೆ ಆತನು ಶೋಕಿಸುತ್ತಿದ್ದುದನ್ನು ಕಂಡು ಹಾಗೆ ಹೇಳಿರಬೇಕೆಂಬುದು ವ್ಯಕ್ತವು. ಶೋಕಹೇತುಗಳು ಯಾವುವು ಎಂದರೆ ತನಗೆ ಕರ್ಮಯೋಗಾದಿಗಳನ್ನು ಅನುಷ್ಠಿಸಲು ಶಕ್ತಿಯಿಲ್ಲವು, ಭಕ್ತಿಯೋಗಕ್ಕೆ ಚಿತ್ತೈಕಾಂತ್ಯವನ್ನಿಟ್ಟು ಉಪಾಸಿಸಲು ಸಾಧ್ಯವಿಲ್ಲವೇ ; ಆದುದರಿಂದ ಪಾಪಗಳು ಹೋಗುವ ಬಗೆ ಹೇಗೆ ? ಅವುಗಳಿಗೆ ವಿಧಿಸಿರುವ ಪ್ರಾಯಶ್ಚಿತ್ತಗಳನ್ನು ಅನುಷ್ಠಿಸೋಣವೆಂದರೆ ಪಾಪಗಳ ಆನಂತ್ಯವು, ಕರ್ಮಯೋಗಾದಿಗಳು ಹೇಗೆ ಕಷ್ಟವೋ ಹಾಗೆಯೇ ಪ್ರಾಯಶ್ಚಿತ್ತಾನುಷ್ಠಾನಗಳು. ಆದುದರಿಂದ ತನ್ನನ್ನು ಶರಣ ಹೊಂದಿದರೆ ಸರ್ವಪಾಪರೂಪಗಳಾದ ಅನಿಷ್ಟವೆಲ್ಲಾ ತೊಲಗಿ ಇಷ್ಟಪ್ರಾಪ್ತಿಯಾದ ಮೋಕ್ಷಸುಖ ಉಂಟಾಗುವದರಿಂದ **ಮಾಶುಚಃ** ಎಂದು ಹೇಳಿ ಅರ್ಜುನನಿಗೆ ಅವರ ಮಾತಿನಲ್ಲಿ ಪೂರ್ಣ ವಿಶ್ವಾಸವನ್ನು ಇಡಬಹುದೆಂಬ ದಾರ್ಢ್ಯವನ್ನುಂಟುಮಾಡುವದಕ್ಕಾಗಿ ಹೇಳಿದ ಮಾತಾದುದರಿಂದ ವಿಧಿಯಲ್ಲವು ; ಅನುವಾದವು, ಎಂದು ನಿಗಮನಮಾಡಿ ಹೇಳಿದರು. ಶ್ರೀ ಕೃಷ್ಣನು ಈ ಚರಮಶ್ಲೋಕದ ಹಿಂದಿನ ಶ್ಲೋಕದಲ್ಲೂ ಕೂಡ ಗುರೂಪಾಯವನ್ನೇ ಹೇಳಿ ಮುಗಿಸಿದುದರಿಂದ ಆ ಉಪಾಯವು ದುಷ್ಕರವೇ ಎಂಬ ಶೋಕವು ಉಂಟಾಗಿ ಆಗ ಲಘೂಪಾಯವನ್ನು ಹೇಳಿ **ಮಾಶುಚಃ** ಎಂದು ಸಮಾಧಾನವನ್ನು ಮಾಡಿದರು. ಆದುದರಿಂದ ಈಗಿನ ಅರ್ಜುನನ ಶೋಕಕ್ಕೆ ಕಾರಣವೇನೆಂದು ನಿರ್ಧರಿಸಿ ಹೇಳಬೇಕಾದುದು ಆವಶ್ಯವಾದುದರಿಂದ ಎರಡು ಕಾರಿಕೆಗಳನ್ನು ಅನುಗ್ರಹಿಸುತ್ತಾರೆ.

ಈಗಿನ ಶೋಕವು ಗೀತೋಪದೇಶಾದಿಯಲ್ಲಿ ಉಂಟಾದ ಬಂಧು ನಾಶವಾಗು

**ಕಾ. ಬಂಧು ನಾಶಾದಯಃ ಬಹವ ಶ್ಶೋಕ ಹೇತವಃ |**
**ತತ್ತತ್ಸ ಮುಚಿತೈ ಸಮ್ಯ ಗುಪದೇಶೈ ರಪೋದಿತಾಃ ||**

ತ್ತಲ್ಲಾ, ಆ ಕಾರಣದಿಂದ ಭೀಷ್ಮ ದ್ರೋಣಾದಿಗಳನ್ನು ಕೊಲ್ಲುವ ಯುದ್ಧ ಪ್ರಯತ್ನ ಮಾಡಲಾರನೆಂಬ ಶೋಕವಲ್ಲವೆಂದು ಮೊದಲು ಹೇಳಿ, ಅನಂತರ ಎರಡನೆಯ ಕಾರಿಕೆಯಿಂದ ಈಗಿನ ಶೋಕಕ್ಕೆ ಕಾರಣವನ್ನು ತಿಳಿಸುತ್ತಾರೆ—ಮೊದಲು ಉಂಟಾದವು **ಬಹವಃ ಶ್ಶೋಕಹೇತವಃ** – ಶೋಕಕ್ಕೆ ಅನೇಕ ಕಾರಣಗಳು, ಅವು ಯಾವುವು ವೆಂದರೆ **ಬಂಧು ನಾಶಾದಯಃ** - ಬಂಧುಗಳ ನಾಶವೇ ಮೊದಲಾದವುಗಳು, **ತತ್ತತ್ಸ ಮುಚಿತೈಃ** – ಆ ಕಾರಣಗಳಿಗೆಲ್ಲಾ ಯೋಗ್ಯವಾದ **ಉಪದೇಶೈ** - ದೇಹಾತ್ಮ ವಿವೇಕ ಮೊದಲಾದ ಸದುಪದೇಶಗಳಿಂದ, **ಸಮ್ಯಕ್** – ಸಂಪೂರ್ಣವಾಗಿ ಚನ್ನಾಗಿ, ಅನಂತರ ಶೋಕವು ಸ್ವಲ್ಪವೂ ಇಲ್ಲದಹಾಗೆ, **ಅಪೋದಿತಾಃ** – ಹೋಗಲಾಡಿಸಲ್ಪಟ್ಟವು. **ಬಂಧುನಾಶಾದಯಃ** - ಎಂಬಲ್ಲಿನ ಬಂಧು ಶಬ್ದವು, ಗುರು, ಗಜ, ಅಶ್ವ, ಮೊದಲಾದವುಗಳಿಗೂ ಉಪಲಕ್ಷಣವೆಂದೂ, **ಆದಿ** ಶಬ್ದವು ಆಸುರ ಸಂಪತ್ತಿನಿಂದುಂಟಾಗುವುವು ಹೇಳಲ್ಪಟ್ಟಿತೆಂದೂ ಕಾರಿಕಾದರ್ಪಣ ವ್ಯಾಖ್ಯಾನವಿರುತ್ತದೆ. ಗೀತೆಯಲ್ಲಿ ಅರ್ಜುನನ ಶೋಕಕ್ಕೆ ಹೇತುಗಳು ಯಾವುವೆಂದರೆ.—

೧. **ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್** - ಸ್ವಜನರೊಂದಿಗೆ ಯುದ್ಧಮಾಡುವುದು ಹೇಗೆ ? ಎಂಬುದು.

೨. **ಧರ್ಮೇ ನಷ್ಟೇ ಕುಲಂ ಕೃತ್ಸ್ನಂ ಅಧರ್ಮೋ ಭಿಭವತ್ಯುತ,** ಎಂದೂ, ಆ ಅಧರ್ಮದಿಂದ **ಪ್ರದುಷ್ಯನ್ತಿ ಕುಲಸ್ತ್ರೀಯಃ** ಎಂಬುದರಿಂದ ಶೋಕವು.

೩. **ಜಾಯತೇ ವರ್ಣಸಂಕರಃ** ಎಂಬುದು ಸ್ತ್ರೀಯರು ಕೆಟ್ಟುಹೋಗುವದರಿಂದ ವರ್ಣಸಂಕರವು ಎಂಬ ಶೋಕವು,

೪. **ಉತ್ಸಾದ್ಯನ್ತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ"** ಎಂಬದಾಗಿಯೂ ಶೋಕವು.

೫. ತನಗೆ **ನರಕೇ ನಿಯತಂ ವಾಸಃ** ಎಂದೂ ಶೋಕವು.

೬. **ಕಥಂ ಭೀಷ್ಮ ಮಹಂ ಸಂಖ್ಯೇದ್ರೋಣಂ ಚ ಮಧುಸೂದನ** ಎಂದು ಪೂಜಾರ್ಹರಾದವರನ್ನು ಪ್ರತ್ಯುತ ಕೊಲ್ಲುವದು ಹೇಗೆ ? ಎಂಬದಾಗಿಯೂ ಶೋಕವು. ಹೀಗೆ **ಆದಿ** – ಈ ಶೋಕ ಹೇತುಗಳು ಹೇಳಲ್ಪಟ್ಟವು. ಇವುಗಳಿಗೆ ಅನೇಕ ವಿಧವಾಗಿ ಸಮಾಧಾನ ಹೇಳಿ ಶೋಕವನ್ನು ಶ್ರೀ ಕೃಷ್ಣಭಗವಾನ್ ಹೋಗಲಾಡಿಸಿರುತ್ತಾರೆ. ಪುನಃ ವಿಶ್ವರೂಪ ಪ್ರದರ್ಶನ ಕಾಲದಲ್ಲೂ ಅರ್ಜುನನಿಗೆ ವ್ಯಥೆಯುಂಟಾಯಿತು, ಘೋರರೂಪವನ್ನು ನೋಡಿ ವ್ಯಾಕುಲಚಿತ್ತನಾಗಿರುವಾಗ **"ಮಾತೇ ವ್ಯಥಾ"** (ಗೀ. ೧೧. ೪೯.) ಎಂದು ಹೇಳಿ ಸಮಾಧಾನ ಹೇಳಿರುತ್ತಾರೆ.

**ಸುದುಷ್ಕರತ್ವಾದ್ಧರ್ಮಾಣಾ ಮಪಾರತ್ವಾದ್ವಿರೋಧಿನಾಮ್ ।**
**ಸಿದ್ಧಫಲ ವಿಳಂಬಾಚ್ಚ ಶೋಕೋ ದ್ಯ ವಿನಿವಾರ್ಯತೇ ॥**

ಪುನಃ ದೈವಾಸುರ ವಿಭಾಗಮಾಡಿ ಉಪದೇಶಿಸಿದಾಗ, ತಾನು ಎಲ್ಲಿ ಆಸುರ ಸ್ವಭಾನೋ ಎಂದು ಚಿಂತಾಕ್ರಾಂತನಾದಾಗ **"ಮಾಶುಚ ಸ್ಸಂಪದಂ ದೈವೀ ಮಭಿಜಾತೋಸಿ ಪಾಂಡವ"** ಎಂದು ಹೇಳಿ ಅರ್ಜುನನಿಗೆ ಸಮಾಧಾನವನ್ನು ಹೇಳಿರುತ್ತಾರೆ.—(ದಾಸನು ಬರೆದಿರುವ ಗೀತೆಯ ೨೫೧೨ ನೆಯ ಪುಟ ನೋಡಿ). ಹೀಗೆ **ಬಹವ ಶ್ಶೋಕಹೇತವಃ** ಈ ಆದಿ ಪದದಲ್ಲಿ ಸೇರಿದವು. ಇವೆಲ್ಲವೂ ಸಮ್ಯಕ್ಯುಪದೇಶಗಳಿಂದ ಹೋಗಲಾಡಿಸಲ್ಪಟ್ಟವು. ದೇಹವು ಅನಿತ್ಯವೆಂದೂ ಅದು ಎಂದಿಗಿದ್ದರೂ ವಿನಾಶೀ ಎಂದೂ, ಹುಟ್ಟಿದವನಿಗೆ ಮರಣವು ಎಂದಿಗೂ ತಪ್ಪಿದ್ದಲ್ಲವೆಂದೂ, ಆತ್ಮನಿತ್ಯನಾದುದರಿಂದಲೂ, ಅಣುವಾದುದರಿಂದಲೂ ಯುದ್ಧದಲ್ಲಿ ಕೊಂದು ನಾಶಮಾಡಲು ಸಾಧ್ಯವಿಲ್ಲವೆಂದೂ, ಚೇತನನಿಗೆ ಒಂದು ದೇಹವು ಹೋದರೂ ಹೊಸದಾಗಿ ಇನ್ನೊಂದು ದೇಹವು ಬರುತ್ತದೆಂದೂ, ಧರ್ಮಯುದ್ಧದಲ್ಲಿ ಮಡಿದರೂ ಸ್ವರ್ಗಪ್ರಾಪ್ತಿಯುಂಟೆಂದೂ, ಕ್ಷತ್ರಿಯನು ತನ್ನ ಸ್ವಧರ್ಮನಾದ ಧರ್ಮಯುದ್ಧ ಮಾಡದಿದ್ದರೆ ಪಾಪ ಉಂಟಾಗುತ್ತದೆಂದೂ, ಈಗ ಯುದ್ಧದಿಂದ ಹಿಂತಿರುಗಿದರೆ ಲಾಘವವನ್ನು ಶತ್ರುವಿನಿಂದ ಪರಾಭವವನ್ನು ಹೊಂದುವಿ ಎಂದೂ, ಸ್ವಧರ್ಮಪಾಲನೆಯಿಂದ ಕ್ರಮೇಣ ಮೋಕ್ಷವನ್ನು ಹೊಂದುವಿ ಎಂದೂ, ಹೇಳಿ, **"ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ** ಎಂದು ಸಮಾಧಾನ ಮಾಡಿರುತ್ತಾರೆ. ಹೀಗೆಲ್ಲಾ ಉಪದೇಶಗಳಾದುದರಿಂದ **ತತ್ತತ್ಸಮುಚಿತೈಃ** ಎಂಬ ಪ್ರಯೋಗವು. ನಿಶ್ಶೇಷವಾಗಿ ಆ ಶೋಕವು ಹೀಗೆ ನಿವಾರಿಸಲ್ಪಟ್ಟಿತು.

**ಮಾಶುಚಃ** - ಎಂದು ಶ್ರೀ ಕೃಷ್ಣಭಗವಾನ್ ಹೇಳುವದಕ್ಕೆ ಅರ್ಜುನನಿಗೆ ಶೋಕಕ್ಕೆ ಈಗ ಕಾರಣವೇನೆಂಬುವಕ್ಕೆ ಮೂರು ಕಾರಣಗಳನ್ನು ಮುಂದಿನ ಕಾರಿಕೆಯಿಂದ ತಿಳಿಸುತ್ತಾರೆ—**ಧರ್ಮಾಣಾಂ** - ಕರ್ಮಯೋಗ ಜ್ಞಾನಯೋಗ ಭಕ್ತಿಯೋಗ ಧರ್ಮಗಳ, **ಸುದುಷ್ಕರೇಣ** – ಅನುಷ್ಠಾನವು ಬಹಳ ಕಷ್ಟಸಾಧ್ಯವಾದುದರಿಂದಲೂ, **ವಿರೋಧಿನಾಂ** – ಪ್ರತಿಬಂಧಕ ಪಾಪಗಳ, **ಅಪಾರತ್ವಾತ್** – ಮಿತಿಮೀರಿರುವದರಿಂದಲೂ, ಪ್ರಾಯಶ್ಚಿತ್ತಗಳಿಂದ ಹೋಗಲಾಡಿಸಿಕೊಳ್ಳುವದಕ್ಕೆ ಒಂದು ಜನ್ಮದಲ್ಲೇ ಸಾಧ್ಯವಿಲ್ಲದುದರಿಂದಲೂ, **ಸಿದ್ಧಫಲವಿಳಂಬತ್ವಾತ್** - ಮೋಕ್ಷಪ್ರಾಪ್ತಿಯು ದೇಹಾವಸಾನದಲ್ಲೇ ಉಂಟಾಗದ ಪ್ರಾರಬ್ಧವಿನ್ನೂ ಅನುಭವಿಸಲು ಇದ್ದು, ಹೀಗೆ ವಿಳಂಬ ಉಂಟಾಗಬಹುದಾದುದರಿಂದಲೂ, ಹೀಗೆ ಈ ಮೂರು ವಿಧ ಶೋಕಕಾರಣಗಳೂ, **ಅದ್ಯ** – ಈ ಸಂದರ್ಭದಲ್ಲಿ, ಅರ್ಜುನನಿಗೆ ಉಂಟಾದವು, **ವಿನಿವಾರ್ಯತೇ** - **ಮಾಶುಚಃ** ಎಂದು ಹೇಳುವದಕ್ಕೆ **ಶರಣಂ ವ್ರಜ** ಎಂಬ ಹಿತವನ್ನು ಉಪದೇಶಿಸಿ

**ಅಭಿಮತಫಲತ್ತುಕ್ಕು ದುಷ್ಕರ ಸಾಧನಮುಮನ್ರಿಕ್ಕೇ ಸರ್ವವಿರೋಧಿ ನಿವರ್ತ್ತನಕ್ಷಮುಮಾಯ್, ಫಲವಿಳಂಬಮುಮನ್ರಿಕ್ಕೇ ಇರುಕ್ಕಿರ ಇವ್ವುಪಾಯ ವಿಶೇಷಮ್ ಉಪದಿಷ್ಟಮಾನ ಪಿನ್ಬು, ಉಪಾಯ ದೌಷ್ಕರ್ಯಾದಿಗಳಡಿಯಾಕ ಉನಕ್ಕು ಶೋಕಿಕ್ಕ ಪ್ರಾಪ್ತಿಯಿಲ್ಲೈ. ಇವ್ವುಪಾಯ ಮನುಷ್ಠಿತ್ತಾಲೇ ಉನ್ ಕಾರ್ಯಂ ಎನಕ್ಕು ಭರಮಾಯ್, ನಾನೇ ಫಲಿಯುಮಾಯ್, ಉನ್ನೈರಕ್ಷಿ**

---

ಹೋಗಲಾಡಿಸಿರುತ್ತಾರೆ. ಶ್ರೀ ಯಾಮುನ ಮುನಿಗಳು ಕರ್ಮಯೋಗ ಜ್ಞಾನಯೋಗ ಭಕ್ತಿಯೋಗ ರೂಪಧರ್ಮಗಳ **ಸದುಷ್ಕರತ್ವ** ದಿಂದಲೇ ,**ನಧರ್ಮ ನಿಷ್ಠೋಸ್ಮಿ ನ ಚಾತ್ಮವೇದೀ** ಎಂದು ಹೇಳಿ ಆಕಿಂಚನ್ಯದಿಂದ ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ—ಶ್ರೀ ಯತಿವರ್ಯರೂ ಈ ಚರಮ ಶ್ಲೋಕ ವ್ಯಾಖ್ಯಾನದಲ್ಲೇ ಪಾಪಗಳ ಆನಂತ್ಯವನ್ನು ತನ್ನಿವಾರಣೆಗಾಗಿ ಪ್ರಾಯಶ್ಚಿತ್ತಾನಂತ್ಯವನ್ನೂ ಉಪಪಾದಿಸಿರುತ್ತಾರೆ ಶ್ರೀ ನಮ್ಮಾಳ್ವಾರ್ವರು ವಿಳಂಬಾ ಸಹನತ್ವವನ್ನು ಪ್ರದರ್ಶಿಸಿರುತ್ತಾರೆ—ಹೀಗೆ ಇಲ್ಲಿ **ಮಾಶುಚಃ** ಎಂಬಲ್ಲಿ ತೋರುವ ಶೋಕ ಹೇತುಗಳು ಈ ಮೂರೂ ಎಂದು ಹೇಳಿವರು.

ಈ ಎರಡು ಕಾರಿಕೆಗಳ ಅಭಿಪ್ರಾಯವನ್ನು ತಾವೇ ಉಪಪಾದಿಸಿ ವಿಶದೀಕರಿಸುತ್ತಾರೆ.—**ಅಭಿಮತ ಫಲತ್ತುಕ್ಕು** - ತನಗೆ ಇಷ್ಟವಾದ ಫಲಕ್ಕೆ, **ದುಷ್ಕರ ಸಾಧನಮುಮನ್ರಿಕ್ಕೇ** - ಕರ್ಮಯೋಗ ಭಕ್ತಿಯೋಗಾದಿಗಳ ಹಾಗೆ ಅಸಾಧ್ಯವೂ ಅಲ್ಲದೆ, **ಸರ್ವವಿರೋಧಿ ನಿವರ್ತ್ತನಕ್ಷಮುಮಾಯ್** - ಸಮಸ್ತ ವಿರೋಧಿವರ್ಗವಾದ ಪಾಪಗಳನ್ನು ಹೋಗಲಾಡಿಸಲು ಯೋಗ್ಯವಾಗಿಯೂ, **ಫಲವಿಳಂಬಮುಮನ್ರಿಕ್ಕೇ** - ಫಲಪ್ರಾಪ್ತಿಗಾಗಿ ಜನ್ಮಾಂತರವಿಳಂಬಬೇಕಿಲ್ಲದೆಯಿರುವ, **ಇರುಕ್ಕಿರ**- ಇರುವ, **ಇವ್ವುಪಾಯವಿಶೇಷಂ** - ಈ ಭರನ್ಯಾಸರೂಪ ವಿಶೇಷವು (ಪ್ರಪದನವು) **ಉಪದಿಷ್ಟಮಾನ ಪಿನ್ಬು** - ಉಪದೇಶಿಸಲ್ಪಟ್ಟನಂತರ, **ಉಪಾಯ ದೌಷ್ಕರ್ಯಾದಿಗಳಡಿಯಾಗ** - ಉಪಾಸನರೂಪ ಭಕ್ತಿಯೋಗದ ಕಷ್ಟಸಾಧ್ಯತೆಯೇ ಮೊದಲಾದವುಗಳ ಮೂಲಕವಾಗಿ, **ಉನಕ್ಕು** - ನಿನಗೆ, **ಶೋಕಿಕ್ಕಪ್ರಾಪ್ತಿಯಿಲ್ಲೈ** - ಶೋಕಿಸಬೇಕಾದ ಸಂಭವವಿಲ್ಲವು. ಹೀಗೆ ಹೇಳುವದರಿಂದ ಇನ್ನೊಂದು ಉಪಾಯವಾದ ಉಪಾಸನವು ದುಷ್ಕರವಾದುದೆಂದೂ, ಈ ಜನ್ಮದಲ್ಲೇ ಸರ್ವವಿರೋಧಿ ನಿವರ್ತ್ತಕವಲ್ಲವೆಂದೂ, ಫಲದಲ್ಲಿ ವಿಳಂಬವುಳ್ಳದ್ದೆಂದೂ ಹೇಳಿದಂತೇ ಆಯಿತು. ಈ ಲಘೂಪಾಯವಾದ ಭರನ್ಯಾಸವನ್ನು ಉಪದೇಶಿಸುವ ಚರಮಶ್ಲೋಕಾರ್ಥ ಶಾಬ್ದವಾಗಿ ತೋರುವ ಅರ್ಥವು ಇದೇ ಎಂಬ ಭಾವವು. **ಮಾಶುಚಃ** ಎಂಬಲ್ಲಿ ತೋರುವ ಪರಮ ವಿಶ್ವಾಸದಾರ್ಢ್ಯದಿಂದ ಆರ್ಥವಾಗಿ ತೋರುವ ಅಭಿಪ್ರಾಯವನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.—ಪಾಪಗಳೆಲ್ಲಾ ಕಳೆದೇನೋ ಹೋಗಬಹುದು. ತನ್ನ ಇಷ್ಟಪ್ರಾಪ್ತಿ ಯಾವುದು ಎಂದರೆ? ಶ್ರಿಯಃಪತಿಯೊಂದಿಗೆ ಸಾಯುಜ್ಯವು. ಅದು

**ಯಾದ ಪೋದು ಎನಕ್ಕೇ ಅನವದ್ಯವಾನ್ಪಡಿ ಯಿರುಕ್ಕೈಮ್ ದಶೈಯಿಲುಮ್ ಧನಾದಿತುಲ್ಯನಾನ ವುನಕ್ಕು ಶೋಕಿಕ್ಕ ಪ್ರಾಪ್ತಿಯುಣ್ಡೋ ವೆನ್ರು ತಿರುವು**

ಉಂಟಾಗದೆ ಏನಾದರೂ ಶೋಕವೋ? ಎಂವರೆ ಅದಕ್ಕೂ ಕಾರಣವಿಲ್ಲವೆಂದು ಉಪಪಾದಿಸುತ್ತಾರೆ— **ಇವ್ವುಪಾಯಮನುಷ್ಠಿತ್ತಾಲ್** - ಈ ಭರನ್ಯಾಸವನ್ನು ನೀನು ಅನುಷ್ಠಿಸಿದರೆ, **ಉನಕಾರ್ಯಂ** - ನೀನು ವೈಕುಂಠವನ್ನು ಕುರಿತು ಹೋಗ ಬೇಕೆಂಬ ಕಾರ್ಯವು, **ಎನಕ್ಕು ಭರಮಾಯ್** - ನನಗೆ ಸೇರಿ ಭಾರವಾಗಿ, **ನಾನೇ ಫಲಿಯುಮಾಯ್**-ನನ್ನ ಮಕ್ಕಳು ನನ್ನೊಂದಿಗೆ ಸೇರಿ ಮುಂದಕ್ಕೆ ಯಾವ ಕ್ಲೇಶದ ಭಯವೂ ಇಲ್ಲದೆ ನಿರತಿಶಯಾನಂದದಲ್ಲಿರುವವನನ್ನಾಗಿ ಕಾಣುವದು ನನಗೆ ಪರಮ ಭೋಗ್ಯವಾಗಿ, **ಉನ್ನೈರಕ್ಷಿಯಾದ ಪೋದು** - ಶರಣಾಗತನಾದ ನಿನ್ನನ್ನು ರಕ್ಷಿಸದೇ ಇದ್ದಾಗ, **ಅನವದ್ಯಮಾನ್ಪಡಿಯಿರುಕ್ಕುಮ್** - ದೋಷಯುಕ್ತವಾಗಿ ರುವ ಅವಸ್ಥೆಯಲ್ಲಿ, **ಧನಾದಿತುಲ್ಯನಾನ** - ಸರ್ವೇಶ್ವರನಾದ ನನಗೆ ಧನಧಾನ್ಯಗಳಿಗೆ ಸಮಾನವಾದ ಎಂದರೆ **ಸ್ವತ್ವಮಾತ್ಮನಿ ಸಂಜಾತಂ ಸ್ವಾಮಿತ್ವಂ ಬ್ರಹ್ಮಣಿಸ್ಥಿ ತಮ್** ಎಂಬಲ್ಲಿ ಹೇಳಿರುವಹಾಗೆ ನೀನು ನನ್ನ ಧನಧಾನ್ಯಗಳ ಹಾಗೆ ಸ್ವತ್ತಾಗಿ, ನಾನು ನಿನಗೆ ಸ್ವಾಮಿಯಾದುದರಿಂದ ಅಂತಹ; **ಉನಕ್ಕು** - ಶೇಷನಾದ ನಿನಗೆ, **ಶೋಕಿಕ್ಕಪ್ರಾಪ್ತಿಯುಂಡೋ** - ಎಲ್ಲಾದರೂ ಶೋಕಿಸುವ ಸಂದರ್ಭ ವುಂಟೋ? ಎಂದಿಗೂ ಇಲ್ಲವೆಂಬ, **ತಿರುವುಳ್ಳಮ್** - ಅಭಿಮತವಾದ ಅಭಿಪ್ರಾಯವು. "**ತವಾಸ್ಮೀತಿಚಯಾಚತೇ । ಅಭಯಂ ಸರ್ವಭೂತೇಭ್ಯೋದದಾಮ್ಯೇತದ್ವ್ರತಂ ಮಮ**" ಎಂದು ಪ್ರತಿಜ್ಞೆ ಮಾಡಿರುವವರಿಂದ ಶರಣಾಗತ ರಕ್ಷಣೆಯ ಭರವು ತನಗೆ ಸೇರಿದುದು ಎಂದು ಹೇಳಿಕೊಂಡಿರುತ್ತಾರೆ. ಹಾಗೆ ಶರಣಾಗತನು ಎಂತವನೇ ಆಗಲಿ ರಕ್ಷಿಸದೇ ಹೋದರೆ ತಮಗೆ **ಅನವದ್ಯಮಾಯ್ ಇರುಕ್ಕೈಮ್** ಎಂದು ಶ್ರೀ ರಾಮಚಂದ್ರಪ್ರಭುವು ಹೇಳಿಕೊಂಡಿರುತ್ತಾರೆ— **ಆರ್ತೋವಾ ಯದಿವಾ ದೃಪ್ತಃ ಪರೇಷಾಂ ಶರಣಾಗತಃ । ಅರಿಃ ಪ್ರಾಣಾನ್ ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ । ಸಚೇದ್ಭಯಾ ದ್ವಾ ಮೋಹಾದ್ವಾ ಕಾಮಾದ್ವಾಪಿ ನರಕ್ಷತಿ । ಸ್ವಯಾ ಶಕ್ತ್ಯಾ ಯಥಾ ಸತ್ವಂ ತತ್ಪಾಪಂಲೋಕಗರ್ಹಿತಮ್ । ವಿನಷ್ಟಃ ಪಶ್ಯತ ತಸ್ಯಾ ರಕ್ಷಣ ಶ್ಶರಣಾಗತಃ । ಆದಾಯ ಸುಕೃತಂ ತಸ್ಯ ಸರ್ವಂಗಚ್ಛೇ ದರಕ್ಷಿತಃ । ಏವಂ ದೋಷೋ ಮಹಾನ್ ಅತ್ರ ಪ್ರಪನ್ನಾನಾಮರಕ್ಷಣೇ** ಇವೆಲ್ಲವನ್ನೂ ಮನಸ್ಸಿನಲ್ಲಿಟ್ಟೇ ಶ್ರೀ ಮದಾಚಾರ್ಯರು **ಅನವದ್ಯಮಾನ್ಪಡಿಯಿರು ಕ್ಕೈಮ್** ಎಂದು ಹೇಳಿರುತ್ತಾರೆ. ಇವುಗಳಿಗೆಲ್ಲಾ ಅರ್ಥ ಬರೆಯುತ್ತಾ ಹೋದರೆ ಗ್ರಂಥವು ಅಗಾಧವಾಗಿ ಬೆಳೆದು ಹೋಗುತ್ತದೆ. **ಶೋಕಿಕ್ಕಪ್ರಾಪ್ತಿಯುಂಡೋ?** ಎಂದು ಹೇಳಿರುವದರಿಂದ ಉದಾರರಾಗಿ ಕೃಪಾಶೀಲಾದಿಗುಣಗಳಿಂದ ಮಹಿಮೆ

**ಳೈವು'. ಇಜ್ಞ ಕೆಳಿಕ್ಕಿರ ಶೋಕವು' ಯಥಾವಸ್ಥಿತಾತ್ಮೋಪದೇಶಾದಿ ಗಳಾಲೇ ಕಳಿನ್ದ ಬಂಧು ವಧಾದಿ ನಿಮಿತ್ತಮಾನ ಪಳಿಯ ಶೋಕಮುನ್ರು ; ಪ್ರಕರಣಾನುಗುಣಮಾನ ಶೋಕಾನ್ತರವು' ; ಎಜ್ಞನೇ ಯೆನ್ನಿಲ್ ? "ದೈವೀ**

ಯನ್ನು ಹೊಂದಿರುವ ನಾನು ಶರಣಾಗತರಕ್ಷಣೆಯನ್ನು ಮಾಡದಿರಲು ಸಾಧ್ಯವೇ ? ಆದುದರಿಂದಲೇ **"ಮಿತ್ರಭಾವೇನ ಸಂಪ್ರಾಪ್ತಂ ಸತ್ಯಜೇಯಂ ಕಥಂ ಚನ"** ಎಂದು ತನ್ನಿಂದ ಹೇಳಲ್ಪಟ್ಟಿತೆಂಬ ಭಾವವು.

ತಾವು ಹಿಂದೆ ಅನುಗ್ರಹಿಸಿದ ಕಾರಿಕೆಗಳ ಅಭಿಪ್ರಾಯವನ್ನೇ ವಿಸ್ತಾರವಾಗಿ ಅನುವಾದಮಾಡಿ ಹೇಳುತ್ತಾರೆ—**ಇಜ್ಞ** - ಈ ಸಂದರ್ಭದಲ್ಲಿ, **ಕೆಳಿಕ್ಕಿರ ಶೋಕವು'** - **ಮಾಶುಚಃ** ಎಂದು ಹೇಳಿ ಹೋಗಲಾಡಿಸುವ ಶೋಕವು, **ಯಥಾವಸ್ಥಿತೋಪದೇಶಜ್ಞಳಾಲ್** - ಶಾಸ್ತ್ರಗಳಲ್ಲಿ ಹೇಗೆ ಹೇಳಿದೆಯೋ ಅಂತಹ ಪ್ರಮಾಣಗಳ ಉಪದೇಶದ ಮೂಲಕ, ದೇಹಕ್ಕೂ ಚೇತನನಿಗೂ ಇರುವ ವೈಲಕ್ಷಣ್ಯದ ಉಪದೇಶದಿಂದ, **ಕಳಿನ್ದ** - ನಿವರ್ತಿಸಿಹೋದ, **ಬಂಧುವಧಾದಿ** - ಭೀಷ್ಮದ್ರೋಣಾದಿ ಬಂಧುಗಳ ವಿನಾಶವೇ ಮೊದಲಾದವುಗಳ, **ನಿಮಿತ್ತಮಾನ** - ಮೂಲಕವಾದ, **ಪಳಿಯ ಶೋಕಮುನ್ರು** - ಹಿಂದಿನ ಶೋಕವಲ್ಲವು. ಅಲ್ಲಿ **ಸೀದಮಾನಂ ಇದಂ ವಚಃ** ಎಂಬಲ್ಲಿ ತೋರಿ ಬರುವ ಶೋಕವಲ್ಲವು. ಅದು ಆಗಲೇ ದೇಹಾತ್ಮಭ್ರಮೆಯಿದ್ದುದನ್ನು ಸದುಪದೇಶದ ಮೂಲಕ ನಿವರ್ತಿಸಲ್ಪಟ್ಟಿತು ಎಂಬ ತಾತ್ಪರ್ಯವು. **ಪ್ರಕರಣಾನುಗುಣಮಾಗ ಶೋಕಾನ್ತರವು'** - ಈ ಪ್ರಕರಣಕ್ಕನುಗುಣವಾದ ಬೇರೇ ಶೋಕವು. ಪ್ರಕರಣವು ಯಾವುದು? ಎಂದರೆ ತನಗೆ ಉಪಾಸನಕ್ಕೆ ಐಕಾನ್ತ್ಯ ಭಕ್ತಿಯು ಬೇಕೆಂದು ಶ್ರೀಕೃಷ್ಣಭಗವಾನರು ೧೧ನೆಯಅಧ್ಯಾಯದ ೫೪ ನೆಯ ಶ್ಲೋಕದಲ್ಲಿ ಹೇಳಿದ ಮೊದಲುಗೊಂಡು ಉಂಟಾದ ಶೋಕವು ಜ್ಞಾನಿಯಾಗಿ ಉಪಾಸಿಸಲು ಐಕಾನ್ತ್ಯ ಭಕ್ತಿಯು ಸಾಧ್ಯವಿಲ್ಲವೆಂದೂ, ಅದಕ್ಕೆ ಬೇಕಾದ **ಚಿತ್ತ**ಸಮಾಧಾನವು ತನಗೆ ಸಾಧ್ಯವಿಲ್ಲವೆಂದೂ, ಆ ಐಕಾನ್ತ್ಯ ಭಕ್ತಿಯು ಜಿಜ್ಞಾಸುವಿನ ಅನುಷ್ಠಾನಕ್ಕೆ ಬೇಡದಿದ್ದರೆ, ಜಿಜ್ಞಾಸುವಾಗಿ ಉಪಾಸಿಸಲೇ ಎಂದು ೧೨ ನೆಯ ಅಧ್ಯಾಯದ ಪ್ರಥಮಶ್ಲೋಕದಲ್ಲಿ ಅರ್ಜುನನು ಕೇಳಿದ್ದನು, ಅದೂ ಇನ್ನೂ ಹೆಚ್ಚು ಕ್ಲೇಶವು, ಬೇಡ,ಜ್ಞಾನಿಯಾಗಿಯೇ ಉಪಾಸಿಸು; **ಅಥಚಿತ್ತಂ ಸಮಾಧಾತುಂ ನಶಕ್ನೋಷಿ ಮಯಿಸ್ಥಿರಂ** ಎಂದು ಪ್ರಾರಂಭಿಸಿ ಚಿತ್ತಸಮಾಧಾನಕ್ಕೆ ಹೇಳಿದ ಉಪಾಯಗಳೂ ಅರ್ಜುನನಿಗೆ ಕಷ್ಟವಾಗಿ ಅಸಮಾಧಾನವುಇದ್ದೇ ಇತ್ತು. ಆದರೆ ಈ ಅಧ್ಯಾಯದ ೬೫ ನೆಯ ಶ್ಲೋಕದಲ್ಲಿ ಪುನಃಗುಹ್ಯಕಮವಾಗಿ ಕಷ್ಟವಾದ ಉಪದೇಶವನ್ನೇ **ಮನ್ಮನಾಭವ**ಎಂದು ಹೇಳಿ,ನೀನುನಮಗೆ ತುಂಬಾ ಪ್ರಿಯನು,ಇಷ್ಟನಾದುದರಿಂದ ಇನ್ನೊಂದು ಸಲ ಹೇಳುತ್ತೇನೆಂಬ ಪೂರ್ವಪೀಠಿಕೆಯಿಂದ ಹೇಳಿ ಮುಗಿಸಿದರೋ ಆತನಿಗೆ ಉಪಾ

**ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀಮತಾ" ಎನ್ರು ಪಿರಿತ್ತು ಚೊನ್ನ ವಾರೇ ನಾಮ್ ಆಸುರ ಪ್ರಕೃತಿಗಳಾಗಿರ್ ಚೆಯ್‌ವದೆನ್ರೆನ್ರು ಶೋಕಿತ್ತ ಅರ್ಜುನನೈಪ್ಪತ್ತ, ಮಾಶುಚಸ್ಸಂಪದಂ ದೈವೀಮಭಿಜಾತೋಽಸಿ ಪಾಂಡವ" ಎನ್ರಾರ್ ಪೋಲೇ ಇಙ್ಗು, ಶೀರಿಯ ಫಲತ್ತಿಲ್ ತೀವ್ರ ಸಂಗಮ್ ನಡವಾನಿರ್ಕ ಚಿರಕಾಲ ಸೇವ್ಯಮಾಯ್, ಅಂತರಾಯ ಬಹುಳಮಾಯ್, ಅತ್ಯಂತಾ**

---

ಸನ ಪ್ರಕ್ರಿಯೆಯು ಕಷ್ಟವೇ, ಪಾಪಗಳು ಹೋಗುವ ಬಗೆ ಹೇಗೆ? ಹಾಗಾದರೆ ಮೋಕ್ಷವಿಲ್ಲವೋ? ಎಂಬ **ಪ್ರಕರಣಾ**ನುಗುಣವಾದ ಶೋಕಾನ್ತರವು.

**ಎಙ್ಗನೇ ಯೆನ್ನಿಲ್** – ಅದು ಹೇಗೆ ಎಂದರೆ? ಹಿಂದೆ ಇನ್ನೊಂದು ಸಂದರ್ಭದಲ್ಲಿ ತನ್ನ ಭಕ್ತನಾದ ಅರ್ಜುನನಿಗೆ ಉಂಟಾದ ಶೋಕವನ್ನು ಸಹಿಸದೆ ಅದನ್ನು ಹೋಗಲಾಡಿಸಿದ ದೃಷ್ಟಾನ್ತ ಮೂಲಕ ಈ ಪ್ರಕರಣದ ಶೋಕವನ್ನು ಹಾಗೆಯೇ ಹೋಗಲಾಡಿಸುತ್ತಾರೆಂದು ಒಂದು ಮಹಾ ವಾಕ್ಯದ ಮೂಲಕ ಉಪಪಾದಿಸುತ್ತಾರೆ—"**ದೈವೀ ಸಂಪದ್ವಿಮೋಕ್ಷಾಯ** – ಸತ್ವಗುಣಾಧಿಕ್ಯವಿರುವ ಸುಕೃತಿಗೆ ದೈವೀ ಸಂಪತ್ತುಳ್ಳ ದೇಹವು ಆತನಿಗೆ ವಿಶೇಷವಾಗಿ ಮೋಕ್ಷಸಾಧನೆಗೆ ಸಹಾಯವು, ರಜೋಗುಣ ತಮೋಗುಣಾಧಿಕ್ಯವಿರುವ ಆಸುರ ಸ್ವಭಾವವಾದ ದುಷ್ಕೃತಿಗೆ, ಬಂಧಕ್ಕೆ ಹೇತುವಾಗುತ್ತದೆ," **ಎನ್ರು ಪಿರಿತ್ತು** – ಎಂದು ಎರಡು ವಿಧವಾಗಿ ವಿಭಾಗಿಸಿ, **ಚೊನ್ನವಾರೇ**–ದೈವಾಸುರವಾಗಿ ಎರಡು ವಿಧವೆಂದು ಯಾವಾಗ ಹೇಳಿದರೋ, ಆಗ **ನಾಮ್** – ನಾವು, ತಾನೂ ತನ್ನ ಹಾಗೆ ಇತರರೂ, **ಶೆಯ್‌ವದೆನ್ನೆನ್ರು ಶೋಕಿತ್ತ** – ಮಾಡುವದೇನು ಎಂದು ಶೋಕಿಸುತ್ತಿದ್ದ, **ಅರ್ಜುನನೈಪ್ಪತ್ತ** – ಅರ್ಜುನನನ್ನು ಕುರಿತು, ದೀನಬಂಧುವಾದ ಕೃಷ್ಣನು,"**ಮಾಶುಚಃ–ಓಪಾಂಡವ**–ಓ ಅರ್ಜುನನೇ ನೀನು ಶೋಕಿಸುವ ಕೆಲಸವಿಲ್ಲವು, ಏಕೆಂದರೆ, ನೀನು ಆಸುರ ಪ್ರಕೃತಿಯಲ್ಲವು, **ದೈವೀಂ ಸಂಪದಂ** – ದೈವೀ ಸಂಪತ್ತನ್ನು ಕುರಿತು, **ಅಭಿಜಾತೋಽಸಿ** – ಹುಟ್ಟಿರಿವಿ, **ಓಪಾಂಡವ**–ಓಧಾರ್ಮಿಕಾಗ್ರೇಸರನಾದಪಾಂಡುವಿನ ತನಯನೇ, **ಎನ್ರಾಲ್ ಪೋಲೇ** – ಹಿಂದೆ ಶೋಕಿಸಿದವನನ್ನು ಕುರಿತು ಸಮಾಧಾನ ಮಾಡಿದ ಹಾಗೆ **ಇಙ್ಗು** – ಈ ಸಂದರ್ಭದಲ್ಲೂ, **ಶೀರಿಯ ಫಲತ್ತಿಲ್** – ಅಮೋಘವಾದ ಮೋಕ್ಷಫಲದಲ್ಲಿ, **ತೀವ್ರಸಂಗಮ್ ನಡವಾನಿರ್ಕ** – ಅತ್ಯುತ್ಕಟ ಅಭಿಲಾಷೆಯು ಇರಲಾಗಿ, **ಚಿರಕಾಲಸೇವ್ಯಮಾಯ್** – ಬಹುಕಾಲ ಮಾಡಬೇಕಾದ ಸಾಧನವುಳ್ಳದ್ದಾಗಿ, **ಅಂತರಾಯಬಹುಳಮಾಯ್** – ವಿಘ್ನಗಳ ಬಾಹುಳ್ಯವುಳ್ಳದ್ದಾಗಿ, **ಅತ್ಯಂತಾವಹಿತರ್ಕ್ಕುಂ** – ತುಂಬಾ ಜಾಗರೂಕರಾಗಿರುವವರಿಗೂ ಕೂಡ, **ಕಷ್ಟಸಾಧ್ಯಮಾನ**–ಕಷ್ಟಸಾಧ್ಯವಾದ, **ಉಪಾಯತ್ತೈಯುಮ್** – ಉಪಾಯವಾದ ಉಪಾಸನವನ್ನು **ತಲೆಕಾಟ್ಟಿ** – ಭಾರ ಹೊರಿಸಿ, **ಎಙ್ಗೇ ಇಷ್ಟಲಸಿದ್ಧಿಯುಂಡಾಗಪುಗುಗಿರದೆನ್ರು**

**ವಹಿಂತರ್ಕ್ಕುಂ, ಕೃಚ್ಛ್ರಸಾಧ್ಯಮಾನ ಉಪಾಯತ್ತ್ಯೆಯುಮ್‌ ತನ್ನಳವೈಯುಮ್‌ ಕಣ್ಡು, ನಮುಕ್ಕಿವ್ವುಪಾಯಮ್‌ ತಲೈಕಟ್ಟಿ ಯೆಙ್ಗೇ ಇಷ್ಟಫಲಸಿದ್ಧಿಯುಂಡಾಗಪ್ಪುಗುಗಿರನೆನ್ರು ಶೋಕಿತ್ತ ಅರ್ಜುನನುಕ್ಕು ಕ್ಷಣಕಾಲ ಸಾಧ್ಯಮಾಯ್, ಸರ್ವಾನ್ತರಾಯರಹಿತಮಾಯ್, ಸುಕರಮಾನ ಉಪಾಯತ್ತೈ ಕಾಟ್ಟಿಕೊಡುತ್ತು ಅನ್ಮುಖತ್ತಾಲೇ ಫಲಸಿದ್ಧಿಯಿಲೇ ನಿರ್ಭರನುಮಾಯ್, ನಿಸ್ಸಂಶಯನುಮಾಮ್ಪಡಿ "ಮಾ ಶುಚಃ" ಎನ್ರು ಶೊನ್ನಾಲ್‌ ಇದು ಉಪಾಯಾನ್ತರ ದೌಷ್ಕರ್ಯಾದಿಗಳ್‌ ಅಡಿಯಾಗ ಪಿರನ್ದ ಶೋಕತ್ತೈ ಕಳೈಕ್ಕಿರದಿತ್ತನ್ನೈಯಿರೇ.**

---

ಎಲ್ಲಿ ಈ ಮೋಕ್ಷಸಿದ್ಧಿಯು ಹೇಗೆ ಲಭಿಸುವ ಹಾಗೆ ಏರ್ಪಡುತ್ತದೋ ಎಂಬ ಶಂಕಾವಿಷ್ಟನಾಗಿ, ಶೋಕಿತ್ತ - ಶೋಕಿಸಿದ, **ಅರ್ಜುನನಿಗೆ, ಕ್ಷಣಕಾಲ ಸಾಧ್ಯವಾಗಿ, ಸರ್ವಾಂತರಾಯರಹಿತಮಾಯ್‌** - ಸಮಸ್ತ ವಿಘ್ನಯಾವುದೂ ಇಲ್ಲದ, **ಸುಕರಮಾನ** - ಬಹುಸುಲಭವಾಗಿರುವ, **ಉಪಾಯವನ್ನು** - ಇನ್ನೊಂದು ಉಪಾಯವಾದ ಶರಣಾಗತಿಯನ್ನು **ಕಾಟ್ಟಿಕೊಡುತ್ತು** - ತೋರಿಸಿಕೊಟ್ಟು, **ಅನ್ಮುಖತ್ತಾಲೇ** - ತನ್ಮೂಲಕವಾಗಿ, **ಫಲಸಿದ್ಧಿಯಿಲ್‌** - ಮೋಕ್ಷಫಲಸಿದ್ಧಿಯಲ್ಲಿ, **ನಿರ್ಭರನುಮಾಯ್‌** - ಭಾರವಿಲ್ಲದವನಾಗಿ ಎಂದರೆ ಪೂರ್ಣನಂಬಿಕೆಯುಳ್ಳವನಾಗಿ, **ನಿಸ್ಸಂಶಯನುಮಾಯ್‌** - ಯಾವ ಸಂದೇಹವೂ ಇಲ್ಲದವನಾಗಿ **ಆಮ್ಪಡಿ** - ಆಗುವಹಾಗೆ, **ಮಾಶುಚಃ ಎನ್ರುಶೊನ್ನಾಲ್‌** - ಶೋಕಿಸಬೇಡವೆಂದು ಹೇಳಿದರೆ, **ಇದು** - ಈ ಶೋಕವು, **ಉಪಾಯಾನ್ತರದೌಷ್ಕರ್ಯಾದಿಗಳಿಲ್‌** - ಬೇರೆ ಉಪಾಯವಾದ **ಉಪಾಸನಕ್ಕೆ** ಬೇಕಾದ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳ, **ದೌಷ್ಕರ್ಯಾದಿಗಳಿಲ್‌** - ಅನುಷ್ಠಾನದಲ್ಲಿರುವ ವಿಶೇಷಕಷ್ಟಗಳೇ ಮೊದಲಾದವುಗಳ, **ಅಡಿಯಾಗ** - ಮೂಲಕವಾಗಿ, **ಪಿರನ್ದ ಶೋಕತ್ತೈ** - ಹುಟ್ಟಿದ ಶೋಕವನ್ನು **ಕಳೈಕ್ಕಿರದಿತ್ತನ್ನೈಯಿರೇ** - ಹೋಗಲಾಡಿಸುವದು ಈ **ಮಾಶುಚಃ** ಎಂಬ ಪ್ರಯೋಗವು, **ಇತ್ತನೆಯಿರ್ಕ್ಕೈ** - ಇಷ್ಟೇ ತಾನೇ ಅಭಿಪ್ರಾಯವುಳ್ಳದು.

ಅರ್ಜುನನು ಗೀತೋಪದೇಶಕ್ಕೆ ಮೊದಲು ಬಂಧುಗಳನ್ನೂ ಗುರುಗಳನ್ನೂ ಕೊಲ್ಲುವದು ಹೇಗೆ ಎಂದು ದೇಹಾತ್ಮಭ್ರಮದಿಂದ ಶೋಕಿಸಿದನು. ಆ ಶೋಕವನ್ನು ದೇಹಾತ್ಮವಿವೇಕೋಪದೇಶದಿಂದ ನಿವಾರಿಸಿದರು. ಅನಂತರ ಪುನಃ ತಾನೇನಾದರೂ ಆಸುರಪ್ರಕೃತಿಯೋ ? ದಿವ್ಯ ವೈಕುಂಠಪ್ರಾಪ್ತಿಯು ಇಲ್ಲವೇ ಇಲ್ಲವೋ ? ಎಂದು ಪುನಃ ಶೋಕಿಸಿದನು. ನೀನು ಆಸುರ ಪ್ರಕೃತಿಯುಳ್ಳವನಲ್ಲ, ನರಕಾದಿ ಪ್ರಾಪ್ತಿಯ ಭಯವು ನಿನಗೆ ಬೇಕಿಲ್ಲವು. ನೀನು ದೈವಪ್ರಕೃತಿಯು, ಮೋಕ್ಷಪ್ರಾಪ್ತಿಗೆ ಯೋಗ್ಯನಾದ ಅಧಿಕಾರಿ ಎಂದು ಹೇಳಿ ಹೀಗೆ ಸಮಾಧಾನ ಮಾಡಿದರೋ

ಹಾಗೆಯೇ, ಇಲ್ಲಿಯೂ ಕೂಡ ಅರ್ಜುನನ ಶೋಕಕ್ಕೆ ಕಾರಣವೇನೆಂದರೆ—ಈ ಚರಮಶ್ಲೋಕದ ಹಿಂದಿನ ಶ್ಲೋಕಗಳಲ್ಲಿ **"ಸರ್ವಗುಹ್ಯತಮಮ್ ಭೂಯಃ"** ತುಂಬ ಗುಹ್ಯತಮವಾದ ಉಪದೇಶವನ್ನು ಹಿಂದೆ ಎರಡು ಸಲ ಪ್ರಕರಣಾನುಗುಣವಾಗಿ ತಿಳಿಸಿದೆನು. ಇನ್ನೂ ಒಂದು ಸಲ ಅದು ಸರ್ವೋತ್ಕೃಷ್ಟ ಉಪಾಯವಾದುದರಿಂದ ನಿನಗೆ ಉಪದೇಶಿಸುವೆನು, ನೀನು ನನಗೆ ಅತ್ಯಂತ ಪ್ರಿಯನಾದುದರಿಂದ, ಸಾವಧಾನದಿಂದ ಕೇಳಿ ಅನುಷ್ಠಿಸು ಎಂಬ ಸೂಚಿಕೆಯೊಂದಿಗೆ **"ಮನ್ಮನಾಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು । ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ"** ಕರ್ಮಯೋಗಾದಿ ಸಹಕೃತವಾದ ಭಕ್ತಿಯೋಗವಾದ ಉಪಾಸನೆಯನ್ನು ಮಾಡು ಎಂದು ಮುಗಿಸಿ ಹೇಳಿದರೋ, ಆಗ ಈತನಿಗೆ ಪುನಃ ಶೋಕವುಂಟಾಯಿತು. ಏತಕ್ಕೆಂದರೆ ಹಿಂದಿನಿಂದಲೂ ಮನಶ್ಚಾಂಚಲ್ಯವೇ **"ಚಂಚಲಂ ಹಿ ಮನಃ ಕೃಷ್ಣ"** ಎಂದು ಹೇಳುತ್ತಾ, ನ್ಯಾಪಿ ಕೃಷ್ಣಭಗವಾನರವರು ಉಪದೇಶಿಸಿದ ಕರ್ಮಯೋಗಾದಿ ಭಕ್ತಿಯೋಗಗಳ ದೌಷ್ಕರ್ಯವನ್ನು ಕಂಡು ೧೨ ನೆಯ ಅಧ್ಯಾಯದ ಪ್ರಥಮಶ್ಲೋಕದಲ್ಲಿ ಜ್ಞಾನಿಯಾಗಿ ಉಪಾಸಿಸಲೇ, ಅಥವಾ ಜಿಜ್ಞಾಸುವಾಗಿ ಉಪಾಸಿಸಲೇ? ಜ್ಞಾನಿಯಾಗಿ ಉಪಾಸಿಸಲು ಐಕಾಂತ್ಯ ಭಕ್ತಿಯು ಆವಶ್ಯಕವೆಂದು ಹೇಳಿದಿರಿ; ಅದು ಸಾಧ್ಯವಿಲ್ಲವು, ಆದುದರಿಂದ ಜಿಜ್ಞಾಸುವಾಗಿ ಉಪಾಸಿಸಲೇ ಎಂದು ಕೇಳಿದುದಕ್ಕೆ, ಜಿಜ್ಞಾಸುವಾಗಿ ಉಪಾಸಿಸುವುದು ಇನ್ನೂ ಕ್ಲೇಶಾಧಿಕವಾದುದರಿಂದ, ಅದು ಬೇಡ; ಜ್ಞಾನಿಯಾಗಿಯೇ ಉಪಾಸಿಸು; ಚಿತ್ತೈಕಾಗ್ರತೆಯನ್ನು ಹೊಂದಲು ಕಷ್ಟವೆಂದಲ್ಲವೇ ನೀನು ಪ್ರಶ್ನಿಸಿದುದು, **"ಅಥ ಚಿತ್ತಂ ಸಮಾಧಾತುಂ ನಶಕ್ನೋಷಿ ಮಯಿ ಸ್ಥಿರಮ್"** ಚಿತ್ತೈಕಾಗ್ರತೆಯನ್ನು ಹೊಂದುವುದು ಕಷ್ಟವೆಂದಲ್ಲವೇ ನಿನ್ನ ಪ್ರಶ್ನೆಯು. ಅದು ಲಭಿಸುವ ಉಪಾಯವನ್ನು ಹೇಳುತ್ತೇನೆ ಕೇಳು, ಎಂದು ಹಿಂದೆ ಹೇಳಿದ ಮೂರು ಉಪಾಯಗಳನ್ನು ಪುನಃ ಶ್ರೀ ಕೃಷ್ಣನು ಉಪದೇಶಿಸುತ್ತಾನೆ. ಅವು ದುಷ್ಕರವೆಂದೇ ಅರ್ಜುನನು ಸುಮ್ಮನಿದ್ದನು. ಕೊನೆಗೆ ನೀನು ತುಂಬಾ ಪ್ರಿಯನು; ಆದುದರಿಂದ ಪರಮ ಗುಹ್ಯವಾದ ರಹಸ್ಯವನ್ನು ಇನ್ನೊಂದು ಸಲ ತಿಳಿಸಿ ಸುಮ್ಮನಾದನೋ, ಆಗ ಅರ್ಜುನನಿಗೆ ಪುನಃ ವಿಷಾದ ಉಂಟಾಯಿತು.

ಈ ಉಪಾಸನದ ದೌಷ್ಕರ್ಯದಿಂದ ಇದನ್ನು ಅನುಷ್ಠಿಸುವ ಯೋಗ್ಯತೆ ತನಗಿಲ್ಲವೇ? ಆದುದರಿಂದ ಸರ್ವಪಾಪಗಳೂ ಹೋಗುವ ಬಗೆ ಹೇಗೆ? ಯಾವಾಗ ಪಾಪಗಳು ತೊಲಗಲಿಲ್ಲವೋ, ಆಗ ಮೋಕ್ಷವುಂಟಿಲ್ಲಿಯದು? ಹೋಗಲಿ, ಪಾಪಗಳನ್ನು ಪ್ರಾಯಶ್ಚಿತ್ತಾನುಷ್ಠಾನದಿಂದ ಕಳೆದು ಕೊಳ್ಳೋಣವೇ ಎಂದರೆ, ಅದು ಸಾಧ್ಯವೇ? ಪಾಪಗಳ ಆನಂತ್ಯದಿಂದ ಒಂದು ಪುರುಷಾಯುಸ್ಸಿನಲ್ಲಿ ಅನುಷ್ಠಿಸಿ ಕಳೆದು ಕೊಳ್ಳ,

ವದು ಸಾಧ್ಯವೇ? ಈ ಯತ್ನವು ಉಪಾಸನಾನುಷ್ಠಾನಕ್ಕಿಂತ **ಕಷ್ಟತರವಾದುದು** ಯಾವಾಗ ಆಯಿತೋ? ಹಾಗಾದರೆ ತನಗೆ ಮೋಕ್ಷವನ್ನು ಹೊಂದುವ ಸುಕೃತವೇ ಇಲ್ಲವೋ ಎಂದು ತುಂಬಾ ವಿಷಾದದಿಂದಿರುತ್ತಾನೆ. ಈ ಪರಿಯಾದುದು ಶೋಕವು, ಅದನ್ನು ಹೋಗಲಾಡಿಸುತ್ತಾನೆ ಶ್ರೀ ಕೃಷ್ಣನು **ಮಾಶುಚಃ** ಎಂಬುದರಿಂದ, ಅನಿಷ್ಟ ನಿವೃತ್ತಿ ಇಷ್ಟಪ್ರಾಪ್ತಿ ಎರಡೂ ಉಂಟೆಂದು ಸಮಾಧಾನಮಾಡುತ್ತಾರೆಂದು ತಿಳಿಸಿದರು.

ಈ ವಾಕ್ಯದಲ್ಲಿ ಶೋಕಕ್ಕೆ ಕಾರಣಗಳು ಹೇಳಿರುವುವು ಯಾವುವೆಂದರೆ—

೧. **ಚಿರಕಾಲಸೇವ್ಯಮಾನು'** – ಈ ಉಪಾಸನವು ಜೀವಮಾನವಿರುವ ವರೆಗೂ ಅನುಷ್ಠಿಸತಕ್ಕದ್ದು. **"ಯಾವಜ್ಜೀವಂತು ತತ್ಕುರ್ಯಾತ' ಯೇನ ಪ್ರೇತ್ಯಸುಖಂ ವಸೇತ'"** ಎಂದು ಶ್ರೀ ವಿದುರೋಕ್ತಿಯು. ಈಗ ತಾವು ಉಪದೇಶಿಸಿರುವ ಶರಣಾಗತಿಮಾರ್ಗವು **ಕ್ಷಣಕಾಲಸಾಧ್ಯವಾದುದು**

೨. **ಅಂತರಾಯಬಹುಳಮಾಯ್** – ಉಪಾಸನವು ದೇಹಾವಸಾನದ ವರೆಗೂ ನಡೆಯಬೇಕಾಗಿರುವದರಿಂದ ಆ ದೀರ್ಘಕಾಲದಲ್ಲಿ ಅನೇಕ ವಿಘ್ನಗಳುಂಟಾಗಬಹುದು. ಪ್ರಕೃತಿ ಸಂಬಂಧದಿಂದ ಐಹಿಕಾನಂದ ಭೋಗಗಳಲ್ಲಿ ಮನಸ್ಸು ಪ್ರವರ್ತಿಸುವದರಿಂದ ಅಂತರಾಯ ಬಾಹುಳ್ಯವು. ಈ ಪ್ರಪದನವು ಸಕೃತ್ ಕ್ಷಣಕಾಲ ಸಿದ್ಧಿಸುವದರಿಂದ ಶ್ರೀ ಸದಾಚಾರ್ಯ ಕೃಪೆಯಿಂದ ಐಹಿಕ ಭೋಗಗಳಲ್ಲಿ ಮನಸ್ಸು ಪ್ರವರ್ತಿಸದೇ ಇರಬಹುದು.

೩. ಕರ್ಮಯೋಗಾನುಷ್ಠಾನಾದಿಗಳನ್ನು ಚಿರಕಾಲ ಹೊಂದಿರುವದರಿಂದ ಉಪಾಸನದ **ದೌಷ್ಕರ್ಯವು.** ಈಗ ಇಲ್ಲಿ ಪೂರ್ವಾರ್ಧದಿಂದ ಉಪದೇಶಿಸಿರುವದು **ಸುಕರವು.**

೪. ಈಗ ಉಪದೇಶಿಸಿರುವದರಲ್ಲಿ **ನಿರ್ಭರ**ನಾಗಿರಬಹುದು. ಉಪಾಸನದಲ್ಲಿ ಇದು ಸಿದ್ಧಿಸುವದು ಕಷ್ಟ. ಪ್ರಪದನದಲ್ಲಿ ಉಪಾಯ ಸಿದ್ಧಿಯಲ್ಲಿ ನಿಸ್ಸಂಶಯ ಉಂಟು. ಉಪಾಸನದಲ್ಲಾದರೋ ಸಂಶಯವು. ತಾನು ಕೃತಕೃತ್ಯನೆಂಬ ನಿರ್ಭರತ್ವವು ಪ್ರಪದನದಲ್ಲಿ ಉಂಟು. ಪ್ರಪದನದಲ್ಲಿ ಸಂದೇಹವೇ ಇಲ್ಲವು. ಶ್ರೀ ಭರತರ ಇತಿಹಾಸವು ಇದಕ್ಕೆ ನಿದರ್ಶನವು. ಹಾಗೆಯೇ ತ್ರಾಸಭರಿವೃತ್ತಾಂತವೂ ನಿದರ್ಶನವು.

ಶ್ರೀ ನಿಗಮಾಂತ ದೇಶಿಕರವರು, ಅರ್ಜುನನಿಗೆ ಈಗ ಉಂಟಾದ ಶೋಕವು ಹಿಂದಿನ ಬಂಧು ಜನ ವಿನಾಶದ ಶೋಕವಲ್ಲವೆಂದೂ, ಅದೇ ಆಗಲೇ ನಿವಾರಿತವೆಂದೂ, ಅನಂತರ ತಾನೇನಾದರೂ ಆಸುರ ಪ್ರಕೃತಿಯೋ ಎಂಬ ವಿಷಾದವು ಅರ್ಜುನನಿಗೆ ಉಂಟಾಗಿದ್ದುದನ್ನು ಆಗಲೇ **ಮಾಶುಚಃ ಸಂಪದಂದೈವೀಂ** ಎಂದು ಹೇಳಿ ನಿವಾರಿಸಿದರೆಂದೂ, ಅದರ ಹಾಗೆಯೇ ಈಗ ಭಕ್ತಿದೌಷ್ಕರ್ಯಾದಿಗಳಿಂದ ಶೋಕವೆಂದೂ **ತನ್ನಿವಾರಣಾರ್ಥವಾಗಿ "ಮೋಕ್ಷಯಿಷ್ಯಾಮಿ ಮಾಶುಚಃ** ಎಂದು

ಹೇಳಿದರೆಂದೂ, ಈ ಪ್ರಕರಣಾನುಗುಣವಾಗಿ ಕಾರಣವನ್ನು ತಿಳಿಸಿದರು. ಇನ್ನು ಪೂರ್ವವೇ ಆಖಿದೆ ಪುನಃ ೧೧ ನೆಯ ಅಧ್ಯಾಯದಲ್ಲಿ ಅರ್ಜುನನಿಗೆ ಶೋಕ ಉಂಟಾಗಿ ದ್ದುದನ್ನು ಶ್ರೀ ಕೃಷ್ಣನು ನಿವಾರಿಸಿರುತ್ತಾನೆ. ಪ್ರಕರಣವೇನೆಂದರೆ ? ಮಹಾ ಯೋಗೇಶ್ವರನಾದ ಹರಿಯು ತನ್ನ ಪ್ರಿಯಭಕ್ತನಾದ ಅರ್ಜುನನಿಗೆ ತನ್ನ ವಿಭೂತಿ ಗಳೇ ಮೊದಲಾದ ಮಾಹಾತ್ಮ್ಯೆಯನ್ನು ವಿಶ್ವರೂಪವನ್ನೂ ತೋರಿಸಿದಾಗ ಮುಂದೆ ನಡೆಯುವ ಯುದ್ಧದಲ್ಲಿ ದುರ್ಯೋಧನಾದಿಗಳು ಹತರಾಗುವರೆಂಬುದನ್ನು ವಿಶ್ವ ರೂಪಿಯ ಹಲ್ಲಿನಲ್ಲಿ ಸಿಕ್ಕಿಕೊಂಡು ಪ್ರಾಣ ಬಿಟ್ಟುದುದನ್ನು ನೋಡಿ ತುಂಬಾ ಭಯಾ ಕ್ರಾಂತನಾಗಿ ಶರಣಾಗತಿಯನ್ನು ಮಾಡಿ ಈ ವಿಶ್ವರೂಪವನ್ನು ತೋರಿದುದು ಸಾಕು; **"ಭಯೇನ ಚ ಪ್ರವ್ಯಥಿತಂ ಮನೋಮೇ"** ನನಗೆ ತೋರಿದ ಈ ರೂಪದಿಂದ ಭಯಾಕ್ರಾಂತನಾಗಿದ್ದೇನೆ, ನನಗೆ ತುಂಬಾ ಖೇದವೂ ಉಂಟಾಗಿದೆ ಎಂದು ಹೇಳಿ, ನೀನು ನಿತ್ಯವಿಭೂತಿಯಲ್ಲಿ ನಿತ್ಯಸೂರಿಗಳಿಗೂ ಮುಕ್ತರಿಗೂ ಯಾವಾಗಲೂ ತೋರು ತ್ತಿರುವ ಪರವಾಸುದೇವ ರೂಪವಾದ **"ತದೇವ ಮೇ ದರ್ಶಯ ದೇವ ರೂಪಂ ಪ್ರಸೀದ** ಎಂದು ಅರ್ಜುನನು ಬೇಡುತ್ತಾನೆ. ತತ್, ಶಬ್ದವು ಮುಖ್ಯ ವೃತ್ತಿಯಲ್ಲೀ ಪರಬ್ರಹ್ಮವಾಚಕವು. **"ತಂ ದುರ್ದರ್ಶಂ" "ತತ್ತ್ವಮಸಿ ಶ್ವೇತ ಕೇತೋ" "ತಮೇವಂವಿದ್ವಾನ್" "ತಸ್ಯಧೀರಾಃ ಪರಿಜಾನನ್ತಿ ಯೋನಿಮ್" "ತದೈಕ್ಷತ ಬಹುಸ್ಯಾಮ್" "ತದ್ಬ್ರಹ್ಮ ತದಮೃತಮ್" "ತತ್ತೇಜೋ ಅಸೃಜತ" "ತಮೇ ತಂ ವೇದಾನುವಚನೇನ ಬ್ರಾಹ್ಮಣಾಃ" "ತಮೀಶ್ವರಾಣಾಂ ಪರ ಮಂ ಮಹೇಶ್ವರಮ್"** ಇತ್ಯಾದಿ – ಶ್ರೀ ಯತಿವರ್ಯರು **"ಓಂತತ್"** ಎಂಬಲ್ಲಿ ರುವ ತತ್ ಎಂಬ ಶಬ್ದಭಾಷ್ಯದಲ್ಲಿ **"ಬ್ರಹ್ಮವಾಚಿನಾ ತದಿತಿಶಬ್ದೇನನಿರ್ದೇ ಶ್ಯಾಃ"** ಎಂದು ಅಪ್ಪಣೆಕೊಡಿಸಿರುತ್ತಾರೆ. (ಭ. ಗೀ. ೨೨೦೨ ಪುಟವನ್ನು ನೋಡಿ) ಶರಣಾಗತ ವತ್ಸಲನಾದ ಸ್ವಾಮಿಯು ವಿಶ್ವರೂಪವನ್ನು ಮರೆಸಿ, **ಪರವಾಸುದೇವ** ರೂಪವನ್ನು ಒಡನೆ ತೋರಿಸಿ ಹೇಳುತ್ತಾರೆ. **"ಮಯಾ ಪ್ರಸನ್ನೇನ ತವಾರ್ಜುನೇ ಹಂ ರೂಪಪರಂ ದರ್ಶಿತಮಾತ್ಮ ಯೋಗಾತ್"** ಎಂಬದಾಗಿ; ಅಲ್ಲಿಯೇ **ಪರರೂಪ** ವನ್ನು ತೋರಿ, ಕಡೆಗೆ **"ಮಾತೇವ್ಯಥಾ ಮಾಚ ವಿಮೂಢಭಾವಃ"** ಎಂದೂ, **"ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ ತದೇವ ಮೇ ರೂಪ ಮಿದಂ ಪ್ರಪಶ್ಯ** ಎಂದು ಹೇಳಿ, ಆಶ್ರಿತ ವತ್ಸಲನು ಭಕ್ತನು ಕೋರಿದ ನಿತ್ಯವಿ ಭೂತಿಯ ಪರವಾಸುದೇವ ರೂಪವನ್ನು ತೋರಿಸಿದನು. ಇದು ಪರರೂಪವೆಂದ ತಿಳಿಸುವದಕ್ಕಾಗಿ ಸಂಜಯರು **"ಇತ್ಯರ್ಜುನಂ ವಾಸುದೇವ ಸ್ತಥೋಕ್ತ್ವಾ ಸ್ವಕಂರೂಪ ದರ್ಶಯಾ ಮಾಸ ಭೂಯಃ"** ಎಂದು ಶ್ಲೋಕದಿಂದ ವಾಸುದೇವ ಶಬ್ದವಿರುವದರಿಂದಲೂ ಅದೇ **ಸ್ವಕಂ**–ತನ್ನ ಅಸಾಧಾರಣರೂಪವಾದುದರಿಂದಲೂ

**ಸ್ವೇನ ಸಮರ್ಥಿತಮರ್ಥಂ ಆದಿತಃ ಗೀತಾರ್ಥಪರಾಮರ್ಶಾತ್ ದ್ರಢಯತಿ**

**ಇಬ್ಭಗವದ್ಗೀತೆಯಿಲ್ (೧) ಮುರ್ಪಡ ಪ್ರಕೃತ್ಯಾತ್ಮ ವಿವೇಕತ್ತೈಯುಂಡಾಕ್ಕಿ (೨) ಪಿನ್ಬು ಪರಂಪರಯಾ ಮೋಕ್ಷಕಾರಣಙ್ಗಳಾನ ಕರ್ಮಯೋಗ ಜ್ಞಾನಯೋಗಙ್ಗಳೈಯುಮ್, ಸಾಕ್ಷಾನ್ಮೋಕ್ಷಸಾಧನಮಾಗ ವೇದಾನ್ತ ವಿಹಿತಮಾನ ಭಕ್ತಿಯೋಗತ್ತೈಯುಮ್, ಸಪರಿಕರಮಾಗ ಉಪದೇಶಿತ್ತು (೩)**

---

ವ್ಯಕ್ತವು. **ಕೃಷ್ಣರೂಪ ಸ್ವಕಂ** ರೂಪವಲ್ಲವು. ಬಹುಶಃ ಶ್ರೀ ನಿಗಮಾನ್ತದೇಶಿಕರವರು ಈ ಶ್ಲೋಕವಿವರಣೆಯು ಅಪ್ರಸ್ತುತವಾದುದೆಂದು ಬಿಟ್ಟಿರಬಹುದು.

**ತಮ್ಮ ಈ ಅಭಿಪ್ರಾಯವನ್ನೇ ಗೀತಾ ಆದಿಯಿಂದ ವಿಮರ್ಶಿಸುವ ಮೂಲಕ ಒಂದು ಮಹಾ ವಾಕ್ಯದಿಂದ ದೃಢೀಕರಿಸುತ್ತಾರೆ.—**

ಈ ಮಹಾ ವಾಕ್ಯವನ್ನು ತಿಳಿಯುವುದು ಕಷ್ಟವಾದರೆ ೧. ೨. ೩. ಎಂದು ಗುರ್ತಿಸಿರುವ ರೀತಿಯಲ್ಲಿ ಸಣ್ಣವಾಕ್ಯಗಳಾಗಿ ಮಾಡಬಹುದು:—ಹೇಗೆಂದರೆ **ಯುಂಡಾಕ್ಕಿ,** ಎಂಬಲ್ಲಿ **ಯುಂಡಾಕ್ಕಿ**ನಾರ್ ಎಂದು ಪೂರ್ಣವಾಕ್ಯವಾಗಿ ಇಟ್ಟುಕೊಂಡು ಅರ್ಥಮಾಡಿಕೊಳ್ಳಬಹುದು. ಹೀಗೆ ೧೦ ವಾಕ್ಯಗಳಾಗಿ ವಿಭಾಗಿಸಿಕೊಂಡರೆ ಅರ್ಥವು ಮನಸ್ಸಿಗೆ ಹಿಡಿಯುತ್ತದೆ.

**ಇಬ್ಭಗವದ್ಗೀತೆಯಿಲ್** - ಈ ಭಗವದ್ಗೀತೆಯಲ್ಲಿ, **ಮುರ್ಪಡ** - ಪ್ರಥಮತಃ, ಮೊದಲು **ಪ್ರಕೃತ್ಯಾತ್ಮ ವಿವೇಕತ್ತೈಯುಂಡಾಕ್ಕಿ** - ದೇಹವೇ ಆತ್ಮಾ ಎಂಬ ಭ್ರಮೆಯಿಂದ ಪೀಡಿತನಾಗಿ ಬಂಧುಗಳನ್ನೂ ಗುರುಗಳನ್ನೂ ಕೊಲ್ಲುವುದು ಹೇಗೆ ಎಂದು ಶೋಕಿಸುತ್ತಿರುವ ಅರ್ಜುನನಿಗೆ ಜಡದೇಹಕ್ಕೂ, ಚೇತನನಾಗಿ ಜ್ಞಾನವಿವೇಕಗಳುಳ್ಳ ಆತ್ಮನಿಗೂ ಇರುವ ವ್ಯತ್ಯಾಸವನ್ನು ಭ್ರಮೆಹೋಗುವ ಹಾಗೆ ಚೆನ್ನಾಗಿ ತಿಳಿಸಿ, **ಪಿನ್ಬು** - ಅನಂತರ, **ಪರಂಪರಯಾ** - ಒಂದಾದನಂತರ ಇನ್ನೊಂದು ಹೀಗೆ, ಕ್ರಮೇಣ, **ಮೋಕ್ಷಕಾರಣಙ್ಗಳಾನ** - ಮೋಕ್ಷಕ್ಕೆ ವ್ಯವಹಿತಸಾಧನಗಳಿಂದ, **ಕರ್ಮಯೋಗ ಜ್ಞಾನಯೋಗಗಳನ್ನೂ, ಸಾಕ್ಷಾನ್ಮೋಕ್ಷಸಾಧನಮಾಗ** - ಸಾಕ್ಷಾತ್ತಾಗಿ ಮೋಕ್ಷಕ್ಕೆ ಅವ್ಯವಹಿತ ಉಪಾಯವೆಂದು, **ವೇದಾನ್ತವಿಹಿತಮಾನ**- ಉಪನಿಷತ್ತುಗಳಲ್ಲಿ ವಿಧಿಸಿರುವ, **ಭಕ್ತಿಯೋಗವನ್ನು,** ಭಕ್ತಿಯೋಗ ಸಾಕ್ಷಾತ್ತಾದ ಉಪಾಯವೆಂಬುದರಿಂದ, **ಕರ್ಮಯೋಗ ಜ್ಞಾನಯೋಗಗಳು** ಸಾಕ್ಷಾತ್ತಾದ ಉಪಾಯವಲ್ಲವು, ಭಕ್ತಿಯೋಗಕ್ಕೆ ಸಾಧನವಾಗಿ ಅಂಗಗಳೆಂದು ಹೇಳಲ್ಪಟ್ಟಿತು; **ಉಪದೇಶಿತ್ತು** - ಹೀಗೆ ಅಷ್ಟಾಂಗಯೋಗವಾದ ಉಪಾಸನಾ ಕ್ರಮವನ್ನು

**“ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾತ್ಗುಹ್ಯತರಂ ಮಯಾ। ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು” ಎನ್ರು ಅರುಳಿಚೆಯ್ದವಾರೇ (೪) ಅರ್ಜುನನುಡೈಯ ಮುಖತ್ತಿಲುರಾವು ತಲ್ಮೈಕ್ ಕಣ್ಡರುಳಿ ಯಿರುಕ್ಕಚ್ಚೆಯ್ದೇ ಕಡುಗ ಲಘೂಪಾಯತ್ತೈ ಯರುಳಿ ಚ್ಚೆಯ್ದೇ (೫) “ಪರೀಕ್ಷಾಂ ಚ ಜಗನ್ನಾಥಃ ಕರೋತ್ಯದೃಢ ಚೇತಸಾಮ್” ಎಙ್ಗಿರ ಕಟ್ಟಳೈಯೈಕ್ ಕಣ್ಡರುಳಿ, ನಾಮ್ ಇನ್ನದುನಕ್ಕು ಸಾಕ್ಷಾನ್ಮೋಕ್ಷಸಾಧನಮಾನ ಪರಮಹಿತಮ್', ಇತ್ತೈ ಪ್ರಧಾನಮಾಗ ಕಣಿಶಿತ್ತು, ಇದಕ್ಕು ಅನುರೂಪಮಾಗ**

---

ಉಪದೇಶಿಸಿ, ಕೊನೆಗೆ ಶ್ರೀ ಕೃಷ್ಣಭಗವಾನರವರು ನಿಗಮನದಲ್ಲಿ “**ಇತಿ** - ಈ ಪ್ರಕಾರವಾಗಿ “**ನತ್ವೇವಾಹಂ** ಎಂದಾರಂಭಿಸಿ ಇದುವರೆಗೂ, **ಜ್ಞಾನಂ** - ಮೋಕ್ಷೋಪಾಯವನ್ನು ಅನುಷ್ಠಿಸಿ ಪರಮಾತ್ಮನನ್ನು ಸಾಕ್ಷಾತ್ಕರಿಸುವ ಜ್ಞಾನವು, **ಮಯಾ** - ಭಕ್ತವತ್ಸಲನಾಗಿ ಕರುಣಾಮಯನಾದ ನನ್ನಿಂದ **ಆಖ್ಯಾತಂ** - ಉಪದೇಶಿಸಲ್ಪಟ್ಟಿತು. ಅದು ಎಂತಾದ್ದೆಂದರೆ:-**ಗುಹ್ಯಾದ್ಗುಹ್ಯತರಂ** - ಎಲ್ಲಾ ರಹಸ್ಯಗಳಿಗಿಂತಲೂ ಅತಿರಹಸ್ಯವಾದುದು. **ಏತತ್** - ಈ ಎಲ್ಲಾ ಉಪದೇಶವನ್ನು, **ಅಶೇಷೇಣ** - ಒಂದನ್ನೂ ಬಿಡದೆ ಸಂಪೂರ್ಣವಾಗಿ ವಿಮರ್ಶಿಸಿ ತಿಳಿದು, **ಯಥೇಚ್ಛಸಿ** - ಪ್ರಾಜ್ಞನಾದ ನಿನಗೆ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿ ಹೇಗೆ ಉಂಟಾಗಬೇಕೋ, **ತಥಾಕುರು** - ಹಾಗೆ ಮಾಡು,” **ಎನ್ರು** ಎಂಬದಾಗಿ, **ಅರುಚ್ಚೆಯ್ದವಾರೇ** - ಯಾವಾಗ ಕೃಪಯಾ ಅಪ್ಪಣೆಕೊಡಿಸಿದರೋ, ಆಗಲೇ, ಅರ್ಜುನನ ಮುಖದಲ್ಲಿ, **ಉರಾವುತಲ್ಮೈ**-ದೈನ್ಯವನ್ನು, ಮನಃ ಖೇದದಿಂದ ಮುಖ ಬಾಡಿ ಹೋಗಿರೋಣವನ್ನು, **ಕಣ್ಡು** - ನೋಡಿ, **ಅರುಳಿಯಿರುಕ್ಕಚ್ಚೆಯ್ದ**-ಕೃಪಯಾ ಇದ್ದರೂ ಕೂಡ, **ಕಡುಗ** - ಒಡನೆಯೇ, ಶೀಘ್ರವಾಗಿ, **ಲಘೂಪಾಯತ್ತೈ**-ಅದು ಗುರೂಪಾಯವೇ, ಸಾಧ್ಯವಿಲ್ಲವೇ ಎಂದು ಪೇಚಾಡುತ್ತಿದ್ದುದರಿಂದ ಒಡನೆಯೇ, ಈ ಚರಮಶ್ಲೋಕದಲ್ಲಿ ಹೇಳಿರುವ ಲಘೂಪಾಯವನ್ನು **ಅರುಳಿಚ್ಚೆಯ್ದೇ**-ಕೃಪಯಾ ಉಪದೇಶಿಸದೆ, “**ಅದೃಢ ಚೇತಸಾಂ**-ದೃಢವಾದಮನಸ್ಸು ಇಲ್ಲದವರನ್ನು, **ಜಗನ್ನಾಥನು ಪರೀಕ್ಷಾಂ ಚ ಕರೋತಿ** - ಪರೀಕ್ಷೆಯನ್ನು ಮಾಡುವನು, ಪರೀಕ್ಷಿಸುವನು ಎಂಬರ್ಥವು, **ಎಙ್ಗಿರ ಕಟ್ಟಳೈಯೈ ಕಂಡರುಳಿ**,-ಎಂಬನ್ಯಾಯವನ್ನು ಅಂಗೀಕರಿಸಿದವರಾಗಿ, **ನಾಮ್'**-ಶ್ರೀ ಕೃಷ್ಣನಾದ ತಾನು, **ಇನ್ನದು** - ಈಗ, **ಉನಕ್ಕು** - ಅರ್ಜುನನಾದ ನಿನಗೆ, **ಸಾಕ್ಷಾತ್ ಮೋಕ್ಷಸಾಧನವಾದ, ಪರಮಹಿತಂ** - ಪರಮಹಿತವಾದ ಉಪದೇಶವು ಈ ಶರಣಾಗತಿಯು; **ಇತ್ತೈ** - ಇದನ್ನು, **ಪ್ರಧಾನಮಾಗ ಕಣಿಶಿತ್ತು** - ತುಂಬಾ ಮುಖ್ಯವಾದುದೆಂದು ಭಾವಿಸಿ, ಅಂಗೀಕರಿಸಿ, ಈ ಶರಣಾಗತಿಯಾದ ಉಪಾಯವು

**ವರ್ತಿ ಎನ್ನು ನಿಗಮಿಯರಾದೆ (೬) "ಏಷಪಂಥಾ ವಿದರ್ಭಾಣಾ ಮೇಷ ಯಾಸ್ಯತಿಕೋಸಲಾರ್" ಎನ್ನು ಮಾಪ್ಪೋಲೇ, ಉಪೇಕ್ಷಕತ್ವ ಶಂಕೈಪಣ್ಣ ಲಾನ್ಪಡಿ, "ಯಥೇಚ್ಛಸಿ ತಥಾಕುರು" ಎನ್ನು ಶೊಲ್ಲಿ ತ್ತಲೈಕಟ್ಟಿನೋನ್, ಎನ್ನು ಇದು ವ್ಯಾಜಮಾಗ ಶೋಕಿತ್ತಾನೆನ್ನು ಭಾವಿತ್ತು (೭) ಇನ್ನು ಮೊರು**

---

ಪರಮ ಮಾಹಾತ್ಮ್ಯಯುಳ್ಳದ್ದೆಂದು ಭಾವಿಸಿ, **ಇದಕ್ಕು ಅನುರೂಪವಾಗಿವರ್ತಿ** - ಉಪಾಯಾನುಷ್ಠಾನಕ್ಕೆ ಅನುಗುಣವಾಗಿ ಪ್ರವರ್ತಿಸು, **ಎನ್ನು ನಿಗಮಿಯಾದೇ** - ಎಂದು ಪೂರೈಸಿ ಹೇಳದೆ, "**ಏಷ ಪನ್ಥಾ ವಿದಭಾರ್ಣಾನ್** - ಇದೇ ಹೋಗಲು ಮಾರ್ಗವಿದರ್ಭರಿಗೂ, ಕೋಸಲರಿಗೂ ಇದೇ ಮಾರ್ಗವು" **ಎನ್ನು ಮಾಪ್ಪೋಲೇ**- ಎಂದು ಹೇಳಿರುವಹಾಗೆ, **ಉಪೇಕ್ಷಕತ್ವ ಶಂಕೈಪಣ್ಣುಮಾನ್ಪಡಿ** - ಉಪೇಕ್ಷೆ ಮಾಡಿ ಏನಾದರೂ ಶ್ರೀ ಕೃಷ್ಣನು ಹೇಳಿದರೋ ಎಂಬ ಶಂಕಾ ಉಂಟಾಗುವಹಾಗೆ, **ಯಥಾ ಇಚ್ಛಸಿ ತಥಾಕುರು** - ಹೇಗೆ ಇಷ್ಟವೋ ಹಾಗೆ ಮಾಡು, **ಎನ್ನು ಶೊಲ್ಲಿ ತಲೈ ಕಟ್ಟಿನೋಮ್'** - ಎಂದು ಹೇಳಿ ಅರ್ಜುನನಿಗೆ ಉಪದೇಶವನ್ನು ಶಿರಸಾ ವಹಿಸುವ ಹಾಗೆ ಮಾಡಿದ್ದಾಯಿತು ; ಇಲ್ಲಿ **ಉಪೇಕ್ಷಕತ್ವಶಂಕಾ** ಎಂಬ ಪ್ರಯೋಗ ದಿಂದ ಹಾಗೆ ಆಪಾತತಃ ತೋರುತ್ತದೇ ವಿನಾ ನಿಶ್ಚಯವಾಗಿ ಪರಿಶೀಲಿಸಿದರೆ ಅಂತಹ ಶಙ್ಕಾ ಏನೂ ಇಲ್ಲವೆಂಬ ಭಾವವು ತೋರುತ್ತದೆ. ಆದುದರಿಂದಲೇ ಸಾರ ವಿವರಿಣಿ ಭಾಷ್ಯಕಾರರು ಈ ಸಂದರ್ಭದಲ್ಲಿ ಅಪ್ಪಣೆಕೊಡಿಸಿರುವದು ಏನೆಂದರೆ ? "**ಯೇನ ಮಾರ್ಗೇಣ ಗಂತವ್ಯ ಮಿತಿ ರೋಚತೇ ತೇನ ಮಾರ್ಗೇಣ ಗಚ್ಛ**" ಎಂದರೆ ಓ ಅರ್ಜುನನೇ ನೀನು ವಿವೇಕಸ್ಥನು ; ಈಗ ಉಪ ದೇಶವನ್ನೆಲ್ಲಾ ಕೇಳಿರುತ್ತೀಯೇ ; ಅಂತವನು ಯಾವ ಮಾರ್ಗವನ್ನು ಅವಲಂಬಿಸ ಬೇಕೋ ಹಾಗೆ ಪ್ರವರ್ತಿಸು ಎಂಬದಾಗಿ. ಸರಿಯಾಗಿ ನೋಡಿದರೆ "**ಯಥೇಚ್ಛಸಿ ತಥಾಕುರು**" ಎಂಬಲ್ಲಿ ಕೋಪವಾಗಲಿ ಉಪೇಕ್ಷೆಯಾಗಲಿ ಇಲ್ಲವು. ಮುಂದೆ **ಪ್ರಿಯೋಸಿಮೇ** ಎಂದಿರುವದರಿಂದ ಸರಿಯಾದ ಅರ್ಥ ಹೇಗೆಂದರೆ "**ಯಥಾ ಪ್ರಾಜ್ಞಸ್ತ್ವಂ ಇಚ್ಛಸಿ, "ಯಥಾತ್ವಂ ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಯಸಿ ಶಾಶ್ವತಂ, ತಥಾಕುರು" ಇತ್ಯರ್ಥಃ** ಆದುದರಿಂದ ಅರ್ಜುನನು **ವ್ಯಾಜಮಾಗ ಶೋಕಿತ್ತಾರ್** ಎಂದು ಹೇಳಿರುತ್ತಾರೆ.

**ಎನ್ನು ಶೊಲ್ಲಿತಲೆಕಟ್ಟಿನೋಮ್' ಎನ್ನು** - ಎಂಬದಾಗಿ, **ಇದು ವ್ಯಾಜ ಮಾಗ ಈ ಯಥೇಚ್ಛಸಿ ತಥಾಕುರು** ಎಂಬ ತಮ್ಮ ವಾಕ್ಯವನ್ನು **ವ್ಯಾಜಮಾಗ ಶೋಕಿತ್ತಾನೆನ್ನು** ಕಾರಣವಾಗಿಟ್ಟುಕೊಂಡು ಅರ್ಜುನನು ಶೋಕಿಸಿದನು ಎಂದು, **ಭಾವಿಸಿ**, - (ಶ್ರೀ ಕೃಷ್ಣನು) ಭಾವಿಸಿ, **ಇನ್ನುಮ್' ಒರು ನಿಲೈ** - ಇನ್ನೂ ಒಂದು ಸಲ, **ಪ್ರಧಾನಮಾನ ಭಕ್ತಿಯೋಗತ್ತೈ** ಮುಖ್ಯವಾದ ಭಕ್ತಿಯೋಗ

## ಸ್ವೇನ ಸಮರ್ಥಿತ ಮರ್ಥಂ ಆದಿತಃ ಗೀತಾರ್ಥ ಪರಾಮರ್ಶಾತ್ ದ್ರಢಯತಿ

**ಇಬ್ಭಗವದ್ಗೀತೆಯಿಲ್ (೧) ಮುರ್ಪಡ ಪ್ರಕೃತ್ಯಾತ್ಮ ವಿವೇಕತ್ತೈಯುಂ ಡಾಕ್ಕಿ (೨) ಪಿನ್ಬು ಪರಂಪರಯಾ ಮೋಕ್ಷಕಾರಣಙ್ಗಳಾನ ಕರ್ಮಯೋಗ ಜ್ಞಾನ ಯೋಗಙ್ಗಳೈಯುಮ್, ಸಾಕ್ಷಾನ್ಮೋಕ್ಷ ಸಾಧನಮಾಗ ವೇದಾನ್ತ ವಿಹಿತ ಮಾನ ಭಕ್ತಿಯೋಗತ್ತೈಯುಮ್, ಸಪರಿಕರಮಾಗ ಉಪದೇಶಿತ್ತು (೩)**

---

ವ್ಯಕ್ತವು. **ಕೃಷ್ಣರೂಪ ಸ್ವಕಂ** ರೂಪವಲ್ಲವು. ಬಹುಶಃ ಶ್ರೀ ನಿಗಮಾನ್ತದೇಶಿಕರವರು ಈ ಶ್ಲೋಕನಿರ್ವಾಣೆಯು ಅಪ್ರಸ್ತುತವಾದುದೆಂದು ಬಿಟ್ಟಿರಬಹುದು.

**ತಮ್ಮ ಈ ಅಭಿಪ್ರಾಯವನ್ನೇ ಗೀತಾ ಆದಿಯಿಂದ ವಿಮರ್ಶಿಸುವ ಮೂಲಕ ಒಂದು ಮಹಾ ವಾಕ್ಯದಿಂದ ದೃಢೀಕರಿಸುತ್ತಾರೆ.—**

ಈ ಮಹಾ ವಾಕ್ಯವನ್ನು ತಿಳಿಯುವದು ಕಷ್ಟವಾದರೆ ೧. ೨. ೩. ಎಂದು ಗುರ್ತಿಸಿರುವ ರೀತಿಯಲ್ಲಿ ಸಣ್ಣವಾಕ್ಯಗಳಾಗಿ ಭಾಗಿಸಬಹುದು:— ಹೇಗೆಂದರೆ **ಯುಂಡಾಕ್ಕಿ,** ಎಂಬಲ್ಲಿ **ಯುಂಡಾಕ್ಕಿನಾರ್** ಎಂದು ಪೂರ್ಣವಾಕ್ಯವಾಗಿ ಇಟ್ಟು ಕೊಂಡು ಅರ್ಥಮಾಡಿಕೊಳ್ಳಬಹುದು. ಹೀಗೆ ೧೦ ವಾಕ್ಯಗಳಾಗಿ ವಿಭಾಗಿಸಿ ಕೊಂಡರೆ ಅರ್ಥವು ಮನಸ್ಸಿಗೆ ಹಿಡಿಯುತ್ತದೆ.

**ಇಬ್ಭಗವದ್ಗೀತೆಯಿಲ್** - ಈ ಭಗವದ್ಗೀತೆಯಲ್ಲಿ, **ಮುರ್ಪಡ** - ಪ್ರಥಮತಃ, ಮೊದಲು **ಪ್ರಕೃತ್ಯಾತ್ಮ ವಿವೇಕತ್ತೈಯುಂಡಾಕ್ಕಿ** - ದೇಹವೇ ಆತ್ಮಾ ಎಂಬ ಭ್ರಮೆಯಿಂದ ಪೀಡಿತನಾಗಿ ಬಂಧುಗಳನ್ನೂ ಗುರುಗಳನ್ನೂ ಕೊಲ್ಲುವದು ಹೇಗೆ ಎಂದು ಶೋಕಿಸುತ್ತಿರುವ ಅರ್ಜುನನಿಗೆ ಜಡದೇಹಕ್ಕೂ ಚೇತನನಾಗಿ ಜ್ಞಾನವಿವೇಕಗಳುಳ್ಳ ಆತ್ಮನಿಗೂ ಇರುವ ವ್ಯತ್ಯಾಸವನ್ನು ಭ್ರಮೆಹೋಗುವ ಹಾಗೆ ಚನ್ನಾಗಿ ತಿಳಿಸಿ, **ಪಿನ್ಬು** - ಅನಂತರ, **ಪರಂಪರಯಾ** - ಒಂದಾದನಂತರ ಇನ್ನೊಂದು ಹೀಗೆ ಕ್ರಮೇಣ, **ಮೋಕ್ಷಕಾರಣಙ್ಗಳಾನ** - ಮೋಕ್ಷಕ್ಕೆ ವ್ಯವಹಿತಸಾಧನಗಳಿಂದ, **ಕರ್ಮಯೋಗ ಜ್ಞಾನಯೋಗಗಳನ್ನೂ, ಸಾಕ್ಷಾನ್ಮೋಕ್ಷಸಾಧನಮಾಗ** - ಸಾಕ್ಷಾತ್ತಾಗಿ ಮೋಕ್ಷಕ್ಕೆ ಅವ್ಯವಹಿತ ಉಪಾಯವೆಂದು, **ವೇದಾನ್ತವಿಹಿತಮಾನ**- ಉಪನಿಷತ್ತುಗಳಲ್ಲಿ ವಿಧಿಸಿರುವ, **ಭಕ್ತಿಯೋಗವನ್ನು,** ಭಕ್ತಿಯೋಗ ಸಾಕ್ಷಾತ್ತಾದ ಉಪಾಯವೆಂಬುದರಿಂದ, **ಕರ್ಮಯೋಗ ಜ್ಞಾನಯೋಗಗಳು** ಸಾಕ್ಷಾತ್ತಾದ ಉಪಾಯವಲ್ಲವು, ಭಕ್ತಿಯೋಗಕ್ಕೆ ಸಾಧನವಾಗಿ ಅಂಗಗಳೆಂದು ಹೇಳಲ್ಪಟ್ಟಿತು ; **ಉಪದೇಶಿತ್ತು** - ಹೀಗೆ ಅಷ್ಟಾಂಗಯೋಗವಾದ ಉಪಾಸನ ಕ್ರಮವನ್ನು

**ಪ್ಪತ್ತಿ ಅರುಳಿಚೆಯ್ದು ಪುದುಗಿರ ಶೀರಿಯ ಲಘೂಪಾಯತ್ತುಕ್ಕು ಪ್ರಶಂಸಾ ರೂಪಮಾನ ಒರುಕಾಲಕ್ಷೇಪಂ ಪಣ್ಣಾದೆ, ಕಡುಗ ಸಕಲ ಫಲಸಾಧನಮಾನ ಸ್ವವಿಷಯಶರಣಾಗತಿಯೈ ಉಪದೇಶಿತ್ತು, ಇವನುಡೈಯ ಮನೋರಥತ್ತುಕ್ಕುಮ್ ಸಾರಥಿಯಾಯ್ ಸರ್ವಶೋಕತ್ತೈಯುಮ್ ಕಳಿಕ್ಕಿರನಾಗೈಯಾಲೇ, ಇಜ್ಜ ನಿವಾರಿಕ್ಕಿರ ಶೋಕಮ್, ಪಳಿಯ ಶೋಕಙ್ಗಳಿಲ್ ವೇರುಪಟ್ಟದೆನ್ರುಮಿಡಮ್ ಪ್ರಕರಣ ಪರಾಮರ್ಶತ್ತಾಲೇ ಸುವ್ಯಕ್ತಮ್.**

---

ರುವ, **ಲಘೂಪಾಯತ್ತುಕ್ಕು** - ಲಘೂಪಾಯವಾದ ಪ್ರಪದನಕ್ಕೆ, **ಪ್ರಶಂಸಾ ರೂಪಮಾಗ** - ಅದರ ಮಹಾತ್ಮ್ಯೆಯರೂಪದಲ್ಲಿ, **ಒರುಕಾಲಕ್ಷೇಪಂ ಪಣ್ಣಾದೆ** - ವಿಸ್ತರಿಸಿ ಏನನ್ನೂಹೇಳದೆ, ಅದರಪರಿಕರಗಳು ಯಾವುವು ? ಇದರ ಮಹಾತ್ಮ್ಯೆಯೇನು ? ಇದನ್ನು ಅನುಷ್ಠಿಸುವ ಕ್ರಮವು ಹೇಗೆ ? ಎಂದು ಯಾವದನ್ನು ಹೇಳದೆ, ಯುದ್ಧಕ್ಕೆ ಆಗಲೇ ವಿಳಂಬವಾಗಿರುವದರಿಂದ ಇನ್ನು ಹೆಚ್ಚು ಕಾಲವಿಳಂಬಕ್ಕೆ ಹೋಗದೆ ಎಂಬರ್ಥವು, **ಕಡುಗ** - ಶೀಘ್ರವಾಗಿ, ಒಡನೆಯೇ **ಸಕಲಫಲಸಾಧನಮಾನ - ಚತುರ್ವಿಧಾಭಜನ್ತೇಮಾಂ** ಎಂಬುದು ಎರಡು ಉಪಾಯಗಳನ್ನೂ ಕುರಿತೇ ಹೇಳಿದುದು ಎಂದು ಭಾವಿಸಬಹುದಾಗಿ, ಹಾಗೆಯೇ ಈ ಸಂದರ್ಭದಲ್ಲೂ ಚತುರ್ವಿಧವಾದ ಸಕಲ ಪುರುಷಾರ್ಥಗಳನ್ನೂ ಸಾಧಿಸಿಕೊಡುವ, **ಶರಣಾಗತಿಯನ್ನು ಉಪದೇಶಿಸಿ, ಇವನುಡೈಯ**-ಈ ಅರ್ಜುನನ, **ಮನೋರಥತ್ತುಕ್ಕು** - ಮನಸ್ಸಿನ ಅಭಿಲಾಷೆಗೆ, **ಸಾರಥಿಯಾಯ್** - **ಶರಣಂವ್ರಜ** ಎಂದು ಹೇಳುವ ಸಿದ್ಧೋಪಾಯನಾಗಿ ತಾನೇ ನಿಂತು, **ಸರ್ವಶೋಕತ್ತೈಯುಮ್** - ಆತನ ಶೋಕವನ್ನೆಲ್ಲಾ, **ಕಳಿಕ್ಕಿರಾನಾಗೈಯಾಲೇ-"ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ"** ಎಂದು ಹೇಳಿ ಹೋಗಲಾಡಿಸುವನಾದುದರಿಂದ, ಉಪಾಸನವು ಕಷ್ಟವೇ ಅದನ್ನು ಅನುಷ್ಠಿಸಲು ಶಕ್ತಿಯಿಲ್ಲವೇ, ಇನ್ನು ಪಾಪಗಳುಹೋಗುವ ಬಗೆ ಹೇಗೆ ? ಎಂದು ಶೋಕವನ್ನೆಲ್ಲಾ ಹೋಗಲಾಡಿಸುವದರಿಂದ ಎಂಬ ಭಾವವು, **ಪಳಿಯ ಶೋಕಙ್ಗಳಿಲ್** - ಹಿಂದಿನ ಶೋಕಗಳಾದ ಬಂಧು ವಿನಾಶಶೋಕ, ತಾನೇನಾದರೂ ಅಸುರ ಸ್ವಭಾವನೋ ಎಂಬ ಶೋಕ, ಸ್ವಾಮಿಯು ಶತ್ರುಹನನರೂಪ ಘೋರದರ್ಶನ ಶೋಕ, ಈ ಮೂರು ಶೋಕಗಳಿಗಿಂತ, **ವೇರುಪಟ್ಟದು** - ಬೇರೆಯಾದುದು, **ಎನ್ರುಮಿಡಮ್** - ಎಂಬ ಸಂದರ್ಭವು, **ಪ್ರಕರಣಪರಾಮರ್ಶತ್ತಾಲೇ** - ಪ್ರಕರಣವನ್ನು ಚನ್ನಾಗಿ ವಿಮರ್ಶಿಸುವದರಿಂದ, **ಸುವ್ಯಕ್ತಮ್** - ಬೇರೆ ಸಂದೇಹವಾದ ಅಂಗಶರಣಾಗತಿ ಇದು, ಇತ್ಯಾದಿಗಳ **ನಿವೃತ್ತಿ** ಯೊಂದಿಗೆ, ಇನ್ನೂ ಯಾವ ಪೂರ್ವಪಕ್ಷಗಳಿಗೂ ಅವಕಾಶವಿಲ್ಲದೆ, ಸುವ್ಯಕ್ತವು.

ಮೂಲವನ್ನು ಹತ್ತು ವಾಕ್ಯಖಂಡಗಳಾಗಿ ವಿಭಾಗಿಸಿದೆವು. ಅವುಗಳ ಅಭಿಪ್ರಾಯಗಳನ್ನು ಸ್ವಲ್ಪಮಟ್ಟಿಗೆ ವಿಚಾರ ಮಾಡೋಣ.

೧. ಇಬ್ಭಗವದ್ಗೀತೆಯಿಲ್....ಯುಂಡಾಕ್ಕಿ--ಅರ್ಜುನನಿಗೆ ಪ್ರಥಮತಃ ಶೋಕವನ್ನುಂಟುಮಾಡಿದ್ದೂ ಸರ್ವೇಶ್ವರನಾದ ಶ್ರೀ ಕೃಷ್ಣನೇ. **ಸೇನಯೋರುಭಯೋರ್ಮಧ್ಯೇರಥಂಸ್ಥಾಪಯ** ಎಂದು ಅರ್ಜುನನು ಹರ್ಷದಿಂದಲೂ ಉತ್ಸಾಹದಿಂದಲೂ ಹೇಳಿರುತ್ತಾನೆ. ಬಂಧುಗಳನ್ನು ನೋಡಿ, ಇತರರನ್ನು ಕೊಲ್ಲುವದು ಅಧರ್ಮವೇ ಎಂಬ ಶಂಕಾಶೋಕಗಳು ಉಂಟಾಗುವ ಹಾಗೆ ಹೃಷೀಕೇಶನು ಮಾಡಿ, ಅವತಾರೋದ್ದೇಶಗಳಾದ ಶಿಷ್ಟಪರಿಪಾಲನ, ಅದಕ್ಕಾಗಿ ದುಷ್ಟನಿಗ್ರಹ, ಲೋಕೋಪಕಾರವಾಗಿ ಧರ್ಮ ಸಂಸ್ಥಾಪನೆಗಳಿಗೆ ಲೀಲಾಸಾರಥಿಯು ಅವಕಾಶವನ್ನು ಮಾಡಿಕೊಂಡು, ದೇಹಾತ್ಮಭ್ರಾಂತಿಯಿಂದ ಶೋಕಿಸುತ್ತಿರುವ ಅರ್ಜುನನಿಗೆ **ಪ್ರಕೃತ್ಯಾತ್ಮವಿವೇಕತ್ತೈ ಉಂಡಾಕ್ಕಿ** ಶೋಕವನ್ನು ಆಗಲೆ ಹೋಗಲಾಡಿಸಿದರು. ಈ ವಿವೇಕವನ್ನು ದ್ವಿತೀಯಾಧ್ಯಾಯದ ಆದಿಯಲ್ಲೇ ಉಂಟುಮಾಡಿರುತ್ತಾರೆ. ಆತನ ಶೋಕವನ್ನು ಕಶ್ಮಲವೆಂದೂ, ಅಸ್ವರ್ಗ್ಯಂ ಅಕೀರ್ತಿಕರಂ ಎಂದೂ ಸಾಧಿಸಿ, ವಿವೇಕವನ್ನು ಉಪದೇಶಿಸುತ್ತಾರೆ—ಆಗ ಅರ್ಜುನನು ತನಗೆ ಸರಿಯಾದ ಜ್ಞಾನವಿಲ್ಲವು; ಧರ್ಮಾಧರ್ಮಗಳ ಸರಿಯಾದಜ್ಞಾನವನ್ನು ಶಿಷ್ಯನಾದ ನನಗೆ ಉಪದೇಶಿಸು ಎಂದು ಶರಣಾಗತಿಯನ್ನು ಅನುಷ್ಠಿಸುತ್ತಾನೆ—ಆಗ ಸರ್ವೇಶ್ವರನು ಕೇಳುತ್ತಾನೆ:—ನೀನು ಯುದ್ಧದಲ್ಲಿ ಬಂಧುವನ್ನು ಕೊಲ್ಲಬೇಕಾಗುತ್ತದಲ್ಲಾ ಎಂದರೆ ದೇಹಕ್ಕೇ ವಿನಾಶವೇ ಆತ್ಮಾವಿಗೆ ವಿನಾಶವೇ ಎಂದು ವಿಕಲ್ಪಿಸಿ, ದೇಹವು ಪರಿಣಾಮವುಳ್ಳದ್ದು, ಯುದ್ಧವಿಲ್ಲದಿದ್ದರೂ ತಾನೇ ಕೌಮಾರಾದಿ ಅವಸ್ಥೆಯನ್ನು ಹೊಂದಿರುವ ವಿಕಾರಯಾದ ಜಡದ್ರವ್ಯವು (18 ನೆಯ ಶ್ಲೋಕ). ಆತ್ಮಾ ಹಾಗಲ್ಲವು, ಆತನನ್ನು ಕೊಲ್ಲಲು ಸಾಧ್ಯವಲ್ಲವು, ಆತನು ಅಜನು, ನಿತ್ಯನು (೨೦), ಕರ್ಮದಿಂದ ಆತ್ಮನಿಗೆ ದೇಹಪ್ರಾಪ್ತಿಯು, ಒಂದು ದೇಹ ಹೋದರೆ ಇನ್ನೊಂದು ದೇಹವು ಬರುತ್ತದೆ. (೨೨) ದೇಹವನ್ನು ಕೊಂದರೂ ಆತ್ಮನನ್ನು ಕೊಲ್ಲಲು ಸಾಧ್ಯವಿಲ್ಲವು (೨೩) ಈತನು ಅಣು ವಾದುದರಿಂದ (೨೪) ಆತ್ಮಾ ಅಚ್ಛೇದ್ಯನು ಅದಾಹ್ಯನು, ಅಕ್ಲೇದ್ಯನು, ಅಶೋಷ್ಯನು. ಆದುದರಿಂದ ಅವಿಕಾರ್ಯನು (೨೫) ಇತ್ಯಾದ್ಯುಪದೇಶಗಳಿಂದ ದೇಹಾತ್ಮವಿವೇಕವನ್ನುಪದೇಶಿಸಿ **"ನತ್ವಂ ಶೋಚಿತುಮರ್ಹಸಿ"** ಎಂದು ಶೋಕವನ್ನು ನಿವಾರಿಸಿರುತ್ತಾರೆ. ದೇಹಕ್ಕೆ ಮರಣವೆಂಬುದು ತಪ್ಪಿದ್ದಲ್ಲವು. ಆದುದರಿಂದ ದೇಹಿಯು ದುಷ್ಟನಾದರೆ ಕ್ಷತ್ರಿಯನು ಅಂತವನನ್ನು ಕೊಲ್ಲುವದೇ ಆತನಿಗೆ ಧರ್ಮವು, ಅದರಿಂದ ಆತನಿಗೆ ಸ್ವರ್ಗವುಂಟು, ಲೋಕೋಪಕಾರವು. ನಿನಗೆ ಧರ್ಮಯುದ್ಧದಿಂದ ಪಾಪ ಉಂಟಾಗುವದಲ್ಲವು; ಅದು ನಿನಗೆ ಸ್ವಧರ್ಮವು; ಹಾಗೆ ನಿನ್ನ ಧರ್ಮವನ್ನು ಬಿಟ್ಟರೇನೇ

ಪಾಪವನ್ನು ಹೊಂದುವಿ ಎಂದು ಉಪದೇಶಿಸಿದುದರಿಂದ ಶೋಕವು ನಿವಾರಿತವು.

೨. **ಪಿನ್ನು ಪರಂಪರೆಯೂ....ಉಪದೇಶಿತ್ತು - ಈ ಪರಂಪರೆಯ** ಉಪದೇಶವನ್ನು ಎರಡನೆಯ ಅಧ್ಯಾಯದ ೪೭ನೆಯ ಶ್ಲೋಕದಿಂದ ಹಿಡಿದು ೫೩ ರ ವರಗೂ ಹೇಳುತ್ತಾರೆ-ಅನಂತರ ಜ್ಞಾನಯೋಗ ವಿಷಯವನ್ನೂ ಜ್ಞಾನಯೋಗಿಯ ೪ ಅವಸ್ಥಾಭೇದಗಳನ್ನೂ ೪ ಶ್ಲೋಕಗಳಲ್ಲಿ ಉಪದೇಶಿಸುತ್ತಾರೆ (೫೫ ರಿಂದ ೫೮) ಇವು ಭಕ್ತಿಯೋಗವಾದ ಸಾಕ್ಷಾದುಪಾಯಕ್ಕೆ ಅಂಗಗಳು. ಈ ಬರೀ ಅಂಗಗಳಿಂದ ಲೇ ಮುಕ್ತಿಯಿಲ್ಲವೆಂದು ೧೧ನೆಯ ಅಧ್ಯಾಯದಲ್ಲಿ **"ನಾಹಂವೇದೈಃ"** ಎಂಬಲ್ಲಿ ಹೇಳಲ್ಪಟ್ಟಿರುತ್ತದೆ. ಆದುದರಿಂದ ಭಕ್ತಿಯೋಗಕ್ಕೆ ಅಂಗಗಳಾಗಿ ಮೋಕ್ಷಸಾಧನ ಗಳು. ಕರ್ಮಯೋಗಮಾಹಾತ್ಮ್ಯೆಯು ೩ನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟು, ಕರ್ತೃತ್ವ ಮಮತಾಫಲಾಕಾಂಕ್ಷೆಗಳಿಲ್ಲದೆ ಕರ್ಮಾನುಷ್ಠಾನಮಾಡಿ ಈಶ್ವರನಾದ ತನ್ನಲ್ಲಿ ಸಮ ರ್ಪಿಸತಕ್ಕದ್ದೆಂದು (೩.೩೦) ರಲ್ಲಿ ಹೇಳಿ, ನಿನಗೆ ಜ್ಞಾನಯೋಗವು ಕಷ್ಟವಾದುದ ರಿಂದ ಜನಕಾದಿಗಳಹಾಗೆ ಕರ್ಮಯೋಗಮಾತ್ರವೇ ಅನುಷ್ಠಿಸಿ ಭಕ್ತಿಯೋಗಕ್ಕೆ ಅರ್ಹನಾಗಬಹುದೆಂದು ಉಪದೇಶಿಸುತ್ತಾರೆ (೩-೩೫) ಬರೀ ಕರ್ಮಯೋಗಮಾತ್ರವೇ ಸಾಕ್ಷಾನ್ಮೋಕ್ಷ ಸಾಧನವಲ್ಲವು. ಭಕ್ತಿಯೋಗವೇ ಸಾಕ್ಷಾನ್ಮೋಕ್ಷ ಸಾಧನವೆಂದು ಹೇಳಿರುವದು ಎಲ್ಲಿ ಎಂದರೆ ೧೧ನೆಯ ಅಧ್ಯಾಯ 53,54ನೆಯ ಶ್ಲೋಕಗಳಲ್ಲಿ- ದಾಸನು ಬರೆದಿರುವ ಭಗವದ್ಗೀತೆಯ ೨೩೧-೨,೧೫೧೧ನೆಯ ಪುಟಗಳನ್ನು ನೋಡಿ. ಭಕ್ತಿಯೋಗವೇ ಸಾಕ್ಷಾನ್ಮೋಕ್ಷದಾಯಕವಾದುದರಿಂದ, ಕರ್ಮಯೋಗಾನುಗೃ ಹೀತವಾದ ಭಕ್ತಿಯೋಗವನ್ನೇ ಅನುಷ್ಠಿಸತಕ್ಕದ್ದೆಂದೂ 9ನೇಅಧ್ಯಾಯದ ಕೊನೆಯ ಶ್ಲೋಕದಲ್ಲೂ ಅನುವಾದ ಮಾಡಿ ಪುನಃ ೧೧ನೆಯ ಅಧ್ಯಾಯಾಂತ್ಯ ಶ್ಲೋಕದಲ್ಲೂ ಉಪದೇಶಿಸಿದರು.

(೩) **"ಇತಿತೇಜ್ಞಾನಮಾಖ್ಯಾತಂ"**—ಈ ೬೩ ನೆಯ ಶ್ಲೋಕವನ್ನು ಆಪಾತತಃ ನೋಡಿದರೆ, ಸರ್ವೇಶ್ವರನು ಅರ್ಜುನನ ಮನಸ್ಸಿಗೆ ಯುದ್ಧಾ ರಂಭವು ಇನ್ನೂ ಇಷ್ಟವಾಗದಿರಲು, ಕೋಪದಿಂದಾಗಲೀ, ಉಪೇಕ್ಷೆಯಿಂದಾಗಲೀ, ನೀನು ಸ್ವತಂತ್ರನೆಂದು ಭಾವಿಸಿರುವಹಾಗೆ ತೋರುತ್ತದೆ, ನಿನ್ನ ಮನಬಂದಹಾಗೆ ಮಾಡು ಹೋಗು ಎಂದರ್ಥವಾಗುವದರಿಂದ ಅರ್ಜುನನು ಹಾಗೆ ಅರ್ಥಮಾಡಿ ಕ್ಕೊಂಡು, **ಅರ್ಜುನನನುಖತ್ತಿಲ' ಉರಾವ'** ಉಂಟಾಯಿತು, ಇದನ್ನು ನೋಡಿದ ಒಡನೆಯೇ ಸ್ವಾಮಿ ಶ್ರೀಕೃಷ್ಣನು ಒಡನೆ ಆತನ ಶೋಕವನ್ನು ನಿವಾರಣ ಮಾಡಿ ಲಘೂಪಾಯವನ್ನು (66) ಉಪದೇಶಿಸಬೇಕಾಗಿತ್ತು. ಹಾಗೆ ಮಾಡದೆ ಅರ್ಜುನನನ್ನು ಇನ್ನೊಂದು ಸಲ ಪರೀಕ್ಷಿಸೋಣವೆಂದು ಮುಂದೆ ೬೪-೬೫ ನೆಯ ಶ್ಲೋಕಗಳಲ್ಲಿ ಇನ್ನೊಂದು ಸಲವೂ ಗುರೂಪಾಯವನ್ನು ಉಪದೇಶಿಸುತ್ತಾರೆ, ಆದರೆ ಈ ೬೩ನೆಯ ಶ್ಲೋಕವು ಅರ್ಜುನನು ಮಾಡಿಕೊಂಡಹಾಗೆ ಅರ್ಥವಲ್ಲವು.

ಅದಕ್ಕೆ ಸರಿಯಾದ ಅರ್ಥವು, **ಏತದಶೇಷೇಣವಿಮೃಶ್ಯ** - ಈಗ ನಿನಗೆ **"ನತ್ವೇವಾಹಂ"** ಎಂದಾರಂಭಿಸಿ ಇದುವರೆವಿಗೂ ಉಪದೇಶಿಸಿರುವದೆಲ್ಲ ವನ್ನೂ ಸಂಪೂರ್ಣವಾಗಿ ವಿಮರ್ಶಿಸಿ, **ಯಥೇಚ್ಛಸಿ** - ಪ್ರಾಜ್ಞನಾದ ನೀನು ಹಿಂದೆ ೬೨ನೆಯ ಶ್ಲೋಕದಲ್ಲಿ ಹೇಳಿರುವ ಹಾಗೆ, **ಯಥಾ-ಪರಾಂಶಾನ್ತಿಯನ್ನೂ** ಸರ್ವಾಪರಾಧಗಳಿಂದ ಬಿಡುಗಡೆಯನ್ನೂ, **ಶಾಶ್ವತಂಸ್ಥಾನಂ** - ದಿವ್ಯವೈಕುಂಠ ವನ್ನೂ ಹೇಗೆ ಹೊಂದಬೇಕೋ ಹಾಗೆ, ವರ್ತಿಸು ಎಂಬರ್ಥವು. ಇದೇ ಸರಿಯಾದ ಅಭಿಪ್ರಾಯವು ಏಕೆಂದರೆ ಇದಕ್ಕೆ ಶ್ರೀಯತಿವರ್ಯರು ಭಾಷ್ಯಬರೆದಿರುವದು ಏನೆಂ ದರೆ, **ಕರ್ಮಯೋಗಂ ಜ್ಞಾನಯೋಗಂ ಭಕ್ತಿಯೋಗಂ ವಾ ಯಥೇಷ್ಟ ಮಾತಿಷ್ಠ** ವೆಂಬದಾಗಿ. ಇಲ್ಲಿ **ವಾ** ಎಂಬುದರ ಮೂರರ್ಥದಲ್ಲಿ ಅವಧಾರಣಾರ್ಥ ವಾಗಿ ಇಲ್ಲಿ ಉಪದೇಶಿಸುತ್ತಾರೆ--ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳನ್ನೇ ಅನುಷ್ಠಿಸು ಎಂಬ ಭಾವವು. **ಯಥೇಚ್ಛಸಿ** ಎಂಬುದಕ್ಕೆ **ಯಥೇಷ್ಟಂ** ಎಂಬ ಭಾಷ್ಯದಿಂದ **ಅನಿಷ್ಟನಿವೃತ್ತಿಯೂ ಇಷ್ಟಪ್ರಾಪ್ತಿಯೇ** ನಿನಗೆ ಯೋಗ್ಯವಾಗಿ ಜ್ಞಾನಯೋಗಕ್ಕೆ ನಿನಗೆ ಯೋಗ್ಯತೆ ಇದ್ದರೆ, ಹಾಗೆಯೂ, ಯೋಗ್ಯತೆ ಇಲ್ಲದಿದ್ದರೆ ಅದನ್ನು ತ್ಯಜಿಸಿ ಹೀಗೆ **ಯಥೇಷ್ಟಮಾತಿಷ್ಠ** ಎಂದರ್ಥ ಮಾಡಿರುತ್ತಾರೆ, ದಾಸನು ಬರೆದಿರುವ ಶ್ರೀಮದ್ಭಗವದ್ಗೀತೆಯ ೨೬೪-೬೦ ನೆಯ ಪುಟಗಳನ್ನು ನೋಡಿ.

**(೫) "ಪರಿಕಲ್ಪಿಂಚ ಜಗನ್ನಾಥಃ....ನಿಗಮಿಯಾದೇ** ಅರ್ಜುನನ ಮುಖ ದಲ್ಲಿ ದೈನ್ಯವನ್ನೂ ಗ್ಲಾನಿಯನ್ನು ಯಾವಾಗ ಕಂಡರೋ ಆಗ ವಾತ್ಸಲ್ಯಾತಿರೇಕದಿಂದ ಭಕ್ತನಿಗೆ ಲಘೂಪಾಯವನ್ನು ಉಪದೇಶಿಸಬೇಕಾಗಿತ್ತು, ಹಾಗೆಮಾಡದೆ ಲೀಲೆಯಲ್ಲಿ ಸ್ವಾಮಿಗೆ ಇಷ್ಟವಾದುದರಿಂದ ಇನ್ನೊಂದುಸಲ ಪರೀಕ್ಷೆಯನ್ನು ಮಾಡೋಣವೆಂದು ಭಾವಿಸಿ ಮುಂದೆಎರಡು ಶ್ಲೋಕಗಳಮೂಲಕ ಉಪದೇಶಿಸುತ್ತಾರೆ. ಏಕೆಂದರೆ ಲಘೂ ಪಾಯಕ್ಕೆ ಮುಖ್ಯವಾದ ಅಂಗಗಳು ಅನನ್ಯಗತಿತ್ವ, ಆಕಿಂಚನ್ಯ ಮಹಾವಿಶ್ವಾಸಗಳು ಇವುಗಳು ಉಂಟೋ ಎಂದು ಪರೀಕ್ಷಿಸುತ್ತಾರೆ. ಶೋಕವು ಇನ್ನೂ ಹೆಚ್ಚಿದರೆ ಈ ಅಂಗಗಳು ಉಂಟೆಂದು ನಿರ್ಧರಿಸಿ ಪೂರ್ಣಾಧಿಕಾರಿಯಾದನೆಂದು ಭಾವಿಸಬಹು ದೆಂದು ಮುಂದೆ ಹೇಳುತ್ತಾರೆ. ಯಾಮುನ ಮುನಿಗಳು **ನಧರ್ಮನಿಷ್ಠೋಸ್ಮಿ** ಎಂಬ ಶ್ಲೋಕದಲ್ಲಿ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳಿಗೆ ತನಗೆ ಯೋಗ್ಯತೆ ಯಿಲ್ಲವೆಂದು ಹೇಳಿ, ತಾವು **ಅಕಿಂಚನೋऽನನ್ಯಗತಿಕನು** ಎಂದು ಹೇಳಿಕೊಂಡ ಲ್ಲವೇ ಅವರು **ಶರಣಂ ಪ್ರಪದ್ಯೇ** ಎಂದು ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ.

**(೬.೭) ಏಷಪಂಥಾ ವಿದರ್ಭಾಣಾಂ....ಇದು ವ್ಯಾಜಮಾಗ ಶೋಕಿತ್ವಾ ನೆನ್ನುಭಾವಿತ್ತು....ನಿಷ್ಕರ್ಷತ್ತೂನಿಯಮಿಕ್ಕ**-ಮಹನೀಯರಾದ ಅಧಿಕಾರಿಗಳಿಂದ ಸರ್ವರೂ ಭಕ್ತಿಯೋಗೋಪಾಯವನ್ನೇ ಸಾಧುವಾದುದೆಂದು ಭಾವಿಸಿ ಅನುಷ್ಠಿಸತ

ಕ್ಕದ್ದು ಎಂದು ಹೇಳಿ ನೋಡೋಣವೆಂಬ ಲೀಲಾ ವಿನೋದವನ್ನು ಕೈಕೊಂಡು, ೬೪ ನೆಯದಾದ ಮುಂದಿನ ಶ್ಲೋಕದಲ್ಲಿ ಆ ಭಕ್ತಿಯೋಗದ ಮಹಿಮೆಯನ್ನು ಕೊಂಡಾಡಿ ಹೇಳುತ್ತಾರೆ. **"ಸರ್ವಗುಹ್ಯತಮಂ ಭೂಯಃ"** ಇನ್ನೊಂದು ಸಲ ಶ್ರೇಷ್ಠತಮ ವಾದ ರಹಸ್ಯವನ್ನು ಉಪದೇಶಿಸುತ್ತೇನೆ, **ಶೃಣುಮೇಪರಮಂವಚಃ** – ಪರಮ ಮಾಹಾತ್ಮ್ಯೆಯುಳ್ಳ ನನ್ನಮಾತನ್ನು ಗಮನಿಸಿಕೇಳು ಎಂದು ಉಪಚ್ಛಂದನವೇನೂ ಇಲ್ಲದೆ ಸತ್ಯವಾಗಿ ಯಥಾರ್ಥವಾದ ಮಾತನ್ನು ಕೇಳು ಎಂದು ಹೇಳಿ, ಅದೇನು ಅಷ್ಟು ತಾವು ಒತ್ತಿಹೇಳುತ್ತೀರಿ ಎಂದು ಕೇಳುತ್ತೀಯೋ ? **ಪ್ರಿಯೋಸಿಮೇದೃಢ ಇತಿವಕ್ಷ್ಯಾಮಿತೇಹಿತಂ** – ನೀನು ತುಂಬಾ ಪ್ರಿಯನಾದವನೆಂಬುದು ಸತ್ಯ ವಾದುದು, ಆದುದರಿಂದಲೇ ನಿನಗೆ ಪರಮಹಿತವನ್ನು ಹೇಳುತ್ತೇನೆ ಕೇಳೆಂದು ಅವತಾರಿಕೆಯಿಂದ ಮುಂದಿನ ೬೫ನೆಯ ಶ್ಲೋಕದಲ್ಲಿ ಭಕ್ತಿಯೋಗೋಪಾಯವನ್ನೇ ಪುನಃ ನಿಗಮನದಲ್ಲಿ ಉಪದೇಶಿಸುತ್ತಾರೆ. ಅದು ಯಾವುದೆಂದರೆ ? 65 ನೆಯ ಶ್ಲೋಕವು:—**"ಮನ್ಮನಾಭವಮದ್ಭಕ್ತೋ ಮದ್ಯಾಜೀ ಮಾಂನಮಸ್ಕುರು | ಮಾಮೇವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋಸಿಮೇ"** ಆ ಕರ್ಮಯೋಗ ಸಹ ಕೃತವಾದ ಭಕ್ತಿಯೋಗವನ್ನೇಅಂಗಶರಣಾಗತಿಯೊಂದಿಗೆ ನೀನುಅನುಷ್ಠಿಸತಕ್ಕದ್ದು. ಇದೇ ಪರಮ ಹಿತೋಪದೇಶವು, ನೀನು ನನಗೆ ಪ್ರಿಯನಾದುದರಿಂದ ನಿನಗೆ ಉಪ ದೇಶಿಸಿದೆನು ಎಂದು ಪ್ರತಿಜ್ಞೆಮಾಡಿ ಹೇಳುತ್ತಾರೆ. ಹೆಚ್ಚು ಸ್ವಾರಸ್ಯವು ಬೇಕೆಂ ಬುವರು ದಾಸನು ಬರೆದಿರುವ ಗೀತಾ ಶ್ಲೋಕಗಳ ಉಪಪಾದನಾರ್ಥಗಳನ್ನು ಪರಾಂಬರಿಸಬಹುದು. **ಅವ್ವಳವಿಲುಮ' ಇವನ' ಶೋಕಂ....ಶರಣಾಗತಿಯ್ಯೆ ಉಪದೇಶಿತ್ತು** – ಹೀಗೆ ಭಕ್ತಿಯೋಗದಮಹಾತ್ಮ್ಯೆಯನ್ನು ತಿಳಿಸಿ, ಅದನ್ನೇ ಅನುಷ್ಠಿಸು, ನೀನು ಪ್ರಾಪ್ಯವನ್ನು ಹೊಂದುವಿ ಎಂದು ಪ್ರತಿಜ್ಞೆಮಾಡಿ ಹೇಳಿದರೂ ಈತನಿಗೆ ಆ ಗುರೂಪಾಯಕ್ಕೆ ಬೇಕಾದ ಚಿತ್ತೈಕಾಗ್ರತೆಯು ತನಗೆ ಸಾಧ್ಯವಿಲ್ಲದು ದರಿಂದ ಈತನಿಗೆ ಶೋಕವು ಹೆಚ್ಚಿತೇ ವಿನಾ ನಿವಾರಣೆಯನ್ನು ಹೊಂದಲಿಲ್ಲವು. ತನ್ನಮಾತು ಹಾಗಿರಲಿ, ಅನೇಕರು ಉಪಾಸನವನ್ನು ಮಾಡಲು ಅಶಕ್ತರಾಗಿರು ವರು. ಇನ್ನು ಕೆಲವರಿಗೆ ಉಪಾಸನದಲ್ಲಿ ಅಧಿಕಾರವೇ ಇಲ್ಲವು. ಇವರುಗಳಿಗೆಲ್ಲಾ ಮೋಕ್ಷವೇ ಇಲ್ಲವೇ ? ಎಂಬ ಶೋಕವು ಅರ್ಜುನನಲ್ಲಿ ಮಿತಿ ಮೀರಿತು. ಇದನ್ನು ಲೀಲಾಸಾರಥಿಯು ಕಂಡು ಈಗ ಈ ಅರ್ಜುನನಿಗೆ ಉಪಾಸನಕ್ಕೆ ಶಕ್ತಿಯಿಲ್ಲವೇ ? ಪಾಪಗಳು ಕಳೆದುಹೋಗುವ ಬಗೆ ಹೇಗೆ ? ದಿವ್ಯ ವೈಕುಂಠಪ್ರಾಪ್ತಿಯು ಎಂದಿಗೂ ಇಲ್ಲವೇ ಎಂಬ ಪರಿತಾಪ ಹೆಚ್ಚಿ, ಅನನ್ಯಗತಿತ್ವ, ಆಕಿಂಚನ್ಯ ಉಂಟಾಗಿರುವದ ರಿಂದ ಈತನು ಲಘೂಪಾಯೋಪದೇಶಕ್ಕೆ **ಪೂರ್ಣಪಾತ್ರನಾನಾ** ಎಂದು ಭಾವಿಸಿ **ಮಾಮೇಕಂಶರಣಂವ್ರಜ** ಎಂದು ಭರನ್ಯಾಸವನ್ನು ಉಪದೇಶಿಸಿದರು. ಇದು

**ಶೀರಿಯ ಲಘೂಪಾಯವು** – ಸರ್ವೋತ್ಕೃಷ್ಟ ಉಪಾಯವು. ಒಂದು ಕ್ಷಣಕಾಲ ದಲ್ಲಿ ಗುರುವಿನ ಸನ್ನಿಧಿಯಲ್ಲಿ ಅನುಷ್ಠಿಸತಕ್ಕದ್ದು. **ನಜಾತಿಭೇದಂನಕುಲಂ ನಲಿಂಗಂನಗುಣ ಕ್ರಿಯಾಃ । ನದೇಶಕಾಲಂ ನಾವಸ್ಥಾಂ ಯೋಗೋಹ್ಯ ಯಮಪೇಕ್ಷತೇ** ಇತ್ಯಾದಿಗಳನ್ನು ಯಾವುದನ್ನೂ ಈ ಲಘೂಪಾಯವು ಅಪೇಕ್ಷಿಸು ವದಿಲ್ಲವು. ವಿಳಂಬವಿಲ್ಲದೆ ಮೋಕ್ಷಪ್ರಾಪ್ತಿ ಇತ್ಯಾದಿ ಭರನ್ಯಾಸ ಮಹಿಮೆಯನ್ನು ಕೊಂಡಾಡದೇನೇ ಉಪದೇಶಿಸಿಬಿಟ್ಟಿರಲ್ಲಾ ಅದೇನು? ಎಂದರೆ ಅದು ಈಗ ಅಪ್ರ ಸ್ತುತವಿಷಯವು – ಹಾಗೆ ಒಂದು ಲಘೂಪಾಯವೂ ಉಂಟು, ಎಲ್ಲರೂ ಅನುಷ್ಠಿ ಸಬಹುದು ಎಂದು ಇಷ್ಟುಮಾತ್ರ ತಿಳಿದರೆ ಅರ್ಜುನನು ತೃಪ್ತನಾಗಿ **ನಷ್ಟೋ ಮೋಹಸ್ಸ್ಮೃತಿರ್ಲಬ್ಧಾ"** ಎಂದೂ **"ಗತಸಂದೇಹಃ"** ಎಂದು ಹೇಳಿ, **ಕರಿಷ್ಯೇವಚನಂತವ** ಎಂದು ಒಪ್ಪಿ, ಯುದ್ಧ ಸನ್ನದ್ಧನಾದನು. ಆದರೆ ಈ ಯುದ್ಧಕಾಲದಲ್ಲಿ ಇದೊಂದುಪಾಯವನ್ನು ಮಾತ್ರ ಹೇಳಿ ಯುದ್ಧ ಸನ್ನದ್ಧನಾಗುವ ಹಾಗೆ ಮಾಡಿದ್ದರೆ ಸಾಕಾಗಿಗಿತ್ತಲ್ಲಾ ಎಂದಾಕ್ಷೇಪ ತಂದರೆ ಉಪಾಸನಕ್ಕೆ ಕರ್ಮ ಯೋಗವು ಅಂಗವು. ಅರ್ಜುನನು ಕ್ಷತ್ರಿಯನಾಗಿ ದುಷ್ಟನಿಗ್ರಹವು ಆತನ ಇತಿ ಕರ್ತ್ರವ್ಯತೆಯಲ್ಲೇ ಸೇರಿದುದರಿಂದ ಭಕ್ತಿಯೋಗವು ಆವಶ್ಯಕವಾಗಿ ಉಪದೇಶಿಸ ಬೇಕಾಗಿಬಂತೆಂಬುದು ಸಮಾಧಾನವು.

ಈ ಸಂದರ್ಭದಲ್ಲಿ ಇನ್ನೊಂದು ಪೂರ್ವಪಕ್ಷವೇನೆಂದರೆ? ಹಾಗೆ ಲಘೂಪಾ ಯೋಪದೇಶಕ್ಕೆ ಪೂರ್ಣಪಾತ್ರನೆಂದು ಭಾವಿಸಿ ಉಪದೇಶಿಸಿದರೆ ಆ ಉಪಾಯೋಪದೇ ದಶವನ್ನು ಒಂದು ಅನುಷ್ಟುಪಶ್ಲೋಕದಲ್ಲಿ ಮುಗಿಸಿ, **ಒಂದು ಪ್ರಶಂಸಾರೂಪ ಮಾನ ಕಾಲಕ್ಷೇಪಂಪಣ್ಣದೆ** ಹೇಳಿರುವದು ನ್ಯಾಯವೇ? ಅದನ್ನು ಅನುಷ್ಠಿಸು ವಕ್ರಮ ಹೇಗೆ? ಪರಿಕರಗಳು ಯಾವುವು? ಅದಕ್ಕೆ ಅಧಿಕಾರಿಗಳು ಯಾರು? ಇತ್ಯಾದಿ ಯಾವ ವಿಷಯಗಳನ್ನೂ ಹೇಳದಿರುವದು ಸರಿಯೇ? ಎಂದರೆ ಇವೆಲ್ಲಾ ಅಪ್ರಸ್ತುತವಿಷಯವು. ಅರ್ಜುನನಿಗೆ ಮುಖ್ಯವಾಗಿ ತನ್ನ ಇತಿಕರ್ತ್ರವ್ಯತೆಯನ್ನು ಉಪದೇಶಿಸತಕ್ಕದ್ದು ಆವಶ್ಯಕವು. ಕ್ಷತ್ರಿಯನಿಗೆ ದುಷ್ಟನಿಗ್ರಹ ಶಿಷ್ಟಪರಿಪಾಲನೆಯ ರೂಪವಾದ ಧರ್ಮಯುದ್ಧದಲ್ಲಿ ಪ್ರವೃತ್ತಿಯು ಅತ್ಯಾವಶ್ಯಕವು. ಅದಕ್ಕಾಗಿ ಕರ್ಮ ಯೋಗವು ಮುಖ್ಯವಾಗಿ ಅದನ್ನು ಸರಿಯಾಗಿ ನಡೆಸಿದರೆ ಭಕ್ತಿಯೋಗದ್ವಾರಾ ಮೋಕ್ಷ ಸಾಧಕವಾಗುತ್ತದೆಂಬ ಉಪದೇಶಮಾಡಬೇಕಾಗಿಬಂತು. ಆದರೆ ಶರಣಾ ಗತಿಯ ಮಾಹಾತ್ಮ್ಯಯು ಸ್ವಲ್ಪಮಟ್ಟಿಗೆ ಉಪಪಾದಿತವು. **ಮಾಮೇವಯೇ ಪ್ರಪದ್ಯನ್ತೇ ಮಾಯಾಮೇತಾಂತರನ್ತಿತೇ** ಎಂಬಲ್ಲೂ, **"ಮಾಂಹಿಪಾರ್ಥವ್ಯ ಪಾಶ್ರಿತ್ಯಯೇಽಪಿಸ್ಯುಃ ಪಾಪಯೋನಯಃ। ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಃ ತೇಽಪಿ ಯಾನ್ತಿಪರಾಂಗತಿಮ್"** ಎಂಬಲ್ಲೂ ಈ ಪ್ರಪದನವು ಉಪಪಾದಿತವು.

ಸ್ತ್ರೀಯರಿಗೂ ಶೂದ್ರರಿಗೂ ಉಪಾಸನದಲ್ಲಿ ಅಧಿಕಾರವಿಲ್ಲವಷ್ಟೇ. ಇದರ ಮಹಾ
ತ್ಮ್ಯಯು ಸದ್ಯಃ ಫಲವನ್ನುಕೊಡುವದರಲ್ಲೆಂಬುದೂ ವಿದಿತವು. ಎರಡನೆಯ
ಅಧ್ಯಾಯದ ೭ನೆಯ ಶ್ಲೋಕದಲ್ಲಿ ಅರ್ಜುನನು **"ಶಿಷ್ಯಸ್ತೇಹಂ ಶಾಧಿಮಾಂತ್ವಾಂ
ಪ್ರಪನ್ನಮ್'** ಎಂದು ಶರಣಾಗತಿಯನ್ನನುಷ್ಟಿಸಿದುದರ ಫಲವಾಗಿ ಒಡನೆಯೇ ಗೀ
ತೋಪದೇಶವೆಲ್ಲಾ ದೊರಕಿತು. ಪುನಃ ಶರಣಾಗತಿಯನ್ನನುಷ್ಠಿಸಿ **"ತದೇವಮೇ
ದರ್ಶಯದೇವರೂಪಂ ಪ್ರಸೀದ ದೇವೇಶ ಜಗನ್ನಿವಾಸ"** ಎಂದು ಪುನಃ
ಶರಣಾಗತಿಯನ್ನು ಅನುಷ್ಠಿಸಿ ಪರರೂಪವನ್ನು ದರ್ಶಿಸು ಎಂದು ಬೇಡುತ್ತಾನೆ.
ಒಡನೆ ಶ್ರೀಕೃಷ್ಣನು ಅದನ್ನೂತೋರಿಸಿ ಹೇಳುತ್ತಾರೆ—**ಮಯಾ ಪ್ರಸನ್ನೇನ
ತವಾರ್ಜುನೇದಂ ರೂಪಪರಂದರ್ಶಿತ ಮಾತ್ಮಯೋಗಾತ್"** ಇಲ್ಲಿ ಪರರೂಪ
ವೆಂದು ವ್ಯಕ್ತವಾಗಿ ಹೇಳಲ್ಪಟ್ಟಿರುತ್ತದೆ. ಹೀಗೆಲ್ಲಾ ಭಗವದ್ಗೀತೆಯಲ್ಲೇ ಲಘೂ
ಪಾಯ ವಿಷಯವಿರುವಾಗ ಸ್ವಾಮಿದೇಶಿಕರವರು **ಒರು ಪ್ರಶಂಸಾರೂಪಮಾಗ
ಕಾಲಕ್ಷೇಪಂಪಣ್ಣಾದೇ"** ಎಂದು ಹೇಳಿರುವದು ಹೇಗೆ ? ಎಂದರೆ ಭಕ್ತಿಯೋಗದ
ಮಹಾತ್ಮ್ಯ ಉಪಪಾದನೆ, ಪ್ರಶಂಸಾ ಇವುಗಳು ನಡೆದಹಾಗೆ ವಿಸ್ತಾರವಾಗಿ ನಡೆ
ಯಲಿಲ್ಲವೆಂಬ ಭಾವದಿಂದ ಹೇಳಿದರೆ ವಿನಾ, ಶರಣಾಗತಿಯ ವಿಷಯವನ್ನು
ಇನ್ನೆಲ್ಲೂ ಹೇಳಲಿಲ್ಲವೆಂಬ ಭಾವವಲ್ಲವು. **ಸಾರಥಿರೂಪನಾನ ಸರ್ವೇಶ್ವರ್ನ** ಎಂಬು
ದರಿಂದ ಅವನೇ ಸಿದ್ಧೋಪಾಯನಾಗಿ ಅವನೇ **ಕೃಷ್ಣಂಧರ್ಮಂಸನಾತನಮ್**
ಎಂಬಲ್ಲಿ ಹೇಳಿರುವ ಮಾರ್ಗದರ್ಶಿ ಆಗಬೇಕೇ ವಿನಾ ಅನ್ಯಥಾ ಅಲ್ಲವು. ಈ ಅರ್ಥ
ವನ್ನೇ ಶ್ರೀ ವಾಲ್ಮೀಕಿಮಹರ್ಷಿಯು **"ಅಗ್ರತಃಪ್ರಯಯೌರಾಮೋಸೀತಾಮಧ್ಯೇ
ಸುಮಧ್ಯಮಾ। ಪೃಷ್ಟತಸ್ತು ಧನುಷ್ಪಾಣಿಃ ಲಕ್ಷ್ಮಣೋನುಜಗಾಮಹ"** ಉಪ
ಪಾದಿಸಿರುತ್ತಾರೆ. ಇದೇ ಪ್ರಣವಾರ್ಥವು **ಮಕಾರವಾಚ್ಯಃ ಜೀವಃ ಆಯ್ಯೆವ**
ಎಂಬರ್ಥವನ್ನೂ ಸೂಚಿಸುತ್ತದೆ. **ಇವನುಡೈಯ ಮನೋರಥತ್ತಿಕ್ಕುಮ್ ಸಾರಥಿ
ಯಾಯ್** ಎಂಬ ಪ್ರಯೋಗದಿಂದ ಮನಸ್ಸಿನ ಅಭಿಲಾಷೆಗೆ ಸಾರಥಿಯು
ಶ್ರೀಕೃಷ್ಣನು ; ರಥವು ಸಾರಥಿಯಿಲ್ಲದಿದ್ದರೆ ಚಲಿಸಿ ತನ್ನ ಮನಸ್ಸು ಯಾವಸ್ಥಳ
ವನ್ನೂ ಪ್ರಯೋಜನವನ್ನೂ ಹೊಂದಬೇಕೋ ಅವುಗಳನ್ನು ಹೊಂದಲಾರದೆಂಬ
ಸ್ವಾರಸ್ಯಾರ್ಥವು ತೋರಿಬರುತ್ತದೆ. ಆತನು ಸಾರಥಿಯಾಗಿಯೇ **ವಿದಧಾತಿ
ಕಾಮಾನ್** ಎಂದು ಹೇಳಲ್ಪಟ್ಟಿತು.

**ಸರ್ವಶೋಕಂ ಕಳಿಕ್ಕಿರಾನ್** - ಶರಣಾಗತನಾದ ಪ್ರಪನ್ನನ ಎಲ್ಲಾ ವಿಧ
ಶೋಕವನ್ನು ಹೋಗಲಾಡಿಸುತ್ತೇನೆ ಎಂಬುದೇ ಸಙ್ಗ್ರಹವಾದ ಚರಮಶ್ಲೋಕ
ತಾತ್ಪರ್ಯವು. ಹಿಂದೆಯೇ ಕಾರಿಕೆಯನ್ನೇ ಅನುಗ್ರಹಿಸಿರುತ್ತಾರೆ. **"ಸುದುಷ್ಕರೇಣ
ಶೋಚೇದ್ಯಃ। ಯೇನ ಯೇ ನೇಷ್ಟಹೇತುನಾ। ಸಸ ತಸ್ಯಾಹ ಮೇವೇತಿ ಚರಮ**

## ಚರಮಶ್ಲೋಕೇ ನಿರ್ಭರತ್ವ, ನಿರ್ಭಯತ್ವ ನಿಸ್ಸಂಶಯತ್ವಾದಿಃಫಲಿತಮು'

**ಉಪಾಯಾನ್ತರ ರಹಿತವಾನವನ್ನೈಕ್ಕುರಿತ್ತು "ಮಾಮೇಕಂ ಶರಣಂವ್ರಜ" ಎನ್ರು ವಿಧಿತ್ತುಕಟ್ಟಳೈಯಿಲೇ ಅಶಕ್ತನಾನವನ್ ಶಕ್ತನ್‌ಕೈಯಿಲೇ ಭರಸಮು**

**ಶ್ಲೋಕಸಙ್ಗ್ರಹಃ** ಎಂಬುದು ಕಾರಿಕೆಯು. ಇಲ್ಲಿ **ಸರ್ವಶೋಕ** ಶಬ್ದದಿಂದ ಹೇಳಲ್ಪಟ್ಟದುದು ಮೋಕ್ಷಪ್ರತಿಬಂಧಕವಾಗಿದ್ದ ಪೂರ್ವಾಘಗಳೂ ಉತ್ತರಪ್ರಾಮಾದಿಕಾಗಳು ಹೇಳಲ್ಪಟ್ಟವು. ಆದರೆ ಬುದ್ಧಿಪೂರ್ವಕೋತ್ತರಾಘವು ಸೇರಲಿಲ್ಲವು. ಇದೂ ಕಳೆಯಬೇಕಾದರೆ ಪುನಃಪ್ರಪದನವನ್ನು ಪ್ರಾಯಶ್ಚಿತ್ತರೂಪದಲ್ಲಿ ಅನುಷ್ಠಿಸತಕ್ಕದ್ದಾಗಿರುತ್ತದೆ.

**ಪ್ರಕರಣಪರಾಮರ್ಶತ್ತಾಲೇ** – ಉಪಾಸನೆಗೆ ತನಗೆ ಶಕ್ತಿಯೂ ಇಲ್ಲವು, ಅದೂಅಲ್ಲದೆ ಇನ್ನೂ ಅನೇಕರು ಉಪಾಸನಕ್ಕೆ ಅನಧಿಕಾರಿಗಳು. ಹೀಗಿರುವಾಗ ತಮ್ಮೆಲ್ಲರಿಗೂ ಗತಿಯೇನು ? ಎಂಬುದು ಪ್ರಕರಣವು. ಇದನ್ನು ಚನ್ನಾಗಿ ವಿಮರ್ಶಿಸಿನೋಡಿದರೆ ಈ ಶೋಕವು ಹಿಂದಿನ ಶೋಕಗಳಿಗಿಂತ ಬೇರೆಯಾದುದು ಎಂಬುದುವ್ಯಕ್ತವು. **ಪರಾಮರ್ಶ** ಹೇಗೆ ಎಂದರೆ ಅರ್ಜುನನ ಮುಖವನ್ನು ನೋಡಿ ಶ್ರೀಕೃಷ್ಣನು **ಮಾಶುಚಃ** ಎಂದು ಹೇಳಬೇಕಾದರೆ ಅರ್ಜುನನಿಗೆ ಶೋಕವಿತ್ತೆಂಬುದುವ್ಯಕ್ತವು. **ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ, ಮಾಶುಚಃ** – ಶೋಕಿಸಬೇಡವೆಂದರೆ, ಸರ್ವಪಾಪಗಳಿಂದಲೂ ಬಿಡುಗಡೆಯು ಹೇಗೆ ? ಉಪಾಸನಕ್ಕೆ ತನಗೆ ಯೋಗ್ಯತೆಯಿಲ್ಲವೇ ಎಂಬುದು ಪರಾಮರ್ಶೆಯು ಎಂಬ ತಾತ್ಪರ್ಯವು. ಆದುದರಿಂದ ಅರ್ಜುನನಿಗೆಯಿದ್ದ ಈ ಶೋಕವು ಹಿಂದಿನ ಶೋಕಗಳು ಯಾವುವೂ ಅಲ್ಲವು. ಅವುಗಳಿಗೆ ವ್ಯತಿರಿಕ್ತವಾದುದು. ಉಪಾಸನೆಮಾಡಲೂ ಯೋಗ್ಯತೆಯಿಲ್ಲವು ಏಕೆಂದರೆ ಚಿತ್ತೈಕಾಗ್ರತೆಯು ತನಗೆ ಸಾಧ್ಯವಿಲ್ಲವು ; ಪ್ರಾಯಶ್ಚಿತ್ತಗಳಿಂದ ಕಳೆಸಲೂ ಸಾಧ್ಯವಿಲ್ಲವು. ಹೀಗಿರುವಾಗ ಪಾಪಗಳೆಲ್ಲಾ ಕಳೆಯುವಬಗೆ ಹೇಗೆ ? ಪಾಪಗಳೆಲ್ಲಾ ಕಳೆದು ಹೋದರಲ್ಲವೇ ಮೋಕ್ಷವು ? ಎಂಬದಾಗಿ ಶೋಕವು. ಅದಕ್ಕೆ ಸ್ವಾಮಿಯ ಉತ್ತರವು **ಮಾಮೇಕಂ ಶರಣಂವ್ರಜ** ಎಂಬದಾಗಿ.

ಚರಮ ಶ್ಲೋಕದಲ್ಲಿ **ನಿರ್ಭರತ್ವ, ನಿರ್ಭಯತ್ವ ನಿಸ್ಸಂಶಯತ್ವಾದಿ ಫಲಗಳು** ತೋರಿ ಬರುತ್ತವೆ. ಈ ಅಮೋಘವಾದ ಚರಮ ಶ್ಲೋಕದ ಪೂರ್ವಾರ್ಧದಿಂದ ನಿರ್ಭರತ್ವವೂ, ಉತ್ತರಾರ್ಧದಿಂದ ನಿರ್ಭಯತ್ವವೂ ಪೂರಾಶ್ಲೋಕದಿಂದ ನಿಸ್ಸಂಶಯತ್ವವೂ ತೋರಿಬರುತ್ತವೆಂದು ಉಪಪಾದಿಸುತ್ತಾರೆ **(೧) ಉಪಾಯಾನ್ತರರಹಿತವಾನ್ನೈಕ್ಕುರಿತ್ತು** – ಬೇರೆ ಉಪಾಯವಾದ ಕರ್ಮಯೋಗಾದಿ ಸಹಕೃತವಾದ ಭಕ್ತಿಯೋಗ (ಉಪಾಸನ) ವನ್ನು ಅವಲಂಬಿಸಿದ ಮುಮುಕ್ಷುವನ್ನು ಕುರಿತು **"ಮಾಮೇಕಂ ಶರಣಂವ್ರಜ" ಎನ್ರು** – ಎಂಬದಾಗಿ, **ವಿಧಿತ್ತುಕಟ್ಟಳೈಯಿಲೇ** -

**ರ್ಪಣಂ ಪಣ್ಣುಗೈಯಾಲೇ ಸ್ವತಂತ್ರ ಕಾರುಣಿಕನಾನ ಶೇಷೀ ಭರಸ್ವೀಕಾರಂ ಪಣ್ಣುಗೈಯಾಲುಮ್ ಇಪ್ರಪನ್ನನುಕ್ಕು ಇಶ್ಲೋಕತ್ತಿಲ್ ಪೂರ್ವಾರ್ಧತ್ತಾಲೇ ನಿರ್ಭರತ್ವಮುಮ್ ಸರ್ವಶಕ್ತಿಯಾಯ್ ಸ್ವೀಕೃತಭರನಾಯ್ ಆಶ್ರಿತವಿಷಯತ್ತಾಲ್ ಸತ್ಯವಾದಿಯಾನ ಶೇಷಿ "ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎನ್ರು ಅರುಳಿಚ್ಚೆಯ್‌ಗೈಯಾಲೇ ನ್ಯಸ್ತಭರನಾನ ಇವನುಕ್ಕಿನಿ ಆಗಾಮಿ ನರಕಾದಿ ಪ್ರತ್ಯವಾಯ ಶಂಕಾ ಪ್ರಸಂಗ ಮಿಲ್ಲಾಮೈಯಾಲೇ ನಿರ್ಭಯತ್ವಮುಮ್, ಇ ಶ್ಲೋಕಮ್ ಶೆಮ್ಮೈಯುಡೈಯ ತಿರುವರಂಗರ್ ತಾಮ್ ಪಣಿತ್ತ ಮೆಯ್ಮೈ ಪೆರುವಾರ್‌ತ್ತೈಯಾಗೈಯಾಲೇ ನಿಸ್ಸಂಶಯತ್ವಮುಮ್ ಫಲಿತಮ್.**

---

ವಿಧಿಸಿದಕ್ರಮದಲ್ಲಿ, **ಅಶಕ್ತನಾದವನ್** - ಶಕ್ತಿಯಿಲ್ಲದವನು, ಈ ಸಂದರ್ಭದಲ್ಲಿ ಉಪಾಸನಕ್ಕೆ ಶಕ್ತಿಯಿಲ್ಲದವನು. **ಶಕ್ತನೈಯಿಲೇ ಭರಸಮರ್ಪಣಂ ಪಣ್ಣುಗೈಯಾಲ್** - ಶಕ್ತನಾದವನಲ್ಲಿ, ಈ ಸಂದರ್ಭದಲ್ಲಿ ಶಕ್ತನಾದ ಪರಮಪುರುಷನಲ್ಲಿ ಆತ್ಮರಕ್ಷಾ ಭರಸಮರ್ಪಣವನ್ನು ಮಾಡುವದರಿಂದ, **ಸ್ವತಂತ್ರಕಾರುಣಿಕನಾದ ಶೇಷಿಯಾದ** ಪರಮ ಪುರುಷನು **ಭರಸ್ವೀಕಾರಂ ಪಣ್ಣುಗೈಯಾಲೇ** - ಭರಸ್ವೀಕಾರವನ್ನು ಮಾಡುವದರಿಂದ, **ಪ್ರಪನ್ನನಿಗೆ, ಈ ಚರಮಶ್ಲೋಕದಲ್ಲಿ ಪೂರ್ವಾರ್ಧದಲ್ಲಿ - ನಿರ್ಭರತ್ವಮುಮ್** - ಮುಂದೆ ಕೃತಕೃತ್ಯನಾಗುವದರಿಂದ **ಯಾವ**ದೊಂದು ಭರವಿಲ್ಲದಿರೋಣವೂ, (೨) **ಸರ್ವಶಕ್ತಿಯಾಯ್** - ಸಮಸ್ತಶಕ್ತಿಯನ್ನು ಹೊಂದಿದವನಾಗಿ, **ಸ್ವೀಕೃತಭರನಾಯ್** - ಪ್ರಪನ್ನನ ಆತ್ಮರಕ್ಷಾಭರವನ್ನು ವಹಿಸಿದವನಾಗಿ, **ಆಶ್ರಿತವಿಷಯತ್ತಿಲ್** - ತನ್ನಲ್ಲಿ ಶರಣಾಗತಿಯನ್ನು ಮಾಡಿದವನ ವಿಷಯದಲ್ಲಿ, **ಸತ್ಯವಾದಿಯಾನ** - ರಕ್ಷಿಸುತ್ತೇನೆಂದು ಹೇಳಿದಮಾತಿನಲ್ಲಿ ಸತ್ಯತೆಯುಳ್ಳ **"ಅಹಂತ್ವಾಸರ್ವ ಪಾಪೇಭ್ಯೋಮೋಕ್ಷಯಿಷ್ಯಾಮಿ"** ಎಂದು **ಅರುಳಿಚ್ಚೆಯ್‌ಗೆಯಾಲೇ** - ಕೃಪಯಾ ಅಪ್ಪಣೆಕೊಡಿಸಿರುವದರಿಂದ, **ನ್ಯಸ್ತಭರನಾನ ಇವನುಕ್ಕು** - ಸಮಸ್ತಭಾರವನ್ನೂ ಪರಮಪುರುಷನಲ್ಲಿಟ್ಟ ಈ ಮೋಕ್ಷಾರ್ಥಿಗೆ, **ಆಗಾಮಿನರಕಾದಿ ಪ್ರತ್ಯವಾಯಶಂಕಾ** - ಮುಂದಕ್ಕೆ ನರಕಪ್ರಾಪ್ತಿಯೇ ಮೊದಲಾದ ತೊಂದರೆಯ ಸಂದೇಹದ, ಆದಿ - ಪುನಸ್ಸಂಸಾರಬಂಧ, ತಿರ್ಯಕ್‌ಜಂತು ಮೊದಲಾದ ಜನ್ಮಪ್ರಾಪ್ತಿಯು ಹೇಳಲ್ಪಟ್ಟಿತು, **ಪ್ರಸಙ್ಗಮಿಲ್ಲಾಮೈಯಾಲೇ** - ಸಂಬಂಧವಿಲ್ಲದುದರಿಂದ **ನಿರ್ಭಯತ್ವವೂ** (೩) **ಇಶ್ಲೋಕಮ್** - ಈ ಚರಮಶ್ಲೋಕವು, ಶೆಮ್ಮೈಯುಡೈಯ - ಆರ್ಜವವನ್ನು ಹೊಂದಿದ, **ತಿರುವರಂಗರ್** - ಶ್ರೀರಂಗನಾಥರಾದ, **ತಾಮ್** - ತಾವೇ ಸಾಕ್ಷಾತ್ತಾಗಿ, **ಪಣಿತ್ತ** - ದಯಮಾಡಿ ಉಪದೇಶಿಸಿದ, **ಮೆಯ್‌ಮೈ ಪ್ಪೆರುವಾರ್‌ತ್ತೈ ಯಾಗೈಯಾಲೇ** -

ಮಹಿಮೆಯುಳ್ಳ ಅಮೋಘವಾದ ಮಾತಾದುದರಿಂದ, **ನಿಸ್ಸಂಶಯತ್ವ ಮುಮ ಫಲಿತಮ** - ನಿಸ್ಸಂಶಯವೂ ಫಲವಾಗಿ ತೋರುತ್ತದೆ. ನಿರ್ಭರತ್ವವು ಪೂರ್ವಾರ್ಧದಲ್ಲೂ, ನಿರ್ಭಯತ್ವವೂ ಉತ್ತರಾರ್ಧದಲ್ಲೂ, ಆ ಪೂರಾಶ್ಲೋಕದಿಂದ ನಿಸ್ಸಂಶಯತ್ವವೂ ತೋರಬಡುತ್ತದೆ ಎಂದರೆ ಭರನ್ಯಾಸಾನುಷ್ಠಾನಮಾಡಿದವನು ನಿರ್ಭರನಾಗಿ, ನಿರ್ಭಯನಾಗಿ ನಿಸ್ಸಂಶಯನಾಗಿ ತಾನು ಕೃತಕೃತ್ಯನೆಂದೂ ಹೃಷ್ಟಮನಸ್ಕನೆಂದೂ, ಭಾವಿಸಬಹುದು ಎಂಬುದು ತಾತ್ಪರ್ಯವು. **ನಿಭರತ್ವ ಹೇಗೆ ?** ಎಂದರೆ, **"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ"** ಎಂಬ ತಮ್ಮ ಶರಣಾಗತಿ ರಕ್ಷಣೆಯ ಸಙ್ಕಲ್ಪವನ್ನು ತಿಳಿಸಿರುವದರಿಂದ ನಿರ್ಭರತ್ವವನ್ನು ಗ್ರಹಿಸಬಹುದು. ಪುನಃ **"ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂವಾ ಸೀತೇ ಸಲಕ್ಷ್ಮಣಾಮ್ । ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ"** ಎಂಬ ; ಮತ್ತು **"ತ್ವಯಿಕಿಂಚತ್ಸಮಾ ಪನ್ನೇಕಿಂಕಾರ್ಯಂಸೀತಯಾ ಮಮ"** ಎಂದರೆ ಪ್ರಾಣ ವನ್ನಾದರೂ ಬಿಟ್ಟೇನು, ನಿನ್ನನ್ನು ಲಕ್ಷ್ಮಣನನ್ನು ಸಹ ಬಿಟ್ಟೇನು ; ಶರಣಾಗತರಿಗೆ ಮಾತು ಕೊಟ್ಟಿದ್ದನ್ನು ಎಂದಿಗೂ ಬಿಡೆನು ; ಅದರಲ್ಲೂ ವಿಶೇಷವಾದುದು ಬ್ರಾಹ್ಮಣ ರಿಗೆ ಕೊಟ್ಟ ಭಾಷೆಯಿಂದ ತಪ್ಪಲು ಸಾಧ್ಯವೇ ? ಎಂಬ, **"ಮಿತ್ರಭಾವೇನ ಸಂ ಪ್ರಾಪ್ತಂ ನತ್ಯಜೇಯಂ ಕಥಂಚನ"** ಎಂಬ, ವಾಕ್ಯಗಳಿಂದಲೂ ಗ್ರಹಿಸ ಬಹುದು. ಇದು ಏನಾದರೂ ಉಪಚ್ಛಂದನ ರೂಪೋಕ್ತಿಗಳೋ ಎಂದರೆ ಹೇಳು ತ್ತಾರೆ. **"ರಾಮೋದ್ವಿರ್ನಾಭಿಭಾಷ್ಯತೇ"** ಎಂದೂ **"ಅನೃತಂ ನೋಕ್ತ ಪೂರ್ವಂ ಮೇ ನ ಚ ವಕ್ಷ್ಯೇಕದಾಚನ"** ಎಂದೂ **"ದ್ಯೌಃ ಪತೇತ್ ಪೃಥಿವೀಶೀರ್ಯೇದ್ಧಿ ಮವಾನ್ ಶಕಲೀಭವೇತ್ । ಶುಷ್ಯೇತ್ತೋಯನಿಧಿ ಕೃಷ್ಣೇ ನಮೇ ಮೋಘಂ ವಚೋ ಭವೇತ್"** ಎಂದೂ "ಸ್ವರ್ಗಲೋಕವು ಕೆಳಗೆ ಬೀಳಬಹುದು ; ಭೂಮಿಯು ಶೀಳಿ ಹೋಗಬಹುದು ; ಹಿಮವತ್ಪರ್ವತವು ಚೂರು ಚೂರಾಗಬಹುದು ; ಓ ದ್ರೌಪ ದಿಯೇ, ಸಮುದ್ರವು ಒಣಗಿ ಹೋಗಬಹುದು ; ನನ್ನ ಮಾತಾದರೋ ವ್ಯರ್ಥವಾಗಲಾರದು" ಎಂದು ಹೇಳಿರುವದರಿಂದ **ಉಪಚ್ಛಂದನವಾಕ್ಯ** - ಆಗು ವದಿಲ್ಲವು. ಇದರಿಂದ (೨) ನಿರ್ಭಯತ್ವವೂ ತೋರಿಬರುತ್ತದೆ. ಆತನು ಅಘಟಿತಾ ಘಟನಾಶಕ್ತಿಯುಳ್ಳವನಿಗೆ ಯಾವಾಗ ಶರಣಾಗತನಾದನೋ, ಆಗ **ದುರತ್ಯಯ ವಾದ ಮಾಯೆಯಿಂದಲೂ ದುರ್ನಿವಾರ್ಯವಾದ** ಪಾಪಗಳಿಂದಲೂ ಬಿಡಿಸುತ್ತೇ ನೆಂದೂ **ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ** ಎಂದು ಹೇಳಿರುವದರಿಂದ ಸಿದ್ಧವು. ಗಜೇಂದ್ರ, ಅಂಬರೀಷ, ಪ್ರಹ್ಲಾದ ವೃತ್ತಾಂತಗಳಿಂದ ಇದು ಸಿದ್ಧವು. **"ಪ್ರತಿಭಯಂ ನ ಕಿಂಚಿತ್ಕ್ವಚಿತ್"** ಎಂದು ಆ ಕಾರಣದಿಂದ ಅಭೀತಿಸ್ತವದಲ್ಲಿ

## ಭಕ್ತಿಯೋಗ ದೌಷ್ಕರ್ಯಾದಿ ನಿಮಿತ್ತಕ ಏವ ಶೋಕಃ ಸ್ತೋತ್ರ ಮಾಶುಚ ಇತಿ ನಿವಾರ್ಯತೇ

---

**ಆಗೈಯಾಲಿಙ್ಗ ಉಪಾಯ ವಿಶೇಷ ಶ್ರವಣಾನುಷ್ಠಾನಙ್ಗಳ್ ವನ್ದಾಲ್ ಉಪಾಯಾನು ಬಂಧಿಯಾಯುಮು, ಫಲಾನುಬಂಧಿಯಾಯುಮ್, ವರುಮ' ಶೋಕತ್ತಿಲ್ ಪ್ರಾಪ್ತಿಯಿಲ್ಲೈ ಯೆನ್ಗಿರದು.**

---

ಹೇಳಿರುತ್ತಾರೆ. ಆ ಕಾರಣದಿಂದ ನಿಸ್ಸಂಶಯತ್ವವೂ ಫಲಿತವು ಎಂದು ಹೇಳಿದರು. ಏಕೆಂದರೆ ಆತನು ಸರ್ವಶಕ್ತನೂ ಅಲ್ಲದೆ ಸತ್ಯಸಙ್ಕಲ್ಪನು. ಆತನು ತನ್ನ ಸಂಕಲ್ಪವನ್ನು ನಡೆಸಿಕೊಳ್ಳುತ್ತಾನೆಂಬುದರಲ್ಲಿ ಸಂಶಯವಿಲ್ಲವು. ಯಾವಾಗ ಭರಸ್ವೀಕಾರವನ್ನು ಮಾಡಿದನೋ, ಆಗ ರಕ್ಷಿಸುವೆನು ಎಂಬುದರಲ್ಲಿ ಸಂಶಯವಿಲ್ಲವು. ಮೇಲಿನ ಪ್ರಮಾಣಗಳಲ್ಲಿ ಪ್ರಪನ್ನ ಸಂರಕ್ಷಣೆಯೇ ತನಗೆ ವ್ರತವೆಂದೂ, ಅದಕ್ಕೆ ಯಾವುದೊಂದು ಪ್ರತಿಭಯವೂ ಇಲ್ಲವೆಂದೂ ಹೇಳಿ, **ಮಾಶುಚಃ** ಎಂದು ಕೊನೆಯಲ್ಲಿ ಹೇಳಿರುವವರಿಂದ ನಿನಗೆ ಆ ವಿಷಯದಲ್ಲಿ ಸಂಶಯಬೇಡವೆಂದೇ ಹೇಳಿದಂತಾಯಿತು.

## ಭಕ್ತಿಯೋಗ ದೌಷ್ಕರ್ಯ ಮೂಲಕವಾದ ಶೋಕವು ಮಾಶುಚಃ ಎಂಬುದರಿಂದ ನಿವಾರಿಸಲ್ಪಡುತ್ತದೆ.

**ಆಗೈಯಾಲ್** - ಆ ಕಾರಣದಿಂದ, ಎಂದರೆ ಈಗ ಅರ್ಜುನ ಶೋಕವು ಬಂಧುವಧೆಯನಿಮಿತ್ತವಾದುದಲ್ಲದೆ, ಮೋಕ್ಷಪ್ರಾಪ್ತಿಗೆ ಬೇಕಾದ ಉಪಾಯವಾದ ಭಕ್ತಿಯೋಗದ ದೌಷ್ಕರ್ಯದಿಂದುಂಟಾಗಿ ಸರ್ವಪಾಪನಿವಾರಣೆಗೆ ಮಾರ್ಗ ಯಾವುದು ಎಂದು ಶೋಕವಾಗಿ, ಅಂತಹ ಶೋಕ ನಿವೃತ್ತಿಯಾಗಿ ನಿರ್ಭರತ್ವವು ಸಿದ್ಧಿಸುವದರಿಂದ ಎಂಬ ಭಾವವು. **ಉಪಾಯ ವಿಶೇಷ** – ಭರನ್ಯಾಸರೂಪವಾದ ಉಪಾಯದ, **ಶ್ರವಣಾನುಷ್ಠಾನಙ್ಗಳ್**-ಉಪದೇಶ ಶ್ರವಣ ಮತ್ತು ಅನುಷ್ಠಾನವು, **ವನ್ದಾಲ್** - ಪ್ರಾಪ್ತವಾದರೆ, **ಉಪಾಯಾನುಬಂಧಿಯಾಯ್** – ಉಪಾಯಕ್ಕೆ ಸೇರಿದುದಾಗಿಯೂ, **ಫಲಾನುಬಂಧಿಯಾಯುಮ'** – ಫಲಪ್ರಾಪ್ತಿಗೆ ಸಂಬಂಧಿಸಿದುದಾಗಿಯೂ, **ವರುಮ'** – ಉಂಟಾಗುವ, **ಶೋಕತ್ತಿಲ್** – ಶೋಕದಲ್ಲಿ, **ಪ್ರಾಪ್ತಿಯಿಲ್ಲೈ ಯೆಙ್ಗಿರದು** - ಪ್ರಾಪ್ತಿಯಿಲ್ಲಾ ಎಂದು ಹೇಳುವದು ; ಇದೀಗ **ಮಾಶುಚಃ** ಎಂಬುದರರ್ಥವು. ಈ ಶರಣಾಗತಿಯನ್ನು ಅನುಷ್ಠಿಸಲು ಪ್ರಥಮತಃ ಉಪದೇಶ ಶ್ರವಣವು ಆವಶ್ಯಕವು ; ಈ ಬರೀ ಶ್ರವಣದಿಂದ ಶೋಕನಿವೃತ್ತಿಯು ಉಂಟಾಗುವದಿಲ್ಲವು. ಅಡಿಗೆಯ ಜ್ಞಾನದಿಂದ ಹೇಗೆ ಕ್ಷುನ್ನಿವೃತ್ತಿಯಿಲ್ಲವೋ, ಅಡಿಗೆಯನ್ನು ಮಾಡಿ ಊಟಮಾಡಿದರೇನೇ ಹೇಗೆ ಕ್ಷು ನಿವೃತ್ತಿಯೋ ಹಾಗೆಯೇ ಇಲ್ಲಿ ಶೋಕನಿವೃತ್ತಿಗೆ ಶ್ರವಣ, ಅನುಷ್ಠಾನಗಳೆರಡೂ ಆವಶ್ಯಕವು. **ಶರಣಂವ್ರಜ**

## ಪ್ರಪದನೇ ಶೋಕೋಭೀತಿಶ್ಚ ಅಧಿಕಾರಃ

**ಇತ್ತಾಲೇ ಶೋಕವಿಶೇಷಾವಿಷ್ಟರ್ ಪ್ರಪತ್ತಿಕ್ಕು ಅಧಿಕಾರಿಯೆನ್ರು ತೋತ್ತಾನಿರ್ಕ "ಅಹಂ ಭೀತೋಽಸ್ಮಿ" ಎನ್ರುಮ್, (೨) "ಪಾಪೀ**

---

ಎಂಬುದು ಉಪದೇಶವು. ಆಚಾರ್ಯ ಪ್ರೋಕ್ತ ದ್ವಯೋಚ್ಚಾರಣಮೂಲಕವಾಗಿ ಅನುಷ್ಠಾನವೂ. ಇವೆರಡೂ ಸೇರಿದರೆನೇ ಶೋಕನಿವೃತ್ತಿಯುಂಟಾಗಿ ನಿರ್ಭರತ್ವವೂ ನಿರ್ಭಯತ್ವಾದಿಗಳು ಫಲಿಸುತ್ತವೆ. ಆದುವರಿಂದ ಉಪಾಸನದ ದೌಷ್ಕರ್ಯ ಮೂಲಕವಾಗಿಯೂ, ಮತ್ತು ಸರ್ವಪಾಪನಿವೃತ್ತಿಯೊಂದಿಗೆ ಮೋಕ್ಷಪ್ರಾಪ್ತಿಯೂ ಹೇಗೆ ಎಂದೂ ಶೋಕವುಳ್ಳವನೇ ಈ ಪ್ರಪತ್ತಿ ಮಾರ್ಗಕ್ಕೆ ಅಧಿಕಾರಿ ಎಂದು ಹೇಳಿದಂತಾಯಿತು.

## ಪ್ರಪದನದಲ್ಲಿ ಶೋಕವೂ ಮತ್ತು ಭೀತಿಯೂ ಅಧಿಕಾರವು

ಇಲ್ಲಿ ಶೋಕಾವಿಷ್ಟನು ಪ್ರಪದನಕ್ಕೆ ಅಧಿಕಾರಿ ಎಂದೇನೋ ಒಪ್ಪಬಹುದು. ಪಾಪಗಳಿಗಾಗಿ ಎಲ್ಲಿ ಶಿಕ್ಷೆಯೋ ಎಂದು ಭೀತನೂ ಪ್ರಪದನಕ್ಕೆ ಅಧಿಕಾರಿಯೋ ಎಂಬ ಸಂದೇಹದಲ್ಲಿ ಅಂತಹ ಭೀತನೂ ಅಧಿಕಾರಿಯೆಂದು ಹೇಳುತ್ತಾರೆ. ಮೇಲೆ ಅನಿಷ್ಟನಿವೃತ್ತಿಯಾದರೆ ಇಷ್ಟಪ್ರಾಪ್ತಿಯೂ ಉಂಟಾಗುತ್ತದೆ ಎಂದು ಉಪಪಾದಿಸಿದ ನ್ಯಾಯದ ರೀತಿಯಲ್ಲೇ, ಈ ಸಂದರ್ಭದಲ್ಲಿ ಯಾವಾಗ ಪಾಪಗಳ ನಿವೃತ್ತಿಗಾಗಿ ಉಪಾಸನ ದೌಷ್ಕರ್ಯದಿಂದ ಯಾವಾಗ ಶೋಕ ಉಂಟಾಯಿತೋ, ಆಗ ಪಾಪಗಳಿರುವದರಿಂದ ನರಕಪ್ರಾಪ್ತಿ ಸಂಸಾರಬಂಧಕ್ಲೇಶಾದಿಗಳು ಎಲ್ಲಿ ಉಂಟಾಗುತ್ತೋ ಎಂಬ ಭಯವಿದ್ದೇ ಇರುತ್ತದೆ. ಶೋಕವಿದ್ದರೆ ಭಯವಿರುತ್ತದೆಂದೂ, ಭಯವಿದ್ದರೆ ಶೋಕವಿರುತ್ತದೆಂದೂ, ಹೇಳುತ್ತಾರೆ. ಆದುದರಿಂದ ನರಕ, ಸಂಸಾರಗಳಿಂದ ಭೀತನಾದವನೂ ಅಧಿಕಾರಿಯೇ ಎಂದು ತಿಳಿಸುತ್ತಾರೆ.—**ಇತ್ತಾಲೇ** - ಹೀಗೆ ಅಭಿಪ್ರಾಯವಾದುದರಿಂದ, ಅಭಿಪ್ರಾಯವು ಯಾವುದು ಎಂಬುದನ್ನು ಮುಂದೆಯೇ ತಿಳಿಸುತ್ತಾರೆ. **ಶೋಕವಿಶೇಷಾ ವಿಷ್ಟರ್** - ಉಪಾಸನೆಗೆ ನನಗೆ ಶಕ್ತಿ ಅಥವಾ ಅಧಿಕಾರ ವಿಲ್ಲವೇ, ಪಾಪಗಳು ಕಳೆಯುವ ಬಗೆ ಹೇಗೆ ? ಎಂಬ ಶೋಕಾಕುಲನಾದವನು, **ಪ್ರಪತ್ತಿಕ್ಕು ಅಧಿಕಾರಿ ಎನ್ರು ತೋತ್ತಾನಿರ್ಕ** - ಪ್ರಪದನಕ್ಕೆ ಅಧಿಕಾರಿ ಎಂದು ಚನ್ನಾಗಿ ತೋರುತ್ತಿರುವಾಗ **"ಅಹಂ ಭೀತೋಽಸ್ಮಿ ದೇವೇಶ ಸಂಸಾರೇಽಸ್ಮಿನ್ ಭಯಾವಹೇ"** (ಜಿತನ್ತಾ) ದೇವತೆಗಳಿಗೆಲ್ಲಾ ಸ್ವಾಮಿಯಾದ ಭಗವಂತನೇ ಈ ಭಯಂಕರವಾದ ಸಂಸಾರದಲ್ಲಿ ನಾನು ಭೀತನಾಗಿರು

---

(೧) ಜಿನನ್ತಾ ೧. ೮. (೨) ಪಿ. ತಿ ೧. ೬. ೪.

**ತಳವೆನ ವೊಳಿವತರ್ಕ್ಕಞ್ಜಿ ನಮ್ಬಿನೇವನ್ದುನ್ ತಿರುವಡಿ ಯಡೈನ್ದೇನ್" ಎನ್ರುಮು', ಭೀತನಾನರ್ವ ಪ್ರಪತ್ತಿಕ್ಕು ಅಧಿಕಾರಿ ಎನ್ರು ಶೊಲ್ಲುಗಿರ ಪಡಿ ಎನ್ನೆನ್ನಿಲ'? ಕೀಳ್'ಅಭಿಮತಂ ಸಿದ್ಧಿಯಾದೆ ನಿನ್ರನಿಲೈಯೈ ಪಾರ'ತ್ತು**

**ತ್ತೇನೆ, ಎನ್ರು** – ಎಂಬದಾಗಿಯೂ, ಮತ್ತು **"ಪಾವೀ** – ಓ ಪಾಪಿಷ್ಠನೇ, **ತಳವೆನ** – ತಾಮ್ರದಿಂದ ಮಾಡಿ ಕೆಂಪಗೆ ಕಾದಿರುವ ಪ್ರತಿಮೆಯನ್ನು ಆಲಂಗಿಸು ಎಂದು **ವೊಳಿವುದರ್ಕು** – ಹೇಳುವದಕ್ಕೆ, **ಅಂಜಿ** – ಭಯಪಟ್ಟು, **ನಮ್ಬಿನೇವನ್ದು** – ವಿಶ್ವಸನೀಯನಾದ ಪರಮಪುರುಷನಲ್ಲಿಗೆ ಬಂದು **ತಿರುವಡಿ ಅಡೈನ್ದೇನ'** – ಪಾದದಲ್ಲಿ ಶರಣಾಗತಿಯನ್ನು ಅನುಷ್ಠಿಸಿದೆನು" **ಎನ್ರುಮು'** – ಎಂದೂ, **ಭೀತನಾನರ್ವ**– ಹೀಗೆ ಸಂಸಾರದಲ್ಲಿ ಭಯಪಟ್ಟವನು, **ಪ್ರಪತ್ತಿಕ್ಕು ಅಧಿಕಾರಿ ಎನ್ರು** – ಶರಣಾಗತ್ಯನುಷ್ಠಾನಕ್ಕೆ ಅಧಿಕಾರಿಯು, **ಎನ್ರು**–ಎಂಬದಾಗಿ, **ಶೊಲ್ಲುಗಿರಪಡಿ**–ಹೇಳುವ ಪ್ರಕಾರವು **ಎನ್ನೆನ್ನಿಲ'** – ಹೇಗೆ ? ಎಂದರೆ—ಅದನ್ನು ತಿಳಿಸುತ್ತಾರೆ—

ಪೆರಿಯತಿರುಮೊಳಿ ಪೂರಾಪಾಶುರವು ಯಾವುದೆಂದರೆ—

**ವಂಬುಲಾನ' ಕೂನ್ದಲ' ಮನೈವಿಯೈ ತುರನ್ದು ಪಿರರ' ಪೊರುಳ' ತಾರಮೆನ' ರಿವತ್ತೈ ನಂಬನಾ ರಿರನ್ದಾಲ' ನಮನ್ರವರ'ಪತ್ತಿ ಎತ್ತಿವೈ ತ್ತೆರಿಯೆಳುಕಿನ'ರ। ಶೆಂಬನಾಲಿಯನ್ರ ಪಾವೈಯೈ ಪಾವೀ ತಳುವೆನ ಪೊಳಿವುತರ್ಕಂಜಿ। ನಂದನೇ ವನ್ದುನ್ ತಿರುವಡಿ ಅಡೈನ್ದೇನು ನೈಮಿಶಾರಿಣ್ಯತ್ತುಳೆಂದಾಯ'**

**ಇದರ ಅರ್ಥವು. ವಂಬು ಉಲಾಂ ಕೂನ್ದಲ'** – ಪರಿಮಳಯುಕ್ತವಾದ ಕೂದಲುಗಳುಳ್ಳ, ಇದು ಲಾವಣ್ಯವುಳ್ಳ ಎಂಬುದಕ್ಕೆ ಉಪಲಕ್ಷಣವು, **ಮನವಿಯೈ** – ಅಗ್ನಿಸಾಕ್ಷಿಯಾಗಿ ಮದುವೆಮಾಡಿಕೊಂಡ ಭಾರ್ಯಾವನ್ನು, **ತುರನ್ದು** – ತ್ಯಜಿಸಿ, **ಪಿರರ್ ಪೊರುಳ'ದಾರಂ** – ಇತರರ ಸ್ವತ್ತಾದ ಮಡದಿಯನ್ನು ಅಥವಾ ಇತರರ ಸ್ವತ್ತು ಮತ್ತು ಹೆಂಡತಿ ಹೀಗೆ **ಎನ್ರು ಇವತ್ತೈ** – ಆಗಿರುವ ಇವುಗಳನ್ನು ಎಂದರೆ ಇತರ ಪರದ್ರವ್ಯವನ್ನು, **ನಂಬಿನಾರ್** – ಬಯಸಿದವರು, **ಇರನ್ದಾಲ'** – ಇದ್ದು ಹೋದರೆ ಎಂದರೆ ಮರಣಹೊಂದಿದರೆ, **ನಮನ'ತಮರ್** – ಯಮಭಟರು, **ಪತ್ತಿ** – ಹಿಡಿದುಕೊಂಡು **ಎತ್ತಿ** – ಶಿಕ್ಷಿಸಿ, **ವೈತ್ತು** – ಒಂದು ಸ್ಥಳದಲ್ಲಿ ನಿರ್ಬಂಧಿಸಿ ಇಟ್ಟು **ಎಲೆ ಪಾವೀ** – ಇತರರ ಭಾರ್ಯಾಯೊಂದಿಗೆ ಸೇರಿ ಅಪರಾಧಗೈದವನೇ, **ಶೆಂಬಿನಾಲ' ಇಯನ್ರ** – ತಾಮ್ರದಿಂದ ರಚಿಸಲ್ಪಟ್ಟ, **ಎರಿ ಎಳುಹಿನ್ರ** ಕೆಂಪಗೆ ಬೆಂಕಿಯಲ್ಲಿ ಕಾದು ಉರಿಯುತ್ತಿರುವ **ಪಾವಿಯೈ ತಳವು** – ಸ್ತ್ರೀ ಪ್ರತಿಮೆಯನ್ನು ಆಲಂಗಿಸು **ಎನವೊಳವುದರಕ್ಕು** – ಎಂದು ಹೇಳುವದಕ್ಕೆ, **ಅಂಜಿ** – ಭಯಪಟ್ಟು, **ನಂಪನೇ** – ಶರಣಾಗತಿಯನ್ನು ಮಾಡಿ ಆಶ್ರಯಿಸಿದರೆ ರಕ್ಷಿಸುವನು ಎಂಬ ವಿಶ್ವಾಸವಿಡಲು ಯೋಗ್ಯನೇ, ಮತ್ತು **ನೈಮಿಶಾರಣ್ಯತ್ತುಳ'**–ನೈಮಿಶಾರಣ್ಯಕ್ಷೇತ್ರದಲ್ಲಿ

**ಶೋಕಮುಮ್, ಮೋಲಭಿಮತತ್ತುಕ್ಕು ಪ್ರತಿಬಂಧಕಙ್ಗಳಾನ ಪ್ರಬಲ ವಿರೋಧಿಗಳ್ಕೆ ಪಾರ'ತ್ತು ಭಯಮುಮ್, ಸದೈಯರಾಡುಗಿರದಾಗೈಯಾಲೇ ಮುಮುಕ್ಷುವುಕ್ಕು ಅನಿಷ್ಟನಿವೃತ್ತಿಯಿಲುಮ' ಇಷ್ಟಪ್ರಾಪ್ತಿಯಿಲುಮ' ಒನ್ನೈ ಚ್ಚೊಲ್ಲಾಇರಣ್ಡುಮ'ವರುಮಾಪ್ಪೋಲೆಅಧಿಕಾರತ್ತಿಲುಮ',ಒನ್ನೈಚ್ಚೊಲ್ಲಾಇರ**

---

ರುವ, **ಎನ್ದಾಯ'** - ನಮ್ಮಪ್ಪನೇ, **ಉನ'ತಿರುವಡಿವನ್ದು ಅಡೈಣದೇನ್** - ನಿನ್ನ ಪಾದಕಮಲವನ್ನು ಬಂದು ಸೇರಿದೆನು. ತಾತ್ಪರ್ಯವು-ಈಶಾವಾಸ್ಯೋಪನಿಷತ್ತಿನ ಪ್ರಥಮಶ್ಲೋಕದಲ್ಲಿ **ಮಾಗೃಧಃ ಕಸ್ಯಚಿದ್ಧನಮ್** - ಪರದ್ರವ್ಯದಲ್ಲಿ ಆಶೆಯು ಕೂಡದೆಂದು ನಿಷೇಧಿಸಿರುತ್ತದೆ. ತಾನು ಧರ್ಮದಿಂದ ಗಳಿಸಿದ ಹಣವನ್ನು ತಾನು ಉಪಯೋಗಿಸಬೇಕೇ ವಿನಾ ಇತರರ ಧನವನ್ನು ಅಪಹರಿಸಕೂಡದು. ಅಪಹರಿಸಿದರೆ ಯಮನು ಶಿಕ್ಷಿಸುವನೆಂದು ಹೇಳಿದರು. ಆದುದರಿಂದ "**ಪರಧನೇ ಪರಯೋಷಿತಿ ಚ ಸ್ಪೃಹಾ**" ಬಹಳ ಕೆಟ್ಟದು. ಅವುಗಳಿಗೆ ಯಮ ಶಿಕ್ಷೆಯನ್ನು ವರ್ಣಿಸಿ, ಅಂತಹ ದುಷ್ಟಬುದ್ಧಿಯುಂಟಾಗಿ ಶಿಕ್ಷೆಯಾಗುವದಕ್ಕೆ ಮುಂಚಿತವಾಗಿ ನೈಮಿಶಾರಣ್ಯದಲ್ಲಿ ಬಿಜಮಾಡಿಸಿರುವ ನಮ್ಮಪ್ಪನ ಪಾದಕಮಲವನ್ನು ಹೊಂದಿರುತ್ತೇನೆ ಎಂದು ಹೇಳಿದರು. ಅಗ್ನಿಸಾಕ್ಷಿಯಾಗಿ ಮದುವೆಮಾಡಿಕೊಂಡು ಆಕೆಯನ್ನು ಬಿಟ್ಟು ಇತರರ ಹೆಂಡತಿಯನ್ನು ಅಪೇಕ್ಷಿಸುವದು ಬಹಳ ಹೀನವಾದ ಪಾಪವು. ಇಂದ್ರನು ಗೌತಮ ಪತ್ನಿಯನ್ನು ಅಪೇಕ್ಷಿಸಿ ಕೆಟ್ಟನು. ರಾವಣನು ಎಲ್ಲವನ್ನೂ ಕಳೆದುಕೊಂಡು ಸಂಹೃತನಾದನು. ಹೀಗೆ ಇನ್ನೂ ಅನೇಕ ನಿದರ್ಶನ ಉಂಟು. ಆದುದರಿಂದ ಪರದಾರ ವಿಷಯದಲ್ಲಿ ವಿವೇಕಿಯು ಹೇಗಿರಬೇಕೆಂದರೆ, "**ಸ್ತ್ರೀ ಪ್ರಾಯಃ ಪರದಾರ ಸಙ್ಗ್ರಹವಿಧೌ**" (ಸಙ್ಕಲ್ಪ. ೪೮.) ಎಂಬಲ್ಲೂ "**ಪರದಾರೇಷ್ವಪುಂಸಕಾಃ**" ಎಂಬಲ್ಲೂ ಹೇಳಿರುವ ಹಾಗೆ ಇರಬೇಕು. ಕೌರವರು ಇತರರ ರಾಜ್ಯವನ್ನು ಅಪಹರಿಸಿ ಹತರಾದರು. ತಮ್ಮ ದಾಯಾದರಾದ ಪಾಂಡವರ ಪಂಚಗ್ರಾಮಗಳ ಅಪಹರಣವು ಅವರಿಗೆ ಮೃತ್ಯುವಾಗಿ ಪರಿಣಮಿಸಿತು. ಹಾಗೆ ಪರದಾರಗಮನ ಮಾಡಿ ಪಾತಕಿಗೆ ಏನು ಶಿಕ್ಷೆ ಎಂದು ತಿಳಿಸಿ ಅಂತಹ ಪಾತಕಕ್ಕೆ ಅಂಜಿ ಶರಣಾಗತಿಯನ್ನನುಷ್ಠಿಸಿರುವದಾಗಿ ಆಳ್ವಾರ್ರವರು ಹೇಳಿಕೊಳ್ಳುತ್ತಾರೆ—

ಆದುದರಿಂದ ಪಾಪಗಳಿಂದ ಶೋಕಿಸುವವನೂ ಮತ್ತು ಭೀತನಾದವನೂ ಅಧಿಕಾರಿ ಎಂದು ಉಪದೇಶಿಸಿರುತ್ತಾರೆ-ಅಧಿಕಾರಿಗೆ ಪಾಪಗಳು ಕಳೆಯುವ ಬಗೆ ಹೇಗೆ ಎಂಬ ಶೋಕ ಉಂಟಾದರೆ, ಅದರೊಂದಿಗೆ ಆತನಿಗೆ ಭಯವೂ ಉಂಟಾಗಿದೆ ಎಂಬುದೂ ತೋರಿಬರುವದರಿಂದ **ಒನ್ನೈ ಶೊಲ್ಲ ಇರಣ್ಡುಮ್ ಸಿದ್ಧಿಕ್ಕುಮ'** .. ಎಂದು ಅಪ್ಪಣೆಕೊಡಿಸಿದರು. ಶೋಕವು ಏತಕ್ಕೆ ? ಎಂದರೆ ಪ್ರಬಲವಾದ ಪಾಪ ಸಮೂಹ ವಿದೆಯಲ್ಲಾ ಅವು ಹೋಗುವ ಬಗೆ ಹೇಗೆ ? ಎಂಬದಾಗಿ ಶೋಕವು.

**ಣ್ಡಾಮ್' ಸಿದ್ಧಿಕ್ಕುಮ್'. ಅತ್ಯಂತಾಕಿಂಚನನುಕ್ಕು ಭಯಶೋಕಙ್ಗಳಿರಣ್ಡುಮ್' ಮಿಂಚಿ ಇರುಕ್ಕುಮ್', ಆಗೈಯಾಲ್' ಇಙ್ಗು ಅತಿಶಯಿತ ಶೋಕಾವಿಷ್ಟನಾನ**

---

ಹೀಗೆ ಶೋಕವಿದೆ ಎಂದು ಯಾವಾಗ ಹೇಳಲ್ಪಟ್ಟಿತೋ, ಆಗ ಭಯವನ್ನೂ ಹೇಳಿದಂತೆ ಆಯಿತು. ಭಯವೇತಕ್ಕೆ ? ಎಂದರೆ, ಹೀಗೆ ಪ್ರಬಲಗಳಾದ ಪಾಪರಾಶಿಯನ್ನು ನೋಡಿ ಸ್ವಾಮಿಯು ಎಲ್ಲಿ ನಿಗ್ರಹಿಸುವನೋ ಎಂಬದಾಗಿ ಭಯವೆಂದು ಉಪದೇಶಿಸಿದರು.

ಹೀಗೆ ಒಂದನ್ನು ಹೇಳಿದರೆ ಎರಡನ್ನು ಹೇಳಿದಂತಾಯಿತು ಎಂಬುದಕ್ಕೆ ಹಿಂದೆ ಉಪಪಾದಿಸಿದ ನಿದರ್ಶನವನ್ನು ತೋರುತ್ತಾರೆ. ಶರಣಾಗತಿಯಿಂದ ಅನಿಷ್ಟನಿವೃತ್ತಿಯಾವಾಗ ಆಯಿತೋ ಆಗ ಇಷ್ಟಪ್ರಾಪ್ತಿಯೂ ಉಂಟಾಗುತ್ತದೆಂಬುದು ಹೇಗೋ ಹಾಗೇ ಎಂಬ ಭಾವವು. ಸ್ವಾಮಿ ದೇಶಿಕರವರು ಸಙ್ಕಲ್ಪಸೂರ್ಯೋದಯದಲ್ಲಿ ಸುಂದರಕಾಂಡಾರ್ಥವನ್ನು ಅಧ್ಯಾತ್ಮಪರವಾಗಿ ಅನ್ವಯಿಸಿ ಸೀತೆಯ ಅವಸ್ಥೆಯನ್ನು ಸಂಸಾರ ಸಾಗರ ಮಧ್ಯೆ ಶಿಲುಕಿ ಭಯಗ್ರಸ್ತನಾಗಿ ಶೋಕಿಸುವ ಜೀವಾತ್ಮನಿಗೆ ಹೋಲಿಸಿ **"ದಶ್ಯೋದಗ್ರದಶೇನ್ದ್ರಿಯಾನನ ಮನೋ"** ಎಂಬ ಶ್ಲೋಕದಲ್ಲಿ ವರ್ಣಿಸಿರುತ್ತಾರೆ. ಸೀತೆಯು ರಾಕ್ಷಸಿಗಳ ತರ್ಜನೆಗೆ ಒಳಪಟ್ಟಿದ್ದರಿಂದ ಭಯವೂ ಪರಮಪುರುಷನಾದ ಶ್ರೀರಾಮನನ್ನು ಸೇರುವ ಬಗೆ ಹೇಗೆ ಎಂಬ ಶೋಕವೂ ಇದ್ದ ಹಾಗೆ ಈ ಮುಮುಕ್ಷುವಿಗೂ ಉಂಟು. ಹಾಗೆ ಶೋಕಭಯಗಳು ಎರಡೂ ಆಕೆಗೆ ಇತ್ತೆಂದು ಮಹರ್ಷಿಯು ಅನೇಕ ಕಡೆ ಹೇಳಿರುತ್ತಾರೆ. **ಭ್ರಾಂತಚಿತ್ತೇನಶೋಚತಿ, ಭರ್ತ್ಸ್ಯಮಾನಾಸುದಾರುಣಮ್'" ಉವಾಚಪರಮತ್ರಸ್ತಾಭಾಷ್ಪಗದ್ಗದಯಾಗಿರಾ,** ಇತ್ಯಾದಿ.

ಹಾಗಾದರೆ ಎಂದರೆ, ಶೋಕ ಭಯಗಳು ಪ್ರಪತ್ತಿಗೆ ಅಧಿಕಾರವೆಂದು ಹೇಳಿದುದಾದರೆ ಇವು ಉಪಾಯಾನ್ತರವಾದ ಉಪಾಸನಾಧಿಕಾರಿಗೆ ಇಲ್ಲವೋ ? ಎಂದರೆ ಉಪಾಯಾನ್ತರಕ್ಕೆ ಬೇಕಾದ ಕರ್ಮಯೋಗ ಭಕ್ತಿಯೋಗಾನುಷ್ಠಾನಮಾಡಲು ಶಕ್ತನಾದ ಅಧಿಕಾರಿಗೂ ಉಪಾಸನಕ್ಕೆ ವಿಘ್ನಗಳು ಸಂಭವಿಸಬಹುದೆಂಬ ಶೋಕವೂ, ತುಂಬಾ ಆಯಾಸ ಮೂಲಕ ಸಿದ್ಧಿಯಾಗುತ್ತೋ ಇಲ್ಲವೋ ಎಂಬ ಸಂದೇಹ ಮೂಲಕ ಭಯವೂ ಉಂಟಾಗಬಹುದು. ಆದರೆ ಅದಕ್ಕೆ ಶಕ್ತಿಯಿಲ್ಲದ ಅಕಿಂಚನನಾದ ಭರನ್ಯಾಸನಿಷ್ಠನಿಗೆ ಉಪಾಸನೆಗೆ ತನಗೆ ಶಕ್ತಿ ಇಲ್ಲದುದರಿಂದ ಶೋಕಭಯಗಳು ಭಕ್ತಿಯೋಗ ನಿಷ್ಠನಿಗಿಂತ ಹೆಚ್ಚಾಗಿರುತ್ತದೆಂದು ಮುಂದೆ ಅಪ್ಪಣೆ ಕೊಡಿಸುತ್ತಾರೆ.

**ಅತ್ಯಂತಾಕಿಂಚನನುಕ್ಕು** - ತುಂಬಾ ಆಕಿಂಚನ್ಯವಿರುವ ಪ್ರಪತ್ತಿನಿಷ್ಠನಿಗೆ **ಭಯಶೋಕಙ್ಗಳಿರುಣ್ಡುಮ್'** - ಭಯಶೋಕಗಳೆರಡೂ, **ಮಿಂಚಿರುಕ್ಕುಮ್** -

**ಅಧಿಕಾರಿ ವಿಶೇಷತ್ತುಕ್ಕು ಅನುಗುಣಮಾನ ಉಪಾಯವಿಶೇಷತ್ತೈ ಕ್ಕಾಟ್ಟಿ, ಇವನೈ ನಿಸ್ಸಂಶಯನುಮಾಯ್ ನಿರ್ಭರನುಮಾಯ್, ನಿರ್ಭಯನುಮಾಯ್, ಹೃಷ್ಟನುಮಾವು ಮಾಕ್ಕಿತಲೈಕಟ್ಟುಗಿರದು.**

---

ಉಪಾಸಕನಿಗಿಂತ ಹೆಚ್ಚಾಗಿರುತ್ತದೆ. ಆಕಿಂಚನ್ಯಕ್ಕೆ ಕಾರಣವೇನೆಂದರೆ ಉಪಾಯಾಂತರವಾದ ಉಪಾಸನೆಗೆ ಅಂಗಗಳಾದ ಕರ್ಮಯೋಗ ಜ್ಞಾನಯೋಗಗಳು ಕಷ್ಟವಾಗಿಯೂ ಭಕ್ತಿಯೋಗವೂ ಕಷ್ಟತರವಾಗಿಯೂ ಇರುವದರಿಂದ ಇರುವದದರಿಂದ, ಶ್ರೀಯಾಮುನ ಮುನಿಗಳು ಇದನ್ನು ವ್ಯಕ್ತಪಡಿಸುತ್ತಾರೆ—**ನಧರ್ಮ ನಿಷ್ಠೋಸ್ಮಿನ ಚಾತ್ಮವೇದೀನಭಕ್ತಿಮಾಂಸ್ತ್ವಚ್ಚರಣಾರವಿಂದೇ**; ಆ ಕಾರಣದಿಂದಲೇ **ಆಕಿಂಚನೋಽನನ್ಯಗತಿಶ್ಶರಣ್ಯತ್ವತ್ಪಾದಮೂಲಂ ಶರಣಂ** ಪ್ರಪದ್ಯೇ ಎಂದು ಹೇಳಿಕೊಂಡಿರುತ್ತಾರೆ. ಈ ಭರನ್ಯಾಸನಿಷ್ಠನು ಭಕ್ತಿಯೋಗನಿಷ್ಠನ ಹಾಗೆ ವಿಳಂಬವನ್ನು ಸಹಿಸದವನಾದುದರಿಂದ ಪಾಪಗಳು ಕಳೆಯುವ ಬಗೆ ಹೇಗೆ ಎಂದು ಈತನಿಗೆ ಶೋಕಭೀತಿಗಳು ಹೆಚ್ಚಾಗಿಯೇ ಇರುವುವೆಂಬ ಭಾವವು.

**ಆಗೈಯಾಲ್**–ಹೀಗೆಭೀತಿ ಶ್ಲೋಕಗಳು ಭರನ್ಯಾಸಾನಿಷ್ಠನಾಗಬೇಕೆಂದಿರುವ ಮುಮುಕ್ಷುವಿಗೆ ಹೆಚ್ಚಾಗಿರುವದರಿಂದ, ಇಜ್ಗು – ಈ ಸಂದರ್ಭದಲ್ಲಿ, **ಅತಿಶಯಿತ ಶೋಕಾವಿಷ್ಟನಾನ ಅಧಿಕಾರಿವಿಶೇಷತ್ತುಕ್ಕು**–ಹೆಚ್ಚಾದ ಶೋಕದಿಂದ ಕೂಡಿದ ಶರಣಾಗತಿಯನ್ನು ಅನುಷ್ಠಿಸುವ ವಿಶೇಷಾಧಿಕಾರಿಗೆ, **ಅನುಗುಣಮಾನ**– ಯೋಗ್ಯವಾದ, **ಉಪಾಯ ವಿಶೇಷತ್ತೈ** – ಆತ್ಮರಕ್ಷಾಭರಸಮರ್ಪಣ ರೂಪವಾದ ಭರನ್ಯಾಸವನ್ನು, **ಕಾಟ್ಟಿ** – ಸಿದ್ಧೋಪಾಯನಾಗಿ ತೋರಿಸಿಕೊಟ್ಟು, **ಇವನೈ** – ಈ ಪ್ರಪನ್ನನನ್ನು, **ನಿಸ್ಸಂಶಯನುಮಾಯ್** – ಸರ್ವಾಪರಾಧಗಳ ನಿವೃತ್ತಿಮೂಲಕ ಮೋಕ್ಷಪ್ರಾಪ್ತಿಯಲ್ಲಿ ಸಂದೇಹವಿಲ್ಲದವನೂ ಆಗಿ, **ನಿರ್ಭರನುಮಾಯ್** - ತನ್ನ ಆತ್ಮಾವಿನ ರಕ್ಷಣೆಯಲ್ಲಿ ಎನೊಂದೂ ಇನ್ನೇನು ಮಾಡಬೇಕಾದುದು ಇಲ್ಲದವನಾಗಿಯೂ, **ನಿರ್ಭಯನುಮಾಯ್** – ನರಕಾದಿಯೋಗಭಯ, ವೈಕುಂಠಪ್ರಾಪ್ತಿಯಿಲ್ಲದ ಭಯ, ಇವು ಯಾವುವು ಇಲ್ಲದವನಾಗಿ, ಆಕಾರಣದಿಂದ **ಹೃಷ್ಟನುಮಾವುಮಾಕ್ಕಿ** – ಸಂತೋಷಮನಸ್ಸುಳ್ಳವನನ್ನಾಗಿ ಮಾಡಿ, **ತಲೈಕಟ್ಟುಗಿರದು** – ಕೃತಜ್ಞತಾಯುಕ್ತನಾಗಿ ಈ **ಉಪಾಯ ವಿಶೇಷವು** ಮಾಡುತ್ತದೆ. ಹೀಗೆ ಈ ಮುಮುಕ್ಷುವಾಗಿರುವ ಅಧಿಕಾರಿಯ ಶೋಕವನ್ನು ಹೋಗಲಾಡಿಸುವದಕ್ಕಾಗಿ **ಮಾಶುಚಃ** – ಎಂದು ಹೇಳಿದರು.

ಇದರಿಂದ ನಿನಗೆ ಮೋಕ್ಷವಿಲ್ಲವೆಂಬ ಭಯವೂ ಬೇಡವೆಂದು ಹೇಳಿದಂತಾಯಿತು ಎಂಬ ಭಾವವನ್ನು ತಾವು ಅನುಗ್ರಹಿಸಿರುವ **ತಿರುಚ್ಚಿನ್ನಮಾಲೈ** – ಎಂಬ ಪ್ರಬಂಧದಲ್ಲಿ ವಿಶದೀಕರಿಸಿರುವದಾಗಿ ಮುಂದಿನ ವಾಕ್ಯದಿಂದ ಹೇಳುತ್ತಾರೆ—

**ಇನ್ನತಿಶಯಿತಭಯತ್ತೈಪ್ಪತ್ತ "ಅಞ್ಜಿನ ನೀಯೆನ್ನೈಯಡೈ ಎನ್ರಾರ್ ವನ್ದಾರ್," ಎನ್ರು ಶೊನ್ನೋಮ್.**

---

**ಇನ್ನತಿಶಯಿತಭಯತ್ತೈಪ್ಪತ್ತ** - ಮುಮುಕ್ಷುವಿಗೆ ಶೋಕದೊಂದಿಗೆ ಭಯವೂ ಉಂಟೆಂಬ ಭಾವವನ್ನು ಕುರಿತು **"ಅಞ್ಜಿನನೀಯೆನ್ನೈಯಡೈ ಎನ್ರಾರ್ ವನ್ದಾರ್"** "ಭಯಪಟ್ಟ ನೀನು ನನ್ನ ಶರಣಹೊಂದು ಎಂದು ಹೇಳಿದವರು ಲೀಲಾಸಾರಥಿಯಾದ ಶ್ರೀ ಕೃಷ್ಣ ಭಗವಾನರು ಬಂದರು" **ಎನ್ರು** ಎಂಬದಾಗಿ, **ಶೊನ್ನೋಮ್** - ಹೇಳಿದೆವು.

ಆ ಪಾಶುರವು ಯಾವುದೆಂದರೆ—

**ತರುರ್ಮವಿಡಿತ್ತಾರ್ತೂದು ಪೋನಾರ್ ವನ್ದಾರ್. ತರಣಿಪೋರಾತ್ತಿಣ್ಬಾರಮ್ ತವಿರ್ತ್ತಾರ್ ವಂದಾರ್। ಅರುಮರೈಯಿನ್ ಪೊರುಳನೈತ್ತುಮ್ ವಿರಿತ್ತಾರ್ ವನ್ದಾರ್. ಅಞ್ಜಿನನೀಯೆನ್ನೈಯಡೈಯೆನ್ರಾರ್ ವನ್ದಾರ್।**

**ಅರ್ಥವು - ತರುರ್ಮವಿಡಿತ್ತಾರ್ ತೂತುಪೋನಾರ್ ವನ್ದಾರ್** - ಧರ್ಮಪುತ್ರನು ಯುದ್ಧಮಾಡಲು ಇಷ್ಟವಿಲ್ಲದೆ ಸಂಧಿಗಾಗಿ ಕಳುಹಿಸಿ ಕೊಡಬೇಕೆಂದರೆ ತಾವೇ ದೂತನಾಗಿ ಬಂದ ಶ್ರೀ ಕೃಷ್ಣಭಗವಾನರವರು ಬಂದಿರುತ್ತಾರೆ. ಶ್ರೀಕೃಷ್ಣನಿಗೆ ಸಂಧಿಯು ಇಷ್ಟವಿಲ್ಲವು. ದುರ್ಯೋಧನಾದಿಗಳು ನಾಶವಾಗಬೇಕೆಂಬುದು ಸ್ವಾಮಿಯ ಆಶಯವು. **ಗೋವಿಂದೇತಿ ಯದಾಕ್ರಂದತ್ಕೃಷ್ಣಾ ಮಾಂ ದೂರವಾಸಿನಂ। ಋಣಂ ಪ್ರವೃದ್ಧಮಿವ ಹೃದಯಾನ್ನಾಪಸರ್ಪತಿ** ಎಂಬಲ್ಲೂ ಮತ್ತು ಅರ್ಜುನನಿಗೆ ತೋರಿದ ವಿಶ್ವರೂಪ ದರ್ಶನದಲ್ಲಿ ಈ ದುಷ್ಟ ಕೌರವರೆಲ್ಲಾ ವಿಶ್ವರೂಪಿಯ ಹಲ್ಲಿನಲ್ಲಿ ಸಿಕ್ಕಿ ನಾಶವಾಗುವ ಹಾಗೆ ತೋರಿಸಿರುವದರಿಂದಲೂ ವ್ಯಕ್ತವು. ಅದಕ್ಕಾಗಿಯೇ ತಾವೇ ಸ್ವತಃ ದೂತನಾಗಿ ಹೋದುದು. **ಧರಣಿ ಪೋರಾ** - ಭೂದೇವಿಯ ಧರಿಸಲು ಅಸಾಧ್ಯವಾದ, **ತಿಣ್ ಭಾರಂ** - ಅತಿಶಯಿತ ಭಾರವನ್ನು **ತವಿರ್ತ್ತಾರ್ ವಂದರ್** - ಇಳಿಸಿದ ಮಹನೀಯರು ಬಂದಿರುತ್ತಾರೆ. ದುಷ್ಕೃತಿಗಳಾದ ರಾಕ್ಷಸರು ಹೆಚ್ಚಾಗಿ ಭೂಮಿಯಲ್ಲಿರುವದು ಭೂಮಿಗೆ ಭಾರವು. ಅವರುಗಳ ಹೆಸರನ್ನೆಲ್ಲಾ ಗೀತಾಭಾಷ್ಯಾವತಾರಿಕೆಯಲ್ಲಿ ಶ್ರೀಯತಿವರ್ಯರು ಹೇಳಿರುತ್ತಾರೆ. ಅವರನ್ನೆಲ್ಲಾ ಕೊಂದು ಭೂಭಾರವನ್ನು ಇಳಿಸಿರುತ್ತಾರೆ. ಭೂಭಾರವು ದುಷ್ಟರಿರುವುದರಿಂದ. ಅವತಾರದ ದ್ವಿತೀಯೋದ್ದೇಶವು ಅಂತಹ ದುಷ್ಟರ ವಿನಾಶಕ್ಕಾಗಿಯೇ. **ಅರುಮರೈಯಿನ್**-ಸೂಕ್ಷ್ಮಾರ್ಥಗಳುಳ್ಳ ವೇದಗಳ, **ಪೊರುಳನೈತ್ತುಂ**-ಅರ್ಥಗಳೆಲ್ಲವನ್ನೂ, **ವಿವರಿತ್ತಾರ್ ವನ್ದಾರ್** - ಯಥಾರ್ಥವಾಗಿ ವಿಸ್ತರಿಸಿ ಹೇಳಿದ ಶ್ರೀಕೃಷ್ಣಭಗವಾನರು ಬಂದರು. ವೇದಗಳಿಗೂ ವೇದಾಂತಗಳಿಗೂ ಸರಿಯಾದ

ಅರ್ಥ ಹೇಳುವದು ಕಷ್ಟವು. ಆದುದರಿಂದ ಶ್ರೀನಿಗಮಾಂತರೇ ಸಙ್ಕಲ್ಪ ಸೂರ್ಯೋದಲ್ಲಿ **ತ್ರಯ್ಯಾಪಿ ವೈಯ್ಯಾಕುಲೀ** ಎಂದು ಮನಸ್ಸಿಗೆ ಸರಿಯಾದ ಅರ್ಥಗೊತ್ತಾಗದೇ ವ್ಯಾಕುಲವನ್ನುಂಟುಮಾಡುತ್ತದೆಂದು ಪ್ರಯೋಗಿಸಿರುತ್ತಾರೆ. ಆದುದರಿಂದ ತಾವೇ, ಶ್ರೀ ಭಗವದ್ಗೀತಾರೂಪದಲ್ಲಿ ಅರ್ಜುನನಿಗೆ ಹೇಳಿ, ಆ ಅರ್ಥಗಳನ್ನೇ ಶರತಲ್ಪದಲ್ಲಿ ಶ್ರೀ ಭೀಷ್ಮರು ಧರ್ಮಪುತ್ರರಿಗೆ ಉಪಪಾದಿಸಿ ಮೋಕ್ಷಧರ್ಮವಾಗಿ ಹೇಳುವ ಹಾಗೆ ಮಾಡಿ, ಆ ಅರ್ಥಗಳನ್ನೇ ಧೃಢಪಡಿಸಿ ಅನಂತರ ಉದ್ಧವರಿಗೆ ಅದನ್ನೇ ಉಪಪಾದಿಸಿ, ಹೀಗೆ ಅವತಾರದ ಪ್ರಯೋಜನವಾದ ಮೂರನೆಯ ಧರ್ಮ ಸಂಸ್ಥಾಪನೆಯನ್ನು ಮಾಡಿರುತ್ತಾರೆ—ವೇದ ವೇದಾಂತಗಳೆಲ್ಲಾ ಸ್ವಾಮಿಯ ವಾಕ್ಯೇ. ಅವುಗಳನ್ನು ತಾವೇ ಉಪದೇಶಿಸಿದರೆ ಸರಿ ಹೋಗುತ್ತದೆಂದು ಶ್ರೀ ಭಗವದ್ಗೀತೆಯನ್ನು ಉಪದೇಶಿಸಿದರು. ಅದನ್ನೂ ಕೂಡ ನಾನಾ ವಿಧವಾಗಿ ಮನಸ್ಸಿಗೆ ಬಂದ ಹಾಗೆ ಅರ್ಥಮಾಡಿರುತ್ತಾರೆ. **ಅಂಜಿನ ನೀಯೆನ್ನ್ಯುಯಡ್ಯೆ ಯೆನ್ರಾರ್ ವಂದಾರ್** - ಪಾಪಗಳೆಲ್ಲಾ ಹೋಗುವ ಬಗೆ ಹೇಗೆ ಎಂದು ಭಯಪಟ್ಟ, **ನೀ** - ಅರ್ಜುನನಾದ ನೀನು ಹೀಗೆ ಯಾವ ಕಾರಣದಿಂದಾಗಲಿ ಭಯಪಟ್ಟವರು ಯಾರೇ ಆಗಲಿ, ಅಂತವರೆಲ್ಲಾ ಎಂಬುದೂ ಉಪಲಕ್ಷಣವಾಗಿ ತೋರುತ್ತದೆ; **ಅಡ್ಯೆ ಎನ್ರಾರ್** - **ಮಾಮೇಕಂ ಶರಣಂವ್ರಜ** ಎಂದು ಹೇಳಿ, ಶೋಕನಿವೃತ್ತಿಯನ್ನುಂಟು ಮಾಡಿದ ಪಾರ್ಥಸಾರಥಿಯು ಬಂದರು. ಇಲ್ಲಿ ಭೀತಿ ಏತಕ್ಕೆಂದರೆ ತಮಗೆ ಭಕ್ತಿಯೋಗನಿಷ್ಠೆಯು ಕಷ್ಟವಾಗಿ, ಅದನ್ನು ಅನುಷ್ಠಿಸದೆ ಪಾಪಗಳೆಲ್ಲಾ ನಷ್ಟವಾಗಲಾರದು ; ಆ ಕಾರಣದಿಂದ ಪಾಪಫಲಗಳಾದ ನರಕಾದಿಗಳ ಅನುಭವವು ಎಲ್ಲಿ ಉಂಟಾಗುತ್ತದೋ ಎಂಬ ಭೀತಿಯು. **ತರುಮಮೆಲ್ಲಾಂ ತಾನಾಕಿ ನಿನ್ರಾರ್ ವಂದಾರ್** - ಧರ್ಮವೇ ಮೂರ್ತಿಭವಿಸಿ ನಿಂತ ಎಂದರೆ ಸಿದ್ಧೋಪಾಯವು, "**ಕೃಷ್ಣಂ ಧರ್ಮಂಸನಾತನಮ್** ಎಂಬಲ್ಲಿ ಹೇಳಿರುವ ಹಾಗೆ ನಿಂತಿರುವ ಶ್ರೀಕೃಷ್ಣ ಭಗವಾನ್, **ವಂದಾರ್** - ಬಂದಿರುತ್ತಾರೆ. **ತಾಮೇ ನಮ್ ವಿನ್ಯೆ ಅನ್ಯೆತ್ತುಮ್ ತವಿರ್ ಪಾರ್ ವನ್ಮಾರ್** - ಹಾಗೆ ಸರ್ವಶ್ರೇಯಸ್ಸಾಧನವು ತಮ್ಮ ಪಾದದಲ್ಲಿ ಮಾಡುವ ಭರನ್ಯಾಸವೆಂದು ಹೇಳಿ ಸಿದ್ಧೋಪಾಯುವಾದರೋ, ಅಂತಹ ಧರ್ಮವನ್ನು ಅನುಷ್ಠಿಸಿದ ಪ್ರಪನ್ನನಿಗೆ ತಾವೇ ಸ್ವತಃ ನಿಂತು, ಇನ್ನೇನೂ ಸಾಧನಬೇಕಾಗಿಲ್ಲದೆ ಆ ಭರನ್ಯಾಸ ನಿಷ್ಠನ ಪಾಪಗಳನ್ನೆಲ್ಲಾ ನಿಶ್ಶೇಷವಾಗಿ ಹೋಗಲಾಡಿಸಿದ ಮಹಾನುಭಾವರು ಬಂದಿರುತ್ತಾರೆ. **ಪರಮೆನದು** - ಶರಣಾಗತನ ಆತ್ಮ ರಕ್ಷಾಭರವೆಲ್ಲಾ ತನಗೆ ಸೇರಿದುದು, **ಪರಂ** ಎಂದರೆ **ಭರವು, ನೀಪುಲಮ್ಪಲ್ ಎನ್ರಾರ್ ವಂದಾರ್** - ಇನ್ನು ಮುಂದೆ **ಮಾಶುಚಃ** ನೀನು ಶೋಕಿಸ ಕೆಲಸವಿಲ್ಲವೆಂದು ಅಭಯವನ್ನಿತ್ತವರು ಬಂದಿರುತ್ತಾರೆ. **ಪಾರ್ತನುಕ್ಕು** - ಅರ್ಜುನನಿಗೆ, **ತೇರೂ**

**ಇಷ್ಪಡಿ ಕೃತಕೃತ್ಯನಾನ ಇವನುಕ್ಕು "ಕರ್ತ್ಯತತ್ತುಸಮಾಚರೇತ್" ಎನ್ರು**

---

**ರ್‌ವನ್ದಾರ್'** - ರಥ ನಡೆಸುವ ಸಾರಥಿಯಾದವರು, **ವನ್ದಾರ್'ತಾಮೇ** - ತಾವೇ ಸ್ವತಃ ಬಂದಿರುತ್ತಾರೆ ಅಥವಾ **ತಾಮೇ** ಎಂಬುದನ್ನು **ತೇರೂರ್'ನ್ದಾರ್'** ಎಂಬು ತಾಮೇ ಸಾರಥಿಯಾಗಿ ಬಂದಿರುತ್ತಾರೆ. ಅರ್ಜುನನು ಕೇಳಿಕೊಂಡಿದ್ದು ನೀವೇನೂ ಯುದ್ಧವನ್ನು ಮಾಡಕೆಲಸವಿಲ್ಲ, ನಿಮ್ಮ ಸೈನ್ಯವೂ ಬೇಡವು. ನೀವು ಸುಮ್ಮನೆ ಬಂದರೆ ಸಾಕು ಎಂದಿಷ್ಟು ಮಾತ್ರ ಹೇಳಿದನೇ ವಿನಾ ಸಾರಥಿಯಾಗಿರಬೇಕೆಂದು ಪ್ರಾರ್ಥಿಸಲಿಲ್ಲವು. ಅರ್ಜುನನು ತನ್ನನ್ನು ನಂಬಿದ ಶರಣಾಗತನಾದುದರಿಂದ ತನ್ನ ರಕ್ಷಣಾರ್ಥವಾಗಿ ತಾವೇ ಸ್ವತಃ ಲೀಲಾಸಾರಥಿಯಾದರೆಂಬ ಭಾವವು. ರಕ್ಷಣವು ಹೇಗೆ ? ಎಂದರೆ ಸರ್ವಪಾಪವಿಮೋಚನ ರೂಪದಲ್ಲಿ ರಕ್ಷಣವು. ಅರ್ಜುನ ಸಾರಥಿಯಾಗಿರುವ ಮುಖ್ಯೋಪದೇಶವೇನೆಂದರೆ ಅರ್ಜುನನಿಗೆ ಸಾರಥಿಯಾಗಿ ಹೇಗೆ ತಾವು ರಕ್ಷಕರೋ ಹಾಗೆಯೇ ಪ್ರಣವದ ಪ್ರಥಮಾಕ್ಷರವಾದ ಅಕಾರ ವಾಚ್ಯನಾದ ವಿಷ್ಣುವು ಮುಂದಾಳಾಗಿ ರಕ್ಷಕನಾಗಿ ತಾನು ಸ್ವತಃ ಇರುವದಾಗಿ ತೋರಿಸಿಕೊಂಡಿರುತ್ತಾರೆ. ಹಾಗೆಯೇ ರಾಮಾವತಾರದಲ್ಲೂ "**ಅಗ್ರತಃ ಪ್ರಯಯೌ ರಾಮಃ** ಎಂಬಲ್ಲೂ ತೋರಿಬರುತ್ತದೆ. '

ಹೀಗೆ ಈತನು **ಮಾಶುಚಃ** ಎಂದು ಸ್ವಾಮಿಯು ಹೇಳಿದನಂತರ ಪ್ರಸನ್ನನಾದ ಮೇಲೆ ಕೃತಕೃತ್ಯನೆಂದು ಹೇಳಿದನಂತರ ಇನ್ನೇನಾದರೂ ಮಾಡತಕ್ಕದ್ದುಂಟೋ ? ಎಂದರೆ ಪಾಪವಿನಾಶ, ಮೋಕ್ಷಪ್ರಾಪ್ತಿಗಳಿಗಾಗಿ ಏನೂ ಮಾಡತಕ್ಕದ್ದಿಲ್ಲದಿದ್ದರೂ ಆವಶ್ಯಕವಾಗಿ ಈತನು ಮಾಡತಕ್ಕ ಆಜ್ಞಾ ಕೈಂಕರ್ಯಗಳಾದ ನಿತ್ಯ ನೈಮಿತ್ತಿಕಗಳನ್ನು ಮಾಡಿಯೇ ತೀರಬೇಕೆಂಬುದನ್ನು ಹಿಂದೆಯೂ ಮುಂದೆಯೂ ತಮ್ಮ ಗ್ರಂಥಗಳಲ್ಲಿ ಉಪಪಾದಿಸಿರುವದಾಗಿ, ಹೀಗೆ ನಡೆಸಿಕೊಂಡು ಬಂದರೆ, ಈತನು **ಹೃಷ್ಟಮನಸ್ಕನೆಂದು** ಹೇಳಲು ಏನೊಂದೂ ಕೊರತೆ ಇಲ್ಲವೆಂದು ತಿಳಿಸುತ್ತಾರೆ.—

**ಇಪ್ಪಡಿ** - ಈ ಮೇಲೆ ವಿವರಿಸಿದ ರೀತಿಯಲ್ಲಿ ಮೋಕ್ಷಾರ್ಥಿಯು ಶರಣಾಗತಿಯನ್ನು ಅನುಷ್ಠಿಸಿದನಂತರ ನಿರ್ಭರನಾಗಿಯೂ ನಿರ್ಭಯನಾಗಿ ಆಗುವದರ ಮೂಲಕ **ಕೃತಕೃತ್ಯನಾನ ಇವನುಕ್ಕು** - ಮೋಕ್ಷಪ್ರಾಪ್ತಿಗೆ ಏನು ಮಾಡಬೇಕೋ ಅದನ್ನು ಮಾಡಿದವನಿಗೆ "**ಕರ್ತ್ಯತತ್ತುಸಮಾಚರೇತ್**" ಆ ಆಜ್ಞಾ ಕೈಂಕರ್ಯಗಳನ್ನಾದರೇ ಚನ್ನಾಗಿಯೇ ಅನುಷ್ಠಿಸತಕ್ಕದ್ದು", **ಎನ್ರು** - ಎಂಬದಾಗಿ ಇಲ್ಲಿ **ತು** - ಶಬ್ದವು ಏನೂ ಮಾಡತಕ್ಕದ್ದಿಲ್ಲವೆಂಬ ಪಕ್ಷವನ್ನು ವ್ಯಾವರ್ತಿಸಿ ಹೇಳುತ್ತದೆ. **ವಿಹಿತಮಾನ** - ಬೇರೇ ಪ್ರಮಾಣದಿಂದ ವಿಧಿಸಲ್ಪಟ್ಟ, **ಕರ್ತವ್ಯಾನ್ತರಮ್'** - ಮಾಡಿಯೇ ತೀರಬೇಕಾದ ಬೇರೆ ಕರ್ಮವನ್ನು, **ಕೈಂಕರ್ಯಾನುಪ್ರ**

**ವಿಹಿತವಾನ ಕರ್ತ್ತವ್ಯಾಂತರಮು' ಕೈಂಕರ್ಯಾನು ಪ್ರವಿಷ್ಟ ಸದಾಚಾರ ವಿಶೇಷ [ವಿಷಯ]ಮೆನ್ರು ಮಿಡಮ್ ಪೂರ್ವಾಪರ ಗ್ರಂಥಙ್ಗಳಾಲುಮು' ಇಶ್ಲೋಕಮು'**

**ವಿಷ್ಟ** - ಆಜ್ಞಾ ಕೈಂಕರ್ಯವಾಗಿ ಏರ್ಪಟ್ಟ, **ಸದಾಚಾರವಿಷಯಮೆನ್ರು** - ಸತ್ಸಂಪ್ರದಾಯ ವಿಷಯವು, **ಎನ್ರುಮಿಡಮು'** - ಎಂಬುವ ಸಂದರ್ಭವನ್ನು **ಪೂರ್ವಾಪರ ಗ್ರಂಥಙ್ಗಳಾಲುಮು'** - ಹಿಂದೆಯೂ ಮತ್ತು ಮುಂದೆಯೂ ಹೇಳುವ ಗ್ರಂಥಗಳಿಂದ, **ಇಶ್ಲೋಕತನ್ನಿಲ'**-ಈ **"ಕರ್ಮತತ್ತು ಸಮಾಚರೇತ್"** ಎಂಬೀ ಶ್ಲೋಕದಲ್ಲೇ **"ಅಕ್ರಿಯಾವದನರ್ಥಾಯ"** - ಮಾಡದೇ ಹೋದರೆ ಪ್ರತ್ಯವಾಯವುಂಟು **ಎನ್ಗೈಯಾಲುಮ್** - ಎಂದು ಹೇಳಿರುವದರಿಂದಲೂ, **ಸಿದ್ಧಮು'** - ಸಿದ್ಧವು.

ಉಪಾಯಕ್ಕಾಗಿ ಇನ್ನೇನೂ ಮಾಡತಕ್ಕದಿಲ್ಲವೆಂದು, ಉಪಾಯಾನುಷ್ಠಾತೃವು,ಕೃತಕೃತ್ಯನೆಂದು ಹೇಳಲ್ಪಟ್ಟಿತು. ಕಾಮ್ಯಕರ್ಮಙ್ಗಳೂ ನೀನು ಮಾಡತಕ್ಕದ್ದಲ್ಲವೆಂದೂ ನಿಷೇಧಿಸಲ್ಪಟ್ಟಿತು. ಒಂದು ಮಾತ್ರ ಮಾಡಿಯೇ ತೀರಬೇಕು. ಹಾಗೆಯೇ ಪ್ರಮಾಣಗಳು ಇವೆ ಹೇಗೆಂದರೆ **"ಮನೀಷೀವೈದಿಕಾಚಾರಂ ಮನಸಾಪಿ ನಲಂಘಯೇತ'"** ಎಂಬಲ್ಲಿ **ಈ ವೈದಿಕಾಚಾರವು** ಸ್ವಾಮಿಗೆ ಆಜ್ಞಾಕೈಂಕರ್ಯಗಳಾದುದರಿಂದ ಮಾಡಲೇಬೇಕೆಂದು ಬೇರೆ ಪ್ರಮಾಣಮೂಲಕ ಉಪದೇಶಿಸಿರುತ್ತಾರೆ. ಆ ಪ್ರಮಾಣವಾದ ಪೂರಾಶ್ಲೋಕವು ಯಾವುದೆಂದರೆ-**"ಕ್ರಿಯಮಾಣಂ ನಕಸ್ಮೈಚಿದ್ಯದರ್ಥಾಯ ಪ್ರಕಲ್ಪತೇ । ಅಕ್ರಿಯಾವದನರ್ಥಾಯ ತತ್ತು ಕರ್ಮಸಮಾಚರೇತ'"** ಮೋಕ್ಷಪ್ರಾಪ್ತಿಗಾಗಿ ಈ ಪ್ರಪನ್ನನು ಮಾಡತಕ್ಕದ್ದೇನು ಇಲ್ಲವಾದರೂ, ನಿತ್ಯನೈಮಿತ್ತಿಕಗಳು ಭಗವದಾಜ್ಞಾಪಾಲನರೂಪವಾಗಿ, ಭಗವತ್ಕೈಂಕರ್ಯವಾಗಿ, ಸತ್ಸಂಪ್ರದಾಯರೂಪವಾದುದಾಗಿರುವದರಿಂದ ಯಾವುದನ್ನು ಮಾಡದಿದ್ದರೆ ಪ್ರತ್ಯವಾಯಉಂಟೋ ಅದನ್ನು ಮಾತ್ರ ಮಾಡಿಯೇ ತೀರಬೇಕೆಂದು ಅಭಿಪ್ರಾಯವು. ಅದು ಯಾವುದೆಂದರೆ ಆಜ್ಞಾರೂಪಕೈಂಕರ್ಯಗಳಾದ ನಿತ್ಯನೈಮಿತ್ತಿಕಗಳು.

ಹೀಗೆ ಆಜ್ಞಾಕೈಂಕರ್ಯಗಳನ್ನು ಸರಿಯಾಗಿ ಅನುಷ್ಠಿಸಬೇಕಾಗಿರುವಾಗ ಮತ್ತು ಪ್ರಾರಬ್ಧಕರ್ಮರೀತ್ಯಾ ನಡೆಯಬೇಕಾದ ಕರ್ಮಗಳೂ ಅಪರಾಧಗಳೂ ಸಹ ಇರುವ ಸಂದರ್ಭದಲ್ಲಿ ಈತನು ಹೃಷ್ಟಮನಸ್ಕನು ಹೇಗಾಗುವನು ? **ಮಾಶುಚಃ** ಎಂದು ಸ್ವಾಮಿಯು ಹೇಳಿದರಲ್ಲವೇ ? ಅದು ಹೇಗೆ ಕೂಡುತ್ತದೆ ? ಎಂದರೆ ಉಪಪಾದಿಸುತ್ತಾರೆ ಮುಂದಿನ **ಅಗ್ಗೈಯಾಲ'** ಎಂದಾರಂಭಿಸಿದವಾಕ್ಯದ ಮೂಲಕ.—

**ಪ್ರಪನ್ನನಿಗೆ ಹೃಷ್ಟಮನಸ್ಕತ್ವವು ಹೇಗೆ ? ಎಂಬ ಶಂಕಾವಿನ ಪರಿಹಾರವು.**

---

**ಅಗ್ಗೈಯಾಲ'** - ಫಲದಲ್ಲಿ ನಿಸ್ಸಂಶಯನಾಗಿ, ನಿರ್ಭರನಾಗಿ, ನಿರ್ಭಯನಾಗಿ

**ತನ್ನಿಲ್ "ಅಕ್ರಿಯಾದನರ್ಥಾಯ" ಎಙ್ಗಿರ್ಱಯಾಲುಮ್ ಸಿದ್ಧಮ್.**
**ಪ್ರಪನ್ನಸ್ಯಹೃಷ್ಟಮನಸ್ತ್ವಮ್ ಕಥಮಿತಿಶಂಕಾಪರಿಹಾರಃ**

---

**ಆಗೈಯಾಲ್ ಮೇಲ್‌ಫಲಸಿದ್ಧಿಯಿಲ್ ಸಂಶಯಮಿಲ್ಲಾತವೈಯಾಲುಮ್ ಮೋಕ್ಷೋಪಾಯಮಾಗಒರುಕರ್ತವ್ಯಶೇಷಮಿಲ್ಲಾಮೈಯಾಲುಮ್‌, ಇವನುಕ್ಕುಳ್ಳಕರ್ತವ್ಯಮ್ ಆಜ್ಞಾನುಪಾಲನರೂಪಮಾನಸ್ವಯಂಪ್ರಯೋಜನಮಾಗೈಯಾಲುಮ್‌, ಅಪರಾಧಮ್‌ ಪ್ರಸಕ್ತಮಾನಾಲ್‌ ಅಧಿಕಾರಾನ್ತರತ್ತಿಲ್‌ಚೊನ್ನಕಟ್ಟಳೈಯಿಲೇ "ಅನುತಾಪಾದಿ"ಗಳಾಲೇ ಸುಪರಿಹರಮಾಗೈಯಾಲುಮ್‌ ಇವರ್ ಹೃಷ್ಟಮನಾವಾಕ ಕ್ಕುಕ್ಕುರೈಯಿಲ್ಲೈ.**

---

ರುವದರಿಂದ, ಇದರರ್ಥವನ್ನು ತಾವೇ ಉಪಪಾದಿಸುತ್ತಾರೆ—ಏಕೆಂದರೆ ಮೋಕ್ಷಪ್ರಾಪ್ತಿಗಾಗಿ ಏನನ್ನು ಮಾಡತಕ್ಕದ್ದೋ ಅದನ್ನು ಯಾವಾಗ ಮಾಡಿ ಆಯಿತೋ ಆಗ ಈ ಪ್ರಪನ್ನನಿಗೆ ಇನ್ನು ಯಾವ ಪ್ರಯೋಜನವೂ ಇಲ್ಲವಾದುದರಿಂದ ; ಆದರೂ (೧) **ಮೇಲ್ ಫಲಸಿದ್ಧಿಯಿಲ್‌ಸಂಶಯಮಿಲ್ಲದವೈಯಾಲುಮ್‌**-ಮುಂದೆ ಫಲಸಿದ್ಧಿಯಾದಮೋಕ್ಷಪ್ರಾಪ್ತಿಯಲ್ಲಿ ಸಂಶಯವಿಲ್ಲದುದರಿಂದಲೂ, (೨) **ಮೋಕ್ಷೋಪಾಯಮಾನ ಒರುಕರ್ತವ್ಯವಿಶೇಷಮಿಲ್ಲಾಮೈಯಾಲುಮ್‌**-ಮೋಕ್ಷವನ್ನು ಹೊಂದುವವಕ್ಕೆ ಇನ್ನು ಸಾಧನಾಂತರವು ಯಾವುದು ಇಲ್ಲದ ಕೃತಕೃತ್ಯನಾದುದರಿಂದಲೂ, **ಇವನುಕ್ಕು**....—ಇವನಿಗಿರುವ ಕರ್ತವ್ಯವು ಆತನಿಂದ ವಿಧಿಸಲ್ಪಟ್ಟ ಕೈಂಕರ್ಯವನ್ನು ಸ್ವಯಂಪ್ರಯೋಜನವಾಗಿ ಅನುಷ್ಠಿಸಬೇಕಾಗಿರುವದರಿಂದಲೂ (೩) **ಅಪರಾಧಮ್‌ಪ್ರಸಕ್ತಮಾನಾಲ್‌**-ಬುದ್ಧಿಪೂರ್ವೋತ್ತರಾಘವು ಏನಾದರೂ ಉಂಟಾದರೆ, **ಅಧಿಕಾರಾನ್ತರತ್ತಿಲ್‌ ಚೊನ್ನಕಟ್ಟಳೈಯಿಲೇ**-ಅಪರಾಧ ಪರಿಹಾರರೂಪವಾದ ಬೇರೆ ಅಧಿಕಾರ ಕ್ರಮದಲ್ಲಿಹೇಳಿರುವಹಾಗೆ, **"ಅನುತಾಪಾದಿಗಳಾಲೇ" - ಅನುತಾಪಾದುಪರಮಾತ್** ಎಂಬ ಶ್ಲೋಕದಲ್ಲಿ ಹೇಳಿರುವ ಕ್ರಮಗಳಿಂದ (೧೫೯ನೆಯ ಪುಟನೋಡಿ ಪಾಪಮಾಡಿದನೇ ಎಂಬ ಅನುತಾಪ, ಮುಂದೆ ಇಂತಹ ದುಷ್ಕೃತ್ಯಮಾಡುವದಿಲ್ಲವೆಂಬ ಉಪರಮ, ಪ್ರಾಯಶ್ಚಿತ್ತಮಾಡಿಕೊಳ್ಳುವ ಸಙ್ಕಲ್ಪ, ಮತ್ತು ಅದನ್ನು ಮಾಡಿಕೊಳ್ಳೋಣ, ಹೀಗೆ ಕಾಲುಕಾಲು ಭಾಗಗಳು ಅಪರಾಧಗಳು ಕಳೆದುಹೋಗುತ್ತದೆ) ಹೀಗೆ **ಸುಪರಿಹರಮಾಗೈಯಾಲುಮ್‌** - ಹೀಗೆ ಅಪರಾಧಗಳು ಸಂಪೂರ್ಣ ಪರಿಹಾರವಾಗುವದರಿಂದ, **ಇವರ್** - ಈ ಭರನ್ಯಾಸನಿಷ್ಠರು **ಹೃಷ್ಟಮನಾವಾಕಕ್ಕುಕ್ಕುರೈಯಿಲ್ಲೈ** - ಹೃಷ್ಟಮನಸ್ಕನೆಂಬುದರಲ್ಲಿ ಏನೊಂದೂ ಕೊರತೆಯಿಲ್ಲವು.

ಹೃಷ್ಟಮನಸ್ಕನೆಂಬುದಕ್ಕೆ ನಾಲ್ಕು ಕಾರಣಗಳನ್ನು ಹೇಳಿದರು:—

**ಇನ್ದ ಹರ್ಷಮ್‌ ವಿವೇಕಿಯುಮಾಯ್‌ ಹೇಯಮಾನ ಶರೀರಾದಿ ಗಳೋಡೇತುವಕ್ಕ್‌ ಣ್ಡಿರುಕ್ಕಿರ ಇವನುಕ್ಕು ನಿರ್ವೇದ ಮಿಶ್ರಮಾಯ್‌ ನಡ ತ್ತಿಲೇ ಯಾಗಿಲುಮ್‌, ನಿರ್ವೇದಮುಮ್‌ ಶೋಕನಿವೃತ್ತಿಯುಮ್‌ ಭಿನ್ನ ವಿಷಯಙ್ಗಳಾಗೈಯಾಲೇ ವಿರೋಧಮಿಲ್ಲೈ.**

---

೧. ಫಲಸಿದ್ಧಿಯಲ್ಲಿ ನಿಸ್ಸಂಶಯತ್ವವು, **ರಾಮೋದ್ವಿರ್ನಾಭಿಭಾಷತೇ** ಎಂದೂ ಶ್ರೀ ರಾಮಚಂದ್ರಪ್ರಭುವು ಎರಡು ಮಾತನ್ನು ಆಡುವರಲ್ಲವೆಂದೂ, **"ನಮೇ ಮೋಘಂ ವಚೋಭವೇತ್"** ಶ್ರೀ ಕೃಷ್ಣನಾದ ನನ್ನ ಭಾಷೆಯು ವ್ಯರ್ಥವಾಗುವ ದಿಲ್ಲ, ಇತ್ಯಾದಿ ನಂಬಿಕೆಯನ್ನುಂಟುಮಾಡುವ ವಾಕ್ಯಗಳಿಂದ ಗ್ರಾಹ್ಯವು.

೨. ಪ್ರಪದನನನ್ನು ಅನುಷ್ಠಿಸಿದನಂತರ ಬೇರೆ ಸಾಧನಾಂತರ ಬೇಕಿಲ್ಲವು. **"ನ ಜಾತಿ ಭೇದಂ ನ ಕುಲಂ ನಲಿಙ್ಗಂ ನಗುಣಾಃಕ್ರಿಯಾಃ । ನದೇಶಕಾ ಲೌ ನಾವಸ್ಥಾಂ ಯೋಗೋಹ್ಯಯಮಪೇಕ್ಷತೇ"** ಎಂಬಲ್ಲಿ ಹೇಳಿರುವಹಾಗೆ ಅದಕ್ಕೆಇನ್ನು ಯಾವುದೂ ಸಹಾಯಕರಸಾಧನಗಳು ಬೇಕಿಲ್ಲವು.

೩. ೪. ಆದರೆ ಆಜ್ಞಾಕೈಂಕರ್ಯಗಳನ್ನು ಮಾತ್ರ ಸ್ವಯಂಪ್ರಯೋಜನವಾಗಿ ಆಚರಿಸಬೇಕು. ಬುದ್ಧಿಪೂರ್ವಕೋತ್ತರಾಘದಿಂದ ತೊಂದರೆಯುಂಟಾದೀತು, ಅದಕ್ಕೆ ಪ್ರಾಯಶ್ಚಿತ್ತ ಪ್ರಪತ್ತಿಯು ವಿಧಿಸಲ್ಪಟ್ಟಿರುತ್ತದೆ. **"ಅನುತಾಪಾತ'"** ಎಂಬ ಶ್ಲೋಕದ ಪ್ರಕಾರ ಕಾಲು ಕಾಲುಭಾಗವಾಗಿ ಪರಿಹಾರವಾಗುತ್ತದೆ. ಆದುದರಿಂದ ಈ ಪ್ರಪನ್ನನಿಗೆ ಹೃಷ್ಟಮನಸ್ಕತೆಗೇನೂ ಅಭ್ಯಂತರವಿರುವದಿಲ್ಲ. ಆತನು ಹೃಷ್ಟ ಮನಸ್ಕನೇ ಹೌದು. **ಮಾಶುಚಃ** ಶೋಕಿಸಬೇಡ ಎಂದು ಇಷ್ಟು ಮಾತ್ರವೇ ಹೇಳಿದುದಲ್ಲವು. ಸಂತೋಷಚಿತ್ತನೂ ಆಗುವಿ ಎಂಬ ಭಾವವು.

ಆಗಲಿ, ಈ ಪ್ರಪನ್ನನಿಗೆ ಹೇಯ ದೇಹ ಸಂಬಂಧವೂ ಸಂಸಾರಾನು ವೃತ್ತಿಯೂ ಇರುವದರಿಂದ ಈತನಿಗೆ ನಿರ್ವೇದ ರೂಪದುಃಖವು ಪದೇ ಪದೇ ಉಂಟಾಗಿರುವದನ್ನು ನಾವು ನೋಡಿರುವೆವು. ಈತನು ಹೃಷ್ಟಮನಸ್ಕನು ಎಂದು ಹೇಳಿದುದು ಹೇಗೆ? ಎಂದರೆ ದೇಹವು ಸಾಯುವ ತನಕ ಸಂಬಂಧಿಸಿಕೊಂಡಿರು ವದರಿಂದ ದುಃಖಕ್ಕೇ ಕಾರಣವುಂಟೆಂಬುದನ್ನು ಒಪ್ಪಿಕೊಂಡು ಸಮಾಧಾನವನ್ನು ಹೇಳುತ್ತಾರೆ.—**ಇನ್ದ ಹರ್ಷಮ್‌** - ಈ ಸಂತೋಷವು, **ವಿವೇಕಿಯುಮಾಯ್‌** - ದುಃಖವೇನಾದರೂ ಉಂಟಾದರೆ ಅದರಲ್ಲೇ ಮುಳಗಿ ಹೋಗದೆ ಅದನ್ನು ಪರಿಗಣಿ ಸದೇ ಇರಲು ವಿವೇಕವನ್ನು ಹೊಂದಿರುವನಾಗಿರುವ, **ಹೇಯ ಮಾನ ಶರೀರಾದಿ ಗಳೋಡೇ** - ಹೇಯಗಳಾಗಿ ದುಃಖಕೊಡುವ ಶರೀರಾದಿಗಳೊಂದಿಗೆ, ಆದಿ ಶಬ್ದ ದಿಂದ ಅವಯವ ಇಂದ್ರಿಯಗಳು ಅವುಗಳ ದುರವಸ್ಥೆಗಳೂ ಹೇಳಲ್ಪಟ್ಟವು, **ತುವ ಕ್ಕುಣ್ಡಿರುಕ್ಕಿರ** - ಸಂಬಂಧವನ್ನು ಇಟ್ಟುಕೊಂಡಿರುವ, **ಇವನುಕ್ಕು** - ಈ ಪ್ರಪನ್ನ

**"ಮಾಶುಚಃ" ಎನ್ಗಿರುದುವೇ ಶೋಕನಿಮಿತ್ತಮಾನವೈಯೆಲ್ಲಾಮ್ ಮೋಚನೀಯಮಾಗೈಕ್ಕು ನಿಯಾಮಕ ಮಾಗೈಯಾಲೇ, ಪ್ರಾರಬ್ಧಕರ್ಮತ್ತಿಲುಮ್' ಶೋಕ ನಿಮಿತ್ತಾಂಶಮೆಲ್ಲಾಮ್' ಕಳಿಗೈಯಾಲೇ ಆರ್ತ್ಯತಿಶಯಮುಡೈಯವನುಕ್ಕು ಅಪ್ಪೋದೇ ಮೋಕ್ಷಂ ಸಿದ್ಧಮ್'.**

---

ನಿಗೆ, **ನಿರ್ವೇದ ಮಿಶ್ರಮಾಯ್'**- ದುಃಖ ಮಿಶ್ರವಾಗಿ, **ನಡತ್ತಿ ಲೇಯಾಗಿಲುಮ್**- ಈ ಹರ್ಷವು ಪ್ರಾಪ್ತವಾದುದಾದರೂ, **ನಿರ್ವೇದಮುಮ್'** – ಈ ಶರೀರ ವಿಷಯವಾಗಿ ಉಂಟಾಗುವ ದುಃಖವೂ, **ಶೋಕ ನಿವೃತ್ತಿಯುಮ್'** – ಸರ್ವಪಾಪಗಳೂ ಕಳೆದು ಉಂಟಾಗುವ ಫಲಪ್ರಾಪ್ತಿ ಭರವಸೆಯಿಂದ ಶೋಕ ನಿವೃತ್ತಿಯೂ, **ಭಿನ್ನ ವಿಷಯಙ್ಗಳಾಲೇ** – ಪರಸ್ಪರ ವಿರುದ್ಧ ವಿಷಯಗಳಲ್ಲದೆ, ಬೇರೆ ಬೇರೆ ವಿಷಯಗಳಾದುದರಿಂದ, **ವಿರೋಧ ಮಿಲ್ಲೈ** – ವಿರೋಧವೇನೂ ಇಲ್ಲವು. ದೇಹಪ್ರಯುಕ್ತವಾಗಿ ಖಾಯಿಲೆಯಿಂದ ದುಃಖವಿದ್ದರೂ, ತನಗೆ ಕೊನೆಗೆ ಮೋಕ್ಷಫಲ ಉಂಟೆಂಬ ಹರ್ಷವು ಇದ್ದೇ ಇರುತ್ತದೆಂಬ ತಾತ್ಪರ್ಯವು. ಇದು ದೃಪ್ತ ಪ್ರಪನ್ನನ ವಿಷಯದಲ್ಲಿ ಹೇಳಿದುದು. ಆಯಾ ಹೇತುಗಳ ಮೂಲಕ ನಿರ್ವೇದ ಮತ್ತು ಹರ್ಷಗಳು ಉಂಟಾಗಬಹುದು. ಪ್ರಾರಬ್ಧ ಮತ್ತು ದೇಹ ಮೂಲಕ ನಿರ್ವೇದವುಂಟಾಗಿ ದುಃಖಿಸಬಹುದು. ಹೀಗೆ ದುಃಖಪಡುವದಕ್ಕಿಂತ ಸ್ವಾಮಿಯು ದೇಹಾವಸಾನವನ್ನುಂಟುಮಾಡಿದರೆ ಒಳ್ಳೇದೆಂದು ಮೃತ್ಯುವು ತನಗೆ ಪ್ರಿಯವಾದ ಅತಿಥಿಯು ದಿವ್ಯವೈಕುಂಠಕ್ಕೆ ಕರೆದು ಕೊಂಡು ಹೋದರೆ ಒಳ್ಳೇದೆಂದು ಭಾವಿಸಿ, ಈ ಪ್ರಾಜ್ಞನಾದ ವಿವೇಕಿಯು ಹೃಷ್ಟ ಮನಸ್ಕನಾಗಬಹುದೆಂಬ ತಾತ್ಪರ್ಯವು. ಆರ್ತನ ವಿಷಯದಲ್ಲಾದರೋ, ಆತನು ಭರನ್ಯಾಸವಾದ ಒಡನೆಯೇ ದೇಹತ್ಯಾಗವನ್ನು ಸ್ವಾಮಿಕರುಣೆಯಿಂದಲೋ, ಅಥವಾ ಆತನ ಅನುಜ್ಞೆಯನ್ನು ಕೇಳಿ ದೇಹತ್ಯಾಗ ಮಾಡಲು ಸಿದ್ಧನಾಗಿರುವವನಿಗೆ ದೇಹಸಂಬಂಧ ನಿರ್ವೇದವೂ ಸಹ ಕ್ಷಣಿಕವೇ ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **"ಮಾಶುಚಃ"** ಎನ್ನುವ ಮುಂದಿನ ವಾಕ್ಯದ ಮೂಲಕ.—

**ಮಾಶುಚಃ ಎನ್ಗಿರುದುವೇ** – ಮಾಶುಚಃ ಎಂದು ಹೇಳಿರುವದೇ, **ಶೋಕ ನಿಮಿತ್ತಮಾನವೈಯೆಲ್ಲಾಮ್** - ಶೋಕಕ್ಕೆ ಕಾರಣವಾದವೆಲ್ಲವೂ, **ಮೋಚನೀಯಮಾಗೈಕ್ಕು** - ಬಿಡಿಸಲ್ಪಡಲು ಯೋಗ್ಯವಾಗುವಹಾಗೆ, **ನಿಯಾಮಕ ಮಾಗೈಯಾಲೇ** – ನಿಯಮಿಸಲ್ಪಟ್ಟಿರುವದರಿಂದ, **ಪ್ರಾರಬ್ಧ ಕರ್ಮತ್ತಿಲುಮ್'** – ಪ್ರಾರಬ್ಧಕರ್ಮದಲ್ಲೂ ಕೂಡ, **ಶೋಕನಿಮಿತ್ತಾಂಶಮೆಲ್ಲಾಮ್'** - ಶೋಕಕ್ಕೆ ಕಾರಣವಾದ ಭಾಗವೆಲ್ಲಾ, **ಕಳಿಗೈಯಾಲೇ** - ಕಳೆದು ಹೋಗುವದರಿಂದ, **ಆರ್ತ್ಯತಿಶಯಮುಡೈಯವನುಕ್ಕು** - ಆರ್ತನಾಗಿ ತುಂಬಾ ದೈನ್ಯವನ್ನು ಹೊಂದಿರುವ ಪ್ರಪನ್ನನಿಗೆ, **ಅಪ್ಪೋದೇ** – ಶರಣಾಗತಿಯನ್ನನುಷ್ಠಿಸಿದ ಉತ್ತರ ಕ್ಷಣದಲ್ಲೇ

**(೧) "ಮರಣಮಾನಾಲ್ ವೈಗುಂದಂ ಕೊಡುಕ್ಕುಂ ಪಿರಾನ್" ಇತ್ಯಾದಿಗಳಿಲ್ ಪಡಿಯೇ ಪ್ರಾರಬ್ಧಕರ್ಮತ್ತಿಲ್ ಮೇಲುಳ್ಳದೆಲ್ಲಾಮ್ ಕಳಿನ್ದು ಶರೀರಾವಸಾನತ್ತಿಲೇ ಮೋಕ್ಷಮನ್ರಿಶೈಯ ವೇಣ್ಡಿಯತ್ತಾಲ್ ಇಶ್ಶರೀರಮ್ ತನ್ನಿಲುಮ್ ಆಯುಶ್ಶೇಷಮ್ ಅನಿಷ್ಟಮಾನ ಪೋದು ಪ್ರಪತ್ತಿ ವಶೀಕೃತ ಸರ್ವಶಕ್ತಿ ಸಙ್ಕಲ್ಪತ್ತಾಲೇ ಕಳಿಯಕ್ಕುಱೈಯಿಲ್ಲೈಯಿರೇ.**

---

**ಮೋಕ್ಷವು ಸಿದ್ಧವು.** ತುಂಬಾ ಆರ್ತನಾಗಿ ಶರಣಾಗತಿಯನ್ನನುಷ್ಠಿಸಿದವನಿಗೆ ಉತ್ತರ ಕ್ಷಣದಲ್ಲೇ ದೇಹವಿಯೋಗ ಉಂಟಾಗಿ ಮೋಕ್ಷವು ಅಭಿದುತ್ತದೆಂದು ಹೇಳಿದರು. ಏಕೆಂದರೆ ಆತನಿಗೆ ಶೋಕ ನಿಮಿತ್ತವಾದುದು ಪ್ರಾರಬ್ಧಾಂಶವು. ಅವೆಲ್ಲವೂ **ಮಾಶುಚಃ** ಎಂಬಲ್ಲಿ ಕಳೆದು ಹೋಗುವದರಿಂದ ಮೋಕ್ಷವು ಒಡನೆಯೇ ಸಿದ್ಧವು ಎಂದು ಹೇಳಿದರು.

ಇದನ್ನೇ ಮುಂದಿನ ವಾಕ್ಯದಿಂದ ಉಪಪಾದಿಸಿ ಹೇಳುತ್ತಾರೆ.—

**"ಮರಣ ಮಾನಾಲ್....ಪಿರಾನ್"** ಮರಣವಾದರೆ ಮಹೋಪಕಾರಕನಾದ ಶ್ರೀಮನ್ನಾರಾಯಣನು ದಿವ್ಯ ವೈಕುಂಠವನ್ನು ಕೊಡುವನು ಎಂಬ ಪಾಶುರವು ಹಿಂದೆ ನಿರ್ಯಾಣಾದಿಕಾರದಲ್ಲಿ ಉದಾಹೃತವು. ಪೂರಾ ಶ್ಲೋಕಾರ್ಥಗಳಿಗೆ ೧೭೦೬-೭ ನೆಯ ಪುಟಗಳನ್ನು ನೋಡಿ. ಇಲ್ಲಿ **ಮರಣಮಾನಾಲ್** - ಎಂದು ಹೇಳಿರುವದರಿಂದ ಈ ಭರನ್ಯಾಸ ನಿಷ್ಠನಿಗೆ ಸ್ವಾಮಿಯೇ ಉಪಾಯನು. ಈ ಹೇಯ ಪ್ರಕೃತಿ ಸಂಬಂಧವನ್ನು ಸ್ವಾಮಿ ತಿರುವಡಿಯನ್ನು ಆಶ್ರಯಿಸಿದವನು ಈ ಜನ್ಮದಲ್ಲೇ ಮರಣವಾದ ಒಡನೆಯೇ ಹೊಂದುವನೆಂಬ ಭಾವವು. ಮರಣವು ಸ್ವಾಮಿ ಸಙ್ಕಲ್ಪಾನುಸಾರವಾಗಿ ನಡೆಯುತ್ತದೆಂದೂ ಪುನಃ ಆತನಿಗೆ ಜನ್ಮವಿಲ್ಲವೆಂಬ ಭಾವವೂ ತೋರಿಬರುತ್ತದೆ. ಆರ್ತನಾಗಿದ್ದರೆ, ಆತನಿಗೆ ಒಡನೆಯೇ ಶ್ರಿಯಃಪತಿಯ ಸಙ್ಕಲ್ಪದಿಂದ ಮರಣವು ಲಭಿಸುತ್ತದೆ. ದೃಪ್ತನಾಗಿದ್ದರೆ ಅನಂತರ ಸಾವಕಾಶವಾಗಿ ದೊರೆಯುತ್ತದೆಂಬ ಭಾವಗಳು ತೋರಿಬರುತ್ತವೆ. ಹೀಗೆ ಮರಣವುಂಟಾದರೆ, **ಇತ್ಯಾದಿಗಳಿಲ್ ಪಡಿಯೇ** - ಇವೇ ಮೊದಲಾದ ಸೂಕ್ತಿಗಳಲ್ಲಿ ಹೇಳಿರುವಹಾಗೆ, **ಪ್ರಾರಬ್ಧಕರ್ಮತ್ತಿಲ್** - ಪ್ರಾರಬ್ಧಕರ್ಮದಲ್ಲಿ **ಮೇಲುಳ್ಳದೆಲ್ಲಾಮ್ ಕಳಿನ್ದು** - ಉತ್ತರಕಾಲದಲ್ಲಿ ಅನುಭವಿಸಬೇಕಾದುದೆಲ್ಲಾ ಕಳೆದು ಹೋಗಿ, **ಶರೀರಾವಸಾನತ್ತಿಲೇ** - ಈ ದೇಹವನ್ನು ಬಿಟ್ಟನಂತರ, **ಮೋಕ್ಷಮನ್ರಿಶೈಯವೇಣ್ಡಿಯತ್ತಾಲ್** - ಮೋಕ್ಷವೆಂದು ಆಶೆಯನ್ನಿಟ್ಟಿರುವದರಿಂದ, ಈ ಆರ್ತಪ್ರಪನ್ನನಿಗೆ, **ಇ ಶ್ಶರೀರಮ್ ತನ್ನಿಲುಮ್** - ಈ ತನ್ನ ಶರೀರಕ್ಕೆ ಸಂಬಂಧಿಸಿದ, **ಆಯುಶ್ಶೇಷಮ್** - ಮಿಕ್ಕ ಆಯುಸ್ಸು, **ಅನಿಷ್ಟಮಾನ ಪೋದು** – ಅನಿಷ್ಟ

---

(೧) ತಿರು. ೯. ೧೦. ೫

ವಾದಾಗ, **ಪ್ರಪತ್ತಿವಶೀಕೃತ ಸರ್ವಶಕ್ತಿಸಙ್ಕಲ್ಪತ್ವಾಲೇ** - ಈ ಭರನ್ಯಾಸದಿಂದ ತನ್ನ ಇಷ್ಟದಂತೇ ನಡೆಯುವ ಅಘಟಿತ ಘಟನಾಶಕ್ತಿಯುಳ್ಳ ಸ್ವಾಮಿಯ ಸ್ಥಿರ ಸಙ್ಕಲ್ಪದಿಂದ, ಆತನು ಸರ್ವಶಕ್ತನೂ ಮತ್ತು ಅವನ ಸಙ್ಕಲ್ಪಕ್ಕೆ ಯಾವದೊಂದು ತಡೆಯೂ ಇಲ್ಲವು, ಆದುದರಿಂದ ಅಂತಹವನ ಸಙ್ಕಲ್ಪದಿಂದ, **ಕಳಿಯುಕ್ಕುರ್ವಿಯಿಲ್ಲೈ** - ಮಿಕ್ಕ ಆಯುಸ್ಸು ಕಳೆದು ಹೋಗುತ್ತದೆಂಬುದರಲ್ಲಿ ಏನೊಂದೂ ನ್ಯೂನತೆಯಿಲ್ಲವು. ಆರ್ತನಿಗೆ ಇರುವ ಮಿಕ್ಕ ಆಯುಸ್ಸು ಇಷ್ಟವಿಲ್ಲವು. ಆತನು ಪ್ರಾಜ್ಞನು. ಈ ಭರನ್ಯಾಸದಿಂದ ತನಗೆ ಮುಂದಕ್ಕೆ ಜನ್ಮವಿಲ್ಲವು. ಮೋಕ್ಷವನ್ನು ಹೊಂದಿ ಪರಿಪೂರ್ಣಬ್ರಹ್ಮಾನುಭವವನ್ನೂ ಆತನಿಗೆ ಕೈಂಕರ್ಯವನ್ನೂ ಮಾಡುವ ದಿವ್ಯ ಪದವಿಯನ್ನು ಹೊಂದುವೆನೆಂದು ತಿಳಿದಿರುತ್ತಾನೆ. ಸ್ವಾಮಿಯಾದರೋ ಆಶ್ರಿತ ಭಕ್ತಪರಾಧೀನನು, ಸರ್ವಶಕ್ತನು, ಸ್ಥಿರಸಙ್ಕಲ್ಪನು. ಆದುದರಿಂದ ಆ ಆರ್ತಪ್ರಪನ್ನನ ಮಿಕ್ಕಾಯುಸ್ಸು ಕಳೆದು ಹೋಗುವಹಾಗೆ ಮಾಡಿ ದೇಹಾವಸಾನವನ್ನುಂಟುಮಾಡಿ ದಿವ್ಯವೈಕುಂಠ ಮಾರ್ಗವನ್ನು ತೋರಿಸುವನು ಎಂಬುದರಲ್ಲಿ ಏನೊಂದು ಆಕ್ಷೇಪಣೆ ಇರುವದಿಲ್ಲವೆಂಬ ಭಾವವು.

ಈಗ ಉಪಪಾದಿಸಿ ಹೇಳಿದುದನ್ನೇ ಒಂದು ಕಾರಿಕೆಯ ಮೂಲಕ ಸ್ಥಾಪಿಸುತ್ತಾರೆ. ಆರ್ತಪ್ರಪನ್ನನಿಗೆ ಸರ್ವೇಶ್ವರನೇ ಕರುಣಿಸಿ ದೇಹಾವಸಾನವನ್ನು ದಯಪಾಲಿಸಿದರೆ ಏನೊಂದೂ ತೊಂದರೆಯಿಲ್ಲವು. ತಾನೇ ಆರ್ತಪ್ರಪನ್ನನು ಅಗ್ನಿಪ್ರವೇಶ ತೀರ್ಥಪ್ರವೇಶಾದಿಗಳ ಮೂಲಕವಾಗಿಯೂ ಯಾಗಾದಿಗಳ ಮೂಲಕವಾಗಿಯೂ ದೇಹತ್ಯಾಗಮಾಡಲು ಅನುಮತಿಯುಂಟೇ? ಅದು ದೋಷಾವಹವಲ್ಲವೇ? ದೃಷ್ಟನ ವಿಷಯದಲ್ಲಿ ಹೇಳಿರುವದೇನೆಂದರೆ "**ಯಸ್ಯ ದೇಹಾ ನ್ತರ ಕೃತೇ ಶೋಕೋ ದೃಷ್ಟ ಸ್ಸ ಉಚ್ಯತೇ । ದೃಷ್ಟಾನಾ ಮಪಿ ಜಂತೂನಾಂ ದೇಹಾನ್ತರ ನಿವಾರಿಣೀ**" ಎಂಬುದರಿಂದ ಈ ದೃಷ್ಟನ ಸಂದರ್ಭದಲ್ಲಿ ಏನೊಂದೂ ಆಕ್ಷೇಪವಿಲ್ಲವು. ಆದರೆ "**ಆತ್ಮನ ಸ್ತ್ಯಾಗಿನಾಂ ನಾಸ್ತಿ ಪತಿತಾನಾಂ ತಥಾಕ್ರಿಯಾಃ । ಆತ್ಮನ ಸ್ತ್ಯಾಗಿನಾಂ ಚೈವ ನಿವರ್ತೇ ತೋ ದಕಕ್ರಿಯಾಃ । ಮಹಾಪಾತಕಿನಾಂ ಚೈವ ತಥಾ ಚೈವಾತ್ಮಘಾ ತಿನಾಮ್**'" ಎಂಬಲ್ಲಿ ಹೇಳಿರುವ ಹಾಗೆ ಆತ್ಮಹತ್ಯ ಮಾಡಿಕೊಂಡವನಿಗೆ ಅಪರ ಕ್ರಿಯೆಗಳೂ ಕೂಡಾ ಯೋಗ್ಯವಿಲ್ಲವೆಂದಿರುವಾಗ ಆರ್ತ ಪ್ರಪನ್ನನು ಸ್ವತಂತ್ರಿಸಿ ಜಲಾಗ್ನಿಗಳ ಮೂಲಕ ದೇಹತ್ಯಾಗ ಮಾಡಬಹುದೋ? ಹಾಗೆಯೇ ಇನ್ನೊಂದು ಕಡೆಯಲ್ಲಿಯೂ "**ಕ್ರೋಧಾತ್ಪ್ರಾಯಂ ವಿಷಂ ವಹ್ನಿಂ ಶಸ್ತ್ರಮುದಬಂಧನಂ ಜಲಮ್' । ಗಿರಿ ವೃಕ್ಷ ಪ್ರಪಾತಂ ವಾ ಯೇ ಕುರ್ವನ್ತಿ ನರಾಧಮಾಃ**" ಕ್ರೋಧದಿಂದ ವಿಷ ವಹ್ನಿ ಜಲಗಳ ಮೂಲಕವಾಗಿಯೂ ಗುಡ್ಡ ವೃಕ್ಷಗಳ ಮೇಲಿಂದ ಧುಮುಕಿ ಪ್ರಾಣತ್ಯಾಗ ಮಾಡುವವರನ್ನು ನರಾಧಮರು ಎಂದು ಹೇಳಲ್ಪಟ್ಟಿತ್ತದೆ. ಪ್ರಾಣತ್ಯಾಗ ದೋಷಾವಹವೆಂಬ ಭಾವವು.

**ಕಾ. "ಪ್ರಾಯಶ್ಚಿತ್ತ ವಿಶೇಷೇಷು ಸರ್ವಸ್ವಾರಾದಿ (ಕೇಷು ಚ) ಕೇಶ್ವಸು।**
**ನಾತ್ಮಹಿಂಸನ ದೋಷೋಸ್ತಿ ತಥಾರ್ತ್ತ ಶರಣಾಗತೌ।**

---

ಆರ್ತ್ತ ಪ್ರಪನ್ನನಿಗೆ ದೇಹತ್ಯಾಗ ಮಾಡಲು ಅನುಮತಿಯುಂಟೆಂಬುದನ್ನು ಒಂದು ಕಾರಿಕೆಯ ಮೂಲಕ ತಿಳಿಸುತ್ತಾರೆ—

**ಅರ್ಥವು - ಪ್ರಾಯಶ್ಚಿತ್ತ ವಿಶೇಷೇಷು**-ಕೆಲವು ಪ್ರಾಯಶ್ಚಿತ್ತ ವಿಶೇಷಗಳಲ್ಲೂ, **ಸರ್ವಸ್ವಾರಾದಿ ಕೇಷುಚ** - ಸರ್ವಸ್ವಾರವೇ ಮೊದಲಾದ ಯಜ್ಞ ವಿಶೇಷಗಳಲ್ಲೂ ಕೂಡ, **ಆತ್ಮ ಹಿಂಸನ ದೋಷಃ** - ಆತ್ಮಾನನ್ನು ಹಿಂಸೆ ಮಾಡಿದ ದೋಷವಿಲ್ಲವು. **ತಥಾ** - ಅದರ ಹಾಗೆಯೇ, **ಆರ್ತ್ತಶರಣಗತೌ** - ಆರ್ತ್ತನು ಶರಣಾಗತಿಯನ್ನು ಅನುಷ್ಠಿಸಿ ಪ್ರಾಣತ್ಯಾಗ ಮಾಡುವದರಲ್ಲಿ, ಆತ್ಮ ಹಿಂಸನ ದೋಷವಿಲ್ಲವೆಂಬ ಭಾವವು. ಕೆಲವು ಪ್ರಾಯಶ್ಚಿತ್ತ ವಿಶೇಷಗಳಲ್ಲಿ, ಆತ್ಮ ಹಿಂಸನ ದೋಷವಿಲ್ಲವೆಂದರು. ಅವು ಯಾವುವೆಂದರೆ—"**ಯಃ ಕಾಮತೋ ನರಃ ಪಾಪಂ ಮಹತ್ಕುರ್ಯಾತ್ಕಥಂ ಚನ। ನ ತಸ್ಯ ನಿಷ್ಕೃತಿ ರ್ದೃಷ್ಟಾ ಭೃಗ್ವಗ್ನಿ ಪತನಾದೃತೇ। ಅಂತ್ಯೇನ ಸಹ ಸಂಪರ್ಕೇ ಭೋಜನೇ ಮೈಥುನೇ ಕೃತೇ। ಪ್ರವಿಶೇ ತ್ಸಂ ಪ್ರದೀಪ್ತಾಗ್ನೌ ಮೃತ್ಯುನಾ ಸಾ ವಿಶುಧ್ಯತಿ**" ಯಾವನು ಕಾಮ ಮೂಲಕವಾಗಿ ಮಹತ್ತಾದ ಪಾಪವನ್ನು ಯಾವಾಗಲಾದರೂ ಮಾಡಿದುದಾದರೆ ಗುಡ್ಡದ ಮೇಲಿನಿಂದಾಗಲಿ ಅಗ್ನಿಯಲ್ಲಾಗಲಿ ಬೀಳುವದಕ್ಕಿಂತ ಬೇರೆ ಪ್ರಾಯಶ್ಚಿತ್ತವಿಲ್ಲವು. ಅಂತಿಜನೊಂದಿಗೆ ಭೋಜನ ಮೈಥುನಾದಿಗಳು ಉಂಟಾದರೆ ಉರಿಯುತ್ತಿರುವ ಅಗ್ನಿಪ್ರವೇಶ ಮಾಡಿ ಮೃತಿಯನ್ನು ಹೊಂದುವದರಿಂದ ಶುದ್ಧಿಯನ್ನು ಹೊಂದುವನು. ಇಂತಹ ಪ್ರಾಯಶ್ಚಿತ್ತ ವಿಶೇಷಗಳಿಂದ ಪ್ರಾಣತ್ಯಾಗವು ದೋಷವಿಲ್ಲವೆಂದು ಹೇಳಲ್ಪಟ್ಟಿತು. ಸರ್ವಸ್ವಾರವೆಂಬುದು ಒಂದು ಯಜ್ಞವು. ಇದನ್ನು **ಶುನಃ ಕರ್ಣಸ್ತೋಮೇನ ಮರಣ ಕಾಮೋ ಯಜೇತ** ನಾಯಿಯ ಕರ್ಣಗಳಿಂದ ಸಾಯಬೇಕೆಂಬ ಅಪೇಕ್ಷೆಯಿರುವವನು ಯಜ್ಞಮಾಡತಕ್ಕದ್ದು ಎಂದು ಇದೆ. ಆದಿ ಶಬ್ದದಿಂದ "**ಬ್ರಾಹ್ಮಣಾರ್ಥೇ ಗವಾರ್ಥೇವಾ ಸಮ್ಯಕ್ಪ್ರಾಣಾನ್ ಪರಿತ್ಯಜೇತ**'" ಹೀಗೆ ಪ್ರಾಣವನ್ನು ಬಿಟ್ಟವರು **ಸೋಮೃತತ್ವಂ ಭಜನ್ತೇ** - ಮೋಕ್ಷವನ್ನು ಹೊಂದುವರು ಎಂದಿರುತ್ತದೆ. ಹಾಗೆಯೇ ಜಟಾಯುವು ಸ್ವಾಮಿಗೆ ಸಹಾಯವಾಗಿ ಸೀತಾ ನಿಮಿತ್ತ ಪ್ರಾಣವನ್ನು ಬಿಟ್ಟದುದರಿಂದ ಶ್ರೀರಾಮಚಂದ್ರಪ್ರಭುವು, "**ಮಯಾ ಚ ಸಮನುಜ್ಞಾತಃ ಗಚ್ಛ ಲೋಕಾನನುತ್ತಮಾನ್**" ದಿವ್ಯ ವೈಕುಂಠವನ್ನು ಹೋಗಿ ಸೇರು ಎಂದು ಹೇಳಿರುತ್ತಾರೆ. ಇಲ್ಲೆಲ್ಲಾ ಆತ್ಮಹನನವು, ದೇಹತ್ಯಾಗವು, ಹೇಗೆ ದೋಷವಲ್ಲವೋ ಹಾಗೆಯೇ ಆರ್ತ್ತಶರಣಾಗತಿಯಲ್ಲೂ ಎಂಬ ಭಾವವು." ಆರ್ತ್ತನು ಹೀಗೆ ದೇಹತ್ಯಾಗವನ್ನು

ಮಾಡುವದು ಆತ್ಮಾವಿಗೆ ದೋಷವೇದು ಭಾವಿಸುವದಿಲ್ಲವು. ಆತ್ಮವಿನ ದುರ್ಗತಿಯನ್ನು ಹೋಗಲಾಡಿಸಿ ಆತ್ಮ ರಕ್ಷಣೆಯನ್ನೇ ಎಂದರೆ ಆತ್ಮೋಜ್ಜೀವನವನ್ನೇ ಮಾಡಿಕೊಳ್ಳುವದಾಗಿ ಸ್ಥಿರವಾಗಿ ನಂಬಿರುವವನು. ಹೀಗೆ ಮಾಡಿದುದಕ್ಕೆ ಏನಾದರೂ ನಿದರ್ಶನಗಳುಂಟೋ ? ಎಂದರೆ ಉಂಟು. ಎಲ್ಲಿ ಎಂದರೆ—

ಶ್ರೀಮದ್ರಾಮಾಯಣ ಅರಣ್ಯಕಾಂಡ ಪಂಚಮ ಸರ್ಗದಲ್ಲಿ ಶರಭಂಗ ಮಹರ್ಷಿಯು ಆರ್ತರಾಗಿ ಅಗ್ನಿಹೋತ್ರ ವಿಧಿಯನ್ನನುಷ್ಠಿಸಿ ಶ್ರೀರಾಮಾಗಮನವನ್ನೇ ಕಾದಿದ್ದು ಒಡನೆಯೇ ಶ್ರೀ ಸೀತಾ ರಾಮಲಕ್ಷ್ಮಣರು ನೋಡುತ್ತಿರುವಾಗಲೇ ಅಗ್ನಿಪ್ರವೇಶವನ್ನು ಮಾಡಿದರೆಂದು ಹೇಳಲ್ಪಟ್ಟಿರುತ್ತದೆ. **ಧರ್ಮೈಕನಿಗ್ರಹವಾನ್** ಆದ ಶ್ರೀ ರಾಮಪ್ರಭುವು ಇದಕ್ಕಾಗಿ ಮುನಿಯನ್ನು ನಿಂದಿಸಲಿಲ್ಲವು. ಆದುದರಿಂದ ಭಗವದನುಮತಿಯುಂಟೆಂಬುದು ತೋರಿ ಬರುತ್ತದೆ. **"ಅಹಂ ಜ್ಞಾತ್ವಾ ನರ ವ್ಯಾಘ್ರ ವರ್ತಮಾನ ಮದೂರತಃ । ಬ್ರಹ್ಮಲೋಕಂ ನಗಚ್ಛಾಮಿ ತ್ವಾಮದೃಷ್ಟ್ವಾ ಪ್ರಿಯಾತಿಥಿಮ್ । ತ್ವಯಾ ಹಂ ಪುರುಷ ವ್ಯಾಘ್ರ ಧಾರ್ಮಿಕೇಣ ಮಹಾತ್ಮನಾಂ । ಸಮಾಗಮ್ಯ ಗಮಿಷ್ಯಾಮಿ ತ್ರಿದಿವಂ ದೇವ ಸೇವಿತಮ್"** ಶ್ರೀರಾಮಚಂದ್ರಪ್ರಭುವು ಈ ಮಾರ್ಗವಾಗಿ ಬರುತ್ತಾರೆಂದು ಹೇಳಿದರು ; ಆ ಕಾರಣದಿಂದ ನಿಮ್ಮನ್ನು ನೋಡದೆ ದಿವ್ಯ ವೈಕುಂಠಕ್ಕೆ ಹೋಗಲು ಇಷ್ಟವಿಲ್ಲದೆ ಇದ್ದೆನು ; ಈಗ ನೋಡಿದ ಸುಕೃತ ಉಂಟಾದುದರಿಂದ ದಿವ್ಯ ವೈಕುಂಠವನ್ನು ಕುರಿತು ಹೋಗುವನೆಂದು ಶರಭಂಗ ಋಷಿಯು ಹೇಳಿ, ಶ್ರೀರಾಮಪ್ರಭುವಿಗೆ ಸುತೀಕ್ಷ್ಣರ ಆಶ್ರಮವನ್ನು ತೋರಿಸಿ ಪ್ರಾರ್ಥಿಸುತ್ತಾರೆ.—

**ಮುಹೂರ್ತಂ ಪಶ್ಯತಾತಮಾಮ್',** ತಮ್ಮ ದಿವ್ಯ ಚಕ್ಷುಸ್ಸಿನಿಂದ ಒಂದು ಮುಹೂರ್ತ ಮಾತ್ರ ದಯಮಾಡಿ ನೋಡಿ ಎಂದು ಪ್ರಾರ್ಥಿಸಿ, **"ತತೋಗ್ನಿಂ ಸುಸಮಾಧಾಯ ಹುತ್ವಾ ಚಾ ಜ್ಯೇನ ಮಂತ್ರವಿತ್ । ಶರಭಂಗೋಮಹಾ ತೇಜಾ ಪ್ರವಿವೇಶ ಹುತಾಶನಮ್'** ಅಗ್ನಿಪ್ರವೇಶ ಮಾಡಿದರೆಂದು ಹೇಳಲ್ಪಟ್ಟಿರುತ್ತದೆ. ಇದರ ವ್ಯಾಖ್ಯಾನದಲ್ಲಿ **"ವೃದ್ಧಃ ಶೌಚಕ್ರಿಯಾಲುಪ್ತಃ ಪ್ರತ್ಯಾಖ್ಯಾತ ಭಿಷಕ್ಕ್ರಿಯಃ । ಆತ್ಮಾನಂ ಘಾತ ಯೇದ್ಯಸ್ತು ಭೃಗ್ವಗ್ನ್ಯ ನಶನಾದಿಭಿಃ ॥ ಇತಿ ವಚನಾ ಚ್ಛರ ಭಂಗಸ್ಯ ಅಗ್ನಿ ಪ್ರವೇಶಃ ಸಮಂಜಸಃ"** ಶರಭಂಗರ ಅಗ್ನಿಪ್ರವೇಶವು ಸಮಂಜಸವೆಂದು ಬರೆದಿರುತ್ತಾರೆ. ಈ ಆತ್ಮಹನನದಿಂದ ಶರಭಂಗರು ನರಕಕ್ಕೆ ಹೋಗಲಿಲ್ಲವೆಂದು ದಿವ್ಯ ವೈಕುಂಠಕ್ಕೆ ಹೋದರೆಂದು ಶ್ರೀ ವಾಲ್ಮೀಕಿ ಮಹರ್ಷಿಯು ಮುಂದೆ **ಶರಭಂಗೇ ದಿವಂ ಯಾತೇ"** ಎಂಬ ಪ್ರಯೋಗಿಸಿರುತ್ತಾರೆ—

೨. ಶರಭಂಗ ವೃತ್ತಾಂತದಲ್ಲಿ ಶ್ರೀ ರಾಮಚಂದ್ರಪ್ರಭುವಿನ ಅನುಮತಿಯು

ಅನುಭಾವ್ಯವು. ಶಬರೀ ವೃತ್ತಾನ್ತದಲ್ಲಿ ಕಳೇಬರ ತ್ಯಾಗಕ್ಕೆ ಶ್ರೀ ರಾಮಚಂದ್ರ ಪ್ರಭುವು ಅನುಮತಿಯನ್ನು ಸಾಕ್ಷಾತ್ತಾಗಿ ಕೊಟ್ಟಿರುತ್ತಾರೆ. ತಾನು ಮತಂಗ ಮಹರ್ಷಿಯ ಶಿಷ್ಯಳು, **ಪರಿಚಾರಿಣೀ** ಎಂದು ಶ್ರೀ ರಾಮನಿಗೆ ತಿಳಿಸಿ, ಮತಂಗ ಮಹರ್ಷಿಯು ದಿವ್ಯ ವೈಕುಂಠವನ್ನು ಕುರಿತು ತೆರಳಿದಾಗ ತಾನೂ ಜೊತೆಯಲ್ಲಿ ಬರಲು ಅನುಮತಿ ಪ್ರಾರ್ಥಿಸಲು, ಋಷಿಯು ಸದ್ಯದಲ್ಲೇ ನಿನಗೆ ಶ್ರೀ ರಾಮ ಸಂದರ್ಶನವು ದೊರೆತು ಅದರಿಂದ ಪವಿತ್ರತೆಯನ್ನು ಹೊಂದಿ ನೀನು ಅವರ ಅನು ಮತಿಯನ್ನು ಪಡೆದು ದೇಹತ್ಯಾಗಮಾಡಿ ವೈಕುಂಠವನ್ನು ಬಂದು ಸೇರಬಹುದೆಂದು ನಿಯಮಿಸಿರುತ್ತಾರೆ. ಶ್ರೀ ರಾಮಾಗಮನವನ್ನು ನಿರೀಕ್ಷಿಸುತ್ತಾ, ವನದಲ್ಲಿ ತುಂಬಾ ರುಚಿಯಾಗಿರಬಹುದಾದ ಹಣ್ಣುಗಳನ್ನು ಆರಿಸಿ ಇಟ್ಟು ಸಮರ್ಪಿಸಿ ಕೇಳುತ್ತಾಳೆ— **"ತದಿಚ್ಛಾಮ್ಯ ಭ್ಯನುಜ್ಞಾತಾ ತ್ಯಕ್ತು ಮೇತತ್ಕಳೇಬರಮ್' । ತೇಷಾಂ ಮಿಚ್ಛಾಮ್ಯಹಂ ಗನ್ತುಂ ಸಮೀಪಂ ಭಾವಿತಾತ್ಮನಾಮ್'"** ಅದಕ್ಕೆ ಶ್ರೀ ರಾಮಚಂದ್ರನು **"ಅರ್ಚಿತೋಽಹಂ ತ್ವಯಾ ಭಕ್ತ್ಯಾ ಗಚ್ಛ ಕಾ ಮಂ ಯಥಾ ಸುಖಮ್',"** ತಾನು ಪೂಜಿಸಲ್ಪಟ್ಟಿನು ಎಂದು ಹೇಳಿ ಅನುಜ್ಞೆಯನ್ನು ಕೊಟ್ಟಿರು ತ್ತಾರೆ. **"ಅನುಜ್ಞಾತೇಽತು ರಾಮೇಣ ಹುತ್ವಾತ್ಮಾನಂ ಹುತಾಶನೇ । ಜ್ವಲತ್ಪಾ ವಕ ಸಂಕಾಶಾ ಸ್ವರ್ಗಮೇವ ಜಗಾಮಸಾ।** ಅಗ್ನಿಯಲ್ಲಿ ತನ್ನ ದೇಹವನ್ನು ಸಮ ರ್ಪಿಸಿ, ಅಗ್ನಿಯೋಪಾದಿಯಲ್ಲಿ ಜ್ವಲಿಸುವ ಕಾನ್ತಿಯುಕ್ತಳಾಗಿ ದಿವ್ಯ ವೈಕುಂಠ ವನ್ನು ಕುರಿತು ಹೋದಳು ಎಂದು ಇರುತ್ತದೆ—ಈ ಶಬರೀ ವೃತ್ತಾನ್ತ ಸರ್ಗದ ಕೊನೆಯ ಶ್ಲೋಕಾರ್ಥವು **"ತತ್ಪುಣ್ಯಾಂ ಶಬರೀ ಸ್ಥಾನಂ ಜಗಾಮಾತ್ಮ ಸಮಾಧಿನಾ"** ಎಂದಿರುವದಕ್ಕೆ ಶ್ರೀ ಗೋವಿನ್ದರಾಜೀಯರರತ್ನಮೇಖಲವ್ಯಾಖ್ಯಾನ ದಲ್ಲಿ **"ಸ್ತ್ರಿಯಾ ಅಪಿ ವಿದುರಾದೇರಿವ ಯೋಗಾಧಿಕಾರ ಸ್ಸಭವತಿ"** ಶಬರಿಗೆ ಸ್ತ್ರೀಯಾಗಿದ್ದರೂ ವಿದುರಾದಿಗಳ ಹಾಗೆ, (ಆದಿಶಬ್ದದಿಂದ ಧರ್ಮವ್ಯಾಧಾದಿಗಳು ಹೇಳಲ್ಪಟ್ಟಿರು) ಭಕ್ತಿಯೋಗವೆಂದರೆ ಉಪಾಸನದಲ್ಲಿ ಅಧಿಕಾರ ವುಂಟೆಂದು ಶಾಸ್ತ್ರ ವಿರುದ್ಧ ವ್ಯಾಖ್ಯಾನವನ್ನು ಬರೆದಿರುತ್ತಾರೆ ಶ್ರೀ ರಾಮಚಂದ್ರ ಪ್ರಭುವು ಉತ್ತರ ಕಾಂಡದಲ್ಲಿ ಶುಂಭುಕನೆಂಬ ಶೂದ್ರನು ಉಪಾಸನೆಯನ್ನು ಮಾಡುತ್ತಿ ದ್ದುದು ಧರ್ಮವಿರುದ್ಧವಾದುದರಿಂದ ಆತನ ಶಿರಸ್ಸನ್ನು ಸ್ವಹಸ್ತದಿಂದಲೇ ಛೇದಿಸಿರು ತ್ತಾರೆ. ಶಬರಿ ಸ್ತ್ರೀಯಾಗಿಯೂ ಶೂದ್ರಳಾಗಿಯೂ ಉಪಾಸನೆಯನ್ನು ಮಾಡಿ ದುದು ಶ್ರೀ ರಾಮನಿಗೆ ಗ್ರಾಹ್ಯವೆಂದರೆ ಪಕ್ಷಪಾತ ದೋಷವನ್ನು ಹೊರಸಿದಂತಾ ಗುವದಿಲ್ಲವೇ ? ಶ್ರೀ ರಾಮಪ್ರಭುವೂ ಕೂಡ ಯಾವಾಗ ಮನುಷ್ಯನಾಗಿ ಅವ ತಾರಿಯೋ ಆಗ ಆತನೂ ಮನುಷ್ಯನ ಹಾಗೆ ಶಾಸ್ತ್ರವಶ್ಯನು. **ವಿದುರಾದೇರಿವ** ಎಂಬುದರಿಂದ ವಿದುರನೂ ಉಪಾಸಕನು ಎಂದು ಹೇಳಿರುವದೂ ಕೂಡ ಶಾಸ್ತ್ರ

ವಿರುದ್ಧವು. ಬೇರೆ ಕಡೆಯಲ್ಲಿ ಈ ಗ್ರಂಥದಲ್ಲೇ ವಿದುರನು ಶಾಸ್ತ್ರವಿರುದ್ಧವಾಗಿ ನಡೆಯಲಿಲ್ಲವೆಂದು ಅನೇಕ ಕಾರಣಗಳಿಂದ ತೋರಿಸಿರುತ್ತೇನೆ ಈ ವ್ಯಾಖ್ಯಾನದಿಂದ ಶ್ರೀ ಗೋವಿಂದರಾಜೀಯರು ವಿಷ್ಣುಧರ್ಮ ಶ್ಲೋಕವಾದ **"ಧರ್ಮವ್ಯಾಧಾದಯೋ ಪ್ಯನ್ಯೇ ಪೂರ್ವಾಭ್ಯಾಸಾತ್ ಜಿಗುಪ್ಸಿತೇ। ವರ್ಣಾವರತ್ವೇ ಸಂಸಿದ್ಧಿಂ ಸಂಪ್ರಾಪ್ತಾ ಶ್ರಮಣೀಯಥಾ"** ಎಂಬುವದಕ್ಕೂ ಅಪಾರ್ಥ ಹೇಳಿ ಧರ್ಮವ್ಯಾಧರು, ವಿದುರ ಮೊದಲಾದವರೆಲ್ಲಾ ಶಬರಿಯ ಹಾಗೆ ಉಪಾಸನೆ ಮಾಡಿ ಮೋಕ್ಷವನ್ನು ಹೊಂದಿದ ರೆಂದು ಅಪಾರ್ಥವನ್ನು ಮಾಡಿರುವ ಹಾಗೆ ಹೇಳಿರುತ್ತದೆ. ಇದು ಒಂದು ಅನುಮತಿ ಶ್ಲೋಕವು; ಪಕ್ಷಹೇತು ದೃಷ್ಟಾಂತಗಳಿಂದ ಸೇರಿದುದು. **ಪರ್ವತೋವಹ್ನಿಮಾನ್** ಎಂಬ ಹೇಳಿಕೆಯ ಪ್ರಕಾರ **ಧರ್ಮವ್ಯಾಧಾದಯಃ ಸಂಸಿದ್ಧಿಂ ಸಂಪ್ರಾಪ್ತಾಃ** ಎಂದು ಇದೆ; ಇದಕ್ಕೆ ಹೇತುವು **ಪೂರ್ವಾಭ್ಯಾಸಾತ್** - ಪೂರ್ವ ಜನ್ಮದಲ್ಲಿ ಜಡಭರ ತರ ಹಾಗೆ ಮಾಡಿದ ಉಪಾಸನೆಯ ಬಲದಿಂದ, **ದೃಷ್ಟಾಂತವು ಶ್ರಮಣೀ ಯಥಾ** - ಶಬರಿಯು ಹೇಗೆ ಸ್ತ್ರೀತ್ವ ಶಬರತ್ವಗಳಿಂದ ಉಪಾಸನಾಧಿಕಾರವಿಲ್ಲದೆ ಭಾಗವತ ಸಂಶ್ರಯಣದಿಂದ, ಮತಂಗ ಋಷಿಯನ್ನು ಆಶ್ರಯಿಸಿದುದರಿಂದ, ಸಂಸಿದ್ಧಿಯನ್ನು ಹೊಂದಿದಳೋ, ಹಾಗೆಯೇ; **ಜುಗುಪ್ಸಿತೇವರ್ಣಾವರತ್ವೇ** - ಶೂದ್ರಾದಿಯೋನಿಗಳಲ್ಲಿ ಹುಟ್ಟಿದ್ದರೂ ಕೂಡ ಭಾಗವತ ಸಂಶ್ರಯಣದಿಂದ, ಆ ಭಾಗವತರ ಉಪಾಯಾನುಷ್ಠಾನದಲ್ಲಿ ಇವರೂ ಅಂತರ್ಗತರಾಗಿ ಮೋಕ್ಷವನ್ನು ಹೊಂದಿದರು.

ಶ್ರೀ ದೇಶಿಕರವರಿಗೆ ಸರ್ವಶಾಸ್ತ್ರಗಳೂ ಕರಾತಲಾ ಮಲಕವು. ಅದರಲ್ಲೂ ಶ್ರೀ ಮದ್ರಾಮಾಯಣವು **ವಲ್ಮೀಕ ಸಂಭವರಗಿರ**ವಾಗಿ ತುಂಬಾ ಆದರವುಳ್ಳದು. ಹೀಗಿರುವಾಗ ಈ ನಿದರ್ಶನಗಳನ್ನು ಸ್ವಾಮಿ ದೇಶಿಕರವರು ಏಕೆ ಉದಾಹರಿಸ ಲಿಲ್ಲವು? ಎಂದು ಕೇಳಬಹುದು. ಆರ್ತನಿಗೂ ದೃಪ್ತನಿಗೂ ಫಲವು ಮೋಕ್ಷವಾಗಿ ಒಂದೇ. ಸ್ವಾಮಿಯು ಕರುಣಿಸಿ ಕೊಟ್ಟಿರುವದು ಕರಣ ಕಳೇಬರಯೋಗವು. ಮುಮುಕ್ಷುವು **ನಿಶ್ಚಿತ್ಯತ್ವದಧೀನತಾಂ** ಎಂಬಲ್ಲಿ ಹೇಳಿರುವಹಾಗೆ ಮೂಲಮನ್ತ್ರ ದಲ್ಲಿ ಗ್ರಹಿಸಿದನಂತರ ಸ್ವಾತಂತ್ರ್ಯವನ್ನು ವಹಿಸಿ ಭೃಗ್ವಗ್ನಿತೀರ್ಥಗಳಲ್ಲಿ ದೇಹ ತ್ಯಾಗಮಾಡುವದು ಇಷ್ಟವಿಲ್ಲವಾಗಿ ಶಾಸ್ತ್ರಮಾತ್ರ ಉಪಪಾದಿಸಿದರೇ ವಿನಾ ಅದನ್ನು ನಿದರ್ಶನಂಗಳಿಂದ ಸಮರ್ಥಿಸಲಿಲ್ಲವು. ಶಾಸ್ತ್ರವು ಅನುಮತಿಯನ್ನು ಕೊಡುವದಲ್ಲದೆ ಸ್ವಾಮಿಯೇ **"ಆರ್ತಾನಾಂ ಮಾಶು ಫಲದಾ ಸಕೃದೇವ ಕೃತಾಹ್ಯಸೌ"** ಈ ಆರ್ತನ ದೈನ್ಯತೆಯನ್ನು ಕಂಡು ಶೀಘ್ರವಾಗಿಯೇ ದೇಹತ್ಯಾಗ ವನ್ನುಂಟುಮಾಡುವನು. ದೃಪ್ತನಾಗಿ ಇದ್ದುಕೊಂಡು ಸ್ವಾಮಿಯು ಕರಣ ಕಳೀ ಬರವಿಯೋಗವನ್ನು ಕೊಡುವತನಕ ಕಾದಿದ್ದು ದಾಯಧನದಹಾಗೆ ಸಙ್ಕಲ್ಪಿಸಿಟ್ಟಿ

**ದೃಪ್ತಸ್ಯತು ಯಥಾಶಾಸ್ತ್ರಂ ಚಿರಂಜೀವಿತು ಮಿಚ್ಛತಃ ।**
**ಪ್ರಾಣರಕ್ಷಣ ಶಾಸ್ತ್ರಾರ್ಥ ಲಂಘನಂ ತ್ವಪರಾಧನಮ್'.**

ರುವ ಮೋಕ್ಷಪ್ರಾಪ್ತಿಯನ್ನು ಹೊಂದುವದು ಯುಕ್ತವಾಗಿ ತೋರುತ್ತದೆ. ಭೃಗ್ವಗ್ನಿಶೀರ್ಥ ಪತನದಿಂದ ದೇಹತ್ಯಾಗ ಉಂಟಾಗದಿದ್ದರೆ, ಈಗಿನ ಸರ್ಕಾರದ ಆತ್ಮಹತ್ಯಾದೋಷ ಶಿಕ್ಷೆಗೂ ಗುರಿಯಾಗಬಹುದು.

ಶ್ರೀ ದೇಶಿಕರವರೇ ನೂರುವರ್ಷಗಳಿಗಿಂತ ಹೆಚ್ಚಾಗಿ ಬದುಕಿ ಲೋಕೋಪಕಾರಕವಾದ ಕೆಲಸದಲ್ಲೇ ನಿರಂತರ ಶ್ರದ್ಧಾಯುಕ್ತರಾಗಿಯೇ ಇದ್ದುಬಿಟ್ಟರು. ಇದರಿಂದಲೂ ಅವರಿಗೆ ಆರ್ತನ ಪ್ರವೃತ್ತಿಯು ಅವಲಂಬನದಲ್ಲಿ ತುಂಬಾ ಇಷ್ಟವಿಲ್ಲವೆಂಬದನ್ನು ಊಹಿಸಬಹುದು. ಮುಂದಿನ ಕಾರಿಕೆಯಲ್ಲಿ **ದೃಪ್ತಸ್ಯತು** ಎಂಬಲ್ಲಿರುವ **ತು** ಶಬ್ದದಿಂದಲೂ ಇದನ್ನು ಊಹಿಸಬಹುದು. ಸ್ವಾಮಿಯು ಈ ಪ್ರಪನ್ನನಿಗೆ ಯಾವಾಗ ನಿರ್ಯಾಣವನ್ನುಂಟುಮಾಡುವನೋ ಮಾಡಲಿ ಎಂದು ಆತನಿಗೆ ಸರ್ವವಿಧದಲ್ಲೂ ಕಾದಿದ್ದು ಅನಂತರ ಆರ್ಚಿರಾದಿಗತಿಯಿಂದ ನಿತ್ಯವಿಭೂತಿಯನ್ನು ಸೇರುವದು ಉಚಿತವು ಆದರೆ ಆರ್ತನು ಮುಂದೆ ಜೀವಿಸಿರಲು ಇಷ್ಟವಿಲ್ಲದವನಾಗಿರುವದರಿಂದ ಆತನು ದೇಹತ್ಯಾಗ ಮಾಡುವದೇನೋ ದೋಷವಿಲ್ಲವೆಂದು ಅಷ್ಟುಮಾತ್ರ ಹೇಳಿದರು. ಶಾಸ್ತ್ರವಿಹಿತವಾದುದೇ ಎಂದು ಮುಂದೆ ಹೇಳುತ್ತಾರೆ.

**ಕಾರಿಕೆಗೆ ಅರ್ಥವು :- ದೃಪ್ತಸ್ಯತು** - ದೃಪ್ತನ ವಿಷಯದಲ್ಲಾದರೋ, **ಯಥಾ ಶಾಸ್ತ್ರಂ** - **"ಸರ್ವಥೈವಾ ತ್ಮಾನಂ ಗೋಪಾಯೀತ'"** ಎಂಬಲ್ಲಿ ಶಾಸ್ತ್ರದಲ್ಲಿ ಹೇಳಿರುವ ಹಾಗೆ, **ಚಿರಂಜೀವಿತುಮಿಚ್ಛತಃ** - ಬಹುಕಾಲ ಬದುಕಿರಲು ಅಪೇಕ್ಷಿಸುವನಾದುದರಿಂದ, **ಪ್ರಾಣರಕ್ಷಣಶಾಸ್ತ್ರಾರ್ಥ ಲಂಘನಂತು** - ಮೇಲೆ ಹೇಳಿರುವ ಹಾಗೆ ಪ್ರಾಣವನ್ನು ಸರ್ವಥೈವ ರಕ್ಷಿಸಿಕೊಳ್ಳತಕ್ಕದ್ದೆಂಬ ಭಗವದಾಜ್ಞೆಯ ಉಲ್ಲಂಘನವಾದರೋ, **ಅಪರಾಧನಮ್'** - ದೋಷಯುಕ್ತವಾದದ್ದು. ಆತನಿಗೇನೋ ದೋಷಯುಕ್ತವಾದುದಲ್ಲವು. ದೃಪ್ತನಾದವನು ವ್ಯಾಧಿ ಬಂದರೆ ಸರಿಯಾಗಿ ಚಿಕಿತ್ಸೆಯನ್ನು ಮಾಡಿಕೊಳ್ಳಬೇಕು. ಆದದ್ದಾಗಲಿ ಎಂದರೆ ದೋಷವು. ಸಾಹಸವನ್ನುಮಾಡಿ ಪ್ರಾಣತ್ಯಾಗಮಾಡಕೂಡದು. ಒಬ್ಬನು ನದಿಯಲ್ಲಿ ಬಿದ್ದರೆ ತನಗೆ ಈಜುವದು ತಿಳಿಯದೆ ನೀರಿನಲ್ಲಿ ಧುಮುಕುವದು ಅಪರಾಧವು. ಮನೆಯಲ್ಲಿ ಸರ್ಪವು ಬಂದರೆ ಅದನ್ನು ಕೈಯಿಂದ ಹಿಡಿಯುತ್ತೇನೆಂದು ಹೋಗುವದು ಸರಿಯಲ್ಲವು. ಅವೆಲ್ಲವೂ ದುರ್ಮರಣವೆಂದೆನಿಸಿ ದೋಷಾವಹವಾಗುತ್ತದೆಂಬ ಭಾವವು. ರೋಷದಿಂದ ಹೋಗಿ ಶತ್ರುವನ್ನು ಹೊಡೆಯಲು ಯತ್ನಿಸಿ ತಾನು ಸಾಯುವದೂ ಸಹ ದೋಷವು.

**ಯೋಗಿಗಳ್ ಯೋಗವಿಶೇಷತ್ತಾಲೇ ದೇಹನ್ಯಾಸಮ್ ಪಣ್ಣುಮಾಪ್ಪೋಲೆ ಆರ್ತ್ಯತಿಶಯ ಮುಡೈಯವನ್ ಪ್ರಪತ್ತಿಯಾಲೇ ದೇಹನ್ಯಾಸಮ್ಪಣ್ಣುಗೈಕ್ಕು ತೀರ್ಥಪ್ರವೇಶಾದಿಗಳಿಲ್ ಪೋಲೇ ಯುಗ ವಿಶೇಷ ನಿಯಮಮಿಲ್ಲೈ.**

---

ಆದರೆ, ಜಲಾಗ್ನಿಪ್ರವೇಶಾದಿಗಳು, **"ಸ್ವರ್ಗಾದ್ಯರ್ಥಂ ತಪಸ್ತಪ್ತ್ವಾ ಸುಮಹತ್ಪೂರ್ಣಮಾನಸಃ । ತೀರ್ಥಾದಿಷುತ್ಯಜೇದ್ದೇಹಂ ನೈವಂ ಕಲಿಯುಗೇ ಭವೇತ್"** ಎಂಬ ವಚನಾನುಸಾರ ಕಲಿಯುಗದಲ್ಲಿ ಆರ್ತನಿಗೆ ನಿಷಿದ್ಧವೇ ಎಂಬ **ಶಙ್ಕಾ** ದಲ್ಲಿ ಅದು ಆರ್ತಪ್ರಪನ್ನನನ್ನು ಕುರಿತು ಹೇಳಿದ್ದಲ್ಲವೆಂದು ತಿಳಿಸುತ್ತಾರೆ. ಹಾಗಾದರೆ ಯಾರನ್ನು ಅದು ಹೇಳಿದುದು ಎಂದರೆ **ಸ್ವರ್ಗಾದ್ಯರ್ಥಂ** ಎಂಬುದರಿಂದ ವ್ಯಕ್ತವಾಗುತ್ತದೆ. ಸ್ವರ್ಗವೇ ಮೊದಲಾದಸಮ ಫಲವುಳ್ಳವು ಬ್ರಹ್ಮಕುಬೇರಾದಿ ಲೋಕಗಳ ಪ್ರಾಪ್ತಿಯು ಹೇಳಲ್ಪಟ್ಟಿತು. ದಿವ್ಯ ವೈಕುಂಠ ಪ್ರಾಪ್ತಿಯು ಅಭಿಪ್ರಾಯವಾಗಿದ್ದರೆ, **ಗಚ್ಛಲೋಕಾನ್ ಅನುತ್ತಮಾನ್** ಎಂಬಲ್ಲಿ ಹೇಳಿರುವ ಹಾಗೆ ಅದಕ್ಕಿಂತ ಸಮ ಮತ್ತು ಉತ್ತಮ ಲೋಕಗಳಿಲ್ಲ ವಾದುದರಿಂದ **ಆದಿ**- ಶಬ್ದ ಪ್ರಯೋಗವು ಸರಿಯಲ್ಲವಾಗುತ್ತದೆ. **ನೈವಂ ಕಲಿಯುಗೇ ಭವೇತ್** - ಎಂಬ ವಿಧಿಯು ಆರ್ತಪ್ರಪನ್ನನನ್ನು ಕುರಿತದ್ದು ಅಲ್ಲವೆಂದು ತಿಳಿಸುತ್ತಾರೆ.—

**ಯೋಗಿಗಳ್** - ಭಕ್ತಿಯೋಗ ನಿಷ್ಠರು, ಉಪಾಸಕರು, **ಯೋಗವಿಶೇಷತ್ತಾಲೇ** - ತಾವು ಅನುಷ್ಠಿಸುತ್ತಿರುವ ಉಪಾಸನಾ ಮೂಲಕವಾಗಿಯೇ, **ದೇಹನ್ಯಾಸಮ್** - ಶರೀರತ್ಯಾಗವನ್ನು, **ಪಣ್ಣುಮಾಪ್ಪೋಲೇ** - ಮಾಡುವಹಾಗೆ **ಆರ್ತ್ಯತಿಶಯ ಮುಡೈಯವನ್** - ದೈನ್ಯವನ್ನು ಹೊಂದಿ ಈ ದುಃಖಕರವಾದ ಲೋಕದಲ್ಲಿ ಇನ್ನು ಇರಲಾರನೆಂದು ಶೋಕಾತಿಶಯವನ್ನು ಹೊಂದಿದವನು, **ಪ್ರಪತ್ತಿಯಾಲೇ** - ಶರಣಾಗತಿಯನ್ನು ಅನುಷ್ಠಿಸುವದರ **ಮೂಲಕ, ದೇಹನ್ಯಾಸಪಣ್ಣುಗೈಕ್ಕು** - ಶರೀರ ತ್ಯಾಗಮಾಡುವದಕ್ಕೆ, **ತೀರ್ಥಪ್ರವೇಶಾದಿಗಳಿಲ್ ಪೋಲೇ** - ಸ್ವರ್ಗಾದಿಭೋಗಗಳ ಅಪೇಕ್ಷೆಗಾಗಿ ಕೃತತ್ರೇತಾ ದ್ವಾಪರಗಳಲ್ಲಿ ಅನುಮತಿಯೂ ಕಲಿಯುಗದಲ್ಲಿ ಕೂಡದೆಂಬ ನಿಯಮವಿರುವ ಹಾಗೆ, **ಯುಗ ವಿಶೇಷನಿಯಮಮಿಲ್ಲೈ** - ಆರ್ತನ ವಿಷಯದಲ್ಲಿ ಇಂತಹ ನಿಯಮವೇನೂ ಇಲ್ಲವು. ಎಂದರೆ ಕಲಿಯುಗದಲ್ಲೂ ಕೂಡ, ಆರ್ತನಿಗೆ ದೇಹನ್ಯಾಸಕ್ಕೆ ಶಾಸ್ತ್ರಾನುಮತಿಯುಂಟೆಂದು ಹೇಳಿದರು.

ಸರ್ವಥೈವ ಆತ್ಮಾರಕ್ಷಣೀಯವೆಂದು ಪ್ರಾಜ್ಞರೆಲ್ಲಾ ಹೇಳುತ್ತಿರುವಾಗ ಶಾಸ್ತ್ರವು ಆರ್ತನಿಗೆ ದೇಹತ್ಯಾಗಮಾಡುವದಕ್ಕೆ ಅನುಮತಿಯನ್ನು ಹೇಗೆ ಇತ್ತಿತು ಎಂದರೆ ಹೇಳುತ್ತಾರೆ—ದೇಹನಾಶವಾದರೂ ಆತ್ಮಾವಿಗೆ ನಾಶವಿಲ್ಲವೆಂಬುದು ಗೀತಾ

**ಇವನ್ನಾರ್ತ ಪ್ರಪನ್ನನೇ ಎಲ್ಲಾರಿಲುಮ್‌ ಕಡುಗ ಆತ್ಮರಕ್ಷಣಮ್‌ ಪಣ್ಣುಗಿರವನ್.**

---

ದ್ವಿತೀಯಾಧ್ಯಾಯದಲ್ಲಿ ನಿಪುಣತರವಾಗಿ ಅರ್ಜುನನಿಗೆ ಶ್ರೀ ಕೃಷ್ಣಭಗವಾನರವರು ಉಪದೇಶಿಸಿರುತ್ತಾರೆ. ಆದುದರಿಂದ ಈ ದೇಹತ್ಯಾಗದ ಮೂಲಕ ಈಗಿರುವ ಈ ದುಃಖಭಾಕ್ಕಾಗಿರುವ ದುರವಸ್ಥೆಯನ್ನು ಹೋಗಲಾಡಿಸಿಕೊಂಡು, ದುಃಖಗಂಧವೇ ಇಲ್ಲದ ಸ್ಥಳಕ್ಕೆ ಹೋಗಿ ಸೇರಬೇಕೆಂದು ಅಪೇಕ್ಷಿಸಿ ಆತ್ಮರಕ್ಷಣೋಪಾಯವನ್ನು ಮಾಡಿಕೊಳ್ಳುವನಾದುದರಿಂದ ಅಂತವನು ಮಾನನೀಯನಾದುದರಿಂದ ಶಾಸ್ತ್ರಾನುಮತಿಯು ಎಂದು ಹೇಳುತ್ತಾರೆ—ಆತ್ಮರಕ್ಷಣೆಮಾಡಿಕೊಳ್ಳುವದರಲ್ಲಿ ತುಂಬಾ ಆದರವುಳ್ಳವನಾದುದರಿಂದಲೇ ಮುಂದಿನ ವಾಕ್ಯದಲ್ಲಿ **ಎಲ್ಲಾರಿಲುಮ್‌ ಕಡಗ ಆತ್ಮರಕ್ಷಣ ಪಣ್ಣುಗಿರವನ್** ಎಲ್ಲರಿಗಿಂತಲೂ ಶೀಘ್ರದಲ್ಲಿ ಆತ್ಮೋಜ್ಜೀವನವನ್ನು ಮಾಡಿಕೊಳ್ಳುವವನು ಆರ್ತನು ಎಂದು ಹೇಳುತ್ತಾರೆ. ಆದುದರಿಂದ ದೃಪ್ತಪ್ರಪನ್ನರಿಗಿಂತಲೂ ಆರ್ತಪ್ರಪನ್ನನು ಆತ್ಮರಕ್ಷಣೆಯು ಬೇಗನೇ ಆಗಬೇಕೆಂದು ಕಾತರವುಳ್ಳವನಾದುದರಿಂದ ಶಾಸ್ತ್ರಾನುಮತಿ ಎಂಬ ಭಾವವು. ಅಂತವರು ಅತಿ ವಿರಳರೂ ಎಂಬ ಭಾವವೂ ತೋರಿಬರುತ್ತದೆ.

**ಇವನ್ನಾರ್ತ ಪ್ರಪನ್ನನೇ** – ಈ ಆರ್ತ ಪ್ರಪನ್ನನೇ, **ಎಲ್ಲಾರಿಲುಮ್‌** – ಎಲ್ಲಾ ಪ್ರಪನ್ನರಲ್ಲೂ, **ಕಡುಗ** - ಶೀಘ್ರದಲ್ಲೇ, **ಆತ್ಮರಕ್ಷಣಮ್ಪಣ್ಣುಗಿರವನ್** – ಆತ್ಮ ರಕ್ಷಣವನ್ನು ಮಾಡಿಕೊಳ್ಳುವವನು. ದೇಹತ್ಯಾಗವು ಹೇಗೆ ಆತ್ಮರಕ್ಷಣವಾದೀತು ? ಎಂಬುದೀಗ ಪ್ರಶ್ನೆಯು. ಈ ಆತ್ಮಾ, ಜ್ಞಾನೈಕಾಕಾರನು, ದಿವ್ಯ ವೈಕುಂಠದಲ್ಲೇ ಸುಖವಾಗಿರಲು ಯೋಗ್ಯನು. ಕರ್ಮಮೂಲಕವಾಗಿ ದೇಹಪ್ರಾಪ್ತಿಯುಂಟಾಗಿ ಅದರಿಂದ ಈತನ ಜ್ಞಾನವು ತಿರೋಹಿತವಾಗಿ, ಬಂಧಕಗಳಾದ ಸುಕೃತ ದುಷ್ಕೃತಗಳನ್ನು ಮಾಡುತ್ತಾ, ಬಂಧದಲ್ಲಿದ್ದು ಕ್ಲೇಶಗಳನ್ನನುಭವಿಸುತ್ತಿರುವವನು. ಆದುದರಿಂದ ಈ ದೇಹವು ಆತನಿಗೆ ಇಷ್ಟವಿಲ್ಲದುದು. ದೇಹನಿವೃತ್ತಿ ಯಾವಾಗ ಆಯಿತೋ, ಆಗ ಅನಿಷ್ಟನಿವೃತ್ತಿಯಾಯಿತು. ಮರಣವು ಅಂತವನಿಗೆ ಅನಿಷ್ಟ ನಿವೃತ್ತಿಯನ್ನು ಮಾಡಿಕೊಡುತ್ತದೆ. ಅನಿಷ್ಟನಿವೃತ್ತಿಯಿಂದ ಇಷ್ಟಪ್ರಾಪ್ತಿಯು ಲಭಿಸುತ್ತದೆ ಹೀಗೆ ಆರ್ತನು ಆತ್ಮರಕ್ಷಣೆ ಮಾಡಿಕೊಳ್ಳುವದರಲ್ಲಿ ತುಂಬಾ ತ್ವರೆಯುಳ್ಳವನಾಗಿ ಅಗ್ರೇಸರನೆಂದೂ, ಅದರಿಂದಲೇ ಶಾಸ್ತ್ರ ಸಮ್ಮತಿಯೆಂದೂ ಹೇಳಿದರು.

**ಮುಂದೆ ಆರ್ತ ದೃಪ್ತ ಶಬ್ದಗಳಿಗೆ ಅರ್ಥವನ್ನು ವಿಶದೀಕರಿಸುತ್ತಾರೆ.**

---

ಇಲ್ಲಿ ಆರ್ತ ಶಬ್ದಕ್ಕೆ ಗೀತಾ ಶ್ಲೋಕವಾದ **ಚತುರ್ವಿಧಾಭಜನ್ತೇ ಮಾಂಜನಾ ಸುಕೃತಿನೋಽರ್ಜುನ। ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀಚ**

## ಅಥ ಆರ್ತ ದೃಪ್ತ ಶಬ್ದಯೋರರ್ಥೌ ವದತಿ

**ಇಪ್ಪಡಿ ಆರ್ತ್ತ್ಯ, ದೃಪ್ತ್ತ್ಯ, ಎಙ್ಗಾರ ಪಿರವುಮ' ಇವನುಕ್ಕು ಪಿರಸ್ಥ ಶೋಕತ್ತಿಲ' ವೈಷಮ್ಯ ಮುಡಿಯಾಗ ಚೊಲ್ಲುಗಿರದತ್ತನ್ನೈ, ಒರುವನುಕ್ಕು**

---

**ಭರತರ್ಷಭ"** ಎಂಬಲ್ಲಿರುವ ಆರ್ತ ಶಬ್ದಕ್ಕೆ ಶ್ರೀ ಯತಿವರ್ಯರು **"ಪ್ರತಿಷ್ಠಾಹೀನಃ ಭ್ರಷ್ಟೈಶ್ವರ್ಯಃ ಪುನಸ್ತತ್ಪ್ರಾಪ್ತಿಕಾಮಃ"** ಪ್ರತಿಷ್ಠಿತ ಐಶ್ವರ್ಯವನ್ನು ಕಳೆದು ಕೊಂಡು ಪುನಃ ಅದನ್ನು ಅಪೇಕ್ಷಿಸುವವನೆಂದು ಹೇಳಿರುವ ಅರ್ಥವೇ ? ಈ ಆರ್ತ ನಿಗೆ ಐಹಿಕ ಕಾಮನೆಯಿರುವದರಿಂದ ಮೋಕ್ಷವಿಲ್ಲವೆಂದು ಅರ್ಜುನನಿಗೆ ಉಪ ದೇಶಿಸಿರುತ್ತಾರೆ. ಹಾಗಾದರೆ ಇಲ್ಲಿನ ಆರ್ತ ಶಬ್ದಾರ್ಥವೇನು ? ದೃಪ್ತ ಶಬ್ದಕ್ಕೆ ಗರಿಷ್ಟನು ಎಂಬ ಅರ್ಥವಾಗುತ್ತದೆ. **"ಹೃಷ್ಟೋ ದೃಪ್ಯತಿ, ದೃಪ್ತೋಧರ್ಮಮತಿ ಕ್ರಾಮತಿ ಧರ್ಮಾತಿಕ್ರಮೇ ಖಲು ಪ್ರನರ್ನರಕಃ"** "ಸಂತುಷ್ಟನು ಅಹಂಕಾರ ಪಡುವನು, ಅಹಂಕಾರಿಯು ಧರ್ಮವನ್ನು ಅತಿಕ್ರಮಿಸುವನು, ಧರ್ಮಾತಿಕ್ರಮ ಉಂಟಾಗಲು ನರಕವು" ಎಂಬಲ್ಲಿ ಹೇಳಿರುವ ಅರ್ಥವೇ ದೃಪ್ತ ಶಬ್ದಕ್ಕೇ ಎಂದರೆ ಈ ದೃಪ್ತನಿಗೂ ಮೋಕ್ಷವಿಲ್ಲವು. ಇಲ್ಲಿ ಹೇಳಿರುವ ದೃಪ್ತಪ್ರಪನ್ನರಿಗೆ ದೇಹಾ ವಸಾನಾನಂತರ ಮೋಕ್ಷವು ಹೇಳಲ್ಪಟ್ಟಿದೆ. ಆರ್ತನಿಗೇನೋ ಮೋಕ್ಷವಿಲ್ಲವೇ ಎಂಬ ಶೋಕ ಉಂಟು. **ಮಾಶುಚಃ** ಎಂಬ ಪ್ರಯೋಗವೇನೋ ಸಾರ್ಥಕ ವಾದುದು ಆಯಿತು. ದೃಪ್ತನಿಗೆ ಮರಣಾನಂತರ ಮೋಕ್ಷದ ಆಶೆಯು. ಆತನು ಶೋಕಿಸುವದಿಲ್ಲವೇ. ಗರ್ವಿಷ್ಠನಿಗೆ ಶೋಕವೆಲ್ಲಿಯದು ? ಇತ್ಯಾದಿ ಈತನ ವಿಷಯ ದಲ್ಲಿ **ಮಾಶುಚಃ** ಎಂದು ಹೇಳುವದು ನಿರರ್ಥಕವಲ್ಲವೋ ? ಹಾಗಾದರೆ ಈ ಚರಮ ಶ್ಲೋಕವು ಆತನ ವಿಷಯದಲ್ಲಿ ಅನ್ವಯಿಸುತ್ತದೆಯೇ ? ಇತ್ಯಾದಿ ಶಂಕಾ ಗಳಿಗೆ ಉತ್ತರವನ್ನು ಹೇಳುತ್ತಾರೆ. ಆರ್ತಶಬ್ದಕ್ಕೆ ಗೀತಾಪ್ರಯೋಗದ ಅರ್ಥ ವಲ್ಲವು. ದೃಪ್ತ ಶಬ್ದಕ್ಕೆ **ಗರಿಷ್ಠ** ನೆಂಬ ಅರ್ಥವೂ ಅಲ್ಲವು. ಇಲ್ಲಿ ಇಬ್ಬರೂ **ಮೋಕ್ಷಾ ರ್ಥಿ**ಗಳಾಗಿ ಶರಣಾಗತಿಯನ್ನು ಅನುಷ್ಠಿಸಿದವರೇ. ಇಬ್ಬರೂ **ಮಾಶುಚಃ** ಎಂಬಲ್ಲಿ ಹೇಳಲ್ಪಟ್ಟವರೇ. ಅವರುಗಳಿಗಿರುವ ವ್ಯತ್ಯಾಸವನ್ನು ತಿಳಿಸುತ್ತಾರೆ. ಇಲ್ಲಿ ಆರ್ತದೃಪ್ತ ಶಬ್ದಗಳು ಮೇಲೆ ಹೇಳಿದ ಅರ್ಥಗಳುಳ್ಳವಲ್ಲವೆಂದೂ ಭಿನ್ನವಾದ ಅರ್ಥಗಳುಳ್ಳ ವೆಂದೂ ದೃಪ್ತಪ್ರಪನ್ನನಿಗೂ ಶೋಕ ಉಂಟೆಂದೂ, ಆದುದರಿಂದ ಚರಮಶ್ಲೋ ಕದ **ಮಾಶುಚಃ** ಎಂಬ ಪ್ರಯೋಗವು ಸಾರ್ಥಕವಾದುದ್ದೆಂದೂ ತಿಳಿಸುತ್ತಾರೆ:—

**ಇಪ್ಪಡಿ** – ಈ ರೀತಿಯಲ್ಲಿ **ಆರ್ತನು ದೃಪ್ತನು, ಎಙ್ಗಾರ ಪಿರವುಮ'** – ಎನ್ನುವದರಲ್ಲಿ ಭೇದವು, **ಇವನುಕ್ಕು** – ಈ ಪ್ರಪನ್ನನಿಗೆ, **ಪಿರನ್ದ ಶೋಕತ್ತಿಲ'** – ಉಂಟಾದ **ಶೋಕದಲ್ಲಿ, ವೈಷಮ್ಯಮುಡಿಯಾಗ** – ತಾರತಮ್ಯ ಮೂಲಕವಾಗಿರು

**ಶೋಕಮಿಲ್ಲಾ ವ್ಕೆಯುನ್ರು. ಜನ್ಮಾಂತರಾದಿ ಮಾತ್ರಮ್‌ ಶೋಕನಿಮಿತ್ತ ಮಾಯ್‌ ಏತೇನು ಒರುನಾಳ್‌ ಮೋಕ್ಷಮ್‌ ಪೆರುವೋ ಮೆನ್ರು ತೇರಿ ಯಿರುಕ್ಕುಮವರ್ ಇಜ್ಜ್ಗ ದೃಪ್ತರ್. ಅಲ್ಲದು ಉತ್ಕೃಷ್ಟಜನಾವಮಾನಾದಿ ಹೇತು ವಾನ ಗರ್ವರೂಪಮಾನ ಅನಾತ್ಮ ಗುಣತ್ತೈಯುಡೈಯವನಲ್ಲರ್.**

---

ವದನ್ನು **ಶೊಲ್ಲುಗಿರದು ಅತ್ತನೇ** – ಹೇಳುತ್ತದಷ್ಟೇ ವಿನಾ ಇನ್ನು ಯಾವ ಬೇಧವೂ ಇಲ್ಲವು. **ಒರುವನುಕ್ಕು** – ಆ ಇಬ್ಬರಲ್ಲಿ ಒಬ್ಬನಾದ ದೃಪ್ತನಿಗೆ, **ಶೋಕಮಿಲ್ಲಾ ವ್ಕೆಯುನ್ರು** – ಶೋಕವಿಲ್ಲಾ ಎಂದಲ್ಲವು; ಅಂದರೆ ಆತನಿಗೆ ಶೋಕ ಉಂಟೆಂಬ ಭಾವವು. ಆರ್ತನು ಆ ಕ್ಷಣದಲ್ಲೇ ದೇಹತ್ಯಾಗ ಮಾಡುವದ ರಿಂದ ಆತನಲ್ಲಿ ಶೋಕ ಉಂಟೆಂಬುದು ವ್ಯಕ್ತವಾದುದರಿಂದ ಆತನ ವಿಷಯವಾಗಿ ಇಲ್ಲಿ ಹೇಳಲಿಲ್ಲವು. ದೃಪ್ತನಲ್ಲಿ ಶೋಕ ಉಂಟೋ ಎಂಬುದನ್ನು ಮಾತ್ರ ಚರ್ಚಿಸು ತ್ತಾರೆ.

**ಜನ್ಮಾಂತರಾದಿಮಾತ್ರಮ್‌** – ಮುಂದಕ್ಕೆ ಬೇರೆ ಜನ್ಮವೇ ಮೊದಲಾದವು, **ಶೋಕನಿಮಿತ್ತಮಾಯ್‌** – ಬೇಡವೆಂಬ ಶೋಕವೇ ಕಾರಣವಾಗಿ, **ಏದೇನು ಒರುನಾಳ್‌** – ಯಾವುದೋ ಒಂದು ದಿನ, **ಮೋಕ್ಷಮ್‌ ಪೆರುವೋಮ್‌** – ಮೋಕ್ಷವನ್ನು ಹೊಂದುವೆವು, **ಎನ್ರು** – ಎಂಬದಾಗಿ, **ತೇರಿಯಿರುಕ್ಕುಮ್‌ ಅವನ್‌** – ಮಹಾವಿಶ್ವಾಸದಿಂದ ನಂಬಿರುವವನು, **ಇಜ್ಜ್ಗ** – ಈ ಸಂದರ್ಭದಲ್ಲಿ, **ದೃಪ್ತರ್.** ಹೀಗೆ ನಂಬಿರುವದರಿಂದ ದೃಪ್ತನೆನಿಸಿರುವವನು. ಸ್ವಾಮಿಯು ದೇಹಾ ವಸಾನಾನಂತರ ಮೋಕ್ಷವನ್ನು ಕೊಡುವನೆಂಬ ಪೂರ್ಣನಂಬಿಕೆಯಿಂದಿರುವವನು. **ಅಲ್ಲದು** – ಹಾಗಲ್ಲದೆ **ಉತ್ಕೃಷ್ಟಜನಾವಮಾನಾದಿ ಹೇತುವಾನ** – ಉತ್ಕೃಷ್ಟ ಜನರಿಗೆ, ಸಾಧುಜನರಿಗೆ, **ಅವಮಾನಾದಿ** – ಅವಮಾನ ಮಾಡೋಣ ಆದಿ ಶಬ್ದ ದಿಂದ ಮನಸ್ಸಿನ ಖಿನ್ನತೆ ಮೊದಲಾದವು ಹೇಳಲ್ಪಟ್ಟವು, ಇವುಗಳಿಗೆ ಕಾರಣವಾದ, **ಗರ್ವರೂಪಮಾನ** – ಗರ್ವರೂಪವಾದ, **ಅನಾತ್ಮಗುಣತ್ತೈಯುಡವನಲ್ಲರ್** ಆತ್ಮಾವಿಗೆ ಸ್ವರೂಪವನ್ನುಂಟುಮಾಡದಿರುವ ಗುಣವನ್ನು ಹೊಂದಿದವನಲ್ಲವು.

ಆರ್ತನಿಗೂ ದೃಪ್ತನಿಗೂ ಶೋಕದಲ್ಲಿ ತುಂಬಾ ವ್ಯತ್ಯಾಸವಿಲ್ಲವು. ಶೋಕದಲ್ಲಿ ಸ್ವಲ್ಪ ವೈಷಮ್ಯವೇ ವ್ಯತ್ಯಾಸವೆಂದು ಹೇಳಿದರು. ಇಬ್ಬರಿಗೂ ಜನ್ಮಾಂತರ ಬೇಡ ವೆಂದೂ, ಸರ್ವಾಪರಾಧವೂ ಕಳೆಯಬೇಕೆಂದೇ ಶೋಕವು. ಆರ್ತನಾದರೋ ವಿಳಂಬವನ್ನು ಸಹಿಸನು. ದೃಪ್ತನಾದರೋ ವಿಳಂಬವನ್ನು ಸಹಿಸುವವನು. ಆರ್ತ ನಿಗಾದರೋ ಶೋಕದಲ್ಲಿ ಅತಿಶಯವು; ಎರಡು ವಿಧವಾಗಿ ಶೋಕವು. ಜನ್ಮಾಂತರ ವಿಲ್ಲದಹಾಗೆ ಸರ್ವಪಾಪಗಳಿಂದ ಮೋಕ್ಷಣ, ಮತ್ತು ಈಗಲೇ ಮೋಕ್ಷಪ್ರಾಪ್ತಿ ಬೇಕು; ಇಲ್ಲಿರುವದು ಅಗ್ನಿಮಧ್ಯದಲ್ಲಿರುವಹಾಗೆ ಆತನಿಗೆ ಶೋಕವು. ದೃಪ್ತ

**ಇವ್ವಾರ್ತ್ತ ಪ್ರಪನ್ನನೇ ಎಲ್ಲಾರಿಲುಮ್' ಕಡುಗ ಆತ್ಮರಕ್ಷಣಮ್' ಪಣ್ಣುಗಿರವರ್.**

---

ದ್ವಿತೀಯಾಧ್ಯಾಯದಲ್ಲಿ ನಿಪುಣತರವಾಗಿ ಅರ್ಜುನನಿಗೆ ಶ್ರೀ ಕೃಷ್ಣಭಗವಾನರವರು ಉಪದೇಶಿಸಿರುತ್ತಾರೆ. ಆದುದರಿಂದ ಈ ದೇಹತ್ಯಾಗದ ಮೂಲಕ ಈಗಿರುವ ಈ ದುಃಖಭಾಕ್ಕಾಗಿರುವ ದುರವಸ್ಥೆಯನ್ನು ಹೋಗಲಾಡಿಸಿಕೊಂಡು, ದುಃಖಗಂಧವೇ ಇಲ್ಲದ ಸ್ಥಳಕ್ಕೆ ಹೋಗಿ ಸೇರಬೇಕೆಂದು ಅಪೇಕ್ಷಿಸಿ ಆತ್ಮರಕ್ಷಣೋಪಾಯವನ್ನು ಮಾಡಿಕೊಳ್ಳುವನಾದುದರಿಂದ ಅಂತವನು ಮಾನನೀಯನಾದುದರಿಂದ ಶಾಸ್ತ್ರಾನುಮತಿಯು ಎಂದು ಹೇಳುತ್ತಾರೆ—ಆತ್ಮರಕ್ಷಣೆಮಾಡಿಕೊಳ್ಳುವದರಲ್ಲಿ ತುಂಬಾ ಆದರವುಳ್ಳವನಾದುದರಿಂದಲೇ ಮುಂದಿನ ವಾಕ್ಯದಲ್ಲಿ **ಎಲ್ಲಾರಿಲುಮ್' ಕಡಗ ಆತ್ಮರಕ್ಷಣ ಪಣ್ಣುಗಿರವರ್** ಎಲ್ಲರಿಗಿಂತಲೂ ಶೀಘ್ರದಲ್ಲಿ ಆತ್ಮೋಜ್ಜೀವನವನ್ನು ಮಾಡಿಕೊಳ್ಳುವವನು ಆರ್ತನು ಎಂದು ಹೇಳುತ್ತಾರೆ. ಆದುದರಿಂದ ದೃಪ್ತಪ್ರಪನ್ನರಿಗಿಂತಲೂ ಆರ್ತಪ್ರಪನ್ನನು ಆತ್ಮರಕ್ಷಣೆಯು ಬೇಗನೇ ಆಗಬೇಕೆಂದು ಕಾತರವುಳ್ಳವನಾದುದರಿಂದ ಶಾಸ್ತ್ರಾನುಮತಿ ಎಂಬ ಭಾವವು. ಅಂತವರು ಅತಿ ವಿರಳರೂ ಎಂಬ ಭಾವವೂ ತೋರಿಬರುತ್ತದೆ.

**ಇವ್ವಾರ್ತ್ತ ಪ್ರಪನ್ನನೇ** - ಈ ಆರ್ತ ಪ್ರಪನ್ನನೇ, **ಎಲ್ಲಾರಿಲುಮ್'** - ಎಲ್ಲಾ ಪ್ರಪನ್ನರಲ್ಲೂ, **ಕಡುಗ** - ಶೀಘ್ರವಲ್ಲೇ, **ಆತ್ಮರಕ್ಷಣಮ್ಪಣ್ಣುಗಿರವರ್** - ಆತ್ಮರಕ್ಷಣವನ್ನು ಮಾಡಿಕೊಳ್ಳುವವನು. ದೇಹತ್ಯಾಗವು ಹೇಗೆ ಆತ್ಮರಕ್ಷಣವಾದೀತು ? ಎಂಬುದೀಗ ಪ್ರಶ್ನೆಯು. ಈ ಆತ್ಮಾ, ಜ್ಞಾನೈಕಾಕಾರನು, ದಿವ್ಯ ವೈಕುಂಠದಲ್ಲೇ ಸುಖವಾಗಿರಲು ಯೋಗ್ಯನು. ಕರ್ಮಮೂಲಕವಾಗಿ ದೇಹಪ್ರಾಪ್ತಿಯುಂಟಾಗಿ ಅದರಿಂದ ಈತನ ಜ್ಞಾನವು ತಿರೋಹಿತವಾಗಿ, ಬಂಧಕಗಳಾದ ಸುಕೃತ ದುಷ್ಕೃತಗಳನ್ನು ಮಾಡುತ್ತಾ, ಬಂಧದಲ್ಲಿದ್ದು ಕ್ಲೇಶಗಳನ್ನನುಭವಿಸುತ್ತಿರುವವನು. ಆದುದರಿಂದ ಈ ದೇಹವು ಆತನಿಗೆ ಇಷ್ಟವಿಲ್ಲದುದು. ದೇಹನಿವೃತ್ತಿ ಯಾವಾಗ ಆಯಿತೋ, ಆಗ ಅನಿಷ್ಟನಿವೃತ್ತಿಯಾಯಿತು. ಮರಣವು ಅಂತವನಿಗೆ ಅನಿಷ್ಟನಿವೃತ್ತಿಯನ್ನು ಮಾಡಿಕೊಡುತ್ತದೆ. ಅನಿಷ್ಟನಿವೃತ್ತಿಯಿಂದ ಇಷ್ಟಪ್ರಾಪ್ತಿಯು ಲಭಿಸುತ್ತದೆ ಹೀಗೆ ಆರ್ತನು ಆತ್ಮರಕ್ಷಣೆ ಮಾಡಿಕೊಳ್ಳುವದರಲ್ಲಿ ತುಂಬಾ ತ್ವರೆಯುಳ್ಳವನಾಗಿ ಅಗ್ರೇಸರನೆಂದೂ, ಅದರಿಂದಲೇ ಶಾಸ್ತ್ರ ಸಮ್ಮತಿಯೆಂದೂ ಹೇಳಿದರು.

**ಮುಂದೆ ಆರ್ತ ದೃಪ್ತ ಶಬ್ದಗಳಿಗೆ ಅರ್ಥವನ್ನು ವಿಶದೀಕರಿಸುತ್ತಾರೆ.**

---

ಇಲ್ಲಿ ಆರ್ತ ಶಬ್ದಕ್ಕೆ ಗೀತಾ ಶ್ಲೋಕವಾದ **ಚತುರ್ವಿಧಾಭಜನ್ತೇ ಮಾಂಜನಾ ಸ್ಸುಕೃತಿನೋಽರ್ಜುನ । ಆರ್ತೋಜಿಜ್ಞಾಸುರರ್ಥಾರ್ಥೀ ಜ್ಞಾನೀಚ**

ಲೋಕ ಸಾರ್ವಭೌಮುವನ್ನಾಗಲಿ, ಚತುರ್ಮುಖಾಧಿಪತ್ಯವನ್ನಾಗಲಿ, ಕೈವಲ್ಯವನ್ನಾಗಲಿ, ಪರಮಪುರುಷನ ಪಾದಕಮಲ ರಜಸ್ಸಿನಲ್ಲಿ ಶರಣಾಗತಿಯನ್ನು ಅನುಷ್ಠಿಸಿದ ಪ್ರಪನ್ನರು ಬಯಸುವದಿಲ್ಲವು ಎಂಬುದು ಈ ಶ್ಲೋಕದ ಅರ್ಥವು.

ಈ ದೇಹವು **"ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ"** ವಿ. ಪು. ಎಂಬಲ್ಲಿ ಹೇಳಿರುವ ಹಾಗೆ ಕರ್ಮಮೂಲಕ ಉಂಟಾದುದು. ಶರಣಾಗತಿಯ ಮೂಲಕ ಕರ್ಮಫಲವೆಲ್ಲಾ ನಶಿಸಿ ಹೋಗುವದರಿಂದ ಒಂದು ಕ್ಷಣ ಕೂಡ ಆರ್ತ ಪ್ರಪನ್ನನಿಗೆ ಈ ಅನರ್ಥವನ್ನುಂಟುಮಾಡುವ ಉಪಭೋಗಗಳಲ್ಲಿ ಮನಸ್ಸನ್ನು ಸೆಳೆಯುವ ಈ ಶರೀರದಿಂದಿರಲು ಇಷ್ಟವಿಲ್ಲವೆಂದು ಹೇಳಿದರು. ಈ ದೇಹದಿಂದಿರುವದು ಜ್ವಲಿಸುವ ಅಗ್ನಿಯಲ್ಲಿ ಸಿಕ್ಕಿರುವಹಾಗೆ ಭಾವಿಸುವನು. ಲಕ್ಷ್ಮಣ ವಾಕ್ಯವಾದ **"ನ ದೇವ ಲೋಕಾಕ್ರಮಣಂ ನಾಮರ್ತ್ವತ್ವ ಮಹಂ ವೃಣೇ। ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇ ನ ತ್ವಯಾವಿನಾ"** ಎಂಬಲ್ಲಿ ಹೇಳಿರುವ ಹಾಗೆ ಆರ್ತ ಪ್ರಪನ್ನನ ಮನೋರಥವು, ಇವು ಯಾವುವನ್ನು ಬಯಸುವದಿಲ್ಲವು. ಆತನಿಗೆ ಪರಮ ಹಿತವಾದುದು ಪರಮಾತ್ಮಸಾಯುಜ್ಯವು. ಈ ಐಶ್ವರ್ಯಾದಿಗಳೆಲ್ಲಾ ಆತನಿಗೆ ನರಕಪ್ರಾಯವು.

**ಉಡಲು ಮುಯುರು ಮುಜ್ಞಒಟ್ಟೇ** ಎಂಬ ಪ್ರಾರಾಪಾಶುರವು ಯಾವುದೆಂದರೆ—

**"ಊಳಿಮುದಲ್ವ ನೊರುವನೇಯೆನ್ನು ವೊರುವ ನುಲಗೆಲ್ಲಾ ।
ಮೂಳಿತೋರುನ್ವನ್ನುಳ್ಳೇಪಡೈತ್ತು ಕಾ ತ್ತುಕ್ಕೆಡತ್ತುಳಲು ।
ಮಾಳಿವಣ್ಣನೆನ್ನ ಮ್ಮಾನನ್ವಣ್ಣರು ಮಾಲಿರು ಞಾಲೀ ।
ವಾಳಿ ಮನಮೇ ಕೈ ವಿಡ ಉಡಲು ಮುಯುರು ಮುಜ್ಞವೊಟ್ಟೇ ॥**

ತಿರು ೧೦. ೭. ೯. ಅರ್ಥವು. **ಊಳಿ ಮುದಲ್ವನೊರುವನೇ ಯೆನ್ನು ವೊರುವನ್** - ಕಾಲದಲ್ಲಿ ತೋರಿಬರುವ ಸಮಸ್ತ ಪದಾರ್ಥಗಳಿಗೂ ಕಾರಣಭೂತನಾಗಿ ಅವುಗಳೊಂದಿಗೆ ಸೇರಿ **"ಸದೇವ ಸೋಮ್ಯೇದಮಗ್ರಆಸೀತ್"** ಸೂಕ್ಷ್ಮಚಿದಚಿದ್ವಿಶಿಷ್ಟನಾದ, **ಏಕಮೇವಾದ್ವಿತೀಯಮ್** - ಉಪಾದಾನ ನಿಮಿತ್ತಾದಿ ಸರ್ವ ಕಾರಣನಾಗಿ ಒಬ್ಬನೆಂದು ಹೇಳಲ್ಪಟ್ಟವನು, **ಉಲಗೆಲ್ಲಾ ಊಳಿತೇರು** - ಸಮಸ್ತ ಲೋಕಗಳನ್ನು, ಸೃಷ್ಟ್ಯಾದಿ ಸರ್ವಕಾಲದಲ್ಲೂ, **ತನ್ನುಳ್ಳೇ ಪಡತ್ತು ಕಾತ್ತು** - ತನ್ನ ಸಙ್ಕಲ್ಪದಿಂದಲೇ ಸೃಷ್ಟಿಸಿ ರಕ್ಷಿಸಿ, **ಕೆಡತ್ತು** - ಪ್ರಳಯದಲ್ಲಿ ಎಲ್ಲವನ್ನೂ ಅಳಿಸಿಬಿಟ್ಟು, **ಉಳಲುಮ್ ಆಳಿವಣ್ಣ** - ಹೀಗೆ ಮಾಡುವದೇ ತನಗೆ ಯಾತ್ರೆಯಾಗಿ ಭಾವಿಸಿದ ಉದಾರವಾದ ಅಪರಿಚ್ಛಿನ್ನ ಸ್ವಭಾವನೇ, **ಎನ್ನಮ್ಮಾ** - ನನಗೆ ಸ್ವಾಮಿಯಾಗಿರುವ, **ಅಮ್ ಕಣ್** - ದರ್ಶನೀಯಮಾಗಿ ಶ್ರಮಪರಿಹಾರವಾದ,

**ತಿರುಮಾಲಿರು ಶೋಲೈಲೇ** - ಎಂಬುವ ದಿವ್ಯದ್ದೇಶದಲ್ಲಿ ಬಿಜಮಾಡಿಸಿ ದಿವ್ಯ ಮಂಗಳ ವಿಗ್ರಹಯುಕ್ತನಾಗಿ ತೋರುವ ಪರಮ ಪುರುಷನನ್ನು, **ಮನಮೇ** - ಓ ಮನಸ್ಸೇ ! **ಉಡಲುಮುಯಿರುಮು'** - ನಮಗೆ ಹೇಯವಾದ ದೇಹ ಮತ್ತು ಪ್ರಾಣವೂ, **ಮಙ್ಗ** - ನಶಿಸಿ ಹೋಗುವಹಾಗೆ, **ಒಟ್ಟು** - ಆಶ್ರಯಿಸು. **ಕೈವಿಡೇಲ'** - ಅವರ ಕೈಯನ್ನು ಬಿಡಬೇಡ, ಸರ್ವಕ್ಕೂ ಕಾರಣಭೂತನಾದ ಸರ್ವೇಶ್ವರನು ನಮ್ಮೊಂದಿಗೇ ಇದ್ದಾನೆ. ಆದರೆ ಈ ಹೇಯವಾಗಿ ದೋಷಯುಕ್ತವಾದ ಶರೀರಪ್ರಾಣಗಳಿಂದ ಬಿಡಿಸಿ, ತನ್ನನ್ನು ನಿತ್ಯವಿಭೂತಿಯನ್ನು ಹೊಂದುವ ತನಕ ಓ ಮನಸ್ಸೇ ಆತನ ಕೈಬಿಡಬೇಡ, ಆಶ್ರಯಿಸಿ ಅವುಗಳ ನಿವೃತ್ತಿಯನ್ನು ಹೊಂದು ಎಂಬ ತಾತ್ಪರ್ಯವು. ಆದುದರಿಂದ ಈ ಶರೀರದೊಂದಿಗೆ ಒಂದು ಕ್ಷಣವೂ ಕೂಡ ಇರಲಾರನೆಂದು ಶೋಕಿಸುವವನು ಆರ್ತನು ಎಂದು ಹೇಳಿದರು.

ಮುಂದೆ ಆರ್ತ ಶಬ್ದಕ್ಕೆ ಗೀತೆಯಲ್ಲಿ ಹೇಳಿರುವ ಆರ್ತಶಬ್ದಾರ್ಥವಲ್ಲವು. ಅಲ್ಲಿನ ಅರ್ಥವೇ ಬೇರೆ. ಇಲ್ಲಿನ ಆರ್ತಶಬ್ದಾರ್ಥವೇ ಬೇರೆ ಎಂದು ತಿಳಿಸುತ್ತಾರೆ— **ಆರ್ತೋ ಜಿಜ್ಞಾಸು ರರ್ಥಾರ್ಥೀ** - ಎಂದು ಗೀತಾ (೭. ೧೯) ಶ್ಲೋಕದಲ್ಲಿ ನಾಲ್ಕು ಜನ ಭಕ್ತರನ್ನು ಹೇಳುವ, **ಎಜ್ಗಿರಸ್ಥಳತ್ತಿಲ್** - ಎಂಬ ಸ್ಥಳದಲ್ಲಿ, **ಚೊಲ್ಲಪಟ್ಟವನಲ್ಲ** - ಹೇಳಲ್ಪಟ್ಟವನಲ್ಲವು. ಭಗವದ್ಗೀತೆಯಲ್ಲಿ ಹೇಳಿರುವ ಆರ್ತನು ಐಹಿಕವನ್ನು ಕಳೆದುಕೊಂಡು ಅದು ಪುನಃ ಬೇಕೆಂದು ದೈನ್ಯದಿಂದ ಶೋಕಿಸಿ ಬೇಡುವವನು. ಈ ಪ್ರಪನ್ನನಾದ ಆರ್ತನಹಾಗೆಯೇ ದೈನ್ಯದಿಂದ ಕಳಕೊಂಡದುಬೇಕೆಂದುಶೋಕಿಸುವವನು,ಆದರೆ ಮೋಕ್ಷವು ಆತನಿಗೆ ಬೇಕಾಗಿಲ್ಲವು. ಐಹಿಕಾಪೇಕ್ಷೆಯನ್ನು ಬೇಡುವವನು. ಆದುದರಿಂದ ಗೀತೆಯ ಆರ್ತಶಬ್ದಕ್ಕೆ ಶ್ರೀ ಯತಿವರ್ಯರು **"ಪ್ರತಿಷ್ಠಾಹೀನಃ, ಭ್ರಷ್ಟೈಶ್ವರ್ಯಃ ಪುನಸ್ತತ್ಪ್ರಾಪ್ತಿಕಾಮಃ** ಎಂದು ವ್ಯಾಖ್ಯಾನವನ್ನು ಬರೆದಿರುತ್ತಾರೆ. ಹಾಗಾದರೆ ಇಲ್ಲಿನ ಆರ್ತಶಬ್ದಾರ್ಥವು ಎಲ್ಲಿಯಾದರೂ ಉಪಪಾದಿತವೋ ಎಂದರೆ ? ಶ್ರೀ ಮದ್ರಾಮಾಯಣದಲ್ಲೂ ಇನ್ನೂ ಇತರ ಕಡೆಗಳಲ್ಲೂ ಉಪಯೋಗಿಸಿರುವದುಂಟೆಂದು ಉದಾಹರಿಸುತ್ತಾರೆ—ಶ್ರೀ ಮದ್ರಾಮಾಯಣ ಶ್ಲೋಕವು ಯಾವುದೆಂದರೆ **"ಆರ್ತೋ ವಾ ಯದಿವಾ ದೃಪ್ತಃ ಪರೇಷಾಂ ಶರಣಾಗತಃ । ಅರಿಃ ಪ್ರಾಣಾನ್ ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ"** ಎಂಬುದು. ಶತ್ರುಗಳ ಮಧ್ಯದಿಂದ ಒಬ್ಬ ಶತ್ರುವು ಬಂದು ಆತನು ವಿಳಂಬವನ್ನು ಸಹಿಸದೆ ಶರಣಾಗತಿಯನ್ನನುಷ್ಠಿಸಿ ಒಡನೆ ತನ್ನ ಮನೋರಥವನ್ನು ಪಡೆಯಬೇಕೆಂದು ಶರಣಾಗತನಾದರೂ, ಅಥವಾ ವಿಳಂಬವನ್ನು ಸಹಿಸಿಕೊಂಡು ನಿಧಾನವಾಗಿ ಮನೋರಥವನ್ನು ಹೊಂದಬೇಕಾದವನಾದರೂ ತನ್ನ ಪ್ರಾಣವನ್ನಾದರೂ ಬಿಟ್ಟು ರಕ್ಷಿಸತಕ್ಕದ್ದು ಪ್ರಾಜ್ಞನಾದ ಶಾಸ್ತ್ರಜ್ಞನ ಕರ್ತವ್ಯವು. ಇಲ್ಲಿ ಇವರುಗಳು

**“ಆರ್ತೋ ವಾ ಯದಿವಾ ದೃಪ್ತಃ” ಎಙ್ಗಿರ ವಿಡನು' ಅತಿವಾದ ಮೆನ್ಬಾರ್ಕ್ಕು ಇಙ್ಗನ್ವರ್ಥ ಸ್ಥಿತಿಯಿಲ್' ವಿವಾದ ಪ್ಪಣ್ಣವೊಣ್ಣಾದು. ಉಪಾಯಾನು**

---

**ಮೋಕ್ಷಾರ್ಥಿಯಾಗಿದ್ದರೆ, ಆರ್ತನು** - ವಿಳಂಬವನ್ನು ಸಹಿಸದೆ ಮೋಕ್ಷವನ್ನಪೇಕ್ಷಿಸುವವನು. **ದೃಪ್ತನು** - ವಿಳಂಬವನ್ನು ಸಹಿಸಿ ದೇಹಾವಸಾನದಲ್ಲಿ ಮೋಕ್ಷವನ್ನು ಬಯಸುವವನು. **ಆರ್ತೋ ವ ಯದಿವಾ ದೃಪ್ತಃ ಎಙ್ಗಿರ ವಿಡನು'** - ಎಂದು ಹೇಳಿರುವ ಸ್ಥಳವು, **ಅತಿವಾದ ಮೆನ್ಬಾರ್ಕ್ಕು** - ವಿಭೀಷಣ ಶರಣಾಗತಿಯ ವಿಷಯದಲ್ಲಿ ಇವೆಲ್ಲಾ ಹೇಳಲು ಪ್ರಸಕ್ತಿಯಿಲ್ಲದೆ ಅತಿ ಪ್ರಸಂಗವೆನ್ನುವವರಿಗೆ, **ಇಙ್ಗನ್ವರ್ಥಸ್ಥಿತಿಯಿಲ್'** - ಈ ಚರಮ ಶ್ಲೋಕಾರ್ಥದ ಸ್ಥಿತಿಯಲ್ಲಿ, ಮೋಕ್ಷಾರ್ಥ ಶರಣಾಗತಿಯು ಇಲ್ಲಿ ಹೇಳಿರುವದರಿಂದ, ಈ ಸಂದರ್ಭದಲ್ಲಿ, **ವಿವಾದಂ ಪಣ್ಣವೊಣ್ಣಾದು** - ಪೂರ್ವಪಕ್ಷವನ್ನು ಮಾಡತಕ್ಕದಲ್ಲವು, ವಿವಾದವನ್ನು ಮಾಡತಕ್ಕದಲ್ಲವು. ಶ್ರೀ ರಾಮಚಂದ್ರಪ್ರಭುವು ಸಾಮಾನ್ಯವಾಗಿ ಶರಣಾಗತಿ ಪ್ರಶಂಸೆಯನ್ನು ಮಾಡಿರಬಹುದು. ಆದುದರಿಂದ ಅತಿವಾದವೆಂದು ಪೂರ್ವಪಕ್ಷಿಗಳ ಅಭಿಪ್ರಾಯವು. ಸಾಮಾನ್ಯವಾಗಿ ಎಲ್ಲಾ ಪುರುಷಾರ್ಥಗಳಿಗಾಗಿ ಶರಣಾಗತಿಯು ಆ ಸಂದರ್ಭದಲ್ಲಿ ಉಪಪಾದಿತವಾಗಿದ್ದರೂ ವಿಭೀಷಣನ ಶರಣಾಗತಿಯು ಮೋಕ್ಷಕ್ಕಾಗಿಯೇ ಎಂಬುದು ಶ್ರೀ ಮದಾಚಾರ್ಯರ ಅಭಿಪ್ರಾಯವು. ಈ ಅಭಿಪ್ರಾಯವೇ ನಿಪುಣತರವಾಗಿ ಅಭಯಪ್ರಧಾನ ಸಾರದಲ್ಲಿ ಉಪಪಾದಿತವು. ಆಗಲಿ ವಿಭೀಷಣನು **ರಾಜ್ಯಕಾಂಕ್ಷೀ** ಎಂದೂ, ಹೇಳಿದೆಯಲ್ಲಾ ಎಂದರೆ ಲಂಕಾರಾಜ್ಯಕಾಂಕ್ಷಿಯೂ ಆತನಲ್ಲವು; ಅದು ಸ್ವಾಮಿದತ್ತವಾದುದು. ಆತನು ಅಪೇಕ್ಷಿಸುವದು **ಕಿಂಕರತ್ವಾಧಿರಾಜ್ಯವು** ದಿವ್ಯ ವೈಕುಂಠದಲ್ಲೂ, ಈ ವಿಭವಾವತಾರಕಾಲದಲ್ಲೂ ಸಹ.

**ಅತಿವಾದವು,** ಆರ್ತನ ಮತ್ತು ದೃಪ್ತನ ವಿಷಯದಲ್ಲೂ ಎಂದು ಮೂಲದಲ್ಲಿ **“ಆರ್ತೋ ವಾ ಯದಿವಾ ದೃಪ್ತಃ ಎಙ್ಗಿರ ವಿಡನು' ಅತಿವಾದ ಎನ್ಬಾರ್ಕ್ಕು** ಎಂದು ಇರುವದರಿಂದ ಎರಡಕ್ಕೂ ಅನ್ವಯಿಸುವಹಾಗೆ ಮಾಡತಕ್ಕದ್ದಾಗಿರುತ್ತದೆ.

ಸಾರದೀಪ ಮತ್ತು ಸಾರಾಸ್ವಾದಿನಿ ವ್ಯಾಖ್ಯಾತೃಗಳು ದೃಪ್ತನ ವಿಷಯದಲ್ಲಿ **ಮಾತ್ರ** ಅತಿವಾದವೆಂಬುದನ್ನು ಶಂಕಿಸಿ ಸಮಾಧಾನ ಹೇಳಿರುತ್ತಾರೆ. ಆರ್ತನ ವಿಷಯದಲ್ಲೂ ಅತಿವಾದವಲ್ಲವೆಂದು ಶ್ರೀ ನಿಗಮಾಂತರೇ ಮುಂದಿನ ವಾಕ್ಯದಿಂದ ವ್ಯಕ್ತಪಡಿಸಿರುತ್ತಾರೆ. ದೃಪ್ತನ ವಿಷಯದಲ್ಲಿ ಅತಿವಾದ ಹೇಗೆ? ಎಂದರೆ ದೃಪ್ತನು ಗರ್ವಿಷ್ಠನಾಗಿರುವಾಗ ಆತನಿಗೆ ಮೋಕ್ಷರೂಪ ರಕ್ಷಣೆಯು ಅತಿವಾದವಾಗುವದಿಲ್ಲವೇ ಎಂಬಾಕ್ಷೇಪಣೆಯು. ದೃಪ್ತನು ಗರ್ವಿಷ್ಠನಲ್ಲವು. ಆತನೂ ಮೋಕ್ಷಾಕಾಂಕ್ಷೆಯುಳ್ಳವನೇ. ಆದುದರಿಂದ ರಕ್ಷ್ಯತೆಯಲ್ಲಿ ವಿವಾದವಿಲ್ಲವು.

ಈ ಚರಮ ಶ್ಲೋಕವು ಆರ್ತನ ವಿಷಯದಲ್ಲಿ ಸಂಹೋಗುತ್ತದೆಯೇ?

**ಷ್ಠಾನತ್ತುಕ್ಕು ಪಿನ್ಬು ಫಲಮಾಗೈಯಾಲುಮ್', ಇದು ಉಪದೇಶವೇಳೈಯಾಗೈಯಾಲುಮ್ ಇವ್ವಾರ್ತ್ತ ತಿರುತ್ತಿಲುಮ್', ಮೋಕ್ಷಯಿಷ್ಯಾಮಿ ಎನ್ರು ಭವಿಷ್ಯನ್ನಿರ್ದ್ದೇಶತ್ತುಕ್ಕು ಕ್ಕೊರೈಯಿಲ್ಲೈ.**

**ಇವ್ವಾರ್ತ್ತದೃಪ್ತಾದಿ ವಿಭಾಗಙ್ಗಳಿಲ್ಲಾಮ್ ಸುಕೃತ ತಾರತಮ್ಯಮೂಲಮಾನ ಭಗವದನುಹ್ರಗ ತಾರತಮ್ಯತ್ತಾಲೇ ವರುಮ್. "ಪ್ರಾರಬ್ಧಮಾತ್ರ**

---

ಆತನು ವಿಳಂಬವನ್ನು ಸಹಿಸದೆ ಒಡನೆಯೇ ಮೋಕ್ಷವನ್ನು ಬಯಸುವಾಗ ಮೋಕ್ಷಯಿಷ್ಯಾಮಿ ಎಂಬ ಭವಿಷ್ಯತ್ಕಾಲ ಪ್ರಯೋಗವು ಸರಿಯೇ ? ಎಂದರೆ **ಶರಣಂವ್ರಜ** ಎಂಬ ಉಪದೇಶಾನಂತರವೇ ಉಪಾಯಾನುಷ್ಠಾನವು ಉಪಾಯಾನುಷ್ಠಾನಾನಂತರ ನಿರ್ಯಾಣ ಮೋಕ್ಷಗಳಾದುದರಿಂದ ಭವಿಷತ್ಪ್ರಯೋಗವು ಉಪಪನ್ನವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.—**ಉಪಾಯಾನುಷ್ಠಾನತ್ತುಕ್ಕು ಪಿನ್ಬು** - ಉಪಾಯವಾದ ಶರಣಾಗತಿಯನ್ನು ಅನುಷ್ಠಿಸಿದ ನಂತರ, **ಫಲಮಾಗೈಯಾಲೇ** - ಮೋಕ್ಷರೂಪ ಫಲಸಿದ್ಧಿಯಾದುದರಿಂದ, **ಇದು** - ಈ ಚರಮಶ್ಲೋಕದಲ್ಲಿ ಹೇಳಿರುವದು ಅದು ಏನೆಂದರೆ **ಶರಣಂವ್ರಜ** ಎಂಬ ಉಪದೇಶವು, **ಉಪದೇಶಮಾಗೈಯಾಲೇ** - ಉಪದೇಶವಾದುದರಿಂದ, **ಇವ್ವಾರ್ತ್ತ ತಿರತ್ತಿಲ್'** - ಈ ಅರ್ಥದ ವಿಷಯದಲ್ಲೂ, **ಮೋಕ್ಷಯಿಷ್ಯಾಮಿ ಎನ್ರು**- ಎಂಬದಾಗಿ, **ಭವಿಷ್ಯನ್ನಿರ್ದ್ದೇಶತ್ತುಕ್ಕು** - ಭವಿಷ್ಯತ್ಕಾಲಪ್ರಯೋಗಕ್ಕೆ, **ಕ್ಕೊರೈಯಿಲ್ಲೈ** - ಏನೊಂದೂ ಅನುಪಪನ್ನವಾದುದು ಇರುವದಿಲ್ಲವು.

**ಶರಣಂವ್ರಜ** ಎಂಬ ಉಪದೇಶಕ್ಕನುಗುಣವಾಗಿ ಶರಣಾಗತ್ಯನುಷ್ಠಾನವು ಆರ್ತ್ತದೃಪ್ತರಿಗೂ ಒಂದೇ ಆಗಿ, ಇಬ್ಬರ ವಿಷಯದಲ್ಲೂ ಶ್ರಿಯಃ ಪತಿಯು ಸರ್ವಾಪರಾಧಗಳನ್ನು ಹೋಗಲಾಡಿಸಿ ಜನ್ಮಾಂತರ ವಿಲ್ಲದೆ ಮೋಕ್ಷವನ್ನು ಕೊಡಲು ಸಿದ್ಧವಾಗಿರುವಾಗ ಅರ್ತ್ತದೃಪ್ತರೆಂಬ ವಿಭಾಗವೂ ಅವರಿಬ್ಬರಿಗೂ ಇರುವ ಶೋಕಗಳಿಗೆ ಕಾರಣವೇನೆಂಬುವನ್ನು ತಿಳಿಸುತ್ತಾರೆ. ಅದೂ ಅಲ್ಲದೆ ಆರ್ತ್ತದೃಪ್ತಶಬ್ದಗಳಿಗೆ ಇತರರು ಹೇಳಿರುವ ಅರ್ಥವು ಸರಿಯಲ್ಲವಾದುದರಿಂದ ಸರಿಯಾದ ಅರ್ಥಗಳನ್ನು ತಿಳಿಸುತ್ತಾರೆ—

**ಇವ್ವಾರ್ತ್ತದೃಪ್ತಾದಿ ವಿಭಾಗಙ್ಗಳಿಲ್ಲಾಮ್'** - ಈ ಆರ್ತ್ತರು ದೃಪ್ತರು ಎಂಬ ಉಪಾಯಾನುಷ್ಠಾನ ಮಾಡಿದವರಲ್ಲಿ ವಿಭಾಗಗಳೆಲ್ಲವೂ, **ಸುಕೃತತಾರತಮ್ಯಮೂಲಮಾನ** - ಸುಚರಿತ ಪರಿಪಾಕದ ತರತಮ ಮೂಲಕವಾಗಿ ಉಂಟಾದ, **ಭಗವದನುಗ್ರಹದ ತಾರತಮ್ಯದಿಂದ, ವರುಮ್'** - ಉಂಟಾಗುವದು, ಸುಕೃತವಿಲ್ಲದೆ ಶರಣಾಗತ್ಯನುಷ್ಠಾನವು ಲಭಿಸುವದಿಲ್ಲವೆಂಬ ಭಾವದಿಂದ, **ಸುಕೃತ**

---

(೧) ಶಾ. ಯು. ೧೮. ೨೭

**ಭುಕ್‌ತತ್ರತತ್ರವಿತ್ಸುಖನಾಪ್ನುಯಾತ್” ಇತ್ಯಾದಿ ವಚನಙ್ಗಳ್ ಆರ್ತಪ್ರಪನ್ನ ವಿಷಯತ್ತಿಲ್ ನಿರವಕಾಶಙ್ಗಳ್.**

---

**ತಾರತಮ್ಯ** ವೆಂದು ಹೇಳಲ್ಪಟ್ಟಿತು. ಆ ಸುಕೃತ ತಾರತಮ್ಯಕ್ಕನುಗುಣವಾಗಿ ಭಗವದನುಗ್ರಹವು ಲಭಿಸುತ್ತದೆಂಬ ಭಾವವು. ಶರಭಂಗಮುನಿಗಳೂ ಶಬರಿಯೂ ಆರ್ತಪ್ರಪತ್ತಿ ಮಾಡಿದವರಾಗಿ ಅತ್ಯಂತ ಸುಕೃತಿಗಳೆಂಬ ಭಾವವು. ಪ್ರಪನ್ನರಲ್ಲಿ **ಆರ್ತನು** ಯಾರು ಎಂದರೆ ವಿಳಂಬವನ್ನು ಸಹಿಸದೆ ಒಡನೆ ಮೋಕ್ಷಪ್ರಾಪ್ತಿಯನ್ನು ಬೇಡುವವನು. ಸ್ವಾಮಿಯು ಅತ್ಯಂತಾನುಗ್ರಹ ಮೂಲಕ ಒಡನೆ ನಿರ್ಯಾಣ ವನ್ನುಂಟುಮಾಡಿ ಮೋಕ್ಷವನ್ನು ಕೊಡುವನು. ಅಥವಾ ದೇಹತ್ಯಾಗ ಮಾಡಲು ಸ್ವಾಮಿಯು ಅನುಮತಿಯನ್ನು ದಯಪಾಲಿಸಿ ಮೋಕ್ಷವನ್ನು ಕೊಡುವನು. ಈತನಿಗೆ ಪ್ರಾರಬ್ಧ ಶೇಷವೂ ಸ್ವಾಮಿಯ ಅನುಗ್ರಹದಿಂದ ಕಳೆದುಹೋಗುತ್ತದೆ. ದೃಪ್ತ ನಾದರೋ ವಿಳಂಬವನ್ನು ಸಹಿಸುವವನು. ನಿರ್ಯಾಣಪ್ರಾಪ್ತನಾದನಂತರ ಸ್ವಾಮಿ ಕೃಪೆಯಿಂದ ಮೋಕ್ಷವನ್ನು ಹೊಂದುವನು.

ಶ್ರೀ ಮದ್ರಾಮಾಯಣದ ವ್ಯಾಖ್ಯಾನ ಕರ್ತಾವಾದ ಶ್ರೀ ಗೋವಿಂದ ರಾಜೀ ಯರು, **“ಆರ್ತೋವಾ ಯದಿವಾ ದೃಪ್ತಃ”** ಎಂಬ ಶ್ಲೋಕ ವ್ಯಾಖ್ಯಾನದಲ್ಲಿ ಬರೆದಿರುತ್ತಾರೇನೆಂದರೆ—**“ಆರ್ತಃ ಸ್ವಾಭಿಮತ ಸಂಭವೇ ವಿಳಂಬಾಕ್ಷಮ ತೀವ್ರ ಸಂವೇಗವಾನ್ಸಾ ಶರಣಾಗ ಮನ ವೇಳಾಯಾ ಮಪಿ ಸ್ವಾಪರಾಧ ನಿಮಿತ್ತ ಭಯಾದಿಮಾನ್ ವೇ ತ್ಯರ್ಥಃ. ದೃಪ್ತಸ್ತು ವಿಳಂಬಾ ವಿಳಂಬವನಾ ದೃತ್ಯ ಫಲಮಾತ್ರ ಸಕ್ತಃ, ತಸ್ಯಾಂ ವೇಳಾಯಾ ಮಪಿ ವಿನಯ ಸ್ವಾಪ ರಾಧ ನಿಮಿತ್ತ ಭಯ ಶೂನ್ಯೋ ವೇತ್ಯರ್ಥಃ. ಮುಮುಕ್ಷು ಪಕ್ಷೇ ಸಂಸಾರ ಜಿಗುಪ್ಸಾನು ಸಂಧಾನೇನ ಸದ್ಯ ಏವ ದೇಹ ನಿವೃತ್ತಿ ಕಾಮ ಆರ್ತಃ ದೃಪ್ತಸ್ತು ಶರೀರಾವಸಾನಕಾಲೇ ಮುಕ್ತಿಕಾಮಃ ಯದ್ವಾ, ಅಕಿಂಚನ್ಯಾ ನನ್ಯ ಗತತ್ವಪುರಸ್ಸರಂ ಪ್ರಪನ್ನ ಆರ್ತಃ, ಸ್ತೋಬಹೇಳನಾದಿ ರೂಪೇಣ ಶರಣಾಗತೋ ಸ್ಫೀತಾಬ್ರುವನ್ ದೃಪ್ತಃ”** ಆರ್ತ ದೃಪ್ತ ಶರಣಾಗತಿಯು ಐಹಿಕಾ ದಿಗಳಿಗೂ ಮೋಕ್ಷಕ್ಕೂ ಆಗಬಹುದೆಂದು ಹೇಳಿ, ಐಹಿಕ, ಸ್ವರ್ಗಪ್ರಾಪ್ತಿಗಳಿಗೆ ವಿಳಂಬ ಸಹಿಸದೆ ಒಡನೆ ಬೇಕೆಂಬುವನಾಗಲಿ ಅಥವಾ ಶರಣಾಗತಿ ಮಾಡುವ ವೇಳೆಯಲ್ಲಿ ತನ್ನ ಅಪರಾಧ ನಿಮಿತ್ತವಾಗಿ ಭಯಪಡುವನೆಂಬುವನಾಗಲಿ ಆರ್ತ ನೆಂದೂ, ದೃಪ್ತನಾದರೋ ವಿಳಂಬ ಅಥವಾ ಅವಿಳಂಬಗಳನ್ನು ಪರಿಗಣಿಸದೇ, ತಾನು ಕೋರುವ ಫಲಸಿದ್ಧಿ ಮಾತ್ರದಲ್ಲಿ ಅಭಿಲಾಷೆ ಉಳ್ಳವನಾಗಲಿ ಅಥವಾ ಶರಣಾಗತಿವೇಳೆಯಲ್ಲಿ ವಿನಯ ಭಯಗಳಿಲ್ಲದವನಾಗಿ ಆಗಬಹುದು ಎಂದು, ಅಭಿಪ್ರಾಯಪಟ್ಟಿರುತ್ತಾರೆ; ಮುಮುಕ್ಷುವಾಗಿದ್ದ ಪಕ್ಷದಲ್ಲಿ, ಆಕಿಂಚನ್ಯ ಅನನ್ಯ

ಗತಿತ್ವ ಪುರಸ್ಸರವಾಗಿ ಶರಣಾಗತಿ ಮಾಡಿದವನು ಆರ್ತನೆಂದೂ, ಸ್ತೋಭವೆಂದರೆ ಶರಣಾಗತಿಶಬ್ದವನ್ನಾಗಲಿ, ಶರಣಾಗತಿ ಮನ್ತ್ರವನ್ನಾಗಲಿ ಹೇಳಿಕೊಟ್ಟಹಾಗೆ ಹೇಳಲು ಯೋಗ್ಯತೆ ಇಲ್ಲದಿರುವಿಕೆ, **ಹೇಳನ** - ಅದು ಅಷ್ಟು ಮಹಿಮೆಯುಳ್ಳದು ಹೇಗೆ ಎಂದು ಹೇಳನವು, ಈ ಅಭಿಪ್ರಾಯಗಳೊಂದಿಗೆ ಶರಣಾಗತಿಯನ್ನು ಅನುಷ್ಠಿಸಿದವನು ದೃಪ್ತನು ಎಂದೂ ಬರೆದಿರುತ್ತಾರೆ. ಅಕಿಂಚನ್ಯ, ಅನನ್ಯಗತಿತ್ವವು ಆರ್ತ ದೃಪ್ತರಿಬ್ಬರಿಗೂ ಬೇಕಾದ ಅಂಗಗಳು. ಸ್ತೋಭ ಹೇಳನಾದಿಗಳಿಂದ ಶರಣಾಗತಿಯು, ಮಹಾವಿಶ್ವಾಸವಿಲ್ಲದೆ ಇರುವದರಿಂದ ಶರಣಾಗತಿಯೇ ಆಗುವದಿಲ್ಲವು. ಈ ಸಂದರ್ಭದಲ್ಲಿ, ಆರ್ತದೃಪ್ತ ಶಬ್ದಗಳು ಮೋಕ್ಷಾರ್ಥಿಯಾಗಿ ಶರಣಾಗತಿಯನ್ನು ಅನುಷ್ಠಿಸಿದವನನ್ನು ಕುರಿತವಾದುದರಿಂದ ಆ ಶಬ್ದಗಳ ಸರಿಯಾದ ಅರ್ಥಗಳನ್ನು ತಿಳಿಸುತ್ತಾರೆ. ಇಬ್ಬರೂ ಮೋಕ್ಷಾರ್ಥಿಗಳಾಗಿ ಇಬ್ಬರಲ್ಲೂ ಐದು ಅಂಗಗಳೂ ಇರುವದರಿಂದ ಅವರಿಬ್ಬರಿಗೂ ತುಂಬಾ ವ್ಯತ್ಯಾಸವಿಲ್ಲವೆಂದು ತಿಳಿಸುವದಕ್ಕಾಗಿ ಇಬ್ಬರೂ ಸುಕೃತಿಗಳೆಂದು ಹೇಳಿ, ಆ ಸುಕೃತದಲ್ಲಿ ತಾರತಮ್ಯ ಉಂಟಾಗಿ ಶೋಕದಲ್ಲಿ ವ್ಯತ್ಯಾಸವೆಂದೂ, ಅದರಿಂದ ಭಗವದನುಗ್ರಹದಲ್ಲೂ ತಾರತಮ್ಯ ಉಂಟೆಂದು ಹೇಳಿದರು. ಆದರೆ ಫಲದಲ್ಲಿ ತಾರತಮ್ಯವಿಲ್ಲವೆಂದೂ ಹೇಳಿದರು.

ಹೀಗೆ ಇತರರ ಸಮಂಜಸವಲ್ಲದ ಅಭಿಪ್ರಾಯಗಳನ್ನು ನಿರಾಕರಿಸಿ, ಆರ್ತ ದೃಪ್ತಶಬ್ದಗಳಿಗೆ ಸರ್ವಸಮಂಜಸಾರ್ಥವನ್ನು ತಿಳಿಸುತ್ತಾರೆ.—ಆರ್ತನು ವಿಳಂಬ ಸಹಿಸದೆ ಈ ಹೇಯದೇಹದಿಂದ ಬಿಡುಗಡೆಯನ್ನು ಅಪೇಕ್ಷಿಸುವನು. ದೃಪ್ತನಾದರೋ ಅಷ್ಟು ಗುರುತರವಾದ ಶೋಕವಿಲ್ಲದೆ, ದೇಹಾವಸಾನಾನಂತರ ಈ ಹೇಯದಿಂದ ಬಿಡುಗಡೆಯನ್ನು ಕೋರುವನು. ಇಷ್ಟೇ ಇವರುಗಳಿಗೆ ವ್ಯತ್ಯಾಸವು.

ಆಗಲಿ ಆರ್ತನಿಗೆ ಶರಣಾಗತ್ಯನುಷ್ಠಾನದ ಉತ್ತರಕ್ಷಣದಲ್ಲೇ ದೇಹಾವಸಾನವನ್ನೂ ಮೋಕ್ಷವನ್ನೂ ಕೋರುವನಾದರೆ, **"ಪ್ರಾರೇಬ್ಧೇತರ ಪೂರ್ವಪಾಪಮಖಿಲಂ** ಎಂದು ತಾವೇ ಅಪ್ಪಣೆಕೊಡಿಸಿರುವದೂ, ಮತ್ತು **"ಪ್ರಾರಬ್ಧ ಮಾತ್ರ ಭುಕ್ತತ್ರ ತತ್ವನಿತ್ಸುಖ ಮಾಪ್ನುಯಾತ'"** ಎಂದರೆ **ಪ್ರಾರಬ್ಧ ಮಾತ್ರ ಭುಕ್**-ಪ್ರಾರಬ್ಧ ಮಾತ್ರವನ್ನು ಅನುಭವಿಸಿದವನಾಗಿ, **ತತ್ರತತ್ವನಿತ್**-ಪ್ರಾಜ್ಞನಾದವನು, **ಸುಖಂ** - ಮೋಕ್ಷಸುಖವನ್ನು, **ಆಪ್ನುಯಾತ'** - ಹೊಂದುವನು ಎಂಬ ಪ್ರಮಾಣಗಳಿಗೂ ವಿರೋಧವಾಗುವದಿಲ್ಲವೇ ? ಎಂದರೆ ಅವನ ವಿಷಯದಲ್ಲಿ ಸಮಾಧಾನವನ್ನು ಹೇಳುತ್ತಾರೆ:- ಈ ಮೇಲೆ ಹೇಳಿದ ವಚನಗಳು **ಆರ್ತಪ್ರಪನ್ನನ ವಿಷಯದಲ್ಲಿ, ನಿರವಕಾಶಂಗಳ'** - ಶಂಕೆಗೆ ಕಾರಣವೇ ಇಲ್ಲವು ಮೇಲೆ ಹೇಳಿದ ಆಕ್ಷೇಪಣೆಗಳಿಗೆ **ಅವಕಾಶವೇ** ಇಲ್ಲವು ಎಂಬ ಭಾವವು. ಅವಕಾಶವಿಲ್ಲದುದು ನಿರವಕಾಶವು. ಅನಭ್ಯುಪಗತ ಪ್ರಾರಬ್ಧ ನಾಶವಾಗುವಹಾಗೆ ಅನುಗ್ರಹ ತಾರ

**ದೃಪ್ತಪ್ರಪನ್ನರ್ ತಿರತ್ತಿಲ್ ಉತ್ತರ ಕೃತ್ಯಾಂಶತ್ತೈ ಪ್ಪತ್ತ "ಮಾಶುಚಃ" ಎನ್ಗಿರ ವಾಕ್ಯತ್ತಿರ್ ಕರುತ್ತೈ "ಅಧ್ಯಾತ್ಮಿಕ ಆದಿಭೌತಿಕ ಎನ್ರು ತುಡಙ್ಗಿ "ಅತಸ್ತ್ವಂ ತವ ತತ್ತ್ವತೋ ಮದ್ಜ್ಞಾನ ದರ್ಶನ ಪ್ರಾಪ್ತಿಷು ನಿಸ್ಸಂಶಯಂ ಸುಖಮಾಸ್ಸ್ವ" ಎನ್ರರುಳಿಚ್ಚೆಯ್ದಾರ್.**

---

ತಮ್ಮುದಿಂದ ಅಭ್ಯುಪಗತ ಪ್ರಾರಬ್ಧಾಂಶವೂ ಕಳೆದು ಹೋಗುತ್ತದೆಂಬ ಭಾವವು. ಆರ್ತನಿಗೆ ಹೆಚ್ಚು ಶೋಕ ಉಂಟಾದುದರಿಂದ ಮೂಲದಲ್ಲಿ ಶೋಕ ತಾರತಮ್ಯ ವೆಂದು ಪ್ರಯೋಗಿಸಿರುತ್ತಾರೆ. ಪಾಪಗಳೆಲ್ಲಾ ಕಳೆಯುವ ಬಗೆ ಹೇಗೆ ಎಂಬ ಶೋಕವು ಆರ್ತದೃಪ್ತರಿಗೂ ಸಮನಾದವು. ಆರ್ತನಿಗಾದರೋ ಆಯುಸ್ಸಿನ ಶೇಷ ವಿರುತ್ತದೆಯೇ, ಅಲ್ಲಿವರಿಗೆ ಈ ದೇಹದಿಂದಿರುವದು ಹೇಗೆ? ದೇಹ ಪ್ರವೃತ್ತಿಗಳು ಬಂಧಕಗಳೇ? ಏನು ಮಾಡುವದು ಎಂಬ ಹೆಚ್ಚಿನ ಶೋಕವು. ಈ ಎರಡು ಶೋಕಗಳನ್ನು ಆರ್ತನಲ್ಲಿ ಕಂಡು **ಮಾಶುಚಃ** ಎಂದು ಹೇಳಿ ಸಮಾಧಾನ ಮಾಡಿದ ರೆಂಬ ಭಾವವು. ಹೀಗೆ ಆರ್ತನ ವಿಷಯದಲ್ಲಿ **ಮಾಶುಚಃ** ಎಂಬುದಕ್ಕೆ ಅಭಿ ಪ್ರಾಯವಾದರೆ ದೃಪ್ತನ ವಿಷಯದಲ್ಲಿ ಈ **ಮಾಶುಚಃ** ಎಂಬ ವಾಕ್ಯದ ಅಭಿ ಪ್ರಾಯವೇನು ಎಂದು ಕೇಳಿದರೆ ಶ್ರೀ ಯತಿವರ್ಯರು ಶರಣಾಗತಿಗದ್ಯದಲ್ಲಿ ವ್ಯಾಖ್ಯಾನ ಮಾಡಿರುತ್ತಾರೆಂದು ತಿಳಿಸುತ್ತಾರೆ— ದೃಪ್ತನಾದರೋ ಅಭ್ಯುಪಗತ ಪ್ರಾರಬ್ಧವನ್ನು ಅನುಭವಿಸಿ ಅನಂತರ ದೇಹಾವಸಾನವನ್ನು ಹೊಂದಿ ಮೋಕ್ಷವನ್ನು ಹೊಂದುವ ನೆಂಬರ್ಥವು.

**ದೃಪ್ತಪ್ರಪನ್ನರ್ತಿರತ್ತಿಲ್** - ದೃಪ್ತಪ್ರಪನ್ನನ ವಿಷಯದಲ್ಲಿ, **ಉತ್ತರ ಕೃತ್ಯಾಂಶತ್ತೈ ಪ್ಪತ್ತ** - ಶರಣಾಗತ್ಯನುಷ್ಠಾನಾನಂತರ ಮಾಡತಕ್ಕ ಕಾರ್ಯ ಶೇಷವನ್ನು ಕುರಿತು, **ಮಾಶುಚಃ ಎನ್ಗಿರ ವಾಕ್ಯತ್ತಿರ್ ಕರುತ್ತೈ** - **ಮಾಶುಚಃ** ಎಂಬ ವಾಕ್ಯದ ತಾತ್ಪರ್ಯವನ್ನು, **"ಆಧ್ಯಾತ್ಮಿಕ ಆಧಿಭೌತಿಕ" ಎನ್ರು ತುಡಙ್ಗಿ** - ಎಂದು ಆರಂಭಿಸಿ, **ಅತಃ** - ಆ ಕಾರಣದಿಂದ, **ತವ** - ನಿನ್ನ, **ತತ್ತ್ವತಃ** - ಯಥಾರ್ಥ ವಾದ **"ಮದ್ಜ್ಞಾನ ದರ್ಶನ ಪ್ರಾಪ್ತಿಷು** - ನನ್ನ (ಸರ್ವೇಶ್ವರನ) ಜ್ಞಾನವೇನು, **ದರ್ಶನ** - ಧ್ಯಾನಮೂಲಕ ದರ್ಶನವೇನು, **ಪ್ರಾಪ್ತಿಷು** - ಪ್ರಾಪ್ತಿಯೇನು ಇವುಗ ಳಲ್ಲಿ **ನಿಸ್ಸಂಶಯಃ** - ಏನೊಂದೂ ಸಂದೇಹವಿಲ್ಲದವನಾಗಿ, **ಸುಖಮಾಸ್ಸ್ವ** - ಸುಖವಾಗಿ ಬಾಳು, **ಎನ್ರು** - ಎಂಬದಾಗಿ, **ಅರುಳಿಚ್ಚೆಯ್ದಾರ್** - ಕೃಪಯಾ ಅಪ್ಪಣೆ ಕೊಡಿಸಿದರು.

ಶರಣಾಗತಿಗದ್ಯದ ಆ ವಾಕ್ಯವು ಯಾವುದೆಂದರೆ— **"ಆಧ್ಯಾತ್ಮಿಕಾದಿ ಭೌತಿಕಾಧಿ ದೈವಿಕ ದುಃಖ ವಿಘ್ನಗಂಧ ರಹಿತಸ್ತ್ವಂ ದ್ವಯ ಮರ್ಥಾನು ಸಂಧಾನೇನ ಸಹ ಸದೈವಂ ವಕ್ತಾ ಯಾವ ಚ್ಛರೀರಪಾತಂ ಶ್ರೀರಂಗೇ ಸುಖ**

**ಮಾಸ್ವ. ಶರೀರಪಾತ ಸಮಯೇತು ಕೇವಲಂ ಮದೀಯ ಯೈವ ದಯ ಯಾತಿ ಪ್ರಬುದ್ಧೋ ಮಾಮೇವಾವ ಲೋಕಯನ್ನ ಪ್ರಚ್ಯುತ ಪೂರ್ವಸಂಸಾ ಮನೋರಥಃ ಜೀರ್ಣ ಮಿವ ವಸ್ತ್ರಂ ಸುಖೇನೇಮಾಂ ಪ್ರಕೃತಿಂ ಸ್ಥೂಲ ಸೂಕ್ಷ್ಮರೂಪಾಂ ವಿಸೃಜ್ಯ ತದಾನೀ ಮೇವ ಮತ್ಪ್ರಸಾದ ಲಬ್ಧಮಚ್ಚರ ಣಾರವಿಂದ ಯುಗಳೈಕಾಂತಿಕಾತ್ಯಂತಿಕ ಪರಭಕ್ತಿ ಪರಜ್ಞಾನ ಪರಮ ಭಕ್ತಿ ಕೃತ ಪರಿಪೂರ್ಣಾನವರತ ನಿತ್ಯ ವಿಶದತಮಾ ನನ್ಯಪ್ರಯೋಜನಾ ನವಧಿಕಾತಿಶಯ ಪ್ರೀತಿಕಾರಿತಾ ಶೇಷಾ ವಸ್ಥೋಚಿತಾ ಶೇಷ ಶೇಷ ತೈಕ ರೂಪ ನಿತ್ಯ ಕಿಂಕರೋಭವಿಷ್ಯಸಿ, ಮಾತೇ ಭೂದ ತ್ರ ಸಂಶಯಃ || ಅನೃತಂ ನೋಕ್ತ ಪೂರ್ವಂ ಮೇ ನಚ ವಕ್ಷ್ಯೇ ಕದಾಚನ|| ರಾಮೋ ದ್ವಿರ್ನಾಭಿ ಭಾಷತೇ || ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ || ಅಭ ಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ || ಸರ್ವ ಧರ್ಮಾ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ||ಇತಿ ಮಯ್ಯೈವ ಹ್ಯುಕ್ತಮ್. ಅತಸ್ತ್ವಂ ತವ ತತ್ವತೋ ಮದ್ಜ್ಞಾನ ದರ್ಶನ ಪ್ರಾಪ್ತಿಷು ನಿಸ್ಸಂಶಯ ಸ್ಸುಖಮಾಸ್ವ"** ಎಂಬುದು."

ದೃಪ್ತಪ್ರಪನ್ನನು ಆರ್ತಪ್ರಪನ್ನನಿಗೇನೂ ಲಘುವಾದ ಮಹಿಮೆಯುಳ್ಳವನ ಲ್ಲವು. ಇಬ್ಬರು ಮಾನ್ಯರೇ ಎಂಬ ಅಭಿಪ್ರಾಯದಿಂದ ಹೇಳಿದ ವಾಕ್ಯವಾಗಿರು ತ್ತದೆ. ಸ್ವಾಮಿ ಶ್ರಿಯಃಪತಿಯು ಆ ದೃಪ್ತಪ್ರಪನ್ನನು ದೇಹಾವಸಾನದ ವರೆವಿಗೂ ಮಾಡಬೇಕಾದ ಉತ್ತರ ಕೃತ್ಯಾಂಶವನ್ನು ಶ್ರೀ ಯತಿವರ್ಯರು ತಿಳಿಸಿರುತ್ತಾರೆಂದು ಹೇಳಿರುತ್ತಾರೆ.

ಅವು ಯಾವುವೆಂದರೆ—

೧. ಸುಖದುಃಖಗಳು, ಇವುಗಳಿಗೆ ತಾಪತ್ರಯವೆಂದು ಹೆಸರು. ತಾಪತ್ರಯ ದಲ್ಲಿ ದುಃಖಮಾತ್ರ ಸೇರಲಿಲ್ಲವು. ಸುಖವೂ ಅಂತಾದ್ದೇ. ಆಧ್ಯಾತ್ಮಿಕ ಆಧಿ ಭೌತಿಕ ಆಧಿದೈವಕವೆಂಬದಾಗಿ ಮೂರುವಿಧ. ಅಧ್ಯಾತ್ಮಕವು ಅಚಿತ್ತಾದ ಶರೀರದ ಮೂಲಕ ಉಂಟಾಗಿ ಅದು ಶರೀರ ಮತ್ತು ಮಾನಸಿಕ ರೂಪವಾಗಿ ಎರಡು ವಿಧವು.ಆಧಿ ಭೌತಿಕ ಮೃಗ ಪಕ್ಷಿ ಮನುಷ್ಯರ ಮೂಲಕ ಉಂಟಾದುದು. ಆಧಿದೈವಿಕ ಶೀತೋಷ್ಣ ವರ್ಷಾತಪ ವೈದ್ಯುತ ಮೊದಲಾದವುಗಳ ಮೂಲಕ ಉಂಟಾಗುವಂತಾದ್ದು. ಇಂತಹ ಕ್ಲೇಶಗಳು ಪ್ರಪನ್ನನಾದವನಿಗೆ ಸಾಧಾರಣವಾಗಿ ಉಂಟಾಗುವದಿಲ್ಲವು. ಅಂತ ವನು ಪರಮಾಚಾರ್ಯರೇ ಮೊದಲಾದವರುಗಳ ಮಧ್ಯೇ ಇದ್ದುಕೊಂಡು, ಸ್ನಾನ ಸಂಧ್ಯಾವಂದನೆ, ಮೂರು ರಹಸ್ಯಗಳ ಮಂತ್ರಜಪ, ದ್ವಯಮಂತ್ರವನ್ನು ಅವಕಾಶ

ವಿದ್ದಾಗ ಸದಾ ಉಚ್ಚರಿಸುತ್ತಾ ಉಪದೇಶಾದಿಗಳನ್ನು ಹೊಂದಿ ಶ್ರೀರಂಗವೇ ಮೊದಲಾದ ದಿವ್ಯದೇಶಗಳಲ್ಲಿ ಸ್ವಾಮಿ ಸೇವೆ ಕೈಂಕರ್ಯಾದಿಗಳನ್ನು ಯಥಾಶಕ್ತಿ ನಡೆಸುತ್ತಾ ಸುಖವಾಗಿ ಶರೀರಾವಸಾನದವರೆವಿಗೂ ಇರತಕ್ಕದ್ದೆಂಬುದು ಶ್ರೀ ರಂಗನಾಥನ ಆಜ್ಞೆಯು.

೨. ಶರೀರವನ್ನು ಬಿಡುವ ಸಮಯದಲ್ಲಾದರೋ, ಕೇವಲ ಶ್ರೀ ರಂಗನಾಥ ನಾದ ತಮ್ಮ ದಯೆಯಿಂದಲೇ ಪ್ರಾಜ್ಞನಾಗಿ ಸ್ವಮನೋರಥವನ್ನು ಪಡೆದವನಾಗಿ ಸ್ಥೂಲ ಶರೀರವನ್ನು ಬಿಟ್ಟು ಸೂಕ್ಷ್ಮ ಶರೀರದೊಂದಿಗೆ ಅರ್ಚಿರಾದಿ ಮಾರ್ಗದಿಂದ ತೆರಳಿ ವಿರಜಾವಹಗಾಹಾನಂತರ ಸೂಕ್ಷ್ಮಶರೀರವನ್ನೂ ತ್ಯಜಿಸಿ, ದಿವ್ಯ ಶರೀರವನ್ನು ತಮ್ಮ ಕೃಪಯಾ ಪಡೆದವನಾಗಿ, ತಮ್ಮ ಸಾಯುಜ್ಯವನ್ನು ಹೊಂದಿ ತಮಗೆ ನಿತ್ಯ ಕೈಂಕರ್ಯವನ್ನು ಮಾಡುವ ದಿವ್ಯ ಸುಕೃತವನ್ನು ಪರಿಪೂರ್ಣಬ್ರಹ್ಮಾನುಭವ ರೂಪ ಆನಂದವನ್ನು ಹೊಂದುವಿ ಎಂದು ಶ್ರೀರಂಗನಾಥನ ದಿವ್ಯೋಕ್ತಿಯು. ಈ ವಿಷಯ ದಲ್ಲಿ ನಿನಗೆ ಈಷತ್ತಾದರೂ ಸಂಶಯಬೇಡ, ನಿಸ್ಸಂಶಯುವೆಂಬುದಕ್ಕೆ **"ಅನೃತಂ ನೋಕ್ತ ಪೂರ್ವಂಮೇ"** ಇತ್ಯಾದಿ ತಮ್ಮ ದಿವ್ಯ ಸೂಕ್ತಿಗಳನ್ನು ಉದಾಹರಿಸಿರು ತ್ತಾರೆ. ಇದು ಪ್ರಪನ್ನನ ಕುರಿತ ದಿವ್ಯ ಸೂಕ್ತಿಯು. ಅಪ್ರಪನ್ನರು ಗಳಿಗೆ ಹೇಳಿದ ಸೂಕ್ತಿಗಳಲ್ಲವು. ಬಲಿ, ಭಸ್ಮಾಸುರ ಅಸುರರುಗಳು ಇವರು ಗಳ ವಿಷಯದಲ್ಲಿ ವ್ಯತ್ಯಸ್ತ ಪ್ರವೃತ್ತಿಯು ಉಂಟು. ಮೇಲಿನ ಸೂಕ್ತಿಗಳಲ್ಲಿ ಸಂಶಯಬೇಡವೆಂಬುದಕ್ಕೆ ಇನ್ನೊಂದು ಪ್ರಮಾಣವನ್ನು ಉದಾಹರಿಸಬಹುದು.

**"ಪತೇದ್ದ್ಯೌ ರ್ಹಿಮವಾನ್ ಶೀರ್ಯೇ ತ್ಪೃಥಿವೀ ಶಕಲೀ ಭವೇತ್ |**
**ಶುಷ್ಯೇ ತ್ತೋಯ ನಿಧಿಃ ಕೃಷ್ಣೇ ನ ಮೇ ಮೋಘಂ ವಚೋ ಭವೇತ್"**

ಇದು ದುರ್ಯೋಧನ ಸಭೆಯಲ್ಲಿ ತನಗಾದ ದುರ್ದಶೆಯನು ಚಿಂತಿಸಿ ಶೋಕಿಸು ತ್ತಿದ್ದ ದ್ರೌಪದಿಯನ್ನು ನೋಡಿ ಹೇಳುವ ಶ್ರೀ ಕೃಷ್ಣನ ಪ್ರತಿಜ್ಞೆಯು.

ಶ್ರೀ ಭಾಷ್ಯಕಾರರು ಇಲ್ಲಿ ಪ್ರತಿಪಾದಿಸಿರುವದು ಶರಣಾಗತಿಯನ್ನು ಅಂಗಿ ಯಾಗಿ ಮೋಕ್ಷಾರ್ಥಕ್ಕಾಗಿ ಅನುಷ್ಠಿಸಿದವನನ್ನು ಕುರಿತ ಶ್ರೀ ರಂಗನಾಥೋಕ್ತಿ ಯಾಗಿ ಆ ಸಂದರ್ಭದಲ್ಲಿ ಈ ಚರಮ ಶ್ಲೋಕವೂ ಶ್ರೀ ಯತಿವರ್ಯರಿಂದ ಉದಾಹೃತ ವಾಗಿರುವದರಿಂದ ಶ್ರೀ ಯತಿವರ್ಯರು ಚರಮ ಶ್ಲೋಕ ಭಾಷ್ಯದಲ್ಲಿ ಅಂಗ ಶರಣಾ ಗತಿಯಾಗಿ ವ್ಯಾಖ್ಯಾನ ಮಾಡಿದ್ದಾರೆಂಬ ವಾದವು ನಿರಸ್ತವು.

ಶ್ರೀ ಯತಿವರ್ಯರು ಶ್ರೀಯಾಮುನ ಮುನಿಯನ್ನು ತಮ್ಮ ಆಚಾರ್ಯರನ್ನಾಗಿ ಭಾವಿಸಿ, **"ಯತ್ಪದಾಂ ಭೋರುಹಧ್ಯಾನ"** ವೆಂಬ ಶ್ಲೋಕದ ಮೂಲಕ ಹಾಗೆ ವರಿಸಿರುವದರಿಂದ, ಶ್ರೀಯಾಮುನ ಮುನಿಗಳು **"ನಧರ್ಮ ನಿಷ್ಠೋಸ್ಮಿ"** ಎಂಬ ಶ್ಲೋಕದಿಂದ ಭರನ್ಯಾಸವನ್ನೇ ಅನುಷ್ಠಿಸಿರುವಾಗ ಅದನ್ನು ನಿರಾಕರಿಸಿ ಅನ್ಯಥಾ

**"ಮಾಶುಚಃ" ಇತ್ಯನೇನ ಸೂಚಿತ ಶೋಕನಿವೃತ್ತಿಸ್ತು ಜ್ಞಾನಾನುಷ್ಠಾನ ಫಲೈವ, ನ ತು ಜ್ಞಾನ ಮಾತ್ರೇಣ.**

---

**ಇಙ್ಗ ಶೊಲ್ಲುಗಿರ ಶೋಕ ನಿವೃತ್ತಿಕ್ಕು ಒರುಪಡಿಯಾಲುಮ' ಸಂಕೋಚ ಮಿಲ್ಲಾಮೈಯಾಲೇ ಇವ್ವಿಶೇಷ ಜ್ಞಾನತ್ತಾಲು ಮಾಗ ಸರ್ವ ಪ್ರಕಾರ ಶೋಕ ಹೇತುಕ್ಕಳೆಲ್ಲಾಮ' ಕಳಿಯುಮ್ಪಡಿ ಶೊಲ್ಲಿತ್ತಾಗಿರದು.**

---

ಉಪಾಯಾನುಷ್ಠಾನವನ್ನು ಮಾಡುವರೇ ? ಆಗಲಿ, **"ಪರಭಕ್ತಿ ಪರಜ್ಞಾನ ಪರಮ ಭಕ್ತಿಯುತಂ ಮಾಂಕುರುಷ್ವ"** ಎಂಬ ಇವರ ಶ್ರೀರಂಗನಾಥನಲ್ಲಿ ಪ್ರಾರ್ಥನೆಯೂ, ಶ್ರೀರಂಗನಾಥನು ಹಾಗೆಯೇ ದಯಪಾಲಿಸಿರುವದೂ ಉಪಾಸನೆಯಿಂದ ಉಂಟಾಗುವ ಭಕ್ತಿಯ ಅತಿರೇಕಾವಸ್ಥೆಯಲ್ಲವೇ ? ಎಂದಾಕ್ಷೇಪ ತಂದರೆ, ಮೂರು ರಹಸ್ಯಗಳ ಜಪಕಾಲದಲ್ಲೂ ಶ್ರಿಯಃಪತಿಯನ್ನು ಧ್ಯಾನಿಸುವದರಿಂದ ಈ ಭಕ್ತ್ಯತಿರೇಕದ ಸಿದ್ಧಿಯು ನಮ್ಮಾಳ್ವಾರವರಿಗೆ ಸಿದ್ಧಿಸಿದ ಹಾಗೆ ಪ್ರಪದನದಲ್ಲೂ ಉಂಟಾಗಬಹುದಾದುದರಿಂದ ಪೂರ್ವಪಕ್ಷವು ಕೂಡುವದಿಲ್ಲವು.

ಆದುದರಿಂದ **ಮಾಶುಚಃ** ಎಂಬುದು ದೃಪ್ತನ ವಿಷಯದಲ್ಲೂ **ನಿಸ್ಸಂಶಯ**ವಾಗಿ ಮೋಕ್ಷ ಉಂಟು ; ಶೋಕಿಸಬೇಡ ಎಂಬ ಉಕ್ತಿಯು ಆತನ ವಿಷಯದಲ್ಲೂ ಸಮಂಜಸವೇ ಎಂಬ ಭಾವವು.

**ಮಾಶುಚಃ ಎಂಬುದರಿಂದ ಉಂಟಾಗುವ ಶೋಕ ನಿವೃತ್ತಿ ಫಲವು ಬರೀ ಜ್ಞಾನಮಾತ್ರದಿಂದಲ್ಲವು ; ಜ್ಞಾನಾನುಷ್ಠಾನ ಎರಡರಿಂದಲೂ ಉಂಟಾಗುವ ಫಲವು**

---

**ಇಙ್ಗ** - ಈ **ಮಾಶುಚಃ** ಎಂಬ ಪದಪ್ರಯೋಗದಲ್ಲಿ, **ಶೊಲ್ಲುಗಿರ** - ಹೇಳುವ; **ಶೋಕ ನಿವೃತ್ತಿಗೆ ಒರುಪಡಿಯಾಲುಮ'** - ಒಂದು ಪ್ರಕಾರದಿಂದಲೂ **ಸಂಕೋಚಮಿಲ್ಲಾಮೈಯಾಲೇ** - ನ್ಯೂನತೆಯಿಲ್ಲದುದರಿಂದ, **ಇವ್ವಿಶೇಷಜ್ಞಾನತ್ತಾಲುಮಾಗ** - ಶರಣಾಗತಿಯನ್ನನುಷ್ಠಿಸಿದರೆ ಸರ್ವಪಾಪಗಳಿಂದ ಬಿಡುಗಡೆಯುಂಟಾಗುತ್ತದೆಂಬ ಜ್ಞಾನಮೂಲಕವಾಗಿ, **ಸರ್ವಪ್ರಕಾರ ಶೋಕಹೇತುಕ್ಕಳೆಲ್ಲಾಮ'** - ಸರ್ವ ವಿಧ ಶೋಕಗಳಿಗೆ ಕಾರಣವಾದವುಗಳೆಲ್ಲಾ, **ಕಳಿಯುಮ್ಪಡಿ** - ಕಳೆದುಹೋಗುತ್ತವೆಂದು, **ಶೊಲ್ಲಿತ್ತಾಗಿರದು**-ಹೇಳಿದಂತಾಗುತ್ತದೆ, ಹೀಗೆ ಶರಣಾಗತ್ಯನುಷ್ಠಾನದಿಂದ ಸರ್ವಪಾಪಗಳೂ ಕಳೆದುಹೋಗುತ್ತವೆ ಎಂಬ ಉಪದೇಶದಿಂದ ಉಂಟಾದ ಜ್ಞಾನದ ಮೂಲಕ ಅದನ್ನು ಅನುಷ್ಠಿಸಿದರೆ ಶೋಕಕ್ಕೆ ಕಾರಣವಾದವು

**ಅನುಷ್ಠಾನ ಪರ್ಯನ್ತ ಮಲ್ಲಾದ ಜ್ಞಾನಮಾತ್ರಂ ಇವ್ವುಪದೇಶತ್ತಾಲೇ ಪಿರನ್ದಾಲುಮ್ (೧) ನಗಾಥಾ ಗಾಥಿನಂ ಶಾಸ್ತಿ ಬಹುಚೇದಪಿ ಗಾಯತಿ। ಪ್ರಕೃತಿಂ ಯಾನ್ತಿ ಭೂತಾನಿ ಕುಲಿಂಗ ಶಕುನಿರ್ಯಥಾ"॥ ಎಙ್ಗಿರ ಕಣಕ್ಕಾಯ್ ನಿಷ್ಪ್ರಯೋಜನ ಮಾಗೈಯಾಲೇ ಜ್ಞಾನಾನುಷ್ಠಾನಙ್ಗಳಿರುಣ್ಡಿನುಡೈಯು**

---

ಗಳೆಲ್ಲಾ ಕಳೆದು ಹೋಗುವದರಲ್ಲಿ ಸಂದೇಹವಿಲ್ಲವೆಂದು ಹೇಳಿದರು. ಮುಂದೆ ಆ ಶ್ಲೋಕ ಹೇತುಗಳೆಲ್ಲಾ ಯಾವುವೆಂಬುದನ್ನು ಉಪಪಾದಿಸುತ್ತಾರೆ—

ಇಲ್ಲಿ **ಒರುಪಡಿಯಾಲುಮ್ ಸಂಕೋಚಮಿಲ್ಲಾಮೈಯಾಲೇ** ಎಂದು ಏಕೆ ಹೇಳಿದರು ಎಂಪರೆ ಈ ಶರಣಾಗತ್ಯನುಷ್ಠಾನಕ್ಕೆ ಸರ್ವರಿಗೂ ಯಾವ ನ್ಯೂನತೆ ಇದ್ದುದಾದರೂ ಅಧಿಕಾರ ಉಂಟು. ಯಾವ ವಿಧವಾದ ವಿಶೇಷವೂ ಬೇಕಿಲ್ಲವೆಂದು **ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ"** ಎಂಬಲ್ಲಿ ಶ್ರೀ ರಾಮಚಂದ್ರ ಪ್ರಭುವು ತಾವೇ, ಹೇಳಿಕೊಂಡಿರುತ್ತಾರೆ. ಹಾಗೆಯೇ **"ನ ಜಾತಿ ಭೇದು ನ ಕುಲಂ ನ ಲಿಂಗಂ ನ ಗುಣ ಕ್ರಿಯಾಃ। ನ ದೇಶ ಕಾಲೋ ನಾವಸ್ಥಾಂ ಯೋಗೋಹ್ಯಯ ಮಪೇಕ್ಷತೇ ॥** ಎಂಬುದೂ ಅನುಸಂಧೇಯವು. ದಾಸನು ಬರೆದಿರುವ ಅಭೀಶಿಸ್ತವದ ೨೩ ನೆಯ ಪುಟವನ್ನು ನೋಡಿ. ಗಜ, ಜಟಾಯು, ನಮ್ಮಾಳ್ವಾರ್, ಪಾಣಾಳ್ವಾರ್, ಕುಬ್ಜೆ, ಶಬರಿ, ಧರ್ಮವ್ಯಾಧ, ದ್ರೌಪದಿಯು (ಬಹಿಷ್ಠೆಯಾಗಿರುವ ಅವಸ್ಥೆ) ಇವರುಗಳೆಲ್ಲಾ ದೈವಾನುಗ್ರಹವನ್ನು ಶರಣಾಗತಿಯಿಂದ ಪಡೆದುದು ಈ ಮೇಲಿನ ಶ್ಲೋಕಕ್ಕೆ ನಿದರ್ಶನಗಳು.

ಬರೀ ಜ್ಞಾನಮಾತ್ರದಿಂದ ಫಲವು ಸಿದ್ಧಿಸದು ಎಂದು ಹೇಳುತ್ತಾರೆ— **ಅನುಷ್ಠಾನ ಪರ್ಯನ್ತ ಮಲ್ಲಾದ** - ಅನುಷ್ಠಾನವೂ ಸೇರದೆ ಇರುವ, **ಜ್ಞಾನಮಾತ್ರ** - ಈ ಚರಮ ಶ್ಲೋಕದಲ್ಲಿ ಹೇಳಿರುವ ಜ್ಞಾನಮಾತ್ರವೇ, ಅದು ಯಾವುದುಃ ಎಂದರೆ ಶ್ರಿಯಃ ಪತಿಯಾದ ನನ್ನ ಶರಣಾಗತಿಯನ್ನು ಅನುಷ್ಠಿಸಿದರೆ ನಿಮ್ಮ ಸರ್ವ ಪಾಪಗಳೂ ಕಳೆದು ಮೋಕ್ಷಪ್ರಾಪ್ತಿಯುಂಟು ಎಂಬ ಜ್ಞಾನಮಾತ್ರವೇ **ಇವ್ವುಪದೇಶತ್ತಾಲೇ ಪಿರನ್ದಾಲುಮ್** - ಈ ಭಗವದುಪದೇಶದಿಂದ ಉತ್ಪನ್ನವಾದರೂ **"ಗಾಥಾ** - ಶ್ಲೋಕರೂಪದಲ್ಲಿರುವ ಶಾಸ್ತ್ರ ಜ್ಞಾನವು, **ಗಾಥಿನಂ** - ಅದನ್ನು ಪಠಿಸುವ ಶಾಸ್ತ್ರಜ್ಞನನ್ನೂ, **ಬಹು ಚೇದಪಿ** - ಬಹಳವಾಗಿಯೂ, **ಗಾಯತಿ** - ಗಾನ ಮಾಡುತ್ತಿದ್ದರೂ, ಪದೇ ಪದೇ ಪಠಿಸುತ್ತಿದ್ದರೂ, **ನಶಾಸ್ತಿ** - ಶಾಸನ ಮಾಡಲಾರದು, ಶಿಕ್ಷಿಸಲಾರದು, ಅದರ ಫಲವು ದೊರೆಯುವುದಿಲ್ಲವೆಂಬ ಭಾವವು. **ಭೂತಾನಿ**- ಚೇತನರು, **ಪ್ರಕೃತಿಂ** - ತಮ್ಮ ಸ್ವಭಾವ ಗುಣವನ್ನು, **ಯಾನ್ತಿ** - ಹೊಂದುವರು. ಹೇಗೆಂದರೆ; **ಕುಳಿಂಗ ಶಕುನಿರ್ಯಥಾ** - ಕುಳಿಂಗ ಪಕ್ಷಿಯ ಹಾಗೆ, **ಎನ್ರು ಕಣಕ್ಕಾಯ್** - ಎಂಬ ಲೆಖ್ಖಕ್ಕೆ ಸಮವಾಗಿ, **ನಿಷ್ಪ್ರಯೋಜನ ಮಾಗೈಯಾಲೆ** -

**ವುಮ್ ಫಲಮಾನ ಶೋಕ ನಿವೃತ್ತಿಯ್ಯೈ ಯೆಲ್ಲಾಮು' ಇಙ್ಗು ವಿವಕ್ಷಿಕ್ಕಿರದು.**

---

ಫಲಸಿದ್ಧಿಯನ್ನುಂಟುಮಾಡದೆ ವ್ಯರ್ಥವಾಗುವದರಿಂದ, **ಜ್ಞಾನಾನುಷ್ಠಾನಙ್ಗಳ್ ಇರಣ್ಡಿನುಡೈಯುವುಮ್** – ಜ್ಞಾನ ತದನುಗುಣವಾದ ಅನುಷ್ಠಾನ ಇವೆರಡು ಗಳೂ ಸೇರುವದರಿಂದುಂಟಾದ, **ಫಲಮಾನ ಶೋಕನಿವೃತ್ತಿಯೆಲ್ಲಾಮ್** – ಫಲ ವಾದ ಎಲ್ಲಾ ಶೋಕನಿವೃತ್ತಿಯನ್ನೂ, **ವಿವಕ್ಷಿಕ್ಕಿರದು** – ಈ **ಮಾಶುಚಃ** – ಎಂಬ ಪ್ರಯೋಗವು ತಿಳಿಸುತ್ತದೆ. ಈ ಪಕ್ಷಿಯು ಯಾವಾಗಲೂ, **"ಮಾಸಾಹಸಂಕುರು"** ಸಾಹಸವನ್ನು ಮಾಡಬೇಡವೆಂದು ಎಚ್ಚರಿಸುತ್ತದೋ ಎನ್ನುವ ಹಾಗೆ ಕೂಗುತ್ತಾ, ತಾನೇ, ಸಿಂಹವು ಮಾಂಸವನ್ನು ತಿಂದು ಬಾಯಿ ಬಿಟ್ಟುಕೊಂಡು ಮಲಗಿರುವ ವೇಳೆ ಯಲ್ಲಿ ರಭಸದಿಂದ ಹೋಗಿ ಸಿಂಹದ ಹಲ್ಲಿನಲ್ಲಿ ಸಿಕ್ಕಿಕೊಂಡಿರುವ ಮಾಂಸವನ್ನು, ಅದು ಬಾಯನ್ನು ಮುಚ್ಚಿದರೆ ತಾನು ಸಾಯುತ್ತೇನೆಂದು ತಿಳಿದಿದ್ದರೂ, ಸಾಹಸ ವನ್ನು ಹೇಗೆ ಮಾಡುತ್ತದೋ, ಹಾಗೆ ಎಂಬ ಭಾವವು. ಮೊದಲು ಶರಣಾಗತಿಯ ಜ್ಞಾನ ಅನಂತರ ಅನುಷ್ಠಾನ ಎರಡೂ ಇದ್ದರೆ ಫಲವೇ ವಿನಾ ಬರೀ ಜ್ಞಾನವು ನಿಷ್ಪ್ರಯೋಜನವು ಎಂದು ಹೇಳುತ್ತಾರೆ. ಒಬ್ಬನಿಗೆ ಭಕ್ಷ್ಯವನ್ನು ಮಾಡುವ ಜ್ಞಾನ ವಿರಬಹುದು. ಅದರ ಪ್ರಕಾರ ಮಾಡಿ ತಿಂದರೆ ಫಲವನ್ನು ಅನುಭವಿಸಬಹುದು. ಕೆಲವರು ಬರೀ ತತ್ತ್ವಮಸಿ ಎಂಬ ಜ್ಞಾನದಿಂದಲೇ ಮೋಕ್ಷವೆನ್ನುವರು. ಅದರ ಜೊತೆಗೆ ಉಪಾಯಾನುಷ್ಠಾನ ವಿದ್ದರೇನೆ ಮೋಕ್ಷಫಲ ಸಿದ್ಧಿಯು. ಇಲ್ಲದಿದ್ದರೆ ಇಲ್ಲವು. ಶ್ರೀ ಯತಿವರ್ಯರು ಈ ಅಭಿಪ್ರಾಯವನ್ನು ಶ್ರೀ ಭಾಷ್ಯದಲ್ಲಿ ಖಂಡಿಸಿರು ತ್ತಾರೆ. **ಜ್ಞಾನಾನ್ಮೋಕ್ಷಃ** ಎಂಬುದನ್ನು ಅದ್ವೈತಿಗಳು ಹೇಳುವದನ್ನು ಒಪ್ಪಿ ಕೊಂಡು ಆ ಜ್ಞಾನವು ಯದ್ರೂಪವೆಂದು ಚರ್ಚಿಸಿ, ಉಪಾಯಾನುಷ್ಠಾನರೂಪ ವೆಂದು ತೀರ್ಮಾನಿಸಿರುತ್ತಾರೆ. ಆದುದರಿಂದಲೇ **"ತಮೇವಂ ವಿದ್ವಾನ್ ಅಮೃತ ಇಹ ಭವತಿ, ನಾನ್ಯಃ ಪನ್ಥಾ ಅಯನಾಯವಿದ್ಯತೇ."** ಎಂದು ಶ್ರುತಿಯು ಹೇಳುತ್ತದೆ. **ಏವಂ** ಎಂಬುದರಿಂದ ಜ್ಞಾನವು ಅಜ್ಞಾನದೊಂದಿಗೆ **ವಿದ್ವಾನ್** ಎಂಬುದರಿಂದ ಉಪಾಯಾನುಷ್ಠಾನವಾದ ಉಪಾಸನಾ ಅಥವಾ ಪ್ರಪತ್ತಿ, ಹೇಳ ಲ್ಪಟ್ಟು **ಅಮೃತ ಇಹ ಭವತಿ** ಎಂದು ಇಲ್ಲೂ **ಅಯನಾಯ** ಎಂಬುದರಿಂದ ನಿತ್ಯ ವಿಭೂತಿ ಪ್ರಾಪ್ತಿ, ಇವುಗಳನ್ನು ಫಲವಾಗಿ ಹೇಳಲ್ಪಟ್ಟಿತು.

ಆದುದರಿಂದ ಇಲ್ಲಿ ಜ್ಞಾನಾನುಷ್ಠಾನಗಳಿಂದ ಫಲವಾದ ಶೋಕ ನಿವೃತ್ತಿಯು **ಮಾಶುಚಃ** ಎಂಬಲ್ಲಿ ಹೇಳಲ್ಪಟ್ಟಿತು. ಪ್ರಕೃತಿಂ ಯಾನ್ತಿಭೂತಾನಿ ಎಂಬ ಪ್ರಯೋ ಗವು ಇದೇ ಅಭಿಪ್ರಾಯವನ್ನು ಬೋಧಿಸುವ ಗೀತಾ ವಾಕ್ಯವನ್ನು ಸ್ಮರಿಸುವ ಹಾಗೆ ಮಾಡುತ್ತದೆ.

**ಆಗೈಯಾಲ್ ಉಪಾಯಾನುಷ್ಠಾನತ್ತಿಲ್ ಪೂರ್ವಾಪರಮಧ್ಯ ದಶೈಗಳೈ ಪ್ಪತ್ತ ಸಂಭಾವಿತಮಾನ ಶೋಕಮೆಲ್ಲಾಮ್ ಇಙ್ಗೇ ಕಳಿಕ್ಕ ಪಡುಗಿರದು. ಎಙ್ಙನೇ ಎನ್ನಿಲ್ (೧) ಅಧಿಕಾರ ವಿಶೇಷತ್ತೈಯುಮ್' (೨) ಉಪಾಯವಿಶೇಷತ್ತೈಯುಮ್', ಉತ್ತರ ಕೃತ್ಯ ವಿಶೇಷತ್ತೈಯುಮ್', (೩) ಪರಿಪೂರ್ಣ ಕೈಙ್ಕರ್ಯ ಪರ್ಯನ್ತ ಫಲಸಿದ್ಧಿಯೈಯುಪ್ಪತ್ತ ಫಲಮಡಿ**

---

**“ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇ ಜ್ಞಾನವಾನಪಿ ।**
**ಪ್ರಕೃತಿಂ ಯಾನ್ತಿ ಭೂತಾನಿ ನಿಗ್ರಹಃ ಕಿಂಕರಿಷ್ಯತಿ ॥” ೩, ೩೩.**

ದಾಸನು ಬರೆದಿರುವ ಗೀತೆಯ ೩೬೦ ನೆಯ ಪುಟವನ್ನು ನೋಡಿ. ನಮ್ಮ ಪ್ರವೃತ್ತಿಯು ಜ್ಞಾನಾನುಸಾರ ಅನುಷ್ಠಾನಕ್ಕೆ ಉಪಯುಕ್ತವಾಗದಿದ್ದರೆ ಅದನ್ನು **ಕುಳಿಂಗ** ಪಕ್ಷಿಯ ಪ್ರವೃತ್ತಿಗೆ ಹೋಲಿಸುತ್ತಾರೆ. ಶ್ರೀ ದೇಶಿಕವರ್ಯರು ಇದನ್ನೇ ದಯಾ ಶತಕದ ೯೪ ನೆಯ ಶ್ಲೋಕದಲ್ಲಿ **“ಘೋರಂ ಕುಲಿಂಗ ಶಕುನೇರಿವ ಚೇಷ್ಟಿತಂ ಮೇ”** ಎಂಬಲ್ಲಿ ಉಪಪಾದಿಸಿರುತ್ತಾರೆ. ಪರಾಂಬರಿಸಬಹುದು.

ಹಿಂದೆ ವಾಕ್ಯದಲ್ಲಿ **ಶೋಕನಿವೃತ್ತಿಯೈಯೆಲ್ಲಾಂ ಇಙ್ಗೇ ವಿವಕ್ಷಿಕ್ಕಿರದು”** ಎಂದು ಹೇಳಿದ ಆ ಎಲ್ಲಾ ಶೋಕಗಳು ಯಾವುವು ಎಂಬುದನ್ನು ವಿವರಿಸುತ್ತಾರೆ. ಆ ಶೋಕಗಳು ಮೂರು ದೆಶೆಯಲ್ಲೂ ಉಂಟಾಗುವುವು. ಅವು ಯಾವುವೆಂದರೆ, ೧. ಪೂರ್ವದೆಶೆ, ೨. ಮಧ್ಯಮದೆಶೆ, ೩. ಉತ್ತರದೆಶೆಗಳಲ್ಲಿ ಉಂಟಾಗುವ ಶೋಕಗಳು ಎಂದು ಹೇಳುತ್ತಾರೆ.—

**ಆಗೈಯಾಲ್** - ಆದುದರಿಂದ ಎಂದರೆ ಎಲ್ಲಾ ಶೋಕನಿವೃತ್ತಿಯನ್ನೂ **ಮಾಶುಚಃ** ಎಂಬ ಪ್ರಯೋಗವು ಸೂಚಿಸುವದರಿಂದ, **ಉಪಾಯಾನುಷ್ಠಾನತ್ತಿಲ್** - ಉಪಾಯವಾದ ಶರಣಾಗತಿಯನ್ನು ಅನುಷ್ಠಿಸುವಾಗ, **ಪೂರ್ವಾಪರಮಧ್ಯ ದಶೆಗಳೈಪ್ಪತ್ತ**-ಆ ಅನುಷ್ಠಾನಕ್ಕೆ ಪೂರ್ವಾವಸ್ಥೇ ಉತ್ತರಾವಸ್ಥೆ ಮಧ್ಯಮಾವಸ್ಥೆಗಳನ್ನು ಕುರಿತು, **ಸಂಭಾವಿತಮಾನ** - ಉಂಟಾಗುವ, ಶೋಕವೆಲ್ಲವು, **ಇಙ್ಗೇ** - ಈ ಮಾಶುಚಃ ಎಂಬ ಪ್ರಯೋಗದ ಸಂದರ್ಭದಲ್ಲಿ, **ಕಳಿಕ್ಕಪಡುಗಿರದು** - ನಿವೃತ್ತಿಯನ್ನು ಹೊಂದುವುವು. **ಎಙ್ಙನೇ ಎನ್ನಿಲ್** - ಅದು ಹೇಗೆಂದರೆ, ಅವು ಯಾವುವು ಎಂದರೆ ಎಂಬರ್ಥವು.—**(೧) ಅಧಿಕಾರ ವಿಶೇಷತ್ತೈಯುಮ್**- ಶೋಕ ನಿವೃತ್ತಿಯು ಎಂಬುದನ್ನು ಉಪಾಸನೆಗೆ ಯೋಗ್ಯತೆ ಇಲ್ಲದೆ, ವಿಳಂಬವನ್ನು ಸಹಿಸದೆ, ಇರುವ ಸಂದರ್ಭದಲ್ಲಿ ಪಾಪಗಳು ಕಳೆಯುವ ಬಗೆ ಹೇಗೆ ಎಂಬ ಅಧಿಕಾರವಿಶೇಷವನ್ನು ಕುರಿತ, **(೨) ಉಪಾಯವಿಶೇಷತ್ತೈಯುಮ್** - ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳನ್ನು ಮಾಡಲು ತನಗೆ ಶಕ್ತಿಯಿಲ್ಲವೇ ಎಂಬುದರಿಂದ ಉಪಾಯವನ್ನು ಕುರಿತ, **(೩) ಪರಿಪೂರ್ಣಕೈಙ್ಕರ್ಯ ಪರ್ಯನ್ತ ಫಲಸಿದ್ಧಿಯು**

**ಯೊಗ ಶೋಕಮು' ಸಂಭಾವಿತಮ್. ಅದಿಲ' (೧) ಅನುಷ್ಟಿಕ್ಕ ವ್ವುಗಿಗಿರ ಶರಣಾಗತಿ ಧರ್ಮಂ ಜಾತಿ ವರ್ಣಾಶ್ರಮಾದಿ ವಿಶೇಷ ನಿಯತ ಮಲ್ಲಾಮ್ಮೈಯಾಲ' ಪ್ರಾಪ್ಯರುಚಿಯುಮ್, ಪ್ರಾಪಕ ವಿಶ್ವಾಸಮುಮು', ಆಕಿಂಚನ ಜ್ಞಾನಾದಿಗಳು ಮುಣ್ಡಾನಪೋದೊರುವರುಕ್ಕುಮ್ ನಾಮಿ**

**ವೃತ್ತಿ** – ಹೀಗಿರುವಾಗ ಫಲರೂಪವಾದ ಪರಿಪೂರ್ಣ ಬ್ರಹ್ಮಾನುಭವ ಮತ್ತು ಶ್ರಿಯಃಪತಿಗೆ ಮಾಡುವ ಸರ್ವ ಕೈಙ್ಕರ್ಯಪ್ರಾಪ್ತಿ ಇವುಗಳು ಉಂಟಾಗುವ ಬಗೆ ಹೇಗೆ ಎಂಬುದನ್ನು ಕುರಿತ ಶೋಕಗಳೆಲ್ಲಾ, **ಸಂಭಾವಿತಮು'** – ನ್ಯಾಯವಾಗಿ ಯೋಚಿಸತಕ್ಕದ್ದಾಗಿವೆ, ಹೇಳತಕ್ಕದ್ದಾಗಿರುತ್ತವೆ; **ಮಾಶುಚಃ** ಎಂಬ ಪ್ರಯೋಗವು ಇವೆಲ್ಲವನ್ನೂ ಸೂಚಿಸುತ್ತದೆ ಎಂಬ ಭಾವವು. ಇವುಗಳಲ್ಲಿ (೧) ನೆಯದು ಪೂರ್ವಾವಸ್ಥೆಯ ಶೋಕವು. (೨) ಮಧ್ಯಮಾವಸ್ಥೆಯ ಶೋಕ. (೩) ನೆಯದು ಅಪರಾವಸ್ಥೆಯುದು.

ಈ ಮೂರು ಅವಸ್ಥೆಗಳ ಶೋಕಗಳನ್ನೂ ನಿರೂಪಿಸಿ ಹೇಗೆ ಶೋಕ ನಿವೃತ್ತಿಯು ಎಂಬುದನ್ನು ವಿಶದೀಕರಿಸುತ್ತಾರೆ **ಅದಿಲ'** ಎಂದಾರಂಭಿಸಿ.

**ಅದಿಲ್** – ಈ ಮೂರು ವಿಧ ಶೋಕದಲ್ಲಿ, **ಅಧಿಕಾರಿವಿಶೇಷನಿವೃತ್ತಿ** ಶೋಕ ನಿವೃತ್ತಿ ಹೇಗೆ? ಎಂದರೆ ತಿಳಿಸುತ್ತಾರೆ.—**ಅನುಷ್ಟಿಕ್ಕಪ್ಪುಗುಗಿರ** – ನೀನು ಅನುಷ್ಠಿಸಬೇಕೆಂದಿರುವ, **ಶರಣಾಗತಿ ಧರ್ಮಂ** – **ಶರಣಂವ್ರಜ** ಎಂದು ಉಪದೇಶಿಸಿದ ಅನುಷ್ಠಾನ ಧರ್ಮವು, **ಜಾತಿ ವರ್ಣಾಶ್ರಮಾದಿ ವಿಶೇಷ ನಿಯತ ಮಲ್ಲಾಮ್ಮೈಯಾಲೇ** – ಉತ್ಕೃಷ್ಟವಾದ ಜಾತಿ ಮನುಷ್ಯಜಾತಿ, ವರ್ಣ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಆಶ್ರಮ – ಸನ್ಯಾಸ ಬ್ರಹ್ಮಚರ್ಯಾಶ್ರಮ, ಆದಿ – ಮೊದಲಾದ, ವಿಶೇಷಗಳೇ ಬೇಕೆಂಬ ಆವಶ್ಯಕತೆ ಇಲ್ಲದುದರಿಂದ, ಎಂದರೆ ಎಲ್ಲಾ ಜಾತಿ ವರ್ಣಾಶ್ರಮಿಗಳಿಗೂ ಈ ಶರಣಾಗತ್ಯನುಷ್ಠಾನದಲ್ಲಿ ಅಧಿಕಾರ ವಿರುವದರಿಂದ, **ಪ್ರಾಪ್ಯರುಚಿಯುಮು'** – ಈ ಶರಣಾಗತ್ಯನುಷ್ಠಾನದಿಂದ ಉಂಟಾಗುವ ಮೋಕ್ಷಪ್ರಾಪ್ತಿಯ ರೂಪ ಫಲವು ನಿರತಿಶಯ ಸುಖರೂಪವಾದುದರಿಂದ ಅದರಲ್ಲಿ ಅಭಿರುಚಿಯೂ, **ಪ್ರಾಪಕ ವಿಶ್ವಾಸಮುಮು'** – ಶ್ರಿಯಃಪತಿಯೇ ಸಿದ್ಧೋಪಾಯನಾಗಿ ನಿಂತು, ಆ ಉಪಾಸನ ಸ್ಥಾನದಲ್ಲಿ ತಾನು ನಿಂತು ಫಲವನ್ನು ನಡೆಸಿ ಕೊಡುವದರಿಂದ ಪ್ರಾಪಕ ವಿಶ್ವಾಸವೂ, **ಆಕಿಂಚನ್ಯಜ್ಞಾನಾದಿಗಳುಮು'** – ಕರ್ಮಯೋಗ ಜ್ಞಾನಯೋಗ ಸಹಕೃತ ಭಕ್ತಿಯೋಗವನ್ನು ಅನುಷ್ಠಿಸಲು ತನಗೆ ಅಧಿಕಾರವಾಗಲಿ ಶಕ್ತಿಯಾಗಲಿ ಇಲ್ಲದೇ ಇರುವದರಿಂದ ತಾನು ಅಕಿಂಚನನೆಂಬ ಜ್ಞಾನವೇ ಮೊದಲಾದವುಗಳೂ, ಆದಿ ಶಬ್ದದಿಂದ, ಸ್ವಾಮಿಯು ಮಹಾ ಕೃಪಾಳುವು ಶರಣಾಗತಿಯನ್ನು ಅನುಷ್ಠಿಸಿದರೆ ರಕ್ಷಿಸಿಯೇ ರಕ್ಷಿಸುವನೆಂಬ ಮಹಾವಿಶ್ವಾಸಾದಿಗಳು ಹೇಳಲ್ಪಟ್ಟವು, ಇವುಗಳು, **ಉಣ್ಡಾನಪೋದು** – ಉಂಟಾದಾಗ, **ನಾಮು'** – ನಾವುಗಳೂ,

**ತುಕ್ಕು ಅಧಿಕಾರಿಗಳಲ್ಲೋಂ' ಎನ್ರು ಶೋಕಿಕ್ಕ ವೇಣ್ಡಾ. (೨) ಇವ್ವು ಪಾಯ ವಿಶೇಷಮ್ ಸಪರಿಕರಮಾಗ ಕ್ಷಣಕಾಲ ಸಾಧ್ಯಮಾಯ್', ಸುಕರ ಮಾಯ್', ಆವೃತ್ತಿ ನಿರಪೇಕ್ಷಮಾಯ್' ಉಪಾಯಾನ್ತರ ವ್ಯವಧಾನ ಮುಮ್ ದುಷ್ಕರ ಪರಿಕಾರಾನ್ತರಮು ಮನ್ರಿಕ್ಕೇ ಇರುಪ್ಪದಾಯ್', ಕೋಲಿನ ಕಾಲತ್ತಿಲೇ ಅಪೇಕ್ಷಿತ ಫಲಙ್ಗಳೆಲ್ಲಾತ್ತೈಯುಮ್ ತರುವದಾ ಯಿರುಕ್ಕೈಯಾಲೇ ಆಕಿಂಚನ್ಯಮುಮ್', ಫಲವಿಳಂಬ ಭಯಮು ಮುಡ್ಶೈ**

---

**ಇದುಕ್ಕು** - ಈ ಪ್ರಪದನಾನುಷ್ಠಾನಕ್ಕೆ **ಅಧಿಕಾರಿಗಳಲ್ಲೋಂ' ಎನ್ರು** - ಅಧಿಕಾರಿಗಳಲ್ಲವೆಂದು, **ಒರುವರುಕ್ಕುಂ'** - ಯಾವ ಒಬ್ಬನಿಗೂ, **ಶೋಕಿಕ್ಕ ವೇಣ್ಡಾ** - ಶೋಕಿಸಬೇಕಾದುದು ಇಲ್ಲವು, ಶರಣಾಗತಿಗೆ ಎಲ್ಲರಿಗೂ ಅಧಿಕಾರ ವಿರುವದರಿಂದ, ಸ್ವಾಮಿಯು ತಾನೇ ಸಿದ್ಧೋಪಾಯನಾಗಿ ನಡೆಸಿಕೊಡುವದರಿಂದ, ಫಲವೂ ಸಿದ್ಧವಾದುದಾದುದರಿಂದ ಭರನ್ಯಾಸ ನಿಷ್ಠನು ಶೋಕಿಸಬೇಕಾದುದಿಲ್ಲ ವೆಂಬ ಭಾವವು. ಇದು ಭರನ್ಯಾಸನಿಷ್ಠನಾಗುವನಿಗೆ ಪೂರ್ವಭಾವಿಯಾಗಿ ಶೋಕಿಸಬೇಕಾದುದಿಲ್ಲವೆಂಬ ಭಾವವು.

(೨) ಉಪಾಯವು ಎರಡು ವಿಧವಾಗಿ ಸಿದ್ಧೋಪಾಯ ಸಾಧ್ಯೋಪಾಯ ವಾದುದರಿಂದ ಈ ಮುಂದಿನ ವಾಕ್ಯದಿಂದ ಸಾಧ್ಯೋಪಾಯ ವಿಷಯವಾದ ಶೋಕ ನಿವೃತ್ತಿಯನ್ನು ಉಪಪಾದಿಸುತ್ತಾರೆ. **ಇವ್ವುಪಾಯ ವಿಶೇಷಂ** - ಈ ಸಾಧ್ಯೋಪಾಯವಾದ ಪ್ರಪತ್ತಿಯು, **ಸಪರಿಕರಮಾನ** - ಆನುಕೂಲ್ಯ ಸಂಕಲ್ಪಾದಿ ಐದು ಅಂಗಗಳಿಂದ ಕೂಡಿದುದಾಗಿ, **ಕ್ಷಣಕಾಲಸಾಧ್ಯಮಾಯ್** - ಭಕ್ತ್ಯುಪಾಯದ ಹಾಗೆ ಯಾವ ಜ್ಞೀವವೂ ಅನುಷ್ಠಿಸಬೇಕಾಗಿಲ್ಲದೆ, ಆಚಾರ್ಯರು ದ್ವಯಮನ್ತ್ರವನ್ನು ಉಚ್ಚರಿಸುವ ಹಾಗೆ ಮಾಡುವ ಅಲ್ಪಕಾಲದಲ್ಲಿ ಸಾಧ್ಯವಾಗಿ, **ಸುಕರಮಾಯ್** - ಇನ್ನೊಂದು ಉಪಾಯದ ಹಾಗೆ ಕಷ್ಟವಾಗಿಲ್ಲದೆ, ಅನುಷ್ಠಿಸುವದು ಸುಲಭವಾಗಿ, **ಆವೃತ್ತಿ ನಿರಪೇಕ್ಷಮಾಯ್'** - ಭಕ್ತ್ಯುಪಾಯವು ಪ್ರತಿದಿನದಲ್ಲೂ ಆವೃತ್ತಿಯಿಂದ ಉಪಾಸನೆಯ ಅಪೇಕ್ಷೆಯುಂಟು, ಹಾಗಲ್ಲದೆ ಆವೃತ್ತಿಬೇಕಾಗಿಲ್ಲದೆ, **ಉಪಾಯಾನ್ತರವ್ಯವಧಾನಮುಮ್** - ಇನ್ನೊಂದು ಉಪಾಯದ ಆವಶ್ಯಕತೆ ಇರುವ ವ್ಯವಹಿತ ಸಾಧನವು ಯಾವುದೂ ಬೇಕಾಗಿಲ್ಲದಿರುವ, **ಪರಿಕರಾನ್ತರ ಮನ್ರಿಕ್ಕೇ** - ನಿತ್ಯ ನೈಮಿತ್ತಿಕಾದಿ ಕರ್ಮಾನುಷ್ಠಾನ ರೂಪ ಬೇರೆ ಪರಿಕರಗಳು ಯಾವುವೂ ಇಲ್ಲದೆ, **ಕೋಲಿನ ಕಾಲತ್ತಿಲೇ ಅಪೇಕ್ಷಿತ ಫಲಙ್ಗಳೆಲ್ಲಾತ್ತೈಯುಮ್ ತರುವದಾಯಿರುಕ್ಕೈಯಾಲೇ** - ಆರ್ತನಾಗಿ ಒಡನೆ ಫಲಾಪೇಕ್ಷೆ ಇದ್ದರೆ ಒಡನೆಯೇ, ಅಥವಾ ದೃಪ್ತಪ್ರಪನ್ನನಾದರೆ ದೇಹಾವಸಾನದಲ್ಲೇ ಇವನಿಗೆ ಬೇಕಾದ ಎಲ್ಲಾ ಫಲಗಳನ್ನು ಕೊಡುವಂತಾದ್ದಾಗಿರುವದರಿಂದ, **ಆಕಿಂಚನ್ಯಮುಮ್' ಫಲವಿಳಂಬ ಭಯ**

**ಯುವನುಕ್ಕು ಸಪರಿಕರ ಚಿರಕಾಲಾನು ವರ್ತ್ತನೀಯಮಾಯ್, ಅತ್ಯನ್ತಾವ ಹಿತರ್ಕ್ಕುಮ್ ಕೃಚ್ಛ್ರಸಾಧ್ಯಮಾಯ್, ತಥಾವಿದ ಪರಿಕರಾಂತರ ಸಾಪೇಕ್ಷಮು ಮಾಯ್ ಫಲವಿಳಂಬ ಮುಮುಡೈತ್ತಾನ ಉಪಾಯಾನ್ತರತ್ತಿಲೇ ಅಲೈಯ ವೇಣ್ಡುಗಿರತೋವೆನ್ರು ಶೋಕಿಕ್ಕವೇಣ್ಡಾ.**

**(೩) ಇಪ್ಪಡಿ ಲಘೂಪಾಯಮಾತ್ರತ್ತಾಲೇ ವಶೀಕಾರ್ಯನಾಯ್, ಫಲ ಪ್ರದಾನಮ್ ಪ್ಪಣ್ಣ ವಿರುಕ್ಕಿರ ಶರಣ್ಯನ್ ಸರ್ವಸುಲಭನಾಯ್ ವಿಶ್ವಾಸನೀಯ**

---

**ಮುಮ್ ಉಡೈಯವನುಕ್ಕು** – ತನಗೆ ಇನ್ನು ಯಾವುದೂ ಗತಿಯಿಲ್ಲವೆಂಬ ದೈನ್ಯವೂ, ಮತ್ತು ಇನ್ನೊಂದು ಜನ್ಮವನ್ನೇನಾದರೂ ಎತ್ತಬೇಕಾಗುತ್ತದೋ ಎಂಬ ಭಯವೂ, ಇರುವವನಿಗೆ, **ಸಪರಿಕರ ಚಿರಕಾಲಾನುವರ್ತ್ತನೀಯಮಾಯ್** – ಕರ್ಮಯೋಗಾದಿ ಪರಿಕರ ಬಲದಿಂದ ಬಹುಕಾಲವನ್ನು ಅನುಸರಿಸಿದುದಾಗಿ, **ಅತ್ಯಂತಾವಹಿತರ್ಕ್ಕುಮ್** – ತುಂಬಾ ಜಾಗರೂಕರಾಗಿರುವವರಿಗೂ ಕೂಡ, **ಕೃಚ್ಛ್ರಸಾಧ್ಯಮಾಯ್** – ಕಷ್ಟಸಾಧ್ಯವಾಗಿ, **ತಥಾವಿಧ ಪರಿಕರಾಂತರ ಸಾಪೇಕ್ಷಮಾಯ್** – ಕರ್ಮಯೋಗಾದಿ ಪರಿಕರಗಳೂ ತುಂಬಾ ಕಷ್ಟವಾದುದರ ಅಪೇಕ್ಷೆಯುಳ್ಳದ್ದಾಗಿ, **ಫಲವಿಳಂಬ ಮುಡೈತ್ತಾನ** – ಫಲಸಿದ್ಧಿಯು ಎಲ್ಲಾ ಪ್ರಾರಬ್ಧ ಕಳೆದ ನಂತರವಾದುದರಿಂದ ಮುಂದಿನ ಜನ್ಮಗಳನ್ನು ಎತ್ತಬೇಕಾದ ವಿಳಂಬವಿರುವ, **ಉಪಾಯಾನ್ತರತ್ತಿಲೇ** – ಬೇರೆ ಉಪಾಯವಾದ ಭಕ್ತ್ಯುಪಾಯದಲ್ಲಿ, **ಅಲೈಯವೇಣ್ಡುಗಿರತೋ** – ಎಲ್ಲಿ ಕಷ್ಟಪಡಬೇಕಾಗುತ್ತದೋ, **ಎನ್ರು** – ಎಂಬದಾಗಿ, **ಶೋಕಿಕ್ಕವೇಣ್ಡಾ** – ಶೋಕಿಸಬೇಕಿಲ್ಲವೆಂದು **ಮಾಶುಚಃ** – ಎಂದು ಹೇಳಲ್ಪಟ್ಟಿತು. ಭಕ್ತ್ಯುಪಾಯದ ಕಷ್ಟವನ್ನೂ ಶರಣಾಗತಿಯ ಸೌಕರ್ಯವನ್ನೂ ತಿಳಿಸಿ, ಈಗ ತಾವು ತಿಳಿಸಿರುವ ಸಾಧ್ಯೋಪಾಯವಾದ ಶರಣಾಗತಿಯು ಬಹುಸುಲಭವಾದ ಉಪಾಯವಾದುದರಿಂದ ಇದನ್ನೇ ಅನುಷ್ಠಿಸಿ, ಇನ್ನೊಂದಾದ ಉಪಾಸನವು ತುಂಬಾ ಕಷ್ಟತರವಾದುದರಿಂದ ಇದನ್ನು ಎಲ್ಲಿ ಅನುಷ್ಠಿಸಬೇಕಾಗುತ್ತದೋ ಎಂದು ನೀನು ಶೋಕಿಸುವ ಕೆಲಸವಿಲ್ಲವೆಂಬ ಭಾವವು. ಹಿಂದೆ ಉಪಾಯ ವಿಭಾಗಾಧಿಕಾರದಲ್ಲಿ ಪ್ರಪದನೋಪಾಯಕ್ಕೂ ಮತ್ತು ಉಪಾಸನಾರೂಪೋಪಾಯಕ್ಕೂ ಹೇಳಿದ ತಾರತಮ್ಯಗಳು ಈ ವಾಕ್ಯದಲ್ಲೂ ಉಪಪಾದಿಸಲ್ಪಟ್ಟವು.

(೩) **ಇಪ್ಪಡಿ** – ಹೀಗೆ ಗುರೂಪಾಯವಾದ ಉಪಾಸನದಲ್ಲಿ ಅಲೆಯದೆ **ಲಘೂಪಾಯ ಮಾತ್ರತ್ತಾಲೇ** – ಲಘೂಪಾಯವಾದ ಶರಣಾಗತಿ ಮಾತ್ರದಿಂದ, **ವಶೀಕಾರ್ಯನಾಯ್** – ಉಪಾಯ ನಿಷ್ಠನಿಗೆ **ಅಹಂ ಭಕ್ತ ಪರಾಧೀನಃ** ಎಂದೂ **"ಇಮೌಸ್ಮ ಮುನಿಶಾರ್ದೂಲ ಕಿಂಕರೌ ಸಮುಪಸ್ಥಿತೌ । ಆಜ್ಞಾಪಯ"** ಎಂದೂ ಹೇಳಿಕೊಂಡವರಿಗೆ ವಶನಾಗಿರುವ, **ಫಲಪ್ರದಾನಂ ಪ್ಪಣ್ಣ ವಿರು**

**ತಮನಾಯ್, ಪರಮ ಕಾರುಣಿಕನಾಯ್, ನಿರಙ್ಕುಶ ಸ್ವಾತಂತ್ರ್ಯನಾಯ್, ಇರುಕ್ಕೈಯಾಲ್ ಸಿದ್ಧೋಪಾಯತ್ತೈ ಪ್ಪತ್ತ ಶೋಕಿಕ್ಕವೇಣ್ಡಾ.**

---

**ಕ್ಕರ** - ಆತನ ಪ್ರಾರ್ಥನೆಯನ್ನು ಸಲ್ಲಿಸಬೇಕೆಂದಿರುವ, **ಶರಣ್ಯ** - ಸರ್ವಲೋಕ ರಕ್ಷಕನಾದ, **ಸರ್ವಸುಲಭನಾಯ್** - ಎಲ್ಲಾ ವಿಷಯದಲ್ಲೂ ಅನಂತರ ಸುಲಭ ನಾಗಿ, **ವಿಶ್ವಸನೀಯತಮನಾಯ್** - ಆತನ ಮಾತಿನಲ್ಲಿ ಅತ್ಯಂತ ವಿಶ್ವಾಸ ವನ್ನು ಇಡಲು ಯೋಗ್ಯನಾಗಿ, ಆತನು ಸತ್ಯಸಙ್ಕಲ್ಪನಾಗಿ ಆಡಿದ ಮಾತಿಗೆ ತಪ್ಪುವನಲ್ಲವಾದುದರಿಂದ ಹೆಚ್ಚಾದ ವಿಶ್ವಾಸವನ್ನು ಇಡಲು ಯೋಗ್ಯನಾಗಿ ಎಂಬ ಭಾವವು, **ಪರಮಕಾರುಣಿಕನಾಯ್** - ಎಷ್ಟು ಪಾಪಗಳು ಇದ್ದರೇನು ! ಎಲ್ಲ ವನ್ನೂ ಹೋಗಲಾಡಿಸುವನೆಂದು ಪ್ರತಿಫಲವಿಲ್ಲದೆ ಪ್ರತಿಜ್ಞೆ ಮಾಡಿರುವದರಿಂದ ಅತ್ಯಂತ ದಯಾಪರನಾಗಿ, **ನಿರಙ್ಕುಶ ಸ್ವಾತಂತ್ರ್ಯನಾಯ್** - ತಡೆಯಿಲ್ಲದ ತನ್ನ ಸಙ್ಕಲ್ಪವನ್ನು ನಡೆಸುವವನಾಗಿ, **ಇರುಕ್ಕೈಯಾಲೇ** - ಇರುವದರಿಂದ, **ಸಿದ್ಧೋಪಾಯತ್ತೈಪ್ಪತ್ತ** - ಆತನು ಸಿದ್ಧೋಪಾಯನಾಗಿ ಫಲಪ್ರದಾನವನ್ನು ಮಾಡುವ ನೆಂಬುದನ್ನು ಕುರಿತು, **ಶೋಕಿಕ್ಕವೇಣ್ಡಾ** - ಅಳಬೇಕಾದ್ದಿಲ್ಲವು, ಎಂಬುದು ಮಾಶುಚಃ ಎಂಬರ್ಥವು. ಇಲ್ಲಿ **ಶರಣ್ಯ** - ಎಂಬ ಪ್ರಯೋಗವು ಶ್ರೀರಾಮಾವ ತಾರಿಯಾಗಿ ಹೇಳಿಕೊಂಡ ತಮ್ಮ ವ್ರತವನ್ನು ಸೂಚಿಸುತ್ತದೆ. **ಸರ್ವಲೋಕ ಶರಣ್ಯಾಯ** ಎಂದು ಹೇಳಿದ ವಿಭೀಷಣೋಕ್ತಿಯೂ, ಶ್ರೀರಾಮಚಂದ್ರಪ್ರಭುವಿನ ವಾಕ್ಯವಾದ "**ಸಕೃದೇವ ಪ್ರಪನ್ನಾಯ ತವಾಸ್ಮೀತಿಚ ಯಾಚತೇ ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂಮಮ** ಎಂಬುದನ್ನೂ ಸೂಚಿಸುತ್ತದೆ. ಹಾಗೆ ವಶೀಕಾರ್ಯನು ಎಂಬುದನ್ನು, **ಗೋವಿಂದೇತಿಯದಾ ಕ್ರಂದತ್ಕೃಷ್ಣಾ ಮಾಂ ದೂರವಾಸಿನಮ್ । ಋಣಂ ಪ್ರವೃದ್ಧ ಮಿವ ಮೇ ಹೃದಯಾನ್ನಾಪಸರ್ಪತಿ** ಎಂಬ ವಾಕ್ಯವು, ಸ್ವಾಮಿಯ ವಾಕ್ಯದಲ್ಲಿ ಹೆಚ್ಚಾದ ವಿಶ್ವಾಸವನ್ನೂ ಪರಮ ಕಾರುಣ್ಯ ವನ್ನೂ ಆಶ್ಚರ್ಯವನ್ನೂ ಸೂಚಿಸುತ್ತದೆ. ನಿರಙ್ಕುಶ ಸ್ವಾತಂತ್ರ್ಯಕ್ಕೆ ನಿದರ್ಶನವಾಗಿ, ವಿಭೀಷಣನು ಶರಣಾಗತನಾದ ಒಡನೆಯೇ ಆತನಿಗೆ ತಕ್ಷಣವೇ ಅನುಗ್ರಹಿಸುವದ ಕ್ಕಾಗಿ, ಸಮುದ್ರತರಣಕ್ಕೂ ರಾವಣಾದಿಗಳ ಹನನಕ್ಕೂ ಪೂರ್ವಭಾವಿಯಾಗಿಯೇ ಲಂಕಾರಾಜ್ಯಾಭಿಷಕ್ತನನ್ನಾಗಿ ಲಕ್ಷ್ಮಣ ಮೂಲಕ ಮಾಡಿಸಿ, ನಿರಙ್ಕುಶ ಸ್ವಾತಂತ್ರ್ಯ ಪ್ರಭಾವನಾದುದರಿಂದ ಅದನ್ನು ರಾವಣ ವಧಾನಂತರ ಪುನಃ ವಿಭೀಷಣನನ್ನು ಯಥಾರ್ಥವಾಗಿ ಲಂಕಾರಾಜ್ಯಾಭಿಷಕ್ತನನ್ನಾಗಿ ಮಾಡಿಸಿದನೆಂದು **ವಿಜ್ವರಃ ಪ್ರಮು ಮೋದ ಹ** ಎಂದು ಹೇಳಲ್ಪಟ್ಟಿರುತ್ತದೆ.

**ಹ** ಶಬ್ದವು ಇಂತಹ ನಿರಙ್ಕುಶ ಸ್ವಾತಂತ್ರ್ಯದ ಆಶ್ಚರ್ಯವನ್ನು ಸೂಚಿಸುತ್ತದೆ. ಪರಮ ಪ್ರಪನ್ನಳಾದ ದ್ರೌಪದಿಗೆ "**ಯತ್ಸಮರ್ಥಂ ಪಾಂಡವಾನಾಂ ತತ್ಕರಿ**

**(೪) ಇವ್ವುಪಾಯಾನುಷ್ಠಾನತ್ತುಕ್ಕು ಪಿನ್ಬು ಆಜ್ಞಾನುಜ್ಞೈಕಙ್ಗಳಾಲೇ ಪಣ್ಣುಮ್' ಸತ್ಕರ್ಮಙ್ಗಳಿಲ್ಲಾಮಲ್ ಇಪ್ಪ್ರಪತ್ತಿಕ್ಕು ಅಙ್ಗಮಲ್ಲಾಮೈಯಾಲೇ ಅವತ್ತುಕ್ಕು ದೇಶ ಕಾಲಾದಿ ವೈಗುಣ್ಯತ್ತಾಲೇ ಶಿಲ ವೈಕಲ್ಯಮುಣ್ಡಾನಾ**

---

**ಷ್ಯಾಮಿ ಮಾಶುಚಃ। ಸತ್ಯಂತೇಪ್ರತಿಜಾನಾಮಿ ರಾಜ್ಞಾಂರಾಜ್ಞೀ ಭವಿಷ್ಯಸಿ"** ಎಂಬ ವಾಕ್ಯದಲ್ಲಿ **ಮಾಶುಚಃ** ಎಂದೇ ಸಮಾಧಾನ ಮಾಡಿರುತ್ತಾರೆ-ಓ ದ್ರೌಪದಿಯೇ ಕೌರವರ ದೌಷ್ಟ್ಯಕ್ಕಾಗಿ ಅಳಬೇಡ; ಪಾಂಡವರಲ್ಲಿ ಮಧ್ಯಮನಾದ ಅರ್ಜುನನನ್ನು ಸಮರ್ಥನನ್ನಾಗಿಮಾಡಿ ರಾಜ್ಯಾಧಿಪತಿಯನ್ನಾಗಿಯೂ ನಿನ್ನನ್ನು ಪಂಚರಾಜರ ಮಹಿಷಿಯನ್ನಾಗಿಯೂ ಮಾಡುವೆನು, **"ಪತೇದ್ದ್ಯೌಹಿಮವಾನ್ ಶೀರ್ಯೇತ್ಪೃಥಿವೀಶಕಲೀಭವೇತ್। ಶುಷ್ಯೇತ್ತೋಯನಿಧಿಃ ಕೃಷ್ಣೇ ನಮೇ ಮೋಘಂ ವಚೋಭವೇತ್"** ಭಾರತ. ವನ ೧೨, ೧೩೬-೪. ಸ್ವರ್ಗಲೋಕ ಕೆಳಗೆ ಬೀಳಬಹುದು, ಹಿಮವತ್ಪರ್ವತವು ಶೀಳಿಹೋಗಬಹುದು; ಪೃಥಿವಿಯು ಚೂರುಚೂರಾಗಬಹುದು; ಸಮುದ್ರವು ಶೋಷಿಸಿ ಹೋಗಬಹುದು; ನನ್ನ ವಾಕ್ಯಾದರೋ ಎಂದಿಗೂ ವ್ಯರ್ಥವಾಗುವುದಿಲ್ಲವೆಂದು ನಿರಙ್ಕುಶ ಸ್ವಾತಂತ್ರ್ಯವನ್ನು ತೋರ್ಪಡಿಸಿರುತ್ತಾರೆ. **ಅತಿಸುಲಭನಾಯ್'**-ತಾನು ಪ್ರಪನ್ನನಿಗೆ ಅತಿಸುಲಭನೆಂದು ತಾವೇ ಹೇಳಿಕೊಂಡಿರುತ್ತಾರೆ — **ಅನನ್ಯಚೇತಾಸ್ಸತತಂ ಯೋಮಾಂಸ್ಮರತಿ ನಿತ್ಯಶಃ। ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯಯೋಗಿನಃ** ಎಂಬದಾಗಿ. ಶರಣಾಗತಿಯೂ **ಯೋಗದಲ್ಲೇ** ಸೇರಿತು - **ಸಿದ್ಧೋಪಾಯತ್ತ್ರಪತ್ತಶೋಕಿಕ್ಕವೇಣ್ಡಾ**-ಹೀಗೆ **ಪರಮ ಕಾರುಣಿಕನಾದ ಸಿದ್ಧೋಪಾಯನು ತಾನು** ಎಂದು ಅರ್ಜುನನಿಗೆ ಹೇಳಿಕೊಂಡಿರುತ್ತಾರೆ - **ತೇಷಾಮೇವಾನುಕಂಪಾರ್ಥಂ ಅಹಮಜ್ಞಾನಜಂತಮಃ। ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ** (ಗೀ ೧೦.೧೧) ಎಂಬದಾಗಿ.

ಅನುಷ್ಠಾನದಶೆಯಲ್ಲಿ ಅಂಗವೈಕಲ್ಯದಿಂದ ಉಪಾಯವು ಎಲ್ಲಿ ಸಿದ್ಧಿಸದೆ ಹೋದೀತೋ ಎಂಬ ಶೋಕವೂ ಬೇಡವೆಂದು **ಮಾಶುಚಃ** ಎಂಬಲ್ಲಿ ಹೇಳಲ್ಪಟ್ಟಿತೆನ್ನುತ್ತಾರೆ. (೪) **ಇವ್ವುಪಾಯಾನುಷ್ಠಾನತ್ತುಕ್ಕುಪಿನ್ಬು**-ಈ ಭರನ್ಯಾಸವನ್ನು ಅನುಷ್ಠಿಸಿದ ನಂತರ **ಆಜ್ಞಾನುಜ್ಞೈಕಙ್ಗಳಾಲೇ** - ಸ್ನಾನಸಂಧ್ಯಾವಂದನಾದಿ ಪಂಚಮಹಾಯಜ್ಞಗಳು ಆಜ್ಞಾ ಕೈಂಕರ್ಯಗಳು, ಭಗವದ್ಭಾಗವತ ಕೈಙ್ಕರಗಳು ಅನುಜ್ಞಾಕೈಂಕರ್ಯಗಳು, ಇವುಗಳಿಂದ **ಪಣ್ಣುಮ್' ಸತ್ಕರ್ಮಙ್ಗಳಾಲೇ** - ಮಾಡುವ ಸದ್ಧರ್ಮಗಳಿಂದ, **ಇಪ್ರಪತ್ತಿಕ್ಕು** - ಈ ಶರಣಾಗತ್ಯಾನುಷ್ಠಾನಕ್ಕೆ, **ಅಙ್ಗಮಲ್ಲಾಮೈಯಾಲೇ** - ಅಙ್ಗವಲ್ಲದುದರಿಂದ, ಈ ಪ್ರಪದನಕ್ಕೆ ಸೇರಿದುದೇ ಅಲ್ಲವೆಂಬ ಭಾವವು, **ಅವತ್ತುಕ್ಕು** - ಆ ಆಜ್ಞಾನುಜ್ಞಾಕೈಙ್ಕರ್ಯಗಳಿಗೆ **ದೇಶಕಾಲಾದಿವೈಗು**

**ಲುಮ್‌, ಉಪಾಸನತ್ತುಕ್ಕುಪ್ಪೋಲ್ ಇದುಕ್ಕು ಪರಿಕರ ವೈಕಲ್ಯಂ ಪಿರಕ್ಕಿ ರದೋವೆನ್ರು ಶೋಕಿಕ್ಕವೇಣ್ಡಾ (೫) ಭಗವತ್ಕೈಙ್ಕರ್ಯಾದಿಗಳುಕ್ಕು ಅನರ್ಹ ತೆಯುಂಡಾಕ್ಕುಮ್‌ ಬುದ್ಧಿಪೂರ್ವ ಮಹಾಭಾಗವತಾಪಚಾರಾದಿಗಳ್ಳೈ ವಿಳ್ಳೈ**

---

**ಣ್ಯತ್ತಾಲೇ** - ದೇಶಕಾಲಾವಸ್ಥೆಗಳ ಹೀನ ಸ್ಥಿತಿಯಿಂದ ಅನುಕೂಲವಿಲ್ಲದಿರುವದ ರಿಂದ, **ಶಿಲವೈಕಲ್ಯಮುಣ್ಡಾನಾಲುಮ್** - ಅನುಷ್ಠಾನದಲ್ಲಿ ಕೆಲವು ನ್ಯೂನತೆ ಗಳುಂಟಾದರೂ, **ಉಪಾಸನಕ್ಕುಪ್ಪೋಲ್** - ಉಪಾಸನಕ್ಕೆ ಆಜ್ಞಾಕೈಂಕರ್ಯಗಳು ಅಙ್ಗಗಳು, ಮಾಡಿಯೇ ತೀರಬೇಕು, ಇಲ್ಲದಿದ್ದರೆ ಉಪಾಸನೆಯು ಸಿದ್ಧಿಸದು ಹಾಗೆ ಉಪಾಸನೆಯಹಾಗೆ, **ಇದುಕ್ಕು** - ಈ ಶರಣಾಗತಿಗೆ, **ಪರಿಕರವೈಕಲ್ಯಮ್‌** - ಅಙ್ಗಗಳಲ್ಲಿ ನ್ಯೂನತೆಯು, **ಪಿರಕ್ಕಿರದೋ** - ಎಲ್ಲಿ ಉಂಟಾಗುತ್ತದೋ, **ಎನ್ರು ಶೋಕಿಕ್ಕವೇಣ್ಡಾ** - ಎಂಬದಾಗಿ ಮಾಶುಚಃ ಎಂದು ಹೇಳಲ್ಪಟ್ಟಿತು. ಆಜ್ಞಾ ಕೈಂಕರ್ಯಗಳು ಉಪಾಸನಕ್ಕೆ ಅಙ್ಗಗಳು; ಹಾಗೆಯೇ ವ್ಯಾಸಸೂತ್ರದಲ್ಲೂ ಇತಿಹಾಸ ಪುರಾಣಗಳಲ್ಲೂ ಗೀತೆಯಲ್ಲೂ ಪ್ರೋಕ್ತವು. ಶ್ರೀಭಾಷ್ಯಕಾರರು **"ಜ್ಞಾನಕರ್ಮಾ ನುಗೃಹೀತಭಕ್ತಿಯೋಗಮವತಾರಯಾಮಾಸ"**. ಎಂದು ಗೀತಾವತಾರಿಕೆ ಯಲ್ಲೂ, ಭಗವದ್ಗೀತೆಯ ದ್ವಿತೀಯಾಧ್ಯಾಯದ ಕೊನೆಯ ಶ್ಲೋಕದಲ್ಲೂ, ನಿಪುಣತರವಾಗಿ ಉಪಪಾದಿತವು. ಅಲ್ಲಿ ಅನೇಕ ಪ್ರಮಾಣಗಳು ಉಪಪಾದಿತವು ; ಹೀಗೆ ನಿತ್ಯನೈಮಿತ್ತಿಕಗಳು ಉಪಾಸನದ ಹಾಗೆ ಪ್ರಪತ್ತಿಗೆ ಅಂಗಗಳ ಲ್ಲವು. ದೇಶಕಾಲವೈಗುಣ್ಯಾದಿಂದ ಆಜ್ಞಾನುಜ್ಞಾಕೈಙ್ಕರ್ಯಗಳು ನಡೆಯದೇ ಹೋಗಬಹುದು. ನಿರ್ಜಲ ಪ್ರದೇಶದಲ್ಲಿ ರೈಲಿನಲ್ಲಿ ಹೋಗುವಾಗ ರೈಲು ನಿಂತು ಹೋಗಲು ನಿತ್ಯಕರ್ಮಾನುಷ್ಠಾನಗಳಿಗೆ ನ್ಯೂನತೆಯುಂಟಾಗಬಹುದು. ಹಾಗೆಯೇ ಜಾತಾದಿ ಅಶೌಚಗಳಲ್ಲೂ ನ್ಯೂನತೆ ಲಭಿಸಬಹುದು. ಶರೀರಾಲಸ್ಯಗಳಲ್ಲೂ ನಡೆ ಯದೆ ಹೋಗಬಹುದು. ಇಂತಹ ಸಂದರ್ಭದಲ್ಲಿ ಸ್ವಲ್ಪವಾದರೂ ಪ್ರತ್ಯವಾಯ ವಿಲ್ಲವೆಂಬ ಅಭಿಪ್ರಾಯದಿಂದ **ದೇಶ ಕಾಲಾದಿವೈಗುಣ್ಯತ್ತಾಲೇ ಶಿಲವೈಕಲ ಮುಂಡಾನಾಲುಮ್** ಎಂಬ ಪ್ರಯೋಗವು. ಉಪಾಸನಕ್ಕಾದರೋ ಈ ನಿತ್ಯ ನೈಮಿತ್ತಿಕಙ್ಗಳು ಅಙ್ಗಗಳು. ಆದುದರಿಂದ ಉಪಾಸನತ್ತುಕ್ಕುಪ್ಪೋಲ್ ಎಂಬ ಪ್ರಯೋಗವು. ಈ ಆಜ್ಞಾಕೈಂಕರ್ಯಗಳು ಪ್ರಪತ್ತಿಗೆ ಅಙ್ಗವಲ್ಲದುದರಿಂದ ಅಂತಹ ಕೈಂಕರ್ಯಗಳ ವೈಕಲ್ಯದಿಂದ ಶೋಕಕ್ಕೆ ಕಾರಣವೇ ಇಲ್ಲವಾದುದರಿಂದ **ಮಾಶುಚಃ** ಎಂದು ಹೇಳಲ್ಪಟ್ಟಿತೆಂಬ ಭಾವವು.

ಮುಂದೆ ಉತ್ತರಕೃತ್ಯದ ವಿಷಯವಾಗಿ ಬರುವ ಶೋಕವೂ ಬೇಡವೆಂದು **ಮಾಶುಚಃ** ಎಂದು ಹೇಳಲ್ಪಟ್ಟಿತೆನ್ನುತ್ತಾರೆ-(೫) **ಭಗವತ್ಕೈಙ್ಕರ್ಯಾದಿಗಳುಕ್ಕು** ಭಗವದ್ಭಾಗವತಕೈಙ್ಕರ್ಯಗಳಿಗೆ **ಅನರ್ಹತೆಯುಂಡಾಕ್ಕುಮ್‌** - ಅಯೋಗ್ಯತೆ ಯನ್ನುಂಟುಮಾಡುವ, **ಬುದ್ಧಿಪೂರ್ವಕವಾದ ಮಹಾಭಾಗವತಾಪಚಾರಾದಿಗಳ್ಳೈ**

**ತ್ತು ದಗ್ಧಪಟಂಪೋಲೆ ಆಕ್ಕವಲ್ಲಿ ಪ್ರಾರಬ್ಧಫಲಮಾನ ಪಾಪವಿಶೇಷತ್ತುಕ್ಕಂಜಿ ಪ್ರಥಮ ಪ್ರಪತ್ತಿಕಾಲತ್ತಿಲೇ ಯಾದಲ್, ಪಿನ್ಪೊರುಕಾಲ್' ಅದಕ್ಕಾಗ ಪ್ರಪತ್ತಿಪಣ್ಣಿಯಾದಲ್, ನಿರಪರಾಧಮಾನ ಉತ್ತರ ಕೃತ್ಯತ್ತೈ ಅಪೇಕ್ಷಿತ್ತಾಲ್' ಮೇಲ್' ಅಪರಾಧ ಪ್ರಸಜ್ಗತ್ತೈಯುಮ್'ಪತ್ತ ಶೋಕಿಕ್ಕವೇಣ್ಡಾ.**

---

ಮಹತ್ತಾದ ಭಾಗವತಾಪಚಾರವೇ ಮೊದಲಾದವುಗಳನ್ನು **ವಿಳೈತ್ತು** – ಹೆಚ್ಚಿಸಿಕೊಂಡು, **ದಗ್ಧಪಟಂಪೋಲೇ** – ಸುಟ್ಟ ಬಟ್ಟೆಯಹಾಗೆ, ಬಟ್ಟೆಸುಟ್ಟರೆ ಬೂದಿ ಕೂಡವಿರುವದಿಲ್ಲವಾಗಿ ಅದರಹಾಗೆ ಯಾವದಕ್ಕೂ ಪ್ರಯೋಜನವಿಲ್ಲದೆ, **ಆಕ್ಕವಲ್ಲ** ಮಾಡುವಂತಹ, **ಪ್ರಾರಬ್ಧಫಲವಾದ, ಪಾಪವಿಶೇಷತ್ತುಕ್ಕಂಜಿ** – ಭಯಪಟ್ಟು, **ಪ್ರಥಮಪ್ರಪತ್ತಿಕಾಲತ್ತಿಲಾದಿಲ'** – ಮೋಕ್ಷಾರ್ಥವಾಗಿ ಮೊದಲುಮಾಡುವ ಪ್ರಪತ್ತಿ ಕಾಲದಲ್ಲಿಯಾಗಲಿ, **ಪಿನ್ಪೊರುಕಾಲ್'** – ಅಥವಾ ಮುಂದಕ್ಕೆ ಒಂದು ಸಮಯದಲ್ಲಿ, **ಅದಕ್ಕಾಕ** – ಆ ಪ್ರಾರಬ್ಧ ಕಳೆಯುವದಕ್ಕಾಗಿ, **ಪ್ರಪತ್ತಿ ಪಣ್ಣಿಯಾದಲ'** – ಶರಣಾಗತಿಯನ್ನು ಅನುಷ್ಠಿಸಿಯಾಗಲಿ, **ನಿರಪರಾಧಮಾನ ಉತ್ತರಕೃತ್ಯತ್ತೈ** – ಅಪರಾಧಪ್ರಸಕ್ತಿಯಿಲ್ಲದ ಉತ್ತರಕೃತ್ಯಾಧಿಕಾರದಲ್ಲಿ ಹೇಳಿರುವ ಉತ್ತರ ಕೃತ್ಯವನ್ನು, **ಅಪೇಕ್ಷಿತ್ತಾಲ'** – ಅಪೇಕ್ಷಿಸಿದರೆ, **ಮೇಲ' ಅಪರಾಧ ಪ್ರಸಂಗತ್ತೈಯುಮ'** – ಮುಂದೆ ಅಪರಾಧವು ಎಲ್ಲಿ ಸಂಬಂಧಿಸುತ್ತೋ ಎಂಬ ವಿಷಯವನ್ನು, **ಪತ್ತ** – ಕುರಿತು, **ಶೋಕಿಕ್ಕವೇಣ್ಡಾ** – ಶೋಕಿಸಬೇಡವೆಂದು **ಮಾಶುಚಃ** ಎಂದು ಹೇಳಲ್ಪಟ್ಟಿತು. **ಭಾಗವತಾಪಚಾರಕ್ಕೆ** ಮಹತ್ತೆಂಬ ವಿಶೇಷಣವೇತಕ್ಕೆ ಎಂದರೆ ಎಲ್ಲಾ ಅಪಚಾರಗಳಲ್ಲೆಲ್ಲಾ ತುಂಬಾ ಪ್ರಬಲವಾದುದು ಭಾಗವತಾಪಚಾರವೆಂದು ಹಿಂದೆಯೇ ಹೇಳಿರುವದರಿಂದ ಹಾಗೆ ಪ್ರಯೋಗವು; ಭಾಗವತಾಪಚಾರವನ್ನು ಸ್ವಾಮಿಯು ನಿವೃತ್ತಿ ಮಾಡುವುದಿಲ್ಲವೆಂದು ಅಂಬರೀಷೋಪಾಖ್ಯಾನದಲ್ಲಿ ಹೇಳಲ್ಪಟ್ಟಿದೆ; ಅದಕ್ಕೆ ಪ್ರಾಯಶ್ಚಿತ್ತವು ಆ ಭಾಗವತರಲ್ಲಿ ಮಾಡುವ ಶರಣಾಗತಿಯು; ಆತನಲ್ಲಿ ಸಾಧ್ಯವಿಲ್ಲದಿದ್ದರೆ ಪುನಶ್ಶರಣಾಗತಿ ಎಂದು ಹಿಂದೆ ಉಪಾದಿಸಲ್ಪಟ್ಟಿರುತ್ತದೆ; ಈ ಭಾಗವತಾಪರಾಧವನ್ನು ಮಾಡಿದರೆ ಪುನಃ ಭಾಗವತರ ಮಧ್ಯದಲ್ಲಿರಲು ಅನರ್ಹನೆಂದೂ ಹೇಳಲ್ಪಟ್ಟಿದೆ; ಆದುದರಿಂದ ಅಂತವನು ಭಗವದ್ಭಾಗವತ ಕೈಂಕರ್ಯಕ್ಕೆ ಅನರ್ಹನೆಂದು ಹೇಳಿದರು, ದೇವಗಂಗೆಯಲ್ಲಿ ಮಿಂದು ಪಾವನತ್ವವನ್ನು ಹೊಂದಿದವನು ಪುನಃ ಕೆಸರುಗುಂಡಿಯಲ್ಲಿ ಮುಳುಗುವದು ಈತನಿಗೆ ಸ್ವರೂಪಹಾನಿರೂಪವಾದುದರಿಂದ ಭಾಗವತ ಮಧ್ಯದಲ್ಲಿರಲು ಅನರ್ಹನೆಂಬ ಭಾವವು. ಇಲ್ಲಿ ಭಾಗವತಾಪಚಾರವು ತುಂಬಾ ಬಲಿಷ್ಠವಾದ ಅಪರಾಧವಾದುದರಿಂದ ಅದನ್ನು ಹೇಳಿದುದು ಇತರ ಅಪರಾಧಗಳಿಗೂ ಉಪಲಕ್ಷಣವು. ಈ ಭಾಗವತಾಪಚಾರದ ಸಂಬಂಧದಿಂದ ಈ ಮನುಷ್ಯನು ಅದರಲ್ಲೂ ಮುಮುಕ್ಷು

ವು ಯಾವ ಶ್ರೇಯಸ್ಸನ್ನೂ ಹೊಂದಲಾರನೆಂದು ದಗ್ಧಪಟದ ಸಾಮ್ಯವು ಕೊಡಲ್ಪಟ್ಟಿತು. ಹೀಗೆ ಮಾಡತಕ್ಕ ಶಕ್ತಿಯು ಭಾಗವತಾಪಚಾರಾದಿ ಅಪರಾಧಗಳಿಗುಂಟು. ಅಂತಹ ಪ್ರಾರಬ್ಧಕರ್ಮವನ್ನು ಹೋಗಲಾಡಿಸುವದಕ್ಕೆ ಏನು ಮಾಡತಕ್ಕದ್ದೆಂದರೆ ? ಹಿಂದೆ ಹೇಳಿರುವದನ್ನೇ ಅನುವಾದ ಮಾಡಿ ಹೇಳುತ್ತಾರೆ. ಈ ಪ್ರಾರಬ್ಧ ಕರ್ಮವೂ ಕಳೆಯುವದಕ್ಕಾಗಿ, ಪ್ರಥಮ ಶರಣಾಗತಿಯಲ್ಲೇ ಸಂಕಲ್ಪಿಸಿ ಮಾಡಬಹುದು ; ಹಾಗೆ ಮಾಡದೆ ಇದ್ದ ಪಕ್ಷದಲ್ಲಿ ಪ್ರಾರಬ್ಧನಿವಾರಣಕ್ಕಾಗಿ ಪುನಃ ಶರಣಾಗತಿಯನ್ನು ಅನುಷ್ಠಿಸತಕ್ಕದ್ದು ; ಹೀಗೆ ಮಾಡಿದುದಾದರೆ, ಪ್ರಾರಬ್ಧವೂ ಕಳೆದು ಉತ್ತರಕೃತ್ಯದಲ್ಲಿ ಸ್ಖಾಲಿತ್ಯಾದಿಗಳು ಉಂಟಾಗುವದಿಲ್ಲವು ; **ಮಾಶುಚಃ** ಎಂಬ ಪ್ರಯೋಗವು ಉತ್ತರ ಕೃತ್ಯಗಳಿಗೆ ನ್ಯೂನತೆ ಬಂತೆಂಬದಾಗಿ ಶೋಕಿಸುವ ಕೆಲಸವಿಲ್ಲವೆಂದು ಹೇಳಲ್ಪಟ್ಟಿತು. ಈ ಅಭಿಪ್ರಾಯವು ಎಂದರೆ ಪ್ರಾರಬ್ಧವೂ ಕಳೆದುಹೋಗುತ್ತದೆಯೇ ಅಥವಾ ಅನುಭವಿಸಲೇಬೇಕೇ ಎಂಬ ವಿವಾದವು ಭಗವದ್ಗೀತೆಯಲ್ಲೂ ಉಪಪಾದಿತವು. ಶ್ರೀಕೃಷ್ಣನು ಅರ್ಜುನನನ್ನು ಕುರಿತು ಬಹುಳವಾಗಿ ಉಪದೇಶಿಸಿದರೂ ಯುದ್ಧಮಾಡದಿರಲು, ನಿನ್ನಕೈಯಲ್ಲೇ ಯುದ್ಧಮಾಡಿಸುತ್ತೇನೆ ; ಅದು ಹೇಗೆ ಎನ್ನುತ್ತೀಯೋ ? **ಸ್ವಭಾವಸ್ತ್ವಾಂನಿಯೋಕ್ಷ್ಯತಿ,** ನಿನ್ನ ಪ್ರಾರಬ್ಧಕರ್ಮಾನುಗುಣವಾಗಿ ಪ್ರಾಪ್ತವಾದ ಕ್ಷತ್ರಿಯಶರೀರ ಸ್ವಭಾವವು ನಿನ್ನನ್ನೇ ಪ್ರೇರಿಸುವಹಾಗೆ ಮಾಡುವೆನು ; ಏಕೆಂದರೆ '**ಈಶ್ವರಸರ್ವಭೂತಾನಾಂ ಹೃದ್ದೇಶೇಽರ್ಜುನತಿಷ್ಠತಿ**' ನೀನು ಯುದ್ಧಮಾಡದೆ ಹಿಂತಿರುಗಿದರೆ ನಿನ್ನ ಶತ್ರುವಾದ ದುರ್ಯೋಧನನು ಹೇಡಿಯು ಹಿಂತಿರುಗಿ ಹೋಗುತ್ತಾನೆ ನೋಡಿ ಎನ್ನುವನು ; ಆಗ ನೀನು ಯಾರೋ ಹೇಡಿ ? ಎಂದು ಹೇಳುತ್ತಾ ಯುದ್ಧಮಾಡಿ ನನ್ನ ಸಙ್ಕಲ್ಪರೀತ್ಯಾ ಅವರನ್ನೆಲ್ಲಾ ಕೊಲ್ಲುವೆ ಎಂದು ಹೇಳಿದನು. ಆಗ ಅರ್ಜುನನು ಸುಕೃತದುಷ್ಕೃತರೀತಿಯಲ್ಲಿ ಪ್ರಾರಬ್ಧವು ಎರಡು ವಿಧವು. ಸುಕೃತ ಮೂಲಕ ಸುಖ ಉಂಟಾದರೆ ಲಿಪ್ತನಾಗದೆ ಅನುಭವಿಸಬಹುದು. ದುಷ್ಕೃತಮೂಲಕ ದುಃಖ ಉಂಟಾದರೆ ಅದರಿಂದ ತಪ್ಪಿಸಿಕೊಳ್ಳಲು ಮಾರ್ಗ ಉಂಟೋ ಎಂಬ ಕೇಳ್ವಿಯಲ್ಲಿ ಶ್ರೀಕೃಷ್ಣಭಗವಾನ್ ಹೇಳುತ್ತಾರೆ "**ತಮೇವಶರಣಂಗಚ್ಛ ಸರ್ವಭಾವೇನಭಾರತ । ತತ್ಪ್ರಸಾದಾತ್‌ಪರಾಂಶಾನ್ತಿಂ ಸ್ಥಾನಪ್ರಾಪ್ಸ್ಯಸಿ ಶಾಶ್ವತಮ್**" ಎಂಬದಾಗಿ, ಪ್ರಾರಬ್ಧವೂ ಕಳೆಯುತ್ತದೆ ಎಂಬುದಕ್ಕೆ ಪ್ರಮಾಣಗಳನ್ನು ಹಿಂದೆಯೇ ಉದಾಹರಿಸಿರುತ್ತಾರೆ.

(೬) ನಿರಪರಾಧಿಯಾಗಿ ಉತ್ತರ ಕೃತ್ಯಗಳನ್ನು ನಡೆಸಿದರೆ ಅಪರಾಧಗಳು ಬುದ್ಧಿಪೂರ್ವಕವಾಗಿ ಉಂಟಾದರೆ ಆಗಲೂ ಕೂಡ ಸ್ವಾಮಿಯು ಅಂತವನನ್ನು ನತ್ಯಜೇಯಂಕಥಂಚನ ಎಂದು ಹೇಳಿರುವದರಿಂದ ಅಂತಹ ಪಾಪಗಳ ನಿವೃತ್ತಿಗಾಗಿ ಅವನಿಗೆ ಅನುಶಾಸನವು ಪ್ರಾಯಶ್ಚಿತ್ತ ರೂಪ ಶರಣಾಗತಿಯನು

(೬). ಇಪ್ಪಡಿ ನಿರಪರಾಧಮಾನ ಉತ್ತರಕೃತ್ಯತ್ತೈ ಅಪೇಕ್ಷಿಯಾದಾರ್ಕುಮ್ ಮೇಲ್ ಬುದ್ಧಿ ಪೂರ್ವಾಪರಾಧಮ್ ವನ್ದಾಲುಮ್ "ಸತ್ಯಜೇಯಕಥಂಚನ" ಎನ್ನು ಇರುಕ್ಕ ಕ್ಕಡವಶರಣ್ಯ ಇವನುಕ್ಕು ಅನುತಾಪತ್ತೈಯುಂಡಾಕ್ಕಿ ಪುನಃ ಪ್ರಪತ್ತಿಯಾಗಿರ ಪ್ರಾಯಶ್ಚಿತ್ತ ವಿಶೇಷತ್ತಿಲೇ ಮೂಟ್ಟಿಯುಮ್, ಅದುವುಮ್ ಕೃತಪ್ಪುದಿಯಾನ ಕಠಿಣ ಪ್ರಕೃತಿಗಳುಕ್ಕು ಶಿಕ್ಷಾರೂಪ ಜ್ಞಳಾನ ಉಪಕ್ಲೇಶಜ್ಞಳ್ಳೈಕ್ಕಾಟ್ಟಿ, ಮೇಲಪರಾಧಮ್ ಪಣ್ಣಾದಪಡಿ ನಿಲಕ್ಕಿಯುಮ್, ಫಲಮ್ ಕೋಲಿನ ಕಾಲತ್ತುಕ್ಕು ಕಣ್ಣಳಿಕ್ಕೈಯಾಲೇ ಪ್ರಪನ್ನನುಕ್ಕು ಮಿನ್ನೊಳಿಪ್ಪೋಲೇ ತೋತ್ತಿ ನಿಲ್ಲೈ ನಿಲ್ಲಾದಪೋಗಿರ ಬುದ್ಧಿ

---

ಅನುಷ್ಠಿಸುವಹಾಗೆ ಮಾಡುವನು ; ಅಂತಹ ಅನುತಾಪಾದಿಗಳು ಉಂಟಾಗದೆ ಕಠಿಣ ಮನಸ್ಸನಿಗೆ ಅಲ್ಪಶಿಕ್ಷೆಯನ್ನು ಕೊಟ್ಟು ದೇಹಾವಸಾನದಲ್ಲಿ ಮೋಕ್ಷವನ್ನು ಕೊಡುವೆನು ; ಆದುದರಿಂದ ನೀನು ಅಪರಾಧ ಮಾಡಿಬಿಟ್ಟೆನೇ, ಮೋಕ್ಷವಿಲ್ಲವೋ ಏನೋ ಎಂಬ ಶಂಕಾ ಮೂಲಕ ಶೋಕಿಸುವದು ಬೇಡವೆಂದೂ **"ಮಾಶುಚಃ"** ಎಂದು ಹೇಳಲ್ಪಟ್ಟಿತೆನ್ನುತ್ತಾರೆ.—**ಇಪ್ಪಡಿ** - ಈ ಪ್ರಕಾರವಾಗಿ, ಮೇಲೆ ಹೇಳಿದ ಪ್ರಕಾರವಾಗಿ ಎಂಬರ್ಥವು; **ನಿರಪರಾಧವಾದ ಉತ್ತರಕೃತ್ಯವನ್ನು ಅಪೇಕ್ಷಿಯಾದಾರ್ಕುಮ್** - ಅಪೇಕ್ಷಿಸದೆ ಇರುವರಿಗೂ, **ಮೇಲ್** - ಶರಣಾಗತ್ಯನುಷ್ಠಾನಾನಂತರ, **ಬುದ್ಧಿಪೂರ್ವಾಪರಾಧವ್ವು ವಂದಾಲುಮ್** - ಬಂದರೂ, **ಸತ್ಯಜೇಯಕಥಂಚನ** - ಏನೇಯಾಗಲಿ ಪ್ರಪನ್ನನನ್ನು ನಾನು ರಕ್ಷಿಸದೆ ಬಿಡೆನು, **ಎನ್ನು**- ಎಂಬದಾಗಿ, **ಇರುಕ್ಕಕ್ಕಡವಶರಣ್ಯ**-ಇರುವಂತಹ ಸರ್ವರಕ್ಷಕನು, **ಇವನುಕು** ಈ ಅಪರಾಧಿಯಾದ ಪ್ರಪನ್ನನಿಗೆ, **ಅನುತಾಪತ್ತೈಉಂಡಾಕ್ಕಿ** - ಅನುತಾಪವನ್ನುಂಟುಮಾಡಿ, **ಪುನಃ ಪ್ರಪತ್ತಿಯಾಗಿರ ಪ್ರಾಯಶ್ಚಿತ್ತ ವಿಶೇಷತ್ತಾಲೇ ಮೂಟ್ಟಿಯುಮ್** - ಪುನಃ ಪ್ರಾಯಶ್ಚಿತ್ತರೂಪದಲ್ಲಿ ಶರಣಾಗತಿಯನ್ನು ಅನುಷ್ಠಿಸುವ ಹಾಗೆ ಪ್ರೇರಿಸಿ, **ಅದುವುಮ್ ಕೃತಪುಪ್ಪುದಿಯಾನ ಕಠಿಣಪ್ರಕೃತಿಗಳುಕ್ಕು** - ಅಂತಹ ಪ್ರಾಯಶ್ಚಿತ್ತ ಶರಣಾಗತಿಯನ್ನೂ ಮಾಡುವದು ತಪ್ಪಿಹೋಗುವ ಕಠಿಣ ಸ್ವಭಾವ ಪ್ರಪನ್ನರಿಗೆ, **ಶಿಕ್ಷಾರೂಪಜ್ಞಳಾನ ಉಪಕ್ಲೇಶಜ್ಞಳ್ಳೈಕ್ಕಾಟ್ಟಿ** - ಶಿಕ್ಷಾರೂಪವಾದ ಕಷ್ಟಗಳನ್ನು ತೋರಿಸಿ, **ಮೇಲೆ** - ಮುಂದಕ್ಕೆ **ಅಪರಾಧಮ್ ಪಣ್ಣಾದಪಡಿ** - ಅಪರಾಧವನ್ನು ಮಾಡದ ಹಾಗೆ ನಿರ್ಬಂಧಿಸಿ, **ಫಲಮ್ ಕೋಲಿನ ಕಾಲತ್ತುಕ್ಕು** - ಫಲವನ್ನು ಅಪೇಕ್ಷಿಸಿದ ಕಾಲಕ್ಕೆ, **ಕಣ್ಣಳಿಕ್ಕೈಯಾಲೇ ಪ್ರಪನ್ನನುಕ್ಕು** - ಇಪ್ರಪನ್ನನಿಗೆ, ಇಲ್ಲಿ ದೃಷ್ಟಪ್ರಪನ್ನನು ಹೇಳಲ್ಪಟ್ಟನು. **ಮಿನ್ನೊಳಿಪ್ಪೋಲೆ**-ಮಿಂಚಿನ ಕಾಂತಿಯ ಹಾಗೆ, **ತೋತ್ತಿ** - ಕಾಣಿಸಿಕ್ಕೊಂಡು, **ನಿಲ್ಲೈನಿಲ್ಲಾದಪೋಗಿರ** - ಇರಲು ಸ್ಥಳವಿಲ್ಲದ, **ಬುದ್ಧಿಪೂರ್ವಾಪರಾಧ**

**ಪೂರ್ವಾಪರಾಧ ಲೇಶಙ್ಗಳಾಲೇ ನರಕಾದಿ ಮಹಾಕ್ಲೇಶಙ್ಗಳ್ ವರಿಲ್ ಶೆಯ್ಯ ವದೆನ್ರೆನ್ರು ಶಂಕಿತ್ತು ಶೋಕಿಕ್ಕವೇಣ್ಡಾ.**

---

**ಲೇಶಙ್ಗಳಾಲೇ** - ಬುದ್ಧಿಪೂರ್ವಕವಾದ ಅಪರಾಧಗಳ ಅಲ್ಪದಿಂದ, **ನರಕಾದಿ ಮಹಾಕ್ಲೇಶಗಳು ಬಂದರೆ, ಶೆಯ್ಯನದೆನ್ರೆನ್ರು** - ಆಗ ಮಾಡತಕ್ಕದ್ದೇನು ? ಎಂಬದಾಗಿ, **ಶಂಕಿತ್ತು** - ಶಂಕಾಮೂಲಕವಾಗಿ, **ಶೋಕಿಕ್ಕವೇಣ್ಡಾ** - ಶೋಕಿಸ ಬೇಕಾಗಿಲ್ಲ. ಇದೂ **ಮಾಶುಚಃ** ಎಂಬುದರ ಅರ್ಥವೆಂಬ ಭಾವವು.

ದೃಪ್ತಪ್ರಪನ್ನನು ಹೇಗಿರಬೇಕೆಂದರೆ, ನಿರಪರಾಧವಾದ ಉತ್ತರ ಕೃತ್ಯದಲ್ಲಿ ಹೇಳಿರುವ ಹಾಗೆ ನಡೆಸಿಕೊಂಡು ದೇಹಾವಸಾನದವರೆಗೂ ಕಾದುಕೊಂಡಿರ ತಕ್ಕದ್ದು. ಹಾಗಲ್ಲದೆ ಬುದ್ಧಿಪೂರ್ವಕವಾದ ಉತ್ತರಾಘಗಳು ಪ್ರಾಪ್ತವಾದರೆ, ತುಂಬಾ ಕಠಿಣಾಪರಾಧಗಳಲ್ಲದಿದ್ದರೆ ಸರ್ವೇಶ್ವರನು ಸಿದ್ಧೋಪಾಯನಾದುದರಿಂದ "ಅನುತಾಪಾದುಪರಮಾತ್" ಎಂಬಲ್ಲಿ ಹೇಳಿರುವ ಹಾಗೆ ಅಯ್ಯೋ! ಇಂತಹ ಅಪರಾಧವನ್ನು ಮಾಡಿದೆನೇ ಎಂದು ಪರಿತಾಪವನ್ನುಂಟು ಮಾಡಿ, ಆತನ ಕೈಯಲ್ಲಿ ಅಪರಾಧ ಪರಿಹಾರಕ್ಕಾಗಿ ಪುನಃ ಶರಣಾಗತಿಯನ್ನು ಮಾಡುವಹಾಗೆ ಪ್ರೇರಿಸು ವನು. ಏಕೆಂದರೆ ಆತನಿಗೆ ಶರಣಾಗತನಾದ ಪ್ರಪನ್ನನಲ್ಲಿ ವಿಶೇಷವಾತ್ಸಲ್ಯವಿರು ವದರಿಂದ. ಆದುದರಿಂದ ವಿಭೀಷಣನ ವಿಷಯದಲ್ಲಿ ಶ್ರೀರಾಮಚಂದ್ರ ಪ್ರಭುವು ಹೇಳಿರುತ್ತಾರೇನೆಂದರೆ—"**ನತ್ಯಜೇಯಂ ಕಥಂಚನ**" ಯಾವ ಕಾರಣದಿಂದಲೂ ಶರಣಾಗತನನ್ನು ಕಾಪಾಡದೆ ಬಿಡಲಾರೆನು ಎಂಬದಾಗಿ. ಈ ಪೂರಾ ಶ್ಲೋಕವು ತುಂಬಾ ಅರ್ಥಗರ್ಭಿತವಾದುದು. ಶ್ರೀ ಗೋವಿಂದರಾಜೀಯ ವ್ಯಾಖ್ಯಾನದಲ್ಲಿ ಸ್ವಾರಸ್ಯವನ್ನೆಲ್ಲಾ ಪ್ರದರ್ಶಿಸಿರುತ್ತಾರೆ.—

**"ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯ ಕಥಂಚನ ।**
**ದೋಷೋಯದ್ಯಪಿತಸ್ಯಸ್ಯಾತ್ಸತಾ ಮೇತದಗರ್ಹಿತಮ್ "** (ಯುದ್ಧ. ೧೮.೩)

ನಾನು ಶರಣಾಗತನನ್ನು "**ಸರ್ವಸ್ವಶರಣಾಂಸುಹೃತ್**" ಎಂಬಲ್ಲೂ **ಸುಹೃದಸರ್ವ ಭೂತಾನಾಮ್** (ಗೀ ) ಎಂಬಲ್ಲೂ ಹೇಳಿರುವ ಹಾಗೆ ಮಿತ್ರಭಾವದಿಂದ ವಿಭೀಷ ಣನು **ರಾಘವಂ ಶರಣಾಗತಃ** ಎಂದು ಹೇಳಿ, ಶರಣಾಗತನಾಗಿ, ಬಂದಿರುವದ ರಿಂದ ಆತನನ್ನು ಎಂದಿಗೂ ರಕ್ಷಿಸದೇ ಬಿಡಲು ಸಾಧ್ಯವಿಲ್ಲವು. ಈ ಅಭಿಪ್ರಾಯ ವನ್ನೇ ಸೀತೆಯು ರಾವಣನಿಗೆ ಉಪದೇಶಿಸಿರುತ್ತಾರೆ:—

**ವಿದಿತಸ್ಸಹಿ ಧರ್ಮಜ್ಞಃಶರಣಾಗತವತ್ಸಲಃ । ತೇನಮೈತ್ರೀಭವತುತೇ ಯದಿಜೀವಿತು ಮಿಚ್ಛಸಿ"** ಶರಣಾಗತನಾಗುವದೇ ಮೈತ್ರೀಭಾವಕ್ಕೆ ಹೇತುವು. **ಕಥಂಚನ** ವೆಂದು ಹೇಳಿದುದಕ್ಕೆ ಕಾರಣವೇನೆಂದರೆ, ಸುಗ್ರೀವಾದಿಗಳು ವಿಭೀಷಣ

ನಲ್ಲಿ ರಾಕ್ಷಸಯೋನಿತ್ವದಿಂದ ಆತನು ದುಷ್ಟನೇಯಾಗಿದ್ದರೂ ಕೂಡ, ಅಂತವನನು ರಕ್ಷಿಸದೇ ಬಿಡುವದಿಲ್ಲವು. ಸುಕೃತಿಯು ಶರಣಾಗತನಾದರೆ ಅಂತವನನ್ನು ರಕ್ಷಿಸುವದರಲ್ಲಿ ಏನೂ ಮಹಿಮೆಯಿಲ್ಲವು. ದೋಷಿಯನ್ನು ಒಳ್ಳೆಯವನನ್ನಾಗಿಮಾಡ್ಡಿ ಅಂತವನನ್ನೂ ರಕ್ಷಿಸಿದರೆ ಆಗೀಗ ಮಹಿಮೆಯು ಹೆಚ್ಚು. ಆದುದರಿಂದ **"ದೋಷೋಯದ್ಯಪಿತಸ್ಯಸ್ಯಾತ್"** ಎಂದು ಹೇಳಿದರು. **ಸತಾಮೇತದರ್ಹಿತಮ್'** - ಪ್ರಾಜ್ಞರಾದ ಸತ್ಪುರುಷರಿಗೆ ಹಾಗೆ ದೋಷಿಯನ್ನು ಕೂಡ ರಕ್ಷಿಸುವದು, **ಅಗರ್ಹಿತಮ್'** - ಸಾಧ್ಯವಲ್ಲವು ; ಹಾಗೆ ದೋಷಿಯನ್ನು ರಕ್ಷಿಸಿದರೆ ನಾನು ಕರುಣಾಳುವು, ವಾತ್ಸಲ್ಯಪರನು, ಉದಾರನು ಎಂದು ತಿಳಿದು ಇಶರರಾದ ಅನೇಕ ದೋಷಿಗಳೂ ನನ್ನನ್ನು ಆಶ್ರಯಿಸುವರು. ಹೆಚ್ಚು ಲೋಕಹಿತವೂ ಉಂಟಾಗುತ್ತದೆ. ಮಿತ್ರತ್ವವು ಅನುಕೂಲನಾಗಿರುವ ಭಾವವು ; ಆದುದರಿಂದ ಮಿತ್ರಭಾವೇನವೆಂದರೆ ಅನುಕೂಲ್ಯಸಂಕಲ್ಪಾದಿಗಳಿಂದ ಯುಕ್ತನಾಗಿರುವನೆಂದೂ ಅರ್ಥ ಹೇಳಬಹುದು. ಅಥವಾ ನೀರೂ ಹಾಲೂ ಒಟ್ಟಿಗೆ ಸೇರಿದರೆ ಹಾಲು ತನ್ನ ಗುಣಗಳೆಲ್ಲವನ್ನೂ ನೀರಿಗೆ ಕೊಡುತ್ತದೆ. ಹಾಗೆ ತನ್ನನ್ನು ಆಶ್ರಯಿಸಿದವನಿಗೆ ಆನಂದಮಯನಾದ ಶ್ರೀಯಃಪತಿಯು **"ನಿರಂಜನಃ ಪರಮಂಸಾಮ್ಯಮುಪೈ"** ಎಂಬಲ್ಲಿ ಹೇಳಿರುವ ಹಾಗೆ ತನಗೆ ಸಮಾನವಾದ ಆನಂದವನ್ನು ಕೊಡುವವನು ನಾನು ಎಂಬ ಮಿತ್ರಭಾವದಿಂದ **ಸಂಪ್ರಾಪ್ತಃ** ಎಂದು ಹೇಳಲ್ಪಟ್ಟಿತು. **"ಅನುಕೂಲಫಲಂ ಮೈತ್ರಮ್' ಅಪಕಾರೋರಿ ಲಕ್ಷಣಮ್"** ಎಂಬಲ್ಲಿ ಹೇಳಿರುವ ಹಾಗೆ ವಿಭೀಷಣನು ತಾನು ತುಂಬಾ ಅನುಕೂಲನಾಗಿರುವನೆಂದು ಭಾವಿಸಿ ಬಂದಿರುವನು. ಅನುಕೂಲತೆ ಹೇಗೆಂದರೆ, ಕಳೇಬರಪ್ರಾಪ್ತಿ, ಶಾಸ್ತ್ರಜ್ಞಾನ, ಸತ್ಸಂಗ, ಆಚಾರಪ್ರಾಪ್ತಿ, ಶರಣಾಗತ್ಯನುಷ್ಠಾನ ಇವೆ ಮುಂತಾದ ಅನುಕೂಲಗಳನ್ನು ಪರಮ ಸೌಹಾರ್ದ್ರದಿಂದುಂಟುಮಾಡುವನೆಂಬ ನಂಬಿಕೆಯಿಂದ ಬಂದವನು. ಮೇದ್ಯತಿಎಂಬ ವ್ಯುತ್ಪತ್ತಿಯು ಮೂಲಕ ಹೀಗೆ ಸರ್ವವಿಧ ರಕ್ಷಕನಾಗಿ ಸ್ನೇಹಿತನು ಎಂಬರ್ಥವು. ಪರಮಾತ್ಮನಲ್ಲಿ ಮಿತ್ರಭಾವವನ್ನು ಅನ್ವಯಿಸಿದರೆ ಈ ಮೇಲಿನ ಅರ್ಥವು. ಮಿತ್ರಭಾವವನ್ನು ಮುಮುಕ್ಷುವಿನಲ್ಲಿ ಅನ್ವಯಿಸಿದರೆ, ಆಗ **ಮಿತ್ರಭಾವೇನ** - ಸರಿಯಾದ ಮಿತ್ರತೆಯಿಲ್ಲದೆ ಮಿತ್ರನೆಂಬ ವೇಷಹಾಕಿಕೊಂಡು ಬಂದರೂ ಆಗಲೂ **ನತ್ಯಜೇಯಂ** ಎಂದು ಹೇಳಲ್ಪಟ್ಟಿತು. ಅಥವಾ **"ರಕ್ಷಿತಾಜೀವಲೋಕಸ್ಯ ಸ್ವಜನಸ್ಯಚರಕ್ಷಿತಾ"** ಎಂಬಲ್ಲಿ ಹೇಳಿರುವ ಹಾಗೆ ಶ್ರೀರಾಮಾವತಾರಿಯಾದ ತಾನು ಸರ್ವರಕ್ಷಕನೆಂಬ ನಂಬಿಕೆಯಿಂದ, **ಮಿತ್ರಭಾವೇನ ಸಂಪ್ರಾಪ್ತಂ** ಎಂದೂ ಹೇಳಬಹುದು. ಈಡಿನಲ್ಲಿ ಈ ಶ್ಲೋಕವ್ಯಾಖ್ಯಾನದಲ್ಲಿ **ನತ್ಯಜೇಯಂ** ಎಂದು ಹೇಳಿರುವದರಿಂದ ಸರ್ವಜ್ಞನಿಗೆ **"ಅವಿಜ್ಞಾತಾ"** ಎಂಬಲ್ಲಿ ಹೇಳಿರುವ ಹಾಗೆ ಪ್ರಪನ್ನನ ಅಪರಾಧ

**೭. ಆರ್ತ ಪ್ರಪನ್ನಮುಕ್ಕು ಅಪ್ಪೋದೇ ಫಲಸಿದ್ಧಿಯುಂಡಾವಪ್ಪಡಿ ಯುರುಕ್ಕೈಯಾಲೇ (೧) "ದೇಹೇ ಚೇತ್ಪ್ರೀತಿಮಾನ್ ಮೂಢೋ ಭವಿತಾ ನರಕೇಽಪಿಸಃ" ಎನ್ರಿರುಪ್ಪಡಿ ನರಕ ತುಲ್ಯಮಾನ ಇಶ್ಶರೀರಂ ಅನುವರ್ತಿಕ್ಕಿ ರದೋ ವೆನ್ರು ಶೋಕಿಕ್ಕವೇಣ್ಡಾ.**

---

ಗಳನ್ನು ಸಾಕ್ಷಾತ್ಕರಿಸದ ಒಂದು ಅವಿಜ್ಞತೆಯೂ, ಸರ್ವಶಕ್ತನಿಗೆ ಪ್ರಪನ್ನನು ಎಷ್ಟು ದೋಷಿಯಾಗಿದ್ದರೂ ಬಿಡದ ಒಂದು ಅಶಕ್ತತೆಯು, ಸರ್ವವನ್ನೂ ಏಕಕಾಲದಲ್ಲಿ ಸ್ಮರಿಸುವ ಶಕ್ತಿಯುಳ್ಳ ಪರಮಾತ್ಮನಿಗೆ ಪ್ರಪನ್ನನ ಅಪರಾಧಗಳನ್ನು "**ನಸ್ಮರತ್ಯಪರಾಧಾನಾಂ ಶತಮಪ್ಯಾತ್ಮವತ್ತಯಾ**" ಎಂಬಲ್ಲಿ ಹೇಳಿರುವ ಹಾಗೆ ಸ್ಮರಿಸುವ ಶಕ್ತಿಯಿಲ್ಲವೆಂದು ಹೇಳಿರುತ್ತಾರೆ.—

ಭಾಗವತಾಪಚಾರಾದಿ ಮಹಾಪಾತಕಗ್ಗಳ್ ಬುದ್ಧಿಪೂರ್ವಕವಾಗಿ ಸಂಭವಿಸಿದರೆ ಆಗ ಪ್ರಪನ್ನನಿಗೆ ದಿವ್ಯ ವೈಕುಂಠಪ್ರಾಪ್ತಿಯು ತಪ್ಪಿ ನರಕಾದಿ ಪ್ರಾಪ್ತಿಯೇ ? ಎಂದರೆ ನೀನು ಅಂತಹ ಶಙ್ಕಾಮೂಲಕವಾಗಿ ಶೋಕಿಸ ಕೆಲಸವಿಲ್ಲವೆಂದು **ಮಾಶುಚಃ** ಎಂದು ಹೇಳಲ್ಪಟ್ಟಿತೆಂದು ತಿಳಿಸಿರುತ್ತಾರೆ. ಕೃಪಾನಿಧಿಯಾದ ಸ್ವಾಮಿಯು ಅಂತವನ ವಿಷಯದಲ್ಲಿ ಅನುತಾಪಾದಿಗಳನ್ನುಂಟುಮಾಡಿ ಅಪರಾಧ ಪರಿಹಾರಕ್ಕಾಗಿ ಪುನಃ ಶರಣಾಗತಿಯನ್ನು ಅನುಷ್ಠಿಸುವ ಹಾಗೆ ಪ್ರೇರಿಸಿಯಾಗಲೀ ಅಥವಾ ಹಾಗೆ ಪುನಃ ಶರಣಾಗತಿಯನ್ನು ಅನುಷ್ಠಿಸದಿದ್ದರೆ ಪ್ರಪನ್ನನಾದುದರಿಂದ ಲಘು ಶಿಕ್ಷೆಯನ್ನು ವಿಧಿಸಿ, **ಕ್ರೋಡೀಕರೋತಿಪ್ರಥಮಃ** ಎಂಬಲ್ಲಿ ಹೇಳಿರುವ ರೀತ್ಯಾ ಅಂತವನನ್ನೂ ಅಂಗೀಕರಿಸಿ ಮೋಕ್ಷವನ್ನೀಯುವ ಪ್ರಭುವು ತಾನು ಎಂದು **ಮಾಶುಚಃ** ಎಂದು ಹೇಳಲ್ಪಟ್ಟಿತೆಂದು ತಿಳಿಸಿರುತ್ತಾರೆ.—

೭. ಮುಂದೆ "**ಆರ್ತಪ್ರಪನ್ನಮುಕ್ಕು**" ಎಂದಾರಂಭಿಸಿದ ವಾಕ್ಯದ ಮೂಲಕ, ಆರ್ತ ಪ್ರಪನ್ನನಿಗೆ ಅಸಾಧಾರಣ ಶೋಕ ನಿವೃತ್ತಿಯು **ಮಾಶುಚಃ** ಎಂಬುದರಿಂದ ಹೇಳಲ್ಪಟ್ಟಿತೆನ್ನುತ್ತಾರೆ. ಇದು ಉತ್ತರ ಕಾಲೀನ ಶೋಕ ನಿವೃತ್ತಿಯು (೧) **ಮೂಢಃ** - ಜ್ಞಾನ ಶೂನ್ಯನು, **ದೇಹೇ** - ತನ್ನ ಶರೀರದಲ್ಲಿ, **ಪ್ರೀತಿಮಾನ್** - ಪ್ರೀತಿಯುಳ್ಳವನು, **ಯದಿಚೇತ್** - ಆದರೆ, **ನರಕೇಽಪಿ** - ನರಕಪ್ರಾಪ್ತಿಯಲ್ಲೂ ಕೂಡ, **ಸಃ**-ಅವನು ಪ್ರೀತಿಯುಳ್ಳವನು, **ಭವಿತಾ** - ಆಗುವನು; **ಎನ್ರುಪ್ಪಡಿ** - ಎಂಬಲ್ಲಿ ಹೇಳಿರುವ ಹಾಗೆ, **ನರಕತುಲ್ಯಮಾನ** - ನರಕಕ್ಕೆ ಸಮಾನವಾದ, **ಇಶ್ಶರೀರಮ್** - ಈ ಶರೀರವು, **ಅನುವರ್ತಿಕ್ಕಿರದೋ ವೆನ್ರು** - ಎಲ್ಲಿ ಅನುಸರಿಸಿ ಬರುತ್ತದೋ ಎಂಬದಾಗಿ, **ಶೋಕಿಕ್ಕವೇಣ್ಡಾ** - ಶೋಕಿಸಬೇಡವೆಂದು **ಮಾಶುಚಃ** ಎಂದು ಹೇಳಲ್ಪಟ್ಟಿತು. ಈ ಮೇಲೇ ಉದಾಹರಿಸಿರುವ ಶ್ಲೋಕದ ಪೂರ್ವಾರ್ಧವು

---

(೧) ವಿ. ಪು. ೧. ೧೭. ೭೩.

**(೮) ಕರ್ಮಯೋಗವು ಮೊದಲಾದ ನಿವೃತ್ತಿಧರ್ಮಙ್ಗಳೆಲ್ಲಾವು "ನೇಹಾಭಿಕ್ರಮ ನಾಶೋಸ್ತಿ" ಇತ್ಯಾದಿಗಳಿಂ ಹಡಿಯೋ ಯಿಟ್ಟ ಪಡೆ ಕ್ಕರ್ಪ್ಪಡೆಯಾಕ್ಕೈಯಾಲುಮು ಇಶ್ಶರಣಾಗತನ್ನೈಪ್ಪತ್ತ ವಿಶೇಷಿತ್ತು "ನತ್ಯಜೇಯಂ**

---

ಯಾವುದೆಂದರೆ? –"**ಮಾಂಸಾಸೃಕ್ಪೂಯ ವಿಣ್ಮೂತ್ರಸ್ನಾಯು ಮಜ್ಜಾಸ್ಥಿ ಸಂಹತೌ**। ಎಂಬುದು. ಮಾಂಸ ರಕ್ತ ಕೀವು (Seton) ಅಮೇಧ್ಯ ಮೂತ್ರ, ಸ್ನಾಯು ಎಂದರೆ ಮಾಂಸವು ಎಲುಬಿಗೆ ಬಿಗಿದಿರುವ ಭಾಗ, ಮಜ್ಜವೆಂದರೆ ಎಲುಬಿನ ಒಳಗಿರುವ ರಕ್ತ ಭಾಗವು, ಎಲಬು ಇವುಗಳಿಂದ ಸೇರಿದುದಾಗಿ ಹೇಯವಾದ ಶರೀರವು. ಇಂತಹ ಶರೀರದಲ್ಲಿ ಭೋಗಬುದ್ಧಿಯಿದ್ದರೆ, ನರಕದಲ್ಲೂ ಇಂತಹ ಹೇಯ ಗುಂಡಿಗಳೇ ಇದ್ದು ಅವುಗಳ ಮಧ್ಯ ವಾಸದಲ್ಲೂ ಆಶೆಯುಳ್ಳವನಾಗುವನು. ನರಕದಲ್ಲಾದರೋ ಈ ಹೇಯ ವಸ್ತುಗಳು ಹೊರಗೆ ಇರುವುವು ಅಲ್ಲದೆ ಅವುಗಳಲ್ಲಿ ಒಂದೋ ಎರಡೋ ಇರುವದರಲ್ಲಿ ವಾಸವು. ಇಲ್ಲಿಯಾದರೋ ಎಲ್ಲವೂ **ಸಂಹತೌ** ಒಟ್ಟಿಗೆ ಸೇರಿ ಶರೀರದೊಳಗೇ, ಇರುವವು. ಆದುದರಿಂದ ಆ ನರಕಕ್ಕಿಂತ ಹೆಚ್ಚು ಹೇಯವಾದುದು ಈ ಶರೀರ ನರಕವೆಂಬ ಭಾವವು. ಆರ್ತನಿಗೆ ಒಡನೆಯೇ ದೇಹ ವಿಯೋಗ ಉಂಟಾಗಿ, ಮೋಕ್ಷಪ್ರಾಪ್ತಿ ಎಂದು ಶಾಸ್ತ್ರವಿರುವದರಿಂದ, ಇಂತಹ ಹೇಯ ಶರೀರ ಪ್ರಾಪ್ತಿ ಎಲ್ಲಿ ಉಂಟಾಗುತ್ತದೋ ಎಂಬ ಶೋಕವು ಬೇಡವೆಂದು ಹೇಳಲ್ಪಟ್ಟಿತೆಂಬ ಭಾವವು.

(೮) ಈ ವಾಕ್ಯದಿಂದ ದೃಪ್ತಪ್ರಪನ್ನನಿಗೆ ತಾನು ಮಾಡಿದ ಸುಕೃತರೂಪವಾದ ಶರಣಾಗತಿಯು ಏನಾದರೂ ದುಷ್ಕೃತದಿಂದ ನಾಶವಾಗುತ್ತದೋ ಎಂದು ಭಯ ಶತ್ರು ಶಙ್ಕೆಗಳಿಂದ ಶೋಕಿಸಬೇಡವೆಂದು **ಮಾಶುಚಃ** – ಎಂದು ಹೇಳಿದ ರೆನ್ನುತ್ತಾರೆ. **ಕರ್ಮಯೋಗವು** - ಕರ್ಮಯೋಗವೇ, ಮೊದಲಾನ ಎಂಬುದರಿಂದ ಜ್ಞಾನಯೋಗ ಭಕ್ತಿಯೋಗಗಳು ಹೇಳಲ್ಪಟ್ಟವು, ಇದರಿಂದ ಬ್ರಹ್ಮವಿದ್ಯೆಯಾದ ಉಪಾಸನವು ಹೇಳಲ್ಪಟ್ಟಿತು. ಇಂತಹ **ನಿವೃತ್ತಿಧರ್ಮಙ್ಗಳೆಲ್ಲಾಮ್** – **ಪ್ರವೃತ್ತಿಃ ಪುನರಾವೃತ್ತಿಃ ನಿವೃತ್ತಿಃ ಪರಮಾಗತಿಃ** (ಮೋಕ್ಷ. ೨೧೯) ಎಂಬಲ್ಲಿ ಹೇಳಿರುವ ಹಾಗೆ ಕರ್ಮಯೋಗ ಸಹಕೃತ ಭಕ್ತಿಯೋಗವೆಲ್ಲವನ್ನು ಮುಮುಕ್ಷುವು ಫಲಾದಿ ಸಂಗವಿಲ್ಲದೆ ಅನುಷ್ಠಿಸುವದರಿಂದನಿವೃತ್ತಿಧರ್ಮಗಳೆನಿಸುತ್ತವೆ ಎಂದು। **ನೇಹಾಭಿಕ್ರಮ ನಾಶೋಸ್ತಿ**ಎಂಬಗೀತಾಶ್ಲೋಕದಲ್ಲಿಹೇಳಿರುವಹಾಗೆ,**ಯಿಟ್ಟ ಪಡೆಕರ್ಪ್ಪಡೆಯಾಕ್ಕೈಯಾಲುಮು**–ಹಾಕಿದ ಇಟ್ಟಿಗೆಯ ಗೋಡೆಯು ಕಲ್ಲಿನ ಗೋಡೆಯ ಹಾಗೆ ಪರಿಣಮಿಸುವದರಿಂದ, ಎಂದರೆ ಎಂದಿಗೂ ನಾಶವಿಲ್ಲದೆ ಫಲವನ್ನು ಕೊಡುವದರಿಂದಲೂ, (ಕರ್ಮಯೋಗವನ್ನೇ ಅರ್ಥಪಂಚಕಾಧಿಕಾರದಲ್ಲಿ ೪೦ ನೆಯ ಪುಟದಲ್ಲಿ ಕಾಣಬಹುದು.)

---

(೧) ಮನು. ಸ್ಮೃತಿ - ೪. ೨೬೭

**ಕಿಥಂಚನ" ಎನ್ಗೈಯಾಲುಮ್‌, ದೃಷ್ಟಪ್ರಪನ್ನನುಕ್ಕು ಕೋಲಿನ ಕಾಲತ್ತಿಳುವುಮ್‌, ವಿಳಂಬಿತ್ತಾಲುಮ್‌ ಫಲಸಿದ್ಧಿಯಿಲ್‌ ಸಂಶಯ ಮಿಲ್ಲಾಮೈಯಾಲೇ, "ಯಜ್ಞೋಽನೃತೇನ ಕ್ಷರತಿ ತಪಃ ಕ್ಷರತಿ ವಿಸ್ಮಯಾತ್‌। (ಅಶ್ರುತಸ್ಯಾಪ್ರದಾನೇನ) ಆಯುರ್ವಿಪ್ರಪರೀವಾದಾತ್‌ ದಾನಂ ಚ ಪರಿ**

---

ಹಾಗೆಯೇ **ಇಶ್ವರಣಾಗತಿ ತನ್ನೈಪ್ಪತ್ತ ವಿಶೇಷಿತ್ತು** – ಈ ಲಘೂಪಾಯವಾದ ಶರಣಾಗತಿಯನ್ನು ಕುರಿತು ವಿಶೇಷಿಸಿ ಹೇಳಿರುವ ಆ ಸಂದರ್ಭದಲ್ಲಿ, **ನೇಹಾಭಿಕ್ರಮನಾಶೋಽಸ್ತಿ** ಎಂದು ಹೇಳಿರುವ ಹಾಗೆ ಇಲ್ಲಿಯೂ **ನತ್ಯಜೇಯಕಿಥಂಚನ** – ನಾನು ಎಂದಿಗೂ ರಕ್ಷಿಸದೇ ಬಿಡುವದಿಲ್ಲವೆಂದು, **ಎನ್ಗೈಯಾಲುಮ್‌** - ಎಂದು ಹೇಳಿರುವದರಿಂದಲೂ, **ದೃಷ್ಟಪ್ರಪನ್ನನಿಗೆ** ಹೀಗೆ ಭಕ್ತಿಪ್ರಪತ್ತಿ ಎರಡು ಉಪಾಯಾನುಷ್ಠಾನದಲ್ಲೂ ದೃಷ್ಟನು ಇರಬಹುದು, **ಕೋಲಿನ ಕಾಲತ್ತಿಳುವುಮ್‌ ವಿಳಂಬಿತ್ತಾಲುಮ್‌** – ತಾನು ಅಪೇಕ್ಷಿಸಿದ ಕಾಲದವರೆಗೂ ವಿಳಂಬಿಸಿದರೂ, ಉಪಾಸನದಲ್ಲಿ ಯಾವಾಗ ಫಲಸಿದ್ಧಿ ಎಂಬುದು ಹೇಳಲಾಗುವದಿಲ್ಲ ಹಾಗೆಯೇ ಶರಣಾಗತಿಯಲ್ಲಾ ನಿರ್ಯಾಣ ಯಾವಾಗ ಉಂಟಾಗಿ ಫಲಸಿದ್ಧಿಯೆಂದೂ ಹೇಳಲಾಗುವದಿಲ್ಲ, ಹಾಗೆ ವಿಳಂಬ ಉಂಟಾಗುತ್ತದೆಂಬ ಭಾವವು (೧) "**ಯಜ್ಞಃ** - ಯಜ್ಞವು, **ಅನೃತೇನ** - ಮನ್ತ್ರವನ್ನು ತಪ್ಪಾಗಿ ಉಚ್ಚರಿಸುವದರಿಂದ, **ಕ್ಷರತಿ** - ನಾಶವಾಗುತ್ತದೆ. ಅಧಿಕಾರಿಯೂ ಬ್ರಹ್ಮರಕ್ಷನಾಗುವನೆಂದು ಹೇಳಲ್ಪಟ್ಟಿರುತ್ತದೆ. ಈಗ ಅರ್ಥದೊಂದಿಗೆ ಮುದ್ರಿಸಿರುವ ಮನುಸ್ಮೃತಿಯಲ್ಲೂ, ಮತ್ತು ಶ್ರೀಮಾನ್ ಸೆಟ್ಟಲೂರು ನರಸಿಂಹಾಚಾರ್ಯರವರೂ **ಅನೃತೇನ** – ಸುಳ್ಳು ಹೇಳುವದರಿಂದ ಆತನ ಪಂಚಮಹಾಯಜ್ಞಗಳು ನಾಶವಾಗುತ್ತದೆ ಅರ್ಥ ಮಾಡಿರುತ್ತಾರೆ. ಹಾಗೆ ಅರ್ಥ ಹೇಳಿದರೆ ಯಜ್ಞಾಧಿಕಾರಿಗಳಲ್ಲದವರಿಗೆ ಪ್ರತ್ಯವಾಯವಿಲ್ಲವು. ಸುಳ್ಳನು ಹೇಳಬಹುದೆಂಬ ಅಪಾರ್ಥವು ಆಗ ತೋರಿಬರುವದರಿಂದ ಆ ಅರ್ಥವು ಸರಿಯಾಗಿ ತೋರುವದಿಲ್ಲವು. ಹಾಗೆಯೇ **ತಪಃ** – ತಪಸ್ಸು, **ವಿಸ್ಮಯಾತ್‌** – ಫಲವಿಷಯದಲ್ಲಿ ಆಶ್ಚರ್ಯವಿರುವದರಿಂದ, ಕ್ಷರತಿ – ನಾಶವಾಗುತ್ತದೆ. ತಪಸ್ಸು, **ವಿಸ್ಮಯಾತ್‌** – ಗರ್ವದಿಂದ ನಶಿಸಿ ಹೋಗುತ್ತದೆಂದು ಸಾರದೀಪ ವ್ಯಾಖ್ಯಾನದಲ್ಲಿರುತ್ತದೆ. ಇದೂ ಸಮಂಜಸವೇ, **ವಿಸ್ಮಯ** ವೆಂದರೆ **ವಿಶೇಷ ಸ್ಮಯ** ವೆಂದರೆ ಹೆಚ್ಚಾದ ಗರ್ವ, ತಾನು ತಪೋನಿಷ್ಠನೆಂಬ ಗರ್ವದಿಂದ ತಪಸ್ಸು ನಾಶವಾಗುತ್ತದೆ. **ಆಯುಃ** – ಆಯುಸ್ಸು, **ವಿಪ್ರಪರೀವಾದಾತ್‌** – ಬ್ರಾಹ್ಮಣಾವಮಾನದಿಂದ ಕ್ಷೀಣವಾಗುತ್ತದೆ, "**ಆಯುರ್ವಿಪತ್ರಿಪವಾದೇನ**"ಎಂಬದಾಗಿ ಪಾಠಾಂತರವು.ಆದರೆ**ಅಶ್ರುತಸ್ಯಾಪ್ರದಾನೇನ**. ಎಂಬ ಪಾಠಾಂತರದಿಂದುಂಟಾಗುವ ಅರ್ಥವೂ ಸರಿಯಾಗಿ ತೋರುವದಿಲ್ಲವು ಒಂದು ಪ್ರಥಮಾನ್ತಪದವೂ ಒಂದು ತೃತೀಯಾನ್ತ ಅಥವಾ ಪಂಚಮ್ಯನ್ತಪದವೂ

**ಕೀರ್ತನಾತ್" ಇತ್ಯಾದಿಗಳಿರ್ಪಡಿಯೇ ಸುಕೃತನಾಶಙ್ಗಳಾಯಿರುಪ್ಪನ ಶಿಲ
ದುಷ್ಕೃತಙ್ಗಳಾಲೇ ಪ್ರಪತ್ತಿರೂಪಮಾನ ಸುಕೃತಮ್ ನಶಿತ್ತು ಫಲಂ ಕಿಡಿ
ಯಾದೊಳಿಯಿಲ್ ಶೆಯ್ವದೆನ್ರೆನ್ರು ಶೋಕಿಕ್ಕವೇಣ್ಡಾ.**

---

ಇರಬೇಕು. ಹಾಗಲ್ಲದೆ ಷಷ್ಠ್ಯಂತ ಪದವಿರುವದರಿಂದ, ಈ ಶ್ಲೋಕದಲ್ಲಿ ಯಜ್ಞ
ದಾನ ತಪಸ್ಸುಗಳಾದ ಕರ್ಮಯೋಗ ಪ್ರಕ್ರಿಯಗಳ ಫಲಗಳಾದ ಸ್ವರ್ಗಾದಿ ಲೋಕ
ಭೋಗ ಫಲವು ಕೊಡುವ ವಿಧಾನಗಳು ಹೇಳಲ್ಪಟ್ಟವು. **ದಾನಂಚ** - ದಾನವೂ
ಕೂಡ, **ಪರಿಕೀರ್ತನಾತ್** - ಇಷ್ಟು ದಾನಮಾಡಿದೆ ಎಂಬ ಹೊಗಳಿಕೆಯಿಂದ ನಾಶ
ವಾಗುತ್ತದೆ, **ಅಶ್ರುತಸ್ಯಪ್ರದಾನೇನ** ಎಂಬ ಪಾಠಾಂತರದಿಂದ ತೋರುವ ಅರ್ಥವು
ಸರಿಯಾಗಿ ತೋರುವದಿಲ್ಲವು, ಏಕೆಂದರೆ ಇದು ದಾನ ವಿಷಯವು; ದಾನಂಚ ಪರಿಕೀ
ರ್ತನಾತ್ ಎಂದು ಮುಂದೆ ಇರುವದರಿಂದ; **ಇತ್ಯಾದಿಗಳಿರ್ಪಡಿಯೇ** -ಇವುಗಳಲ್ಲಿ
ಹೇಳಿರುವಹಾಗೆ **ಸುಕೃತನಾಶಙ್ಗಳಾಯಿರುಪ್ಪನ**-ಸುಕೃತವಾದ ಶರಣಾಗತಿಯನ್ನು
ನಾಶಮಾಡುವ, **ಶಿಲದುಷ್ಕೃತಙ್ಗಳಾಲೇ** - ಕೆಲವು ದುಷ್ಕೃತಗಳಿಂದ, ಬುದ್ಧಿಪೂ
ರ್ವೋತ್ತರಾಘಾದಿಗಳಿಂದ ತಾನು ಮಾಡಿದ **ಪ್ರಪತ್ತಿರೂಪವಾದ ಸುಕೃತವು,
ನಶಿತ್ತು** - ವ್ಯರ್ಥವಾಗಿ **ಫಲಂ ಕಿಡಿಯಾದೊಳಿಯಿಲ್** - ಮೋಕ್ಷಫಲವನ್ನು
ಕೊಡದೇ ಹೋದರೆ, **ಶೆಯ್ವದೆನ್ರುನ್ರು ಶೋಕಿಕ್ಕವೇಣ್ಡಾ** - ಮಾಡತಕ್ಕದ್ದೇ
ನೆಂದು ನೀನು ಶೋಕಿಸಬೇಕಾಗಿಲ್ಲವು ಎಂಬುದೂ ಮಾಶುಚಃ ಎಂಬುದಕ್ಕೆ ಅರ್ಥವು.

**ನೇಹಾಭಿಕ್ರಮನಾಶೋಸ್ತಿ** ಎಂಬಲ್ಲೇನೋ ಉಪಾಸನೋಪಾಯನಿಷ್ಠನಿಗೆ
ನಿಷ್ಕಾಮ ಕರ್ಮಯೋಗಾದಿಗಳನ್ನು ಆರಂಭಿಸಿದವನಿಗೆ ಹೇಗೆ ಯಾವಾಗಲಾದರೂ
ಒಂದು ಕಾಲದಲ್ಲಿ ಅವು ವ್ಯರ್ಥವಾಗದೆ ಮೋಕ್ಷರೂಪ ಫಲಸಿದ್ಧಿಯುಂಟೋ,
ಹಾಗೆಯೇ ಶರಣಾಗತನಿಷ್ಠನಾದ ದೃಪ್ತನಿಗೂ ದೇಹಾವಸಾಲ ಕಾಲಾನಂತರ
ಮೋಕ್ಷಪ್ರಾಪ್ತಿಯೆಂಬುದು ಉಂಟೇ ಉಂಟು; ಏಕೆಂದರೆ ಪರಮ ಪುರುಷನು
**"ನತ್ಯಜೇಯಂ ಕಥಂಚನ"** ಎಂದು ಹೇಳಿರುವದರಿಂದ. ಆದರೆ ಬುದ್ಧಿಪೂರ್ವೋ
ತ್ತರಾಘಾದಿಗಳಿಂದಾಗಲಿ ಪ್ರಾರಬ್ಧ ವಿಷಯ ದುಷ್ಕೃತದಿಂದಾಗಲಿ ಈ ಶರಣಾಗತ್ಯ
ನುಷ್ಠಾನರೂಪ ಸುಕೃತವೇನಾದರೂ ವ್ಯರ್ಥವಾಗಿ ಫಲಸಿದ್ಧಿಯನ್ನುಂಟುಮಾಡದೇ
ಏನಾದರೂ ಹೋದೀತೋ ಎಂಬದಾಗಿ ನೀನು ಶೋಕಿಸುವ ಕೆಲಸವಿಲ್ಲವೆಂಬುದೂ
**ಮಾಶುಚಃ** ಎಂಬುದರ ಅರ್ಥವು. ಈ ವಾಕ್ಯದ ಮೂಲಕ **ಪ್ರಪತ್ಯುತ್ತರ** ಕಾಲ
ದಲ್ಲಿ ಮಾಡಿದ ಬುದ್ಧಿಪೂರ್ವಕಾಪರಾಧಗಳಿಂದ ಏನಾದರೂ ಉಪಾಯವು ಫಲವನ್ನು
ಸಾಧಿಸಿ ಕೊಡದೆ ಹೋದೀತೋ ಎಂಬ ಶೋಕ ನಿವೃತ್ತಿಯು ಹೇಳಲ್ಪಟ್ಟಿತು.

ಮುಂದೆ **"ಇತ್ಯರೀರಾ ನಂತರಂ"** ಎಂಬ ವಾಕ್ಯದ ಮೂಲಕ ಫಲವಿಷಯ
ಶೋಕನಿವೃತ್ತಿಯನ್ನು **"ಮಾಶುಚಃ"** ಎಂಬ ಪ್ರಯೋಗವು ಪ್ರದರ್ಶಿಸುತ್ತದೆ ಎಂದು

**(೯) ಇಚ್ಚರೀರಾನನ್ತರಂ ಮೋಕ್ಷಮ್ ಪೆರವೇಣುಮೆನ್ರು ಕಾಲಂ ಜನ್ಮಾಂತರಾದಿ ಹೇತುಕ್ಕಳಾನ ಪ್ರಾರಬ್ಧಕರ್ಮವಿಶೇಷಙ್ಗಳಾಲೇ ನಮಕ್ಕು ಜನ್ಮಾಂತರಙ್ಗಳ್ ವರಿಲ್ ಶೆಯ್ವದೆನ್ನೆನ್ರು ಶೋಕಿಕ್ಕವೇಣ್ಡಾ.**

---

ಹೇಳುತ್ತಾರೆ, ಅದರಲ್ಲಿ ಆತ್ಮಾನುಭರ ಕೈವಲ್ಯವೇನಾದರೂ ಪ್ರಾಪ್ತವಾಗಿ ಮೋಕ್ಷ ಪ್ರಾಪ್ತಿ ಏನಾದರೂ ಬಹುಕಾಲ ಸಿಕ್ಕದೇ ಹೋದೀತೋ ಎಂದೂ ನೀನು ಶೋಕಿಸ ಬೇಡವೆಂದು **ಮಾಶುಚಃ** ಎಂಬ ಪ್ರಯೋಗದಿಂದ ಊಹಿಸಬಹುದು ಎನ್ನುತ್ತಾರೆ— **ಇಚ್ಚರೀರಾನ್ತರಂ** - ಈ ಜನ್ಮದಲ್ಲಿ ಪ್ರಾಪ್ತವಾಗಿರುವ ಶರೀರವಿಯೋಗಾನನ್ತರ, **ಮೋಕ್ಷಂ ಪೆರವೇಣುಮೆನ್ರು** - ಮೋಕ್ಷವನ್ನು ಹೊಂದಬೇಕೆಂದು, **ಕಾಲಂ ಕುರಿಕ್ಕೈಯಾಲೇ** - ಕಾಲವನ್ನು ದೃಷ್ಟಸು ನಿರೀಕ್ಷಿಸುವದರಿಂದ, **ಜನ್ಮಾಂತರ ಗಳಿಗೆ ಹೇತುಗಳಾದ, ಪ್ರಾರಬ್ಧ ವಿಶೇಷ ಕರ್ಮಗಳಿಂದ । ನಮಕ್ಕು** - ನಮಗೆ, **ಜನ್ಮಾನ್ತರಙ್ಗಳ್** - ಮುಂದೆ ಬೇರೆ ಜನ್ಮಗಳು ಬಂದರೆ, **ಶೆಯ್ವದೆನ್ನೆನ್ರು** - ಆಗ ಏನು ಮಾಡುವದಕ್ಕಾಗುತ್ತದೆ ಎಂದು, **ಶೋಕಿಕ್ಕವೇಣ್ಡಾ** - ಶೋಕಿಸಬೇಡ ವೆಂದು ಮಾಶುಚಃ ಪ್ರಯೋಗವು.

ಇಲ್ಲಿ ಹೇಳಿದುದು ಏನೆಂದರೆ ಪ್ರಾರಬ್ಧಕರ್ಮ ವಿಶೇಷಗಳು ಜನ್ಮಾನ್ತರವನ್ನು ಎಲ್ಲಿ ಉಂಟುಮಾಡುತ್ತದೋ ಎಂಬ ಸಂಶಯವಿಟ್ಟುಕೊಂಡು ಶೋಕಿಸಲು ಕಾರಣ ವಿರುವದಿಲ್ಲವು, ನೀನು ಶರಣಾಗತಿಯನ್ನು ಅನುಷ್ಠಿಸಿದರೆ ಎಂದು ಸಮಾಧಾನವನ್ನು ಮಾಡಿದರೆಂಬರ್ಥವು. ಇದರಿಂದ ಪ್ರಾರಬ್ಧಕರ್ಮ ವಿಶೇಷವು ತೊಲಗುತ್ತದೆಂದು ಹೇಳಿದಂತಾಯಿತು. ಹಾಗೆ ಕಳಿಯದೇ ಇದ್ದರೆ ಅದಕ್ಕಾಗಿ ಪುನರ್ಜನ್ಮವು ಬೇಕಾ ಗುತ್ತದೆ. ಈ ಅಭಿಪ್ರಾಯವೇ **ಪ್ರಾರಬ್ಧಸ್ಯಾಪಿಭೂಯಸೀ** ಎಂಬಲ್ಲಿ ಹೇಳಲ್ಪಟ್ಟಿ ರುತ್ತದೆ. ಈ ವಿಷಯವು ಗೀತೆಯಲ್ಲಿ ಬಹು ನಿಪುಣತರವಾಗಿ ಹೇಳಲ್ಪಟ್ಟಿರುತ್ತದೆ. ಎಷ್ಟು ದೂರ ಶ್ರೀಕೃಷ್ಣನು ಅರ್ಜುನನಿಗೆ ಧರ್ಮವನ್ನು ಬೋಧಿಸಿದರೂ ಗಾಂಡೀವ ವನ್ನು ತೆಗೆದುಕೊಂಡು ಯುದ್ಧ ಸನ್ನಾಹನಾಗದಿರಲು; ಆಗ ಶ್ರೀಕೃಷ್ಣನು **"ಯದ್ಯ ಹಂಕಾರ ಮಾಶ್ರಿತ್ಯ"** ನನ್ನ ಮಾತನ್ನು ಕೇಳದೆ ಅಹಂಕಾರದಿಂದ **ನಯೋತ್ಸ್ಯೇ** ನಾನು ಯುದ್ಧ ಮಾಡುವದಿಲ್ಲವೆಂದರೆ ನಿನ್ನ ಸಂಕಲ್ಪವು ಕೂಡುವದಿಲ್ಲವು. ನನ್ನ ಸಂಕಲ್ಪದಿಂದ ನೀನೇ ಯುದ್ಧಮಾಡುವಿ ಎಂದು ಹೇಳಿದರು. ಅದು ಹೇಗೆ ? ಎಂದು ಅರ್ಜುನನು ಕೇಳಬಹುದೆಂದು ಯೋಚಿಸಿ ಶ್ರೀ ಭಗವಾನರವರು ಮುಂದೆ **"ಸ್ವಭಾವಸ್ತ್ವಾನಿಯೋಕ್ಷ್ಯಸಿ"** ನಿನ್ನ ಕ್ಷತ್ರಿಯ ಸ್ವಭಾವವೇ ನಿನ್ನನ್ನು ಯುದ್ಧದಲ್ಲಿ ಆಜ್ಞಾಪಿಸುತ್ತದೆ.ಏಕೆಂದರೆ ನೀನು ಯುದ್ಧರಂಗದಿಂದ ಹಿಂತಿರುಗಿದರೆನಿನ್ನನ್ನು ಹೇಡಿ ಎಂದು ದುರ್ಯೋಧನನು ಹೀಯಾಳಿಸುವನು. ಯಾರು ಹೇಡಿ ಎಂದು ಪುನಃ ಹೋಗಿ ನನ್ನ ಸಂಕಲ್ಪಾನುಗುಣವಾಗಿ ಅವರನ್ನೆಲ್ಲಾ ಕೊಲ್ಲುವಿ ; ಇದು ಏಕೆಂದರೆ **"ಈಶ್ವರ**

**(೧೦) ಅನನ್ಯ ಪ್ರಯೋಜನನಾಯ್ ಪ್ರಪನ್ನನಾನ ಇವನುಕ್ಕು ಪ್ರತಿಬಂಧಕಂಗಳಾನ ಸರ್ವಪಾಪಙ್ಗಳುಮ್ ಕಳಿಗೈಯಾಲೇ ಕೇವಲಾತ್ಮಾನುಭವಾದಿಗಳಾನ ಅಂತರಾಯಙ್ಗಳಾಲೇ ಪರಮ ಫಲತ್ತುಕ್ಕು ವಿಳಂಬಂ ವರುಕಿರತೋ ಎನ್ರು ಶೋಕಿಕ್ಕವೇಣ್ಡಾ.**

---

ರುವ ಹೃದ್ದೇಶದಲ್ಲಿರುವ ಸರ್ವೇಶ್ವರನು ಈತನ ಪ್ರಾರಬ್ಧಕರ್ಮಾನುಸಾರ ಪ್ರೇರಿಸುವನು. ಆ ಪ್ರಾರಬ್ಧ ಕರ್ಮವು ಸುಕೃತವಾಗಿ ಸುಖರೂಪವಾಗಿದ್ದರೆ ಅದರಲ್ಲಿ ಲಿಪ್ತನಾಗದೆ ಸುಖಾನುಭವವನ್ನು ಮಾಡಬಹುದು. ಆದರೆ ಪ್ರಾರಬ್ಧವು ದುಷ್ಕೃತವಾಗಿ ದುಃಖರೂಪವಾದರೆ ಆಗ ಪ್ರಪನ್ನನಿಗೆ ತೊಲಗುವ ಬಗೆ ಹೇಗೆ? ಎಂದು ಕೇಳಬಹುದೆಂದು ಯೋಚಿಸಿ ತನ್ನಿವಾರಣಾರ್ಥವಾಗಿ ಶ್ರೀಕೃಷ್ಣನು ಹೇಳುತ್ತಾನೆ-**"ತಮೇವ ಶರಣಂಗಚ್ಛಸರ್ವಭಾವೇನ ಭಾರತ"** ಆ ಪ್ರಾರಬ್ಧಕರ್ಮವೂ ತೊಲಗುವದಕ್ಕಾಗಿ ಶರಣಾಗತಿಯನ್ನು ಮಾಡು ಎಂದು ಉಪದೇಶಿಸಿರುತ್ತಾರೆ. ಈ ವಿಷಯದಲ್ಲಿ ಶ್ರುತಿ ಪ್ರಮಾಣಗಳೂ ಉಂಟು.

(೧೦) ಮುಂದೆ ಆತ್ಮಾನುಭವ ಮಾತ್ರವಿರುವ ಕೈವಲ್ಯ ಪ್ರಾಪ್ತಿಯುಂಟಾಗಿ ಎಲ್ಲಿ ಮೋಕ್ಷಕ್ಕೆ ವಿಳಂಬ ಉಂಟಾಗುತ್ತೋ ಎಂದು ಶೋಕಿಸುವ ಕೆಲಸವಿಲ್ಲವೆಂಬುದೂ **ಮಾಶುಚಃ** ಎಂಬುದರಿಂದ ತೋರುವ ಅರ್ಥವೆಂದು ಮುಂದೆ ಹೇಳುತ್ತಾರೆ—

**ಅನನ್ಯ ಪ್ರಯೋಜನನಾಯ್** - ಬೇರೆ ಇನ್ನು ಯಾವ ಪ್ರಯೋಜನವೂ ತನಗೆ ಬೇಕಾಗಿಲ್ಲದವನಾಗಿ, **ಪ್ರಪನ್ನನಾನ** - ಮೋಕ್ಷಕ್ಕಾಗಿ ಶರಣಾಗತಿಯನ್ನು ಅನುಷ್ಠಿಸಿದ, **ಇವನುಕ್ಕು ಪ್ರತಿಬಂಧಕಂಗಳಾನ** - ಇವನಿಗೆ ವಿಘ್ನಗಳಾದ, **ಸರ್ವಪಾಪಙ್ಗಳು ಕಳಿಗೈಯಾಲೇ** - ಸಮಸ್ತ ಪಾಪಗಳೂ ನಷ್ಟವಾಗುವದರಿಂದ **ಕೇವಲಾತ್ಮಾನುಭವಾದಿಗಳಾನ ಅಂತರಾಯಙ್ಗಳಾಲೇ** - ಕೇವಲ ಆತ್ಮಾನುಭವ ರೂಪ ಕೈವಲ್ಯ ಪ್ರಾಪ್ತಿರೂಪ ಪ್ರತಿಬಂಧಕಗಳಾದ, **ಪರಮ ಫಲತುಕ್ಕು** - ಅತ್ಯುತ್ಕೃಷ್ಟಫಲವಾದ ಮೋಕ್ಷಕ್ಕೆ, **ವಿಳಂಬಂ ವರುಕಿರತೋ ಎನ್ರು** - ಎಲ್ಲಿ ವಿಳಂಬ ಬರುತ್ತದೋ ಎಂದು, **ಶೋಕಿಕ್ಕವೇಣ್ಡಾ** - ಅಳಬೇಡವೆಂದೂ, **ಮಾಶುಚಃ** ಹೀಗೆ ೧೦ ವಿಧ ಅರ್ಥಗಳನ್ನು **ಮಾಶುಚಃ** ಎಂಬುದಕ್ಕೆ ಅರ್ಥ ಹೇಳಿದರು.

ಈ ಆತ್ಮಾನುಭವ ಉಂಟಾದರೆ ಅಲ್ಲಿಂದ ಪುನರಾವೃತ್ತಿ ಇಲ್ಲದೆ ಸ್ವಲ್ಪ ಕಾಲ ಆ ಆತ್ಮಾನುಭವದಲ್ಲಿ ಕಳೆಯಬೇಕಾದುದರಿಂದ **ವಿಳಂಬಂ ವರುಕಿರದೋ** ಎಂಬ ಪ್ರಯೋಗವು. ಗೀತೆಯಲ್ಲಿ ಈ ಕೇವಲನಿಗೆ ಜಿಜ್ಞಾಸುವೆಂಬ ಹೆಸರನ್ನು ಕೊಟ್ಟಿದ್ದಾರೆ. ಮಧು ವಿದ್ಯೆ ಪ್ರತರ್ಧನಾದಿಗಳಲ್ಲಿ ಈ ಆತ್ಮಾನುಭವವು ಉಂಟಾ

ಗುತ್ತದೆ. ಗೀತೆಯಲ್ಲಿ ಇವೆಲ್ಲಕ್ಕೂ ಉಪಲಕ್ಷಣವಾಗಿ ಪಂಚಾಗ್ನಿ ವಿದ್ಯೆಯು ಹೇಳಲ್ಪಟ್ಟಿರುತ್ತದೆ. ಇಂತಹ ಆತ್ಮಾನುಭವ ಉಂಟಾದವರಿಗೂ ಕೊನೆಗೆ ಮೋಕ್ಷಪ್ರಾಪ್ತಿಯೇ ಎಂದು ೮-೨೧ ರಲ್ಲಿ ಹೇಳಲ್ಪಟ್ಟಿರುತ್ತದೆ:-

**"ಅವ್ಯಕ್ತೋಽಕ್ಷರ ಇತ್ಯುಕ್ತಃ ತಮಾಹುಃ ಪರಮಾಂಗತಿಮ್' |**
**ಯಂ ಪ್ರಾಪ್ಯ ನ ನಿವರ್ತನ್ತೇ ತದ್ಧಾಮ ಪರಮಂ ಮಮ ||**

ಇದರ ಅರ್ಥವನ್ನು ದಾಸನು ಮುದ್ರಿಸಿರುವ ಗೀತಾ ದ್ವಿತೀಯ ಷಟ್ಕದಲ್ಲಿ ಕಾಣಬಹುದು. ಐಶ್ವರ್ಯಪ್ರಾಪ್ತಿಗೂ ಕೈವಲ್ಯಪ್ರಾಪ್ತಿಗೂ ಶರಣಾಗತಿಯುಂಟು. **ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ ಮಾಶುಚಃ"** ಎಂದು ಹೇಳಿದ ಶರಣಾಗತಿ, ಪರಮಪದಪ್ರಾಪ್ತಿಗಾಗಿ ಶರಣಾಗತಿಯು. ಆದುದರಿಂದ ಕೈವಲ್ಯಪ್ರಾಪ್ತಿಯಾಗಿ ಎಲ್ಲಿ ಕಾಲ ವಿಳಂಬ ಉಂಟಾಗುತ್ತದೋ ಎಂಬ ಭೀತಿ ಶೋಕಗಳಿಗೆ ಕಾರಣವಿಲ್ಲವೆಂದು ಹೇಳಿದರು.

**ಮಾಶುಚಃ** ಎಂಬುದಕ್ಕೆ ೧೦ ವಿಧ ಅರ್ಥಗಳು ಯಾವುವೆಂದರೆ—

೧. ಉತ್ಕೃಷ್ಟ ಜಾತಿ ಕುಲವೊದಲಾದವುಗಳಿಲ್ಲವೆಂಬ ಶೋಕವು ಬೇಡ

೨. ಕಷ್ಟತರವಾದ ಕರ್ಮಯೋಗಾದಿಗಳಿಂದ ಕೂಡಿದ ಉಪಾಸನೆಯನ್ನು ಮಾಡಲು ಶಕ್ತಿಯಿಲ್ಲವೇ ಎಂಬ ಶೋಕವೂ ಬೇಡ

೩. ಈ ಲಘೂಪಾಯದಿಂದ ಸರ್ವಶಕ್ತನಾಗಿ ಕಾರುಣ್ಯಾದಿಗುಣಯುಕ್ತನಾದ ಶ್ರಿಯಃಪತಿಯು ಫಲಪ್ರದಾನ ಮಾಡುವನೋ ಇಲ್ಲವೋ ಎಂಬ ಶೋಕವು ಬೇಡ

೪. ಅಜ್ಞಾನುಜ್ಞಾ ಕೈಂಕರ್ಯ ನ್ಯೂನತೆಯುಂಟಾದರೆ, ಉಪಾಸನವು ವಿಫಲವಾಗುವ ಹಾಗೆ ಈ ಶರಣಾಗತಿಗೆ ಇವು ಅಂಗವಲ್ಲದುದರಿಂದ ವಿಫಲವಾಗುತ್ತೆ ಎಂಬ ಶೋಕವೂ ಬೇಡ

೫. ಒಂದು ವೇಳೆ ಭಾಗವತಾಪಚಾರಾದಿ ಬುದ್ಧಿಪೂರ್ವೋತ್ತರಾಘವು ಪ್ರಾಪ್ತವಾದರೆ ಅದಕ್ಕಾಗಿ ಪ್ರಪದನ ಕಾಲದಲ್ಲೇಯಾಗಲಿ, ಅದಕ್ಕಾಗಿಯೇ ಅನಂತರವಾಗಲಿ ಶರಣಾಗತಿಯನ್ನನುಷ್ಠಿಸುವದರಿಂದ ಅಪರಾಧಪರಿಹಾರವಾಗುವದರಿಂದ, ಮುಕ್ತಿ ಎಲ್ಲಿ ತಪ್ಪೀತೋ ಎಂಬ ಶೋಕವು ಬೇಕಾಗಿಲ್ಲ.

೬. ಇಂತಹ ಬುದ್ಧಿಪೂರ್ವೋತ್ತರಾಘವು ಪ್ರಾಪ್ತವಾದರೆ, ಶ್ರಿಯಃಪತಿಯು ಅನುತಾಪಾದಿಗಳನ್ನುಂಟುಮಾಡಿ ಪ್ರಾಯಶ್ಚಿತ್ತ ಶರಣಾಗತಿಯನ್ನು ಮಾಡಿಸಿ ಆತನನ್ನು ರಕ್ಷಿಸುವನು ; ಹಾಗೆ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಆತನಿಗೆ ಅಲ್ಪ ಶಿಕ್ಷೆಯನ್ನು ಕೊಟ್ಟು ಅನಂತರ ಮುಕ್ತಿಯನ್ನು ಕೊಡುವನಾದುದರಿಂದ ಶೋಕಿಸಬೇಡ.

೭. ಆರ್ತಪ್ರಪನ್ನನಾಗಿ ಇದ್ದರೆ ಒಡನೆ ದೇಹ ವಿಯೋಗವನ್ನುಂಟುಮಾಡಿ

**ಶೋಕೆಏವಾನುಚಿತಮ್' ಸಿದ್ಧೋಪಾಯ ಪ್ರಭಾವಾತ್.**

---

**ಇಪ್ಪಡಿ ಸರ್ವಪ್ರಕಾರ ಶೋಕ ಹೇತುಕ್ಕಳುಮ್ ಕಳಿಯುಮ್ಪಡಿ ಯೆನಕ್ಕು ಅನುಗ್ರಹ ವಿಷಯಭೂತನಾನ ನೀ, ಇನಿ ಶೋಕಿಕ್ಕೈ ಯಾವುದು? ಮುನ್ಪು ನಿಗ್ರಹ ವಿಷಯ ಭೂತನಾಯ್ ನಿನ್ರದಶೆಯಿಲ್ ಶೋಕಿಯಾದಾ ಪ್ಪೋಲೆ, ಅನಿಪುಣಕೃತ್ಯಮಾಯ್', ಇವ್ವುಪಾಯ ವೈಲಕ್ಷಣ್ಯತ್ತುಕ್ಕುಮ್**

---

ಯಾಗಲಿ, ದೇಹತ್ಯಾಗ ಮಾಡಲು ಅನುಮತಿಯನಿತ್ತಾದರೂ, ಶೋಕನಿವಾರಣೆ ಯನ್ನುಂಟುಮಾಡುವನು.

೮. ದೃಪ್ತಪ್ರಪನ್ನನಿಗೆ ತಾನು ಹಿಂದೆಯಾಗಲಿ ಈಗಲಾಗಲಿ ಮಾಡಿದ ದುಷ್ಕೃತ್ಯದಿಂದ ತಾನು ಮಾಡಿದ ಶರಣಾಗತಿಯು ಏನಾದರೂ ಫಲಕೊಡದೇ ಹೋದೀತೋ ಎಂದು ಭಾವಿಸಿ ಶೋಕಿಸುವ ಕೆಲಸವಿಲ್ಲಾ. ಏಕೆಂದರೆ ಶ್ರಿಯಃ ಪತಿಯು "**ನತ್ಯಜೇಯಂ ಕಥಂಚನ** ಎಂದು ಹೇಳಿರುವದರಿಂದ.

೯. ಪ್ರಾರಬ್ಧ ವಿಶೇಷಾನುಭವವಿದ್ದು ಆ ಕಾರಣದಿಂದೇನಾದರೂ ಈ ಜನ್ಮ ದಲ್ಲೇ ಮೋಕ್ಷಪ್ರಾಪ್ತಿಯಿಲ್ಲದೆ ಏನಾದರೂ ತಪ್ಪಿ ಹೋದೀತೋ ಎಂದು ಶೋಕಿ ಸುವ ಕೆಲಸವಿಲ್ಲ,

೧೦. ಮಧ್ಯೆ ಆತ್ಮಾನುಭವರೂಪ ಕೈವಲ್ಯಪ್ರಾಪ್ತವಾಗಿ ಮೋಕ್ಷವೇನಾದರೂ ವಿಳಂಬಿಸೀತೋ ಎಂದು ಶೋಕಿಸಬೇಡ.

**ಶೋಕವೇ ಸಿದ್ಧೋಪಾಯನ ಪ್ರಭಾವಕ್ಕೆ ಅನುಚಿತವಾದುದು ಎಂಬುದನ್ನು ಮಾಶುಚಃ ಎಂಬುದು ಸೂಚಿಸುತ್ತದೆ.**

---

**ಇಪ್ಪಡಿ** - ಹೀಗೆ, **ಸರ್ವಪ್ರಕಾರ ಶೋಕಹೇತುಕ್ಕಳುಮ್'** - ಹತ್ತು ವಿಧ ವಾಗಿ ಉಪಪಾದಿಸಿದ ಸಮಸ್ತ ಶೋಕಗಳಿಗೂ ಕಾರಣಗಳೆಲ್ಲಾ **ಕಳಿಯುಮ್ಪಡಿ** - ತೊಲಗುವ ಹಾಗೆ, **ಎನಕ್ಕು** - ಸರ್ವೇಶ್ವರನಾದ ನನಗೆ **ಅನುಗ್ರಹ ವಿಷಯ ಭೂತನಾನ ನೀ** – ಅನುಗ್ರಹಿಸುವದಕ್ಕೆ ವಿಷಯಭೂತನಾಗಿ ಪ್ರಿಯನಾದ ನೀನು, **ಇನಿ ಶೋಕಿಕ್ಕೆ ಯಾವುದು ?** – ಇನ್ನು ಶೋಕಿಸುವದು ಎಂಬುದು ಯಾವುದು ? ಎಂದರೆ ಶೋಕಕ್ಕೆ ಕಾರಣವೇ ಇಲ್ಲವೆಂಬ ಭಾವವು ; ಶೋಕವು ಪ್ರಪನ್ನನಾದ ನಿನಗೆ ಸ್ವರೂಪವೇ ಅಲ್ಲವೆಂಬ ತಾತ್ಪರ್ಯವು ; **ಮುನ್ಪು** - ಶರಣಾಗತಿಯನ್ನು ಅನು ಷ್ಠಿಸುವದಕ್ಕೆ ಮುಂಚೆ, **ನಿಗ್ರಹ ವಿಷಯಭೂತನಾಯ್'**-ಅಪರಾಧಾನಂತ್ಯದಿಂದ ನಿಗ್ರಹಕ್ಕೆ ಯೋಗ್ಯನಾಗಿ, **ನಿನ್ರದಶೆಯಿಲ್'** - ಇರುವ ಅವಸ್ಥೆಯಲ್ಲಿ, **ಶೋಕಿ ಯಾದಾಪ್ಪೋಲೆ** - ಹೇಗೆ ಶೋಕಿಸದೇ ಇದ್ದೆಯೋ ಹಾಗೆಯೇ, **ಅನಿಪುಣಕೃತ್ಯ**

**ರಕ್ಷಣ ಭರಮ್ ಏರಿಟ್ಟುಕ್ಕೊಳ್ಳುಗಿರ ಸಿದ್ಧೋಪಾಯಭೂತನಾನ ಎನ್ಪಕ್ಕಲಿಲ್ ಸರ್ವಭರನ್ಯಾಸಮ್ ಪ್ಪಣ್ಣಿ ಕೃತಕೃತ್ಯನಾಗಿರ ಉನ್ನಿಲೈಕ್ಕುಮ್ ತಗುದಿಯನ್ರೆನ್ರು ತಿರುವುಳ್ಳಮ್.**

---

**ಮಾಯ್**- ಪ್ರಾಜ್ಞತೆ ಅಥವಾ ವಿವೇಕವಿಲ್ಲದೇ ಇರುವ ಕೃತ್ಯವಾಗಿ, (೧) **ಇವ್ವುಪಾಯ ವೈಲಕ್ಷಣ್ಯತ್ತುಕ್ಕುಮ್**-ಕ್ಷಣಕೃತವಾಗಿ ಸುಲಭವಾಗಿ, ದೇಹಾವಸಾನದಲ್ಲೇ ಸರ್ವಾಪರಾಧಕ್ಷಯದ ಮೂಲಕ ಮುಕ್ತಿಯನ್ನು ಕೊಡುವ ಮಾಹಾತ್ಮ್ಯಗೂ, (೨) **ರಕ್ಷಣ ಭರಮೇರಿಟ್ಟುಕ್ಕೊಳ್ಳುಗಿರ ಸಿದ್ಧೋಪಾಯ ಭೂತನಾನ** - ಶರಣಾಗತನ ರಕ್ಷಿಸುವ ಭಾರವನ್ನು ವಹಿಸಿಕೊಳ್ಳುವ ಸಿದ್ಧೋಪಾಯನಾದ **ಎನ್ಪಕ್ಕಲಿಲ್** - ಕರುಣಾಮಯನಾಗಿ ಉದಾರನಾಗಿರುವ **ಎನ್ ಪಕ್ಕಲಿಲ್** - ಸರ್ವೇಶ್ವರನಾಗಿ ಈಗ ಶ್ರೀ ಕೃಷ್ಣನಾಗಿ ಅವತರಿಸಿರುವ ನನ್ನಲ್ಲಿ, **ಸರ್ವಭರನ್ಯಾಸಮ್ ಪ್ಪಣ್ಣಿ ಕೃತಕೃತ್ಯನಾಗಿರುವ** - ಸಮಸ್ತ ರಕ್ಷಾಭರವನ್ನು ನನ್ನಲ್ಲಿ ಶರಣಾಗತಿಯ ಮೂಲಕ ಸಮರ್ಪಿಸಿ ಕೃತಕೃತ್ಯನಾಗಿರುವ, **ಉನ್ನಿಲೈಕ್ಕುಮ್** - ನಿನ್ನ (ಅರ್ಜುನನಾದ) **ಸ್ವರೂಪಕ್ಕೂ, ತಗುದಿಯನ್ರೆನ್ರು**-ಉಚಿತವಾದುದಲ್ಲವೆಂಬುದು, **ತಿರುವುಳ್ಳಮ್**-ಪಾರ್ಥಸಾರಥಿಯ **ಮಾಶುಚಃ** ಎಂದು ಹೇಳಿದುದರ ಮುಖ್ಯಾಭಿಪ್ರಾಯವು. ಶರಣಾಗತಿಯನ್ನು ಅನುಷ್ಠಿಸುವದಕ್ಕೆ ಮುಂಚೆ ತಾನು ನಿಗ್ರಹ ಭೀತನಾಗಿ ಶೋಕಿಸಬೇಕಾಗಿತ್ತು. ಆಗ ಶೋಕಿಸಲಿಲ್ಲಾ. ಈಗ **ಶರಣಂವ್ರಜ** ವೆಂದು ಉಪದೇಶಿಸಿದನಂತರ, ನೀನೂ ಭರನ್ಯಾಸನಿಷ್ಠನಾದರೆ ಆಗ ಶೋಕಿಸಿದುದಾದರೆ ಅದು **ಅನಿಪುಣ ಕೃತ್ಯವು.** ಪ್ರಾಜ್ಞನಲ್ಲದಿರುವವನ ಕೃತ್ಯವು. ಏಕೆಂದರೆ ಈಗ ಶೋಕಕ್ಕೆ ಕಾರಣವೇ ಇಲ್ಲವು. ಏಕೆಂದರೆ, ನೀನು ಹಾಗೂ ಶೋಕಿಸಿದುದಾದರೆ ಮೂರಕ್ಕೆ ಅನುಚಿತವು. (೧) ಉಪಾಯದ ಮಾಹಾತ್ಮ್ಯಗೂ (೨) ಕಾರುಣ್ಯಸೌಲಭ್ಯಸೌಶೀಲ್ಯ ವಾತ್ಸಲ್ಯಾದಿ ಕಲ್ಯಾಣಗುಣಯುಕ್ತನಾಗಿ ಸಿದ್ಧೋಪಾಯನಾದ ನನ್ನ ಮಾಹಾತ್ಮ್ಯಗೂ (೩) ನನ್ನಲ್ಲಿ ಶರಣಾಗತಿಯನ್ನನುಷ್ಠಿಸಿ ಕೃತಕೃತ್ಯನಾದ ನಿನ್ನ ಸ್ವರೂಪಕ್ಕೂ ಕುಂದಕವು ಎಂಬ ಭಾವವು. ಮೊದಲು ನಿಗ್ರಹವಶನಾಗಿದ್ದೆ ; ಆಗ ಶೋಕಿಸಲಿಲ್ಲ; ಈಗ ಅನುಗ್ರಹಪಾತ್ರನಾಗಿರುವೆ ; ಈಗ ಶೋಕವೇ ?

ಇನ್ನೊಂದು ಸಮಯದಲ್ಲಿ ಹಾಗೆಯೇ ಶ್ರೀಕೃಷ್ಣಭಗವಾನರವರು ಅರ್ಜುನನಿಗೆ ಮೂದಲಿಸಿರುತ್ತಾರೆ—ದ್ರೌಪದಿಗೆ ಅವಮರ್ಯಾದೆ ಮಾಡಿದಾಗ ನೀನು ಶೋಕಿಸಬೇಕಾಗಿತ್ತು. ಆಗ ಶೋಕಿಸಲಿಲ್ಲ, ಈಗ ದುಷ್ಟರನ್ನು ಕೊಲ್ಲುವದು ಕ್ಷತ್ರಿಯ ಧರ್ಮವಾಗಿರುವಾಗ ಯುದ್ಧದಲ್ಲಿ ಇಂತವರನ್ನು ಕೊಲ್ಲಲಾರೆ ಎಂದು ಶೋಕಿಸುತ್ತೀಯೇ, ಹಾಗೆ ಅನಿಪುಣ ಕೃತ್ಯವೂ ಹಿಂದೆಯೂ ಮಾಡಲ್ಪಟ್ಟಿತು. (ಗೀ. )

ಈಗಲಾದರೋ ಯಾವ ವಿಧದಲ್ಲೂ ನೀನು ಶೋಕಿಸುವದು ಅನಿಪುಣ

**ಇಪ್ಪಡಿ ಚರಮ ಶ್ಲೋಕತ್ತಿಲ್ ಸಾರತಮಮಾನ "ಮಾಶುಚಃ" ಎನ್ಗಿರ ಚರಮ ಶ್ಲೋಕತ್ತಿಲ್ ತಾತ್ಪರ್ಯತ್ತೈ ತಙ್ಗಳ್ ಚರಮ ದಶೈಯಿಲೇ ಆಚಾರ್ಯರ್ ಸಚ್ಛಿಷ್ಯರುಕ್ಕು ಉಪದೇಶಿಪ್ಪರ್‌ಗಳ್**

---

ಕೃತ್ಯವು. ಶೋಕವು ಶರಣಾಗತಿಯ ಸ್ವರೂಪಕ್ಕೂ, ನನ್ನ ಸ್ವರೂಪಕ್ಕೂ, ನಿನ್ನ ಸ್ವರೂಪಕ್ಕೂ ಕುಂದಕವು. ಆದುದರಿಂದ **ಮಾಶುಚಃ** ಎಂದು ಹೇಳಿದರು. ಇದೀಗ ಮುಖ್ಯಾಭಿಪ್ರಾಯವೆಂದು ಹೇಳಿದರು.

ಈ **ಮಾಶುಚಃ** ಎಂಬ ವಾಕ್ಯಕ್ಕೆ ನಿಪುಣತರವಾಗಿ ರಹಸ್ಯಾರ್ಥಗಳನ್ನೆಲಾ ಹೇಳಿದುದು ತಮ್ಮ ಕವಿತ್ವವಲ್ಲವು. ತಾವು ಸಾಂಪ್ರದಾಯಕವಾಗಿ ಆಚಾರ್ಯರಿಂದ ಕೇಳಿ ತಿಳಿದ ಅರ್ಥಗಳಿಂದೂ, ಈ ರಹಸ್ಯಾರ್ಥಗಳನ್ನು ಆಚಾರ್ಯರುಗಳು ತಮ್ಮ ಸಚ್ಛಿಷ್ಯರಿಗೆ ಚರಮದೆಶೆಯಲ್ಲಿ ಪರಿತಾಪಕ್ಕೆ ಕಾರಣವಿಲ್ಲವೆಂದು ಉಪದೇಶಿಸುವ ರೆಂದು ಹೇಳಿ ನಿಗಮನ ಮಾಡುತ್ತಾರೆ. **ಇಪ್ಪಡಿ** – ಈಗ ತಾವು ಹಿಂದೆ ಉಪದೇಶಿಸಿದ ಹಾಗೆ, ಚರಮ ಶ್ಲೋಕದಲ್ಲಿ, ಸಾರತಮವಾದ **"ಮಾಶುಚಃ"** ಎನ್ನುವ, **ಚರಮ ವಾಕ್ಯತ್ತಿಲ್** – ಕೊನೆಯ ವಾಕ್ಯದಲ್ಲಿರುವ, ತಾತ್ಪರ್ಯವನ್ನು, **ತಙ್ಗಳ್ ಚರಮದಶೈಯಿಲೇ** – ತಮ್ಮ ದೇಹಾವಸಾನ ಸಮಯದಲ್ಲಿ ತಮ್ಮ ಸಚ್ಛಿಷ್ಯರಿಗೆ ಉಪದೇಶಿಸುವರು. **ಚರಮ ದಶೈಯಿಲೇ** ಎಂಬುದರಿಂದ ಚರಮ ಶ್ಲೋಕವು ಪರಮ ರಹಸ್ಯವಾದುದರಿಂದ ಸಚ್ಛಿಷ್ಯರು ಒಂದು ವೇಳೆ ಮುಂಚಿತವಾಗಿ ಪ್ರಾರ್ಥಿಸಿ ಕೇಳದೇ ಇದ್ದ ಪಕ್ಷದಲ್ಲಿ ಚರಮ ದಶೈಯಿಲೇ ತಾವೇ ಸಚ್ಛಿಷ್ಯರಾದುದರಿಂದ ಉಪದೇಶಿಸತಕ್ಕದ್ದು ಆಚಾರ್ಯ ಕರ್ತವ್ಯವಾಗಲಿ ಅಥವಾ ಆಚಾರ್ಯರಿಗಿರುವ ಪರಮದಯಾಳುತ್ವವಾಗಲೀ ಇದರಿಂದ ಪ್ರಕಟಿಸಲ್ಪಟ್ಟಿತು. ಚರಮದಶೈಯಲ್ಲಿ ಮುಂದಕ್ಕೆ ದೇಹಾವಸಾನಾನಂತರ ಏನಾಗುತ್ತೋ ಎಂಬ ಶೋಕಭೀತಿಗಳಿಂದಾಗಲಿ, ಎಷ್ಟು ವಿಶ್ವಾಸದಿಂದ ಮನಸ್ಸಮಾಧಾನ ಮಾಡಿಕೊಂಡರೂ, ಶೋಕ ಉಂಟಾಗಬಹುದೋ ಎಂಬ ಶಙ್ಕಾದಿಗಳಾಗಲಿ, ಸಚ್ಛಿಷ್ಯರಮನಸ್ಸು ಎಲ್ಲಿ ಸ್ಥೈರ್ಯವನ್ನು ತ್ಯಾಗಮಾಡಿತೋ ಎಂಬ ಭಾವನೆಯಿಂದಾಗಲಿ ಆಚಾರ್ಯರು ಉಪದೇಶಿಸಬಹುದು ಎಂಬ ತಾತ್ಪರ್ಯವು.

**ಸುಖವಾಗಿ ಜ್ಞಾಪಕದಲ್ಲಿಡಲು ಚರಮಶ್ಲೋಕದ ಪದಗಳ ಅರ್ಥಗಳನ್ನು ಸಙ್ಗ್ರಹಿಸುತಾರೆ.**

---

ಪದಗಳಿಂದ ತೋರಿಬರುವ ಐವತ್ತುಮೂರು ಅರ್ಥಗಳನ್ನು ಮುಂದೆ ಹೇಳುತ್ತಾರೆ. **ಸರ್ವಧರ್ಮಾನ್ಪರಿತ್ಯಜ್ಯ** ಎಂಬುದರಿಂದ ೬ ಅರ್ಥಗಳು, **ಮಾಂ** – ಎಂಬುದರಿಂದ ೩, **ಏಕಂ** ಎಂಬುದರಿಂದ ೮, **ಶರಣಂ** ಎಂಬುದರಿಂದ ೭, **ವ್ರಜ** ಎಂಬುದ

**ಸೂಚಾನು ಸಂಧಾನಾರ್ಥಂ ಚರಮ ಶ್ಲೋಕೆ ಪದಾರ್ಥಾ ಸಜ್ಗ್ರಹೇಣಾಹ**

---

**ಇಶ್ಲೋಕತ್ತಿಲ್ ಪದಙ್ಗಳಿಲ್ ಅಡೈವೆ ಅಧಿಕಾರ ವಿಶೇಷಮ್, ಆಕಿಂಚನ್ಯ ಪುರಸ್ಕಾರಮುಂ, ದುಷ್ಕರ ಪರಿಕರಾಂತರ ನೈರಪೇಕ್ಷ್ಯಮುಂ, ಅಶಕ್ಯ ಪ್ರವೃತ್ತ್ಯ ನೌಚಿತ್ಯಮುಂ, ದುಷ್ಕರಾಭಿ ನಿವೇಶ ವೈಯರ್ಥ್ಯಮುಂ, ಉಪಾಯ ವಿಶೇಷತ್ತಾಲ್ ಶುಣೈಯುಡಮೈ, ಮುಮುಕ್ಷುವುಕ್ಕು ಶರಣ್ಯ ವಿಶೇಷಮ್,**

---

ರೀದ ೬ ಮಧ್ಯಮ ಪುರುಷ ೨, ಅಹಂ ೬, ತ್ವಾ ೪, ಸರ್ವಪಾಪೇಭ್ಯೋ, ಮೋಕ್ಷಯಿಷ್ಯಾಮಿ ೭ ಮಾಶುಚಃ ೭, ಇಷ್ಟಪ್ರಾಪ್ತಿ ೧; ಹೀಗೆ ೫೩ ಅರ್ಥಗಳು ತೋರಿಬರುತ್ತವೆ ಎಂದು ಹೇಳುತ್ತಾರೆ. ಈ ಶ್ಲೋಕದ ಪದಗಳಲ್ಲಿ ತೋರುವ, ಅರ್ಥಗಳು:-

೧. **ಅಧಿಕಾರ ವಿಶೇಷಮ್** - ಉಪಾಸನೆಗೆ ಯೋಗ್ಯತೆ ಮತ್ತು ಅಶಕ್ತತೆ. ಅಶಕ್ತರಾದ ವರ್ಣತ್ರಯರೂ, ಸ್ತ್ರೀ ಶೂದ್ರ ಪಂಚಮಾದಿ ಸರ್ವರಿಗೂ ಅಧಿಕಾರ ವಿಶೇಷವು "**ಅತೋಽಶಕ್ತಾಧಿಕಾರತ್ವಂ ಆಕಿಂಚನ್ಯ ಪುರಸ್ಕ್ರಿಯಾ । ಅನಂಗ ಭಾವೋಧರ್ಮಾಣಾಂ ಅಶಕ್ತಾರಂಭ ವಾರಣಮ್ । ತತ್ಪ್ರತ್ಯಾಶಾ ಪ್ರಶಮನಂ ಬ್ರಹ್ಮಾಸ್ತ್ರನ್ಯಾಯ ಸೂಚನಮ್**" ಎಂಬ ಕಾರಿಕೆಯಿಂದ ಹೇಳಿದ ಆರೂಕ್ರಮವಾಗಿ ಹೇಳಲ್ಪಡುವುವು.

೨. **ಆಕಿಂಚನ್ಯ ಪುರಸ್ಕಾರಮುಂ** - ಭಕ್ತಿಯೋಗವಾದ ಇನ್ನೊಂದು ಉಪಾಯಕ್ಕೆ ಬೇಕಾದ ಅನುಷ್ಠಾನಗಳಲ್ಲಿ ತನಗೆ ಯೋಗ್ಯತೆ ಇಲ್ಲವಾದುದರಿಂದ ಅವುಗಳನ್ನು ಬಿಟ್ಟು ಶ್ರೀ ಯಾಮುನ ಮುನಿಗಳು ಹಾಗೆಯೇ **ಅಕಿಂಚನೋಽನನ್ಯಗತಿಃ** ಎಂದು ಹೇಳಿಕೊಂಡು ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ—ಕಾರ್ಪಣ್ಯದ ಪ್ರದರ್ಶನವು.

೩. **ದುಷ್ಕರ ಪರಿಕರಾಂತರ ನೈರಪೇಕ್ಷ್ಯಂ** ದುಷ್ಕರವಾದ ಕರ್ಮಯೋಗ ಜ್ಞಾನಗಳು ಭಕ್ತಿಯೋಗಕ್ಕೆ ಆವಶ್ಯಕವಾದ ಅಂಗಗಳು, ಅಂತಹ ಪರಿಕರಗಳು ಈ ಪ್ರವೃತ್ತಿ ಧರ್ಮಕ್ಕೆ ಬೇಕಾಗಿಲ್ಲವೆಂಬರ್ಥವು.

೪. **ಅಶಕ್ಯಪ್ರವೃತ್ತ್ಯನೌಚಿತ್ಯಮುಂ** - ಇದು **ಅಶಕ್ತಾರಂಭವಾರಣಮ್** ಎಂದು ಕಾರಿಕೆಯಲ್ಲಿರುವದರ ಅರ್ಥವು. ಸರ್ವಪ್ರಾಯಶ್ಚಿತ್ತರೂಪ ಕರ್ಮಗಳನ್ನೆಸಗುವದು ಕಷ್ಟವಾದುದರಿಂದ ಅವುಗಳ ತಾತ್ಪರ್ಯವು ಹೇಳಲ್ಪಟ್ಟಿತು.

೫. **ದುಷ್ಕರಾಭಿ ನಿವೇಶ ವೈಯರ್ಥ್ಯಮುಂ - ತತ್ಪ್ರತ್ಯಾ ಶಾ ಪ್ರಶಮನಮುಂ** ಎಂಬುದರ ಅರ್ಥವು. ಕರ್ಮಯೋಗಾದಿಗಳಲ್ಲಿ ಕೆಲವನ್ನಾಗಲಿ ಅಥವಾ ಪ್ರಾಯಶ್ಚಿತ್ತಗಳಲ್ಲಿ ಕೆಲವನ್ನಾಗಲಿ ಕಷ್ಟಪಟ್ಟು, ಮಾಡುವೆನೆಂಬ ಸಙ್ಕಲ್ಪವೂ ಬೇಕಿಲ್ಲವೆಂಬ ಭಾವವು.

೬. **ಉಪಾಯ ವಿಶೇಷತ್ತಿಲ್ ತುಣೈಯುಡಮೈ** - ಉಪಾಯ ವಿಶೇಷ

**ಶರಣ್ಯಸುಡ್ಯೆಯ ಸುಲಭತ್ವಸುಶೀಲತ್ವಾದಿ ಗುಣಪೂರ್ಣತ್ವಂ. ಪ್ರಾಪ್ಯನೇ ಪ್ರಾಪಕನಾನನ್ಯೆ, ನಿರಪೇಕ್ಷಿತ ಸರ್ವವಿಷಯ ನಿವೃತ್ಯೂಹ ಕರ್ತೃತ್ವಮ್‌, ವ್ಯಾಜಮಾತ್ರ ಪ್ರತೀಕ್ಷತ್ವಮ್‌, ಉಪಾಯಾನ್ತರ ವ್ಯವಧಾನ**

---

ವಾದ ಈ ಭರನ್ಯಾಸದ, **ಶುಣ್ಯೆಯುಡನ್ಯೆ** - ಅತಿಶಯವಾದ ಮಹಿಮೆಯು. ಇದು ಸಾರಾ ಸ್ವಾದನಿಯವರ ಅರ್ಥವು. ಬ್ರಹ್ಮಾಸ್ತ್ರನ್ಯಾಯ ಸೂಚನೆಯಿಂದ ಸರ್ವೋತ್ಕೃಷ್ಟ ಪ್ರಭಾವವುಳ್ಳದು ಎಂದು ಅವರ ಅರ್ಥವು. ಸಾರಪ್ರಕಾಶಿಯವರು **ಶುಣ್ಯೆಯುಡನ್ಯೆ** - "ಲಜ್ಜಾವತ್ವ" ವೆಂದು ಅರ್ಥ ಬರೆದಿರುತ್ತಾರೆ. ಇತರೋಪಾಯವನ್ನು ತಂದರೆ ಇದು ಲಜ್ಜಿಸಿ ಬ್ರಹ್ಮಾಸ್ತ್ರದ ಕಟ್ಟು ವಲ್ಕಲವನ್ನು ಕಟ್ಟಿದುದರಿಂದ ಲಜ್ಜಿಸಿ ಬಿಟ್ಟು ಹೋಗುವದರಿಂದ ಇದರ ಮಹಿಮೆ ಹೆಚ್ಚಾದುದು ಎಂಬ ಭಾವವು. ಹೀಗೆ ಆರರ್ಥಗಳನ್ನು ತಿಳಿಸಿದರು.

ಮುಂದೆ ಮಾಂ ಎಂಬುದರ ಮೂರರ್ಥಗಳು ಹೇಳಲ್ಪಡುವುವು:—

೧. **ಮುಮುಕ್ಷುವುಕ್ಕು ಶರಣ್ಯ ವಿಶೇಷಮ್‌** – ಮೋಕ್ಷಾರ್ಥಿಗೆ ತಾನು ಶರಣ್ಯನು ಎಂಬುದು. **"ಮಾಮೇವ ಯೇ ಪ್ರಪದ್ಯನ್ತೇ ಮಾಯಾ ಮೇತಾಂ ತರನ್ತಿತೇ"**. ಆತನು ಆಶ್ರಿತೋಚಿತಗಳಾದ ಉದಾರ ಗುಣಗಳನ್ನುಳ್ಳವನಾದುದರಿಂದ ಶರಣ್ಯನು.

೨. **ಶರಣ್ಯನುಡ್ಯೆಯ ಸುಲಭತ್ವ ಸುಶೀಲತ್ವಾದಿ ಗುಣ ಪೂರ್ಣತ್ವಂ** - ಈ ಕಲ್ಯಾಣಗುಣಗಳಿರುವದರಿಂದಲೇ ಆತನು ಶರಣ್ಯನು.

೩. **ಹಿತ ತಮೋಪದೇಶಿತ್ವಮ್‌** - ಮುಂದೆ **ಶರಣಂವ್ರಜ** ಎಂಬ ಹಿತತಮವಾದ ಉಪಾಯವು **ಮಾಂ** - ಆದ ತಾನೇ ಎಂದು ಉಪದೇಶಿಸುವನು. **"ಯಚ್ಛ್ರೇಯಸ್ಯಾತ್‌..."** — **"ಯದ್ಧಿತಂ ಮಮ ದೇವೇಶ ತದಾಜ್ಞಾಪಯ ಮಾಧವ** ಎಂದು ಪ್ರಾರ್ಥಿಸಿದರೆ **"ಮಾಂ ಶರಣಂ ವ್ರಜ"** ಎಂದು ಉಪದೇಶಿಸುವವನು. ಇದು **ಚರಮ** ಶ್ಲೋಕದ ಮಾಂ ಎಂಬಲ್ಲಿ ದ್ಯೋತಿತವು.

ಮುಂದೆ **ಏಕಂ** - ಎಂಬ ಶಬ್ದದ ಲಂ ಅರ್ಥಗಳನ್ನು ತಿಳಿಸುತ್ತಾರೆ—

೧. **ಪ್ರಾಪ್ಯನೇ ಪ್ರಾಪಕನಾನನ್ಯೆ** - ಪ್ರಾಪ್ಯಸ್ಯೇವ ಪ್ರಾಪಕತ್ವಮ್ ಎಂಬ ಕಾರಿಕೆಯಲ್ಲಿ ಹೇಳಿರುವದು ಸ್ಮಾರಿತವು. ಪ್ರಾಪಕನೂ ಪ್ರಾಪ್ಯನೂ ಸಹ ನಾನೊಬ್ಬನೇ ಎಂಬ ಭಾವವು.

೨. **ನಿರಪೇಕ್ಷಿತ ಸರ್ವವಿಷಯ ನಿಷ್ಪ್ರತ್ಯೂಹ ಕರ್ತೃತ್ವಮ್‌** - ಸಮಸ್ತ ವಿಷಯಗಳ ಅಪೇಕ್ಷೆ ಇಲ್ಲದೇನೆ, **ನಿಷ್ಪ್ರತ್ಯೂಹ ಕರ್ತೃತ್ವಮ್‌** - ಯಾವದೊಂದು ಪ್ರತಿಬಂಧಕವೂ ಇಲ್ಲದೆ ತಾನೇ ಮಾಡಿಕೊಡುವವನು ಎಂಬುದು. ಇದು **"ಸ್ವಪ್ರಾಧಾನ್ಯ ನಿವಾರಣಮ್‌"** ಎಂದು ಹಿಂದೆ ಹೇಳಿದುದರ ಅಭಿಪ್ರಾಯವು. **ಮಾಮೇಕಂ**

**ನಿರಪೇಕ್ಷತ್ವಮ್‌, ಪರಿಕರಾಂತರ ನಿರಪೇಕ್ಷ ಪ್ರಸಾದ್ಯತ್ವಮ್‌, ಸರ್ವ ಫಲಾರ್ಥಿಶರಣ್ಯತ್ವಮ್‌, ಶರಣ್ಯಾಂತರ ಪರಿಗ್ರಹಾಸಹತ್ವಮ್‌, ಶರಣ್ಯ**

---

ಎಂಬುದರ ಏಕಮೇವ ಎಂಬ ಅವಧಾರಣಾರ್ಥವು. ಸಾಧ್ಯೋಪಾಯ ಒಂದು ಮಾತ್ರ ಬೇಕಾದರೂ, ಅದಕ್ಕೆ ಬೇಕಾದ ಕರಣ ಕಳೇಬರಯೋಗ, ವಿವೇಕ ಜ್ಞಾನ ಪ್ರವೃತ್ತಿ, ಭಾಗವತ ಸಂಭಾಷಣ, ಆಚಾರ್ಯ ಪ್ರವೃತ್ತಿ ಇವೆಲ್ಲಾ ಆತನ ಅಧೀನ ವಾದುದರಿಂದ **ಏಕಏವ** – ಎಂಬ ಭಾವವು.

೩. **ವ್ಯಾಜಮಾತ್ರ ಪ್ರತೀಕ್ಷತ್ವಮ್‌** – ಸರ್ವವಿಷಯ ನಿರಪೇಕ್ಷತ್ವ ವೆಂದರೆ ಹಾಗಾದರೆ ಯಾವುದರ ಅಪೇಕ್ಷೆಯೂ ಇಲ್ಲವೋ, ಪ್ರಪದನವೂ ಬೇಡವೋ ? ಎಂದರೆ ಅದುಮಾತ್ರ ಬೇಕು. ಅದು ವ್ಯಾಜಮಾತ್ರವೇ ಎಂದು ಈ ಏಕಶಬ್ದವು ತಿಳಿ ಸುತ್ತದೆ. **ಪ್ರಪತ್ತೇರ್ವ್ಯಾಜಮಾತ್ರತ್ವಮ್‌** ಎಂದು ಹಿಂದೆ ಹೇಳಿದುದರ ಸಜ್ಗ್ರಹವು.

೪. **ಉಪಾಯಾನ್ತರ ವ್ಯವಧಾನ ನಿರಪೇಕ್ಷತ್ವಮ್‌** – **ಅನ್ಯೋಪಾಯೈ ರನಸ್ವಯಃ** ಎಂಬುದರ ಅರ್ಥವು. ಬೇರೇ ಉಪಾಯವಾದ ಉಪಾಸನದ ಅಪೇಕ್ಷೆಯು ಬೇಡದಿರುವಿಕೆಯು ; ತನ್ನೊಬ್ಬನನ್ನು ಶರಣ ಹೊಂದಿದರೆ ಸಾಕೆಂಬ ಭಾವವು. ಮಾಮೇಕಂ ಎಂಬಲ್ಲಿ ತೋರಿಬರುತ್ತದೆಂಬ ಭಾವವು.

೫. **ಪರಿಕರಾಂತರ ನಿರಪೇಕ್ಷ ಪ್ರಸಾದ್ಯತ್ವಮ್‌** – ಇನ್ನೊಂದು ಉಪಾಯವಾದ ಉಪಾಸನೆಯ ಪರಿಕರವಾದ ಕರ್ಮಯೋಗ ಮುಂತಾದವುಗಳ ಅಪೇಕ್ಷೆಯಿಲ್ಲದೆಯೇ ಸ್ವಾಮಿಯು ಪ್ರಸನ್ನನಾಗುವಿಕೆ. ಪ್ರಪದನಕ್ಕೆ ನಿತ್ಯ ನೈಮಿತ್ತಿಕಗಳ ಅನುಷ್ಠಾನವು ಬೇಕಿಲ್ಲವು. ಹಾಗಾದರೆ ಅವುಗಳ ಅನುಷ್ಠಾನವು ಬೇಡವೋ ಎಂದರೆ ಬೇರೇ ವಿಧಿಗಳಿಂದ ಆವಶ್ಯಕವೇ. ಆದರೆ ಪ್ರಪತ್ತಿಗೆ ಅಂಗವಾಗಿ ಬೇಕಿಲ್ಲ ವೆಂಬ ತಾತ್ಪರ್ಯವು. ತನ್ನ ಪಾದಗಳನ್ನು ಆಶ್ರಯಿಸಿದರೆ ಸಾಕೆಂದು **ಮಾಮೇಕಂ** ಎಂದು ಹೇಳಲ್ಪಟ್ಟಿತು. **ತದಂಗೈ ರಸಬಂಧಃ** ಎಂಬುದರ ಅರ್ಥವು.

೬. **ಸರ್ವಫಲಾರ್ಥಿಶರಣ್ಯತ್ವಮ್‌** – ಸಮಸ್ತ ಫಲಗಳಾದ ಧರ್ಮಾರ್ಥ ಕಾಮ ಮೋಕ್ಷಾಗಳನ್ನಪೇಕ್ಷಿಸುವವರಿಗೂ ತಾನೊಬ್ಬನೇ ಶರಣ್ಯನೆಂಬುದು. ಇದು **ಸರ್ವಸಾಧ್ಯೇಷ್ವಭಿನ್ನತಾ** ಎಂದು ಹಿಂದೆ ಹೇಳಿದುದರ ಉಪನ್ಯಾಸವು. "**ಯದ್ವೇನ ಕಾಮಕಾಮೇನ ನ ಸಾಧ್ಯಂ ಸಾಧನಾನ್ತರೈಃ । ಮುಮುಕ್ಷುಣಾ ಯತ್ಸಾಂಖ್ಯೇನ ನ ಯೋಗೇನ ನ ಭಕ್ತಿತಃ । ಪ್ರಾಪ್ಯತೇ ಪರಮಂ ಧಾಮ ಯತೋ ನಾವರ್ತತೇ ಪುನಃ । ತೇನತೇನಾ ಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ ॥**" ಈ ತನ್ನೊಬ್ಬನನ್ನು ಶರಣ ಹೊಂದುವದರಿಂದಲೇ ಐಹಿಕಾದಿಪುರು ಷಾರ್ಥಕಾಮಿಯೂ ಕೇವಲನೂ ಜ್ಞಾನಿಯೂ ಸಹ ಹೊಂದುವನೆಂಬರ್ಥವು.

೭. **ಶರಣ್ಯಾಂತರ ಪರಿಗ್ರಹಾಸಹತ್ವಮ್‌**-ಇತರ ದೇವತೆಗಳನ್ನು ಶರಣ್ಯ

**ವೈಶಿಷ್ಟ್ಯಮ್‌, ಉಪಾಯಾನ್ತರ ಸ್ಥಾನ ನಿವೇಶ್ಯತ್ವಮ್‌, ಭರಸ್ವೀಕರ್ತೃತ್ವಮ್‌,**

ರನ್ನಾಗಿ ಭಾವಿಸಿದರೆ ತಾನು ತಟಸ್ಥನಾಗಿರುವಿಕೆಯು. ಇತರ ದೇವತೆಗಳಾದ ಬ್ರಹ್ಮರುದ್ರೇಂದ್ರಾದಿಗಳನ್ನು ಆಶ್ರಯಿಸಿದರೆ ಅವರಿಗೆ ಮೋಕ್ಷವನ್ನು ಕೊಡುವ ಶಕ್ತಿಯಿಲ್ಲವಾದುದರಿಂದ ಶ್ರಿಯಃಪತಿಯು ತಟಸ್ಥನಾಗಿರುವನು. **ಮಾಮೇಕಂ** ತನ್ನೊಬ್ಬನನ್ನೇ ಆಶ್ರಯಿಸಿದರೇನೇ ಮೋಕ್ಷಸಿದ್ಧಿ ಸೀತೇ ವಿನಾ, ಅನ್ಯಥಾ ಇಲ್ಲವೆಂಬರ್ಥವು. ಬ್ರಹ್ಮಾಸ್ತ್ರ ಕಟ್ಟು ಆಂಜನೇಯನ್ನು ಬಿಗಿದಿರುವಾಗ ಶಣಬು ಹಗ್ಗದಿಂದ ಕಟ್ಟಿದ ಒಡನೆಯೇ ಬ್ರಹ್ಮಾಸ್ತ್ರದ ಕಟ್ಟು ಹೇಗೆ ಬಿಚ್ಚಿ ಹೋಯಿತೋ ಹಾಗೆ ಅನ್ಯದೇವತಾಶ್ರಯಣದಿಂದ ಪ್ರಪದನವು ನಿರರ್ಥಕವಾದುದು ಆಗುವದು.

(೮) **ಶರಣ್ಯ ವೈಶಿಷ್ಟ್ಯಮ್‌** - ಶರಣ್ಯನು ಲಕ್ಷ್ಮಿಯೊಂದಿಗೆ ಇರುವಿಕೆಯು. **ಏಕಮ್‌** - ಲಕ್ಷ್ಮ್ಯಾಸಹ ಏಕಮ್ ಎಂಬರ್ಥವು. ಇದನ್ನೇ " **ಅನೀತವಾದಗ'ಮ್‌'"** ಎಂಬ ಶ್ರುತಿಯೂ, " **ಶ್ರಿಯುಂವಸಾನಾ ಮೃತತ್ವ ಮಾರ್ಯ** " ಎಂದೂ "**ತ್ವಾಂ ಪದ್ಮನೇಮೀಂ ಶರಣಮಹಂ ಪ್ರಪದ್ಯೇ**" ಎಂದೂ, ಶ್ರೀಸೂಕ್ತವೂ, **ಸಂಸಾರಾರ್ಣವತಾರಿಣೀಂ, ವಿಮುಕ್ತಿ ಫಲದಾಯಿನೀಮ್‌** - ಎಂದು ವಿಷ್ಣು ಪುರಾಣವೂ, "**ಏಕಾಕೀ ವಿದ್ಯಯಾ ಸಾರ್ಧಂ**" ಎಂಬ ವ್ಯಾಸೋಕ್ತಿಯೂ, "**ಲಕ್ಷ್ಮ್ಯಾಸಹ ಹೃಷೀಕೇಶಃ**" ಎಂದು ಲಕ್ಷ್ಮೀಧರ್ಮವೂ ಶ್ರೀ ಭಗವನುವಾಚ ಎಂದು ಭಗವದ್ಗೀತೆಯೂ, **ಯುವಾಂ ಹಿ ವರದೌ** ಎಂದು ಭಾಗವತವೂ, "**ಉಪಾಯಂ ವೃಣು ಲಕ್ಷ್ಮೀಶಂ**" ಎಂಬ ಶ್ಲೋಕವೂ ಎಲ್ಲವೂ ಏಕ ಶಬ್ದವನ್ನು ಉಪಪಾದಿಸಿರುತ್ತವೆ.

ಮುಂದೆ **ಶರಣ** ಶಬ್ದದ ಎರಡು ಅರ್ಥಗಳು ಸಙ್ಗ್ರಹಿಸಲ್ಪಡುವುವು.

(೧) **ಉಪಾಯಾನ್ತರ ಸ್ಥಾನ ನಿವೇಶ್ಯತ್ವಮ್‌** - ಭಕ್ತಿಯೋಗವಾದ ಉಪಾಯಾನ್ತರ ಸ್ಥಾನದಲ್ಲಿ ತಾನೇ ಉಪಾಯವಾಗಿ ನಿಂತು ನಡೆಸಿಕೊಡೋಣವು.

(೨) **ಭರಸ್ವೀಕರ್ತೃತ್ವಮ್‌** - **ಶರಣಂ ವ್ರಜ** ಎಂಬಲ್ಲಿ ಹೇಳಿರುವಹಾಗೆ ನಿನ್ನ ಆತ್ಮಸಂರಕ್ಷಣೆಯನ್ನು ಮಾಡುವೆನು. ಅದಕ್ಕಾಗಿ ಸರ್ವಭರವನ್ನು ಸ್ವೀಕರಿಸಿರುತ್ತೇನೆಂಬುದು ಶರಣ ಶಬ್ದದ ಎರಡನೆಯ ಅರ್ಥವು.

ಮುಂದೆವ್ರಜ ಶಬ್ದದ ಆರು ಅರ್ಥಗಳು ಹೇಳಲ್ಪಡುವುವು.

(೧) **ಭರನ್ಯಾಸರೂಪ ಸಾಧ್ಯೋಪಾಯ ವಿಶೇಷಮ್‌**— ಉಪಾಯವನ್ನಾಗಿ ವ್ರಜ ಎಂಬ ಶಬ್ದದಿಂದ ಸರ್ವಭರವನ್ನೂ ಸ್ವಾಮಿಪಾದದಲ್ಲಿ ಇಡುವ ಶರಣಾಗತಿಯು ಬೋಧಿಸಲ್ಪಟ್ಟಿತು. ಪರಿಕರಗಳಿಂದ ಸೇರಿದ ಆತ್ಮರಕ್ಷಾ ಭರ ಸಮರ್ಪಣೆಯು ಇದರಿಂದ ಹೇಳಲ್ಪಟ್ಟಿತು. ಇದು ಪ್ರಾರ್ಥನಾ ರೂಪವಾದುದು. ವ್ರಜಧಾತುವಿನಿಂದ ಈ ಅರ್ಥವು ತೋರುತ್ತದೆ. ಹಿಂದೆ **ವ್ರಜ** ಶಬ್ದಾರ್ಥವನ್ನು

**ಭರನ್ಯಾ ಸರೂಪಸಾಧ್ಯೋಪಾಯ ವಿಶೇಷೇವಮ್, ಅದಿಲ ಪರಿಕರಙ್ಗಳ್, ಸರ್ವಾಧಿಕಾರತ್ವಮ್, ಸಕೃತ್ಕರ್ತವ್ಯತ್ವಮ್, ಸುಕರತ್ವಮ್, ಅವಿಳಂಬಿತ ಫಲಪ್ರದತ್ವಮ್, ಪ್ರಾರಬ್ಧನಿವರ್ತಕಕ್ಷಮತ್ವಮ್, ಅಧಿಕಾರಿಯುನುಡೈಯ ಪರಾಧೀನಕರ್ತೃತ್ವಮ್,**

---

ಹೇಳುವ ಸಂದರ್ಭದಲ್ಲಿ **"ಸಪರಿಕರಾತ್ಮ ನಿಕ್ಷೇಪತ್ತೈ ಶೊಲ್ಲುಗಿರದು"** ಎಂದು ತಿಳಿಸಿರುತ್ತಾರೆ. ಚರಮಶ್ಲೋಕಾಧಿಕಾರದ ೩೮೩ನೆಯ ಪುಟವನ್ನು ನೋಡಿ.

(೨) **ಅದಿನ ಪರಿಕರಙ್ಗಳ್**— ವ್ರಜ ಎಂಬುದು ಪರಮಹಿತವಾದುದನ್ನು ಉಪದೇಶಿಸುವದರಿಂದ ಅಂತಹ ಸಂದರ್ಭದಲ್ಲಿ ಆನುಕೂಲ್ಯ ಸಙ್ಕಲ್ಪ ಪ್ರಾತಿಕೂಲ್ಯ ವರ್ಜನಗಳಾದ ಪರಿಕರಗಳನ್ನು ಊಹಿಸಬಹುದು. ರಕ್ಷಣಾರ್ಥವಾಗಿಯೇ ವ್ರಜ ವೆಂದು ಹೇಳಿದುದರಿಂದ ಪರಮ ವಿಶ್ವಾಸವೂ ಗೋಪ್ತೃತ್ವವರಣವೂ ಬೋಧಿತವು.

(೩) **ಸರ್ವಾಧಿಕಾರತ್ವಮ್**— ಅವಿಶೇಷವಾಗಿ ಸರ್ವರನ್ನೂ ಕುರಿತು ವ್ರಜ ಎಂದು ಹೇಳಿರುವದರಿಂದ ಸ್ತ್ರೀಶೂದ್ರಾದಿ ಪ್ರಾಣಿಗಳಿಗೂಕೂಡ ಅಧಿಕಾರ ಉಂಟೆಂಬುದು ತೋರಿಬರುತ್ತದೆ. **"ಸ್ತ್ರಿಯೋವೈಶ್ಯಾಸ್ತಥಾಶೂದ್ರಾಸ್ತೇಪಿಯಾನ್ತಿ ಪರಾಂ ಗತಿಮ್"** ಎಂದೂ, ಅಭಯಂ ಸರ್ವಭೂತೇಭ್ಯೋದದಾಮ್ಯೇತದ್ವ್ರತಂಮಮ ಎಂದೂ ಹೇಳಿರುವುದರಿಂದ ಶರಣಾಗತಿಯಲ್ಲಿ ಅಧಿಕಾರವು ಪಂಚಮರು ಮೊದಲುಗೊಂಡು ಎಲ್ಲರಿಗೂ ಅಧಿಕಾರವುಂಟೆಂದು ಹಿಂದೆಯೇ ಉಪಪಾದಿಸಿರುತ್ತಾರೆ.

(೪) **ಸಕೃತ್ಕರ್ತವ್ಯತ್ವಮ್**— ಒಂದೇಸಲ ಅನುಷ್ಠಿಸತಕ್ಕದ್ದು. ಇದನ್ನು **"ಸಕೃದೇವಹಿಶಾಸ್ತ್ರಾರ್ಥಃ ಕೃತೋಯಂತಾರಯೇನ್ನರಮ್"** ಎಂಬುದರಿಂದ ಸಮರ್ಥನಮಾಡಿ ಹೇಳಿದರು (೩೮೬ನೆಯ ಪುಟನೋಡಿ.). ಹಾಗೆಯೇ ರಾಮಾಯಣದಲ್ಲಿ ಶ್ರೀರಾಮ ಸೂಕ್ತಿಯು:- **ಸಕೃದೇವ ಪ್ರಪನ್ನಾಯತವಾಸ್ಮೀತಿಯಾಚತೆ** ಇನ್ನೊಂದಾದಲುಪಾಯಕ್ಕಾದರೋ '**ಅನೃತ್ತಿರಸಕೃದುಪದೇಶಾತ್**' '**ಸುಲ್ಲೇವಂವರ್ತಯನ್ ಯಾವದಾಯುಷಂ**" ಅಸಕೃತ್ತೆಂದು ಉಪದೇಶಿಸಲ್ಪಟ್ಟಿರುತ್ತದೆ.

(೫) **ಸುಕರತ್ವಮ್**— ಸುಲಭೋಪಾಯತ್ವವು ಕರ್ಮಯೋಗಾದಿಗಳ ಹಾಗೆ ಭಕ್ತಿಯೋಗದಹಾಗೂ ಕಷ್ಟಕರವಾಮದಲ್ಲವು. **ಶರಣಂವ್ರಜ** ಎಂಬಲ್ಲಿ ಹೇಳಿರುವ ಅಲ್ಪಕಾಲದಲ್ಲಿ ಗುರುಸನ್ನಿಧಿಯಲ್ಲಿ ಅನುಷ್ಠಿಸತಕ್ಕದ್ದಾಗಿರುತ್ತದೆ.

(೬) **ಅವಿಳಂಬಿತ ಫಲಪ್ರದತ್ವಮ್**— ದೇಹಾವಸಾನದಲ್ಲೇ ಮೋಕ್ಷವನ್ನು ಕೊಡುತ್ತೇನೆ **ಮೋಕ್ಷಯಿಷ್ಯಾಮಿ** ಎಂದು ಹೇಳಿರುವುದರಿಂದ ಫಲಕ್ಕೆ ವಿಳಂಬ ವಿಲ್ಲವು. ಉಪಾಸನ ವಿಷಯದಲ್ಲಾದರೋ ಮೋಕ್ಷಪ್ರಾಪ್ತಿಯು ವಿಳಂಬಿಸಬಹುದು, ಅನಭ್ಯುಪಗತ ಪ್ರಾರಬ್ಧವೂ ಕಳೆಯಬೇಕಾಗಿರುವದರಿಂದ. ಮುಂದೆ ವ್ರಜ ಶಬ್ದದಲ್ಲಿ ತೋರುವ ಮಧ್ಯಮ ಪುರುಷದಿಂದ ಎರಡು ಅರ್ಥಗಳನ್ನು ತಿಳಿಸುತ್ತಾರೆ.

**ಶಾಸ್ತ್ರವಶ್ಯತ್ವಮ್; ರಕ್ಷಕನುಡ್ಡೈಯ ಪರಮಕಾರುಣಿಕತ್ವಮ್, ಸುಪ್ರಸನ್ನತ್ವಮ್, ನಿರಙ್ಕುಶ ಸ್ವಾತಂತ್ರ್ಯಮು', ದುರ್ನಿವಾರತ್ವಮು', ಪರಾನಪೇಕ್ಷ**

(೧) **ಪ್ರಾರಬ್ಧನಿವರ್ತಕತ್ವಮು'** ಇದು **"ಆಗೈಯಾಲೇ ಇನ್ನ್ಯಾಸವಿದ್ಯೈಕ್ಕು ಪ್ರಾರಬ್ಧನಿವರ್ತಕತ್ವಮ್ ವಿಶೇಷಮಾಗಿರದು"** ಎಂಬಲ್ಲಿ ಉಪಪಾದಿಸಿರುತ್ತಾರೆ. ೩೪೯ನೆಯ ಪುಟನೋಡಿ.

(೨) **ಅಧಿಕಾರಿಯುನುಡ್ಡೈಯ ಪರಾಧೀನಕರ್ತೃತ್ವಮು'** - ವ್ರಜವೆಂಬ ವಿಧಿವಾಕ್ಯವೇ ಸರಿಯಲ್ಲವೆಂಬ ಪೂರ್ವಪಕ್ಷಕ್ಕೆ ಸಮಾಧಾನವಾಗಿ, **ಪರಾತ್ತುತಚ್ಛ್ರುತೇಃ** ಎಂಬ ಸೂತ್ರದಲ್ಲೂ ಮತ್ತು **ಕೃತಪ್ರಯತ್ನಾಪೇಕ್ಷಸ್ತು** ಎಂಬ ಎರಡು ಸೂತ್ರಾಭಿಪ್ರಾಯಗಳನ್ನು ವಿಮರ್ಶಿಸಿ ತಿಳಿಯದ ಪೂರ್ವಪಕ್ಷವೆಂದು ಸಮಾಧಾನ. ಹೇಳಿ, ಇದನ್ನು ಸ್ಥಾಪಿಸಿರುತ್ತಾರೆ. ಆದುದರಿಂದ ಶಾಸ್ತ್ರದ ವಿಧಿವಾಕ್ಯಗಳು ಅಧಿಕಾರಿಗೆ ಅನ್ವಯಿಸುತ್ತವೆ. ಉಪಾಯಾನುಷ್ಠಾನವಿಲ್ಲದೆ ಮುಕ್ತಿ ಇಲ್ಲವು.

(೩) ಆದುದರಿಂದಲೇ, **ಶಾಸ್ತ್ರವಶ್ಯತ್ವಮು'** -- **ಶರಣಂವ್ರಜ** ಎಂಬ ಶಾಸ್ತ್ರೋಕ್ತಿಗೆ ನಾವು ವಶ್ಯರು. ಇದನ್ನು ಪರಾಧೀನಕರ್ತೃತ್ವದಲ್ಲೇ ಸೇರಿದಹಾಗೆ ಭಾವಿಸಬಹುದು. ಮುಂದೆ ಉತ್ತರಾರ್ಧದ **ಅಹಂ** ಎಂಬ ಶಬ್ದದಿಂದ ತೋರುವ ೬ ಅರ್ಥಗಳು ಸಙ್ಗ್ರಹಿಸಲ್ಪಡುವುವು.:—

(೧) **ರಕ್ಷಕನುಡ್ಡೈಯ ಪರಮಕಾರುಣಿಕತ್ವಂ**-ಹಿಂದೆ ಭರನ್ಯಾಸಮಾಡಿದ ಪ್ರಪನ್ನನ ವಿಷಯದಲ್ಲಿ **ಉಲ್ಲಸಿತಕಾರುಣ್ಯನು** ಶ್ರಿಯಃ ಪತಿಯು ಎಂದು ಹೇಳಿರುತ್ತಾರೆ. **ಮೋಕ್ಷಯಿಷ್ಯಾಮಿ** ಎಂಬಲ್ಲಿ ಅಸ್ಪೃಷ್ಟಶಬ್ದವಿದ್ದರೂ **ಅಹಂ** ಎಂಬ ವಿಶೇಷಪ್ರಯೋಗದಿಂದ ಅರ್ಥವಾಗಿ ಈ ಅಭಿಪ್ರಾಯವು ತೋರಿಬರುತ್ತದೆ. ಮಹರ್ಷಿಯ **ಲೋಚನಾಭ್ಯಾಂ ಪಿಬನ್ನಿವ** ಎಂಬ ಪ್ರಯೋಗವು ಇದನ್ನು ಸೂಚಿಸುತ್ತದೆ. **ಸಹಜಕಾರುಣ್ಯಾದಿಗಳ' ಪ್ರೇರಣೆಯಾಗನಿರ್ಕ್ಕಿರದು** ಎಂದು ಪ್ರಯೋಗಿಸಿರುತ್ತಾರೆ.

(೨) **ಸುಪ್ರಸನ್ನತ್ವಮು'**— ಈ ಶರಣಾಗತಿಯಿಂದ ಆತನು ಸುಪ್ರಸನ್ನನಾಗುವನು. **ನಸ್ಮರತ್ಯಪಕಾರೇಣ ಶತಮಪ್ಯಾತ್ಮವತ್ತಯಾ** ಎಂದು ಮಹರ್ಷಿ ಹೇಳಿರುತ್ತಾರೆ. **"ಪ್ರಸಾದ ವಿಶೇಷಂ ಇಳವಣಿ"** ಎಂದು ಉಪಪಾದಿಸಿರುತ್ತಾರೆ. **"ತತ್ಪ್ರಸಾದಾತ್ಪರಾಂ ಶಾನ್ತಿಂಸ್ಥಾನಂಪ್ರಾಪ್ಸ್ಯಸಿಶಾಶ್ವತಮ್"**

(೩) **ನಿರಂಕುಶ ಸ್ವಾತಂತ್ರ್ಯಂ**— ತಡೆಯಿಲ್ಲದ ಸ್ವಾತಂತ್ರ್ಯವು. ಅಘಟಿತ ಘಟನಾಶಕ್ತಿಯುಳ್ಳ **ಅಹಂ** ತಾನೇ, ತಾನೊಬ್ಬನೇ ಪಾಪಗಳನ್ನೆಲ್ಲಾ ಹೋಗಲಾಡಿಸುವ ಶಕ್ತಿಯುಳ್ಳವನು.

(೪) **ದುರ್ನಿವಾರತ್ವಮು'**-ಹೀಗೆ ನಿರುಙ್ಕುಶ ಸ್ವಾತಂತ್ರ್ಯವಿರುವದರಿಂದಲೇ ಚೇತನನನ್ನು ತಾನು ರಕ್ಷಿಸಬೇಕೆಂಬ ಸಂಕಲ್ಪಕ್ಕೆ ಏನೊಂದು ವಿಘ್ನವಿಲ್ಲದಿರೋಣವು.

**ತ್ವಮ್‌, ಅವಸರ ಪ್ರತೀಕ್ಷತ್ವಮ್‌, ಶರಣಾಗತಮುಡೈಯ ಕೃತಕೃತ್ಯತ್ವಮ್‌, ಪರಿಗೃಹೀತೋಪಾಯುತತ್ಫಲಂಗಳ್ಕ್ಕುಪ್ಪತ್ತ ಕರ್ತವ್ಯಾನ್ತರತ್ತಿಲ್ ಪ್ರಾಪ್ತಿಯಿಲ್ಲಾಮೈ, ಭಗವದತ್ಯರ್ಥಪ್ರಿಯತ್ವಮ್‌, ತ್ರೈಕಾಲಿಕ ವಿರೋಧಿಭೂಮಿತ್ವಮ್**

---

**ರಿರಕ್ಷಷತಿಯತ್ರಚ ಪ್ರತಿಭಯಂ ನಕಿಂಚಿತ್ಕ್ವಚಿತ್** ಎಂಬುದಾಗಿ ಅಭೀತಸ್ತವದಲ್ಲಿ ಈ ಅಭಿಪ್ರಾಯವನ್ನೇ ತಿಳಿಸಿರುತ್ತಾರೆ.

(೫) **ಪರಾನಪೇಕ್ಷತ್ವಂ**— ಸರ್ವಸ್ವಾತಂತ್ರ್ಯವೂ ಅಘಟಿತಘಟನಾಶಕ್ತಿಗಳೂ ಪರಮಪುರುಷನಲ್ಲಿರುವದರಿಂದ **ಅಹಂ** ಸರ್ವಶಕ್ತನಾದ ನಾನೇ ಶರಣಾಗತನಾದ ನಿನಗೆ ಇತರರ, ಮತ್ತು ಅನ್ಯದೇವತೆಗಳ ಸಹಾಯ ಬೇಕಿಲ್ಲದೆ ಮುಕ್ತಿಯನ್ನೀಯುವೆನು ಎಂಬ ಭಾವವು ಶಬ್ದದಲ್ಲಿ ತೋರುತ್ತದೆಂಬ ಭಾವವು.

(೬) **ಅವಸರಪ್ರತೀಕ್ಷತ್ವಮ್**—ತಾನು ಪರಮಕಾರುಣಿಕನಾದುದರಿಂದಲೇ ನಾನು, ಯಾವಾಗ ಶರಣಾಗತಿಯನ್ನು ಅನುಸಷ್ಠಿಸುತ್ತೀ ಎಂಬದಾಗಿ ಅವಸರಪ್ರತೀಕ್ಷೆಯನ್ನು ಮಾಡಿಕೊಂಡಿರುವ **ಅಹಂ** ನಾನು ಎಂಬರ್ಥವು.

ಮುಂದೆ "ತ್ವಾ" ಎಂಬ ಪದದಲ್ಲಿ ತೋರುವ ನಾಲ್ಕು ಅರ್ಥಗಳು ಹೇಳಲ್ಪಡುವುವು.

(೧) **ಶರಣಾಗತ ನುಡೈಯ ಕೃತಕೃತ್ಯತ್ವಮ್**-ನಿನಗೆ ಹಿತೋಪದೇಶವು **ಶರಣಂ ವ್ರಜ** ಎಂಬದಾಗಿ; ಹಾಗೆ ನೀನು ಮಾಡಿದುದಾದರೆ ನೀನು ಕೃತಕೃತ್ಯನು. ಏನನ್ನು ಮಾಡಬೇಕೋ ಅದನ್ನು ಮಾಡಿದವನು. ಅಂತಹತ್ವಾ ಎಂಬ ಭಾವವು. ಅಂತವನಿಗೆ ಮೋಕ್ಷವೆಂದು ಮುಂದೆ ಹೇಳುತ್ತಾರೆ.

(೨) **ಪರಿಗೃಹೀತೋಪಾಯ ತತ್ಫಲಂಗಳ್ಕ್ಕುಪ್ಪತ್ತ ಕರ್ತವ್ಯಾಂನ್ತರತ್ತಿಲ್ ಪ್ರಾಪ್ತಿ** (೩) **ಇಲ್ಲಾಮೈ**—ಸಕೃತ್ ಶರಣಾಗತಿಯನ್ನು ಅನುಷ್ಠಿಸಿದ ನಂತರ **ಪರಿಗೃಹೀತ** ಸ್ವೀಕರಿಸಲ್ಪಟ್ಟ, ಉಪಾಯ ಮತ್ತು **ತತ್ಫಲಂಗಳ್ಕ್ಕುಪ್ಪತ್ತ**-ಅದರಿಂದುಂಟಾಗುವ ಫಲ, ಇವುಗಳಿಗಾಗಿ **ಕರ್ತವ್ಯಾಂತರತ್ತಿಲ್ ಪ್ರಾಪ್ತಿಇಲ್ಲಾಮೈ** ಕೃತಕೃತ್ಯನಾದುದರಿಂದ ಬೇರೆ ಇನ್ನು ಯಾವುದನ್ನೂ ಮಾಡಬೇಕಾಗಿರುವದರಲ್ಲಿ ಪ್ರಾಪ್ತಿ ಇಲ್ಲದಿರೋಣವು. ತ್ವಾ-ನೀನು ಭರನ್ಯಾಸಾನಂತರ ಕೃತಕೃತ್ಯನು, ನೀನು ಅದಕ್ಕಾಗಿ ಇನ್ನೇನೂ ಮಾಡಬೇಕಾದ ಪ್ರಸಕ್ತಿ ಇಲ್ಲದವನೆಂಬ ಭಾವವು.

(೪) **ಭಗವದತ್ಯರ್ಥಪ್ರಿಯತ್ವಮ್**—ತ್ವಾ ಶಬ್ದದಿಂದ, ಕಲ್ಯಾಣಗುಣಾಕರರಾದ ತಮಗೆ ಅತ್ಯರ್ಥಪ್ರಿಯನೆಂಬ ಭಾವವನ್ನು ತಿಳಿಸಿರುತ್ತಾರೆಂಬ ಭಾವವು. ವಿಭೀಷಣನು ಶರಣಾಗತನಾದುದರಿಂದ **ಲೋಚನಾಭ್ಯಾಂಪಿಬನ್ನಿವ** ಎಂಬುದರಿಂದ ಅತ್ಯರ್ಥಪ್ರಿಯತ್ವವನ್ನು ತೋರಿಸಿರುತ್ತಾರೆ. ಆಂಜನೇಯನು ರಾವಣನೊಂದಿಗೆ ದ್ವಂದ್ವಯುದ್ಧವನ್ನು ಮಾಡಿ ಆತನ ಕಿರೀಟವನ್ನು ನೆಲಕ್ಕೆ ಕೆಡಿವಿ

**ವಿರೋಧಿವರ್ಗ ವೈಚಿತ್ರ್ಯಮ್, ಅನತ್ತಾನುಡೈಯ ಈಶ್ವರಸಙ್ಕಲ್ಪ ನಿವರ್ತ್ಯ**

ಹಿಂತಿರುಗಿ ಬಂದುದನ್ನು ಕಂಡು ಶ್ರೀರಾಮಚಂದ್ರಪ್ರಭುವು ಹೇಳುತ್ತಾರೇನೆಂದರೆ **"ತ್ವಯಿಕಿಂಚಿತ್ಸ ಮಾಪನ್ನೇ ಕಿಂಕಾರ್ಯಂ ಸೀತಯಾಮಮ"** ಎಂದು ಹೇಳಿ ಕೊಂಡಿರುತ್ತಾರೆ-ಹಾಗೆಯೇ ಶರಣಾಗತರಾದ ಋಷಿಗಳಿಗೋಸ್ಕರವಾಗಿ ಶತ್ರುಗಳಾದ ರಾಕ್ಷಸರನ್ನು ಕೊಲ್ಲುತ್ತೇನೆಂದು ಸಂಕಲ್ಪಿಸಿದ ತನ್ನ ಪತಿಯಾದ ರಾಮನನ್ನು ಕುರಿತು, ರಾಕ್ಷಸರು ನಿನಗೇನು ಮಾಡಿದರು ಅವರನ್ನು ನಾಶಮಾಡುವೆನೆಂದು ಸಙ್ಕಲ್ಪಿಸಿದೆಯಲ್ಲಾ ಇದು ಯಾವ ನ್ಯಾಯವೆಂಬ ಸೀತೆಯ ಆಕ್ಷೇಪಕ್ಕೆ "ಅಪ್ಯಹಂಜೀವಿತಂ ಜಹ್ಯಾಂತ್ವಾಂವಾಸೀತೇ" ಎಂದು ಹೇಳಿ, ಬ್ರಾಹ್ಮಣರಲ್ಲಿ ಮಾಡಿದ ಪ್ರತಿಜ್ಞೆಯನ್ನು ಎಂದಿಗೂ ಬಿಡಲಾರೆನು ಎಂಬ ಹೇಳಿಕೆಯು ಅತ್ಯರ್ಥಪ್ರಿಯತ್ವವನ್ನು ಸೂಚಿಸುತ್ತದೆ. ಇನ್ನೂ ಅನೇಕ ದೃಷ್ಟಾಂತಗಳನ್ನು ತೋರಿಸಬಹುದು. ಮುಂದೆ **ಸರ್ವಪಾಪೇಭ್ಯಃ** ಎಂಬ ಪದದಲ್ಲಿ ತೋರುವ ಎರಡರ್ಥಗಳು ಹೇಳಲ್ಪಡುವುವು.

(೧) **ತ್ರೈಕಾಲಿಕ ವಿರೋಧಿಭೂಯಸ್ತ್ವಮ್** — ತ್ರೈಕಾಲಿಕ - ಹಿಂದೆ, ಈಗ, ಮುಂದೆ, ಮಾಡಲ್ಪಟ್ಟ ಅಪರಾಧಗಳ ಬಾಹುಳ್ಯವು. ಆದುದರಿಂದ ಸರ್ವಪಾಪೇಭ್ಯಃ ಎಂಬಲ್ಲಿ ಸರ್ವಶಬ್ದವು ಇವುಗಳಲ್ಲಿ ಹಿಂದೆ ಮಾಡಿದ ಸಂಚಿತವು ನಾಶವಾಗುತ್ತದೆ. ಪ್ರಾರಬ್ಧದಲ್ಲಿ ವರ್ತಮಾನ ಕಾಲದಲ್ಲಿ ಅನುಭಾವ್ಯವು ಅಭ್ಯುಪಗತ ಪ್ರಾರಬ್ಧವು. ಇದು ದೇಹಾವಸಾನಾನಂತರದಲ್ಲಿ ವಿನಾಶ್ಯವು. ಅನಭ್ಯುಪಗತವು ನಾಶ್ಯವು. ಬುದ್ಧಿಪೂರ್ವಕವಲ್ಲದುವು ವಿನಾಶ್ಯವೇ. ಬುದ್ಧಿಪೂರ್ವಕವಾದುದು ಪ್ರಾಯಶ್ಚಿತ್ತ ಶರಣಾಗತಿಯಿಂದ ನಾಶಹೊಂದುತ್ತದೆ. ಪ್ರಾಯಶ್ಚಿತ್ತವಿಲ್ಲದಿದ್ದರೆ ಅಲ್ಪದಂಡನೆಯಿಂದ ನಿವೃತ್ತಿಸಿ ಹೋಗುತ್ತದೆ.

(೨) **ವಿರೋಧಿವರ್ಗವೈಚಿತ್ರ್ಯಮ್**-ಪಾಪವರ್ಗದಹಾಗೆ ಪುಣ್ಯವರ್ಗವೂ ಬಂಧಕವಾಗಿರುವುದು ವಿರೋಧಿವರ್ಗದ ವೈಚಿತ್ರ್ಯವು. **ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂಸಾಮ್ಯ ಮುಪೈತಿ"** ಎಂದು ಶ್ರುತಿಯು ಇರುತ್ತದೆ. **ಪುಣ್ಯ ಪಾಪ ರೂಪಮಾನ ಬಂಧಕಾರಣತ್ತೆ ಪ್ರಾಪ್ತಶಬ್ದತ್ತಾಲೇ ಚೊಲ್ಲಿ ಬಹುವಚನತ್ತಾಲೇ ಪಾಪಙ್ಗಳನುಡೈಯ ಆನನ್ತ್ಯತ್ತೈ ವಿವಕ್ಷಿಕ್ಕಿರದು** ಎಂದು ಹೇಳಿರುತ್ತಾರೆ. ಅನಂತರ **ಮೋಕ್ಷಯಿಷ್ಯಾಮಿ** ಎಂಬ ಪದದ ವಿಳರ್ಥಗಳು.

(೧) **ಅವತ್ತಿನುಡೈಯ ಈಶ್ವರ ಸಂಕಲ್ಪ ನಿವರ್ತ್ಯತ್ವಮ್**— ಅವತ್ತಿನುಡೈಯ ಎಂದರೆ ಆ ವಿರೋಧಿವರ್ಗದ ವಿಷಯದಲ್ಲಿ, **ಈಶ್ವರ ಸಕಲ್ಪ ನಿವರ್ತ್ಯತ್ವಮ್** ನಿಗ್ರಹಿಸಬೇಕೆಂದು ಇದ್ದ ಸರ್ವೇಶ್ವರನ ಸಂಕಲ್ಪವು ನಿವರ್ತಿಸಿ ಹೋಗೋಣವು ಎಂಬುದು. **ಮೋಕ್ಷವಿರೋಧಿ ನಿವೃತ್ತಿಕಾಲಮ್, ವಿರೋಧಿ ನಿವೃತ್ತಿ ಸ್ವರೂಪಮ್, ಆತ್ಮಕೈವಲ್ಯ ನಿವೃತ್ತ ಯಥಾವಸ್ಥಿತ ಸ್ವರೂಪಾ ವಿರ್ಭಾವಮ್,**

**ಕ್ಷ್ಯಮ್ ; ಪ್ರಪನ್ನಸ್ಯ ಚರಮಶ್ಲೋಕಾಧಿಕಾರಃ ಪ್ರಪನ್ನೇಚ್ಛಾನಿಯತಮಾನ ವಿರೋಧಿ ನಿವೃತ್ತಿಕಾಲವಮ್, ವಿರೋಧಿ ನಿವೃತ್ತಿ ಸ್ವರೂಪವಮ್, ಆತ್ಮಕೈವಲ್ಯನಿವೃತ್ತ ಯಥಾವಸ್ಥಿತ ಸ್ವರೂಪಾವಿರ್ಭಾವಮ್, ಪರಿಪೂರ್ಣ ಭಗವದನುಭವಮ್, ಸರ್ವವಿಧ ಕೈಂಕರ್ಯ ಲಾಭಾನ್,**

---

ಪರಿಪೂರ್ಣಭಗವದನುಭವಮ್, ಸರ್ವವಿಧ ಕೈಂಕರ್ಯಲಾಭಮ್, ಅಪುನರಾವೃತ್ತಿ ಇವುಗಳ ಅರ್ಥವು. ನಿಗ್ರಹಸಙ್ಕಲ್ಪ ಕಳೆದು ಅನುಗ್ರಹರೂಪ ವಾಯಿತೆಂಬ ಭಾವವು.

(೨) **ಪ್ರಪನ್ನೇಚ್ಛಾನಿಯತಮಾನ ವಿರೋಧಿ ನಿವೃತ್ತಿಕಾಲವು**—ಪ್ರಪನ್ನನ ಇಷ್ಟಪ್ರಕಾರ ನಿಯತವಾದ ಪಾಪಗಳೆಲ್ಲಾ ನಿವೃತ್ತಿಸಿ ಹೋಗುವ ಕಾಲವು ಸೂಚಿತವು. ಅದು ಪ್ರಪನ್ನನ ನಿರ್ಯಾಣಕಾಲವು. ಆರ್ತಪ್ರಪನ್ನನಾದರೆ ಒಡನೆ ಎಲ್ಲಾ ವಿರೋಧಿವರ್ಗದಿಂದಲೂ ಮೋಕ್ಷಯಿಷ್ಯಾಮಿ ಎಂದು ಹೇಳಿದರು. ಸುಕೃತಗಳು ಮಿತ್ರರಲ್ಲೂ ದುಷ್ಕೃತಗಳು ಶತ್ರುಗಳನ್ನು ಹೋಗಿ ಸೇರಿಕೊಳ್ಳುವದರಿಂದ ನಿವೃತ್ತಿಯುಂಟಾಗುತ್ತದೆ ನಿರ್ಯಾಣಕಾಲದಲ್ಲಿ ಎಂಬ ಭಾವವು.

(೩) **ವಿರೋಧಿ ನಿವೃತ್ತಿ ಸ್ವರೂಪವು**—ಇದು ಮೇಲೆ ಹೇಳಲ್ಪಟ್ಟಿತು. ಶ್ರೀ ಭಾಷ್ಯಕಾರರು **ಆರಬ್ಧಕಾರ್ಯಾ ಅನಾರಬ್ಧಕಾರ್ಯಾ ಕೃತಾಃಕ್ರಿಯಮಾಣಾಃಸರ್ವಾ ಅಶೇಷತಃ ಕ್ಷಮಸ್ವ** ಎಂದು ವಿರೋಧಿನಿವೃತ್ತಿ ಸ್ವರೂಪವು ವ್ಯಾಖ್ಯಾತವು.

(೪) **ಆತ್ಮಕೈವಲ್ಯ ನಿವೃತ್ತಯಥಾವಸ್ಥಿತಸ್ವರೂಪಾವಿರ್ಭಾವಮ್**—ಕೈವಲ್ಯವೂಕೂಡ ಮುಮುಕ್ಷುವಾದ ಪ್ರಪನ್ನನಿಗೆ " ಏತೇವೈನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ" ಎಂಬಲ್ಲಿ ಹೇಳಿರುವಹಾಗೆ ನರಕಪ್ರಾಯವಾದುದರಿಂದ ಆತ್ಮವಿಗೆ ಯಥಾವಸ್ಥಿತ ಎಂದರೆ ನೈಜವಾದ ಸ್ವರೂಪಾವಿರ್ಭಾವವು "**ಸ್ವೇನ ರೂಪೇಣಾಭಿನಿಷ್ಪದತೇ**" ಎಂದು ಶ್ರುತಿಯಲ್ಲೂ "**ಸಂಪದ್ಯಾವಿರ್ಭಾವಃ ಸ್ವೇನಶಬ್ದಾತ್**" ಎಂದು ಬ್ರಹ್ಮಸೂತ್ರದಲ್ಲೂ ಹೇಳಿರುವಹಾಗೆ ಸ್ವಸ್ವರೂಪಾವಿರ್ಭಾವವು, **ಮೋಕ್ಷಯಿಶ್ಯಾಮಿ** ಎಂಬ ಪದದಲ್ಲಿ ಅರ್ಥವಾಗಿ ತೋರುತ್ತದೆ.

(೫) **ಪರಿಪೂರ್ಣ ಭಗವದನುಭವವು**— ವಿರಜಾ ನದಿಯಲ್ಲಿ ಈತನಿಗೆ ಯಾವಾಗ ಸೂಕ್ಷ್ಮದೇಹ ಶರೀರವು ಕಳೆದು ಹೋಯಿತೋ, ಆಗ ಅಮಾನವ ಕರಸ್ಪರ್ಶ ಉಂಟಾಗಿ, ಅವರು ಶ್ರಿಯಃಪತಿಯಾದ ಪರವಾಸುದೇವನ ಎದುರಿಗೆ ನಿಲ್ಲಿಸಿದರೋ, ಆಗ ಪರಿಪೂರ್ಣ ಭಗವದನುಭವವು ಉಂಟಾಗುತ್ತದೆ. ಇದೂ **ಮೋಕ್ಷಯಿಷ್ಯಾಮಿ** ಎಂಬುದರ ಮೂಲಕ ಅರ್ಥವಾಗಿ ತೋರಿಬರುತ್ತದೆ.

(೬) ಆದರೊಂದಿಗೆ ಸರ್ವವಿಧ ಕೈಂಕರ್ಯಗಳನ್ನೂ ಮಾಡುವ ಭಾಗ್ಯವು ದೊರೆಯುತ್ತದೆಯಾದುದರಿಂದ **ಸರ್ವವಿಧಕೈಂಕರ್ಯ ಲಾಭವೂ ಮೋಕ್ಷಯಿಷ್ಯಾಮಿ** ಎಂಬ

**ಅಪುನರಾವೃತ್ತಿ; ಮುನ್ನು ಶೋಕ ಹೇತು ಪ್ರಾಚುರ್ಯಮು, ಪಿನ್ನು ಶೋಕ ಪ್ರಾಪ್ತಿಯಿಲ್ಲಾಮೈ, ವಿಮರ್ಶಕಾಲಮುಲ್ಲಾಮು ನಿಸ್ಸಂಶಯತ್ವಮು, ಶೋಕ**

ಲ್ಲಿ ಅರ್ಥವಾಗಿ ತೋರುತ್ತದೆ. (೫) ಮತ್ತು (೬) ಎರಡನ್ನೂ ಒಂದಾಗಿ ಭಾವಿಸಬಹುದು.

(೬) **ಅಪುನರಾವೃತ್ತಿ**— ಯಾವಾಗ ದಿವ್ಯವೈಕುಂಠದಲ್ಲಿ ಪರಿಪೂರ್ಣ ಬ್ರಹ್ಮಾನುಭವದ ಆನಂದವೂ ತತ್ಕೈಂಕರ್ಯ ಭಾಗ್ಯವೂ ಲಭಿಸಿತೋ ಆಗ ಅಂತಹ ದಿವ್ಯಸ್ಥಿತಿಯನ್ನು ಬಿಟ್ಟು ಈ ಹೇಯವಾಗಿ ದುಃಖಕರವಾದ ಈ ಲೋಕಕ್ಕೆ ಬರಲು ಇಷ್ಟಪಡುವುದಿಲ್ಲ. ಸರ್ವೇಶ್ವರನು ತನ್ನ ಪ್ರಿಯ ಪುತ್ರನು ಬಂದು ತನ್ನಲ್ಲಿಗೆ ಬಂದು ಸೇರುವನೇ ಎಂದು ಕಾದಿದ್ದು ಬರಮಾಡಿಕೊಂಡು ಪುನಃ ಅಲ್ಲಿಂದ ಕೃಪಾಪಿಯೂಷ ಜಲಧಿಯು ಈ ಲೋಕಕ್ಕೆ ದಬ್ಬಿಬಿಡುವನೇ? ಆದುದರಿಂದ **ಅಪುನರಾವೃತ್ತಿಯು.** ಇದೂ **ಮೋಕ್ಷಯಿಷ್ಯಾಮಿ** ಎಂಬುದರಿಂದ ಅರ್ಥವಾಗಿ ದ್ಯೋತಿತವು.

ಮುಂದೆ **ಮಾಶುಚಃ** ಎಂಬ ಪದದ ಏಳರ್ಥಗಳು "**ಮುನ್ನುಶೋಕಹೇತು ಪ್ರಾಚುರ್ಯಮು**" ಎಂಬುದರಿಂದ ಹಿಡಿದು "**ನಿರಪರಾಧಕೈಙ್ಕರ್ಯ ರಸಿಕತ್ವಮು**" ಎಂಬುದರವರೆಗೂ ಸಙ್ಗ್ರಹಿಸಲ್ಪಡುವುವು.

(೧) **ಮುನ್ನುಶೋಕಹೇತುಪ್ರಾಚುರ್ಯಮು**— ಮುನ್ನು **ಶರಣಂ ವ್ರಜ** ಎಂಬ ಉಪದೇಶಾನುಸಾರವಾಗಿ ಭರನ್ಯಾಸಕ್ಕೆ ಮೊದಲು ಇದ್ದ ನಿನ್ನ ಶೋಕಗಳೆಲ್ಲಾ ತೊಲಗುತ್ತವೆಯಾದುದರಿಂದ **ಮಾಶುಚಃ** ಎಂದು ಹೇಳಲ್ಪಟ್ಟಿತು.

(೨) **ಪಿನ್ನು ಶೋಕಿಕ್ಕ ಪ್ರಾಪ್ತಿಯಿಲ್ಲಾಮೈ** - ಪಿನ್ನು-ಶರಣಂ ವ್ರಜಾನಂತರದಲ್ಲಿ **ಶೋಕಿಕ್ಕ ಪ್ರಾಪ್ತಿಯಿಲ್ಲಾಮೈ** - ಶೋಕಿಸುವ ಸಂಭವವೇ ಇಲ್ಲದಿರುವಿಕೆ.

(೩) **ವಿಮರ್ಶಕಾಲಮುಲ್ಲಾಮು ನಿಸ್ಸಂಶಯತ್ವಮು** - ಇಂತಹ ಶರಣಂ ವ್ರಜ ವೆಂಬ ಅಲ್ಪೋಪಾಯದಿಂದ ಅಮೋಘ ಫಲಗಳು ದೊರೆಯುತ್ತವೆಯೇ ಎಂಬ ಪಂಚ ಶಙ್ಕಾಗಳನ್ನು ವಿಮರ್ಶಿಸಿ ನೋಡಿದರೆ ಶಂಕಾಗಳೆಲ್ಲಾ ದೂರೀಕೃತವಾಗಿ ನಿಸ್ಸಂಶಯತ್ವವು ಈ **ಮಾಶುಚಃ** ಎಂಬುದರಿಂದ ತೋರಿಬರುತ್ತದೆಂಬ ತಾತ್ಪರ್ಯವು.

(೪) **ಶೋಕನಿವೃತ್ತಿ** - ಗುರೂಪಾಯವಾದ ಉಪಾಸನಕ್ಕೆ ಶಕ್ತಿಯಿಲ್ಲವೇ? ಅಥವಾ ಪಾಪಗಳ ನಿವಾರಣೆಗಾಗಿ ಪ್ರಾಯಶ್ಚಿತ್ತಮಾಡಿಕೊಳ್ಳಲು ಶಕ್ತಿ ಸಾಧನಗಳಿಲ್ಲವೇ ಇತ್ಯಾದಿ ಶೋಕ ನಿವೃತ್ತಿಯು.

(೫) **ನಿರ್ಭಯತ್ವಮು**, - ಈ ಮುಮುಕ್ಷುವಿಗೆ ಶೋಕಮಾತ್ರವೇ ಇಲ್ಲದೆ ಭಯವೂ ಇತ್ತು. ಭಯವು ಏಕೆಂದರೆ ಅಪರಾಧಗಳ ನಾಶವಿಲ್ಲದೆ ನರಕಪ್ರಾಪ್ತಿ

**ನಿವೃತ್ತಿ, ನಿರ್ಭಯತ್ವಮ್, ಹರ್ಷವಿಶೇಷಮ್, ಶರೀರಪಾತಕಾಲ ಪ್ರತೀಕ್ಷ ತ್ವಮ್, ನಿರಪರಾಧ ಕೈಂಕರ್ಯ ರಸಿಕತ್ವಮ್ ; - ಎನ್ರು ಇವೈ ಪ್ರಧಾನ ಮಾಯ್ ಮತ್ತು ಮಿವತ್ತುಕ್ಕು ಅಪೇಕ್ಷಿತಙ್ಗಳಿಲ್ಲಾ ಶಬ್ದ ಶಕ್ತಿಯಾಲುಮ್, ಅರ್ಥ ಸ್ವಭಾವತ್ತಾಲುಮ್, ಅನುಶಿಷ್ಟಂಗಳ್,**

**ಚರಮಶ್ಲೋಕಸ್ಯ ರಹಸ್ಯಾರ್ಥಸಾರ ಸಙ್ಗ್ರಹಃ**

---

ಎಲ್ಲಿಯಾಗುತ್ತದೋ ಎಂಬ ಭಯವೂ. ಇದು ಶೋಕದೊಂದಿಗೆ ಇರುವದರಿಂದ **ಮಾಶುಚಃ** ಎಂಬುದರಿಂದ ಭಯ ನಿವೃತ್ತಿಯೂ ಹೇಳಲ್ಪಟ್ಟಿತು.

(೬) **ಹರ್ಷವಿಶೇಷಮ್,** - ಯಾವಾಗ ಶೋಕಭಯಗಳು ಕಳೆದವೋ, ಆಗ ತಾನು ಏನೊಂದೂ ತಡೆಯಿಲ್ಲದೆ ಈ ಹೇಯ ಶರೀರವನ್ನು ಕಳೆದುಕೊಂಡು ಪುನರ್ಜನ್ಮವಿಲ್ಲದೆ ನಿರತಿಶಯಾನಂದವನ್ನು ಅನುಭವಿಸುವನಾಗಿ ಶ್ರಿಯಃಪತಿಗೆ ಕೈಂಕರ್ಯಮಾಡುವ ಭಾಗ್ಯವು ನಿರ್ಯಾಣಾನಂತರ ಲಭಿಸುತ್ತದೆಂದು ಹರ್ಷವಿಶೇಷವು.

(೭) ಆದುದರಿಂದಲೇ ಶರೀರಪಾತಕಾಲ ನಿರೀಕ್ಷಣವು.

ಹೀಗೆ ಈ ಚರಮಶ್ಲೋಕದ ೧೨ ಪದಗಳಿಂದ ೫೩ ತಾತ್ಪರ್ಯಗಳು ತೋರಿ ಬರುತ್ತವೆಂಬ ಭಾವವು.

**ಎನ್ರು** - ಎಂಬದಾಗಿ, **ಇವೈ ಪ್ರಧಾನಮಾಯ್** - ಈ ಅರ್ಥಗಳೇ ಮುಖ್ಯ ವಾಗಿ, **ಮತ್ತುಂ** - ಇಷ್ಟೇ ಅಲ್ಲದೆ, **ಇವತ್ತುಕ್ಕು ಅಪೇಕ್ಷಿತಙ್ಗಳಿಲ್ಲಾಮ್** - ಈ ಅರ್ಥಗಳಿಗೆ ಬೇಕಾದ, **ಶಬ್ದಶಕ್ತಿಯಾಲುಮ್** - ಶಬ್ದಶಕ್ತಿಮೂಲಕವಾಗಿಯೂ, **ಅರ್ಥಸ್ವಭಾವತ್ತಾಲುಮ್** - ಅರ್ಥವಾಗಿಯೂ, **ಅನುಶಿಷ್ಟಂಗಳ್**-ಉಪದೇಶಿಸ ಲ್ಪಟ್ಟವು.

**ಚರಮಶ್ಲೋಕದ ರಹಸ್ಯಾರ್ಥದ ಸಾರಸಙ್ಗ್ರಹವು.**

---

ಈ ಚರಮಶ್ಲೋಕವು ಮೂರು ವಾಕ್ಯಗಳನ್ನುಳ್ಳದ್ದು. **ಶರಣಂವ್ರಜ** ಎಂಬು ವವರೆಗೆ ಪೂರ್ವಾರ್ಥವೆಲ್ಲಾ ಒಂದು ಮಹಾ ವಾಕ್ಯವು. ಅಲ್ಲಿಂದ **ಮೋಕ್ಷಯಿ ಷ್ಯಾಮಿ** ಎಂಬುವವರೆಗೂ ದ್ವಿತೀಯ ವಾಕ್ಯವು. **ಮಾಶುಚಃ** ಮೂರನೆಯ ವಾಕ್ಯವು. ಇವುಗಳಿಂದ ತೋರಿಬರುವ **"ತಿರುಂಡ ಪೊರುಳ್"** ಮುಖ್ಯಾರ್ಥವೇ ನೆಂಬುದನ್ನೀಗ ನಿಗಮನದಲ್ಲಿ ತಿಳಿಸುತ್ತಾರೆ.—

೧. ಮೊದಲು **ಶರಣಂವ್ರಜ** ಎಂಬ ಪ್ರಯೋಗದಿಂದ ತೋರಿಬರುವ **ತ್ವಮ್** ಎಂಬ ಯುಷ್ಮಚ್ಛಬ್ದಾರ್ಥವನ್ನು ತಿಳಿಸುತ್ತಾರೆ. ನೀನು ಎಂತವನೆಂದರೆ - **ಅಲ್ಪಜ್ಞನಾಯ್** - ಶಾಸ್ತ್ರವು ವಿಪುಳವು, ಆದನ್ನು ವಿಮರ್ಶಿಸಿ ತಿಳಿಯಬೇಕಾದ

**ಅಲ್ಪಜ್ಞನಾಯ್‌, ಅಲ್ಪಶಕ್ತಿಯಾಯ್‌, ಪರಿಮಿತಕಾಲವರ್ತ್ತಿಯಾಯ್‌, ವಿಳಂಬಕ್ಷಮನು ಮನ್ರಿಕ್ಕೇ ಇರುಕ್ಕಿರ ಉನ್ನಾಲೇ, ಅಱಿಯಾವುಮ್‌, ಅನುಷ್ಠಿಕ್ಕವುಮ್‌ ಅರಿತಾಯ್‌, ಫಲವಿಳಂಬುಮು ಮುಣ್ಡಾಯಿರುಕ್ಕಿರ ಉಪಾಯಾನ್ತರಙ್ಗಳಿಲಲಯಾದೇ, ಸುಲಭನಾಯ್‌ ಸರ್ವಲೋಕ ಶರಣ್ಯನಾಮ್‌. ಶರಣ್ಯತ್ವೋಪಯುಕ್ತ ಸರ್ವಾಕಾರ ವಿಶಿಷ್ಟನಾನ ಎನ್ನೈ, ಒರುವನ್ನೈಯುಮೇ ಯುಪಾಯಮಾಗ ಅಧ್ಯವಸಿತ್ತುಕ್ಕೊಂಡು ಅಙ್ಗಪಂಚಕ ಸಂಪನ್ನಮಾನ ಆತ್ಮಾರಕ್ಷಾಭರ ಸಮರ್ಪಣತ್ತೈಪ್ಪಣ್ಣು.**

---

ಜ್ಞಾನ ತುಂಬಾ ಇಲ್ಲದವನಾಗಿ ಯಾವನು, **ಅಲ್ಪಶಕ್ತಿಯಾಯ್‌** – ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಾದಿಗಳನ್ನು ಅನುಷ್ಠಿಸುವದಕ್ಕೆ ತುಂಬಾ ಶಕ್ತಿಯಿಲ್ಲದವನು, **ಪರಿಮಿತಕಾಲವರ್ತ್ತಿಯಾಯ್‌** - ಈ ದೇಹಾನಂತರವೇ ಮೋಕ್ಷ ಬೇಕೆಂಬ ಅಭಿಲಾಷೆಯಿರುವದರಿಂದ ಶಾಸ್ತ್ರಾಭ್ಯಾಸಗಳಿಗಾಗಲಿ, ಪ್ರಾಯಶ್ಚಿತ್ತಾದಿಗಳನ್ನು ಅನುಷ್ಠಿಸಿ ಪಾಪಗಳನ್ನು ಕಳೆದುಕೊಳ್ಳುವದಕ್ಕಾಗಲಿ, ಬೇಕಾದ ಕಾಲವಿಲ್ಲದೆ ಪರಿಮಿತಕಾಲವರ್ತಿ ಯಾಗಿರುವವನು, **ವಿಳಂಬಕ್ಷಮನು ಮನ್ರಿಕ್ಕೇ ಇರುಕ್ಕಿರ ಉನ್ನಾಲೇ** – ಮುಂದಿನ ಜನ್ಮವು ಒಂದು ವೇಳೆ ಇತರೋಪಾಯದಿಂದ ಉಂಟಾದರೂ ಉಂಟಾಗಬಹುದು. ಅಂತಹ ವಿಳಂಬವನ್ನು ಸಹಿಸದೇ ಇರುವ **ಉನ್ನಾಲೇ** - ನಿನ್ನಿಂದ (ಇದಿಷ್ಟೂ ವ್ರಜಶಬ್ದದ ಮಧ್ಯಮ ಪುರುಷದಿಂದ ಅರ್ಥವಾಗಿ ತೋರಿಬರುವ "**ತ್ವಾಂ**" ಶಬ್ದಾರ್ಥವು.) **ಅಱಿಯುವುಮ್‌** – ಜ್ಞಾನ ಮೂಲಕ ತಿಳಿಯುವದಕ್ಕೂ, **ಅನುಷ್ಠಿಕ್ಕವುಮ್‌** – ಅನುಷ್ಠಿಸುವದಕ್ಕೂ, **ಅರಿದಾಯ್‌** – ಕಷ್ಟವಾಗಿರುವ, **ಫಲವಿಳಂಬಮುಮುಣ್ಡಾಯಿರುಕ್ಕಿರ** – ಇನ್ನೊಂದು ಉಪಾಯದಲ್ಲಿ ಎಂದರೆ ಉಪಾಸನದಲ್ಲಿ ಪ್ರಾರಬ್ಧ ಕಳೆಯದೆ ಮುಂದಿನ ಜನ್ಮವನ್ನು ಎತ್ತಬೇಕಾದ ವಿಳಂಬವಿರುವ, **ಉಪಾಯಾನ್ತರಗಳಿಲೇ** ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳಲ್ಲಿ, **ಅಲೆಯಾದೇ** - ಅಲೆಯದೆ, ಕಷ್ಟಪಡದೆ ಇದು "**ಸರ್ವಧರ್ಮಾನ್ ಪರಿತ್ಯಜ್ಯ**" - ವೆಂಬುದರ ಅರ್ಥವು. **ಸುಲಭನಾಗಿ ಸರ್ವಲೋಕಶರಣ್ಯನಾಗಿರುವ, ಶರಣ್ಯೋಪಯುಕ್ತ** ರಕ್ಷಕನಾಗಿರಲು ಬೇಕಾದ, **ಸರ್ವಾಕಾರ ವಿಶಿಷ್ಟನಾನ** - ಸಮಸ್ತ ಆಶ್ರಯೋಪಯುಕ್ತ ವಿಶೇಷಣಗಳಿಂದ ಕೂಡಿರುವ, ಅವು ಯಾವುವೆಂದರೆ ಆಶ್ರಯೋಪಯುಕ್ತ ಕಲ್ಯಾಣಗುಣಗಳಾದ ಸೌಲಭ್ಯ, ಸೌಶೀಲ್ಯ, ವಾತ್ಸಲ್ಯ, ಕಾರುಣ್ಯ, ಔದಾರ್ಯಾದಿಗುಣ ವಿಶೇಷಗಳೇನು, ಕರುಣಾರೂಪಿಯಾಗಿ ಅನುಗ್ರಹಮಯಳಾದ ಶ್ರೀ ಮಹಾಲಕ್ಷ್ಮಿಯಿಂದ ಸೇರಿರುವದೇನು, ಹೀಗೆ ಸರ್ವಾಕಾರ ವಿಶಿಷ್ಟನಾದ, **ಎನ್ನೈ** – ನನ್ನನ್ನು (ಇದಿಷ್ಟೂ **ಮಾಂ** ಎಂಬ ಶಬ್ದಾರ್ಥವು) **ಒರುವನ್ನೈಯೇ** - ಅನ್ಯ ದೇವತೆಗಳು ಈ ಸಂದರ್ಭದಲ್ಲಿ ನಿನಗೆ ಸಹಾಯ

**(೨) ಇಪ್ಪಡಿ ಅನುಷ್ಠಿತೋಪಾಯನಾಯ್, ಕೃತಕೃತ್ಯನಾಯ್, ಎನಕ್ಕಡೈಕ್ಕಲಮಾಯ್, ಅತ್ಯರ್ಥಪ್ರಿಯತಮನಾನ ಉನ್ನೈ, ಪರಮ ಕಾರುಣಿಕನಾಯ್ ಸುಪ್ರಸನ್ನನಾಯ್, ನಿರಙ್ಕುಶ ಸ್ವಾತಂತ್ರ್ಯನಾಯ್, ಸ್ವಾರ್ಥಪ್ರವೃತ್ತನಾನ ನಾನೇ, ಎನ್ ಸಙ್ಕಲ್ಪಮಾತ್ರಮೇ ತುಣೈಯಾಗಕ್ಕೊಂಡು, ಬಹುಪ್ರಕಾರಮಾಯ್, ಅನಂತಮಾಯ್, ದುರತ್ಯಯಮಾನ ಸರ್ವವಿರೋ**

---

ಮಾಡಲು ಶಕ್ತಿಯಿಲ್ಲದವರಾದುದರಿಂದ ಅವರುಗಳನ್ನು ಬಿಟ್ಟು ನನ್ನೊಬ್ಬನನ್ನೇ ಇದು **ಏಕಂ** - ಎಂಬ ಪದದ ಅರ್ಥವು, **ಉಪಾಯನಾಗ ಅಧ್ಯವಸಿತ್ತುಕ್ಕೊಂಡು** (ಇದು **ಶರಣಂ** ಎಂಬುದರ ಅರ್ಥವು) ಉಪಾಯವೆಂದು ನಿಶ್ಚಯಿಸಿಕ್ಕೊಂಡು **ಅಙ್ಗ ಪಂಚಕ ಸಂಪನ್ನಮಾನ** - ಆನುಕೂಲ್ಯಾದಿ ಅಂಗ ಪಂಚಕಗಳಿಂದ ಕೂಡಿದ, **ಆತ್ಮರಕ್ಷಾಭರಸಮರ್ಪಣವನ್ನುಮಾಡು** (ಇದು **ಶರಣಂವ್ರಜ** ಎಂಬುದರ ಅರ್ಥವು)

೨. ಮುಂದೆ ಉತ್ತರಾರ್ಧದ ಸಾರಭೂತಾರ್ಥಗಳನ್ನು ತಿಳಿಸುತ್ತಾರೆ—

**ಇಪ್ಪಡಿ** - ಹಿಂದೆ **ಶರಣಂವ್ರಜ** ಎಂಬಲ್ಲಿ ಹೇಳಿರುವ ಹಾಗೆ, **ಅನುಷ್ಠಿತೋಪಾಯನಾಯ್** - ಉಪಾಯಾನುಷ್ಠಾನವನ್ನು ಮಾಡಿದವನಾಗಿ, **ಕೃತಕೃತ್ಯನಾಗಿ** - ಮೋಕ್ಷಸಾಧನೆಗೆ ಏನನ್ನು ಮಾಡಬೇಕೋ ಅದನ್ನು ಮಾಡಿದವನಾಗಿ, **ಎನಕ್ಕಡೈಕ್ಕಲಮಾಯ್** - ಶರಣಾಗತನಾದವನು ನನ್ನ ವ್ರತಾನುಸಾರ ರಕ್ಷ್ಯವಸ್ತುವಾಗಿ, **ಅತ್ಯರ್ಥಪ್ರಿಯತಮನಾಯ್** - "ಪ್ರಿಯೋಽಸಿಮೇ" ಎಂದು ಅರ್ಜುನನನ್ನು ಕುರಿತು ಹೇಳಿದ ಹಾಗೆ ಇಷ್ಟೆಂದು ಹೇಳಲು ಸಾಧ್ಯವಲ್ಲದಷ್ಟು ಪ್ರಿಯತಮನಾದ, **ಉನ್ನೈ** - ನಿನ್ನನ್ನು (ಈ ನಾಲ್ಕು ವಿಶೇಷಣಗಳು **"ತ್ವಾ"** ಶಬ್ದಾರ್ಥವು). **ಪರಮಕಾರುಣಿಕನಾಗಿ, ಸುಪ್ರಸನ್ನನಾಗಿ** - ಶರಣಾಗತನಾದುದರಿಂದ ಸುಪ್ರಸನ್ನನಾಗಿ, **ನಿರಙ್ಕುಶ ಸ್ವತಂತ್ರನಾಯ್** - ಅಘಟಿತಘಟನಾಶಕ್ತಿಯುಳ್ಳವನಾದದರಿಂದ ತಡೆಯಿಲ್ಲದ ಸ್ವತಂತ್ರನಾಗಿ, **ಸ್ವಾರ್ಥಪ್ರವೃತ್ತನಾನ** - ತನ್ನ ಮಗನಿಗೆ ದಾಯಧನವಾಗಿ ಕಾಪಾಡಿ ಮೋಕ್ಷ ಸುಖವನ್ನೀಯುವದೇ ತನ್ನ ಪ್ರಯೋಜನವಾಗಿ ಭಾವಿಸುವ, **ನಾನೇ**-ನಾನೇ, (ಇದುಂ ಅಹಂ ಶಬ್ದಾರ್ಥವು) **ಎನ್‌ಸಙ್ಕಲ್ಪಮಾತ್ರಮೇ ತುಣೈಯಾಗಕ್ಕೊಂಡು** - ನನ್ನ ಸಙ್ಕಲ್ಪಮಾತ್ರದಿಂದಲೇ ಎಂದರೆ ಅದಕ್ಕೆ **ಪ್ರತಿಭಯಂ ನ ಕಿಂಚಿತ್ಕ್ವಚಿತ್** - (ಅಭೀತಿ. ೨೯) ಎಂಬ ಭಾವವು (ಇದು **ಅಹಮೇವ** ಎಂಬುದರಿಂದ ತೋರುವ ಅವಧಾರಣಾರ್ಥವು **ಬಹುಪ್ರಕಾರಮಾಯ್** - ಬಹುವಿಧವಾಗಿ **ಅನಂತಮಾಯ್** - ಸೃಷ್ಟಿ ಮೊದಲುಗೊಂಡು ಇದುವರೆಗೂ ಬಹುಜನ್ಮಗಳಲ್ಲಿ ಮಾಡಿದವುಗಳಾದುದರಿಂದ ಕೊನೆಯೇ ಇಲ್ಲದೆ ಇರುವವುಗಳಾಗಿ (**ಸರ್ವಪಾಪೇಭ್ಯಃ** ಎಂಬಲ್ಲಿನ ಸರ್ವಶಬ್ದಾರ್ಥವು, **ದುರತ್ಯಯ**

**ಧಿವರ್ಗತ್ತೋಡುಮ್ ಪಿೞ್ತುಡರ್ಚ್ಚಿಯಿಲ್ಲಾದ ಪಡಿ ತುವಕ್ಕರುತ್ತು, ಎನ್ನೋಡೊಕ್ಕ ಎನ್ನುಡೈಯ ಆತ್ಮಾತ್ಮೀಯಙ್ಗಳೆಲ್ಲಾಮ್ ಅನುಭವಿಕ್ಕೈಯಾಲೇ ತುಲ್ಯಭೋಗನಾಕ್ಕಿ ಪರಿಪೂರ್ಣಾನುಭವ ಪರೀವಾಹರೂಪಮಾನ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯತ್ತೈಯುಮ್, ತನ್ದುಕಪ್ಪೇ.**

**(೩) ನೀಯೊನ್ನುಕ್ಕುಮ್ ಶೋಕಿಕ್ಕವೇಣ್ಡಾವೆನ್ರು ಚರಮಶ್ಲೋಕತ್ತಿಲ್ ತಿರಣ್ಡ ಪೊರುಳ್.**

---

**ಮಾನ** – ಪ್ರಾಯಶ್ಚಿತ್ತಗಳಿಂದಲೂ ಕಳೆದುಕೊಳ್ಳಲು ಅಸಾಧ್ಯವಾದ, **ಸರ್ವವಿರೋಧಿವರ್ಗತ್ತೋಡು** – ಬಂಧಕಗಳಾದ ಸಮಸ್ತ ಪುಣ್ಯಪಾಪ ಸಮೂಹಗಳೊಂದಿಗೆ (ಇದು ಸರ್ವಪಾಪೇಭ್ಯಃ) ಎಂಬುದರ ಅರ್ಥವು, **ಪಿೞ್ತುಡರ್ಚ್ಚಿಯಿಲ್ಲಾದ ಪಡಿ** – ಪುನಃ ಹಿಂತಿರುಗುವ ಸಂಭವವಿಲ್ಲದ ಹಾಗೆ ಪುನಃ ಸಂಸಾರಬಂಧವಿಲ್ಲದ ಹಾಗೆ ಎಂಬ ಭಾವವು, **ತುವಕ್ಕರುತ್ತು** – ಪ್ರಕೃತಿ ಸಂಬಂಧವನ್ನು ಕಡಿದು ಹಾಕಿ, ಎಂದರೆ ಹೋಗಲಾಡಿಸಿ, (ಇದು **ಮೋಕ್ಷಯಿಷ್ಯಾಮಿ** ಎಂಬುದರ ಶಾಬ್ದವಾಗಿ ತೋರುವ ಅರ್ಥವು,) ಮುಂದೆ ಆರ್ಥವಾಗಿ, ಅನಿಷ್ಟನಿವೃತ್ತಿಯಿಂದ ಇಷ್ಟಪ್ರಾಪ್ತಿಯೂ ಲಭಿಸುವ ಅರ್ಥವು ಹೇಳಲ್ಪಡುತ್ತದೆ.) **ಎನ್ನೋಡೊಕ್ಕ** – ನನ್ನೊಂದಿಗೆ ಸೇರಿ, ಎಂದರೆ ನನ್ನ ಸಾಯುಜ್ಯವನ್ನು ಹೊಂದಿ, **ಎನ್ನುಡೈಯ ಆತ್ಮಾತ್ಮೀಯಙ್ಗಳೆಲ್ಲಾಮ್** – ನನಗೆ ಶೇಷಭೂತರಾದ ನಿತ್ಯ ಮುಕ್ತರುಗಳೆಲ್ಲಾ, **ಅನುಭವಿಕ್ಕೈಯಾಲೇ** – ಅನುಭವಿಸುತ್ತಿರುವದರಿಂದ, **ತುಲ್ಯಭೋಗನಾಕ್ಕಿ** – **ಭೋಗಮಾತ್ರ ಸಾಮ್ಯಲಿಂಗಾಚ್ಚ** ( ) ಎಂಬ ವ್ಯಾಸಸೂತ್ರದಲ್ಲಿ ಹೇಳಿರುವ ಹಾಗೆ ಅವರುಗಳಿಗೆ ಸಮವಾದ ಭೋಗವನ್ನುಂಟುಮಾಡಿ, **ಪರಿಪೂರ್ಣಾನುಭವ** – ಶ್ರಿಯಃಪತಿಯನ್ನು ಅನುಭವಿಸುವ ಆನಂದದ, **ಪರೀವಾಹ** – ಪ್ರವಾಹರೂಪವಾದ, ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಿಗೂ ಉಚಿತವಾದ **ಸರ್ವವಿಧ ಕೈಂಕರ್ಯತ್ತೈಯುಮ್** – ಸಮಸ್ತ ವಿಧ ಕೈಂಕರ್ಯವನ್ನೂ **ತನ್ದುಕಪ್ಪೇ** – ಕೊಟ್ಟು ಸಂತುಷ್ಟನಾಗಿ ಮಾಡುವವನು, **ಅಹಂ** – ನಾನು ಎಂಬುದರೊಂದಿಗೆ ಅನ್ವಯವು ; **ತನ್ದುಗಪ್ಪೇನ್** – ಕೊಟ್ಟು ಸಂತೋಷಗೊಳಿಸುವೆನು ಎಂದು ಇದ್ದರೆ ಮೋಕ್ಷಯಿಷ್ಯಾಮಿ ಎಂಬ ಉತ್ತಮ ಪುರುಷಾರ್ಥಕ್ಕೆ ಸರಿಹೋಗುತ್ತದೆ. ಇದು ಎರಡನೆಯ ವಾಕ್ಯವು.

೩. ಮೂರನೆಯ ವಾಕ್ಯವು-**ನೀಯೊನ್ರುಕ್ಕುಮ್** – ನೀನು ಇವು ಯಾವುಗಳ ವಿಷಯದಲ್ಲೂ, **ಶೋಕಿಕ್ಕವೇಣ್ಡಾ** – **ಮಾಶುಚಃ** ಎಂಬ ಅಭಯಪ್ರದಾನ ವಾಕ್ಯವು. ಇದರಿಂದುಂಟಾಗುವ ಹತ್ತು ವಿಧ ಭಾವಗಳು ಅಡಗಿವೆ **ಎನ್ರು** –

**ಏಕಂ ಸರ್ವಪ್ರದನ್ಧರ್ಮ್ಯಂ ಶ್ರಿಯಾಜುಷ್ಟಂ ಸಮಾಶ್ರಿತೈಃ ।**
**ಅಪೇತ ಶೋಕೈ ರಾಚಾರ್ಯೈರಯಂ ಪನ್ಥಾಃಪ್ರದರ್ಶಿತಃ ॥**

---

ಎಂಬುದು, ಚರಮಶ್ಲೋಕದ, **ತಿರಣ್ಡಾಪ್ಪೊರಳ್** – ಸಾರಭೂತಾರ್ಥವು.

**ಅವತಾರಿಕೆ.**-ಶಾಂಕರಾದಿ ಇತರ ಮತಸ್ಥರು ಈ ಚರಮ ಶ್ಲೋಕಕ್ಕೆ ತಮ್ಮ ತಮ್ಮ ಭಾಷ್ಯಗಳಲ್ಲಿ ಈ ಸ್ವಾರಸ್ಯರಾಗಿ ಗುಹ್ಯತಮಗಳಾದ ಅರ್ಥಗಳನ್ನು ಹೇಳದೇ ಇರುವಾಗ ಇಷ್ಟು ರಹಸ್ಯಗಳಾದ ಅರ್ಥಗಳು ಅತಿಶಯಕ್ತಿಯಲ್ಲವೋ? ಸ್ವಖ್ಯಾತಿ ಗೋಸ್ಕರ ಹೇಳಿದ ಉಕ್ತಿಗಳಲ್ಲವೋ? ಎಂದರೆ ಇವು ಅತಿಶಯೋಕ್ತಿಯೂ ಅಲ್ಲವು. ತಮಗೆ ಖ್ಯಾತಿ ಮೊದಲಾದವೂ ಬೇಕಿಲ್ಲವು. ಶ್ರೀಯಾಮುನ ಮುನಿಗಳ ಶಿಷ್ಯರಾದ ಪೆರಿಯನಂಬಿ ತಿರುಕೋಟ್ಟಿಯಾರ್ ನಂಬಿ, ಅವರುಗಳ ಶಿಷ್ಯರಾದ ಶ್ರೀ ಭಾಷ್ಯಕಾರರು, ಅವರ ಶಿಷ್ಯರಾದ ನಡಾದೂರಮ್ಮಾಳ್ ಪೆರಿಯ ಆಚ್ಚಾನ್ ಹೀಗೆ ಪರಂಪರಾ ಮೂಲಕವಾಗಿ ತಮಗೆ ತಮ್ಮ ಗುರುಗಳಿಂದ ಬಂದ ಅರ್ಥಗಳು. ಇತರರಿಗೆ ಈ ಅಮೋಘ ಶ್ಲೋಕದಲ್ಲಿ ಅಡಗಿರುವ ಉಪಾಯದಲ್ಲಿ ಶ್ರದ್ಧೆಯೂ ನಿಷ್ಠೆಯೂ ಮಹಾತ್ಮ್ಯೆಯೂ ಇಲ್ಲವು. ತಮಗಾದರೋ ತಮ್ಮ ಆಚಾರ್ಯರುಗಳು ತಾವು ಶ್ರದ್ಧಾಯುಕ್ತರಾಗಿ ಅನುಷ್ಠಿಸಿ, ತಮಗೂ ಶ್ರದ್ಧಾನಿಷ್ಠೆಗಳನ್ನುಂಟುಮಾಡಿರುವದರಿಂದ ತಮ್ಮ ಶಿಷ್ಯರುಗಳ ಉಜ್ಜೀವನಾರ್ಥವಾಗಿ ಪ್ರದರ್ಶಿಸಿರುತ್ತೇನೆ ವಿನಾ ಸ್ವಕಲ್ಪನೆಯಲ್ಲವು ಎಂದು ಈ ಶ್ಲೋಕದಲ್ಲಿ ಹೇಳಿ, ಉಪಕಾರ ಸ್ಮೃತಿಯನ್ನು ಮುಂದಿನ ಪಾಶುರದಿಂದ ತಿಳಿಸುತ್ತಾರೆ.

**ಅರ್ಥವು ಏಕಂ** – ಒಬ್ಬನಾದ, **ಸರ್ವಪ್ರದಮ್** – ಚತುರ್ವಿಧ ಪುರುಷಾರ್ಥಗಳನ್ನೂ ಕೊಡುವ, **ಧರ್ಮ್ಯಂ** – ಸಿದ್ಧೋಪಾಯನಾದ, **ಶ್ರೀಯಾಜುಷ್ಟಮ್** – ಯಾವಾಗಲೂ ಲಕ್ಷ್ಮಿಯೊಂದಿಗೆ ಸೇರಿರುವ ಶ್ರೀಕೃಷ್ಣನನ್ನು, **ಸಮಾಶ್ರಿತೈಃ** – ಶರಣಾಗತಿಯ ಮೂಲಕ ಆಶ್ರಯಿಸಿದ, **ಅಪೇತ ಶೋಕೈಃ** – ಹೋಗಲ್ಪಟ್ಟ ಶೋಕಗಳನ್ನುಳ್ಳ **ಆಚಾರ್ಯೈಃ** – ಆಚಾರ್ಯರುಗಳಿಂದ, **ಅಯಂಪನ್ಥಾಃ** – ಈ ಶರಣಾಗತಿ ಮಾರ್ಗವು, **ಪ್ರದರ್ಶಿತಃ** – ಚೆನ್ನಾಗಿ ಉಪದೇಶಿಸಲ್ಪಟ್ಟಿತು.

**ತಾತ್ಪರ್ಯ** – ಈ ಸಿದ್ಧೋಪಾಯನಾದ ಶ್ರೀಕೃಷ್ಣನು, **ಏಕಂ** – ಎಂದು ಹೇಳಲ್ಪಟ್ಟನು. ಯಾವಾಗಲೂ ಲಕ್ಷ್ಮಿಯೊಂದಿಗೇ ಇರುವವನಾದರೂ, ಶ್ರಿಯಾಜುಷ್ಟನಾದರೂ **ಏಕಂ** – ಶ್ರುತಿಯೇ ಹಾಗೆ ಹೇಳುತ್ತದೆ. **ಸ್ವಥಯಾ ತದೇಕಂ** – ಲಕ್ಷ್ಮಿಯೊಂದಿಗೆ ಒಬ್ಬನು, ಸಿದ್ಧೋಪಾಯನಾಗುವಾಗಲೂ "**ಲಕ್ಷ್ಮ್ಯಾಸಹ ಹೃಷೀಕೇಶನು**" ಉಪಾಯನು, ಎಂಬುದನ್ನು ತಿಳಿಸಿರುತ್ತಾರೆ. ಅದೂ ಅಲ್ಲದೆ ಈ ಲೋಕ ದಂಪತಿಗಳೇ ಪ್ರಾಪಕರೂ ಪ್ರಾಪ್ಯರೂ ಸಹ ಆದುದರಿಂದ **ಏಕಂ** – ಏಕ ಶಬ್ದದ ಷಡರ್ಥಗಳೂ ಸಙ್ಗ್ರಹಿಸಲ್ಪಟ್ಟವು. ಅನ್ಯದೇವತೆಗಳಿಗೆ "**ಬ್ರಹ್ಮಾಣಂ ಶಿತಿಕಂ**

**ಡಂಚ"** ಎಂಬಲ್ಲಿ ಹೇಳಿರುವ ಹಾಗೆ ಮೋಕ್ಷವನ್ನು ಕೊಡಲು ಅಧಿಕಾರವಿಲ್ಲವು. ಮೋಕ್ಷವನ್ನೂ ಕೊಡುವ ಶಕ್ತಿಯು ಈ ದಂಪತಿಗಳಿಗೆ ಮಾತ್ರವೇ ಎಂಬರ್ಥವು. ಆದುದರಿಂದ **ಸರ್ವಪ್ರದಮ್'** – ಚತುರ್ವಿಧ ಪುರುಷಾರ್ಥಗಳನ್ನೂ ಕೊಡುವ ಶಕ್ತಿಯುಳ್ಳವನು ಶ್ರೀ ಕೃಷ್ಣನು. ಐಹಿಕಾದಿಗಳ ಪ್ರಾಪ್ತಿಗಾಗಿಯೂ **ಶರಣಂ ವ್ರಜ** ಎಂಬ ಉಪದೇಶವು ಎಂಬದಾಗಿ ಹಿಂದೆ **"ಸುದುಷ್ಕರೇಣ ಶೋಚೇದ್ಯಃ............ ಚರಮಶ್ಲೋಕಸಂಗ್ರಹಃ"** ಎಂಬಲ್ಲಿ ಹೇಳಲ್ಪಟ್ಟಿತು. ಮೋಕ್ಷಾರ್ಥಿಯಾದವನು ಕರ್ಮಯೋಗಾದಿಗಳಿಂದ ಸಹಕೃತವಾದ ಉಪಾಸನಕ್ಕೆ ತನಗೆ ಶಕ್ತಿಯಾಗಲಿ ಅಧಿಕಾರವಾಗಲಿ ಇಲ್ಲವೇ ಎಂದು ಶೋಕಿಸಿದರೆ ಉಪಾಸನಸ್ಥಾನದಲ್ಲಿ ತಾನೇ ನಿಂತು ಶರಣಾಗತಿಯ ಮೂಲಕ ಕೊಡುವನಾದುದರಿಂದ, **ಧರ್ಮಂ** – ಎಂದು **ಕೃಷ್ಣಂಧರ್ಮಂ ಸನಾತನಮ್'** – ಎಂಬ ಶ್ಲೋಕಾರ್ಥವು ಈ ಧರ್ಮಂ ಎಂಬ ಶಬ್ದದಿಂದ ಹೇಳಲ್ಪಟ್ಟಿತು.

ಹೀಗೆ **ಶರಣಂ ವ್ರಜ** ಎಂದು ಹೇಳಿದ ಕೃಪಾಪಿಯೂಷಜಲನಿಧಿಯನ್ನು **ಸಮಾಶ್ರಿತೈಃ** – ಚೆನ್ನಾಗಿ ಆಶ್ರಯಿಸಿದವರು, ತಮ್ಮ ಆಚಾರ್ಯರುಗಳು ಉಪಾಸನವನ್ನು ಮಾಡಲು ಸಾಧ್ಯವಿಲ್ಲವೇ, ನಮಗೇನುಗತಿ ಎಂಧು ಆಕಿಂಚಿನ್ಯಾದಿ ಪಂಚಾಂಗಗಳಿಂದಲೂ ಚೆನ್ನಾಗಿ ಆಶ್ರಯಿಸಿದವರು. ತಾವು ಶ್ರೀ ಕೃಷ್ಣನಿಗೇ ಶೇಷಭೂತರಾಗಿ ಅಧೀನರು. ಆತನೇ ರಕ್ಷಿಸತಕ್ಕವನು. ಈ ಶರಣಾಗತಿಯೇ ತಮಗೆ ಸುಲಭ ಮಾರ್ಗವೆಂದು ಅದರಲ್ಲಿ ಮಹಾವಿಶ್ವಾಸವನ್ನೂ ನಿಷ್ಠೆಯನ್ನೂ ಇಟ್ಟು ಗುರುಮುಖೇನ ಅನುಷ್ಠಿಸಿದವರು. ಆದುದರಿಂದ ಅವರು, **ಅಪೇತಶೋಕೈಃ** – ಅವರು ಶೋಕವಿಲ್ಲದ ಕೃತಕೃತ್ಯರು, ನಿರ್ಭಯರು, ನಿರ್ಭರರು, ಹೃಷ್ಟಮನಸ್ಕರು, ಆದುದರಿಂದ **ಸಮಾಶ್ರಿತೈಃ** – ಹೇಗೆ ಅನುಷ್ಠಿಸತಕ್ಕದ್ದೋ ಹಾಗೆ ಅನುಷ್ಠಿಸಿದರು. ಇಂತಹ **ಆಚಾರ್ಯೈಃ** – ಆಚಾರ್ಯರುಗಳಿಂದ ಹಿಂದೆ ಹೇಗೆ ಶಿಷ್ಯರಿಗೆ ಪ್ರದರ್ಶಿಸಲ್ಪಟ್ಟಿತೋ ಹಾಗೆಯೇ ತಮಗೂ ಮಹನೀಯರುಗಳಾದ ತಮ್ಮ ಆಚಾರ್ಯರುಗಳಿಂದ ಉಪದೇಶಿಸಲ್ಪಟ್ಟಿತು. **ಪ್ರದರ್ಶಿತಃ** — ಪೂರ್ವಪಕ್ಷಗಳಿಗೆ ಅವಕಾಶವಿಲ್ಲದ ಹಾಗೆ ನಿಸ್ಸಂದೇಹವಾಗಿ ಉಪದೇಶಿಸಲ್ಪಟ್ಟಿತು. ಭ್ರಮಾದಿಗಳಿಗೆ ಯಾವುದಕ್ಕೂ ಅವಕಾಶವಿಲ್ಲದೆ ಸುಸ್ಪಷ್ಟವಾಗಿ ಉಪದೇಶಿಸಲ್ಪಟ್ಟಿತೆಂಬ ಭಾವವು. ಈ ಭರನ್ಯಾಸವು ಅಮೋಘವಾದ ಸುಲಭವಾದ ಸರ್ವರಿಗೂ ಅಧಿಕಾರವಿರುವ ಅಮೋಘೋಪಾಯವಾದುದರಿಂದ, **ಅಯಂಪನ್ಥಾಃ** ಎಂದು ಹೇಳಿರುತ್ತಾರೆ. ಇದೊಂದು ಸರ್ವಪ್ರದವಾದ ಸುಲಭೋಪಾಯವೆಬುಂದು ಹಿಂದೆ ತೋರಿಸಿರುವ ಹಾಗೆ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣ, ಸಂಹಿತೆ ಮೊದಲಾದವುಗಳಲ್ಲಿ ಚೆನ್ನಾಗಿ ಉಪಪಾದಿತವಾಗಿದ್ದರೂ ಅದು ಉಪಾಯವೇ ಅಲ್ಲ

**ಕುರಿ ಪ್ಪುಡನ್ ಮೇವನ್ತರುಮಞ್ಗಳಿನ್ರಿಯ ಕ್ಕೋವಲನಾರ್**
**ವೆರಿತ್ತುಳವಕ್ಕಳಲ' ಮೆಯ್ಯರಣೆನ್ರು ವಿರೈನ್ದಡೈನ್ದು**
**ಪಿರಿತ್ತವನ್ಪೈತ್ತಿರಳ' ಪಿನ್ರು ಡ ರಾಮಾನುಜ ಪೆರಿಯೋರ'**
**ಮರಿ ಪ್ಪುಡೈ ಮನ್ನಿರುಳ'ವಾಶಗತ್ತಾನ್ ಮರುಳತ್ತನಮೇ ||೨೬||**

---

ವೆಂಬುದು ಅನೇಕರ ಶಂಕಾನಿವಾರಣಾರ್ಥವಾಗಿ "**ಅಯಂ ಪಸ್ಥಾಃ**" ಎಂಬ ಪ್ರಯೋಗವು. ಮುಖ್ಯವಾಗಿ ಈ ಅಮೋಘಾರ್ಥಗಳೆಲ್ಲಾ ಆಚಾರ್ಯಶಿಷ್ಯ ಕ್ರಮದಲ್ಲಿ ಪರಂಪರಾ ಪ್ರಾಪ್ತವಾದುದರಿಂದ ಅತ್ಯಾದರದಿಂದ ಉಪಾದೇಯವು; ಸ್ವಕಪೋಲ ಕಲ್ಪಿತವಲ್ಲವೆಂದು ಹೇಳಿದರು.

**ಅವತಾರಿಕೆ**—ಮುಂದಿನ ಪಾಶುರದಿಂದ ಈ ಚರಮಶ್ಲೋಕದ ಆಚಾರ್ಯೋಪದೇಶದ ಅನುಸಂಧಾನದಿಂದ ತಮಗುಂಟಾಗಿರುವ ಸುಕೃತ ವಿಶೇಷವನ್ನು ಕೊಂಡಾಡುತ್ತಾರೆ. ಶ್ರೀ ಪರಾಶರಭಟ್ಟರವರು ಅಷ್ಟಶ್ಲೋಕಿಯ ಅಂತ್ಯದಲ್ಲಿ "**ಸರ್ವಾಪರಾಧಕ್ಷಯಮ್ ಕರ್ತಾಸೀತಿ ದೃಢೋಽಸ್ಮಿತೇತು ಚರಮಂ ವಾಕ್ಯಂ ಸ್ಮರನ್ ಸಾರಥೇಃ**" ಎಂಬಲ್ಲಿ ಹೇಳಿರುವ ಹಾಗೆ **ಮನ್ನರುಳ್ ವಾಶಕತ್ತಾಲ್ ಮರುಳತ್ತನಮೇ** ಎಂದು ತಮಗುಂಟಾದ ಭಾಗ್ಯೋದಯವನ್ನು ಕೊಂಡಾಡುತ್ತಾರೆ.

**ಅರ್ಥವು—ಕುರಿಪ್ಪುಡನ್**-ಅವಧಾನದಿಂದ ಕೂಡಿ, ಜಾಗರೂಕತೆಯಿಂದ ಕೂಡಿ, ಇದರಿಂದ ಉಪಾಸನಕ್ಕೆ ಅಂಗಗಳಾದ ಕರ್ಮ ಜ್ಞಾನಾಯೋಗಗಳ ಮತ್ತು ಭಕ್ತಿಯೋಗದ ದುಷ್ಕರತ್ವವು ಹೇಳಲ್ಪಟ್ಟಿತು, **ಮೇವುಂ**-ಅನುಷ್ಠಿಸುವ, **ತರುಮಞ್ಗಳಿನ್ರಿ**-ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳಿಗೆ ಸಂಬಂಧಿಸಿದ ಎಲ್ಲಾ ಧರ್ಮಗಳನ್ನೂ ತ್ಯಜಿಸಿ, **ಸರ್ವಧರ್ಮಾನ್ ಪರಿತ್ಯಜ್ಯ** ಎಂಬುದರ ಅರ್ಥವು; ಆದುದರಿಂದ ತಾವು ಅಕಿಂಚನರೆಂದು ಶ್ರೀಯಾಮುನ ಮುನಿಗಳು ಸ್ತೋತ್ರರತ್ನದಲ್ಲಿ **ನ ಧರ್ಮನಿಷ್ಠೋಽಸ್ಮಿ ನ ಚಾತ್ಮವೇದೀ, ನ ಭಕ್ತಿಮಾನ್ ತ್ವಚ್ಚರಣಾರವಿಂದೇ। ಅಕಿಂಚನೋಽನನ್ಯಗತಿಃ** ಎಂಬಲ್ಲಿ ಹೇಳಿರುವ ಹಾಗೆ ತಾವೂ ಹೇಳಿಕೊಂಡರು, **ತರುಮಞ್ಗಳಿನ್ರಿಯ** ಎಂಬುದು **ಅಪ್ಪೆರಿಯೋರ್** ಎಂಬುದಕ್ಕೆ ವಿಶೇಷಣವು, ಅವರು ಈ ಗುರೂಪಾಯ ತುಂಬಾ ಕಷ್ಟವೆಂಮ ತಿಳಿಸಿ ತಾವೂ ತ್ಯಜಿಸಿ, ಶರಣಾಗತಿಯು ಸುಲಭವಾದ ಮಹತ್ತಾದ ಉಪಾಯವೆಂದು ತಿಳಿದು, ಉಪದೇಶ ಮಾತ್ರವೇ ಅಲ್ಲದೆ ತಾವೂ ಅನುಷ್ಠಿಸಿದವರು ಎಂದು ಹೇಳಲ್ಪಟ್ಟಿತು. ಅದನ್ನೇ ಮುಂದೆ ತಿಳಿಸುತ್ತಾರೆ:

೨. **ಕೋವಲನ್ ರ್**—ಗೋಪಾಲರಾದ ಶ್ರೀ ಕೃಷ್ಣ ಭಗವಾನರ, ಶಿಷ್ಟ ಪರಿಪಾಲನ, ದುಷ್ಟನಿಗ್ರಹ, ಧರ್ಮ ಸಂಸ್ಥಾಪನೆಗಾಗಿ ಗೋಪಾಲರ ಕುಲದಲ್ಲಿ ಅವತರಿಸಿದ ಶ್ರೀಕೃಷ್ಣನ, **ಪೆರಿತ್ತುಳವಕ್ಕಳಲ್....ಪೆರಿಯೋರ್, ಪೆರಿ**-ಪರಿಮಳ

ವುಳ್ಳ, **ತುಳವಕ್ಕಳಲ್**-ತುಳಸಿಯ (ಮಾಲೆಯನ್ನು ಧರಿಸಿರುವ) ತಿರುವಡಿಗಳನ್ನು **ಮೆಯ್ಯಾರುಣೆನ್ರು**-ಯಥಾರ್ಥವಾದ ಉಪಾಯವೆಂದು ಅಥವಾ ಪ್ರಧಾನೋಪಾಯ ವೆಂದು, **ವಿಶ್ವೈನ್ದು**-ಮಹಾವಿಶ್ವಾಸದಿಂದ, **ಅಡ್ಡೈನ್ದು-ಶರಣಂವ್ರಜ**ವೆಂಬ ಲೀಲಾ ಸಾರಥಿಯ ವಾಕ್ಕಿನ ಮೂಲಕ ಉಪಾಯವಾಗಿ ಹೊಂದಿ, **ಪಿರಿತ್ತ—ಮೋಕ್ಷಯಿಷ್ಯಾಮಿ** ಎಂಬಲ್ಲಿ ಹೇಳಿರುವ ಹಾಗೆ ಬಿಡಿಸಲ್ಪಟ್ಟ, **ಪಿನ್ನೈತ್ತಿರಳ್**-ಸಮಸ್ತ ಪಾಪಗಳೂ (ಪುಣ್ಯಗಳೂ ಹೇಳಲ್ಪಟ್ಟವು), **ಪಿನ್ ತೊಡರಾವಗೈ**-ಪುನಃ ಹಿಂತಿರುಗಿಬಂದ ಬಂಧಕಗಳಾಗದ ಹಾಗೆ ಸವಾಸನೆಯಾಗಿ ಇಲ್ಲದ ಹಾಗೆ ಆಗುವ ಹಾಗೆ ಮಾಡಿ ಉಪಕರಿಸಿದ(ಇದು ಸರ್ವಪಾಪೇಭ್ಯೋ) ಎಂಬುದರ ಅರ್ಥವು. **ಅಪ್ಪೆರಿಯೋತ್**-ಅಂತಹ ಪ್ರಸಿದ್ಧರಾದ ನಮ್ಮ ಪರಮಾಚಾರ್ಯರುಗಳು, ಹೀಗೆ ನಮ್ಮ ಆಚಾರ್ಯರುಗಳು ಕೆಲವರು ಅಜ್ಞಾನದಿಂದ ಇದು ಉಪಾಯವೇ ಅಲ್ಲಾ ಎಂಬ ಸಂದೇಹವನ್ನು ತೊರೆದು ತಾವೂ ಅನುಷ್ಠಿಸಿ, ನಮಗೂ ಉಪದೇಶಿಸಿ ಎಂಬ ಭಾವವು ; **ಮರಿಪ್ಪುಡೈ**-ಸರ್ವರನ್ನೂ ವಶೀಕರಿಸುವ, **ಮನ್ನರುಳ್ ವಾಶಕತ್ತಾಲ್-ದೇಶಿಕೋಮೇದಯಾಳುಃ** ಎಂಬಲ್ಲಿ ಹೇಳಿರುವ ಹಾಗೆ ಸಹಜ ಕಾರುಣ್ಯಯುಕ್ತವಾದ ಸದುಪದೇಶರೂಪ ದಿವ್ಯ ಸೂಕ್ತಿಯ ಮೂಲಕ, **ಮರುಳತ್ತನವೇ**-ಅಜ್ಞಾನಾನ್ಯಥಾ ಜ್ಞಾನ ವಿಪರೀತ ಜ್ಞಾನಗಳನ್ನು ನೀಗಿಕೊಂಡು ಸುಜ್ಞಾನವನ್ನು ಹೊಂದಿದೆವಲ್ಲವೇ ? ನಮ್ಮ ಸುಕೃತವು ಎಷ್ಟು ಮಹತ್ತಾದುದು. ಇಲ್ಲಿ "**ಯಥಾದೇವೇ ತಥಾಗುರೌ**" ಎಂಬಲ್ಲಿ ಹೇಳಿರುವ ಹಾಗೆ ಮಹತ್ತಾದ ಉಪಕಾರಸ್ಮೃತಿಯನ್ನು ತಮ್ಮ ಆಚಾರ್ಯರಲ್ಲಿ ತೋರಿಸಿರುತ್ತಾರೆ.

ಶ್ರೀ ನಿಗಮಾನ್ತದೇಶಿಕರವರು ಮಹಾಕವಿಗಳಾದುದರಿಂದ, **ಪೆರಿಯೋರ್**-ಎಂಬ ಪ್ರಯೋಗದಿಂದ ಸರ್ವರಿಗೂ ಶ್ರೇಷ್ಠನಾಗಿ ಲೋಕಗುರುವಾಗಿ ಉಪದೇಶಿಸಿದ ಲೀಲಾಸಾರಥಿಗೂ ಅನ್ವಯಿಸುವ ಧ್ವನ್ಯರ್ಥವು ಇಲ್ಲಿ ತೋರಿಬರುತ್ತದೆ. ಹೇಗೆಂದರೆ **ಅಪ್ಪೆರಿಯೋರ್**-ಆ ಪ್ರಸಿದ್ಧರಾದ ಲೋಕಗುರುವಾದ ಶ್ರೀಕೃಷ್ಣಭಗವಾನರವರು, **ಮರಿಪ್ಪುಡೈ**-ಸರ್ವರನ್ನೂ ವಶೀಕರಿಸುವ, **ಮನ್ನರುಳ್ ವಾಶಕತ್ತಾಲ್**-ಕೃಪಾಜಲನಿಧಿಯ ದಿವ್ಯಸೂಕ್ತಿಯಾದ 'ಗೀತೋಪದೇಶದಿಂದ, **ಮರುಳತ್ತನವೇ**-ಸರ್ವವಿಧ ಅಜ್ಞಾನಗಳನ್ನು ಹೋಗಲಾಡಿಸಿಕೊಂಡೆವಲ್ಲವೇ ಎಂಬರ್ಥವು. ಆದುದರಿಂದ ನಾವು ನಿಸ್ಸಂಶಯವಾಗಿ, ಶೋಕ ಭೀತಿಗಳಿಲ್ಲದವರಾಗಿ, ನಿರ್ಭರರಾಗಿ, ಸಂತುಷ್ಟರಾದೆವು ಎಂಬ ಭಾವವು.

**ಅವತಾರಿಕೆ**-ಹಿಂದೆಯೇ ಗುರುಪರಂಪರಾಸಾರದಲ್ಲಿ ಶ್ರೀಪರಾಶರರೇ ತಮ್ಮ ಶಿಷ್ಯರಾದ ಮೈತ್ರೇಯರನ್ನು ಕುರಿತು, **ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ । ಕೋಹ್ಯನ್ಯೋಭುವಿ ಮೈತ್ರೇಯ ಮಹಾಭಾರತ**

**ವ್ಯಾಸಾಮ್ನಾಯ ಪಯೋಧಿ ಕೌಸ್ತುಭನಾಭಂ ಹೃದ್ಯಂ ಹರೇ ರುತ್ತಮಂ |**

---

**ಕೃದ್ಭವೇತ್ ||** ವ್ಯಾಸರು ಸಾಕ್ಷಾತ್ ಶ್ರೀಮನ್ನಾರಾಯಣನ ಅನುಪ್ರವೇಶಾವತಾರವೆಂದು ಹೇಳಿರುತ್ತಾರೆ. "**ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ**" ಎಂದೂ ಪ್ರಯೋಗವಿರುತ್ತದೆ. ಅವರು ಬರೆದಿರುವ ಭಾರತವು ಬಹು ವಿಪುಳವಾಗಿ ಪಂಚಮ ವೇದವೆನಿಸಿರುತ್ತದೆ. ಆದುದರಿಂದ ಶ್ರೀ ದೇಶಿಕರವರು "**ವ್ಯಾಸಾಮ್ನಾಯ**"ವೆಂದು ಪ್ರಯೋಗಿಸಿರುತ್ತಾರೆ. ಆ ಪಂಚಮ ವೇದದಲ್ಲಿ ಸಾರಭೂತಭಾಗಗಳಲ್ಲಿ ಭಗವದ್ಗೀತೆಯು "**ವೇದೇಷು ಪೌರುಷಂಸೂಕ್ತಂ ಪುರಾಣೇಷುಚ ವೈಷ್ಣವಮ್ | ಭಾರತೇ ಭಗವದ್ಗೀತಾ ಧರ್ಮಶಾಸ್ತ್ರೇಷು ಮಾನವಮ್||**" ಎಂಬಲ್ಲಿ ಹೇಳಿರುವ ಹಾಗೆ ಸಾರತರವಾದ ಭಾಗವು. ಅದರಲ್ಲೂ ಸಾರತಮ ಭಾಗವು ಈ ಚರಮಶ್ಲೋಕವು. ಇದು ಅತ್ಯಂತಾಮೋಘವಾದ ಸಾರತಮಗಳಾದ ಅರ್ಥಗಳನ್ನು ಒಳಗೊಂಡಿವೆ ಎಂದು ಬಹುವಿಶದವಾಗಿ ತಮ್ಮ ಆಚಾರ್ಯರುಗಳಿಂದ ತಮಗೆ ಸಾಂಪ್ರದಾಯಕವಾಗಿ ಲಭಿಸಿತು ಎಂದು ಹೇಳಿ, ಆ ಲೀಲಾಸಾರಥಿಯ ಚರಮಶ್ಲೋಕಗಳನ್ನು ಪುನಃಪುನಃ ವಿಚಾರಮಾಡ ವೈಶಂಪಾಯನ ಶೌನಕಾದಿ ಇತರ ಜ್ಞಾನಾಗ್ರೇಸರುಗಳು ಶ್ರೇಷ್ಠರೆನಿಸಿದವರು ಶಿರಃಕಂಪನ ಮಾಡಿರುತ್ತಾರೆಂದು ಹೇಳಿ ಈ ಮೂರನೆಯ ರಹಸ್ಯಾಧಿಕಾರವನ್ನು ನಿಗಮನ ಮಾಡುತ್ತಾರೆ.

**ಅರ್ಥವು**—ಈ ಚರಮ ಶ್ಲೋಕವು ಎಂತಾದ್ದೆಂದರೆ? **ವ್ಯಾಸಾಮ್ನಾಯ ಪಯೋಧಿ ಕೌಸ್ತುಭನಿಭಮ್**-ವ್ಯಾಸರಿಂದ ಹೇಳಲ್ಪಟ್ಟ ವೇದ, ಪಂಚಮ ವೇದವಾದ ಶ್ರೀಮನ್ಮಹಾಭಾರತ, ಇದೇ ಒಂದು **ಪಯೋಧಿ**-ಸಮುದ್ರ ಏಕೆಂದರೆ ಅದು ಒಟ್ಟು ಒಂದು ಲಕ್ಷ ಗ್ರಂಥವು, ಆದುದರಿಂದ ದೊಡ್ಡ ಸಮುದ್ರದಲ್ಲಿ **ರತ್ನಾಕರದಲ್ಲಿ**-ಅನೇಕ ರತ್ನಗಳುಂಟು, ಧರ್ಮಗಳನ್ನು ಬೋಧಿಸುವ ಸಹಸ್ರಾರು ಇತಿಹಾಸಗಳೂ ನೀತಿಗಳೂ ಸ್ತೋತ್ರಗಳೂ, ವಿದುರ ನೀತಿ, ಶಾನ್ತಿಪರ್ವ ಮೋಕ್ಷಧರ್ಮ ಇತ್ಯಾದಿಗಳೆಲ್ಲಾ ರತ್ನಗಳು. ಅಂತಹ ರತ್ನಗಳೆಲ್ಲಾ ಶ್ರೀಮದ್ಭಗವದ್ಗೀತೆಯಲ್ಲಿ ತುಂಬಿವೆ. ಆ ರತ್ನಗಳಲ್ಲಿ ಅತ್ಯಂತ ಶ್ರೇಷ್ಠ ರತ್ನವಾದ ಕೌಸ್ತುಭಮಣಿಗೆ ಸಮಾನವಾದುದು ಈ ಚರಮ ಶ್ಲೋಕವೆನ್ನುತ್ತಾರ. ಇನ್ನೂ ಎಂತಾದ್ದು ಈ ಚರಮ ಶ್ಲೋಕವೆಂದರೆ? **ಹೃದ್ಯಂ**-ಶ್ರೀಕೃಷ್ಣನಿಗೆ ಕೌಸ್ತುಭಮಣಿಯು ಹೇಗೆ ಹೃದಯಂಗಮವಾಗಿ ತುಂಬಾ ಪ್ರೀತಿಯುಕ್ತವಾದುದೋ, ಹಾಗೆಯೇ ಲೀಲಾಸಾರಥಿಯ ಶ್ಲೋಕವೂ ತುಂಬಾ ಹೃದಯಂಗಮವಾದುದು; ಕೌಸ್ತುಭಸ್ಥಾನೀಯನಾದ ಈ ಜೀವಾತ್ಮನಿಗೆ ತುಂಬಾ ಹೃದಯಂಗಮವಾದುದು ಎಂಬ ತಾತ್ಪರ್ಯವು; ಏಕೆಂದರೆ ತನಗೆ ಅತ್ಯಂತ ಪ್ರಿಯನಾದ ಜೀವಾತ್ಮನಿಗೆ ಚತುರ್ವಿಧ ಶ್ರೇಯಸ್ಸಿಗೂ ಪರಮ ಹೇತುಭೂತವಾದ

**ಶ್ಲೋಕಂ ಕ್ಷೇಚನ ಲೋಕವೇದ ಪದವೀ ವಿಶ್ವಾಸಿತಾರ್ಥಂ ವಿದುಃ ||**
**ಯೇಷಾ ಮುಕ್ತಿಷು ಮುಕ್ತಿ ಸೌಧ ವಿಶಿಖಾ ಸೋಪಾನ ಪಙ್ತ್ಯಷ್ವಮಿ|**
**ವೈಶಂಪಾಯನ ಶೌನಕ ಪ್ರಭೃತಯಶ್ಶ್ರೇಷ್ಠಾಶ್ಶಿರಃ ಕಂಪಿನಃ ||೬೯||**

---

ಉಪಾಯವನ್ನು ತಿಳಿಸುವ ಶ್ಲೋಕವು. **ಹರೇಃ**-ಶ್ರೀಕೃಷ್ಣನ ದಿವ್ಯಸೂಕ್ತಿಗಳಲ್ಲಿ **ಉತ್ತಮಂ ಶ್ಲೋಕಂ**-ಎಲ್ಲರಿಗೂ ಸಾಧ್ಯವಾದ ಲಘೂಪಾಯವನ್ನು ವಿಧಿಸುವ ಈ ಸರ್ವಶ್ರೇಷ್ಠ ಶ್ಲೋಕವನ್ನು, **ಕೇಚನ**-ಎಲ್ಲೋ ಕೆಲವು ಭಾಗವತೋತ್ತಮರಾದ ಪ್ರಾಜ್ಞರಾದ ಪಂಡಿತರು, **ಲೋಕವೇದ ಪದವೀ ವಿಶ್ವಾಸಿತಾರ್ಥಂ**-ಇಹ ಲೋಕ ಮತ್ತು ವೇದಗಳಲ್ಲಿ ಹೇಳುವ ಆಮುಷ್ಮಿಕ ಶ್ರೇಯಸ್ಸು ಇವುಗಳಲ್ಲಿ ವಿಶ್ವಾಸ ವುಳ್ಳ ಅರ್ಥಹೊಂದಿದ್ದೆಂದು, **ವಿದುಃ**-ತಿಳಿದರು.

**ಯೇಷಾಂ**-ಯಾವ ಪ್ರಸಿದ್ಧರಾಗಿ ಪ್ರಾಜ್ಞರಾದವರ, **ಉಕ್ತಿಷು**-ದಿವ್ಯ ಸೂಕ್ತಿಗಳಲ್ಲಿ, ಆ ದಿವ್ಯಸೂಕ್ತಿಗಳೆಂತವು ಎಂದರೆ, **ಮುಕ್ತಿ ಸೌಧ ವಿಶಿಖಾ ಸೋಪಾನ ಪಙ್ತ್ಯಷು**-ಮುಕ್ತಿ ಎಂಬುದೇ ಒಂದು ಉಪ್ಪರಿಗೇ ಮನೆ, ತುಂಬಾ ಎತ್ತರದಲ್ಲಿರುವುದು, ಎಲ್ಲರಿಂದಲೂ ಹತ್ತಲು ಸಾಧ್ಯವಿಲ್ಲವು, ಅಂತಹ ಉಪ್ಪರಿಗೆಗೆ, **ವಿಶಿಖಾ**-ರಾಜಮಾರ್ಗವಾದ, **ಸೋಪಾನ ಪಂಙ್ತಿಷು**-ಸುಲಭ ಹತ್ತಿಹೋಗಲು ಉಪಯುಕ್ತವಾದ, **ಸೋಪಾನ ಪಂಙ್ತಿಷು**-ಮೆಟ್ಟಲು ಪಂಙ್ತಿಗಳುಳ್ಳ ದಿವ್ಯ ಸೂಕ್ತಿಗಳಲ್ಲಿ ಎಂದರೆ ದಿವ್ಯಸೂಕ್ತಿಗಳ ಪರಾಮರ್ಶೆಯಲ್ಲಿ, **ವೈಶಂಪಾಯನ**-ವ್ಯಾಸ ಶಿಷ್ಯರಾದ ಪ್ರಾಜ್ಞರಾದ ವೈಶಂಪಾಯನರು ಇವರು ಜನಮೇಜಯರಾಯನಿಗೆ ನಿಶ್ಶೇಷ ಪುರಾಣೇತಿಹಾಸಗಳ ಉಪದೇಶವನ್ನೆಲ್ಲಾ ಹೇಳಿದವರು, **ಶೌನಕ** - ಶೌನಕ ಮಹರ್ಷಿಯು, ಇವರು ಅಶ್ವಲಾಯನರವರ ಆಚಾರ್ಯರು, ಇಂತಹ ಶ್ರೇಷ್ಠ ರಾದ ಪ್ರಾಜ್ಞರೆಲ್ಲರೂ, **ಶಿರಃಕಂಪಿನಃ**-ವಿಚಾರವನ್ನು ಪುನಃ ಪುನಃ ಮಾಡಿ ಅದರ ಮಹಾತ್ಮ್ಯೆಗೆ ಬೆರಗಾಗಿ ತಲೆಯನ್ನು ತೂಗುವರಾಗಿರುತ್ತಾರೆ.

**ಉಪಪಾದನೆಯು**—ವ್ಯಾಸಮಹರ್ಷಿಗೆ, ವೇದಗಳನ್ನು ಕ್ರಮಪಡಿಸಿ ವಿಭಾಗಿಸಿ ಪರಿಷ್ಕಾರ ಮಾಡಿದುದರಿಂದ ಅವರಿಗೆ ವೇದವ್ಯಾಸರೆಂಬ ಹೆಸರು; ಉಪ ನಿಷತ್ತುಗಳಿಗೆ ಅಪಾರ್ಥಗಳನ್ನು ಎಲ್ಲಿ ಹೇಳುತ್ತಾರೋ ಎಂಬ ಭೀತಿಯಿಂದ ವ್ಯಾಸ ಸೂತ್ರಗಳ ಮೂಲಕ ಸರಿಯಾದ ಅರ್ಥಗಳನ್ನು ನಿರ್ಧರಿಸಿದರು. (ಆದರೂ ಮೂರು ಮತೋದ್ಧಾರಕರೂ ಭಿನ್ನಭಿನ್ನವಾಗಿ ಅರ್ಥ ಮಾಡಿರುತ್ತಾರೆ.) ಆ ಅರ್ಥಗಳನ್ನೇ ಪುರಾಣೇತಿಹಾಸಗಳ ಮೂಲಕ ಉಪಪಾದಿಸಿರುತ್ತಾರೆ. ಹೀಗೆ

**ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ ಶ್ರೀಮದ್ವೇಙ್ಕಟನಾಥಸ್ಯ ವೇದಾಂತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಚರಮ ಶ್ಲೋಕಾಧಿಕಾರ ಏಕೋನತ್ರಿಂಶಃ**

**ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ**

---

ಅವರು ಮಾಡಿರುವ ಉಪಕಾರವು ಇಷ್ಟೆಂದು ಹೇಳಲು ಸಾಧ್ಯವಿಲ್ಲವು. ಆದುದರಿಂದ ಪ್ರತಿದಿನವೂ ನಾವು ಮಾಡುವ ದೇವರ್ಷಿ ಪಿತೃತರ್ಪಣದಲ್ಲಿ ಕೃಷ್ಣದ್ವೈಪಾಯನರಿಗೆ ತರ್ಪಣವನ್ನು ಕೊಡುತ್ತೇವೆ. ಅವರು ಬರೆದಿರುವ ಭಾರತವು "**ಇದಂ ಶತಸಹಸ್ರಂತು ಶ್ಲೋಕಾನಾಂ ಪುಣ್ಯಕರ್ಮಣಾಂ। ಉಪಾಖ್ಯಾನೈಃ ಸಹ ಜ್ಞೇಯಂ ಶ್ರಾವ್ಯಂ ಭಾರತಮುತ್ತಮಮ್**" (ಭಾರ. ಆದಿ. ಪ. ೭೭) ಎಂಬಲ್ಲಿ ಹೇಳಿರುವ ಹಾಗೆ, **ವ್ಯಾಸಾಮ್ನಾಯ ಪಯೋಧಿಃ** ಎಂಬ ಪ್ರಯೋಗದಿಂದ ಅಗಾಧ ಗ್ರಂಥವೆಂದು ಹೇಳಿದರು. ಅದರಲ್ಲಿ ಅನೇಕ ರತ್ನಗಳು ತುಂಬಿ ಒಂದು ದೊಡ್ಡ ರತ್ನಾಕರವೆನಿಸಿರುತ್ತದೆ. ಹಾಗೆಯೇ ಗೀತೆಯೂ ಕೂಡ ಅನೇಕ ರತ್ನಗಳಿಂದ ಕೂಡಿ ಅಮೋಘವಾದುದು. ರತ್ನಗಳಲ್ಲಿ ಶ್ರೀಮನ್ನಾರಾಯಣನಿಗೆ ತುಂಬಾ ಪ್ರಿಯವಾದುದು ಕೌಸ್ತುಭ ರತ್ನವು. ಇದನ್ನು ಈ ಗ್ರಂಥಾದಿಯಲ್ಲಿ "**ಮಣಿವರ ಇವ ಶೌರೇರ್ನಿತ್ಯಹೃದ್ಯೋಪಿ ಜೀವಃ**" ಎಂಬಲ್ಲಿ ಕೌಸ್ತುಭರತ್ನವೂ ಕೌಸ್ತುಭಸ್ಥಾನೀಯನಾದ ಜೀವನೂ ಸಹ ಆತನಿಗೆ ಹೃದ್ಯವು. ಇಲ್ಲಿ ಗೀತೆಯ ಉತ್ತಮ ಶ್ಲೋಕವಾದ ಈ ಚರಮ ಶ್ಲೋಕವು ಹೃದ್ಯವು. ಆ ಭಾರತದಲ್ಲೆಲ್ಲಾ ಅತ್ಯುತ್ತಮವಾಗಿ ಗುಹ್ಯತಮವಾದ ಶ್ರೀಹರಿಯ ದಿವ್ಯಸೂಕ್ತಿಯಾಗಿರುವ ಚರಮಶ್ಲೋಕವು ಪ್ರಾಜ್ಞರಿಗೆಲ್ಲಾ ಹೃದಯಂಗಮವಾದುದು. ಏಕೆಂದರೆ ಅತಿ ಸುಲಭೋಪಾಯವಾಗಿ ಚತುರ್ವಿಧ ಪುರುಷಾರ್ಥದಾಯಿಕವಾದುದಾದುದರಿಂದ, ಇದನ್ನು ಅರ್ಜುನನೇ ಒಪ್ಪಿರುತ್ತಾನೆ. "**ನಷ್ಟೋಮೋಹಃ ಸ್ಮೃತಿರ್ಲಬ್ಧಾ**" ಎಂದು ಈ ಶ್ಲೋಕವನ್ನು ಕೇಳಿದನಂತರ ಶ್ರೀಕೃಷ್ಣನಲ್ಲಿ ಹೇಳಿಕೊಂಡಿರುತ್ತಾನೆ. ಸಮುದ್ರ ಮಥನ ಕಾಲದಲ್ಲಿ ಸಮುದ್ರದಲ್ಲಿ ಐರಾವತ, ಕಲ್ಪವೃಕ್ಷ, ಅಮೃತ ಮೊದಲಾದವುಗಳೆಲ್ಲಾ ಹುಟ್ಟಿದವು. ಅವುಗಳನ್ನೆಲ್ಲಾ ತ್ಯಜಿಸಿ ಲಕ್ಷ್ಮೀ ಮತ್ತು ಕೌಸ್ತುಭರತ್ನಗಳನ್ನು ಸ್ವಾಮಿ ಅಂಗೀಕರಿಸಿದರು. ಆದುದರಿಂದ ಕೌಸ್ತುಭನಿಭಂ ಎಂಬೂ ಹೃದ್ಯಂ ಎಂಬ ಪ್ರಯೋಗಗಳು. ಈ ಚರಮ ಶ್ಲೋಕವು ಹೇಗೆ ಶ್ರೀಹರಿಯ ಉಕ್ತಿಗಳಲ್ಲಿ ಉತ್ತಮವು ಎಂದರೆ ಶ್ರೀಹರಿಯ ದಿವ್ಯ ಸೂಕ್ತಿಗಳಲ್ಲಿ ಮೋಕ್ಷವನ್ನೂ ಕೂಡ ನಿಸ್ಸಂಶಯವಾಗಿ ಸಾಧಿಸಿಕೊಡುವ ಸುಲಭವಾದ ಹಿತತಮವಾದ ಉಪಾಯವನ್ನು ಅದು ಬೋಧಿಸುವುದರಿಂದ. ಇಂತಹ ಮಹಿಮೆಯುಳ್ಳ ಶ್ಲೋಕವೆಂದು ತಿಳಿದವರು ಯಾರು? ಎಂದರೆ **ಕೇಚನ-ಎಲ್ಲೋ** ಕೆಲವರು, ಸ್ವಾಮಿ ಕೃಪೆಯಿಂದ ಅದರ ಮಹಾತ್ಮ್ಯೆಯನ್ನು ತಿಳಿಯುವ ಬುದ್ಧಿ

ಯೋಗವನ್ನೂ ಶ್ರೀಹರಿ ಕೃಪೆಯನ್ನೂ ಹೊಂದಿದವರು. ಅವರು ಯಾರೆಂದರೆ, ಶ್ರೀನಮ್ಮಾಳ್ವಾರ್ ಪ್ರಭೃತಿಗಳು, ಮುನಿತ್ರಯರಾದ ನಾಥಮುನಿ, ಯಾಮುನ ಮುನಿ, ಶ್ರೀರಾಮಾನುಜಮುನಿ, ಋಷಿಗಳಲ್ಲಿ ಶ್ರೀಪರಾಶರ, ಶ್ರೀಶುಕ ವಾಲ್ಮೀಕಿ ಯರು, ಸ್ಮೃತಿಕರ್ತೃರುಗಳು ಮನು ಮೊದಲಾದವರು. **ಆರೆನಕ್ಕು ನಪಾದಮೇ ಶರಣಾಗ ತಂದೊಳಿಂದಾಯ್** ಎಂಬುದು ಶ್ರೀನಮ್ಮಾಳ್ವಾರವರ ಪಾಶುರವು. "**ಅಂಕಿಚನೋಽನನ್ಯಗತಿಶ್ಶರಣ್ಯಾಂ ತತ್ಪಾದಮೂಲಂ ಶರಣಂಪ್ರಪದ್ಯೇ**" ಎಂಬುದು ಶ್ರೀ ಯಾಮುನ ಮುನಿಯ ದಿವ್ಯಸೂಕ್ತಿಯು. ಶ್ರೀ ಭಾಷ್ಯಕಾರರು ಶರಣಾಗತಿ ಮಾಹಾತ್ಮ್ಯೆಯ ವಿಷಯದಲ್ಲಿ ಒಂದು ಗದ್ಯವನ್ನೇ ರಚಿಸಿರುತ್ತಾರೆ. ಹೀಗೆ ಬುದ್ಧಿಯೋಗವುಳ್ಳ ಮಹಾಪ್ರಾಜ್ಞರು ವಿದುಃ-ತಿಳಿಯುತ್ತಾರೆ. ಆದರೆ, ಆಸುರ ಪ್ರಕೃತಿಗಳಾದರೋ "**ಆಸುರ ಪ್ರಕೃತಯಃ ನ ಭವನ್ತಿಬೋದ್ಧುಮ್**" ಎಂಬಲ್ಲಿ ಹೇಳಿರುವ ಹಾಗೆ ತಿಳಿಯಲಾರರು. ಅಂತಹ ಪುಣ್ಯವಿಲ್ಲದ ನಿರ್ಭಾಗ್ಯರು ಈ ಶ್ಲೋಕದ ಮಹಿಮೆಯನ್ನು ತಿಳಿಯಲಾರರೆಂಬ ಭಾವವು. ಅವರುಗಳು ಈ ಶ್ಲೋಕಕ್ಕೂ ಗೀತೆಯಲ್ಲಿ ಅದರ ಹಿಂದಿನ ಶ್ಲೋಕಕ್ಕೂ ಇರುವ ಸಙ್ಗತಿ ಏನೆಂದು ಕೂಡ ಹೇಳಲಾರರೆಂಬ ಭಾವವು. "**ತಮೇವ ಶರಣಂ ಗಚ್ಛ ಸರ್ವ ಭಾವೇನ ಭಾರತ**" ಎಂದು ಹೇಳಿ, ಅನಂತರ ಮಧ್ಯೆ ಮೂರು ಶ್ಲೋಕಗಳನ್ನು ಹೇಳಿ ಪುನಃ ಈ ಶ್ಲೋಕದಲ್ಲಿ "**ಮಾಮೇಕಂ ಶರಣಂವ್ರಜ**" ಎಂದು ಏಕೆ ಶ್ರೀಕೃಷ್ಣನು ಹೇಳಿದ ನೆಂದು ತಿಳಿಯಲಾರರು. ಆದುದರಿಂದ ಸರಿಯಾದ ಯಥಾರ್ಥವಾದ, ಸಙ್ಗತಿಗೆ ಅನುಗುಣವಾದ ಅರ್ಥವನ್ನು ಅವರು ಬೋಧಿಸಲಾರರು. ಸರಿಯಾದ ಅರ್ಥವನ್ನು ತಾವೂ ಗ್ರಹಿಸಿ ಇತರರಿಗೂ ಅದರಲ್ಲಿ ಅಡಗಿರುವ ರಹಸ್ಯಾರ್ಥಗಳನ್ನು ಉಪದೇಶಿಸಿ ದವರು ಎಲ್ಲೋ ಕೆಲವರು ಎಂದು **ಕೇಚನ** ಪ್ರಯೋಗವು. ಆತನನ್ನೇ ಯಥಾರ್ಥ ವಾಗಿ ತಿಳಿಯುವವರು ಎಲ್ಲೋ ಕೆಲವರು ಎಂದು "**ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯ ತತಿಸಿದ್ಧಯೇ। ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂವೇತ್ತಿ ತತ್ತ್ವತಃ**" ಎಂಬಲ್ಲಿ ಹೇಳಿರುತ್ತಾರೆ. ಹಾಗೆಯೆ ಅವರ ದಿವ್ಯಸೂಕ್ತಿಯ ಮಹಿಮೆ ಯನ್ನು ತಿಳಿಯುವವರು **ಕೇಚನ** ಎಂಬುದು ಸಿದ್ಧವು.

ಆ ಶ್ಲೋಕದಲ್ಲಿ ಮುಖ್ಯವಾಗಿ ತಿಳಿಯತಕ್ಕ ಅಂಶವು ಯಾವುದೆಂದರೆ ಹೇಳು ತ್ತಾರೆ, **ಲೋಕಪದವೀ ವೇದಪದವೀ ವಿಶ್ವಾಸಿತಾರ್ಥಂ**-ಲೋಕಸ್ಥಿತಿಯಲ್ಲೂ ವೇದೋಕ್ತಸ್ಥಿತಿಯಲ್ಲೂ ವಿಶ್ವಾಸವನ್ನುಂಟುಮಾಡುವ ಅರ್ಥವುಳ್ಳದ್ದು. ಲೋಕ ದಲ್ಲೂ ಎಷ್ಟೇ ದ್ವೇಷಿಯಾಗಿದ್ದರೂ ಶರಣಾಗತನಾದರೆ ಆತನ ಹಿಂದಿನ ಅಕೃತ್ಯ ಗಳನ್ನು ಪರಿಗಣಿಸದೆ ಆತನಲ್ಲಿ ವಾತ್ಸಲ್ಯವು ಉಂಟಾಗಿ ರಕ್ಷಿಸಲ್ಪಡುವನು, ಸಾಗರನು ತನ್ನ ಉದಾಸೀನ ಮತ್ತೂ ಅಹಂಕಾರ ಭಾವಗಳನ್ನು ತ್ಯಜಿಸಿ ಶ್ರೀರಾಮನಿಗೆ

ಶರಣಾಗತನಾಗಲು ರಕ್ಷಿಸಲ್ಪಟ್ಟನು. ಹಾಗೆಯೇ ಕಾಳೀಯ ಸರ್ಪನ ಹೆಂಡತಿಯು ಶ್ರೀಕೃಷ್ಣನಿಗೆ ಶರಣಾಗತನಾಗಲು ರಕ್ಷಿಸಲ್ಪಟ್ಟನು. ವೇದದಲ್ಲೂ ಶರಣಾಗತಿಯು ಪ್ರಬಲೋಪಾಯವಾಗಿ ಪ್ರೋಕ್ತವು. **ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ** ಎಂದು ಹೇಳಿ ಶರಣಾಗತಿಯನ್ನನುಷ್ಠಿಸಿ ಚತುರ್ಮುಖನು ಸರ್ವಶ್ರೇಯಸ್ಸನ್ನೂ ಹೊಂದಿದನು. "**ವಿದಿತಸ್ಸಹಿ ಧರ್ಮಜ್ಞಃ ಶರಣಾಗತವತ್ಸಲಃ । ತೇನ ಮೈತ್ರೀ ಭವತು ತೇ ಯದಿ ಜೀವಿತು ಮಿಚ್ಛಸಿ**" ಎಂಬುದು ಮಹಾಪರಾಧಿ ರಾವಣನಿಗೆ ಲೋಕಮಾತೆಯ ಪರಮ ಹಿತೋಪದೇಶವು. ದಂಡಕಾರಣ್ಯ ವಾಸಿಗಳು, ವಾಯಸ, ವಿಭೀಷಣ, ಭರತ, ಲಕ್ಷ್ಮಣ, ಗುಹಾದಿಗಳು ಶ್ರೀರಾಮಚಂದ್ರ ಪ್ರಭುವಿನಲ್ಲಿ ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ. ಉದ್ಧವ, ಅಕ್ರೂರ, ಗೋಪಿಕಾಸ್ತ್ರೀಯರು, ವಿದುರರೂ ಮೊದಲಾದವರೆಲ್ಲಾ ಶ್ರೀಕೃಷ್ಣನಲ್ಲಿ ಶರಣಾಗತಿಯನ್ನು ಅನುಷ್ಠಿಸಿರುತ್ತಾರೆ.

**ಲೋಕಪದವೀ ವಿಶ್ವಾಸಿತಾರ್ಥಂ** ಎಂಬಲ್ಲಿ ಲೋಕ ಶಬ್ದಕ್ಕೆ ಸ್ಮೃತಿ ಎಂಬರ್ಥವೂ ಆಗುತ್ತದೆ. ಅನೇಕ ಸ್ಮೃತಿಗಳೂ ಕೂಡ, ಇದು ಮಹತ್ತಾದ ಸುಲಭೋಪಾಯವೆಂದು ಅವುಗಳ ವಿಶ್ವಾಸಯುಕ್ತಿಯುಳ್ಳದ್ದೂ ಈ ಚರಮ ಶ್ಲೋಕವು. ಶ್ರೀಮದ್ಭಗವದ್ಗೀತೆಗೆ "ಗೀತಾಸೂಪನಿಷತ್ಸು" ಎಂಬ ಪ್ರಯೋಗವನ್ನು ಕೊಟ್ಟಿರುತ್ತಾರೆ. ಇನ್ನು ಪ್ರಶ್ನ ಸಂಹಿತೆ, ವಿಷ್ವಕ್ಸೇನ ಸಂಹಿತೆ, ಅಹಿರ್ಬುಧ್ನ್ಯ ಸಂಹಿತೆ, ವ್ಯಾಸಸ್ಮೃತಿ, ಶೌನಕ ಸಂಹಿತೆ, ನಾರದೀಯ ಮೊದಲಾದವುಗಳಲ್ಲಿ ಇದರ ಮಹಾತ್ಮ್ಯೆಯ ಉಪಬ್ರಹ್ಮಣವನ್ನು ಕಾಣಬಹುದು. ವೇದೋಪಬ್ರಹ್ಮಣಗಳಾದ ಅನೇಕ ಪುರಾಣಗಳಲ್ಲೂ ಇದು ಮಹತ್ತಾದ ಉಪಾಯವೆಂಬ ವಿಶ್ವಾಸಿತಾರ್ಥವನ್ನು ಕಾಣಬಹುದು.

ವೇದವು ಸಾಕ್ಷಾತ್ತಾಗಿ ಇದರ ಮಹಾತ್ಮ್ಯವನ್ನು ಹೊಗಳಿರುತ್ತದೆಯೇ ? ಎಂದರೆ ತೈತ್ತರೀಯದಲ್ಲಿ **ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ,** ಅನ್ಯಾಸವು ಯಾವುದು ಎಂದರೆ ಮುಂದಿನ ವಾಕ್ಯದಲ್ಲಿ "**ಓ ಮಿತ್ಯಾತ್ಮಾನಂಯುಂಜೀತ**" ಎಂದು ಹೇಳಿತು.

**ಮುಂಡಕದಲ್ಲಿ — " ಪ್ರಣವೋಧನುಶ್ಶರೋಹ್ಯಾತ್ಮಾ ಬಹ್ಮತಲ್ಲಕ್ಷ್ಯಮುಚ್ಯತೆ । ಅಪ್ರಮತ್ತೇನವೇದ್ಧವ್ಯಂ ಶರವತ್ತನ್ಮಯೋ ಭವೇತ್ "**

ಇವರುಗಳ ದಿವ್ಯಸೂಕ್ತಿಗಳಲ್ಲಿ ನಾವು ಗ್ರಹಿಸುತಕ್ಕದ್ದೇನೆಂದರೆ ? ಈ ಚರಮ ಶ್ಲೋಕದ ರಹಸ್ಯಾರ್ಥಗಳೇ ಅಲ್ಲಿ ಬಹುಸ್ವಾರಸ್ಯವಾಗಿ ಉಪಪಾದಿತವಾಗಿ ಅದಕ್ಕಾಗಿ ವೈಶಂಪಾಯನ ಶೌನಕಾದಿಗಳು ಈ ಚರಮ ಶ್ಲೋಕದ ಅರ್ಥಗಳನ್ನೆಲ್ಲಾ ಗ್ರಹಿಸಿ, ಶಿರಃಕಂಪನ ರೂಪದಿಂದ ಅದರ ಮಹಾತ್ಮ್ಯೆಯನ್ನು ಮೆಚ್ಚಿದ್ದಾರೆಂದು ಹೇಳುತ್ತಾರೆ. ಈ ನಮ್ಮಾಳ್ವಾರ್ ಮೊದಲಾದವರುಗಳ ದಿವ್ಯಸೂಕ್ತಿಗಳು "**ಮುಕ್ತಿ**

**ಸೌಧ ವಿಶಖಾ ಸೋಪಾನ ಪಙ್ಕ್ತಿಷು"**—ಮುಕ್ತಿ ಎಂಬುವುದು ಒಂದು ಎತ್ತರವಾದ ಎಲ್ಲರಿಗೂ ಹತ್ತಲಾದ ಉಪ್ಪರಿಗೆ ಮನೆ, ಅದೇ ಪರಮಪದವು, ಅದಕ್ಕೆ ಏರ್ಪಡಿಸಿರುವ **ವಿಶಿಖಾ**-ರಾಜಮಾರ್ಗವು ಅದು ಯಾವುದು ಎಂದರೆ ಶರಣಾಗತಿಯು, ಅದು ಎಂತಾದ್ದೆಂದರೆ ಬಹು ಸುಲಭವಾಗಿ, ಸುಖಕರವಾಗಿ ಹತ್ತುವುದಕ್ಕೆ ಯೋಗ್ಯವಾದ **ಸೋಪಾನ ಪಙ್ಕ್ತಿಷು**-ಆ ಸೌಧವನ್ನು ಹೋಗಿಸೇರಲು ಅನುಕೂಲವಾದ ಮೆಟ್ಟಿಲುಗಳ ಪಙ್ಕ್ತಿಯುಳ್ಳದ್ದು ; ಇಂತಹ ದಿವ್ಯಸೂಕ್ತಿಗಳಲ್ಲಿ ಚರಮಶ್ಲೋಕ ಗುಹ್ಯಾರ್ಥಗಳನ್ನು ಕಂಡು ತಲೆದೂಗಿದ್ದಾರೆ, ವೈಶಂಪಾಯನ ಶೌನಕಾದಿಗಳು ಎಂದು ಹೇಳಿದರು. ವೈಶಂಪಾಯನರು, ವ್ಯಾಸಶಿಷ್ಯರು ಜನಮೇಜಯರಾಜನಿಗೆ ಭಾರತ ಪುರಾಣವನ್ನು ಹೇಳಿದವರು, ಶೌನಕರು ಋಗ್ವೇದಾಚಾರ್ಯರಾದ ಅಶ್ವಲಾಯನರಿಗೆ ಗುರುಗಳು. **"ಶೌನಕೋಹನ್ವೈಮಹಾಶಾಲೋಙ್ಗಿರಸಂ ವಿಧಿವದುಪಸನ್ನಃ ಪಪ್ರಚ್ಛ"** ಹೀಗೆ ತಮ್ಮ ಗುರುಗಳಿಂದ ಉಪದೇಶಹೊಂದಿ ಶ್ರೇಷ್ಠರಾದ ಮಹಾಪ್ರಾಜ್ಞರೆಂದು ಹೇಳಲ್ಪಟ್ಟಿರುತ್ತದೆ. ಇಂತಹ ಶ್ರೇಷ್ಠರಾದ ಮಹಾಪ್ರಾಜ್ಞರಾದವರುಮಾತ್ರವೇ ಇದರ ಮಾಹಾತ್ಮ್ಯೆಯನ್ನು ತಿಳಿದವರೇ ವಿನಾ ಸಾಧಾರಣ ಮತಿಗಳೂ ಮಂದಮತಿಗಳೂ ಇದರ ಮಾಹಾತ್ಮ್ಯೆಯನ್ನು ಅರಿಯಲಾರರೆಂಬ ಭಾವವು. **ಪ್ರಭೃತಯಃ**-ಮೊದಲಾದವರು ಎಂಬ ಪ್ರಯೋಗದಿಂದ, ಪರಾಶರ, ಶುಕ, ಮನು ವಾಲ್ಮೀಕಿ, ಭರದ್ವಾಜ, ನಾರದಾದಿಗಳು ಸಙ್ಗ್ರಹಿಸಲ್ಪಟ್ಟರು. **ಶ್ರೀಪರಾಶರೋಕ್ತಿಯು** –– " **ತಾವದಾರ್ತಿಸ್ತಥಾವಾಂಛಾ ತಾವನ್ಮೋಹಸ್ತಥಾಽಸುಖಮ್ । ಯಾವನ್ನಯಾತಿಶರಣಂ ತ್ವಾಮಶೇಷಾಘನಾಶನಮ್."** ವಾಲ್ಮೀಕಿಯ ದಿವ್ಯಸೂಕ್ತಿಯು:—**"ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ."** **ಶುಕರು "ತಸ್ಮಾತ್ತ್ವಮುದ್ಧವೋತ್ಸೃಜ್ಯ ಚೋದನಾಮ್ ಪ್ರತಿ ಚೋದನಾಮ್ । ಮಾಮೇಕ ಮೇವ ಶರಣಂ ಆತ್ಮಾನಂ ಸರ್ವದೇಹಿನಾಂ । ಯಾಹಿ ಸರ್ವಾತ್ಮಭಾವೇನ ಯಾಸ್ಯಸ್ಯಕುತೋ ಭಯಮ್."**

ವೇದಗಳನ್ನೆಲ್ಲಾ ಪರಿಷ್ಕರಿಸಿ ಶ್ರೀ ವ್ಯಾಸರು ಆ ಅರ್ಥಗಳನ್ನೇ ತಮ್ಮ ಭಾರತದಲ್ಲಿ ಉಪದೇಶಿಸಿರುತ್ತಾರೆ. ಋಷಿಗಳು ಇತಿಹಾಸ ಪುರಾಣಗಳಿಂದ ವೇದೋಕ್ತಾರ್ಥಗಳನ್ನು ಉಪಬ್ರಹ್ಮಣ ಮಾಡಿರುತ್ತಾರೆ. **"ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬ್ರಹ್ಮಯೇತ್"** ಇಂತಹ ಉಪಬ್ರಹ್ಮಣ ಮೂಲಕ ಉಪದೇಶಿಸಿದವರು, ಶ್ರೇಷ್ಠರಾದ ವೈಶಂಪಾಯನ ಶೌನಕರು. ಅಂತಹ ಇವರುಗಳು ಮಾಡಿದ ಉಪಕಾರ ಸ್ಮರಣೆಯಿಂದ **ಅಮೀ** ಎಂದು ಇವರನ್ನು ಕುರಿತ ಪ್ರಯೋಗವು. ವೇದೋಕ್ತಾರ್ಥಗಳು ಇವು ಎಂಬುದಕ್ಕೆ ವ್ಯಾಸರು

ಪ್ರಮಾಣವು. ವೈಶಂಪಾಯನ ಶೌನಕರು ಅರ್ಥಗಳ ಪ್ರಾಮಾಣ್ಯಕ್ಕೆ ಸಾಕ್ಷೀಭೂತರು. ಏಕೆಂದರೆ ಶಿರಃಕಂಪನವು ಸಂಪೂರ್ಣವಾದ ಪಾರಮಾರ್ಥಿಕಾರ್ಥವನ್ನು ಸೂಚಿಸುವುದೂ ಅಲ್ಲದೆ ಸ್ವಾರಸ್ಯವನ್ನೂ ಪ್ರಕಟಿಸುತ್ತದೆ.

ಇಂತು ಶ್ರೀ ವೇದಾಂತ ದೇಶಿಕ ವಿರಚಿತಾಮೋಘ **ರಹಸ್ಯತ್ರಯಸಾರವೆಂಬ**
ಗ್ರಂಥದ **ಚರಮಶ್ಲೋಕಾಧಿಕಾರವೆಂಬ** ೨೯ನೆಯ ಅಧಿಕಾರಕ್ಕೆ
**ತಿರುನಾರಾಯಣಪುರಂ ವಿಜಯರಾಘವ** ಶರ್ಮನಿಂದ ವಿರಚಿತವಾದ
**ಆಚಾರ್ಯಹೃದಯಾನ್ವೇಷಿಣೀ**
ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳು ಸಮಾಪ್ತವು.